2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 36

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024

ಪ್ರಕರಣಗಳ ಪಟ್ಟಿ

ಪ್ರಕರಣಗಳು

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಗ್ರೇಟರ್ ಬೆಂಗಳೂರು ಪ್ರದೇಶದ ಘೋಷಣೆ
4. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳು
5. ನಗರ ಪಾಲಿಕೆಗಳ ಸ್ಥಾಪನೆ
6. ನಗರ ಪಾಲಿಕೆಗಳ ಗಡಿಗಳನ್ನು ಬದಲಿಸುವ ಅಧಿಕಾರ
7. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಪುನರ್ರಚನೆ
8. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳ ನಡುವಿನ ಸಂಬಂಧ
9. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆ
11. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು
12. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಭೆಗಳು
13. ಕಾರ್ಯಕಾರಿ ಸಮಿತಿಯ ರಚನೆ
14. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಕಾರ್ಯಗಳು
15. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪ್ರಮುಖ ಯೋಜನೆಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು
16. ಆರ್ಥಿಕ ಅಭಿವೃದ್ಧಿ ಏಜೆನ್ಸಿ
17. ಹವಾಮಾನ ಕ್ರಿಯಾ ಕೋಶ
18. ವಲಯ ತಜ್ಞ ಸಮಿತಿಗಳು
19. ಸಾರ್ವಜನಿಕ ಪ್ರಾಧಿಕಾರಗಳ ಮೇಲ್ವಿಚಾರಣೆ ಮತ್ತು ಅವುಗಳಿಗೆ ನಿರ್ದೇಶನಗಳನ್ನು ನೀಡುವ ಅಧಿಕಾರ
20. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹಣಕಾಸು
21. ಆಯವ್ಯಯ
22. ವಾರ್ಷಿಕ ವರದಿ
23. ಸಾಲ ಪಡೆಯಲು ಪ್ರಾಧಿಕಾರದ ಅಧಿಕಾರ
24. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
25. ನಗರ ಪಾಲಿಕೆಗಳ ಪ್ರಾಧಿಕಾರಗಳು
26. ನಗರ ಪಾಲಿಕೆಗಳ ಸ್ಥಾಪನೆ
27. ಗಡಿ ಗುರುತು ಕಲ್ಲುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ

28. ನಗರ ಪಾಲಿಕೆಗಳ ಕಾಲಾವಧಿ
29. ವಾರ್ಡುಗಳ ಪುನರ್‌ವಿಂಗಡಣೆ
30. ನಗರ ಪಾಲಿಕೆಯ ರಚನೆ
31. ಪಾಲಿಕೆ ಸದಸ್ಯರು ಸ್ವೀಕರಿಸಬೇಕಾದ ನಿಷ್ಠೆಯ ಪ್ರಮಾಣವಚನ
32. ಆಸ್ತಿಗಳ ಘೋಷಣೆ, ಇತ್ಯಾದಿ
33. ನಗರಪಾಲಿಕೆ ಸದಸ್ಯರ ಪದಾವಧಿ
34. ನಗರ ಪಾಲಿಕೆಗೆ ಚುನಾವಣೆ
35. ಮತದಾರ ಪಟ್ಟಿಗಳು
36. ಮತದಾರ ನೋಂದಣಿ ಅಧಿಕಾರಿ
37. ಮತಗಟ್ಟೆಗಳನ್ನು ಒದಗಿಸುವುದು
38. ಮತಗಟ್ಟೆಗಳಿಗೆ ಮತಗಟ್ಟೆ ಅಧಿಕಾರಿಗಳ ನೇಮಕ
39. ನಗರ ಪಾಲಿಕೆ ಸದಸ್ಯನಾಗಲು ಅರ್ಹತೆಗಳು
40. ನಗರ ಪಾಲಿಕೆ ಸದಸ್ಯನಾಗಲು ಅನರ್ಹತೆಗಳು
41. ಸಮಾನ ಮತಗಳು
42. ಫಲಿತಾಂಶಗಳ ಪ್ರಕಟಣೆ
43. ಚುನಾವಣಾ ತಕರಾರು ಅರ್ಜಿ
44. ಚುನಾವಣೆಗಳು ಶೂನ್ಯವೆಂದು (void) ಘೋಷಿಸಲು ಆಧಾರಗಳು
45. ನ್ಯಾಯಾಲಯವು ಅನುಸರಿಸಬೇಕಾದ ಕಾರ್ಯವಿಧಾನ
46. ನ್ಯಾಯಾಲಯದ ತೀರ್ಮಾನ
47. ಅಪೀಲು
48. ಭ್ರಷ್ಟ ಆಚರಣೆಗಳು
49. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಬೆಳೆಸುವುದು
50. ಚುನಾವಣೆ ಹಿಂದಿನ ಮೊದಲು ಎರಡು ದಿನಗಳು ಹಾಗೂ ಚುನಾವಣೆಯ ದಿನದಂದು ಸಾರ್ವಜನಿಕ ಸಭೆಗಳ ನಿಷೇಧ
51. ಚುನಾವಣಾ ಸಭೆಗಳಲ್ಲಿ ಗಲಭೆಗಳು
52. ಕರಪತ್ರಗಳು, ಪೋಸ್ಟರುಗಳು ಮತ್ತು ಇತರೆಗಳನ್ನು ಮುದ್ರಿಸುವುದರ ಮೇಲೆ ನಿರ್ಬಂಧಗಳು
53. ರಹಸ್ಯ ಮತದಾನದ ನಿರ್ವಹಣೆ.- (1) ಈ ಅಧಿನಿಯಮದ ಅಡಿಯಲ್ಲಿ
54. ಮತಗಟ್ಟೆಗಳಲ್ಲಿ ಅಥವಾ ಅವುಗಳ ಹತ್ತಿರ ಪ್ರಚಾರ ಮಾಡುವುದರ ಮೇಲೆ ನಿಷೇಧ
55. ಮತಗಟ್ಟೆ ಅಥವಾ ಅದರ ಹತ್ತಿರದಲ್ಲಿ ಅನುಚಿತ ನಡತೆಗಾಗಿ ದಂಡ
56. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನು ಬಾಹಿರವಾಗಿ ಬಾಡಿಗೆಗೆ ಪಡೆಯುವುದಕ್ಕೆ ಅಥವಾ ಪಡೆದು ಒದಗಿಸುವುದಕ್ಕಾಗಿ ದಂಡನೆ
57. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರೀ ಕರ್ತವ್ಯದ ಉಲ್ಲಂಘನೆಗಳು
58. ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು

59. ಸರ್ಕಾರಿ ನೌಕರನು, ಚುನಾವಣಾ ಏಜೆಂಟನಾಗಿ, ಪೋಲಿಂಗ್ ಏಜೆಂಟನಾಗಿ ಅಥವಾ ಎಣಿಕೆ ಏಜೆಂಟನಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ದಂಡನೆ
60. ಮತಗಟ್ಟೆಯಿಂದ ವಿದ್ಯುನ್ಮಾನ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಪರಾಧ
61. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು
62. ಕೆಲವು ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್
63. ಮತದಾನದ ಹಕ್ಕು
64. ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅದರ ಗರಿಷ್ಠ ಮಿತಿ
65. ಚುನಾವಣಾ ಅಧಿಕಾರಿಗೆ ಲೆಕ್ಕವನ್ನು ಸಲ್ಲಿಸುವುದು
66. ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲವಾಗುವುದು
67. ಚುನಾವಣೆಗಳಲ್ಲಿ ಮತಯಂತ್ರಗಳು
68. ಚುನಾವಣಾ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸುವ ಸರ್ಕಾರದ ಅಧಿಕಾರ
69. ಏಕಕಾಲಿಕ ಸದಸ್ಯತ್ವದ ನಿಷೇಧ
70. ಚುನಾವಣಾ ಉದ್ದೇಶಗಳಿಗಾಗಿ ಆವರಣಗಳು, ವಾಹನಗಳು, ಇತ್ಯಾದಿಗಳನ್ನು ಕೋರುವುದು
71. ಪರಿಹಾರ ಸಂದಾಯ
72. ಮಾಹಿತಿಯನ್ನು ಪಡೆಯಲು ಅಧಿಕಾರ
73. ಆವರಣಗಳು ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ
74. ಕಡ್ಡಾಯವಾಗಿ ಕೋರಿರುವ ಆವರಣಗಳಿಂದ ಹೊರಹಾಕುವುದು
75. ಕೋರಿಕೆಯಿಂದ ಆವರಣಗಳ ಬಿಡುಗಡೆ
76. ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ
77. ಮಹಾಪೌರ ಮತ್ತು ಉಪಮಹಾಪೌರ
78. ಮಹಾಪೌರ ಮತ್ತು ಉಪಮಹಾಪೌರನ ಪದಾವಧಿ
79. ಮಹಾಪೌರ ಮತ್ತು ಉಪ-ಮಹಾಪೌರ ಹುದ್ದೆಯ ಮೀಸಲಾತಿ
80. ಮಹಾಪೌರನ ಅಧಿಕಾರಗಳು ಮತ್ತು ಪ್ರಕಾರ್ಯಗಳು
81. ಉಪ-ಮಹಾಪೌರನ ಪ್ರಕಾರ್ಯಗಳು
82. ಮಹಾಪೌರ ಮತ್ತು ಉಪ-ಮಹಾಪೌರನ ರಾಜೀನಾಮೆ
83. ಗೌರವಧನ, ಫೀಜು ಅಥವಾ ಭತ್ಯೆಗಳು
84. ಆಯುಕ್ತ
85. ಆಯುಕ್ತರ ಅಧಿಕಾರಗಳು ಮತ್ತು ಪ್ರಕಾರ್ಯಗಳು
86. ಆಯುಕ್ತರು ಪತ್ರ ವ್ಯವಹಾರವನ್ನು ಮಾಡುವುದು
87. ಆಯುಕ್ತರ ಅಧಿಕಾರಗಳ ಪ್ರತ್ಯಾಯೋಜನೆ
88. ದಾಖಲೆಗಳ ಅಭಿರಕ್ಷೆ
89. ನಗರ ಪಾಲಿಕೆಯ ಸಿಬ್ಬಂದಿಯ ಮೇಲೆ ನಿಯಂತ್ರಣ
90. ಆಯುಕ್ತರ ಸಂಬಳ ಮತ್ತು ಭತ್ಯೆಗಳು
91. ಆಯುಕ್ತರ ಮರಣ, ರಾಜೀನಾಮೆ ಅಥವಾ ಹುದ್ದೆಯಿಂದ ತೆಗೆದುಹಾಕಿದ ಸಂದರ್ಭದಲ್ಲಿ ಸ್ಥಾನಪನ್ನ

ಆಯುಕ್ತರನ್ನು ನೇಮಿಸುವುದು
92. ವಲಯದ ಜಂಟಿ ಆಯುಕ್ತರು
93. ಜಂಟಿ ಆಯುಕ್ತರ ಸಂಬಳ ಮತ್ತು ಸೇವಾ ಷರತ್ತುಗಳು
94. ಜಂಟಿ ಆಯುಕ್ತರ ಅಧಿಕಾರಗಳು ಮತ್ತು ಪ್ರಕಾರ್ಯಗಳು
95. ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನೆ ಮತ್ತು ಸಮನ್ವಯ ಸಮಿತಿ
96. ವಿಧಾನಸಭಾ ಕ್ಷೇತ್ರಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯ ಪ್ರಕಾರ್ಯಗಳು
97. ನಿಧಿಗಳ ಹಂಚಿಕೆ
98. ಸ್ಥಾಯಿ ಸಮಿತಿಗಳ ಸ್ಥಾಪನೆ
99. ಸ್ಥಾಯಿ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು
100. ವಾರ್ಡ್ ಸಮಿತಿಯ ರಚನೆ ಮತ್ತು ಸಂಯೋಜನೆ
101. ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನ ಹೊಂದಲು ಇರುವ ಕಾರ್ಯವಿಧಾನ
102. ವಾರ್ಡ್ ಸಮಿತಿಯ ಸಭೆ
103. ವಾರ್ಡ್ ಸಮಿತಿಯ ಪ್ರಕಾರ್ಯಗಳು
104. ನಗರಪಾಲಿಕೆ ಸದಸ್ಯರ ಅಧಿಕಾರ
105. ಮಹಾಪೌರ, ಉಪಮಹಾಪೌರ ಮುಂತಾದವರ ಚುನಾವಣೆಗೆ ಅಪೀಲು
106. ನಗರ ಪಾಲಿಕೆಯ ಅಧೀನದಲ್ಲಿರುವ ಕೆಲವು ಹುದ್ದೆಗಳಿಗೆ ಕರ್ನಾಟಕ ಪೌರಾಡಳಿತ ಸೇವೆಯಿಂದ ನೇಮಕ ಮಾಡುವುದು
107. ಇಂಜಿನಿಯರ್, ನಗರ ಯೋಜಕ, ಆರೋಗ್ಯಾಧಿಕಾರಿ, ಲೆಕ್ಕಾಧಿಕಾರಿ ಮುಂತಾದವರ ನೇಮಕ
108. ಕಾನೂನು ಕೋಶ
109. ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ವಂತಿಗೆ
110. ನಗರ ಪಾಲಿಕೆಯ ಸಾಮಾನ್ಯ ಅಧಿಕಾರಗಳು
111. ನಗರ ಪಾಲಿಕೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು
112. ಸರ್ಕಾರವು ವಹಿಸಿದ ಹೆಚ್ಚುವರಿ ಪ್ರಕಾರ್ಯಗಳು
113. ನಗರ ಪಾಲಿಕೆಯ ನಿಧಿಯ ಕುರಿತು ಮೊದಲ ಆದ್ಯತೆ (ಚಾರ್ಜ್)
114. ನಗರ ಪಾಲಿಕೆಯ ಮತ್ತು ಸ್ಥಾಯಿ ಸಮಿತಿಗಳ ವ್ಯವಹರಣೆಗಳು
115. ನಗರ ಪಾಲಿಕೆಯ ನಿರ್ಣಯಗಳನ್ನು ಕಾರ್ಯಗತಗೊಳಿಸುವುದಕ್ಕೆ ಉಳಿದ ಪಾಲಿಕೆ ಪ್ರಾಧಿಕಾರಗಳ ಮೇಲೆ ಹೊರಿಸಿದ ಹೊಣೆಗಾರಿಕೆ
116. ನಗರ ಪಾಲಿಕೆಯು, ವ್ಯವಹರಣೆಗಳು, ಮುಂತಾದವುಗಳ ಉದ್ಭೂತ ಭಾಗಗಳನ್ನು ಸ್ಥಾಯಿ ಸಮಿತಿಯಿಂದ ತರಿಸಿಕೊಳ್ಳಬಹುದು, ಇತ್ಯಾದಿ
117. ನಗರ ಪಾಲಿಕೆಯ ವ್ಯವಹರಣೆಗಳು, ಮುಂತಾದವುಗಳು, ಅದರ ಸದಸ್ಯರ ಅನರ್ಹತೆ, ಇತ್ಯಾದಿಗಳಿಂದಾಗಿ ನಿರರ್ಥಕಗೊಳ್ಳತಕ್ಕದ್ದಲ್ಲ
118. ವ್ಯವಹರಣೆಗಳನ್ನು ದಾಖಲಿಸುವುದು
119. ಸಭೆಗಳ ವ್ಯವಹರಣೆಗಳು ತದ್ವಿರುದ್ಧವಾಗಿರುವುದು ರುಜುವಾತಾಗುವವರೆಗೆ ಸರಿಯಾದವುಗಳು ಮತ್ತು ಸಿಂಧುವಾದವುಗಳು ಆಗಿರತಕ್ಕದ್ದು

120. ಚರ್ಚೆಯಲ್ಲಿ ಹಾಜರಿರಲು ಮತ್ತು ಭಾಗವಹಿಸಲು ಆಯುಕ್ತನಿಗಿರುವ ಹಕ್ಕು, ಆದರೆ ನಿರ್ಣಯವನ್ನು ಮಂಡಿಸಲು ಅಥವಾ ಮತ ನೀಡಲು ಹಕ್ಕು ಇರತಕ್ಕದ್ದಲ್ಲ
121. ನಗರ ಪಾಲಿಕೆ ಸದಸ್ಯನು ಅವನು ಆರ್ಥಿಕ ಹಿತಾಸಕ್ತಿ ಹೊಂದಿರುವಂಥ ಪ್ರಶ್ನೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸದಿರುವುದು ಮತ್ತು ಮತ ನೀಡದಿರುವುದು
122. ಆಡಳಿತ ವರದಿ ಸಲ್ಲಿಕೆ
123. ಅತ್ಯಾವಶ್ಯಕ ಸೇವೆಗಳು ಇತ್ಯಾದಿಗಳ ಘೋಷಣೆ.
124. ತುರ್ತು ಪರಿಸ್ಥಿತಿಯನ್ನು ಘೋಷಿಸಲು ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ
125. ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಪರಿಶೀಲನೆ ಮಾಡಿಸಲು ಸರ್ಕಾರದ ಅಧಿಕಾರ
126. ನಗರ ಪಾಲಿಕೆಯಲ್ಲಿ ವಿಲೇಯಾಗದೆ ಬಾಕಿ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸರ್ಕಾರದ ಅಧಿಕಾರ
127. ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ
128. ಕರ್ತವ್ಯ ಲೋಪವಾದಾಗ ಕ್ರಮಕೈಗೊಳ್ಳುವುದಕ್ಕಾಗಿ ನಗರ ಪಾಲಿಕೆಯ ವೆಚ್ಚದಲ್ಲಿ ಅಧಿಕಾರಿಯನ್ನು ನೇಮಕಮಾಡಲು ಸರ್ಕಾರದ ಅಧಿಕಾರ
129. ನಿರ್ಣಯವನ್ನು ಮತ್ತು ಆದೇಶಗಳನ್ನು ರದ್ದುಗೊಳಿಸುವ ಅಧಿಕಾರ
130. ನಗರ ಪಾಲಿಕೆಯನ್ನು ವಿಸರ್ಜಿಸಲು ಸರ್ಕಾರದ ಅಧಿಕಾರ
131. ನಗರ ಪಾಲಿಕೆ ಆಡಳಿತಾಧಿಕಾರಿಯ ನೇಮಕ
132. ಕಾರ್ಯನಿರ್ವಹಣಾ ವ್ಯವಸ್ಥೆಯ ಸ್ಥಾಪನೆ
133. ನಗರ ಪಾಲಿಕೆಯ ಸ್ವತ್ತುಗಳು
134. ನಗರ ಪಾಲಿಕೆಯಿಂದ ಸ್ವತ್ತುಗಳ ವಿಲೆ
135. ನಗರ ಪಾಲಿಕೆಯಿಂದ ಸ್ವತ್ತುಗಳ ಆರ್ಜನೆ
136. ನಗರ ಪಾಲಿಕೆಯು ನಿರ್ವಹಿಸುವ ಸರ್ಕಾರಿ ಸ್ವತ್ತುಗಳು
137. ನಗರ ಪಾಲಿಕೆಯ ಸ್ವತ್ತುಗಳನ್ನು ನಿರ್ವಹಿಸುವ ಸರ್ಕಾರದ ಅಧಿಕಾರ
138. ನಗರ ಪಾಲಿಕೆಯಿಂದ ಅಥವಾ ಅದರ ವಿರುದ್ಧ ಸ್ವತ್ತುಗಳ ಬಗೆಗಿನ ಕ್ಲೇಮುಗಳ ನಿರ್ಧಾರ
139. ಖಾಸಗಿ ಸ್ವತ್ತುಗಳನ್ನು ನಿರ್ವಹಿಸುವ ನಗರ ಪಾಲಿಕೆಯ ಅಧಿಕಾರ
140. ಸ್ವತ್ತು ರಿಜಿಸ್ಟರಿನ ನಿರ್ವಹಣೆ
141. ಈ ಅಧಿನಿಯಮದಲ್ಲಿ ಉಪಬಂಧಿಸಿಲ್ಲದ ಉದ್ದೇಶಗಳು
142. ಕರಾರುಗಳನ್ನು ಮಾಡಿಕೊಳ್ಳುವ ನಗರ ಪಾಲಿಕೆಯ ಅಧಿಕಾರ
143. ಟೆಂಡರುಗಳ ಆಹ್ವಾನ
144. ದತ್ತಾಂಶದ ನಿರ್ವಹಣೆ
145. ನಗರ ಪಾಲಿಕೆಯ ರಾಜಸ್ವಗಳು
146. ತೆರಿಗೆಗಳು, ಉಪಕರಗಳು, ಸುಂಕಗಳು ಮತ್ತು ಸೇವಾ ಶುಲ್ಕಗಳನ್ನು ವಿಧಿಸುವ ಅಧಿಕಾರ
147. ಸ್ವತ್ತು ತೆರಿಗೆ ವಿಧಿಸುವಿಕೆ
148. ಸ್ವತ್ತಿನ ತೆರಿಗೆಯ ಸಂದಾಯ

149. ವರ್ಗಾವಣೆ ನೋಟೀಸನ್ನು ಕೊಡುವುದಕ್ಕಾಗಿ ವರ್ಗಾವಣೆಗೊಂಡ ಮತ್ತು ವರ್ಗಾವಣೆ ಪಡೆದವನ ಬಾಧ್ಯತೆ
150. ತೆರಿಗೆ ವಿವರ ಪಟ್ಟಿಕೆಗಳ ಪರಿಶೋಧನೆ
151. ಸ್ವತ್ತು ತೆರಿಗೆಯ ನಿರ್ಧರಣೆಗಾಗಿ ಸೀಮಿತ ಅವಧಿ
152. ಸ್ವತ್ತು ತೆರಿಗೆಯ ಪುನರ್ ಪರಿಷ್ಕರಣೆ
153. ಯಾವುದೇ ಚಾಲ್ತಿಯಲ್ಲಿರುವ ತೆರಿಗೆಯನ್ನು ಅಮಾನತ್ತಿನಲ್ಲಿಡುವ, ಕಡಿಮೆಮಾಡುವ ಅಥವಾ ರದ್ದುಗೊಳಿಸುವ ಅಧಿಕಾರ
154. ಸಾಮಾನ್ಯ ವಿನಾಯಿತಿಗಳು
155. ಸ್ವತ್ತು ಮತ್ತು ಚರಸ್ವತ್ತುಗಳ ಮೇಲೆ ಸ್ವತ್ತು ತೆರಿಗೆಯ ಮೊದಲ ಶುಲ್ಕ
156. ಸ್ವತ್ತು ತೆರಿಗೆಯು ಯಾರಿಂದ ಮತ್ತು ಯಾವಾಗ ಸಂದಾಯವಾಗಬೇಕು
157. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು
158. ಭೂಮಿಗಳ ಮತ್ತು ಕಟ್ಟಡಗಳ ಸರ್ವೆ ಮಾಡುವುದು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವುದು
159. ಸ್ವತ್ತು ತೆರಿಗೆ ಪಾವತಿ ಮಾಡುವುದಕ್ಕಾಗಿ ತಗಾದೆ ನೋಟೀಸು ಮತ್ತು ಅಂಥ ತಗಾದೆ ನೋಟೀಸಿನ ವಿರುದ್ಧ ಅಪೀಲು
160. ಜಾಹೀರಾತು ಶುಲ್ಕ
161. ಆಯುಕ್ತರ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ
162. ಕೆಲವು ಸಂದರ್ಭಗಳಲ್ಲಿ ಆಯುಕ್ತರ ಅನುಮತಿಯು ಅನೂರ್ಜಿತವಾಗತಕ್ಕದ್ದು
163. ಅನಧಿಕೃತ ಜಾಹೀರಾತನ್ನು ತೆಗೆದುಹಾಕುವುದು
164. ವಿಧಿಸಬಹುದಾದ ಉಪಕರಗಳು
165. ಬಳಕೆದಾರ ಶುಲ್ಕಗಳನ್ನು ವಿಧಿಸುವ ಅಧಿಕಾರ
166. ಮನರಂಜನಾ ತೆರಿಗೆ ವಿಧಿಸುವಿಕೆ
167. ಶುಲ್ಕಗಳನ್ನು ಮತ್ತು ಜುಲ್ಮಾನೆಗಳನ್ನು ವಿಧಿಸುವ ಅಧಿಕಾರ
168. ಅಭಿವೃದ್ಧಿ ಶುಲ್ಕಗಳನ್ನು ವಿಧಿಸುವ ಅಧಿಕಾರ
169. ತೆರಿಗೆ ಅಥವಾ ಶುಲ್ಕದ ಮೇಲೆ ಅಧಿಕರವನ್ನು ವಿಧಿಸುವುದು
170. ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲಿನ ಸುಂಕ
171. ತೆರಿಗೆಗಳು, ಶುಲ್ಕಗಳು, ಉಪಕರಗಳು, ಬಡ್ಡಿ, ದಂಡಗಳು, ಮುಂತಾದವುಗಳನ್ನು ವಸೂಲು ಮಾಡುವ ಅಧಿಕಾರ
172. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನಗರ ಪಾಲಿಕೆಗಳ ಆಯುಕ್ತರು ಮತ್ತು ಅಧಿಕೃತಗೊಳಿಸಲಾದ ಅಧಿಕಾರಿಗಳು ಪ್ರತ್ಯೇಕ ಅಧಿಕಾರವ್ಯಾಪ್ತಿ ಹಾಗೂ ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ
173. ಕೆಲವು ದಾವೆಗಳ ಉಳಿಸುವಿಕೆಗಳು
174. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗಳ ವಿರುದ್ಧ ದಾವೆ ಅಥವಾ ಇತರೆ ವ್ಯವಹರಣೆ ಹೂಡುವುದಕ್ಕೂ ಮುನ್ನ ಅಪೀಲಿನ ಹಕ್ಕನ್ನು ವಾದಿಯು ಕಳೆದುಕೊಳ್ಳುವುದು
175. ಅಧಿಕಾರ ವ್ಯಾಪ್ತಿಯ ಪ್ರಶ್ನೆಗಳನ್ನು ಉಚ್ಚನ್ಯಾಯಾಲಯಕ್ಕೆ ಉಲ್ಲೇಖಿಸುವ ಸಿವಿಲ್ ನ್ಯಾಯಾಲಯದ

ಅಧಿಕಾರ
176. ನಗರ ಪಾಲಿಕೆ ನಿಧಿ
177. ನಗರ ಪಾಲಿಕೆ ನಿಧಿಯ ವಿನಿಯೋಗ
178. ನಗರ ಸಾರಿಗೆ ನಿಧಿ
179. ನಗರ ಪಾಲಿಕೆಯಿಂದ ವೆಚ್ಚಕ್ಕೆ ವಂತಿಗೆ ನೀಡಿಕೆ
180. ಸರ್ಕಾರದಿಂದ ಸಾಲವಾಗಿ ಪಡೆದ ಹಣದ ವಸೂಲಿಗಾಗಿ ನಗರ ಪಾಲಿಕೆಯ ನಿಧಿಯ ಜಪ್ತಿ
181. ನಗರ ಪಾಲಿಕೆಯ ಆಯವ್ಯಯವನ್ನು ಸಿದ್ಧಪಡಿಸುವುದು
182. ತೆರಿಗೆ ನಿರ್ಧರಣೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯು ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವುದು
183. ಆಯವ್ಯಯದ ಅನುದಾನವನ್ನು ಮಾರ್ಪಡಿಸಲು ನಗರ ಪಾಲಿಕೆಯ ಅಧಿಕಾರ
184. ವರ್ಷದ ಪ್ರಾರಂಭಕ್ಕೆ ಮುಂಚೆ ಆಯವ್ಯಯವನ್ನು ಅಂಗೀಕರಿಸುವ ಹೊಣೆಗಾರಿಕೆ
185. ನಗರ ಪಾಲಿಕೆಯು ಪೂರಕ ಆಯವ್ಯಯವನ್ನು ಅಂಗೀಕರಿಸಬಹುದು
186. ನಗರ ಪಾಲಿಕೆಯು ಅಧಿಕೃತ ವರ್ಷದ ಅವಧಿಯಲ್ಲಿ ಅಗತ್ಯವಾದಗಲೆಲ್ಲ ಆದಾಯ ಮತ್ತು ವೆಚ್ಚದ ಮರುಹೊಂದಾಣಿಕೆ ಮಾಡುವುದು
187. ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸಿದ್ಧಪಡಿಸುವುದು
188. ಸಮಗ್ರ ಋಣ ಮಿತಿ ನೀತಿ
189. ಕಡ್ಡಾಯ ಅನುಸರಣೆ
190. ಸಾಲ ತೀರಿಕೆ ನಿಧಿಯ ಸ್ಥಾಪನೆ
191. ಸಾಲ ತೀರಿಕೆ ನಿಧಿಯ ಜಮೆಯಲ್ಲಿ ಮೊತ್ತದ ಹೂಡಿಕೆ
192. ಸಾಲ ತೀರಿಕೆ ನಿಧಿಯ ವಿನಿಯೋಗ
193. ನಗರ ಪಾಲಿಕೆಯಿಂದ ವಾರ್ಷಿಕ ವಿವರಣಾ ಪತ್ರ
194. ಮುಖ್ಯ ಹಣಕಾಸು ಅಧಿಕಾರಿಯ ನೇಮಕಾತಿ
195. ವಾರ್ಷಿಕ ಹಣಕಾಸು ವಿವರಣಾ ಪತ್ರ
196. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
197. ಸಾರ್ವಜನಿಕ ಬೀದಿಗಳು ಮತ್ತು ಅವುಗಳಿಗೆ ಲಗತ್ತಾದವುಗಳು ನಗರ ಪಾಲಿಕೆಯಲ್ಲಿ ನಿಹಿತವಾಗುವುದು
198. ಸಾರ್ವಜನಿಕ ಬೀದಿಗಳಿಗೆ ಸಂಬಂಧಿಸಿದಂತೆ ಆಯುಕ್ತರ ಅಧಿಕಾರಗಳು
199. ಎರಡು ಅಥವಾ ಹೆಚ್ಚಿನ ನಗರ ಪಾಲಿಕೆಗಳಲ್ಲಿ ವ್ಯಾಪ್ತವಾಗಿರುವ ಸಾರ್ವಜನಿಕ ಬೀದಿಗಳಿಗೆ ಸಂಬಂಧಿಸಿದಂತೆ ಮುಖ್ಯ ಆಯುಕ್ತರ ಅಧಿಕಾರಗಳು
200. ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವ ಅಧಿಕಾರ
201. ಹೊಸ ಸಾರ್ವಜನಿಕ ಬೀದಿಗಳ ಕನಿಷ್ಠ ಅಗಲ
202. ಕೆಲವು ರೀತಿಯ ಸಂಚಾರಕ್ಕಾಗಿ ಮತ್ತು ಬೀದಿಬದಿಯಲ್ಲಿನ ವಾಹನ ನಿಲುಗಡೆಗಾಗಿ ಸಾರ್ವಜನಿಕ ಬೀದಿಗಳ ಬಳಕೆಯನ್ನು ನಿಷೇಧಿಸುವ ಅಧಿಕಾರ
203. ಕಟ್ಟಡ ನಿರ್ಮಾಣ ನಿವೇಶನಗಳಾಗಿ ಭೂಮಿಯನ್ನು ವಿಲೆ ಮಾಡುವಾಗ ಖಾತೆದಾರನ ಹೊಣೆಗಾರಿಕೆ

204. ಹೊಸ ಖಾಸಗಿ ಬೀದಿಗಳ ರಚನೆ
205. ಈ ಅಧಿನಿಯಮವನ್ನು ಉಲ್ಲಂಘಿಸಿ ನಿರ್ಮಿಸಿದ ಬೀದಿಯ ಬದಲಾವಣೆ ಅಥವಾ ಧ್ವಂಸಗೊಳಿಸುವಿಕೆ
206. ಶಾಶ್ವತವಾಗಿ ಮುಚ್ಚಿರುವ ಬೀದಿಗಳ ಉಪಯೋಗ
207. ಬೀದಿಗಳ ಸುಧಾರಣೆಗಾಗಿ ಭೂಮಿ ಮತ್ತು ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು
208. ಕಟ್ಟಡದ ಸಾಲು ಮತ್ತು ಬೀದಿಯ ಪಂಕ್ತೀಕರಣವನ್ನು ನಿಯಮಿಸಲು ಅಧಿಕಾರಗಳು
209. ಬೀದಿಯ ಪಂಕ್ತೀಕರಣದೊಳಗೆ ಅಥವಾ ಕಟ್ಟಡಗಳ ಸಾಲಿನೊಳಗೆ ಕಟ್ಟಡಗಳ ನಿರ್ಮಾಣದ ಅಥವಾ ಕಟ್ಟಡಗಳ ವಿಸ್ತರಣೆಯ ಮೇಲೆ ನಿರ್ಬಂಧ
210. ಮುಂಚಾಚಿದ ಕಟ್ಟಡವನ್ನು ಅಥವಾ ಗೋಡೆಯನ್ನು ಹಿಂದಕ್ಕೆ ಕಟ್ಟುವುದು
211. ಬೀದಿಯ ನಿಯತ ರೇಖೆಯ ಹಿಂದಕ್ಕೆ ಕಟ್ಟಡಗಳನ್ನು ಕಟ್ಟುವುದಕ್ಕೆ ಆದೇಶಿಸಲು ಆಯುಕ್ತರಿಗೆ ಹೆಚ್ಚಿನ ಅಧಿಕಾರ
212. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅಧಿಕಾರ
213. ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾವೇ ಕಾರ್ಯಗತಗೊಳಿಸಲು ಆಯುಕ್ತನ ಅಧಿಕಾರ
214. ಬೀದಿಗಳ ಮೇಲೆ ಮುಂಚಾಚುವಿಕೆಗಳ (projection) ನಿಷೇಧ
215. ಬೀದಿಗಳಲ್ಲಿ ಅಡ್ಡಿಯನ್ನು ಉಂಟುಮಾಡುವ ರಚನೆಗಳ ಅಥವಾ ಜೋಡಣೆಗಳ ನಿರ್ಬಂಧ
216. ಒತ್ತುವರಿಗಳನ್ನು ತೆರವುಗೊಳಿಸುವುದು
217. ಬೀದಿಗಳ ದುರಸ್ತಿಯ ಸಮಯದಲ್ಲಿನ ಮುನ್ನೆಚ್ಚರಿಕೆಗಳು
218. ಅನುಮತಿ ಪಡೆಯದೇ ಬೀದಿಗಳನ್ನು ಮುಕ್ತವಾಗಿಸುವಂತಿಲ್ಲ, ಅಥವಾ ಹೊಡೆದುಹಾಕುವಂತಿಲ್ಲ, ಮತ್ತು ಅದರ ಮೇಲೆ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸುವಂತಿಲ್ಲ
219. ಹೆಸರಿಡುವುದು ಮತ್ತು ಸಂಖ್ಯೆ ನೀಡುವುದು
220. ಸಾರ್ವಜನಿಕ ಬೀದಿಗಳಿಗೆ ದೀಪಗಳನ್ನು ಹಾಕುವುದಕ್ಕೆ ಅವಕಾಶ
221. ಬೀದಿ ದೀಪಗಳನ್ನು ತೆಗೆಯುವುದಕ್ಕೆ ನಿಷೇಧ
222. ಕೆಲವು ನಿರ್ಮಾಣಗಳಿಗೆ ಅವಕಾಶ ನೀಡುವ ಅಧಿಕಾರ
223. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪಬಂಧಗಳಿಗನುಸಾರವಾಗಿ ನಗರಪಾಲಿಕೆಯು ಅಧಿಕಾರಗಳನ್ನು ಚಲಾಯಿಸುವುದು
224. ಕಟ್ಟಡ ಉಪ-ವಿಧಿಗಳು (ಬೈ-ಲಾಗಳು)
225. ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಒದಗಿಸುವ ಹೊಣೆಗಾರಿಕೆ
226. ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬಿಟ್ಟುಕೊಡುವಿಕೆ
227. ಬೀದಿಗಳ ಮೂಲೆಯಲ್ಲಿ ಕಟ್ಟಡ ಕಟ್ಟುವುದು
228. ಮಂಜೂರಾತಿ ಪಡೆಯದ ಕಟ್ಟಡ ನಿರ್ಮಾಣದ ನಿಷೇಧ
229. ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಅರ್ಜಿ
230. ಕಟ್ಟಡ ಯೋಜನೆಯ ಮಂಜೂರಾತಿಗಾಗಿ ಪ್ರಕ್ರಿಯೆ
231. ಕಾಮಗಾರಿಯನ್ನು ನಿರ್ವಹಿಸಲು ಆಯುಕ್ತನು ಯಾವ ಅವಧಿಯೊಳಗೆ ಅನುಮತಿಯನ್ನು ಕೊಡಬಹುದೋ ಅಥವಾ ಅನುಮತಿಯನ್ನು ನಿರಾಕರಿಸಬಹುದೋ ಆ ಅವಧಿ

232. ಈ ಅಧ್ಯಾಯದಡಿ ಅನುಮತಿಯನ್ನು ನೀಡುವುದಕ್ಕಾಗಿ ವಿಧಿಸುವ ಶುಲ್ಕದ ದರವನ್ನು ನಿಗದಿಪಡಿಸುವ ನಗರ ಪಾಲಿಕೆಯ ಅಧಿಕಾರ
233. ಆಯುಕ್ತನಿಂದ ಕರಗಳು, ನಿರ್ಬಂಧ ಮತ್ತು ಷರತ್ತುಗಳ ವಿಧಿಸುವಿಕೆ
234. ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳನ್ನು ವಿಧಿಸುವುದರಿಂದ ವಿನಾಯಿತಿಗಳು
235. ಹಾಕಲಾದ, ವಿಧಿಸಲಾದ ಅಥವಾ ನಿರ್ಧರಣೆ ಮಾಡಲಾದ ಶುಲ್ಕವನ್ನು ವಿನಾಯಿತಿಗೊಳಿಸುವ ಅಥವಾ ಕಡಿಮೆಗೊಳಿಸುವ ಸರ್ಕಾರದ ಅಧಿಕಾರ
236. ಕಟ್ಟಡ ನಿರ್ಮಾಣಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ಅಥವಾ ಕಟ್ಟಡ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸಬಹುದಾದ ಕಾರಣಗಳು
237. ಮಾರ್ಪಡಿಸಿದ ಪರವಾನಿಗೆಯ ನೀಡಿಕೆ ಮತ್ತು ಪರವಾನಿಗೆ ಅವಧಿಯ ವಿಸ್ತರಣೆ
238. ಕೆಲವು ಸಂದರ್ಭಗಳಲ್ಲಿ ಮನರಂಜನಾ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿಯನ್ನು ನೀಡುವ ಅಧಿಕಾರದ ಮೇಲೆ ನಿರ್ಬಂಧ
239. ಮೇಲುಪಾಯ ಪ್ರಮಾಣಪತ್ರ (Plinth Certificate) ವಿಲ್ಲದೆ ಕಟ್ಟಡದ ನಿರ್ಮಾಣವನ್ನು ಮುಂದುವರಿಸತಕ್ಕದ್ದಲ್ಲ
240. ಕಾಮಗಾರಿಯ ಮಾರ್ಪಾಟನ್ನು ಅಗತ್ಯಪಡಿಸುವ ಆಯುಕ್ತನ ಅಧಿಕಾರ
241. ಅಧಿಭೋಗ ಪ್ರಮಾಣಪತ್ರದ ಮಂಜೂರಾತಿ
242. ಸೇರ್ಪಡೆಗಳಿಗೆ ಮತ್ತು ಬದಲಾವಣೆಗಳಿಗೆ ಉಪಬಂಧಗಳ ಅನ್ವಯ
243. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ಮುಂದುವರಿಸಿದ ಅಥವಾ ಪೂರ್ಣಗೊಳಿಸಿದ ಕಟ್ಟಡಗಳ ಕೆಡಹುವಿಕೆ ಅಥವಾ ಮಾರ್ಪಡಿಸುವಿಕೆ
244. ಕೆಡಹುವ ಆದೇಶವನ್ನು ತಪ್ಪಿದಲ್ಲಿ ಅದನ್ನು ಜಾರಿಗೊಳಿಸಲು ಅಧಿಕಾರ
245. ಅನುಮತಿ, ಇತ್ಯಾದಿಯನ್ನು ಅಮಾನತ್ತಿನಲ್ಲಿಡುವ ಅಥವಾ ರದ್ದುಗೊಳಿಸುವ ಆಯುಕ್ತನ ಅಧಿಕಾರ
246. ಕಟ್ಟಡ ನಿರ್ಮಾಣ ಅಥವಾ ಅಧಿಭೋಗವು ನೀಡಲಾದ ಅನುಮತಿಗಳಿಗೆ ಅನುಸಾರವಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಖಾತೆದಾರ ಅಥವಾ ಜವಾಬ್ದಾರಿಯುತ ವ್ಯಕ್ತಿ ಮತ್ತು ಸೌಲಭ್ಯ ಸೇವೆಗಳನ್ನು ಒದಗಿಸುವವರಿಂದ ಅನುಪಾಲನೆ
247. ಅನಧಿಕೃತವಾಗಿ ಕಟ್ಟಡಗಳ ನಕ್ಷೆಗಳಲ್ಲಿ ಮಾಡಿಕೊಳ್ಳುವ ಬದಲಾವಣೆಗಳು ಅಥವ ಅನಧಿಕೃತ ನಿರ್ಮಾಣಗಳನ್ನು ತಡೆಯಲು ವಿಫಲನಾಗಿರುವುದಕ್ಕಾಗಿ ಆಯುಕ್ತನಿಂದ ನಿಯೋಜನೆಗೊಂಡ ಅಧಿಕಾರ ವ್ಯಾಪ್ತಿಯ ಅಧಿಕಾರಿಗೆ ದಂಡನೆ
248. ನಿರ್ದಿಷ್ಟ ಬೀದಿಗಳಲ್ಲಿ ಅಥವಾ ಸ್ಥಳಗಳಲ್ಲಿ ಕೆಲವು ವರ್ಗಗಳ ಕಟ್ಟಡಗಳ ಭಾವೀ ನಿರ್ಮಾಣವನ್ನು ನಿಯಂತ್ರಿಸುವ ಸರ್ಕಾರದ ಅಧಿಕಾರ
249. ಕೆಲವು ಕಾನೂನುಬಾಹಿರ ಕಟ್ಟಡಗಳ ಸಕ್ರಮೀಕರಣ
250. ಆಯುಕ್ತನ ನಿರ್ಣಯಗಳ ವಿರುದ್ಧ ಅಪೀಲು
251. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ನಗರ ಪಾಲಿಕೆಯ ಕರ್ತವ್ಯಗಳು
252. ಕಟ್ಟಡಗಳ ಅಥವಾ ನಿವೇಶನಗಳ ಪರಿಶೀಲನೆ ಅಥವಾ ನೈರ್ಮಲ್ಯದ ಬಗ್ಗೆ ಆದೇಶಿಸುವ ಅಥವಾ ಪರಿಶೀಲನೆ ಅಥವಾ ನೈರ್ಮಲ್ಯವನ್ನು ಕೈಗೊಳ್ಳುವ ನಗರ ಪಾಲಿಕೆಯ ಅಧಿಕಾರ
253. ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗಗಳನ್ನು ಅಧಿಸೂಚಿಸುವ ಅಧಿಕಾರ

254. ಕಟ್ಟಡಗಳ ಮತ್ತು ವಸ್ತುಗಳ ಸೋಂಕು ನಿವಾರಣೆ
255. ಸೋಂಕು ನಿವಾರಣೆಗಾಗಿ ಸ್ಥಳಗಳ ವ್ಯವಸ್ಥೆ ಮತ್ತು ಸೋಂಕು ತಗುಲಿದ ವಸ್ತುಗಳನ್ನು ನಾಶಪಡಿಸುವ ಅಧಿಕಾರ
256. ಸಾರ್ವಜನಿಕ ಉದ್ದೇಶಗಳಿಗಾಗಿನ ಅಥವಾ ಮನೋರಂಜನಾ ಸ್ಥಳಗಳನ್ನು ಮುಚ್ಚುವಂತೆ ಆದೇಶ ನೀಡುವ ಅಧಿಕಾರ
257. ಸೋಂಕು ತಗುಲಿದ ವಸ್ತುಗಳ ವರ್ಗಾವಣೆಯ ವಿರುದ್ಧ ನಿಷೇಧ
258. ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದಕ್ಕೆ ನಿಷೇಧ
259. ರೋಗಪೀಡಿತ ವ್ಯಕ್ತಿಯು ಸಾರ್ವಜನಿಕ ವಾಹನವನ್ನು ಪ್ರವೇಶಿಸುವುದಕರ ವಿರುದ್ಧ ನಿಷೇಧ
260. ರೋಗಿಗಳನ್ನು ಸಾಗಿಸಿದ ತರುವಾಯ ಸಾರ್ವಜನಿಕ ವಾಹನದ ಸೋಂಕು ನಿವಾರಣೆ
261. ಸೋಂಕು ತಗುಲಿದ ಕಟ್ಟಡವನ್ನು ಬಾಡಿಗೆಗೆ ಕೊಡುವುದು
262. ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದಿಂದ ನರಳುತ್ತಿರುವ ಅಪ್ರಾಪ್ತ ವಯಸ್ಕನು ಶಾಲೆಗೆ ಹಾಜರಾಗುವಂತಿಲ್ಲ
263. ಗ್ರಂಥಾಲಯ ಪುಸ್ತಕಗಳಿಗೆ ಸಂಬಂಧಿಸಿದಂತೆ ಉಪಬಂಧ
264. ಸೋಂಕು ಹರಡುವ ಸಂಭವವಿರುವ ನೀರಿನ ಬಳಕೆಯನ್ನು ನಿಷೇಧಿಸುವ ಅಧಿಕಾರ
265. ಕಡ್ಡಾಯವಾಗಿ ಲಸಿಕೆ ಹಾಕುವುದು
266. ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದ ಬಗ್ಗೆ ಮಾಹಿತಿಯನ್ನು ನೀಡುವ ಹೊಣೆಗಾರಿಕೆ
267. ನಗರ ಪ್ರವೇಶಕ್ಕೆ ನಿಷೇಧ
268. ಅಪಾಯಕಾರಿ ಕಲ್ಲು ಗಣಿ ಕೆಲಸವನ್ನು ನಿಲ್ಲಿಸುವ ಅಧಿಕಾರ
269. ನಗರದೊಳಗೆ ಉಪದ್ರವಕಾರಿಯಾಗಿರುವಂಥ ಹೊಂಡಗಳು, ಇತ್ಯಾದಿಗಳನ್ನು ಮುಚ್ಚುವಂತೆ ಆದೇಶಿಸುವ ಅಧಿಕಾರ ಮತ್ತು ಕೃಷಿಯ ನಿಯಂತ್ರಣ
270. ವಿಪತ್ತು ನಿರ್ವಹಣೆ
271. ಘನ ತ್ಯಾಜ್ಯವನ್ನು ನಿರ್ವಹಿಸುವಲ್ಲಿ ನಗರ ಪಾಲಿಕೆ ಮತ್ತು ಆಯುಕ್ತನ ಕರ್ತವ್ಯ
272. ಘನ ತ್ಯಾಜ್ಯಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಬಿಲ್ಲಿಂಗ್ ಮತ್ತು ಶುಲ್ಕಗಳ ಸಂಗ್ರಹಣೆಯನ್ನು ವಹಿಸುವುದು
273. ಘನ ತ್ಯಾಜ್ಯದ ವಿಲೇವಾರಿಗಾಗಿ ಮತ್ತು ಅಂತಿಮ ವಿಲೇವಾರಿಗಾಗಿ ಸ್ಥಳಗಳನ್ನು ಗುರುತಿಸುವಿಕೆ
274. ಘನ ತ್ಯಾಜ್ಯಗಳನ್ನು ಅವುಗಳ ಉತ್ಪತ್ತಿಯ ಮೂಲದಲ್ಲೆ ಸಂಗ್ರಹಿಸಿಡುವ ಸಂಬಂಧ ಆವರಣಗಳ ಖಾತಾದಾರರು ಮತ್ತು ಅಧಿಭೋಗದಾರರ ಕರ್ತವ್ಯ
275. ವಿವಿಧ ಬಗೆಯ ತ್ಯಾಜ್ಯವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ನಗರ ಪಾಲಿಕೆಯ ಕರ್ತವ್ಯ
276. ವಾಣಿಜ್ಯ ತ್ಯಾಜ್ಯ ಉತ್ಪಾದಕರ ಹೊಣೆಗಾರಿಕೆಗಳು
277. ವಾರ್ಡ್ ಸಮಿತಿಯ ಪ್ರಕಾರ್ಯಗಳು
278. ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಗಳ ಕರ್ತವ್ಯಗಳು
279. ವಾರ್ಡ್ಗಟ್ಟದ ಕಿರುಯೋಜನೆ (Micro plan)
280. ತರಬೇತಿ ಮತ್ತು ಸಾರ್ವಜನಿಕ ಜಾಗೃತಿ
281. ನಗರ ಪಾಲಿಕೆಯಿಂದ ತ್ಯಾಜ್ಯವನ್ನು ಕಡಿಮೆಗೊಳಿಸುವಿಕೆ

282. ತ್ಯಾಜ್ಯ ನಿರ್ವಹಣೆಯ ಉಲ್ಲಂಘನೆಗಾಗಿ ದಂಡನೆಗಳು
283. ಸಾರ್ವಜನಿಕ ಸಮಾರಂಭಗಳ ಸಂದರ್ಭದಲ್ಲಿ ಉತ್ಪತ್ತಿಯಾದ ತ್ಯಾಜ್ಯ
284. ಉಪದ್ರವ ನಿಷೇಧ
285. ಮಾಲಿನ್ಯ ನಿಯಂತ್ರಣ ಮತ್ತು ಮಾಲಿನ್ಯಕಾರಕನು ದಂಡ ಪಾವತಿಸುವುದು
286. ಅಪಾಯಕಾರಿ ರಚನೆಗಳ ವಿಷಯದಲ್ಲಿ ಮುನ್ನೆಚ್ಚರಿಕೆಗಳು
287. ಅಪಾಯಕಾರಿ ಮರಗಳ ವಿಷಯದಲ್ಲಿ ಮುನ್ನೆಚ್ಚರಿಕೆಗಳು
288. ಅಪಾಯಕಾರಿ ಕೆರೆಗಳು, ಬಾವಿಗಳು, ಗುಂಡಿಗಳು ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆಗಳು
289. ಬೆಂಕಿಯ ವಿರುದ್ಧ ಮುನ್ನೆಚ್ಚರಿಕೆ
290. ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದುಹಾಕುವುದು
291. ಧೂಳು, ಹೊಗೆ, ಇತ್ಯಾದಿಗಳಿಂದ ಆಗುವ ಉಪದ್ರವವನ್ನು ನಿವಾರಿಸುವುದು
292. ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಸಮರುವುದು
293. ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಕಟ್ಟಡ
294. ಖಾತಾದಾರನು ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವುದಾಗಿ ಮುಚ್ಚಳಿಕೆ ಬರೆದುಕೊಡುವುದು
295. ನಷ್ಟಪರಿಹಾರದ ಕ್ಲೇಮಿಗೆ ಪ್ರತಿಬಂಧ
296. ನಗರ ಪರಂಪರೆಯ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆ
297. ಪಾರಂಪರಿಕ ಕಟ್ಟಡಗಳು, ಪಾರಂಪರಿಕ ಆವರಣಗಳು ಮತ್ತು ಪಟ್ಟಿ ಮಾಡಲಾದ ನೈಸರ್ಗಿಕ ವೈಶಿಷ್ಟ್ಯತೆಯುಳ್ಳ ಪ್ರದೇಶಗಳನ್ನೊಳಗೊಂಡ ಪಾರಂಪರಿಕ ತಾಣಗಳ ಪಟ್ಟಿ ತಯಾರಿಸುವುದು
298. ಪಾರಂಪರಿಕ ಕಟ್ಟಡಗಳಿಗೆ ಪ್ರೋತ್ಸಾಹಕಗಳು
299. ಪಾರಂಪರಿಕ ಸಂರಕ್ಷಣಾ ಸಮಿತಿಯ ನೇಮಕಾತಿ
300. ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳಿಗೆ ಶ್ರೇಣಿ ನೀಡುವುದು
300. ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳಿಗೆ ಶ್ರೇಣಿ ನೀಡುವುದು
301. ಪಾರಂಪರಿಕ ಸಂರಕ್ಷಣಾ ಸಮಿತಿಯ ಪ್ರಕಾರ್ಯಗಳು
302. ಅಬಾಧಿತ ಮಾಲಿಕತ್ವ
303. ಪರವಾನಿಗೆ ಮಂಜೂರಾತಿ ಅಂಶಗಳು
304. ಪರವಾನಿಗೆ ಪಡೆಯುವುದರಿಂದ ಸರ್ಕಾರಕ್ಕೆ ವಿನಾಯಿತಿ
305. ಪರವಾನಿಗೆಗಳು ಮತ್ತು ಲಿಖಿತ ಅನುಮತಿಗಳನ್ನು ಯಾವ ಷರತ್ತುಗಳ ಮೇಲೆ ನೀಡಲಾಗಿದೆಯೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು
306. ಪರವಾನಿಗೆಗಳನ್ನು ಉಲ್ಲಂಘಿಸಿ ಬಳಸಿದ ಸ್ಥಳಗಳ ಬಳಕೆಯನ್ನು ನಿಲ್ಲಿಸುವ ಆಯುಕ್ತನ ಅಧಿಕಾರ
307. ಮಾರಾಟ ನಡೆಯುತ್ತಿರುವ ಸ್ಥಳಗಳ ತಪಾಸಣೆ
308. ತಪಾಸಣೆಯ ಉದ್ದೇಶಗಳಿಗಾಗಿ ಆಯುಕ್ತನ ಅಧಿಕಾರ
309. ಮುಖ್ಯ ಆಯುಕ್ತರಿಗೆ ಮೇಲ್ಮನವಿ
310. ಮೇಲ್ಮನವಿಗಳಿಗೆ ಕಾಲ ಪರಿಮಿತಿಯ ಅವಧಿ
311. ಹಾಜರಾಗಲು ಮತ್ತು ಸಾಕ್ಷ್ಯ ನೀಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಸಮನುಗಳು

312. ಪರವಾನಿಗೆ, ಇತ್ಯಾದಿಗಳನ್ನು ಪಡೆಯುವಲ್ಲಿನ ವೈಫಲ್ಯದ ಅಥವಾ ಅವುಗಳ ಉಲ್ಲಂಘನೆಯ ಪರಿಣಾಮಗಳು
313. ಹೊಣೆಗಾರರಾದ ವ್ಯಕ್ತಿಗಳಿಂದ ವೆಚ್ಚಗಳ ವಸೂಲಿ ಮತ್ತು ಅಧಿಭೋಗದಾರನ ಪರಿಮಿತಿ ಅಥವಾ ಹೊಣೆಗಾರಿಕೆ
314. ನಿಯಮಗಳನ್ನು ಮತ್ತು ಆದೇಶಗಳನ್ನು ರಚಿಸುವ ರಾಜ್ಯ ಸರ್ಕಾರದ ಅಧಿಕಾರ
315. ವಿನಿಯಮಗಳನ್ನು ರಚಿಸುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ
316. ಮಾದರಿ ಉಪವಿಧಿಗಳನ್ನು ರಚಿಸುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ಹಾಗೂ ನಗರ ಪಾಲಿಕೆಗಳ ಮೂಲಕ ಅಂಥ ಉಪವಿಧಿಗಳ ಅಳವಡಿಕೆ
317. ಉಪವಿಧಿಗಳನ್ನು ರಚಿಸಲು ನಗರ ಪಾಲಿಕೆಯ ಹೆಚ್ಚಿನ ಅಧಿಕಾರ
318. ವಿನಿಯಮಗಳನ್ನು ರಚಿಸುವ ನಗರ ಪಾಲಿಕೆಯ ಅಧಿಕಾರ
319. ಅಧಿನಿಯಮದ ಉಲ್ಲಂಘನೆಗಾಗಿ ದಂಡ
320. ನಿಯಮಗಳ ಉಲ್ಲಂಘನೆಗಾಗಿ ದಂಡ
321. ವಿನಿಯಮಗಳ ಉಲ್ಲಂಘನೆಗಾಗಿ ದಂಡ
322. ಉಪವಿಧಿಗಳ ಉಲ್ಲಂಘನೆಗಾಗಿ ದಂಡ
323. ಪಾಲಿಕೆಯ ಸ್ವತ್ತಿನ ಅನಧಿಕೃತ ಬಳಕೆಗೆ ದಂಡನೆ
324. ಸಾರ್ವಜನಿಕ ಬೀದಿಯಲ್ಲಿ ಅಪಾಯಕರವಾದ ಸ್ಥಿತಿಯಲ್ಲಿ ವಾಹನವನ್ನು ಮತ್ತು ಪ್ರಾಣಿಯನ್ನು ಬಿಟ್ಟಿರುವುದಕ್ಕಾಗಿ ದಂಡನೆ
325. ಅಪರಾಧದ ರಾಜಿ
326. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡುವ ಅಧಿಕಾರ ಮತ್ತು ಉಪವಿಧಿಗಳ ಉಲ್ಲಂಘನೆಗಾಗಿ ದಂಡನೆಗಳು
327. ಸರ್ಕಾರಕ್ಕೆ, ಅಧಿಕಾರಿಗಳಿಗೆ, ನಗರ ಪಾಲಿಕೆ ಪ್ರಾಧಿಕಾರಗಳಿಗೆ ಮತ್ತು ನೌಕರರಿಗೆ ರಕ್ಷಣೆ
328. ಮೇಯರ್, ಉಪ-ಮೇಯರ್, ಮುಂತಾದವರ ಅಭಿಯೋಜನೆಗೆ ಮಂಜೂರಾತಿ
329. ಕರ ನಿರ್ಧರಣೆ, ಇತ್ಯಾದಿಯನ್ನು ಆಕ್ಷೇಪಿಸತಕ್ಕದ್ದಲ್ಲ
330. ಪೊಲೀಸು ಅಧಿಕಾರಿಗಳ ಕರ್ತವ್ಯಗಳು
331. ವ್ಯಕ್ತಿಗಳನ್ನು ದಸ್ತಗಿರಿ ಮಾಡುವ ಪೊಲೀಸು ಅಧಿಕಾರಿಯ ಅಧಿಕಾರ
332. ಬೆಂಗಳೂರು ಮಹಾನಗರ ಕಾರ್ಯಪಡೆ ಅಥವಾ ನಗರ ಪಾಲಿಕೆಯ ನೌಕರರಿಂದ ಪೊಲೀಸು ಅಧಿಕಾರಿಯ ಅಧಿಕಾರಗಳ ಚಲಾಯಿಸುವುದು
333. ನಗರ ಪಾಲಿಕೆ, ಸ್ಥಾಯೀ ಸಮಿತಿ, ಮೇಯರ್, ಮೊದಲಾದವರ ವ್ಯವಹರಣೆಗಳಿಗೆ ಅಡ್ಡಿ ಮಾಡುವುದಕ್ಕೆ ನಿಷೇಧ
334. ಗುರುತನ್ನು ತೆಗೆದುಹಾಕುವುದಕ್ಕೆ ನಿಷೇಧ
335. ನಿಧಿಯ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ನಗರಪಾಲಿಕೆಯ ಆಯುಕ್ತ, ಮತ್ತು ಪಾಲಿಕೆಯ ಸದಸ್ಯನ ಹೊಣೆಗಾರಿಕೆ, ಇತ್ಯಾದಿ
336. ನೋಟೀಸನ್ನು ತೆಗೆದುಹಾಕುವುದಕ್ಕೆ ಅಥವಾ ಅಳಿಸಿ ಹಾಕುವುದಕ್ಕೆ ನಿಷೇಧ
337. ಸಾರ್ವಜನಿಕ ಸ್ಥಳದ ಅಥವಾ ಸಾಮಗ್ರಿಗಳ ಸಂಬಂಧದಲ್ಲಿ ಅನಧಿಕೃತ ವ್ಯವಹಾರಗಳಿಗೆ ನಿಷೇಧ

338. ನೋಟೀಸುಗಳ ಮತ್ತು ಅನುಮತಿಗಳ ನಮೂನೆ
339. ಪ್ರಾಧಿಕಾರ, ನಗರ ಪಾಲಿಕೆ ಪ್ರಾಧಿಕಾರಿಗಳ ಅಥವಾ ಅಧಿಕಾರಿಗಳ ಸಮ್ಮತಿಯ ರುಜುವಾತು
340. ದಸ್ತಾವೇಜುಗಳ ಮೇಲೆ ರುಜು
341. ಅಧಿಸೂಚನೆಯ ಪ್ರಕಟಣೆ
342. ಆದೇಶದ, ನೋಟೀಸಿನ ಅಥವಾ ಇತರ ದಸ್ತಾವೇಜುಗಳ ಪ್ರಕಟಣೆ
343. ವೃತ್ತಪತ್ರಿಕೆಗಳಲ್ಲಿ ಪ್ರಕಟಣೆ
344. ನಿಷೇಧದ ಅಥವಾ ಸ್ಥಳಗಳನ್ನು ಪ್ರತ್ಯೇಕವಾಗಿ ಇಡುವ ಬಗ್ಗೆ ನೋಟೀಸು
345. ದಸ್ತಾವೇಜುಗಳು ಅಥವಾ ನೋಟೀಸುಗಳ ಜಾರಿಯ ವಿಧಾನ
346. ವಿಧಿಸಬಹುದಾದ ಮೊತ್ತವನ್ನು ಅಧಿಭೋಗದಾರನು ಖಾತೆದಾರರಿಂದ ವಸೂಲು ಮಾಡುವುದು
347. ಅಧಿಭೋಗದಾರನಿಂದ ಖಾತೆದಾರನಿಗೆ ಅಡ್ಡಿ
348. ಖಾತೆದಾರನು ತಪ್ಪಿದಲ್ಲಿ ಅಧಿಭೋಗದಾರನಿಂದ ಕೆಲಸದ ನಿರ್ವಹಣೆ
349. ಆದೇಶವನ್ನು ಪಾಲಿಸಲು ಕಾಲಾವಕಾಶ ಮತ್ತು ತಪ್ಪಿದರೆ ಅದನ್ನು ಜಾರಿಗೊಳಿಸಲು ಅಧಿಕಾರ
350. ವೆಚ್ಚಗಳ ಸಂದಾಯವನ್ನು ಕಂತುಗಳಲ್ಲಿ ಸ್ವೀಕರಿಸುವುದಕ್ಕೆ ಒಪ್ಪಲು ಆಯುಕ್ತರ ಅಧಿಕಾರ
351. ಕೆಲವು ಕಾಮಗಾರಿಗಳ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಲು ಅಧಿಕಾರ
352. ಮೇಲ್ಪಾಟು ವೆಚ್ಚಗಳನ್ನು ಯಾರು ಸಂದಾಯ ಮಾಡಬೇಕು
353. ಮೇಲ್ಪಾಟು ವೆಚ್ಚಗಳಿಗೆ ಸಂಬಂಧಿಸಿದ ಋಣಭಾರದ ವಿಮೋಚನೆ
354. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮತ್ತು ನಗರ ಪಾಲಿಕೆಯ ಅಧಿಕಾರಿಗಳು, ಏಜಂಟರುಗಳು ಮತ್ತು ಉಪ-ಏಜಂಟರುಗಳಿಗೆ "ಲೋಕನೌಕರ" ಪದದ ಅನ್ವಯಿಸುವಿಕೆ
355. ಕಂಪೆನಿಗಳಿಂದ ಅಪರಾಧಗಳು
356. ಧ್ವಜದ ಅಧಿಕೃತ ಪ್ರದರ್ಶನ
357. ಸವಾಲು ಕೂಗುವುದಕ್ಕೆ ನಿಷೇಧ
358. ನಗರ ಪಾಲಿಕೆಯ ಪ್ರದೇಶದೊಳಗೆ ಪಂಚಾಯಿತಿ ಪ್ರದೇಶವನ್ನು ವಿಲೀನಗೊಳಿಸುವುದರ ಪರಿಣಾಮ
359. ತೊಂದರೆಗಳ ನಿವಾರಣೆ
360. ತಾತ್ಕಾಲಿಕ ಉಪಬಂಧಗಳು
361. ನಿರಸನ ಮತ್ತು ಉಳಿಸುವಿಕೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2025ರ ಅಧಿನಿಯಮ ಸಂಖ್ಯೆ: 36. ಈ ಮುಂದಿನವುಗಳಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ನಾಗರಿಕ ಪ್ರಾಧಿಕರಗಳನ್ನು ಸ್ಥಾಪಿಸುವುದು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪರಿಗಣಾಮಕಾರಿ ನಗರ ಆಡಳಿತಕ್ಕಾಗಿ ಪ್ರಮುಖ ತತ್ವಗಳು, ಸಂಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಉಪಬಂಧಿಸುವುದು;

(ii) ಗ್ರೇಟರ್ ಬೆಂಗಳೂರು ಪ್ರದೇಶದ ಅಭಿವೃದ್ಧಿಯ ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಸ್ಥಾಪಿಸುವುದು;

(iii) ಪರಿಣಾಮಕಾರಿಯಾದ, ಸಹಭಾಗಿತ್ವದ ಮತ್ತು ಸ್ಪಂದನಶೀಲ ಆಡಳಿತಕ್ಕಾಗಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಏಳಕ್ಕಿಂತ ಹೆಚ್ಚಲ್ಲದಂತೆ ನಗರ ಪಾಲಿಕೆಗಳನ್ನು ಸ್ಥಾಪಿಸುವುದು;

(iv) ವಾರ್ಡ್ ಸಮಿತಿಗಳನ್ನು, ನಗರಾಡಳಿತದ ಮೂಲ ಘಟಕಗಳನ್ನಾಗಿಸಲು ಹಾಗೂ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಸುಗಮಗೊಳಿಸಲು ಅವುಗಳನ್ನು ಸಶಕ್ತಗೊಳಿಸುವುದು;

(v) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಎಲ್ಲಾ ಸೇವಾ ವಿತರಣಾ ಸಾರ್ವಜನಿಕ ಪ್ರಾಧಿಕಾರಗಳ ರಾಜಕೀಯ ಉತ್ತರದಾಯಿತ್ವವನ್ನು ಸಂಯೋಜಿಸುವುದು ಮತ್ತು ಸುವ್ಯವಸ್ಥಿತಗೊಳಿಸುವುದು;

(vi) ಬೆಂಗಳೂರಿಗಾಗಿ ವಿಕೇಂದ್ರೀಕೃತ, ಸಹಭಾಗಿ, ದಕ್ಷ ಮತ್ತು ನ್ಯಾಯಸಮ್ಮತ ಆಡಳಿತ ಕಾರ್ಯಚೌಕಟ್ಟನ್ನು ಸ್ಥಾಪಿಸುವ ಮೂಲಕ ಎಲ್ಲಾ ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುವುದು;ಮತ್ತು

(vii) ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ,

ಆದ್ದರಿಂದ ಈ ವಿಧೇಯಕ.

[2024ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 34, ಕಡತ ಸಂಖ್ಯೆ:ಸಂವ್ಯಶಾಇ 45 ಶಾಸನ 2024]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:240, ದಿನಾಂಕ:24.04.2025 ರಲ್ಲಿ ಪ್ರಕಟಗೊಂಡಿದೆ]

2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 36

(2025 ರ ಏಪ್ರಿಲ್ ತಿಂಗಳ 24ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024

(2025 ರ ಏಪ್ರಿಲ್ ತಿಂಗಳ 23ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪರಿಣಾಮಕಾರಿ ನಗರ ಆಡಳಿತಕ್ಕಾಗಿ ಪ್ರಮುಖ ತತ್ವಗಳು, ಸಂಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಉಪಬಂಧಿಸುವುದಕ್ಕಾಗಿ;

(i) ಗ್ರೇಟರ್ ಬೆಂಗಳೂರು ಪ್ರದೇಶದ ಅಭಿವೃದ್ಧಿಯ ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ;

(ii) ಪರಿಣಾಮಕಾರಿಯಾದ, ಸಹಭಾಗಿತ್ವದ ಮತ್ತು ಸ್ಪಂದನಶೀಲ ಆಡಳಿತಕ್ಕಾಗಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಏಳಕ್ಕಿಂತ ಹೆಚ್ಚಲ್ಲದಂತೆ ನಗರ ಪಾಲಿಕೆಗಳನ್ನು ಸ್ಥಾಪಿಸುವುದಕ್ಕಾಗಿ;

(iii) ವಾರ್ಡ್ ಸಮಿತಿಗಳನ್ನು, ನಗರಾಡಳಿತದ ಮೂಲ ಘಟಕಗಳನ್ನಾಗಿಸಲು ಹಾಗೂ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಸುಗಮಗೊಳಿಸಲು ಅವುಗಳನ್ನು ಸಶಕ್ತಗೊಳಿಸುವುದಕ್ಕಾಗಿ;

(iv) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಎಲ್ಲಾ ಸೇವಾ ವಿತರಣಾ ಸಾರ್ವಜನಿಕ ಪ್ರಾಧಿಕಾರಗಳ ರಾಜಕೀಯ ಉತ್ತರದಾಯಿತ್ವವನ್ನು ಸಂಯೋಜಿಸಲು ಮತ್ತು ಸುವ್ಯವಸ್ಥಿತಗೊಳಿಸುವುದಕ್ಕಾಗಿ;

(v) ಬೆಂಗಳೂರಿಗಾಗಿ ವಿಕೇಂದ್ರೀಕೃತ, ಸಹಭಾಗಿ, ದಕ್ಷ ಮತ್ತು ನ್ಯಾಯಸಮ್ಮತ ಆಡಳಿತ ಕಾರ್ಯಚೌಕಟ್ಟನ್ನು ಸ್ಥಾಪಿಸುವ ಮೂಲಕ ಎಲ್ಲಾ ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ; ಮತ್ತು

(vi) ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ,

- ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 2008 ರಲ್ಲಿ ಸ್ಥಾಪಿಸಲಾಗಿದ್ದು, ಇದು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ ಉಪಬಂಧಗಳಡಿ ಹಾಗೂ ಆನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರ ಉಪಬಂಧಗಳಡಿಯಲ್ಲಿ ಆಡಳಿತ ನಿರ್ವಹಿಸಲಾಗುತ್ತಿರುವುದರಿಂದ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರ ಉಪಬಂಧಗಳು ಬೆಂಗಳೂರು ಆಡಳಿತ ನಿರ್ವಹಣೆಗೆ ಸಾಕಾಗದಿರುವುದರಿಂದ, ಏಕೆಂದರೆ ಬೆಂಗಳೂರಿನಲ್ಲಿ ಬಹುಸಂಖ್ಯೆಯ ನಾಗರಿಕ ಏಜೆನ್ಸಿಗಳಿದ್ದು ಮತ್ತು ಅವುಗಳ ನಡುವೆ ಸಮನ್ವಯದ ಕೊರತೆಯ ಕಾರಣದಿಂದಾಗಿ ಬೆಂಗಳೂರಿನಲ್ಲಿ ಆಡಳಿತ ಅವ್ಯವಸ್ಥೆಯನ್ನು ಸರಿಪಡಿಸುವಂಥ ಯಾವುದೇ ಸಂಸ್ಥೆಗಳನ್ನು ಸ್ಥಾಪಿಸದಿರುವುದರಿಂದ;

ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಸ್ಥಾಪಿಸುವುದು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಗರ ಪಾಲಿಕೆಗಳು ಮತ್ತು ವಾರ್ಡ್ ಸಮಿತಿಗಳ ಆಡಳಿತ ನಿರ್ವಹಣೆಗಾಗಿ ಹೊಸ ಉಪಬಂಧಗಳನ್ನು ಪರಿಚಯಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

ಅಧ್ಯಾಯ-1
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರವು ಅಧಿಸೂಚಿಸಿದಂತೆ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಈ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಸಂಖ್ಯೆ: ನಅಇ 100 ಬಿಬಿಎಸ್ 2025, ಭಾ-2 ದಿ:14.05.2025ರ ಮೂಲಕ ದಿನಾಂಕ: 15.05.2025 ರಿಂದ ಜಾರಿಗೆ ಬಂದಿರುತ್ತದೆ. (ಅಧಿಸೂಚನೆಯನ್ನು ಅಧಿನಿಯಮದ ಕೊನೆಯಲಿ ನೋಡಬಹುದು).

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಆಡಳಿತಗಾರ" ಎಂದರೆ, ನಗರ ಪಾಲಿಕೆಗೆ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳನ್ನು ಚಲಾಯಿಸಲು ಹಾಗೂ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸರ್ಕಾರವು ನೇಮಿಸಿದ ಯಾರೇ ಅಧಿಕಾರಿ;

(2) "ಸಂಘ" ಎಂದರೆ, ಕರ್ನಾಟಕ ಸೊಸೈಟಿಗಳ ನೊಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ, 17)ರ ಅಡಿಯಲ್ಲಿ ಯುಕ್ತವಾಗಿ ನೋಂದಾಯಿಸಿದ ವ್ಯಕ್ತಿಗಳ ನಿಕಾಯ, ನ್ಯಾಸ, ಸೊಸೈಟಿ, ಸಂಘ ಅಥವಾ ಸಂಸ್ಥೆ;

(3) "ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸೃಜಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(4) "ಹಿಂದುಳಿದ ವರ್ಗಗಳು" ಎಂದರೆ, ನಗರ ಪಾಲಿಕೆಯಲ್ಲಿ ಸೀಟುಗಳ ಮೀಸಲಾತಿಯ ಉದ್ದೇಶಗಳಿಗಾಗಿ ಸರ್ಕಾರವು ಕಾಲಕಾಲಕ್ಕೆ ವರ್ಗೀಕರಿಸಬಹುದಾದ ಅಥವಾ ಅಧಿಸೂಚಿಸಬಹುದಾದಂಥ ನಾಗರಿಕರ ಅಂಥ ವರ್ಗ ಅಥವಾ ವರ್ಗಗಳು;

(5) "ಜೈವಿಕ ವೈದ್ಯಕೀಯ ತ್ಯಾಜ್ಯ" ಎಂದರೆ, ಮನುಷ್ಯರ ಅಥವಾ ಪ್ರಾಣಿಗಳ ರೋಗಪತ್ತೆ, ಚಿಕಿತ್ಸೆ, ಸೋಂಕು ತಡೆಯುವ ವ್ಯವಸ್ಥೆ ಅಥವಾ ಯಾವುದೇ ಆರೋಗ್ಯ ಸೇವೆಗಳ ಅವಧಿಯಲ್ಲಿ ಅಥವಾ ಸಂಶೋಧನಾ ಚಟುವಟಿಕೆಗಳ ಅವಧಿಯಲ್ಲಿ ಯಾವುದೇ ವೈದ್ಯಕೀಯ ಆಸ್ಪತ್ರೆ, ನರ್ಸಿಂಗ್ ಹೋಂ, ಚಿಕಿತ್ಸಾಲಯಗಳು, ಪಶು ಆರೋಗ್ಯ ಕೇಂದ್ರಗಳು ಹಾಗೂ ಅವುಗಳಿಗೆ ಸಂಬಂಧಿತ ವೃತ್ತಿನಿರತ ವೈದ್ಯರು ಬಿಸಾಡುವುದರಿಂದ ಉತ್ಪತ್ತಿಯಾಗುವ ಯಾವುದೇ ತ್ಯಾಜ್ಯ;

(6) "ಬೆಂಗಳೂರು ಮಹಾನಗರ ಪ್ರದೇಶ" ಎಂದರೆ, ಬೆಂಗಳೂರು ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳನ್ನು ಒಳಗೊಂಡಿರುವ ಪ್ರದೇಶ;

(7) "ಕಟ್ಟಡ" ಎಂಬುದು,-

(ಎ) ಮನೆ, ಹೊರಮನೆ, ಲಾಯ, ಪಾಯಿಖಾನೆ, ಶೆಡ್ಡು, ಗುಡಿಸಲು, ಗೋಡೆ, ವರಾಂಡ, ಖಾಯಂ ಆಗಿ ನಿರ್ಮಿಸಿದ ಜಗಲಿ, ಮೇಲು ಪಾಯ, ಬಾಗಿಲ ಮೆಟ್ಟಿಲನ್ನು ಮತ್ತು ಕಲ್ಲು ಇಟ್ಟಿಗೆ, ಮರ, ಮಣ್ಣು, ಲೋಹದಿಂದ ಅಥವಾ ಯಾವುದೇ ಇತರ ಸಾಮಗ್ರಿಯಿಂದ ನಿರ್ಮಿಸಿದಂಥ ಯಾವುದೇ ರೀತಿಯ ದೂರಸಂಪರ್ಕ ಗೋಪುರ ಅಥವಾ ಇತರ ಜಾಹೀರಾತು ರಚನೆಯನ್ನು;

(ಬಿ) ಅಡಿಪಾಯಗಳಿಲ್ಲದೆ ನೆಲದಲ್ಲಿ ಸಹಜವಾಗಿ ನಿಂತಿರುವ ಗಾಲಿಗಳ ಮೇಲಿನ ರಚನೆಯನ್ನು;

(ಸಿ) ಹಡಗು, ನೌಕೆ, ದೋಣಿ, ಗುಡಾರವನ್ನು ಮತ್ತು ಮಾನವ ವಾಸಕ್ಕಾಗಿ ಉಪಯೋಗಿಸುವ ಅಥವಾ ಯಾವುದೇ ವಸ್ತು ಅಥವಾ ಸರಕುಗಳನ್ನು ಇಡಲು ಅಥವಾ ದಾಸ್ತಾನು ಮಾಡಲು ಉಪಯೋಗಿಸುವ ಯಾವುದೇ ಇತರ ರಚನೆಯನ್ನು

- ಒಳಗೊಳ್ಳುತ್ತದೆ;

(8) "ಉಪವಿಧಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಗರ ಪಾಲಿಕೆಯು ರಚಿಸಿದ ಉಪವಿಧಿ;

(9) "ಆಕಸ್ಮಿಕ ಖಾಲಿ ಹುದ್ದೆ" ಎಂದರೆ, ರಾಜ್ಯ ಚುನಾವಣಾ ಆಯೋಗವು ನಡೆಸುವ ಚುನಾವಣೆಯ ಮೂಲಕ ಚುನಾಯಿತನಾದ ನಗರಪಾಲಿಕೆ ಸದಸ್ಯ (ಕೌನ್ಸಿಲರ್)ನ ಪದಾವಧಿಯು ಮುಕ್ತಾಯವಾಗುವ ಮೂಲಕವಲ್ಲದೆ ಅನ್ಯಥಾ ಉಂಟಾಗುವ ಖಾಲಿ ಸ್ಥಾನ ಮತ್ತು "ಆಕಸ್ಮಿಕ ಚುನಾವಣೆ" ಎಂದರೆ, ನಗರಪಾಲಿಕೆ ಸದಸ್ಯನ ಪದವು ಮರಣ ಅಥವಾ ರಾಜೀನಾಮೆ ಅಥವಾ ಇತರೆ ಯಾವುದೇ ರೀತಿಯ ಅಗಲಿಕೆಯಿಂದ ತೆರವಾದ ಆಕಸ್ಮಿಕ ಸ್ಥಾನಗಳನ್ನು ಭರ್ತಿಮಾಡಲು ನಡೆಸಲಾಗುವ ಚುನಾವಣೆ;

(10) "ಅಧ್ಯಕ್ಷ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಸಮಿತಿ ಅಥವಾ ಆಯೋಗ ಅಥವಾ ಇತರೆ ಅಂಥ ಸಂಸ್ಥೆಗಳ ಮುಖ್ಯಸ್ಥನಾಗಿರತಕ್ಕಂಥ ವ್ಯಕ್ತಿ;

(11) "ಮುಖ್ಯ ಆಯುಕ್ತ" ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕವಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ;

(12) "ನಗರ ಪಾಲಿಕೆ" ಎಂದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ನಿಯಂತ್ರಣ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಬರುವಂಥ ಪ್ರದೇಶಗಳೂ ಒಳಗೊಂಡಂತೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸ್ಥಾಪಿಸಿದ ನಗರ ಪಾಲಿಕೆಗಳು;

(13) "ನಗರ ಪಾಲಿಕೆ ನಿಧಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಿದಂಥ ಷರತ್ತುಗಳಿಗನುಸಾರವಾಗಿ ನಗರ ಪಾಲಿಕೆಗಳ ಸಂಚಿತ ನಿಧಿಯಿಂದ ಸ್ವೀಕರಿಸುವ ನಿಧಿ;

(14) "ನಾಗರಿಕ ಪ್ರಾಧಿಕಾರಗಳು" ಎಂದರೆ, 4ನೇ ಪ್ರಕರಣದಡಿಯಲ್ಲಿ ರಚಿಸಿದ ನಾಗರಿಕ ಪ್ರಾಧಿಕಾರಗಳು;

(15) "ನಾಗರಿಕ ಸಮಾಜ'' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಿದ, ರಚಿಸಿದ ಅಥವಾ ನೋಂದಾಯಿಸಿದ ಮತ್ತು ಸಮಾಜ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿ, ವ್ಯಕ್ತಿಗಳ ಸಂಘ ಅಥವಾ ಸರ್ಕಾರೇತರ ಸಂಸ್ಥೆ ಮತ್ತು ನಗರ ಪಾಲಿಕೆಯು ಯುಕ್ತವೆಂದು ಭಾವಿಸುವಂಥ ಸಮುದಾಯ ಆಧಾರಿತ ಸಂಸ್ಥೆ, ವೃತ್ತಿಪರ ಸಂಸ್ಥೆ, ನಾಗರಿಕ ಆರೋಗ್ಯ, ಶೈಕ್ಷಣಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಸಂಸ್ಥೆಯು ಒಳಗೊಳ್ಳುತ್ತದೆ;

(16) "ಆಯುಕ್ತ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ನಗರ ಪಾಲಿಕೆಯ ಆಯುಕ್ತ;

(17) "ಪಾಲಿಕೆ ಸದಸ್ಯ (Councillor)" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಗರ ಪಾಲಿಕೆಗೆ ಚುನಾಯಿತನಾದ ಪಾಲಿಕೆ ಸದಸ್ಯ;

(18) "ಗೌರವಪೂರ್ವಕ (Complimentary) ಸಂಪರ್ಕ" ಎಂದರೆ, ಕೇಬಲ್ ದೂರದರ್ಶನ ಅಥವಾ ಗೃಹನೇರ ಸೇವೆಗೆ (dth) ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ಸಂಪರ್ಕವನ್ನು ಕಲ್ಪಿಸುವುದು ಒಳಗೊಳ್ಳುತ್ತದೆ;

(19) "ಗೌರವಪೂರ್ವಕ ಟಿಕೆಟ್" ಎಂದರೆ, ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ನೀಡಿದ ಟಿಕೆಟ್ ಆಧಾರಿತ ಮನರಂಜನೆಗೆ ಪ್ರವೇಶವನ್ನು ಒದಗಿಸುವ ಯಾವುದೇ ಟಿಕೆಟ್;

(20) "ಸಮನ್ವಯ ಸಮಿತಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಕ್ಷೇತ್ರ ಸಮಾಲೋಚನಾ ಮತ್ತು ಸಮನ್ವಯ ಸಮಿತಿ;

(21) "ಅಪಾಯಕಾರಿ ರೋಗಗಳು" ಎಂದರೆ, ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಜೀವನದ ಸುರಕ್ಷೆ ಮತ್ತು ಯೋಗಕ್ಷೇಮಕ್ಕೆ ಬೆದರಿಕೆಯೊಡ್ಡುವ ಅಪಾಯಕಾರಿ ರೋಗ ಎಂಬುದಾಗಿ ಅಧಿಸೂಚಿಸಿದ ಯಾವುದೇ ಅಂಟು ಜಾಡ್ಯ, ಸ್ಥಳೀಯ ವ್ಯಾದಿ ಅಥವಾ ಸಾಂಕ್ರಾಮಿಕ ರೋಗ;

(22) "ಉಪ ಮಹಾಪೌರ" ಎಂದರೆ, ಈ ಅಧಿನಿಯಮದಡಿಯಲ್ಲಿ ಚುನಾಯಿತನಾದ ನಗರ ಪಾಲಿಕೆಯ ಉಪ ಮಹಾಪೌರ;

(23) "ಚುನಾವಣೆ" ಎಂದರೆ, ನಗರ ಪಾಲಿಕೆ ಸದಸ್ಯ ಪದದಲ್ಲಿನ ಯಾವುದೇ ಖಾಲಿಸ್ಥಾನವನ್ನು ತುಂಬುವುದಕ್ಕಾಗಿ ನಡೆಸುವ ಚುನಾವಣೆ;

(24) "ಮನರಂಜನೆ" ಎಂದರೆ, ಯಾವುದೇ ನಟನೆ, ಪ್ರದರ್ಶನ, ನಿರ್ಮಾಣ ಅಥವಾ ಯಾವುದೇ ಕೃತಿಯ ರಂಗಪ್ರದರ್ಶನವನ್ನು ಒಳಗೊಂಡಿರುವಂತಹ ಮತ್ತು ಅವುಗಳನ್ನು ವೀಕ್ಷಿಸುವುದಕ್ಕಾಗಿ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ಅಂಥ ಕಾರ್ಯಕ್ರಮದ ವೀಕ್ಷಣೆಗೆ ಪ್ರವೇಶಿಸಲು ಟಿಕೇಟನ್ನು ಖರೀದಿಸುವ ಅಥವಾ ಅಂಥ ಸೇವೆಯ ವೀಕ್ಷಣೆಗೆ ಸಂಪರ್ಕವನ್ನು ಖರೀದಿಸುವುದು ಅಗತ್ಯವಾಗಿರಬಹುದಾದ ಯಾವುದೇ ಮನರಂಜನಾ ಕಾರ್ಯಕ್ರಮ ಅಥವಾ ಸೇವೆಯ ಅವಕಾಶ ಎಂದರ್ಥ ಮತ್ತು ಅವುಗಳನ್ನು ಒಳಗೊಳ್ಳುವುದು;

(25) "ಅವಶ್ಯಕ ಸೇವೆಗಳು" ಎಂದರೆ, ಸರ್ಕಾರವು ಅಧಿಸೂಚಿಸಬಹುದಾದಂತೆ ನಗರ ಪಾಲಿಕೆಯ ಮೂಲಕ ಅಥವಾ ಅದರ ಪರವಾಗಿ ಯಾವ ಸೇವೆಗಳಿಗಾಗಿ ಅದರ ಯಾರೇ ನಗರ ಪಾಲಿಕೆ ಅಧಿಕಾರಿ, ನೌಕರ ಅಥವಾ ಇತರ ವ್ಯಕ್ತಿಯನ್ನು ನಿಯೋಜಿಸಲಾಗುತ್ತದೆಯೋ ಆ ಸೇವೆಗಳು;

(26) "ಕಾರ್ಖಾನೆ" ಎಂದರೆ, ವೃತ್ತಿ ಭದ್ರತೆ, ಆರೋಗ್ಯ ಮತ್ತು ಕಾರ್ಯನಿರ್ವಹಣೆ ಸ್ಥಿತಿಗತಿಗಳ ಸಂಹಿತೆ, 2020 (2020ರ ಕೇಂದ್ರ ಅಧಿನಿಯಮ 37) ರಲ್ಲಿ ಹಾಗೂ ಕಾರ್ಖಾನೆಗಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ 63)ರಲ್ಲಿ ಪರಿಭಾಷಿಸಿದಂಥ ಕಾರ್ಖಾನೆ;

(27) "ಹೊಲಸು" ಎಂಬುದರಲ್ಲಿ ಊರಿನ ರೊಚ್ಚು, ಸಗಣಿ, ಕಸ, ಕಲಗಚ್ಚು, ಕೊಳೆತ ಮತ್ತು ಕೊಳೆತು ನಾರುತ್ತಿರುವ ವಸ್ತುಗಳು ಮತ್ತು ಎಲ್ಲಾ ಹೊಲಸು ಪದಾರ್ಥಗಳು ಒಳಗೊಳ್ಳುತ್ತವೆ;

(28) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(29) "ನಿವೇಶನದ ಮಾರ್ಗಸೂಚಿ ಮೌಲ್ಯ" ಎಂದರೆ, ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ ಉಪಬಂಧಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಖಾಲಿ ಜಾಗದ ಮೌಲ್ಯ;

(30) "ಗ್ರೇಟರ್ ಬೆಂಗಳೂರು ಪ್ರದೇಶ" ಎಂದರೆ, ಬೆಂಗಳೂರು ನಗರದ ಅತಿದೊಡ್ಡ ನಗರ ಪ್ರದೇಶ ಮತ್ತು ರಾಜ್ಯ ಸರ್ಕಾರವು ಈ ಸಂಬಂಧವಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಪ್ರದೇಶಗಳು;

(31) "ಗ್ರೇಟರ್ ಬೆಂಗಳೂರು ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(32) "ಮೂಲ ಸೌಕರ್ಯ ಮತ್ತು ಪಾರಿಸರಿಕ ಪರಿಣಾಮ ಶುಲ್ಕ" ಎಂದರೆ, ನಗರ ಪಾಲಿಕೆಯು ಒದಗಿಸಿದ ಮತ್ತು ನಿರ್ವಹಿಸುತ್ತಿರುವ ಸಾರ್ವಜನಿಕ ರಸ್ತೆಗಳು ಮತ್ತು ಇತರ ಮೂಲಸೌಕರ್ಯ ಸೌಲಭ್ಯಗಳ ಬಳಕೆಗೆ ಸಂಬಂಧಿಸಿದ ಹಾಗೂ ನಿರ್ಮಾಣ ಕಾರ್ಯದ ಅವಧಿಯಲ್ಲಿ ಉತ್ಪತ್ತಿಯಾದ ಕಟ್ಟಡ ಅವಶೇಷಗಳಿಗೆ ಸಂಬಂಧಿಸಿದ ಶುಲ್ಕಗಳನ್ನು ಒಳಗೊಳ್ಳುತ್ತದೆ;

(33) "ಜಂಟಿ ಆಯುಕ್ತ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಉಲ್ಲೇಖಿಸಲಾದ ಜಂಟಿ ಆಯುಕ್ತ ಮತ್ತು ಹೆಚ್ಚುವರಿ ಆಯುಕ್ತರನ್ನೂ ಒಳಗೊಳ್ಳುವುದು;

(34) "ಖಾತಾ" ಎಂದರೆ, ನಗರ ಪಾಲಿಕೆಯು ಸ್ವತ್ತು ತೆರಿಗೆ ರಿಜಿಸ್ಟರಿನಲ್ಲಿ ನಿರ್ವಹಿಸಲಾದ ಸ್ಥಿರ ಸ್ವತ್ತಿನ ದಾಖಲೆ;

(35) "ಖಾತೆದಾರ" ಎಂದರೆ, ನಗರ ಪಾಲಿಕೆಯು ಯಾರ ಹೆಸರಿನಲ್ಲಿ ಖಾತೆಯನ್ನು ದಾಖಲಿಸಿದೆಯೋ ಮತ್ತು ಯಾರು ಕಾನೂನುಬದ್ಧವಾಗಿ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವನೋ ಆ ವ್ಯಕ್ತಿ ಮತ್ತು ಖಾತಾ ನಮೂದಿಗೆ ವ್ಯತಿರಿಕ್ತವಾಗಿ ರುಜುವಾತಾದ ಅಥವಾ ಕಾನೂನುಬದ್ಧವಾಗಿ ಹೊಸ ನಮೂದನ್ನು ಪ್ರತಿಯೋಜಿಸಲಾದ ಹೊರತು ಖಾತಾ ನಮೂದನ್ನು ನೈಜವಾದುದೆಂದು ಪರಿಭಾವಿಸತಕ್ಕದ್ದು;

(36) "ಖಾತಾ ಉದ್ಧೃತ ಭಾಗ" ಎಂದರೆ, ನಗರ ಪಾಲಿಕೆಯು ನೀಡಿದ, ಸ್ಥಿರ ಸ್ವತ್ತಿನ ನಿರ್ದಿಷ್ಟ ವಿವರಗಳನ್ನು ಒಳಗೊಂಡಿರುವ ಉದ್ಧೃತ ಭಾಗ;

(37) "ಭೂಮಿ" ಎಂಬ ಪದವು ನಗರ ಪಾಲಿಕೆಯ ಅಧಿಕಾರವ್ಯಾಪ್ತಿಯೊಳಗೆ ರಸ್ತೆಯ ಮೇಲೆ ನಿರ್ಮಿಸುತ್ತಿರುವ ಅಥವಾ ನಿರ್ಮಿಸಲಾದ ಅಥವಾ ನೀರಿನಿಂದ ಆವೃತ್ತವಾಗಿರುವ ಭೂಮಿ, ಭೂಮಿಯಿಂದ ದೊರೆಯುವ ಪ್ರಯೋಜನಗಳು, ಭೂಮಿಗೆ ಲಗತ್ತಾಗಿರುವ ಅಥವಾ ಭೂಮಿಗೆ ಲಗತ್ತಾದ ಯಾವುದಕ್ಕಾದರೂ ಶಾಶ್ವತವಾಗಿ ಅಂಟಿಕೊಂಡಿರುವ ವಸ್ತುಗಳು ಮತ್ತು ಯಾವುದೇ ಬೀದಿಯ ಮೇಲೆ ಕಾನೂನಿನ ಮೂಲಕ ಸೃಜಿತವಾದ ಹಕ್ಕುಗಳು ಒಳಗೊಳ್ಳುತ್ತದೆ;

(38) "ಬಡಾವಣೆ" ಎಂದರೆ, ಯಾರೇ ಒಬ್ಬ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು ಅಥವಾ ಯಾವುದೇ ರಾಜ್ಯದ ನಿಗಮಿತ ಅಥವಾ ನಿಗಮಿತವಲ್ಲದ ಪ್ರಾಧಿಕಾರವು ರಚಿಸಿದ ಅಥವಾ ಅದರ ಅಸ್ತಿತ್ವಕ್ಕಾಗಿ ಶಾಸನಬದ್ಧ ಪರವಾನಗಿಗಳನ್ನೂ ಸಹ ನೀಡಿದ ಒಂದು ಬಡಾವಣೆ;

(39) "ಸ್ಥಳೀಯ ಸಂಸ್ಥೆಗಳು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ನಗರ ಪಾಲಿಕೆಗಳು, ನಗರ ಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿ, ಅಭಿವೃದ್ಧಿ ಪ್ರಾಧಿಕಾರ, ನಗರ ಅಭಿವೃದ್ಧಿ ಮಂಡಳಿ, ಪಟ್ಟಣ ಅಭಿವೃದ್ಧಿ ಮಂಡಳಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್;

(40) "ಮಹಾಪೌರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಚುನಾಯಿತನಾದ ನಗರ ಪಾಲಿಕೆಯ ಮಹಾಪೌರ;

(41) ''ಮಾರುಕಟ್ಟೆ'' ಎಂಬುದು ಮಾಂಸ, ಮೀನು, ಹಣ್ಣು, ತರಕಾರಿ, ಜಾನುವಾರು ಅಥವಾ ಕೊಳೆತುಹೋಗಬಹುದಾದ ಸ್ವರೂಪವುಳ್ಳ ಆಹಾರದ ಯಾವುದೇ ಇತರ ವಸ್ತುಗಳ ವ್ಯಾಪಾರಕ್ಕಾಗಿ ವ್ಯಕ್ತಿಗಳು ಸೇರುವಂಥ ಮತ್ತು ಅಂಗಡಿಗಳ ಸಮೂಹ ಅಥವಾ ಉಗ್ರಾಣಗಳು ಅಥವಾ ಮಳಿಗೆಗಳು ಇರುವ ಸ್ಥಳವನ್ನು ನಗರ ಪಾಲಿಕೆಯು ಮಾರುಕಟ್ಟೆ ಎಂಬುದಾಗಿ ಘೋಷಿಸಿದ ಮತ್ತು ಪರವಾನಗಿ ನೀಡಿದ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳವನ್ನು ಒಳಗೊಳ್ಳುತ್ತದೆ;

(42) "ಮಧ್ಯಮಾವಧಿ ವಿತ್ತೀಯ ಯೋಜನೆ" ಎಂದರೆ, ನಗರ ಪಾಲಿಕೆಯು ಐದು ವರ್ಷಗಳ ಅವಧಿಗಾಗಿ ಸಿದ್ಧಪಡಿಸಿದ ವಿತ್ತೀಯ ಯೋಜನೆ;

(43) "ಟಿಕೆಟ್ ರಹಿತ ಮನರಂಜನೆ" ಎಂದರೆ, ಟಿಕೆಟ್ ರಹಿತ ಮನರಂಜನೆಯ ಸ್ಥಳವನ್ನು ಪ್ರವೇಶಿಸಲು ಟಿಕೆಟ್ ಖರೀದಿಸುವ ಅಗತ್ಯವಿಲ್ಲದಿರುವಂಥ ಯಾವುದೇ ಮನರಂಜನೆಯನ್ನು ಒಳಗೊಳ್ಳುತ್ತದೆ;

(44) "ಉಪದ್ರವ" ಎಂಬುದು ಕ್ಷತಿ, ಅಪಾಯ, ಕಿರುಕುಳವನ್ನು ಅಥವಾ ದೃಷ್ಟಿಶಕ್ತಿ, ಘ್ರಾಣಶಕ್ತಿ ಅಥವಾ ಶ್ರವಣ ಶಕ್ತಿಗೆ ಕಿರಿಕಿರಿಯನ್ನು ಅಥವಾ ವಿಶ್ರಾಂತಿಗೆ ಅಥವಾ ನಿದ್ರೆಗೆ ತೊಂದರೆಯನ್ನು ಉಂಟುಮಾಡುವ ಅಥವಾ ಉಂಟುಮಾಡುವ ಸಂಭವವಿರುವ ಅಥವಾ ಪ್ರಾಣಕ್ಕೆ ಅಪಾಯಕಾರಿಯಾದ ಅಥವಾ ಅಪಾಯಕಾರಿಯಾಗಬಹುದಾದ ಅಥವಾ ಆರೋಗ್ಯಕ್ಕೆ ಅಥವಾ ಸ್ವತ್ತಿಗೆ ಹಾನಿಕಾರಕವಾದ ಯಾವುದೇ ಕಾರ್ಯ, ಲೋಪ, ಅಂಥ ಸ್ಥಳದಲ್ಲಿ ಯಾವುದೇ ಅಂಥ ಕಾರ್ಯವನ್ನು ಮಾಡುವುದು ಒಳಗೊಳ್ಳುತ್ತದೆ;

(45) "ಅಧಿಭೋಗದಾರ" ಎಂದರೆ, ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಖಾತೆದಾರನಿಗೆ ತತ್ಕಾಲದಲ್ಲಿ ಬಾಡಿಗೆಯನ್ನು ಪಾವತಿಸುತ್ತಿರುವ

ಅಥವಾ ಪಾವತಿಸುವುದಕ್ಕೆ ಹೊಣೆಗಾರನಾಗಿರುವ ಅಥವಾ ಕಟ್ಟಡ ಅಥವಾ ಭೂಮಿಯನ್ನು ಲಾಭಕ್ಕಾಗಿ ಅಥವಾ ಅನ್ಯಥಾ ಬಳಸುವ ಯಾರೇ ವ್ಯಕ್ತಿ ಅಥವಾ ಮುಕ್ತ ಗೇಣಿದಾರ, ಪರವಾನಗಿದಾರ, ಗೇಣಿದಾರ, ಅಡಮಾನದಾರ ಮತ್ತು ಸ್ವಾಧೀನದಲ್ಲಿರುವ ಮಾಲೀಕ;

(46) "ಅಧಿಭೋಗ ಪ್ರಮಾಣ ಪತ್ರ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಕಟ್ಟಡದ ನಿರ್ಮಾಣಕಾರ್ಯ ಪೂರ್ಣಗೊಂಡ ನಂತರ ಆ ಆವರಣವನ್ನು ಅಧಿಭೋಗಿಸಲು ನಗರ ಪಾಲಿಕೆಯು ನೀಡಿದ ಪ್ರಮಾಣ ಪತ್ರ;

(47) "ಮಾಲೀಕ"ನು ಯಾವುದೇ ಭೂಮಿ ಅಥವಾ ಕಟ್ಟಡದ ಭೋಗ್ಯ ಅಥವಾ ಬಾಡಿಗೆಯ ಮೊತ್ತವನ್ನು ಸ್ವೀಕರಿಸುವ ಅಥವಾ ಸ್ವೀಕರಿಸಲು ಹಕ್ಕುಳ್ಳನಾಗಿರುವ, ಆತನ ಸ್ವಂತ ಖಾತೆಗೆ ಅಥವಾ ಯಾರೇ ಇತರ ವ್ಯಕ್ತಿಗಾಗಿ ಮಧ್ಯವರ್ತಿ, ನ್ಯಾಸಧಾರಿ, ಪೋಷಕ ಅಥವಾ ಸ್ವೀಕೃತದಾರನಾಗಿ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗವನ್ನು ಭೋಗ್ಯದಾರ ಅಥವಾ ಗೇಣಿದಾರನಿಗೆ ಭೋಗ್ಯ ಅಥವಾ ಬಾಡಿಗೆಗೆ ನೀಡಿದರೆ ಭೋಗ್ಯ ಅಥವಾ ಬಾಡಿಗೆಯ ಮೊತ್ತವನ್ನು ಹಾಗೆ ಸ್ವೀಕರಿಸಿದ್ದು ಭೋಗ್ಯ ಅಥವಾ ಅದನ್ನು ಸ್ವೀಕರಿಸಲು ಅರ್ಹನಾದಂಥ ಖಾತೆದಾರ ಅಥವಾ ಯಾರೇ ವ್ಯಕ್ತಿಯನ್ನು ಒಳಗೊಳ್ಳುವುದು;

(48) "ಜನಸಂಖ್ಯೆ" ಎಂದರೆ, ಕೊನೆಯ ಹಿಂದಿನ ಜನಗಣತಿಯಲ್ಲಿ ಖಚಿತಪಡಿಸಿಕೊಂಡು ಅದರ ಸಂಬಂಧಿತ ಅಂಕಿಅಂಶಗಳನ್ನು ಪ್ರಕಟಿಸಲಾಗಿರುವ ಜನಸಂಖ್ಯೆ;

(49) "ರಾಜಕೀಯ ಪಕ್ಷ" ಎಂದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ (1951ರ ಕೇಂದ್ರ ಅಧಿನಿಯಮ, 43) 29ಎ ಪ್ರಕರಣದ ಅಡಿಯಲ್ಲಿ ನೋಂದಾಯಿತವಾದ ರಾಜಕೀಯ ಪಕ್ಷ;

(50) "ಮತಗಟ್ಟೆಗಳು" ಎಂದರೆ, ಮತದಾರರ ಪಟ್ಟಿಯಲ್ಲಿರುವ ಮತದಾರರು ಮತ ಹಾಕಲು ಅನುವು ಮಾಡಿಕೊಡುವುದಕ್ಕಾಗಿ ರಾಜ್ಯ ಚುನಾವಣಾ ಆಯೋಗವು ರಚಿಸಿರುವ ಮತಗಟ್ಟೆ ಕೇಂದ್ರಗಳು;

(51) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(52) "ಪ್ರಿಸೈಡಿಂಗ್ ಅಧಿಕಾರಿ" ಎಂದರೆ, ಒಂದು ಅಥವಾ ಹೆಚ್ಚಿನ ಮತಗಟ್ಟೆಗಳ ಮೇಲೆ ಮೇಲುಸ್ತುವಾರಿ ಮಾಡಲು ರಾಜ್ಯ ಚುನಾವಣಾ ಆಯೋಗವು ನೇಮಿಸಿದ ಅಂಥ ಅಧಿಕಾರಿ;

(53) "ಆಸ್ತಿ ತೆರಿಗೆ" ಎಂದರೆ, ಈ ಅಧಿನಿಯಮದ ಪ್ರಕಾರ ನಗರ ಪಾಲಿಕೆಯು, ಕಟ್ಟಡಗಳು ಅಥವಾ ಖಾಲಿ ಜಾಗಗಳು ಅಥವಾ ಅಂಥ ಆವರಣಗಳ ಮೇಲೆ ವಿಧಿಸುವ ತೆರಿಗೆ;

(54) "ಸಾರ್ವಜನಿಕ ಪ್ರಾಧಿಕಾರ" ಎಂದರೆ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಸೇವೆಯನ್ನು ನೀಡುವಲ್ಲಿ ತೊಡಗಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮೂಲಕ ಸ್ಥಾಪಿತವಾದ ಅಥವಾ ರಚಿತವಾದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಏಜೆನ್ಸಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮ, ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರಗಳನ್ನು ಒಳಗೊಳ್ಳುತ್ತದೆ;

(55) "ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೊಂದಾಯಿತವಾದ ನಿವಾಸಿಗಳ ಸ್ವಯಂ ಸಂಸ್ಥೆ;

(56) "ವಿನಿಯಮ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿನಿಯಮ;

(57) "ಕಸಕಡ್ಡಿ" ಎಂಬುದು ಧೂಳು, ಬೂದಿ, ಒಡೆದ ಇಟ್ಟಿಗೆಗಳು, ಗಾರೆ, ಒಡೆದ ಗಾಜು, ತೋಟದ ಅಥವಾ ಕೊಟ್ಟಿಗೆಯ ಕಸ ಮತ್ತು ಹೊಲಸು ಪದಾರ್ಥ ಅಥವಾ ಊರಿನ ರೊಚ್ಚು ಅಲ್ಲದೆ ಯಾವುದೇ ಬಗೆಯ ಕಸ ಕಡ್ಡಿಯನ್ನು ಒಳಗೊಳ್ಳುತ್ತದೆ;

(58) "ನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳು;

(59) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(60) "ಅನುಸೂಚಿತ ಜಾತಿಗಳು" ಎಂದರೆ, ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಜಾತಿಗಳು, ಜನಾಂಗಗಳು, ಬುಡಕಟ್ಟುಗಳು ಅಥವಾ ಜಾತಿ, ಜನಾಂಗ ಅಥವಾ ಬುಡಕಟ್ಟುಗಳೊಳಗಿನ ಭಾಗಗಳು ಅಥವಾ ಗುಂಪುಗಳು;

(61) "ಅನುಸೂಚಿತ ಬುಡಕಟ್ಟುಗಳು" ಎಂದರೆ, ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಆ ಜಾತಿಗಳು, ಕುಲಗಳು ಅಥವಾ ಬುಡಕಟ್ಟುಗಳು ಅಥವಾ ಬುಡಕಟ್ಟು ಸಮುದಾಯದ ಅಥವಾ ಬುಡಕಟ್ಟುಗಳ ಒಳ ಪಂಗಡಗಳು ಅಥವಾ ಕುಲಗಳೊಳಗಿನ ಬುಡಕಟ್ಟು ಸಮುದಾಯಗಳು ಅಥವಾ ಬುಡಕಟ್ಟುಗಳು;

(62) "ಪರಿಶೀಲನಾ ಶುಲ್ಕ" ಎಂದರೆ, ಕಟ್ಟಡ ನಿರ್ಮಾಣದ ಅನುಮತಿಗಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸುವುದಕ್ಕಾಗಿ ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಸಂಗ್ರಹಿಸಿದ ಶುಲ್ಕ;

(63) "ಕಾರ್ಯದರ್ಶಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನೇಮಿಸಲಾದ ವಾರ್ಡ್ ಸಮಿತಿಯ ಕಾರ್ಯದರ್ಶಿ;

(64) "ವಿಭಾಗೀಯ ಸಮಿತಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿಭಾಗೀಯ ಸಮಿತಿ;

(65) "ಸಾಲ ತೀರಿಕೆ ನಿಧಿ" ಎಂದರೆ, ಅನುಕ್ರಮವಾಗಿ ಋಣ ಮರು ಸಂದಾಯಕ್ಕಾಗಿ ಅಥವಾ ನಿರುಪಯುಕ್ತ ಸ್ವತ್ತಿನ ಬದಲಾವಣೆಗಾಗಿ ನಿಯತಕಾಲಿಕವಾಗಿ ಹಣವನ್ನು ಮೀಸಲಿರಿಸುವ ಮೂಲಕ ರಚಿಸಿದ ಒಂದು ನಿಧಿ;

(66) "ಘನ ತ್ಯಾಜ್ಯ ನಿರ್ವಹಣೆ" ಎಂದರೆ, ಪೌರ ಘನ ತ್ಯಾಜ್ಯದ ಸಂಗ್ರಹಣೆ, ಬೇರ್ಪಡಿಸುವಿಕೆ, ಶೇಖರಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇ ಎಂದರ್ಥ ಮತ್ತು ಇವುಗಳನ್ನು ಒಳಗೊಳ್ಳುತ್ತದೆ;

(67) ''ಸ್ಥಾಯಿ ಸಮಿತಿ'' ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಸ್ಥಾಯಿ ಸಮಿತಿ;

(68) "ರಾಜ್ಯ ಚುನಾವಣಾ ಆಯೋಗ" ಎಂದರೆ, ಭಾರತ ಸಂವಿಧಾನದ 243-ಕೆ ಅನುಚ್ಛೇದದಲ್ಲಿ ಉಲ್ಲೇಖಿಸಿದ ರಾಜ್ಯ ಚುನಾವಣಾ ಆಯೋಗ;

(69) "ರಾಜ್ಯ ಹಣಕಾಸು ಆಯೋಗ" ಎಂದರೆ, ಭಾರತ ಸಂವಿಧಾನದ ಭಾಗ IXಎ ಅಡಿಯಲ್ಲಿ ರಚಿಸಲಾದ ಹಣಕಾಸು ಆಯೋಗ;

(70) "ಬೀದಿ" ಎಂದರೆ, ಸಾರ್ವಜನಿಕ ಬೀದಿ ಅಥವಾ ಖಾಸಗಿ ಬೀದಿ ಹಾಗೂ ಸಾರ್ವಜನಿಕರು ಹಾದಿ ಅಥವಾ ಪ್ರವೇಶಕ್ಕಾಗಿ ಹಕ್ಕನ್ನು ಹೊಂದಿರುವ ಅಥವಾ ಇಪ್ಪತ್ತು ವರ್ಷಗಳ ಅವಧಿಯವರೆಗೆ ಅಡೆತಡೆಯಿಲ್ಲದೆ ಹಾದುಹೋಗುತ್ತಿರುವ ಮತ್ತು ಪ್ರವೇಶ ಹೊಂದಿದ ಯಾವುದೇ ಹೆದ್ದಾರಿ ಮತ್ತು ಯಾವುದೇ ಕಿರುದಾರಿ, ಸೇತುವೆ, ರಸ್ತೆ, ಪಥ, ಕಾಲು ಹಾದಿ, ಒಳದಾರಿ ಅಥವಾ ಚಾಲನಾ ಪಥ ಅಥವಾ ಮಾರ್ಗ ಇವುಗಳನ್ನು ಒಳಗೊಳ್ಳುತ್ತದೆ ಹಾಗೂ ಯಾವುದೇ ಬೀದಿಯಲ್ಲಿನ ಕಾಲುದಾರಿ ಮತ್ತು ಸರಕು ಸಾಗಣೆ ದಾರಿಗಳೆರಡನ್ನೂ ಈ ಸದರಿ ಪರಿಭಾಷೆಯಲ್ಲಿ ಒಳಗೊಳ್ಳುತ್ತದೆ;

(71) "ಬೀದಿಯ ಪಂಕ್ತೀಕರಣ" ಎಂದರೆ, ಬೀದಿಯಲ್ಲಿ ಒಳಗೊಂಡಿರುವ ಮತ್ತು ಅದರ ಭಾಗವಾಗಿರುವ ಭೂಮಿಯನ್ನು ಪಕ್ಕದ ಭೂಮಿಯಿಂದ ವಿಭಾಗಿಸುವ ರೇಖೆ;

(72) "ತೆರಿಗೆ" ಎಂಬುದು ಈ ಅಧಿನಿಯಿಮದ ಮೇರೆಗೆ ವಿಧಿಸಬಹುದಾದ ಸುಂಕ, ಬಾಡಿಗೆ, ಉಪಕರ, ಫೀಜು ಅಥವಾ ನಗರ ಪಾಲಿಕೆಯಿಂದ ಭರಿಸಿದ ಇತರೆ ವೆಚ್ಚಗಳನ್ನು ಒಳಗೊಳ್ಳುತ್ತದೆ;

(73) "ಟಿಕೆಟ್ ಆಧಾರಿತ ಮನರಂಜನೆ" ಎಂದರೆ, ಟಿಕೆಟ್ ಆಧಾರಿತ ಮನರಂಜನೆಯ ಸ್ಥಳಕ್ಕೆ ಪ್ರವೇಶಿಸಲು ಟಿಕೆಟ್ ಅನ್ನು ಖರೀದಿಸುವ ಅಗತ್ಯವಿರುವ ಯಾವುದೇ ಮನರಂಜನಾ ಕಾರ್ಯಕ್ರಮವನ್ನು ಒಳಗೊಳ್ಳುತ್ತದೆ;

(74) "ಉದ್ಯಮಗಳ ಕೊಳಚೆ ನೀರು" ಎಂದರೆ, ಉದ್ಯಮದ ಆವರಣದಲ್ಲಿ ಯಾವುದೇ ಉದ್ಯಮ ಅಥವಾ ಕೈಗಾರಿಕೆ ನಡೆಯುತ್ತಿರುವಾಗ ಸಂಪೂರ್ಣವಾಗಿ ಅಥವಾ ಭಾಗಶಃ ಉತ್ಪತ್ತಿಯಾದ, ತೇಲಾಡುತ್ತಿರು ವಸ್ತುವಿನ ಕಣಗಳಿಂದ ಕೂಡಿರುವ ಅಥವಾ ಕೂಡಿರದ ಯಾವುದೇ ದ್ರವ ಮತ್ತು ಯಾವುದೇ ಉದ್ಯಮದ ಆವರಣಕ್ಕೆ ಸಂಬಂಧಪಟ್ಟಂತೆ, ಆ ಆವರಣದಲ್ಲಿ ಯಾವುದೇ ಉದ್ಯಮ ಅಥವಾ ಕೈಗಾರಿಕೆ ನಡೆಯುತ್ತಿರುವಾಗ ಹಾಗೆ ಉತ್ಪತ್ತಿಯಾದ ಮೇಲೆ ಹೇಳಿದಂಥ ಯಾವುದೇ ದ್ರವ. ಆದರೆ ಅದರಲ್ಲಿ ಊರಿನ ರೊಚ್ಚು ಒಳಗೊಳ್ಳುವುದಿಲ್ಲ;

(75) "ಉದ್ಯಮದ ಆವರಣ" ಎಂದರೆ, ಯಾವುದೇ ಉದ್ಯಮವನ್ನು ಅಥವಾ ಕೈಗಾರಿಕೆಯನ್ನು ನಡೆಸುವುದಕ್ಕಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ಆವರಣ;

(76) "ನ್ಯಾಯಾಧಿಕರಣ" ಎಂದರೆ, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ;

(77) "ಖಾಲಿ ಭೂಮಿ" ಎಂದರೆ, ಕಟ್ಟಡವನ್ನು ಕಟ್ಟಿರದ ಮತ್ತು ಕಟ್ಟಡಕ್ಕೆ ಸೇರಿರುವ ಅಥವಾ ಹೊಂದಿಕೊಂಡಿರುವ ಭೂಮಿಯನ್ನು ಒಳಗೊಳ್ಳದಿರುವ ಭೂಮಿ ;

(78) "ವಾರ್ಡ್ ಸಮಿತಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ವಾರ್ಡ್ ಸಮಿತಿ;

(79) "ವಾರ್ಡ್ ಅಭಿವೃದ್ಧಿ ಯೋಜನೆ" ಎಂದರೆ, ನಗರ ಪಾಲಿಕೆಯು ಅದಕ್ಕೆ ಆಯವ್ಯಯ ಹಂಚಿಕೆಗಾಗಿ ವಾರ್ಡ್ ಸಮಿತಿಯು ಸಿದ್ಧಪಡಿಸಿದ ಅಭಿವೃದ್ಧಿ ಯೋಜನೆ;

(80) "ವಾರ್ಡ್ ಸಭಾ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಉಲ್ಲೇಖಿಸಲಾದ ವಾರ್ಡ್ ಸಭಾ; ಮತ್ತು

(81) "ನಗರ ಪಾಲಿಕೆಯ ವಲಯಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ನಗರ ಪಾಲಿಕೆಯೊಳಗಿನ ಅಂಥ ಪ್ರದೇಶಗಳು.

ಅಧ್ಯಾಯ-II
ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಾಗರಿಕ ಪ್ರಾಧಿಕಾರಗಳ ಸ್ಥಾಪನೆ

3. ಗ್ರೇಟರ್ ಬೆಂಗಳೂರು ಪ್ರದೇಶದ ಘೋಷಣೆ.- ಈ ಅಧಿನಿಯಮವು ಜಾರಿಯಾದ ನಂತರ ಆದಷ್ಟು ಬೇಗನೆ, ಸರ್ಕಾರವು ಅಧಿಸೂಚನೆಯ ಮೂಲಕ ಬೆಂಗಳೂರು ನಗರದ ಬೃಹತ್ ನಗರ ಪ್ರದೇಶವನ್ನು ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಘೋಷಿಸತಕ್ಕದ್ದು:

ಪರಂತು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಗ್ರೇಟರ್ ಬೆಂಗಳೂರು ಪ್ರದೇಶದ ಭೂ ಪ್ರದೇಶದ ಮಿತಿಗಳನ್ನು ಮಾರ್ಪಾಟು ಮಾಡಬಹುದು.

4. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳು.- ಈ ಕೆಳಕಂಡ ಬೃಹತ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳು ಈ ಅಧಿನಿಯಮದಡಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು,-

(ಎ) ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(ಬಿ) ನಗರ ಪಾಲಿಕೆಗಳು; ಮತ್ತು

(ಸಿ) ವಾರ್ಡ್ ಸಮಿತಿಗಳು.

5. ನಗರ ಪಾಲಿಕೆಗಳ ಸ್ಥಾಪನೆ.- (1) ಯಾವುದೇ ಪ್ರದೇಶದ ಜನಸಂಖ್ಯೆ, ಅಲ್ಲಿನ ಜನಸಂಖ್ಯೆಯ ಸಾಂದ್ರತೆ, ಅಂಥ ಪ್ರದೇಶದಿಂದ ಉತ್ಪತ್ತಿಯಾಗುವ ಆದಾಯ, ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು, ಅಂಥ ಪ್ರದೇಶದಲ್ಲಿನ ಆರ್ಥಿಕ ಪ್ರಾಮುಖ್ಯತೆ, ಅಂಥ ಪ್ರದೇಶದಲ್ಲಿ ಲಭ್ಯವಿರುವ ಮೂಲಸೌಕರ್ಯ ಉಪಬಂಧಗಳು ಹಾಗೂ ಅಂಥ ಇತರ ಅಂಶಗಳನ್ನು ಪರಿಗಣಿಸಿ ರಾಜ್ಯಪಾಲರು, ಗ್ರೇಟರ್

ಬೆಂಗಳೂರು ಪ್ರದೇಶದ ಪರಿಣಾಮಕಾರಿ ಪೌರ ಆಡಳಿತಕ್ಕಾಗಿ ಅಗತ್ಯವೆಂದು ಭಾವಿಸುವಂಥ ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸತಕ್ಕದ್ದು:

ಪರಂತು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಒಟ್ಟು ನಗರ ಪಾಲಿಕೆಗಳ ಸಂಖ್ಯೆಯು ಏಳನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ಅಂಥ ಯಾವುದೇ ಪ್ರದೇಶವನ್ನು,-

(ಎ) ಅಂಥ ಪ್ರದೇಶವು ಹತ್ತು ಲಕ್ಷಗಳಿಗಿಂತ ಕಡಿಮೆಯಿಲ್ಲದ ಜನಸಂಖ್ಯೆಯನ್ನು ಒಳಗೊಂಡಿದ್ದ ಹೊರತು;

(ಬಿ) ಅಂಥ ಪ್ರದೇಶದಲ್ಲಿನ ಜನಸಾಂದ್ರತೆಯು, ಒಂದು ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಐದು ಸಾವಿರ ನಿವಾಸಿಗಳಿಗಿಂತ ಕಡಿಮೆ ಇರದ ಹೊರತು;

(ಸಿ) ಕೊನೆಯ ಹಿಂದಿನ ಜನಗಣತಿಯ ವರ್ಷದಲ್ಲಿ ಸ್ಥಳೀಯ ಆಡಳಿತಕ್ಕೆ ಅಂಥ ಪ್ರದೇಶದಿಂದ ಉತ್ಪತ್ತಿಯಾದ ಆದಾಯವು, ವಾರ್ಷಿಕ ಮುನ್ನೂರು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರದ ಹೊರತು;

(ಡಿ) ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಉದ್ಯೋಗಿಗಳ ಶೇಕಡಾ ಪ್ರಮಾಣವು ಒಟ್ಟು ಉದ್ಯೋಗಿಗಳಲ್ಲಿ ಶೇಕಡ ಐವತ್ತಕ್ಕಿಂತ ಕಡಿಮೆಯಾಗಿರದ ಹೊರತು; ಮತ್ತು

(ಇ) ಸರ್ಕಾರವು ಪರಿಗಣನೆಗಾಗಿ ಅಗತ್ಯವೆಂದು ಭಾವಿಸಬಹುದಾದಂಥ ಇತರ ಅಂಶಗಳು;

- ಅದನ್ನು ನಗರ ಪಾಲಿಕೆಯೆಂಬುದಾಗಿ ನಿರ್ದಿಷ್ಟಪಡಿಸತಕ್ಕದ್ದಲ್ಲ:

(2) ಅದರ ಕರಡನ್ನು,-

(ಎ) ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, ಅದರಿಂದ ಬಾದಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಹೊರತು; ಮತ್ತು

(ಬಿ) ಅದನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಂಥ ಅಧಿಸೂಚನೆಯಿಂದ ಬಾಧಿತವಾದ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸಿದ ಹೊರತು,

- ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ;

(3) ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಮೊದಲು (2)ನೇ ಉಪ ಪ್ರಕರಣದ ಅಡಿಯಲ್ಲಿ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳು ಮತ್ತು ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

6. ನಗರ ಪಾಲಿಕೆಗಳ ಗಡಿಗಳನ್ನು ಬದಲಿಸುವ ಅಧಿಕಾರ.- ರಾಜ್ಯಪಾಲರು ಯಾವುದೇ ಪ್ರದೇಶದ ಜನಸಂಖ್ಯೆ, ಅಲ್ಲಿನ ಜನಸಾಂದ್ರತೆ, ಅಂಥ ಪ್ರದೇಶದಿಂದ ಉತ್ಪತ್ತಿಯಾಗುವ ಆದಾಯ, ಅಂಥ ಪ್ರದೇಶದಲ್ಲಿನ ಕೃಷಿಯೇತರ ಚಟುವಟಿಕೆಗಳಲ್ಲಿನ ಶೇಕಡವಾರು ಉದ್ಯೋಗ, ಅಂಥ ಪ್ರದೇಶದ ಆರ್ಥಿಕ ಪ್ರಾಮುಖ್ಯತೆ, ಅಂಥ ಪ್ರದೇಶದಲ್ಲಿ ಲಭ್ಯವಿರುವ ಮೂಲಸೌಕರ್ಯ ಉಪಬಂಧಗಳು ಮತ್ತು ಅಂಥ ಇತರ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಅಧಿಸೂಚನೆಯ ಮೂಲಕ,-

(ಎ) ಅದರಲ್ಲಿ ಒಳಗೊಳ್ಳುವ ಮತ್ತು ಅಧಿಸೂಚನೆಯಲ್ಲಿ ಪರಿಭಾಷಿಸಿದ ಪೌರ ಪ್ರದೇಶ ಯಾವುದೇ ಸ್ಥಳೀಯ ಪ್ರದೇಶದಿಂದ ಹೊರತುಪಡಿಸುವುದು; ಅಥವಾ

(ಬಿ) ಅಂಥ ಪೌರ ಪ್ರದೇಶಕ್ಕೆ ಹೊಂದಿಕೊಂಡಿರುವ ಮತ್ತು ಅಧಿಸೂಚನೆಯಲ್ಲಿ ಪರಿಭಾಷಿಸಿದ ಯಾವುದೇ ಸ್ಥಳೀಯ ಪ್ರದೇಶವನ್ನು ಪೌರ ಪ್ರದೇಶದೊಳಗೆ ಸೇರಿಸುವುದು; ಅಥವಾ

(ಸಿ) ಯಾವುದೇ ಪೌರ ಪ್ರದೇಶವನ್ನು ಎರಡು ಅಥವಾ ಹೆಚ್ಚಿನ ಪೌರ ಪ್ರದೇಶಗಳನ್ನಾಗಿ ವಿಂಗಡಿಸುವುದು; ಅಥವಾ

(ಡಿ) ಒಂದು ಪೌರ ಪ್ರದೇಶವನ್ನು ರಚಿಸುವುದಕ್ಕಾಗಿ ಎರಡು ಅಥವಾ ಹೆಚ್ಚಿನ ಅದಕ್ಕೆ ಹೊಂದಿಕೊಂಡ ಪೌರ ಪ್ರದೇಶಗಳನ್ನು ಒಂದುಗೂಡಿಸುವುದು; ಅಥವಾ

(ಇ) ಎರಡು ಅಥವಾ ಹೆಚ್ಚಿನ ಹೊಂದಿಕೊಂಡ ಪೌರ ಪ್ರದೇಶಗಳ ಗಡಿಯನ್ನು ಪರಿಷ್ಕರಿಸುವುದು:

ಪರಂತು, ಸದರಿ ಅಧಿಸೂಚನೆಯನ್ನು ಹೊರಡಿಸಿರುವುದಕ್ಕೆ ಮೊದಲು, ಸರ್ಕಾರವು ಅದರ ಕರಡನ್ನು ಹೊರಡಿಸತಕ್ಕದ್ದು ಮತ್ತು ಯಾವುದೇ ಬಾದಿತ ವ್ಯಕ್ತಿಯು ತನ್ನ ಆಕ್ಷೇಪಣೆಯನ್ನು ಅದರ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತದಲ್ಲಿ ಸಲ್ಲಿಸಬಹುದು ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಮೊದಲು ಸರ್ಕಾರವು ಅಂಥ ಆಕ್ಷೇಪಣೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು:

ಮತ್ತು ಪರಂತು, ಸರ್ಕಾರವು, ಅಧಿಸೂಚನೆಯ ಪ್ರಕಟಣೆ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಂಥ ಯಾವುದೇ ಅಧಿಸೂಚನೆಯಿಂದ ಬಾಧಿತವಾದ ಸ್ಥಳೀಯ ಪ್ರಾಧಿಕಾರದ ಅಭಿಪ್ರಾಯಗಳನ್ನು ಆಹ್ವಾನಿಸತಕ್ಕದ್ದು ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಮೊದಲು ಸರ್ಕಾರವು ಸ್ಥಳೀಯ ಪ್ರಾಧಿಕಾರದ ಅಭಿಪ್ರಾಯಗಳನ್ನು ಪರಿಗಣಿಸತಕ್ಕದ್ದು.

7. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಪುನರ್‌ರಚನೆ.- (1) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ, ಆದಷ್ಟು ಬೇಗನೆ ರಾಜ್ಯಪಾಲರು, 3ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚನೆಯ ಮೂಲಕ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿನ ಸ್ಥಳೀಯ ಸಂಸ್ಥೆಗಳ ಸಂಪೂರ್ಣ ಪ್ರದೇಶಗಳನ್ನು ಅಥವಾ ಅದರ ಭಾಗವನ್ನು ಒಳಗೊಂಡಂತೆ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಿಯಮಿಸಬಹುದಾದಂಥ ಸಂಖ್ಯೆಯ ನೂತನ ನಗರ ಪಾಲಿಕೆಗಳನ್ನು ರಚಿಸಬಹುದು.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಹಾಗೆ ಹೊರಡಿಸಲಾದ ಅಧಿಸೂಚನೆಯ ಕರಡನ್ನು ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ತಮ್ಮ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸಲು ಅವಕಾಶವನ್ನು ನೀಡಿ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(3) ಉಪ-ಪ್ರಕರಣ (1)ರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಗೆ ಸಂಬಂಧಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಿದ ತರುವಾಯ, ಸರ್ಕಾರವು ಅದರಲ್ಲಿ ಒಳಗೊಳ್ಳುವ ಪ್ರದೇಶಗಳು ಮತ್ತು ಗಡಿಗಳನ್ನು ನಿರ್ದಿಷ್ಟಪಡಿಸಿ, ಅಂಥ ಸಂಖ್ಯೆಯ ನೂತನ ನಗರ ಪಾಲಿಕೆಗಳನ್ನು ರಚಿಸುವ ಅಂತಿಮ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

(4) ಉಪ-ಪ್ರಕರಣ (3)ರ ಅಡಿಯಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಬೃಹತ್ ಬೆಂಗಳೂರು ನಗರ ಪಾಲಿಕೆಯು ಮತ್ತು (1) ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿತವಾದ ಇತರ ಸ್ಥಳೀಯ ಪ್ರಾಧಿಕಾರಗಳು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅದರ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪುನರ್ ರಚಿಸಲಾದ ನಗರ ಪಾಲಿಕೆಗಳಿಗೆ ವಹಿಸುವವರೆಗೆ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು:

ಪರಂತು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಸ್ಥಳೀಯ ಪ್ರಾಧಿಕಾರದ ಭಾಗವು ಸೇರ್ಪಡೆಗೊಂಡ ಸಂದರ್ಭದಲ್ಲಿ, ಸದರಿ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯು ತದನುಸಾರವಾಗಿ ಅಧಿಸೂಚನೆಯ ದಿನಾಂಕದಿಂದ ಮಾರ್ಪಾಡುಗೊಳ್ಳತಕ್ಕದ್ದು ಮತ್ತು ಅದರ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಸರ್ಕಾರದಲ್ಲಿ ವಿಹಿತವಾದ ಭಾಗಕ್ಕೆ ಸಂವಾದಿಯಾಗಿ ಪ್ರಮಾಣಾನುಸಾರವಾಗಿ ಸರ್ಕಾರದಲ್ಲಿ ವಿಹಿತವಾಗತಕ್ಕದ್ದು. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

(5) ಸರ್ಕಾರವು, ಪುನರ್‌ರಚಿಸಲಾದ ನಗರ ಪಾಲಿಕೆಗಳಿಗೆ ವರ್ಗಾಯಿಸಲು ತಾತ್ಕಾಲಿಕ ಉಪಬಂಧಗಳನ್ನು ಮಾಡತಕ್ಕದ್ದು.

8. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳ ನಡುವಿನ ಸಂಬಂಧ.- (1) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಾಗರಿಕ ಪ್ರಾಧಿಕಾರಗಳು ಈ ಅಧಿನಿಯಮದ ಹಾಗೂ ಅದರಡಿ ರಚಿಸಿದ ನಿಯಮಗಳು ಮತ್ತು ವಿನಿಯಮಗಳ ಅಡಿಯಲ್ಲಿ ಅವುಗಳಲ್ಲಿ ನಿಹಿತವಾದ ಅಧಿಕಾರಗಳು ಮತ್ತು ಪ್ರಕಾರ್ಯಗಳ ಅನುಸಾರವಾಗಿ ಅವುಗಳ ನಿರ್ದಿಷ್ಟ ಕ್ಷೇತ್ರವ್ಯಾಪ್ತಿಗಳಲ್ಲಿ (domain) ತಮ್ಮ ಅಧಿಕಾರವನ್ನು ಚಲಾಯಿಸತಕ್ಕದ್ದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಸೃಜಿಸಲಾದ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳ ಅನುಸಾರ ಅಂಥ ಅಧಿಕಾರವನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಎಲ್ಲಾ ನಗರ ಪಾಲಿಕೆಗಳು ಮತ್ತು ಇತರ ಏಜೆನ್ಸಿಗಳ ನಡುವೆ ಸಮನ್ವಯದ ಪಾತ್ರವನ್ನು ನಿರ್ವಹಿಸತಕ್ಕದ್ದು.

ಅಧ್ಯಾಯ III
ಗ್ರೇಟರ್ ಬೆಂಗಳೂರು ಪ್ರಾಧಿಕಾರ

9. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆ.- (1) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ, ಆದಷ್ಟು ಬೇಗನೆ ಸದರಿ ದಿನಾಂಕದಿಂದ 120 ದಿನಗಳೊಳಗೆ ಸರ್ಕಾರವು, ಅಧಿಸೂಚನೆಯ ಮೂಲಕ, ಗ್ರೇಟರ್ ಬೆಂಗಳೂರು ಪ್ರದೇಶಕ್ಕಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ತನ್ನ ಹೆಸರಿನಲ್ಲಿ ಸ್ವತ್ತುಗಳನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಮುಖ್ಯಮಂತ್ರಿಗಳು - ಪದನಿಮಿತ್ತ ಅಧ್ಯಕ್ಷ;
(ಬಿ) ಬೆಂಗಳೂರು ಅಭಿವೃದ್ಧಿಯ ಮಂತ್ರಿ - ಉಪಾಧ್ಯಕ್ಷ;
(ಸಿ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರದ ಮಂತ್ರಿ – ಪದನಿಮಿತ್ತ ಸದಸ್ಯರು;
(ಡಿ) ನಗರಾಭಿವೃದ್ಧಿಯ ಪ್ರಭಾರದಲ್ಲಿರುವ ಮಂತ್ರಿ-ಪದನಿಮಿತ್ತ ಸದಸ್ಯ
(ಇ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ - ಪದನಿಮಿತ್ತ ಸದಸ್ಯ ಕಾರ್ಯದರ್ಶಿ;
(ಎಫ್) ಗ್ರೇಟರ್ ಬೆಂಗಳೂರು ಪ್ರದೇಶದೊಳಗಿನ ನಗರ ಪಾಲಿಕೆಗಳ ಮಹಾಪೌರರು – ಪದನಿಮಿತ್ತ ಸದಸ್ಯರು;
(ಜಿ) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ - ಪದನಿಮಿತ್ತ ಸದಸ್ಯ;
(ಹೆಚ್) ಅಧ್ಯಕ್ಷ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ – ಪದನಿಮಿತ್ತ ಸದಸ್ಯ;
(ಐ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಮಹಾನಗರ ಸಾರಿಗೆ ನಿಗಮ - ಪದನಿಮಿತ್ತ ಸದಸ್ಯ;
(ಜೆ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಮೆಟ್ರೋ ರೈಲು ನಿಗಮ – ಪದನಿಮಿತ್ತ ಸದಸ್ಯ;
(ಕೆ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ – ಪದನಿಮಿತ್ತ ಸದಸ್ಯ;
(ಎಲ್) ಕ್ಷೇತ್ರವ್ಯಾಪ್ತಿಯ ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು - ಪದನಿಮಿತ್ತ ಸದಸ್ಯ
(ಎಂ) ಪೊಲೀಸ್ ಆಯುಕ್ತ, ಬೆಂಗಳೂರು ನಗರ – ಪದನಿಮಿತ್ತ ಸದಸ್ಯ;
(ಎನ್) ಯಾವುದೇ ನಗರ ಪಾಲಿಕೆಗಳ ಭಾಗಶಃ ಅಥವಾ ಸಂಪೂರ್ಣ ಅಧಿಕಾರ ವ್ಯಾಪ್ತಿಯನ್ನುಳ್ಳ ಪೊಲೀಸ್ ಅಧೀಕ್ಷಕರು - ಪದನಿಮಿತ್ತ ಸದಸ್ಯ
(ಒ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ – ಪದನಿಮಿತ್ತ ಸದಸ್ಯ;
(ಪಿ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ – ಪದನಿಮಿತ್ತ ಸದಸ್ಯ;
(ಕ್ಯೂ) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ – ಪದನಿಮಿತ್ತ ಸದಸ್ಯ;

(**ಆರ್**) ಮುಖ್ಯ ಅಭಿಯಂತರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ - ಪದನಿಮಿತ್ತ ಸದಸ್ಯ; ಮತ್ತು

(ಎಸ್) ನಿರ್ದೇಶಕ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು– ಪದನಿಮಿತ್ತ ಸದಸ್ಯ.

(ಟಿ) ಆಯುಕ್ತರು, ನಗರ ಭೂಸಾರಿಗೆ ನಿರ್ದೇಶನಾಲಯ – ಪದನಿಮಿತ್ತ ಸದಸ್ಯ ;

(ಯು) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ – ಪದನಿಮಿತ್ತ ಸದಸ್ಯ.

(4) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರದೇಶದೊಳಗೆ ಅಥವಾ ಬಹುಮಟ್ಟಿಗೆ ಕ್ಷೇತ್ರವು ಬರುವ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದಲ್ಲಿ ವಾಸಿಸುವ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು ಮತ್ತು ರಾಜ್ಯ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರು ಸಹ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯರಾಗಿರತಕ್ಕದ್ದು.

(6) ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ, ಬೆಂಗಳೂರು ಸಂಚಾರಿ ಪೊಲೀಸ್, ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಉದ್ಯಮ ನಿಯಮಿತ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಹಕ ಮುಖ್ಯಸ್ಥರು ಹಾಗೂ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪೌರ ಪ್ರಕಾರ್ಯಗಳನ್ನು ನಿರ್ವಹಿಸುವ ಸರ್ಕಾರದ ಯಾವುದೇ ಏಜೆನ್ಸಿ ಅಥವಾ ಇಲಾಖೆಯ ಯಾರೇ ಅಧಿಕಾರಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಿಶೇಷ ಆಹ್ವಾನಿತರಾಗಿರತಕ್ಕದ್ದು ಮತ್ತು ಅದರ ಸಭೆಗಳಿಗೆ ಹಾಜರಾಗಬಹುದು ಆದರೆ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(7) ಉಪಪ್ರಕರಣ **(4), (5)** ಮತ್ತು **(5)**ರಲ್ಲಿ ನಿರ್ದಿಷ್ಟಪಡಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

10. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು.- **(1)** ರಾಜ್ಯ ಸರ್ಕಾರವು, ಸರ್ಕಾರದ ಪ್ರಧಾನ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರನ್ನಾಗಿ ನೇಮಿಸತಕ್ಕದ್ದು.

(2) ಮುಖ್ಯ ಆಯುಕ್ತರು, ಸರ್ಕಾರದ ಇಚ್ಛೆಗೊಳಪಟ್ಟು ಮೂರು ವರ್ಷಗಳ ಅವಧಿಗೆ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಸರ್ಕಾರವು **ಗ್ರೇಟರ್ ಬೆಂಗಳೂರು ಪ್ರಾಧಿಕಾರದ** ಪರಿಣಾಮಕಾರಿ ಆಡಳಿತಕ್ಕೆ ಅಗತ್ಯವಾಗಬಹುದಾದಂತೆ ವರ್ಗಾಯಿಸತಕ್ಕದ್ದು.

(3) ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಆತನಿಗೆ ನಿರ್ದಿಷ್ಟವಾಗಿ ಪ್ರದತ್ತಗೊಳಿಸಲಾದ ಅಥವಾ ವಿಧಿಸಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿದ ಸಂದರ್ಭಗಳಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅನುಮೋದನೆಗೆ ಮತ್ತು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ವಿಧಿಸಿದ ಇತರೆ ನಿರ್ಬಂಧಗಳು, ಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೇಲೆ ಯಾವುದೇ ಕರ್ತವ್ಯವನ್ನು ವಿಧಿಸುವ ಅಥವಾ ಯಾವುದೇ ಅಧಿಕಾರವನ್ನು ಪ್ರಧಾನ ಮಾಡುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಪಾಲಿಸುವ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರವು ಮುಖ್ಯ ಆಯುಕ್ತರಲ್ಲಿ ನಿಹಿತವಾಗಿರತಕ್ಕದ್ದು, ಅವರು,-

(ಎ) ನಿರ್ದಿಷ್ಟವಾಗಿ ವಿಧಿಸಲಾದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

(**ಬಿ**) ಯಾವುದೇ ತುರ್ತು ಸಂದರ್ಭದಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ಸರ್ಕಾರದ ಅನುಮೋದನೆ, ಮಂಜೂರಾತಿ ಅಥವಾ ಅಧಿಕೃತತೆ ಇಲ್ಲದೆ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗದು ಎಂಬ ಅಂಶ ಏನೇ ಇದ್ದರೂ, ಮುಖ್ಯ ಆಯುಕ್ತರಿಗೆ ತುರ್ತು ಪರಿಸ್ಥಿತಿ ಕಂಡುಬಂದಂತೆ ಅಥವಾ ಸಮರ್ಥಿತವಾಗಿದೆ ಅಥವಾ ಅಗತ್ಯವಾಗಿದೆ ಎಂದು ತಮಗೆ ಕಂಡುಬಂದರೆ ಸಾರ್ವಜನಿಕರ ಸೇವೆಗಾಗಿ ಅಥವಾ ಸುರಕ್ಷತೆಗಾಗಿ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ವತ್ತಿನ ಸಂರಕ್ಷಣೆಗಾಗಿ ಅಂಥ ತುರ್ತುಕ್ರಮವನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಮುಖ್ಯ ಆಯುಕ್ತರು ತಾವು ತೆಗೆದುಕೊಂಡ ಕ್ರಮದ ಬಗ್ಗೆ ಮತ್ತು ಅದನ್ನು ತೆಗೆದುಕೊಂಡಿದ್ದಕ್ಕೆ ಇದ್ದ ಕಾರಣಗಳ ಬಗ್ಗೆ ಮತ್ತು ಭರಿಸಿದ ಖರ್ಚಿನ ಮೊತ್ತ ಯಾವುದಾದರೂ ಇದ್ದರೆ ಆ ವೆಚ್ಚದ ಬಗ್ಗೆ ಅಥವಾ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪ್ರಸಕ್ತ ಆಯವ್ಯಯ ಮಂಜೂರಾತಿಯಲ್ಲಿ ಒಳಗೊಳ್ಳದಿರುವ ಮೊತ್ತವನ್ನು, ಅಂಥ ಕ್ರಮದ ಪರಿಣಾಮವಾಗಿ ಭರಿಸಬೇಕಾಗಿರುವ ಬಗ್ಗೆ ಕೂಡಲೇ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಪ್ರದತ್ತವಾದ ಅಥವಾ ನೀಡಲಾದ ಅಥವಾ ವಿಹಿತವಾದ ಯಾವುದೇ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಮುಖ್ಯ ಆಯುಕ್ತರು ಅಂಥ ಕಾನೂನಿನ ಉಪಬಂಧಗಳಿಗೊಳಪಟ್ಟು ಚಲಾಯಿಸತಕ್ಕದ್ದು, ನೆರವೇರಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

(6) ಮುಖ್ಯ ಆಯುಕ್ತರು, ಪ್ರಾಧಿಕಾರದ ಅನುಮೋದನೆಯೊಂದಿಗೆ ಲಿಖಿತ ಆದೇಶದ ಮೂಲಕ ಯಾವುದೇ ಅಂಥ ಅಧಿಕಾರ, ಕರ್ತವ್ಯ ಅಥವಾ ಪ್ರಕಾರ್ಯವನ್ನು ತನ್ನ ನಿಯಂತ್ರಣಕ್ಕೊಳಪಟ್ಟು ಚಲಾಯಿಸಲು, ನಿರ್ವಹಿಸಲು ಅಥವಾ ನೆರವೇರಿಸಲು ಪ್ರಾಧಿಕಾರದ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು. ಆದರೆ ಅದು ತನ್ನ ಪರಿಶೀಲನೆಗೆ ಮತ್ತು ತಾನು ನಿರ್ದಿಷ್ಟಪಡಿಸುವುದು ಸೂಕ್ತವೆಂದು ಭಾವಿಸುವಂಥ ಷರತ್ತುಗಳು ಮತ್ತು ಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟಿರತಕ್ಕದ್ದು.

11. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು.- (1) ಸರ್ಕಾರವು ಈ ಅಧಿನಿಯಮದಡಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ನಿರ್ವಹಿಸುವ ಮೂಲಸೌಕರ್ಯ, ನಗರ ಯೋಜನೆ, ಆಡಳಿತ, ಕಾನೂನು, ಹಣಕಾಸು, ಜಾಗೃತೆ (Vigilance) ಅಥವಾ ಇತರ ಪ್ರಕಾರ್ಯಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮುಖ್ಯ ಆಯುಕ್ತರಿಗೆ ನೆರವನ್ನು ನೀಡಲು ಹೆಚ್ಚುವರಿ ಅಧಿಕಾರಿಗಳನ್ನು ನೇಮಿಸತಕ್ಕದ್ದು. ಸರ್ಕಾರವು ಆದೇಶದ ಮೂಲಕ ಕಾಲಕಾಲಕ್ಕೆ ಅಂಥ ಅಧಿಕಾರಿಗಳ ಸಂಬಳ ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸತಕ್ಕದ್ದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ರಾಜ್ಯ ಸಿವಿಲ್ ಸೇವೆಗಳ ಮತ್ತು ಅಖಿಲ ಭಾರತ ಸೇವೆಗಳ ಅಧಿಕಾರಿಗಳ ಸೇವೆಗಳನ್ನು ಅದರ ವೃಂದಗಳನ್ನಾಧರಿಸಿ ವಿಶೇಷ ಅಥವಾ ಹೆಚ್ಚುವರಿ ಅಥವಾ ಜಂಟಿ ಅಥವಾ ಉಪ ಅಥವಾ ಸಹಾಯಕ ಆಯುಕ್ತರನ್ನಾಗಿ, ಸರ್ಕಾರವು ಅಗತ್ಯವೆಂದು ಭಾವಿಸುವಂತೆ ಮತ್ತು ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಸಂಖ್ಯೆಯ ಅಧಿಕಾರಿಗಳನ್ನು ಹೊಂದಿರತಕ್ಕದ್ದು.

(3) ಸರ್ಕಾರವು, ನಗರ ಯೋಜನೆಗೆ ಸಂಬಂಧಿಸಿರುವ ವಿಷಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ನೆರವು ನೀಡಲು ನಗರ ಮತ್ತು ಗ್ರಾಮಾಂತರ ಯೋಜನೆಯ ನಿರ್ದೇಶಕನ ದರ್ಜೆಯ ಮುಖ್ಯ ನಗರ ಯೋಜಕನನ್ನು ನಿಯೋಜಿಸತಕ್ಕದ್ದು ಮತ್ತು ಅವನು ಮುಖ್ಯ ಆಯುಕ್ತರಿಗೆ ಅಧೀನನಾಗಿರತಕ್ಕದ್ದು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆಯಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯನ್ನು ಹೊಂದಿರುವ ನಗರ ಮತ್ತು ಗ್ರಾಮಾಂತರ ಯೋಜನಾ

ಇಲಾಖೆಯಿಂದ ಅಂಥ ಅಧಿಕಾರಿಗಳನ್ನು ನಿಯೋಜಿಸತಕ್ಕದ್ದು. ಅವರು ಮುಖ್ಯ ಆಯುಕ್ತನಿಗೆ ಅಧೀನನಾಗಿರತಕ್ಕದ್ದು.

(4) ಸರ್ಕಾರವು, ಪೌರ ಘನತ್ಯಾಜ್ಯ ಮತ್ತು ಇತರ ತ್ಯಾಜ್ಯವನ್ನು ನಿರ್ವಹಿಸಲು ಏಜೆನ್ಸಿಗಳನ್ನು ನೇಮಿಸತಕ್ಕದ್ದು ಮತ್ತು ಈ ಸಂಬಂಧವಾಗಿ ನಗರ ಪಾಲಿಕೆಯಿಂದ ಪರಿಣತಿ ಹೊಂದಿರುವ ಅಧಿಕಾರಿಗಳನ್ನು ನೇಮಿಸತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರದೇಶದೊಳಗೆ ಬರುವ ನಗರ ಪಾಲಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿರುವ ಸಿಬ್ಬಂದಿಗಳನ್ನು ಹಾಗೂ ಅಧಿಕಾರಿಗಳನ್ನು ವೃಂದ ನಿಯಂತ್ರಣಾ ಪ್ರಾಧಿಕಾರವಾಗಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸಾಮಾನ್ಯ ವೃಂದದ ರೂಪದಲ್ಲಿ ವಿಲೀನಗೊಳಿಸತಕ್ಕದ್ದು.

(6) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 5 ವರ್ಷಗಳಿಗೂ ಹೆಚ್ಚು ಕಾಲ ಪ್ರತಿನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ/ ನಿರ್ವಹಿಸಿದ ಅಧಿಕಾರಿಗಳು/ ಸಿಬ್ಬಂದಿಗಳನ್ನು ಮೇಲಿನ (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳು/ ಸಿಬ್ಬಂದಿಗಳನ್ನು ಸಾಮಾನ್ಯ ವೃಂದದೊಂದಿಗೆ ವಿಲೀನಗೊಳಿಸತಕ್ಕದ್ದು.

(7) ಪ್ರಾಧಿಕಾರವು, ಜೇಷ್ಠತೆ, ಮುಂಬಡ್ತಿಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರಾಧಿಕಾರದ ಪ್ರದೇಶದೊಳಗೆ ಮುಖ್ಯ ಇಂಜಿನಿಯರ್ ವೃಂದ ಮಟ್ಟದವರೆಗಿನ ನಿಯೋಜನೆಗಳನ್ನು ನಿಭಾಯಿಸತಕ್ಕದ್ದು. ಅಂಥ ಅಧಿಕಾರಿಗಳ ವರ್ಗಾವಣೆಗಳು, ಸಂಬಳಗಳು, ಶಿಸ್ತು ಕ್ರಮ ಹಾಗೂ ಇತರ ಸೇವಾ ನಿಬಂಧನೆ ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(8) ಸರ್ಕಾರವು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಇಂಜಿನಿಯರಿಂಗ್, ಹಣಕಾಸು, ಜಾಗೃತಿ ಮತ್ತು ಕಾನೂನು ವಿಭಾಗಗಳ ಮುಖ್ಯಸ್ಥರಾಗಲು ಸೂಕ್ತರಾದಂಥ ಇಂಜಿನಿಯರ್-ಇನ್-ಚೀಫ್, ಮುಖ್ಯ ಹಣಕಾಸು ಅಧಿಕಾರಿ, ಮುಖ್ಯ ಜಾಗೃತ ಅಧಿಕಾರಿ ಮತ್ತು ಮುಖ್ಯ ಕಾನೂನು ಅಧಿಕಾರಿಯನ್ನು ನಿಯೋಜಿಸತಕ್ಕದ್ದು.

(9) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಅದು ಕಾಲಕಾಲಕ್ಕೆ, ಅಗತ್ಯವೆಂದು ಭಾವಿಸುವಂಥ ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಸೂಕ್ತವೆಂದು ಭಾವಿಸುವಂಥ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಪಟ್ಟಿಯನ್ನು ಸಿದ್ಧಪಡಿಸಿ, ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಅಂಥ ಅಧಿಕಾರಿಗಳ ಸಂಬಳ ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(10) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ಯಾವುದೇ ನಗರ ಪಾಲಿಕೆಯ ಅಧಿಕಾರಿಗಳು ಅಥವಾ ನೌಕರರ ವಿರುದ್ಧ ಅಥವಾ ಸರ್ಕಾರದ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ಯಾವುದೇ ನಗರ ಪಾಲಿಕೆಯ ಅಧಿಕಾರಿಯ ಅಥವಾ ನೌಕರನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರಕ್ಕದ್ದಲ್ಲ.

12. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಭೆಗಳು.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧ್ಯಕ್ಷರು ನಿಯಮಿಸಬಹುದಾದಂಥ ರೀತಿಯಲ್ಲಿ, ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಠ ಒಂದು ಬಾರಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಭೆಗಳನ್ನು ಕರೆಯತಕ್ಕದ್ದು.

(2) ಅಧ್ಯಕ್ಷರು, ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅನುಪಸ್ಥಿತಿಯಲ್ಲಿ, ಹಾಜರಿರುವ ಸದಸ್ಯರ ಪೈಕಿ ತಮ್ಮಲ್ಲಿಯೇ ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಸಭೆಗೆ ಅಗತ್ಯವಿರುವ ಕೋರಂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಒಟ್ಟು ಸದಸ್ಯರ ಮೂರನೇ ಒಂದರಷ್ಟಿರತಕ್ಕದ್ದು.

(4) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ

ಅಧ್ಯಕ್ಷರು ಅಥವಾ ಅವರ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸುವ ಯಾರೇ ವ್ಯಕ್ತಿಯು, ಎರಡನೇ ಅಥವಾ ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

(5) ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(6) ಸದಸ್ಯ ಕಾರ್ಯದರ್ಶಿಯು ಸಭೆಯ ಎಲ್ಲಾ ತೀರ್ಮಾನಗಳನ್ನು ಹಾಗೂ ಸಂಕ್ಷಿಪ್ತ ಟಿಪ್ಪಣಿಗಳನ್ನು ದಾಖಲಿಸತಕ್ಕದ್ದು ಮತ್ತು ಸಭೆ ನಡೆದ ಮೂರು ದಿನಗಳೊಳಗಾಗಿ ಅದನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡತಕ್ಕದ್ದು.

13. ಕಾರ್ಯಕಾರಿ ಸಮಿತಿಯ ರಚನೆ.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅದರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ನೆರವು ನೀಡಲು ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕದ್ದು. ಕಾರ್ಯಕಾರಿ ಸಮಿತಿಯು ಈ ಮುಂದಿನ ಸದ್ಯಸರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಬೆಂಗಳೂರು ಅಭಿವೃದ್ಧಿ ಮಂತ್ರಿ ಅಥವಾ ಮುಖ್ಯಮಂತ್ರಿಯವರು ನಾಮನಿರ್ದೇಶಿಸುವ ಯಾರೇ ಮಂತ್ರಿಯು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಕಾರ್ಯಕಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(ಸಿ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳ ಆಯುಕ್ತರು;

(ಡಿ) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

(ಇ) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ;

(ಎಫ್) ಆಯುಕ್ತರು, ನಗರ ಭೂಸಾರಿಗೆ ನಿರ್ದೇಶನಾಲಯ;

(ಜಿ) ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ;

(ಎಚ್) ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(ಐ) ಮುಖ್ಯ ಇಂಜಿನಿಯರ್ (Engineer in Chief), ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(ಜೆ) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ;

(ಕೆ) ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ನಿಯಮಿತ;

(ಎಲ್) ಆಯುಕ್ತರು, ಬೆಂಗಳೂರು ನಗರ ಪೊಲೀಸ್;

(ಎಂ) ಮಹಾ ನಿರ್ದೇಶಕರು, ಅಗ್ನಿ ಶಾಮಕ ಸೇವೆಗಳ ಇಲಾಖೆ;

(ಎನ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ; ಮತ್ತು

(ಒ) ಅಧ್ಯಕ್ಷರು ಅಂಥ ಕ್ಷೇತ್ರ ತಜ್ಞರು ಅಥವಾ ಇತರ ಅಧಿಕಾರಿಗಳನ್ನು ಅಂಥ ಸಮಿತಿ ಸಭೆಗಳಿಗೆ ಆಹ್ವಾನಿಸಬಹುದು, ಅವರು ವಿಶೇಷ ಆಹ್ವಾನಿತರಾಗಿ ಸಭೆಗಳಿಗೆ ಹಾಜರಾಗತಕ್ಕದ್ದು.

(2) ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ಅದರ ಸಭೆಗಳನ್ನು ಕರೆಯತಕ್ಕದ್ದು.

(3) ನಿಯಮಗಳಿಗೆ ಮತ್ತು ಪ್ರಾಧಿಕಾರದ ನಿರ್ದೇಶನಕ್ಕೊಳಪಟ್ಟು ಕಾರ್ಯಕಾರಿ ಸಮಿತಿಯು, ಪ್ರಾಧಿಕಾರದ ಯಾವುದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅದು ಮಾಡಬಹುದಾದ ಯಾವುದೇ ಕಾರ್ಯವನ್ನು ಮಾಡಬಹುದು.

(4) ಕಾರ್ಯಕಾರಿ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕಾರ್ಯಕಾರಿ ಸಮಿತಿಗೆ ಸಂಬಂಧಪಟ್ಟ ಎಲ್ಲಾ ಇತರ ವಿಷಯಗಳು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

14. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಕಾರ್ಯಗಳು.- ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(1) **ಆಡಳಿತಾತ್ಮಕ ಪ್ರಕಾರ್ಯಗಳು**: ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸರ್ಕಾರವು ನಿರ್ಧರಿಸಿದಂತೆ ಈ ಮುಂದಿನವುಗಳನ್ನು ಒಳಗೊಂಡಂತೆ ನಗರ ಪಾಲಿಕೆಗಳ ಆಡಳಿತಾತ್ಮಕ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು,-

(ಎ) ನಗರ ಪಾಲಿಕೆಗಳ ಆಯುಕ್ತರೊಂದಿಗೆ ಸಮಾಲೋಚನೆ ನಡೆಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ **ಪಾಲಿಕೆಗಳಿಗಾಗಿ** ಸಾಮಾನ್ಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸುವುದು, ಹಾಗೂ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸುವುದು.

(ಬಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಸಾಮಾನ್ಯ ವ್ಯಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ಎಲ್ಲಾ ಗ್ರೂಪ್ 'ಎ' (ಕಿರಿಯ ಶ್ರೇಣಿ) ಮತ್ತು ಗ್ರೂಪ್ 'ಬಿ' ಅಧಿಕಾರಿಗಳ ನೇಮಕಾತಿಯನ್ನು ಮಾಡತಕ್ಕದ್ದು ಹಾಗೂ ಸಂಬಂಧಪಟ್ಟ ನಗರ ಪಾಲಿಕೆಗಳ ಆಯುಕ್ತರು ಗ್ರೂಪ್ ಸಿ ಮತ್ತು ಗ್ರೂಪ್ ಡಿ ಹುದ್ದೆಗಳ ನೇಮಕಾತಿಯನ್ನು ಮಾಡತಕ್ಕದ್ದು.

(ಸಿ) ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರು ವ್ಯಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ನೇಮಕಗೊಂಡ ಎಲ್ಲಾ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಹಾಗೂ ಗೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ನಗರ ಪಾಲಿಕೆಗಳಲ್ಲಿ ಪ್ರತಿನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಗ್ರೂಪ್-ಎ (ಕಿರಿಯ ಶ್ರೇಣಿ) ದರ್ಜೆಯ ಮತ್ತು ಗ್ರೂಪ್-ಬಿ ದರ್ಜೆಯ ಅಧಿಕಾರಿ ಶಿಸ್ತು ಪ್ರಾಧಿಕಾರಿಯಾಗಿರತಕ್ಕದ್ದು.

(ಡಿ) ಸಾಮಾನ್ಯ ವ್ಯಂದ ಮತ್ತು ನೇಮಕಾತಿ ನಿಯಮಗಳಿಗನುಸಾರ ನೇಮಕಗೊಂಡ ಮತ್ತು ಎಲ್ಲಾ ಅಧಿಕಾರಿಗಳ ಸಂಬಂಧದಲ್ಲಿ ಅಥವಾ ನಗರ ಪಾಲಿಕೆಯಲ್ಲಿ ಪ್ರತಿನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಮತ್ತು ಗ್ರೂಪ್ ಸಿ ಹಾಗೂ ಗ್ರೂಪ್ ಡಿ ಸಿಬ್ಬಂದಿಗಳ ಸಂಬಂಧದಲ್ಲಿ ನಗರ ಪಾಲಿಕೆಯ ಆಯುಕ್ತರು ಶಿಸ್ತು ಪ್ರಾಧಿಕಾರಿಯಾಗಿರತಕ್ಕದ್ದು.

ಪರಂತು, ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಅಥವಾ ನಗರ ಪಾಲಿಕೆಯಲ್ಲಿ ಪ್ರತಿನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಬಂಧದಲ್ಲಿ ಸಂಬಂಧಪಟ್ಟ ಶಿಸ್ತು ಪ್ರಾಧಿಕಾರವು ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಈ ಮುಂದಿನ ದಂಡನೆಯನ್ನು ವಿಧಿಸತಕ್ಕದ್ದಲ್ಲ,-

(i) ಸೇವೆಯಿಂದ ವಜಾ ಮಾಡುವುದು; ಅಥವಾ
(ii) ಸೇವೆಯಿಂದ ತೆಗೆದು ಹಾಕುವುದು; ಅಥವಾ
(iii) ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವುದು; ಅಥವಾ
(iv) ಕಡಿಮೆ ವೇತನ ಶ್ರೇಣಿಗೆ, ದರ್ಜೆಗೆ, ಹುದ್ದೆಗೆ ಅಥವಾ ಸೇವೆಗೆ ಇಳಿಸುವುದು.

(2) ಯೋಜನಾ ಪ್ರಕಾರ್ಯಗಳು: ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ,-

(ಎ) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಬರುವ ಪ್ರದೇಶಗಳಿಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರಲ್ಲಿ ಪರಿಭಾಷಿಸಲಾದಂತೆ "ಯೋಜನಾ ಪ್ರಾಧಿಕಾರ" ವಾಗಿರತಕ್ಕದ್ದು;

(ಬಿ) ಗ್ರೇಟರ್ ಬೆಂಗಳೂರು ಪ್ರದೇಶದ ಭೌತಿಕ ಗಡಿಯೊಳಗೆ ಕೈಗಾರಿಕಾ ಲೇಔಟ್ ಸೇರಿದಂತೆ ಯಾವುದೇ ಲೇಔಟ್‌ನ ಅನುಮೋದನೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿ ಮಾಡತಕ್ಕದ್ದು ಮತ್ತು ಯುಕ್ತ ಸುಗಮ ಸಂಚಾರವನ್ನು ಖಾತರಿಪಡಿಸಲು ಅಂಥ ಕೈಗಾರಿಕಾ ಘಟಕಗಳ ಪ್ಲಾನ್ ಮಂಜೂರಾತಿಯನ್ನು ಸಂಬಂಧಪಟ್ಟ ನಗರ ಪಾಲಿಕೆಯು ಮಾಡತಕ್ಕದ್ದು:

ಪರಂತು (ಬಿ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಕೆಐಎಡಿಬಿ-ಯು ಸಂಬಂಧಪಟ್ಟ ಸ್ಥಳೀಯ ಯೋಜನಾ ಪ್ರಾಧಿಕಾರದ

ಪೂರ್ವಾನುಮೋದನೆಯೊಂದಿಗೆ ಮಾಸ್ಟರ್ ಪ್ಲಾನಿನ ಅನುಸಾರವಾಗಿ ಮಾತ್ರ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಬಡಾವಣೆ ಯೋಜನೆ ಮತ್ತು ಕಟ್ಟಡ ಯೋಜನೆಗಳನ್ನು ಮಂಜೂರು ಮಾಡಬಹುದು.

(ಸಿ) ರಾಜ್ಯ ಸರ್ಕಾರವು, ಭಾರತದ ಸಂವಿಧಾನದ ಅನುಚ್ಛೇದ 243 ಜೆಡ್ಇ ಅನುಸಾರ, ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿರುವ ಆದರೆ ಅದಕ್ಕೆ ಸೀಮಿತವಾಗಿರದ ಪ್ರದೇಶಗಳಿಗಾಗಿ ಬೆಂಗಳೂರು ಮಹಾನಗರ ಯೋಜನಾ ಸಮಿತಿಯನ್ನು (ಬಿಎಂಪಿಸಿ) ರಚಿಸತಕ್ಕದ್ದು. ಮುಖ್ಯಮಂತ್ರಿಯವರು ಬಿಎಂಪಿಸಿ ಯ ಅಧ್ಯಕ್ಷರಾಗಿರತಕ್ಕದ್ದು ಮತ್ತು ಅದು ನಿಯಮಿಸುವಂಥ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಅದರ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು. ಬೆಂಗಳೂರು ಮಹಾನಗರ ಯೋಜನಾ ಪ್ರಾಧಿಕಾರವು ಭಾರತ ಸಂವಿಧಾನದ 243 ಜೆಡ್ಇ ಅನುಚ್ಛೇದದಲ್ಲಿ ವಿವರಿಸಲಾದಂತೆ ಇಡೀ ಗ್ರೇಟರ್ ಬೆಂಗಳೂರು ಪ್ರದೇಶಕ್ಕಾಗಿ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು ; ಮತ್ತು

(ಡಿ) ಭೂಮಿ ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ ವಿನಿಯಮಗಳು ಗ್ರೇಟರ್ ಬೆಂಗಳೂರು ಪ್ರದೇಶದಾದ್ಯಂತ ಏಕರೂಪವಾಗಿ ಅನ್ವಯವಾಗತಕ್ಕದ್ದು.

(3) ಈ ಮುಂದಿನವುಗಳು ಸೇರಿದಂತೆ ಯೋಜನೆಗಳು, ಸ್ಕೀಮುಗಳು ಮತ್ತು ಪ್ರಮುಖ ಪ್ರಾಜೆಕ್ಟ್‌ಗಳ ಸಮನ್ವಯಗೊಳಿಸುವಿಕೆ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ:

(ಎ) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸಿದ್ಧಪಡಿಸಿದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಸ್ಕೀಮುಗಳನ್ನು ರೂಪಿಸುವುದು;

(ಬಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸಿದ್ಧಪಡಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾಡಲಾದ ಸ್ಕೀಮುಗಳು ಕಾರ್ಯಗತಗೊಳ್ಳುವುದನ್ನು ಸಮನ್ವಯಗೊಳಿಸುವುದು ಮತ್ತು ಅದಕ್ಕಾಗಿ ಬದ್ಧಕಾರಿಯಾಗುವ ನಿರ್ದೇಶನಗಳನ್ನು ಹೊರಡಿಸುವುದು;

(ಸಿ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಬರುವ ಪ್ರಮುಖ ಮೂಲಸೌಕರ್ಯ ಮತ್ತು ಇತರ ಯೋಜನೆಗಳನ್ನು ಸಮನ್ವಯಗೊಳಿಸುವುದು ಮತ್ತು ನಿರ್ವಹಿಸುವುದು;

(ಡಿ) ಗ್ರೇಟರ್ ಬೆಂಗಳೂರು ಪ್ರದೇಶದ ಅಭಿವೃದ್ಧಿಯನ್ನು ಸಮನ್ವಯಗೊಳಿಸಲು ಭೌಗೋಳಿಕ ಮಾಹಿತಿ ವ್ಯವಸ್ಥೆ, ಚತುರ (ಇಂಟಲಿಜೆಂಟ್) ಸಾರಿಗೆ ವ್ಯವಸ್ಥೆಗಳು ಮತ್ತು ಇತರ ಮಾಹಿತಿ ಮತ್ತು ತಂತ್ರಜ್ಞಾನ ಆಧರಿತ ಪರಿಹಾರಾತ್ಮಕ ಕ್ರಮಗಳ ಸ್ಥಾಪನೆ ಮತ್ತು ನಿರ್ವಹಣೆ.

(4) ಸಾರ್ವಜನಿಕ ಪ್ರಾಧಿಕಾರಗಳ ಸಮನ್ವಯ ಮತ್ತು ಮೇಲ್ವಿಚಾರಣೆ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮ, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗಳಂಥ ಸಾರ್ವಜನಿಕ ಪ್ರಾಧಿಕಾರಗಳ ಚಟುವಟಿಕೆಗಳನ್ನು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪೌರ ಚಟುವಟಿಕೆಗಳಿಗೆ ಸಂಬಂಧಪಟ್ಟ ಅಂಥ ಇತರ ನಿಕಾಯಗಳ ಚಟುವಟಿಕೆಗಳನ್ನು ಹಾಗೂ ಎಲ್ಲಾ ಪ್ರಕಾರ್ಯಗಳನ್ನು ನಾಗರಿಕ-ಸ್ನೇಹಿ ರೀತಿಯಲ್ಲಿ ಮುಖ್ಯವಾಹಿನಿಗೆ ತರುವುದು ಮತ್ತು ಅನುಷ್ಠಾನಗೊಳಿಸಲಾದಂಥ ವಿಧಾನವನ್ನು ಸಮನ್ವಯಗೊಳಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಹಾಗೂ ಅದಕ್ಕಾಗಿ ಬದ್ಧಕಾರಿಯಾಗುವ ನಿರ್ದೇಶನಗಳನ್ನು ಹೊರಡಿಸುವುದು ಮತ್ತು ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಈ ಅಧಿನಿಯಮದಲ್ಲಿ ಅವುಗಳಿಗೆ ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ

ಯಶಸ್ವಿ ಸಮನ್ವಯಕ್ಕಾಗಿ ಸಹಕರಿಸತಕ್ಕದ್ದು ಮತ್ತು ಅದರ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ನಿಗಮ ನಿಯಮಿತವು ಈ ಅಧಿನಿಯಮದಲ್ಲಿ ನಿರ್ದೇಶಿಸಲಾದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಮನ್ವಯ ಪಾತ್ರವನ್ನು ಜ್ಞಾಪನಾ ಪತ್ರದಲ್ಲಿ ಸೇರಿಸತಕ್ಕದ್ದು.

15. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪ್ರಮುಖ ಯೋಜನೆಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಗ್ರೇಟರ್ ಬೆಂಗಳೂರು ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿಗಾಗಿ ಮಹಾ ಯೋಜನೆಯನ್ನು (MASTER PLAN) ರೂಪಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು. ಪ್ರಧಾನ ರಸ್ತೆಗಳು, ಉಪ ಪ್ರಧಾನ ರಸ್ತೆಗಳು, ಸಂಚಾರ ಯೋಜನೆಗಳು, ವಾಹನ ಸುರಂಗ ಮಾರ್ಗಗಳು (Vehicular tunnels) ಮತ್ತು ರಾಜಕಾಲುವೆ ಇತ್ಯಾದಿ ಸೇರಿದಂತೆ ಎಲ್ಲಾ ರಸ್ತೆಗಳು, ಚರಂಡಿಗಳು ಮತ್ತು ಇತರ ಮೂಲ ಸೌಕರ್ಯವು ನಗರಪಾಲಿಕೆಗಳಿಗೆ ಸೇರಿದ್ದಾಗ್ಯೂ, ನಗರಪಾಲಿಕೆಗಳು ತಮ್ಮ ಸಂಬಂಧಪಟ್ಟ ಕ್ರಿಯಾಯೋಜನೆಗಳಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ತಯಾರಿಸಿದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಸೇರಿಸಿಕೊಳ್ಳತಕ್ಕದ್ದು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಅವುಗಳನ್ನು ಕಾರ್ಯಗತಗೊಳಿಸತಕ್ಕದ್ದು.

(2) ನಗರಪಾಲಿಕೆಗಳು ನಗರಪಾಲಿಕೆ ನಿಧಿಗಳಿಂದ ಕೈಗೊಳ್ಳಲಾಗುವ ಯಾವುದೇ ಪ್ರಮುಖ ಕಾಮಗಾರಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಹಿಸಿಕೊಡಬಹುದು.

(3) ರಾಜ್ಯ ಸರ್ಕಾರವು ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಹಾಗೂ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚಿನ ನಗರ ಪಾಲಿಕೆಗಳಲ್ಲಿ ವ್ಯಾಪಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಾರ್ಯವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಹಿಸಬಹುದು. ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅದಕ್ಕೆ ವಹಿಸಿರುವ ಕಾಮಗಾರಿಗಳನ್ನು ಸ್ವಂತ ತಾನೇ ಕಾರ್ಯಗತಗೊಳಿಸಬಹುದು ಅಥವಾ ಸದರಿ ಉದ್ದೇಶಗಳಿಗಾಗಿ ಸರ್ಕಾರವು ಸೃಜಿಸಿದ ವಿಶೇಷ ಉದ್ದೇಶದ ವಾಹನದ ಮುಖಾಂತರ ಕಾರ್ಯಗತಗೊಳಿಸಬಹುದು.

(4) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಈ ಅಧಿನಿಯಮದ ಮತ್ತು ಅದರಡಿ ರಚಿಸಿದ ನಿಯಮಗಳ ಉಪಬಂಧಗಳಡಿ ರಾಜ್ಯ ಸರ್ಕಾರವು ನಿರ್ಧರಿಸಿದ ಸಕ್ಷಮ ಪ್ರಾಧಿಕಾರದಿಂದ ಮತ್ತು ಟೆಂಡರ್ ಅನುಮೋದನಾ ಪ್ರಾಧಿಕಾರದಿಂದ ಯುಕ್ತ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಪ್ರಕಾರ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಪ್ರಮುಖ ಮೂಲಸೌಕರ್ಯ ಯೋಜನೆಗಳ ಯೋಜನೆಯನ್ನು ರೂಪಿಸುವ ಕಾರ್ಯವನ್ನು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಾಗರಿಕ ಪ್ರಕಾರ್ಯಗಳನ್ನು ಕೈಗೊಳ್ಳುತ್ತಿರುವಂಥ ಸಾರ್ವಜನಿಕ ಪ್ರಾಧಿಕಾರಗಳಿಗೆ ಅಥವಾ ಯಾವುದೇ ಇತರೆ ಏಜೆನ್ಸಿ ಅಥವಾ ಸಂಸ್ಥೆಗಳಿಗೆ ವಹಿಸಬಹುದು ಅಥವಾ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದಕ್ಕಾಗಿ ಅಗತ್ಯವಾಗಿರುವ ನೆರವನ್ನು ಈ ಏಜೆನ್ಸಿಗಳಿಂದ ಪಡೆಯಬಹುದು. ಏಜೆನ್ಸಿಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಹಾಯ ಮಾಡಲು ಬದ್ಧವಾಗಿರತಕ್ಕದ್ದು.

16. ಆರ್ಥಿಕ ಅಭಿವೃದ್ಧಿ ಏಜೆನ್ಸಿ.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಅದರ ರಚನೆಯ ಒಂದು ವರ್ಷದೊಳಗಾಗಿ, ಬೆಂಗಳೂರು ಅಭಿವೃದ್ಧಿ ಮಂತ್ರಿಯವರು ಅಧ್ಯಕ್ಷರಾಗಿರುವ ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸದಸ್ಯರಾಗಿರುವ ಆರ್ಥಿಕ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸತಕ್ಕದ್ದು.

(2) ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ರೂಪಿಸುವ ಮೂಲಕ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಉದ್ಯೋಗ ಸೃಷ್ಟಿಸುವ ಜವಾಬ್ದಾರಿಯನ್ನು ಆರ್ಥಿಕ ಅಭಿವೃದ್ಧಿ ಏಜೆನ್ಸಿಗೆ ವಹಿಸತಕ್ಕದ್ದು.

(3) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಆರ್ಥಿಕ ಅಭಿವೃದ್ಧಿ ಏಜೆನ್ಸಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಕಾಲಕಾಲಕ್ಕೆ ಪರಿಭಾಷಿಸಬಹುದು.

17. ಹವಾಮಾನ ಕ್ರಿಯಾ ಕೋಶ.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅದರ ರಚನೆಯ ಒಂದು ವರ್ಷದ ಒಳಗಾಗಿ ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ತಗ್ಗಿಸುವುದಕ್ಕಾಗಿ ಬೆಂಗಳೂರು ಹವಮಾನ ಕ್ರಿಯಾ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆ ಮತ್ತು ಇತರೆ ಯೋಜನೆಗಳನ್ನು ಹಾಗೂ ಕಾರ್ಯತಂತ್ರಗಳನ್ನು ರೂಪಿಸಲು ಮತ್ತು ಅನುಷ್ಠಾನಗೊಳಿಸಲು ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಹವಾಮಾನ ಕ್ರಿಯಾ ಕೋಶವನ್ನು ಸ್ಥಾಪಿಸತಕ್ಕದ್ದು.

(2) ಹವಾಮಾನ ಕ್ರಿಯಾ ಕೋಶವು ಬೆಂಗಳೂರು ಹವಾಮಾನ ಕ್ರಿಯಾ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆಯಲ್ಲಿ ನಿರೂಪಿಸಿರುವ ಕ್ರಮಗಳ ಸಕಾಲಿಕ ಅನುಷ್ಠಾನಕ್ಕೆ ಅನುಕೂಲವಾಗುವಂತೆ ನಿಯಮಿತ ಹಿತಾಸಕ್ತಿದಾರರ ಸಮನ್ವಯವನ್ನು ಖಚಿತಪಡಿಸಿಕೊಳ್ಳುವ ಉಪಕ್ರಮಗಳನ್ನು ಮುನ್ನಡೆಸತಕ್ಕದ್ದು.

(3) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿಶೇಷ ಆಯುಕ್ತ (ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ) ಹವಾಮಾನ ಕ್ರಿಯಾ ಕೋಶದ ಮುಖ್ಯಸ್ಥರಾಗಿರತಕ್ಕದ್ದು.

18. ವಲಯ ತಜ್ಞ ಸಮಿತಿಗಳು.- (1) ಸರ್ಕಾರವು ಈ ಮುಂದಿನ ವಲಯಗಳಲ್ಲಿ ಪ್ರಾಧಿಕಾರಕ್ಕೆ ಸಲಹೆ ನೀಡಲು ಅಂತಹ ಸ್ಥಳೀಯ ತಜ್ಞರನ್ನು ಒಳಗೊಂಡಿರುವ ವಲಯ ತಜ್ಞ ಸಮಿತಿಗಳನ್ನು ರಚಿಸತಕ್ಕದ್ದು:

(ಎ) ನಗರ, ಪ್ರಾದೇಶಿಕ ಮತ್ತು ಪಟ್ಟಣ ಯೋಜನೆ;

(ಬಿ) ಮೂಲಸೌಕರ್ಯ ಮತ್ತು ಸಾರಿಗೆ;

(ಸಿ) ಪರಿಸರ ಮತ್ತು ಹವಾಮಾನ ಬದಲಾವಣೆ;

(ಡಿ) ಸಾಮಾಜಿಕ ಒಳಗೊಳ್ಳುವಿಕೆ, ಶಿಕ್ಷಣ, ಆರೋಗ್ಯ ಮತ್ತು ಕಲ್ಯಾಣ;

(ಇ) ವಿಜ್ಞಾನ ಮತ್ತು ತಂತ್ರಜ್ಞಾನ; ಮತ್ತು

(ಎಫ್) ಮಾಹಿತಿ, ಶಿಕ್ಷಣ ಮತ್ತು ಸಂವಹನ.

(2) ಪ್ರತಿಯೊಂದು ವಲಯ ತಜ್ಞ ಸಮಿತಿಯು ಅಭಿವೃದ್ಧಿಯ ಕಾರ್ಯತಂತ್ರಗಳೊಂದಿಗೆ ಯೋಜನೆಗಳನ್ನು ಸಿದ್ಧಪಡಿಸಬಹುದು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳಾದ್ಯಂತ ಸಾಮಾನ್ಯ ಕಾರ್ಯತಂತ್ರಗಳನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಪ್ರಮುಖ ಕಾರ್ಯಕ್ರಮಗಳನ್ನು ಗುರುತಿಸತಕ್ಕದ್ದು.

(3) ಉಪ-ಪ್ರಕರಣ (1)ರಡಿಯಲ್ಲಿ ನೇಮಕಗೊಂಡ ಪ್ರತಿಯೊಂದು ಸಮಿತಿಯು ಸರ್ಕಾರದಿಂದ ಕಾಲಕಾಲಕ್ಕೆ ಅದಕ್ಕೆ ನೀಡಬಹುದಾದ ಯಾವುದೇ ಸೂಚನೆಗಳಿಗೆ ಅನುಸಾರವಾಗಿರತಕ್ಕದ್ದು ಮತ್ತು ಸರ್ಕಾರವು ಯಾವುದೇ ಸಮಯದಲ್ಲಿ ಹಾಗೆ ನೇಮಕಗೊಂಡ ಯಾವುದೇ ಸಮಿತಿಯ ರಚನೆಯನ್ನು ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(4) ವಲಯ ತಜ್ಞ ಸಮಿತಿಗಳ ಕಾರ್ಯಕಲಾಪ ನಿರ್ವಹಣೆ ವಿಧಾನ ಮತ್ತು ಸಮಿತಿಗಳಿಗೆ ಸಂಬಂಧಿಸಿದ ಎಲ್ಲಾ ಇತರ ವಿಷಯಗಳು ಪ್ರಾಧಿಕಾರವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

19. ಸಾರ್ವಜನಿಕ ಪ್ರಾಧಿಕಾರಗಳ ಮೇಲ್ವಿಚಾರಣೆ ಮತ್ತು ಅವುಗಳಿಗೆ ನಿರ್ದೇಶನಗಳನ್ನು ನೀಡುವ ಅಧಿಕಾರ.- (1) ಸರ್ಕಾರವು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪೌರ ಪ್ರಕಾರ್ಯಗಳನ್ನು ನಿರ್ವಹಿಸುವ ಅಂಥ ಸಾರ್ವಜನಿಕ ಪ್ರಾಧಿಕಾರಗಳು, ಏಜೆನ್ಸಿಗಳು ಮತ್ತು ಸರ್ಕಾರಿ ಇಲಾಖೆಗಳಿಂದ ನಿಯತಕಾಲಿಕವಾಗಿ ವರದಿಗಳನ್ನು ಕೋರಲು ಹಕ್ಕುಳ್ಳದ್ದಾಗಿರತಕ್ಕದ್ದು, ಮತ್ತು ಆ ಸಂಸ್ಥೆಗಳ ರಚನೆಗೆ ಕಾರಣವಾಗಿರುವ ಶಾಸನಗಳ ಉಪಬಂಧಗಳಲ್ಲಿರುವಂತೆ ಅವುಗಳ ಯಾವುದೇ ಪ್ರಕಾರ್ಯಗಳ ನಿರ್ವಹಣೆಯ ಬಗ್ಗೆ ಸೂಚನೆಗಳನ್ನು ನೀಡಲು ಹಾಗೂ ಶಿಫಾರಸುಗಳನ್ನು ಮಾಡಲು ಸಹ ಹಕ್ಕುಳ್ಳದ್ದಾಗಿರತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಅಂಥ ಪ್ರತಿಯೊಂದು ನಿರ್ದೇಶನವನ್ನು ಯಾವ ಸಂಸ್ಥೆಗೆ ನೀಡಲಾಗಿದೆಯೋ ಆ ಸಂಸ್ಥೆಯು ಪಾಲಿಸತಕ್ಕದ್ದು. ತಪ್ಪಿದ್ದಲ್ಲಿ, ಮೇಲೆ ನೀಡಲಾದ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲು ಮತ್ತು ಸಂಬಂಧಪಟ್ಟ ಸಂಸ್ಥೆಯಿಂದ ಅದಕ್ಕಾಗಿ ಭರಿಸಿದ ವೆಚ್ಚ

ಯಾವುದಾದರೂ ಇದ್ದರೆ, ಆ ವೆಚ್ಚವನ್ನು ವಸೂಲು ಮಾಡಲು ಸರ್ಕಾರವು ಸಕ್ಷಮವಾಗಿರತಕ್ಕದ್ದು.

(3) ಸಾರ್ವಜನಿಕ ಪ್ರಾಧಿಕಾರಗಳು ಮತ್ತು ಅವರಿಗೆ ಹೊರಡಿಸಿದ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಮೇಲೆ ಉಲ್ಲೇಖಿಸಲಾದ ಇತರ ಸಂಸ್ಥೆಗಳ ನಡುವೆ ಉದ್ಭವಿಸುವ ಯಾವುದೇ ವಿವಾದವನ್ನು ಸರ್ಕಾರವು ನಿರ್ಧರಿಸತಕ್ಕದ್ದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

20. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹಣಕಾಸು.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಈ ಅಧ್ಯಾಯದ ಮೇರೆಗೆ ವಿವಿಧ ಪ್ರಕಾರ್ಯಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಅನುದಾನಗಳನ್ನು ಪಡೆಯಬಹುದು.

(2) ಸರ್ಕಾರವು, ಪ್ರಾಧಿಕಾರದ ಸಾಂಸ್ಥಿಕ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತದ ಅನುದಾನವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ನೀಡಬಹುದು.

21. ಆಯವ್ಯಯ.- ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಪ್ರತಿ ವರ್ಷ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಮುಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಂದಾಜು ಸ್ವೀಕೃತಿಗಳು ಮತ್ತು ವಿತರಣೆಗಳನ್ನು ತೋರಿಸುವ ವಾರ್ಷಿಕ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

22. ವಾರ್ಷಿಕ ವರದಿ.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಪ್ರತಿ ವರ್ಷಾಂತ್ಯದ ತರುವಾಯ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕಕ್ಕೂ ಮೊದಲು, ಅಂಥ ವರ್ಷದಲ್ಲಿನ ತನ್ನ ಕಾರ್ಯಚಟುವಟಿಕೆಗಳ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಸರ್ಕಾರವು ಅಂಥ ವರದಿಯ ಪ್ರತಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ತನ್ನ ವಾರ್ಷಿಕ ವರದಿ ಮತ್ತು ಆಯವ್ಯಯದ ಪ್ರತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳಿಗೂ ಸಹ ಸಲ್ಲಿಸತಕ್ಕದ್ದು.

23. ಸಾಲ ಪಡೆಯಲು ಪ್ರಾಧಿಕಾರದ ಅಧಿಕಾರ.- ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಕಾಲಕಾಲಕ್ಕೆ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅದರ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ ಅಗತ್ಯವಿರುವ ಯಾವುದೇ ಮೊತ್ತವನ್ನು ಸಾಲ ಪಡೆಯಬಹುದು.

24. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.- (1) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಇಡತಕ್ಕದ್ದು.

(2) ಸರ್ಕಾರವು, ಅದರ ಅಧಿಕಾರಿಗಳ ಪೈಕಿ ಒಬ್ಬ ಅಧಿಕಾರಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಲೆಕ್ಕಪರಿಶೋಧಕನನ್ನಾಗಿ ನೇಮಿಸತಕ್ಕದ್ದು. ಅವರು ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಲೆಕ್ಕಪತ್ರಗಳ ಪರಿಶೋಧನೆ ನಡೆಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಲೆಕ್ಕಪತ್ರಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಸ್ವೀಕೃತಿ ಮತ್ತು ವೆಚ್ಚದ ಲೆಕ್ಕಗಳನ್ನು ನೋಡಲು ಅವರಿಗೆ ಅವಕಾಶವಿರತಕ್ಕದ್ದು ಮತ್ತು ಮುಖ್ಯ ಆಯುಕ್ತರು, ಲೆಕ್ಕಪರಿಶೋಧಕನು ಅಗತ್ಯಪಡಿಸಬಹುದಾದ ಯಾವುದೇ ಸ್ವೀಕೃತಿ ಅಥವಾ ವೆಚ್ಚಕ್ಕೆ ಸಂಬಂಧಿಸಿರುವ ಯಾವುದೇ ಮಾಹಿತಿಯನ್ನು ಅವರಿಗೆ ಒದಗಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ವೀಕೃತಿಗಳ ಮತ್ತು ವೆಚ್ಚದ ಎಲ್ಲಾ ವ್ಯವಹಾರಗಳ ಲೆಕ್ಕ ಪರಿಶೋಧನೆಯನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ತಾಂತ್ರಿಕ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು ಮತ್ತು ವಾರ್ಷಿಕ

ತಾಂತ್ರಿಕ ಪರಿಶೀಲನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳೊಂದಿಗೆ ಮಂಡಿಸುವುದಕ್ಕಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ ಇವರು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧಿಸಿರುವ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧಿತ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳೊಂದಿಗೆ ಮಂಡಿಸುವುದಕ್ಕಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಲೆಕ್ಕಪರಿಶೋಧಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವೆಚ್ಚದಲ್ಲಿ ಅಥವಾ ಅದಕ್ಕೆ ಬರಬೇಕಾದ ಹಣದ ವಸೂಲಿಯಲ್ಲಿ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಲೆಕ್ಕಪತ್ರಗಳಲ್ಲಿ ಅವರು ಯಾವುದೇ ಕಾಲದಲ್ಲಿ ಗಮನಿಸಬಹುದಾದ ಯಾವುದೇ ಸ್ಪಷ್ಟ ಅನೌಚಿತ್ಯ ಅಥವಾ ಅಕ್ರಮತೆಯನ್ನು ನಿಯಮಿಸಿದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ಅಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಅಂಥ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳಲ್ಲಿ ವಿಧಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(6) ಸರ್ಕಾರವು ನಿರ್ಧರಿಸಬಹುದಾದಷ್ಟು ಸಂಬಳ ಮತ್ತು ಭತ್ಯೆಗಳನ್ನು ಅವರಿಗೆ ಸಂದಾಯ ಮಾಡತಕ್ಕದ್ದು ಮತ್ತು ಅವರು ಸರ್ಕಾರದ ಯಾವ ಸೇವಾ ವಿಭಾಗಕ್ಕೆ ಸೇರಿದ್ದಾರೋ ಆ ವಿಭಾಗದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ವಿಶೇಷಾಧಿಕಾರಗಳಿಗೆ ಅವರು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಅವರು ಅಥವಾ ಅವರ ಪರವಾಗಿ ಅಂಥ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಸಂದಾಯ ಮಾಡಬಹುದಾದಂಥ ರಜೆ, ಭತ್ಯೆಗಳು, ನಿವೃತ್ತಿ ವೇತನ ಮತ್ತು ಭವಿಷ್ಯನಿಧಿ ಬಾಬಿಗೆ ಅಂಥ ವಂತಿಗೆಯನ್ನು ನಗರಪಾಲಿಕೆಯ ನಿಧಿಯಿಂದ ಕೊಡತಕ್ಕದ್ದು.

ಅಧ್ಯಾಯ IV
ನಗರ ಪಾಲಿಕೆ ಪ್ರಾಧಿಕಾರಗಳು

25. ನಗರ ಪಾಲಿಕೆಗಳ ಪ್ರಾಧಿಕಾರಗಳು.- ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ನಗರ ಪಾಲಿಕೆಯ ಪ್ರಾಧಿಕಾರಗಳು ಇರತಕ್ಕದ್ದು,-

(ಎ) ಮಹಾಪೌರ;
(ಬಿ) ಆಯುಕ್ತರು;
(ಸಿ) ಜಂಟಿ ಆಯುಕ್ತರುಗಳು;
(ಡಿ) ಸ್ಥಾಯಿ ಸಮಿತಿಗಳು; ಮತ್ತು
(ಇ) ವಾರ್ಡ್ ಸಮಿತಿಗಳು;

ಅಧ್ಯಾಯ V
ನಗರ ಪಾಲಿಕೆಯ ರಚನೆ

26. ನಗರ ಪಾಲಿಕೆಗಳ ಸ್ಥಾಪನೆ.- (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ 5ನೇ ಪ್ರಕರಣದಡಿಯಲ್ಲಿ ನಗರ ಪಾಲಿಕೆಗಳನ್ನು ಸ್ಥಾಪಿಸತಕ್ಕದ್ದು.

(2) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಉಪಬಂಧಿಸಿರುವುದನ್ನುಳಿದು, ಗ್ರೇಟರ್ ಬೆಂಗಳೂರು ಪ್ರದೇಶದಿಂದ ಯಾವುದೇ ಪ್ರದೇಶವನ್ನು ಹೊರತುಪಡಿಸಿದಾಗ,-

(i) ಅಂಥ ಪ್ರದೇಶದ ನಗರ ಪಾಲಿಕೆ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು; ಮತ್ತು
(ii) ಸರ್ಕಾರವು, ನಗರ ಪಾಲಿಕೆಯೊಂದಿಗೆ ಸಮಾಲೋಚಿಸಿದ ತರುವಾಯ, ನಗರ ಪಾಲಿಕೆ ನಿಧಿಯ ಮತ್ತು ನಗರ ಪಾಲಿಕೆಯ ಇತರ ಸ್ವತ್ತಿನ ಎಷ್ಟು ಭಾಗವು, ಅಂಥ ಸ್ಥಳೀಯ ಪ್ರದೇಶದ ನಿವಾಸಿಗಳ ಪ್ರಯೋಜನಕ್ಕಾಗಿ ಸರ್ಕಾರದಲ್ಲಿ

ನಿಹಿತಗೊಳ್ಳಬೇಕು ಮತ್ತು ನಗರ ಪಾಲಿಕೆಯ ಹೊಣೆಗಾರಿಕೆಯನ್ನು ನಗರ ಪಾಲಿಕೆ ಮತ್ತು ಸರ್ಕಾರದ ನಡುವೆ ಹೇಗೆ ವಿಭಜಿಸಬೇಕು ಎಂಬುದನ್ನು ನಿರ್ಧರಿಸತಕ್ಕದ್ದು.

(3) ಸ್ಥಳೀಯ ಪ್ರದೇಶವು ಗ್ರೇಟರ್ ಬೆಂಗಳೂರು ಪ್ರದೇಶವನ್ನು ಸೇರಿದಾಗ, ಸದರಿ ಸ್ಥಳೀಯ ಪ್ರದೇಶವು ಯಾವ ನಗರ ಪಾಲಿಕೆಯ ಭಾಗವಾಗಬೇಕೆಂಬುದನ್ನು ಸರ್ಕಾರವು ನಿರ್ಧರಿಸತಕ್ಕದ್ದು. ಆದಾಗ್ಯೂ, ಯಾವುದೇ ಪ್ರದೇಶವನ್ನು ಸೇರಿಸುವಾಗ ಅಥವಾ ತೆಗೆದುಹಾಕುವಾಗ ಸಾಧ್ಯವಾದಷ್ಟರಮಟ್ಟಿಗೆ ಒಂದು ವಿಧಾನಸಭಾ ಕ್ಷೇತ್ರವನ್ನು ಎರಡು ಅಥವಾ ಹೆಚ್ಚಿನ ನಗರಪಾಲಿಕೆಗಳಲ್ಲಿ ವಿಭಜಿಸತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳು ಮತ್ತು ಈ ಅಧಿನಿಯಮ ಅಥವಾ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ವಿಧಿಸಲಾದ ಎಲ್ಲಾ ತೆರಿಗೆಗಳು, ಹೊರಡಿಸಲಾದ ಎಲ್ಲಾ ಅಧಿಸೂಚನೆಗಳು, ಮಾಡಲಾದ ಎಲ್ಲಾ ನಿಯಮಗಳು, ಉಪ-ವಿಧಿಗಳು, ಆದೇಶಗಳು, ನೀಡಲಾದ ಎಲ್ಲಾ ನಿರ್ದೇಶನಗಳು ಅಥವಾ ಪ್ರದತ್ತವಾದ ಎಲ್ಲಾ ಅಧಿಕಾರಗಳು ಗ್ರೇಟರ್ ಬೆಂಗಳೂರು ಪ್ರದೇಶದೊಳಗೆ ಅಂಥ ಸ್ಥಳೀಯ ಪ್ರದೇಶವನ್ನು ಸೇರಿಸಿದ ದಿನಾಂಕದಿಂದ ಸದರಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

(4) ಪ್ರತಿಯೊಂದು ನಗರ ಪಾಲಿಕೆಯು ಶಾಶ್ವತ ಉತ್ತರಾಧಿಕಾರ ಮತು ಸಾಮಾನ್ಯ ಮೊಹರನ್ನು ಹೊಂದಿರುವ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟ ಆಸ್ತಿಯನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಧಿಕಾರ ಹೊಂದಿರುವ ಮೇಲೆ ಹೇಳಲಾದ ಹೆಸರಿನ ಒಂದು ನಿಗದಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಪ್ರತಿಯೊಂದು ನಗರ ಪಾಲಿಕೆಯು ಹೆಸರಿನೊಂದಿಗೆ ಬೆಂಗಳೂರು ಎಂಬ ಪೂರ್ವಪ್ರತ್ಯಯವನ್ನು ಸೇರಿಸತಕ್ಕದ್ದು.

ದೃಷ್ಟಾಂತ: "ಬೆಂಗಳೂರು ದಕ್ಷಿಣ ನಗರ ಪಾಲಿಕೆ", "ಬೆಂಗಳೂರು ಪೂರ್ವ ನಗರ ಪಾಲಿಕೆ" ಮತ್ತು ಹಾಗೆ ಮುಂದುವರೆಯಬೇಕು.

27. ಗಡಿ ಗುರುತು ಕಲ್ಲುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ.- ತನ್ನ ಅಧಿಕಾರಕ್ಕೆ ಒಳಪಟ್ಟಿರುವ ಸಂದರ್ಭಾನುಸಾರ, ನಗರದ ಪರಿಮಿತಿಗಳನ್ನು ಅಥವಾ ಸಂದರ್ಭಾನುಸಾರ ವ್ಯತ್ಯಾಸ ಮಾಡಿದ ಪರಿಮಿತಿಗಳನ್ನು ವಿವರಿಸಿ, ಕಂದಾಯ ಜಿಲ್ಲೆಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾಧಿಕಾರಿಯು ಅನುಮೋದಿಸತಕ್ಕಂತೆ ವಿವರಿಸಲಾದ ಮತ್ತು ಅಂಥ ಸ್ಥಾನದಲ್ಲಿ ಗಡಿ ಗುರುತು ಕಲ್ಲುಗಳನ್ನು ತನ್ನ ಸ್ವಂತ ಖರ್ಚಿನಲ್ಲಿ ನಿಲ್ಲಿಸುವಂತೆ ಅಥವಾ ನೆಲೆಗೊಳಿಸುವಂತೆ ಮಾಡುವುದು ಮತ್ತು ಆ ತರುವಾಯ ಅವುಗಳನ್ನು ತನ್ನ ಸ್ವಂತ ಖರ್ಚಿನಲ್ಲಿ ನಿರ್ವಹಿಸುವುದು ಪ್ರತಿಯೊಂದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

ಪರಂತು, ಈ ಬಗ್ಗೆ ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ, ಸರ್ಕಾರವು ಅದನ್ನು ತೀರ್ಮಾನಿಸತಕ್ಕದ್ದು ಮತ್ತು ಆ ತೀರ್ಮಾನವು ಅಂತಿಮವಾಗಿರತಕ್ಕದ್ದು.

28. ನಗರ ಪಾಲಿಕೆಗಳ ಕಾಲಾವಧಿ.- ಮುಂಚಿತವಾಗಿ ವಿಸರ್ಜಿಸದ ಹೊರತು, ನಗರ ಪಾಲಿಕೆಗಳು ಅವುಗಳ ಪ್ರಥಮ ಸಭೆಯ ದಿನಾಂಕದಿಂದ ಐದು ವರ್ಷಗಳ ಅವಧಿಯನ್ನು ಹೊಂದಿರತಕ್ಕದ್ದು.

29. ವಾರ್ಡುಗಳ ಪುನರ್‌ವಿಂಗಡಣೆ.- (1) ಪ್ರತಿ ನಗರ ಪಾಲಿಕೆ ಸದಸ್ಯರ ಚುನಾವಣೆ ಉದ್ದೇಶಗಳಿಗಾಗಿ ಕ್ಷೇತ್ರ ಪುನರ್‌ವಿಂಗಡಣೆ ಆಯೋಗದ ಶಿಫಾರಸಿನ ಮೇರೆಗೆ ಪ್ರತಿಯೊಂದು ನಗರ ಪಾಲಿಕೆಯನ್ನು ವಾರ್ಡುಗಳನ್ನಾಗಿ ಈ ಮುಂದಿನ ರೀತಿಯಲ್ಲಿ ವಿಂಗಡಿಸತಕ್ಕದ್ದು,-

(ಎ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಯೊಳಗಿನ ಪ್ರತಿಯೊಂದು ವಾರ್ಡ್‌ಗಳ ಜನಸಂಖ್ಯೆಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಒಂದೇ ಆಗಿರತಕ್ಕದ್ದು; ಮತ್ತು

(ಬಿ) ವಿಧಾನಸಭೆಯ ಸದಸ್ಯರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೆ ವಾರ್ಡ್‌ಗಳನ್ನು ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳು ಇತರ ಚುನಾವಣಾ ಕ್ಷೇತ್ರಗಳಿಗೆ ವ್ಯಾಪಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ, "ಜನಸಂಖ್ಯೆ" ಎಂದರೆ, ಹಿಂದಿನ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಪ್ರಕಟಿಸಿದ ನಗರದ ಜನಸಂಖ್ಯೆ.

(2) ಸರ್ಕಾರವು, ವಾರ್ಡ್‌ಗಳ ವಿಂಗಡಣೆ ವಿಧಾನದ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಯಮಿಸಬಹುದಾದಂಥ ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡ ಪುನರ್‌ವಿಂಗಡಣಾ ಆಯೋಗವನ್ನು ರಚಿಸತಕ್ಕದ್ದು:

(3) ಸರ್ಕಾರವು ಆದೇಶದ ಮೂಲಕ,-

(ಎ) ಚುನಾವಣೆಗಳ ಉದ್ದೇಶಕ್ಕಾಗಿ ಪ್ರತಿ ನಗರ ಪಾಲಿಕೆಯ ವಾರ್ಡುಗಳನ್ನು ವಿಭಾಗಿಸಲಾಗಿದೆಯೇ ಎನ್ನುವುದನ್ನು:

ಪರಂತು, ಪ್ರತಿಯೊಂದು ನಗರ ಪಾಲಿಕೆಯಲ್ಲಿ ವಾರ್ಡ್‌ಗಳ ಸಂಖ್ಯೆಯು ನೂರ ಐವತ್ತಕ್ಕಿಂತ ಹೆಚ್ಚಿರತಕ್ಕದ್ದಲ್ಲ;

(ಬಿ) ಪ್ರತಿಯೊಂದು ವಾರ್ಡಿನ ವ್ಯಾಪ್ತಿಯನ್ನು; ಮತ್ತು

(ಸಿ) ನಗರ ಪಾಲಿಕೆಯಲ್ಲಿ,;

(i) ಅನುಸೂಚಿತ ಜಾತಿಯವರಿಗೆ; ಮತ್ತು

(ii) ಅನುಸೂಚಿತ ಪಂಗಡದವರಿಗೆ,

- ಮೀಸಲಿರಿಸತಕ್ಕ ಸ್ಥಾನಗಳನ್ನು ಮತ್ತು ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸಲಾಗಿದೆ ಎಂಬುದನ್ನು;

(ಡಿ) ಪ್ರತಿ ನಗರ ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಹತ್ತಿರತ್ತಿರ ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದೆಂಬುದನ್ನು,

- ನಿರ್ಧರಿಸತಕ್ಕದ್ದು:

ಪರಂತು, ಈ ಉಪಪ್ರಕರಣದಡಿಯಲ್ಲಿ ಮೀಸಲಿರಿಸಿದ ಸ್ಥಾನಗಳಲ್ಲಿ, ಅಂಥ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಎಂಬತ್ತರಷ್ಟನ್ನು 'ಎ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಸ್ಥಾನಗಳ ಶೇಕಡಾ ಇಪ್ಪತ್ತರಷ್ಟನ್ನು 'ಬಿ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು:

ಮತ್ತು ಪರಂತು, 'ಎ' ಪ್ರವರ್ಗದಡಿಯಲ್ಲಿ ಬರುವ ಯಾರೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು ಕೂಡ 'ಬಿ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಂದ ಭರ್ತಿಮಾಡತಕ್ಕದ್ದು. ಹಾಗೆಯೇ ಇದು ವಿಪರ್ಯಯವಾಗತಕ್ಕದ್ದು:

ಮತ್ತೂ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, ಈ ಉಪಪ್ರಕರಣದಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಿರಿಸಿದ ಮತ್ತು ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಒಟ್ಟು ಸಂಖ್ಯೆಯ ಸ್ಥಾನಗಳು ಪಾಲಿಕೆಯಲ್ಲಿನ ಒಟ್ಟು ಸಂಖ್ಯೆ ಸ್ಥಾನಗಳ ಶೇಕಡ ಐವತ್ತರಷ್ಟನ್ನು ಮೀರತಕ್ಕದ್ದಲ್ಲದ ಹಾಗೆ ನಿರ್ಧರಿಸತಕ್ಕದ್ದು. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ನಗರ ಪಾಲಿಕೆಯಲ್ಲಿ ನೇರವಾಗಿ ಚುನಾಯಿತ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರಿದರೆ, ಒಟ್ಟು ಮೀಸಲಿರಿಸಿದ ಸ್ಥಾನಗಳು ಶೇಕಡಾ ಐವತ್ತರಷ್ಟನ್ನು ಮೀರದಂತೆ ಖಚಿತಪಡಿಸಿಕೊಳ್ಳಲು, ನಂತರ ಹಿಂದುಳಿದ ವರ್ಗಗಳ ಸ್ಥಾನಗಳನ್ನು ಪ್ರಮಾಣಾನುಸಾರವಾಗಿ ಕಡಿಮೆ ಮಾಡತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಸ್ಥಾನಗಳಲ್ಲಿ ಶೇಕಡಾ ಐವತ್ತರಷ್ಟನ್ನು ಮೀರುವಂತಿಲ್ಲ ಹಾಗೂ ನಗರ ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಮೀಸಲೇತರ (non-reserved) ಸೀಟುಗಳಲ್ಲಿ ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

ಪರಂತು, (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ ಮೀಸಲಿರಿಸಿದ ಸ್ಥಾನಗಳನ್ನು ನಗರ ಪಾಲಿಕೆಯ ಬೇರೆಬೇರೆ ವಾರ್ಡುಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) ನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆಯ ಉದ್ದೇಶಕ್ಕಾಗಿ ಹೊರತು ನಗರ ಪಾಲಿಕೆಯ ಸ್ಥಾಪನೆಯ ತರುವಾಯ ಮೀಸಲಾತಿಯ ಉದ್ದೇಶಕ್ಕಾಗಿ ವಾರ್ಡುಗಳ ಪುನರ್ವಿಂಗಡಣೆ ಅಥವಾ ವಾರ್ಡುಗಳ ಬದಲಾವಣೆಯನ್ನು ಮಾಡುವಂತಿಲ್ಲ ಹಾಗೂ ಅಂಥ ವಾರ್ಡುಗಳ ಪುನರ್ವಿಂಗಡಣೆ ಅಥವಾ ವಾರ್ಡುಗಳ ಬದಲಾವಣೆಯು ಅಸ್ತಿತ್ವದಲ್ಲಿರುವ ನಗರ ಪಾಲಿಕೆಗೆ ಯಾವುದೇ ರೀತಿಯಲ್ಲಿ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಟ್ಟಾರೆ ಮೂರನೇ ಎರಡರಷ್ಟು ಸಂಖ್ಯೆಯ ಕೌನ್ಸಿಲರುಗಳನ್ನು ಚುನಾಯಿಸಬೇಕಾಗಿರುವುದು ಅಗತ್ಯವಿರುವಾಗ ಚುನಾಯಿತರಾಗಿದ್ದಲ್ಲಿ ನಗರ ಪಾಲಿಕೆಯು ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ರಚನೆಯಾಗಿದೆ ಎಂದು ಭಾವಿಸತಕ್ಕದ್ದು.

30. ನಗರ ಪಾಲಿಕೆಯ ರಚನೆ.- ನಗರ ಪಾಲಿಕೆಯು,-

(ಎ) ಸರ್ಕಾರವು ನಿರ್ಧರಿಸಬಹುದಾದಂತೆ ಪ್ರತಿ ವಾರ್ಡನ್ನು ಪ್ರತಿನಿಧಿಸುವ ಅಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು,

(ಬಿ) ಸರ್ಕಾರವು, ಬೆಂಗಳೂರು ನಗರದ ನಿವಾಸಿಗಳ ಪೈಕಿಯಿಂದ, ನಗರಪಾಲಿಕೆಯ ಸದಸ್ಯರ ಶೇಕಡಾ ಹತ್ತರಷ್ಟನ್ನು ಮೀರದಂತೆ,-

(i) ಪೌರಾಡಳಿತ ಅಥವಾ ಆರೋಗ್ಯ, ನಗರ ಯೋಜನೆ ಅಥವಾ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ಅಥವಾ;

(ii) ಸಮಾಜ ಸೇವಾ ಕಾರ್ಯಕರ್ತರಾಗಿರುವಂಥ

- ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕ ಸದಸ್ಯರನ್ನು

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ನಗರ ಪಾಲಿಕೆಯ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕದ್ದಲ್ಲ.

(ಸಿ) ನಗರ ಪಾಲಿಕೆ ಪ್ರದೇಶದಲ್ಲಿ ಮತಕ್ಷೇತ್ರ ಹೊಂದಿರುವ ಲೋಕಸಭಾ ಸದಸ್ಯರು ಮತ್ತು ನಗರ ಪಾಲಿಕೆ ಪ್ರದೇಶದಲ್ಲಿ ಮತದಾರರಾಗಿ ನೋಂದಾಯಿತರಾದ ರಾಜ್ಯಸಭಾ ಸದಸ್ಯರನ್ನು; ಮತ್ತು

(ಡಿ) ನಗರ ಪಾಲಿಕೆ ಪ್ರದೇಶದಲ್ಲಿ ಮತಕ್ಷೇತ್ರ ಹೊಂದಿರುವ ವಿಧಾನಸಭಾ ಸದಸ್ಯರು ಮತ್ತು ನಗರ ಪಾಲಿಕೆ ಪ್ರದೇಶದಲ್ಲಿ ಮತದಾರರಾಗಿ ನೋಂದಾಯಿತರಾದ ವಿಧಾನ ಪರಿಷತ್ತಿನ ಸದಸ್ಯರನ್ನು,

-ಒಳಗೊಂಡಿರತಕ್ಕದ್ದು.

31. ಪಾಲಿಕೆ ಸದಸ್ಯರು ಸ್ವೀಕರಿಸಬೇಕಾದ ನಿಷ್ಠೆಯ ಪ್ರಮಾಣವಚನ.- (1) 1969ರ ಪ್ರಮಾಣ ವಚನ ಅಧಿನಿಯಮ, 1969ರ (1969ರ ಕೇಂದ್ರ ಅಧಿನಿಯಮ 44)ರಲ್ಲಿ ಏನೇ ಒಳಗೊಂಡಿದ್ದರೂ, ಪಾಲಿಕೆ ಸದಸ್ಯನಾಗಿ ಚುನಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಸ್ಥಾನದಲ್ಲಿ ಆಸೀನನಾಗುವುದಕ್ಕೆ ಮೊದಲು ನಗರಪಾಲಿಕೆಯ ಸಭೆಯಲ್ಲಿ ಸಂವಿಧಾನಕ್ಕೆ ತನ್ನ ನಿಷ್ಠೆಯ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಈ ಕೆಳಕಂಡ ನಮೂನೆಯಲ್ಲಿ ಸ್ವೀಕರಿಸತಕ್ಕದ್ದು, ಎಂದರೆ:-

"..... ಎಂಬ ಹೆಸರಿನ ನಾನು ಈ ನಗರಪಾಲಿಕೆಯ ಸದಸ್ಯನಾಗಿ ಚುನಾಯಿತನಾಗಿದ್ದು, ಭಾರತ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಮತ್ತು ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ನಿಷ್ಠಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

(2) ಪಾಲಿಕೆ ಸದಸ್ಯನಾಗಿ ಚುನಾಯಿತನಾದ, ಯಾರೇ ವ್ಯಕ್ತಿಯು ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಅಥವಾ ಸದರಿ ದಿನಾಂಕದ ತರುವಾಯ ನಡೆಯುವ ಮೊದಲ ಮೂರು ಸಭೆಗಳ ಪೈಕಿ ಒಂದರಲ್ಲಿ, ಇವುಗಳಲ್ಲಿ ಯಾವುದು ತರುವಾಯದ್ದೋ ಅದರಲ್ಲಿ (1)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸಲು ತಪ್ಪಿದರೆ, ಅವನು ತನ್ನ ಪದವನ್ನು ಧಾರಣ

ಮಾಡುವುದು ನಿಂತುಹೋಗತಕ್ಕದ್ದು ಮತ್ತು ಆತನ ಸ್ಥಾನವು ತೆರವಾಗಿರುವುದಾಗಿ ಭಾವಿಸತಕ್ಕದ್ದು.

(3) ಪಾಲಿಕೆ ಸದಸ್ಯನಾಗಿ ಚುನಾಯಿತನಾದ ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸಿದ ಹೊರತು, ನಗರ ಪಾಲಿಕೆಯ ಸಭೆಯಲ್ಲಿ ತನ್ನ ಸ್ಥಾನದಲ್ಲಿ ಆಸೀನನಾಗತಕ್ಕದ್ದಲ್ಲ ಅಥವಾ ನಗರ ಪಾಲಿಕೆ ಸದಸ್ಯನಾಗಿ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(4) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನಗರ ಪಾಲಿಕೆ ಸದಸ್ಯನಾಗಿ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸದೇ ಇರುವ ಮಹಾಪೌರ ಅಥವಾ ಉಪಮಹಾಪೌರ ಅಥವಾ ಸ್ಥಾಯೀ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯರು, ಮಹಾಪೌರ ಆಗಿ, ಉಪಮಹಾಪೌರ ಆಗಿ, ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸಲು ಹಕ್ಕುಳ್ಳವರಾಗಿರಕ್ಕದ್ದಲ್ಲ.

32. ಆಸ್ತಿಗಳ ಘೋಷಣೆ, ಇತ್ಯಾದಿ.- ಪ್ರತಿಯೊಬ್ಬ ಪಾಲಿಕೆ ಸದಸ್ಯನು, ತನ್ನ ಪದಾವಧಿಯು ಪ್ರಾರಂಭವಾದ ತರುವಾಯ ಒಂದು ತಿಂಗಳಿಗೆ ಮೀರದಂತೆ ಮತ್ತು ತರುವಾಯದ ಪ್ರತಿ ವರ್ಷದ ಜೂನ್ ತಿಂಗಳ ಕೊನೆಯವರೆಗೆ, ತಾನು ಮತ್ತು ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿರುವ ಎಲ್ಲಾ ಆಸ್ತಿಗಳ ಘೋಷಣೆಯನ್ನು ಮಹಾಪೌರನಿಗೆ ದಾಖಲು ಮಾಡತಕ್ಕದ್ದು. ಅಂಥ ಘೋಷಣೆಯು ನಗರಪಾಲಿಕೆಯ ದಾಖಲೆಗಳ ಭಾಗವಾಗಿರತಕ್ಕದ್ದು.

33. ನಗರಪಾಲಿಕೆ ಸದಸ್ಯರ ಪದಾವಧಿ.- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ನಗರಪಾಲಿಕೆ ಸದಸ್ಯರುಗಳ ಪದಾವಧಿಯು,-

(i) ಸಾರ್ವತ್ರಿಕ ಚುನಾವಣೆಯಲ್ಲಿ ನೇರವಾಗಿ ಚುನಾಯಿತರಾದವರಿಗೆ ಐದು ವರ್ಷಗಳಾಗಿರತಕ್ಕದ್ದು;

(ii) ಸರ್ಕಾರದಿಂದ ನಾಮನಿರ್ದೇಶನಗೊಂಡವರಿಗೆ ಸರ್ಕಾರದ ಇಚ್ಛೆಗೊಳಪಟ್ಟು ನಗರಪಾಲಿಕೆ ಸದಸ್ಯರ ಸಹ-ವ್ಯಾಪ್ತಿಯಲ್ಲಿ ಐದು ವರ್ಷಗಳಾಗಿರತಕ್ಕದ್ದು.

(2) ನಗರಪಾಲಿಕೆ ಸದಸ್ಯರ ಪದಾವಧಿಯು, ನಗರ ಪಾಲಿಕೆಯ ಮೊದಲ ಸಭೆಗಾಗಿ ನಿಗದಿಪಡಿಸಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

(3) ಯಾವುದೇ ಆಕಸ್ಮಿಕ ಖಾಲಿ ಸ್ಥಾನವು ಉಂಟಾದಲ್ಲಿ, ಸಾಧ್ಯವಾದಷ್ಟು ಬೇಗನೆ ವ್ಯಕ್ತಿಯ ಚುನಾವಣೆಯ ಮೂಲಕ ಅದನ್ನು ಭರ್ತಿಮಾಡತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು ಆತನು ಯಾವ ಖಾಲಿ ಸ್ಥಾನಕ್ಕೆ ಚುನಾಯಿತನಾಗಿರುವನೋ ಆ ಉಳಿದ ಅವಧಿಗೆ ಆ ಹುದ್ದೆಯನ್ನು ಹೊಂದಿರತಕ್ಕದ್ದು.

ಪರಂತು, ನಗರಪಾಲಿಕೆ ಸದಸ್ಯರ ಪದಾವಧಿಯು ಮುಕ್ತಾಯವಾಗುವುದಕ್ಕೆ ಆರು ತಿಂಗಳೊಳಗೆ ಖಾಲಿ ಸ್ಥಾನವು ಉಂಟಾದಲ್ಲಿ ಆ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆ ನಡೆಸತಕ್ಕದ್ದಲ್ಲ.

ಅಧ್ಯಾಯ VI
ಚುನಾವಣೆಗಳು

34. ನಗರ ಪಾಲಿಕೆಗೆ ಚುನಾವಣೆ.- (1) ಅಸ್ತಿತ್ವದಲ್ಲಿರುವ ನಗರ ಪಾಲಿಕೆಯ ಅವಧಿಯು ಮುಕ್ತಾಯಗೊಳಿಸುವುದಕ್ಕೆ ಮೊದಲು ಅಥವಾ ವಿಸರ್ಜನೆಗೊಂಡ ಮೇರೆಗೆ ಹೊಸ ನಗರ ಪಾಲಿಕೆಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

(2) ನಗರ ಪಾಲಿಕೆ ಸದಸ್ಯರ ಆಕಸ್ಮಿಕ ಖಾಲಿ ಸ್ಥಾನಕ್ಕಾಗಿ ಸಾರ್ವತ್ರಿಕ ಚುನಾವಣೆಯ ಮೇಲುಸ್ತುವಾರಿ ಮತ್ತು ನಡೆಸುವಿಕೆಯು ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(3) ರಾಜ್ಯ ಚುನಾವಣಾ ಆಯೋಗವು ನೇಮಿಸಿದ ಅಧಿಕಾರಿಯು ಅಂಥ ನಗರ ಪಾಲಿಕೆ ಪ್ರದೇಶದ ಪ್ರತಿಯೊಂದು ವಾರ್ಡಿನ ಮತದಾರರ ಪಟ್ಟಿಯನ್ನು ನಿರ್ವಹಿಸತಕ್ಕದ್ದು.

(4) ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅಂಥ ಚುನಾವಣೆಯ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

35. ಮತದಾರ ಪಟ್ಟಿಗಳು.- (1) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಮತ್ತು ರಾಜ್ಯ ಚುನಾವಣಾ ಆಯೋಗದ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ಪ್ರತಿಯೊಂದು ವಾರ್ಡಿಗಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು, ಪರಿಷ್ಕರಿಸತಕ್ಕದ್ದು, ಮಾರ್ಪಡಿಸತಕ್ಕದ್ದು, ಇಂದೀಕರಿಸತಕ್ಕದ್ದು ಹಾಗೂ ಪ್ರಕಟಿಸತಕ್ಕದ್ದು.

(2) ಪ್ರತಿಯೊಂದು ವಾರ್ಡಿಗೆ ಒಬ್ಬನೇ ನಗರ ಪಾಲಿಕೆ ಸದಸ್ಯನನ್ನು ಚುನಾಯಿಸತಕ್ಕದ್ದು ಮತ್ತು ಚುನಾವಣೆಯು ರಹಸ್ಯ ಮತದಾನದ ಮೂಲಕ ನಡೆಸತಕ್ಕದ್ದು.

(3) ರಾಜ್ಯ ಚುನಾವಣಾ ಆಯೋಗವು ಸಿದ್ಧಪಡಿಸಿರುವಂತೆ ವಾರ್ಡ್‌ನ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿಯು ಆ ವಾರ್ಡ್‌ನ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

36. ಮತದಾರ ನೋಂದಣಿ ಅಧಿಕಾರಿ.- (1) ಮತದಾರ ನೋಂದಣಿ ಅಧಿಕಾರಿಯು, ನಗರ ಪಾಲಿಕೆಯ ಪ್ರತಿಯೊಂದು ವಾರ್ಡುಗಳ ಸಂಬಂಧದಲ್ಲಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನವೀಕರಿಸತಕ್ಕದ್ದು ಹಾಗೂ ಆತನು ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಗೊತ್ತುಪಡಿಸಿದ ಅಥವಾ ನಾಮ ನಿರ್ದೇಶಿಸಿದ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕದ್ದು.

(2) ಚುನಾವಣಾ ನೋಂದಣಿ ಅಧಿಕಾರಿಯು ನಿಯಮಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು, ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಪರಿಷ್ಕರಿಸಲು ಅನುದಾನಿತ ಶಾಲೆಗಳ ಶಿಕ್ಷಕರು ಅಥವಾ ಸರ್ಕಾರಿ ಉದ್ಯೋಗಿಗಳು ಅಥವಾ ಸ್ಥಳೀಯ ಪ್ರಾಧಿಕಾರದ ಉದ್ಯೋಗಿಗಳು ಸೇರಿದಂತೆ ಸಕ್ಷಮ ಸಿಬ್ಬಂದಿಗಳನ್ನು ನಿಯೋಜಿಸಬಹುದು.

(3) ರಾಜ್ಯ ಚುನಾವಣಾ ಆಯೋಗವು, ಚುನಾವಣಾ ನೋಂದಣಿ ಅಧಿಕಾರಿಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಆತನಿಗೆ ನೆರವು ನೀಡಲು ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳನ್ನು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳಾಗಿ ಗೊತ್ತುಪಡಿಸಬಹುದು.

(4) ಪ್ರತಿಯೊಬ್ಬ ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಯು, ಚುನಾವಣಾ ನೋಂದಣಿ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ಚುನಾವಣಾ ನೋಂದಣಿ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮನಾಗಿರತಕ್ಕದ್ದು.

37. ಮತಗಟ್ಟೆಗಳನ್ನು ಒದಗಿಸುವುದು.- ಜಿಲ್ಲಾ ಚುನಾವಣಾ ಅಧಿಕಾರಿಯು, ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆಯೊಂದಿಗೆ, ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗಿನ ಪ್ರತಿಯೊಂದು ವಾರ್ಡಗೆ ಸಾಕಷ್ಟು ಸಂಖ್ಯೆಯ ಮತಗಟ್ಟೆಗಳನ್ನು ಒದಗಿಸತಕ್ಕದ್ದು ಮತ್ತು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಧಾನದಲ್ಲಿ, ಹಾಗೆ ಒದಗಿಸಲಾದ ಮತಗಟ್ಟೆಗಳನ್ನು ಮತ್ತು ಅನುಕ್ರಮವಾಗಿ ಅವರಿಗೆ ಒದಗಿಸಿರುವ ಮತಗಟ್ಟೆ ಪ್ರದೇಶಗಳು ಅಥವಾ ಮತದಾರರ ಗುಂಪನ್ನು ತೋರಿಸುವ ಒಂದು ಪಟ್ಟಿಯನ್ನು ಪ್ರಕಟಿಸತಕ್ಕದ್ದು.

38. ಮತಗಟ್ಟೆಗಳಿಗೆ ಮತಗಟ್ಟೆ ಅಧಿಕಾರಿಗಳ ನೇಮಕ.- (1) ರಾಜ್ಯ ಚುನಾವಣಾ ಆಯೋಗವು ಪ್ರತಿಯೊಂದು ಮತಗಟ್ಟೆಗೆ ಒಬ್ಬರು ಪ್ರಿಸೈಡಿಂಗ್ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಮತಗಟ್ಟೆ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಿಸತಕ್ಕದ್ದು:

ಪರಂತು, ಮತಗಟ್ಟೆಯಿಂದ ಮತಗಟ್ಟೆ ಅಧಿಕಾರಿಯು ಗೈರುಹಾಜರಾದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಚುನಾವಣೆಗೆ ಸಂಬಂಧಿಸಿದಂತೆ, ಅಭ್ಯರ್ಥಿಗಾಗಿ ಚುನಾವಣೆಯಲ್ಲಿ ಅವನ ಪರವಾಗಿ ಅಥವಾ ಆ ಮೂಲಕ ನಿಯೋಜನೆಗೊಂಡ ಅಥವಾ ಅನ್ಯಥಾ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯನ್ನು ಹೊರತುಪಡಿಸಿ, ಮತಗಟ್ಟೆಯಲ್ಲಿ ಹಾಜರಿರುವ ಯಾರೇ ವ್ಯಕ್ತಿಯನ್ನು, ಹಿಂದಿನ ಅಧಿಕಾರಿಯ ಗೈರುಹಾಜರಿಯಲ್ಲಿ, ಮತದಾನ ಅಧಿಕಾರಿಯಾಗಿ ನೇಮಿಸಬಹುದು ಮತ್ತು ಅದಕ್ಕನುಸಾರವಾಗಿ ಚುನಾವಣಾ ಆಯೋಗಕ್ಕೆ ತಿಳಿಸಬಹುದು.

(2) ಮತಗಟ್ಟೆ ಅಧಿಕಾರಿಯು, ಪ್ರಿಸೈಡಿಂಗ್ ಅಧಿಕಾರಿಯ ಮೂಲಕ ಹಾಗೆ ನಿರ್ದೇಶಿತನಾದಲ್ಲಿ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳು ಅಥವಾ ಆದೇಶಗಳ ಅಡಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

39. ನಗರ ಪಾಲಿಕೆ ಸದಸ್ಯನಾಗಲು ಅರ್ಹತೆಗಳು.- (1) ಗ್ರೇಟರ್ ಬೆಂಗಳೂರು ಪ್ರದೇಶದೊಳಗಿನ ನಗರ ಪಾಲಿಕೆಯ ವಾರ್ಡುಗಳ ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಯಾರೇ ವ್ಯಕ್ತಿಯು, ಇಪ್ಪತ್ತೊಂದು ವರ್ಷಗಳ ವಯಸ್ಸಿಗೆ ಕಡಿಮೆಯಲ್ಲದ ಮತ್ತು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅನರ್ಹತೆಗೊಂಡಿರದ ಹೊರತು, ಆತನು ಚುನಾವಣೆಯಲ್ಲಿ ಮತದಾನ ಮಾಡುವ ನಗರ ಪಾಲಿಕೆಯ ಯಾವುದೇ ವಾರ್ಡಿನ ಚುನಾವಣೆಗೆ ಚುನಾಯಿತನಾಗಲು ಅರ್ಹನಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚಿನ ವಾರ್ಡ್‌ಗಾಗಿ ಚುನಾಯಿತನಾಗಿದ್ದರೆ, ಆತನು ಸಹಿ ಮಾಡಿದ ನೋಟಿಸ್ ನೀಡುವ ಮೂಲಕ, ಅಂಥ ಚುನಾವಣೆಗಳ ಕೊನೆಯ ದಿನಾಂಕದಿಂದ ಮೂರು ದಿನದೊಳಗೆ, ಆತನು ಯಾವ ವಾರ್ಡ್‌ಗೆ ಸೇವೆ ಸಲ್ಲಿಸಲು ಆಯ್ಕೆ ಮಾಡಿಕೊಂಡಿರುತ್ತೇನೆಂಬ ಮಾಹಿತಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ತಿಳಿಸತಕ್ಕದ್ದು ಹಾಗೂ ಆಯ್ಕೆಯು ಅಂತಿಮವಾಗಿರತಕ್ಕದ್ದು.

(3) ಅಭ್ಯರ್ಥಿಯು ಎರಡನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಆಯ್ಕೆಯನ್ನು ಮಾಡಿಕೊಳ್ಳದಿರುವಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು ಮತ್ತು ಅಂಥ ಅಭ್ಯರ್ಥಿಯು ಯಾವ ವಾರ್ಡ್‌ನಿಂದ ಸೇವೆ ಸಲ್ಲಿಸತಕ್ಕದೆಂದು ಅಧಿಸೂಚಿಸತಕ್ಕದ್ದು. ಸದರಿ ವ್ಯಕ್ತಿಯು, ಸಂದರ್ಭಾನುಸಾರ ಹಾಗೆ ಆಯ್ಕೆ ಮಾಡಿಕೊಂಡ ಅಥವಾ ಅಧಿಸೂಚಿಸಿದ ವಾರ್ಡ್‌ಗಾಗಿ ಮಾತ್ರ ಚುನಾಯಿತನಾಗಿದ್ದಾನೆಂದು ಭಾವಿಸತಕ್ಕದ್ದು ಮತ್ತು ಆ ಮೂಲಕ ಖಾಲಿಯಾದ ಇತರೆ ಸ್ಥಾನ ಅಥವಾ ಸ್ಥಾನಗಳನ್ನು ಹೊಸದಾಗಿ ಚುನಾವಣೆಗಳನ್ನು ನಡೆಸುವ ಮೂಲಕ ಭರ್ತಿ ಮಾಡತಕ್ಕದ್ದು.

(4) ವಾರ್ಡ್‌ನ ಪಾಲಿಕೆ ಸದಸ್ಯನಾಗಿ ಆಯ್ಕೆಗೊಂಡ ಒಬ್ಬ ವ್ಯಕ್ತಿಯು ಲೋಕಸಭೆ ಅಥವಾ ರಾಜ್ಯ ಸಭೆಗಾಗಲಿ, ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗಾಗಲಿ ಸದಸ್ಯನಾಗಿದ್ದರೆ, ಅಥವಾ ಗ್ರೇಟರ್ ಬೆಂಗಳೂರಿನೊಳಗಿನ ನಗರ ಪಾಲಿಕೆ(City Corporation)ಯನ್ನು ಹೊರತುಪಡಿಸಿ ನಗರ ಪಾಲಿಕೆ (Municipal Corporation) ಸದಸ್ಯನಾಗಿದ್ದರೆ, ಅಥವಾ ಪಟ್ಟಣ ಪಂಚಾಯತ್‌ನ ಸದಸ್ಯನಾಗಿದ್ದರೆ, ಅಥವಾ ಜಿಲ್ಲಾ ಪಂಚಾಯತ್ ಅಥವಾ ಗ್ರಾಮ ಪಂಚಾಯತ್ ನ ಸದಸ್ಯನಾಗಿದ್ದರೆ ಸದಸ್ಯರುಗಳ ಹೆಸರುಗಳ ಅಧಿಸೂಚನೆಯ ದಿನಾಂಕದಿಂದ ಹದಿನೈದು ದಿನಗಳ ಅವಧಿಯು ಮುಕ್ತಯವಾಗುವುದಕ್ಕೆ ಮುಂಚೆ ಅಥವಾ ಸಂದರ್ಭಾನುಸಾರ ಲೋಕಸಭೆಗಾಗಲಿ ಅಥವಾ ರಾಜ್ಯಸಭೆಗಾಗಲಿ, ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗಾಗಲಿ, ಅಥವಾ ಗ್ರೇಟರ್ ಬೆಂಗಳೂರಿನೊಳಗಿನ ನಗರ ಪಾಲಿಕೆ(City Corporation)ಯನ್ನು ಹೊರತುಪಡಿಸಿ ನಗರ ಪಾಲಿಕೆ (Municipal Corporation), ಅಥವಾ ಪಟ್ಟಣ ಪಂಚಾಯತ್‌ನ ಅಥವಾ ಜಿಲ್ಲಾ ಪಂಚಾಯತ್ ಅಥವಾ ಗ್ರಾಮ ಪಂಚಾಯತ್‌ನ ಸದಸ್ಯನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಲೋಕಸಭೆ ಅಥವಾ ರಾಜ್ಯ ಸಭೆಗಾಗಲಿ, ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗಾಗಲಿ, ಅಥವಾ ಗ್ರೇಟರ್ ಬೆಂಗಳೂರಿನೊಳಗಿನ ನಗರ ಪಾಲಿಕೆ(City Corporation)ಯನ್ನು ಹೊರತುಪಡಿಸಿ ನಗರ ಪಾಲಿಕೆ (Municipal Corporation), ಅಥವಾ ಪಟ್ಟಣ ಪಂಚಾಯತ್‌ನ, ಅಥವಾ ಜಿಲ್ಲಾ ಪಂಚಾಯತ್ ಅಥವಾ ಗ್ರಾಮ ಪಂಚಾಯತ್‌ನ ಈ ಮುಂಚಿನ ಸ್ಥಾನಕ್ಕೆ ಆತನು ರಾಜಿನಾಮೆ ನೀಡಿದ ಹೊರತು ಗ್ರೇಟರ್ ಬೆಂಗಳೂರಿನೊಳಗಿನ ನಗರ ಪಾಲಿಕೆಯಲ್ಲಿನ ಆತನ ಸ್ಥಾನವು ಖಾಲಿಯಾಗತಕ್ಕದ್ದು.

(5) ಒಮ್ಮೆ ಚುನಾಯಿತನಾದ ಅಂಥ ವ್ಯಕ್ತಿಯು, ಆತನ ಅಧಿಕಾರವಧಿಯಲ್ಲಿ ನಗರ ಪಾಲಿಕೆಯ ಹೊರಗಿನ ಯಾವುದೇ ವಾರ್ಡಿನ ಮತದಾರ ಪಟ್ಟಿಗೆ ತನ್ನ ಹೆಸರನ್ನು ಬದಲಾಯಿಸಿಕೊಳ್ಳತಕ್ಕದ್ದಲ್ಲ ಮತ್ತು ಹಾಗೆ ಬದಲಾಯಿಸಿಕೊಂಡಲ್ಲಿ ಆತನು ಸದಸ್ಯನಾಗಿರುವ ನಗರ ಪಾಲಿಕೆಯ ಆಯುಕ್ತರು ಈ ಬಗ್ಗೆ ನೋಟಿಸ್ ಜಾರಿ ಮಾಡಿದ ತರುವಾಯ ಹಾಗೂ ಆತನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಆತನು ಸದಸ್ಯತ್ವವನ್ನು ಕಳೆದುಕೊಳ್ಳುವನು.

40. ನಗರ ಪಾಲಿಕೆ ಸದಸ್ಯನಾಗಲು ಅನರ್ಹತೆಗಳು.- (1) ಒಬ್ಬ ವ್ಯಕ್ತಿಯು ನಗರ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಲು,-

(ಎ) ಆತನು, ಕ್ರಿಮಿನಲ್ ನ್ಯಾಯಾಲಯದಿಂದ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಾರಾವಾಸದಿಂದ **ದಂಡನೀಯವಾದ** ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದಲ್ಲಿ:

ಪರಂತು,

(i) ಅಪರಾಧವು ನೈತಿಕ ಅಧಃಪತನವನ್ನು ಒಳಗೊಂಡಿದ್ದಲ್ಲಿ; ಮತ್ತು

(ii) ಅಂಥ ಶಿಕ್ಷೆಯನ್ನು ವಿಪರ್ಯಯಗೊಳಿಸಿರದಿದ್ದಲ್ಲಿ ಅಥವಾ ರದ್ದುಗೊಳಿಸಿರದಿದ್ದಲ್ಲಿ ಅಥವಾ ಅಪರಾಧವನ್ನು ಕ್ಷಮಿಸದಿದ್ದಲ್ಲಿ; ಅಥವಾ

(ಬಿ) ಸಂವಿಧಾನದ ಯಾವುದೇ ಉಪಬಂಧದ ಅಡಿಯಲ್ಲಿ ಅಥವಾ ರಾಜ್ಯ ವಿಧಾನಸಭೆ ಚುನಾವಣೆಗಳಿಗೆ ಸಂಬಂಧಿಸಿದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಹಾಗೆ ಅನರ್ಹಗೊಂಡಿದ್ದಲ್ಲಿ; ಅಥವಾ

(ಸಿ) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಘೋಷಿಸಲಾದಂತೆ ಹುದ್ದೆಯ ಧಾರಕನನ್ನು ಅನರ್ಹನನ್ನಾಗಿಸದಂಥ ಪದಗಳನ್ನು ಹೊರತುಪಡಿಸಿ ಅವನು ಭಾರತ ಸರ್ಕಾರದ ಅಥವಾ ಭಾರತ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯಸರ್ಕಾರದ ಅಧೀನದಲ್ಲಿ ಅಥವಾ ಸದರಿ ಸರ್ಕಾರಗಳ ಪೈಕಿ ಯಾವುದೇ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಯಾವುದೇ ಸ್ಥಳೀಯ ಅಥವಾ ಇತರೆ ಪ್ರಾಧಿಕಾರದ ಅಧೀನದಲ್ಲಿ ಲಾಭದಾಯಕ ಹುದ್ದೆಯನ್ನು ಧಾರಣ ಮಾಡಿದ್ದರೆ; ಅಥವಾ

(ಡಿ) ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿನ ಸೇವೆಯಿಂದ ಅಥವಾ ಸರ್ಕಾರದ ಸೇವೆಯಿಂದ ಅವನನ್ನು ವಜಾ ಮಾಡಲಾಗಿದ್ದರೆ; ಅಥವಾ

(ಇ) ಅವನು ಕಾನೂನು ವೃತ್ತಿಗನಾಗಿದ್ದು, ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ಅವನನ್ನು ವೃತ್ತಿಯಿಂದ ವಜಾ ಮಾಡಲಾಗಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ಅಮಾನತುಗೊಳಿಸಿದ್ದ ಸಂದರ್ಭದಲ್ಲಿ, ಅಂಥ ಅಮಾನತಿನ ಅವಧಿಯಲ್ಲಿ ಅನರ್ಹತೆಯು ಜಾರಿಯಲ್ಲಿದ್ದರೆ; ಅಥವಾ

(ಎಫ್) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ; ಅಥವಾ

(ಜಿ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಹೆಚ್) ಅವನು ಭಾರತದ ನಾಗರಿಕನಾಗಿರದಿದ್ದರೆ ಅಥವಾ ಯಾವುದೇ ವಿದೇಶೀ ರಾಷ್ಟ್ರದ ನಾಗರಿಕತ್ವವನ್ನು ಸ್ವಇಚ್ಛೆಯಿಂದ ಆರ್ಜಿಸಿದ್ದರೆ; ಅಥವಾ

(ಐ) ಆತನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ರಾಜ್ಯ ವಿಧಾನಮಂಡಲ ಚುನಾವಣೆಯ ಉದ್ದೇಶಕ್ಕಾಗಿ ಹಾಗೆ ಅನರ್ಹಗೊಳಿಸಿದ್ದರೆ; ಅಥವಾ

(ಜೆ) ಆತನು, ನಗರ ಪಾಲಿಕೆಯ ಆದೇಶದ ಮೂಲಕ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ನಗರ ಪಾಲಿಕೆಯೊಂದಿಗೆ ಅಥವಾ ಅದರಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ, ಯಾವುದೇ ಕರಾರಿನಲ್ಲಿ ಅಥವಾ ಉದ್ಯೋಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ತಾನಾಗಿ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಕೆ) ಆತನು, ಚುನಾವಣೆಯ ಸಿಂಧುತ್ವ ಅಥವಾ ಕ್ರಮಬದ್ಧತೆಯನ್ನು ಪ್ರಶ್ನಿಸುವ ಈ ಮುಂದಿನ ವ್ಯವಹರಣೆಗಳಲ್ಲಿ ತಪ್ಪಿತಸ್ಥನೆಂದು ಕಂಡುಬಂದಲ್ಲಿ,-

(i) ಯಾವುದೇ ಭ್ರಷ್ಟಾಚರಣೆ; ಅಥವಾ

(ii) ಅಪರಾಧ ಮಾಡಿರುವುದು ಕಂಡುಬಂದ ದಿನಾಂಕದಿಂದ ಆರು ವರ್ಷಗಳ ಅವಧಿಯು ಮುಕ್ತಾಯವಾಗದ ಹೊರತು ಅಥವಾ ಸರ್ಕಾರದ ಆದೇಶದ ಮೇರೆಗೆ ಅನರ್ಹತೆಯನ್ನು ತೆಗೆದುಹಾಕಿದ ಹೊರತು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ

ಅಧಿನಿಯಮ 45)ರ 173ನೇ ಪ್ರಕರಣ ಅಥವಾ 174ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧ ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಅಪರಾಧ; ಅಥವಾ

(ಎಲ್) ಆತನು, ಸಕಾಲಕ್ಕೆ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ದಾಖಲು ಮಾಡಲು ವಿಫಲನಾದಲ್ಲಿ;

-ಅನರ್ಹನಾಗತಕ್ಕದ್ದು.

(2) ಯಾವೊಬ್ಬ ನಗರ ಪಾಲಿಕೆ ಸದಸ್ಯನು, ತಾನು ಚುನಾಯಿತನಾದ ಅವಧಿಯಲ್ಲಿ,-

(**ಎ**) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಪಟ್ಟಲ್ಲಿ; ಅಥವಾ

(**ಬಿ**) ಆತನು,-

(i) ಹಿತಾಸಕ್ತಿಯಲ್ಲಿ ಭಿನ್ನಾಭಿಪ್ರಾಯ ಹೊಂದಿರುವ; ಅಥವಾ

(ii) ನಗರ ಪಾಲಿಕೆಯ ವಿರುದ್ಧದ ಯಾವುದೇ ವ್ಯವಹರಣೆಯ ಸಮಯದಲ್ಲಿ ತಾನು ತೊಡಗಿಕೊಂಡಿರುವ,

- ಯಾವುದೇ ವಿಷಯದ ಚರ್ಚೆಗಳಲ್ಲಿ ನಗರ ಪಾಲಿಕೆ ಸದಸ್ಯನಾಗಿ ಮತ ಚಲಾಯಿಸಿದ್ದಲ್ಲಿ ಅಥವಾ ಭಾಗವಹಿಸಿದ್ದಲ್ಲಿ; ಅಥವಾ

(**ಸಿ**) ನಗರ ಪಾಲಿಕೆಯಿಂದ ಅನುಮತಿ ಪಡೆದ ಹೊರತು ನಗರ ಪಾಲಿಕೆಯ ಮೂರು ಕ್ರಮಾನುಗತ ತಿಂಗಳುಗಳ ಅವಧಿಯಲ್ಲಿ ನಗರ ಪಾಲಿಕೆಯ ಸಭೆಗಳಿಗೆ ತಾನಾಗಿಯೇ ಗೈರು ಹಾಜರಾಗಿದ್ದಲ್ಲಿ:

ಪರಂತು, ನಗರ ಪಾಲಿಕೆಯ ಸಭೆಗಳಿಂದ ಗೈರು ಹಾಜರಾಗುವ ಪ್ರಕರಣದಲ್ಲಿ ಆರು ಕ್ರಮಾನುಗತ ತಿಂಗಳುಗಳ ಮೀರಿದ ಅವಧಿಗೆ ಅನುಮತಿಯನ್ನು ನೀಡತಕ್ಕದ್ದಲ್ಲ;

ಮತ್ತು ಪರಂತು, **ನಗರ** ಪಾಲಿಕೆ ಸದಸ್ಯನು ಗೈರು ಹಾಜರಾಗಲು ಅನುಮತಿಗಾಗಿ ತಾನು ನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಅರ್ಜಿಯ ಬಗೆಗಿನ ಪಾಲಿಕೆಯ ನಿರ್ಧಾರವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, **ನಗರ** ಪಾಲಿಕೆಯು ಅನುಮತಿಯನ್ನು ಮಂಜೂರು ಮಾಡಿದೆಯೆಂದು ಭಾವಿಸತಕ್ಕದ್ದು.

(3) ಆಯುಕ್ತರು, ತಾನಾಗಿಯೇ ಆಗಲೀ ಅಥವಾ ತನಗೆ ಮಾಡಲಾದ ವರದಿಯ ಮೇಲಾಗಲೀ, ತಾನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯ ತರುವಾಯ, ಆದೇಶದ ಮೂಲಕ, ಸಂಬಂಧಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಬಹುದು. ಸಾಧ್ಯವಾದಷ್ಟು, ವರದಿಯ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳೊಳಗಾಗಿ ಅಥವಾ ತಾನಾಗಿಯೇ ಕ್ರಮ ಕೈಗೊಂಡಿದ್ದಲ್ಲಿ, ಅದರ ಪ್ರಾರಂಭದಿಂದ ಮೂವತ್ತು ದಿನಗಳೊಳಗಾಗಿ ಅಂಥ ಆದೇಶವನ್ನು ಮಾಡತಕ್ಕದ್ದು.

(4) ಉಪಪ್ರಕರಣ (2)ರಡಿಯಲ್ಲಿ ಆಯುಕ್ತರ ನಿರ್ಧಾರದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ನಿರ್ಧಾರದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ, ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ಸರ್ಕಾರವು ಹೊರಡಿಸಿದ ಆದೇಶಗಳು ಅಂತಿಮವಾಗಿರತಕ್ಕದ್ದು.

ಪರಂತು, ಯಾವೊಬ್ಬ ನಗರ ಪಾಲಿಕೆ ಸದಸ್ಯನ ವಿರುದ್ಧ, ಆತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತವಾದ ಅವಕಾಶವನ್ನು ನೀಡದ ಹೊರತು (2) ರಿಂದ (4)ನೇ ಉಪಪ್ರಕರಣಗಳ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

41. ಸಮಾನ ಮತಗಳು.- ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ನಡುವೆ ಸಮಾನ ಮತಗಳಿದ್ದಲ್ಲಿ, ರಾಜ್ಯ ಚುನಾವಣಾ ಆಯೋಗದ ಪರವಾಗಿ ನೇಮಕವಾದ ಅಧಿಕಾರಿಯು, ಲಾಟರಿ ಎತ್ತುವ ಮೂಲಕ ನಿರ್ಧರಿಸಿ ಆ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಭಾವಿಸತಕ್ಕದ್ದು.

42. ಫಲಿತಾಂಶಗಳ ಪ್ರಕಟಣೆ.- ನಗರ ಪಾಲಿಕೆಯ ಸದಸ್ಯರು, ಮಹಾಪೌರ ಅಥವಾ ಉಪ ಮಹಾಪೌರನಾಗಿ ಚುನಾಯಿತರಾದ ಮತ್ತು ನಾಮನಿರ್ದೇಶಿತರಾದ ವ್ಯಕ್ತಿಗಳ ಹೆಸರನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

43. ಚುನಾವಣಾ ತಕರಾರು ಅರ್ಜಿ.- (1) 45ನೇ ಪ್ರಕರಣದ ಅಡಿಯಲ್ಲಿ ಚುನಾವಣೆಯ ಫಲಿತಾಂಶದ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಅಧಿಕಾರ ವ್ಯಾಪ್ತಿಯನ್ನು

ಹೊಂದಿರುವ ಜಿಲ್ಲಾ ಅಥವಾ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ನ್ಯಾಯನಿರ್ಣಯಕ್ಕಾಗಿ ಸಲ್ಲಿಸಿದ ಚುನಾವಣಾ ತಕರಾರು ಅರ್ಜಿಯ ಮೂಲಕ ಹೊರತು **ಈ ಅಧಿನಿಯಮದಡಿಯಲ್ಲಿನ** ಯಾವುದೇ ಚುನಾವಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

(2) 43ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಕೆಳಕಂಡವರು ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಬಹುದು,-

(ಎ) ಅಂಥ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಯು; ಅಥವಾ

(ಬಿ) ಸಂಬಂಧಪಟ್ಟ ವಾರ್ಡಿನ ಯಾವೊಬ್ಬ ಮತದಾರನು.

(3) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಅಧಿವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸತಕ್ಕದ್ದು:

ಪರಂತು, ಅರ್ಜಿದಾರನು ಯಾವುದೇ ಭ್ರಷ್ಟಾಚರಣೆಯನ್ನು ಆರೋಪಿಸಿದ್ದಲ್ಲಿ, ಅಂಥ ಭ್ರಷ್ಟಾಚಾರಣೆಯ ಆರೋಪವನ್ನು ಮತ್ತು ನಿಯಮಿಸಲಾದ ನಮೂನೆಯಲ್ಲಿ ಅದರ ವಿವರಗಳನ್ನು ಸಮರ್ಥಿಸುವ ಒಂದು ಶಪಥ ಪತ್ರವೂ ಸಹ ತಕರಾರು ಅರ್ಜಿಯೊಂದಿಗಿರತಕ್ಕದ್ದು.

44. ಚುನಾವಣೆಗಳು ಶೂನ್ಯವೆಂದು (void) ಘೋಷಿಸಲು ಆಧಾರಗಳು.- (1) ನ್ಯಾಯಾಲಯವು,-

(ಎ) ಚುನಾವಣೆಯ ದಿನಾಂಕದಂದು ಚುನಾವಣಾ ಅಭ್ಯರ್ಥಿಯು, ಈ ಅಧಿನಿಯಮದ ಅಡಿಯಲ್ಲಿ ನಗರ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಲು ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹನಾಗಿದ್ದಾನೆಂದು;

(ಬಿ) ಚುನಾಯಿತ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಮೂಲಕ ಅಥವಾ ಚುನಾಯಿತ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಇತರ ಯಾವುದೇ ವ್ಯಕ್ತಿಯ ಮೂಲಕ ಯಾವುದೇ ಭ್ರಷ್ಟಾಚಾರವನ್ನು ಎಸಗಿದ್ದಾನೆಂದು; ಅಥವಾ

(ಸಿ) ಯಾವುದೇ ನಾಮಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆಯೆಂದು;

(ಡಿ) ಚುನಾಯಿತ ಅಭ್ಯರ್ಥಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಚುನಾವಣಾ ಫಲಿತಾಂಶವು,-

(i) ಯಾವುದೇ ನಾಮಪತ್ರದ ಅನುಚಿತ ಅಂಗೀಕಾರದ ಮೂಲಕ; ಅಥವಾ

(ii) ಚುನಾಯಿತ ಅಭ್ಯರ್ಥಿಯ ಚುನಾವಣಾ ಏಜೆಂಟ್‌ನ ಹೊರತಾಗಿನ ಏಜೆಂಟ್ ನ ಮೂಲಕ ಆತನ ಹಿತಾಸಕ್ತಿಗಳಿಗಾಗಿ ಯಾವುದೇ ಭ್ರಷ್ಟಾಚಾರವನ್ನು ಎಸಗುವುದರ ಮೂಲಕ; ಅಥವಾ

(iii) ಯಾವುದೇ ಮತದ ಅನುಚಿತ ಸ್ವೀಕೃತಿ, ನಿರಾಕರಣೆ ಅಥವಾ ಶೂನ್ಯವಾದ ಯಾವುದೇ ಮತದ ಸ್ವೀಕೃತಿಯ ಮೂಲಕ; ಅಥವಾ

(iv) ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳ ಅಥವಾ ಆದೇಶಗಳ ಅನನುಪಾಲನೆಯಿಂದ (non-compliance) ವಾಸ್ತವವಾಗಿ ಬಾಧಿತವಾಗಿದೆಯೆಂದು, ನ್ಯಾಯಾಲಯವು ಅಭಿಪ್ರಾಯಪಟ್ಟರೆ ಅದು ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸತಕ್ಕದ್ದು.

(2) ಚುನಾಯಿತ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯ ಮೂಲಕ ತಪ್ಪಿತಸ್ಥನೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಆದರೆ ನ್ಯಾಯಾಲಯವು,-

(ಎ) ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನ ಮೂಲಕ ಚುನಾವಣೆಯಲ್ಲಿ ಅಂಥ ಭ್ರಷ್ಟಾಚಾರವು ನಡೆದಿಲ್ಲವೆಂದು ಮತ್ತು ಪ್ರತಿಯೊಂದು ಅಂಥ ಭ್ರಷ್ಟಾಚಾರವು ಅಭ್ಯರ್ಥಿಯ ಆದೇಶಗಳ ವಿರುದ್ಧವಾಗಿ ಮತ್ತು ಅಭ್ಯರ್ಥಿಯ

ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯಿಲ್ಲದೆ ಅದನ್ನು ಎಸಗಲಾಗಿದೆಯೆಂದು;

(ಬಿ) ಅಭ್ಯರ್ಥಿ ಮತ್ತು ಆತನ ಚುನಾವಣಾ ಏಜೆಂಟನು ಚುನಾವಣೆಯಲ್ಲಿ ಭ್ರಷ್ಟಾಚಾರ ಎಸಗುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾನೆಂದು;

(ಸಿ) ಚುನಾವಣೆಯು ಎಲ್ಲಾ ಇತರೆ ಅಂಶಗಳಲ್ಲಿ ಅಭ್ಯರ್ಥಿ ಅಥವಾ ಆತನ ಯಾರೇ ಏಜೆಂಟ್ ಪರವಾಗಿನ ಯಾವುದೇ ಭ್ರಷ್ಟ ಆಚಾರದಿಂದ ಮುಕ್ತವಾಗಿದೆಯೆಂದು,

- ಮನಗಂಡರೆ, ಆಗ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವಲ್ಲವೆಂದು ನಿರ್ಧರಿಸಬಹುದು.

45. ನ್ಯಾಯಾಲಯವು ಅನುಸರಿಸಬೇಕಾದ ಕಾರ್ಯವಿಧಾನ.- ದಾವೆಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908**ರ ಕೇಂದ್ರ ಅಧಿನಿಯಮ** 5)ರಲ್ಲಿ ಉಪಬಂಧಿಸಿರುವ **ಕಾರ್ಯವಿಧಾನವನ್ನು** ಈ ಅಧಿನಿಯಮದ ಅಡಿಯಲ್ಲಿ ಚುನಾವಣಾ ತಕರಾರು ಅರ್ಜಿಯ ಅಧಿವಿಚಾರಣೆ ಮತ್ತು ವಿಲೇವಾರಿಯಲ್ಲಿ ಅನ್ವಯವಾಗಬಹುದಾದಷ್ಟರ ಮಟ್ಟಿಗೆ ನ್ಯಾಯಾಲಯವು ಅನುಸರಿಸತಕ್ಕದ್ದು.

46. ನ್ಯಾಯಾಲಯದ ತೀರ್ಮಾನ.- (1) ಚುನಾವಣಾ ತಕರಾರು ಅರ್ಜಿಯ ಅಧಿವಿಚಾರಣೆಯ **ನಿರ್ಣಯದಲ್ಲಿ**, ನ್ಯಾಯಾಲಯವು ಈ ಮುಂದಿನಂತೆ ಆದೇಶಿಸತಕ್ಕದ್ದು, ಎಂದರೆ:-

(ಎ) ಚುನಾವಣಾ ತಕರಾರು ಅರ್ಜಿಯನ್ನು ವಜಾಗೊಳಿಸುವುದು; ಅಥವಾ

(ಬಿ) ಎಲ್ಲಾ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಚುನಾವಣೆಯನ್ನು ಶೂನ್ಯವೆಂದು ಘೋಷಿಸುವುದು; ಅಥವಾ

(ಸಿ) ಎಲ್ಲಾ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಚುನಾವಣೆಯನ್ನು ಶೂನ್ಯವೆಂದು ಮತ್ತು ಅರ್ಜಿದಾರ ಅಥವಾ ಯಾರೇ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುವುದು.

(2) ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸಿ, ಚುನಾವಣಾ ತಕರಾರು ಅರ್ಜಿಯನ್ನು ದಾಖಲಿಸಿದ ಯಾವುದೇ ವ್ಯಕ್ತಿಯು, ಅರ್ಜಿದಾರ ಅಥವಾ ಯಾರೇ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತನಾಗಿದ್ದಾನೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದಲ್ಲಿ ಮತ್ತು ನ್ಯಾಯಾಲಯವು,-

(ಎ) ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹುಮತಗಳನ್ನು ವಾಸ್ತವವಾಗಿ ಪಡೆದಿದ್ದಾನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಭ್ರಷ್ಟ ಆಚರಣೆಗಳ ಮೂಲಕ ಪಡೆದ ಮತಗಳ ಹೊರತಾಗಿ, ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹುಮತಗಳನ್ನು ಪಡೆಯಬಹುದಿತ್ತೆಂದು,

(ಸಿ) ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಅಸಿಂಧು ಎಂದು ಘೋಷಿಸಿದ ನಂತರ, ಅರ್ಜಿದಾರನು ಅಥವಾ ಸಂದರ್ಭಾನುಸಾರ ಅಂಥ ಇತರ ಅಭ್ಯರ್ಥಿಯನ್ನು ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸಬೇಕಾಗುವುದೆಂದು,

- ಅಭಿಪ್ರಾಯಪಟ್ಟರೆ,

(3) ಚುನಾವಣಾ ತಕರಾರು ಅರ್ಜಿಯ ಅಧಿವಿಚಾರಣೆಯ ಅವಧಿಯಲ್ಲಿ, ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಬಂದಿವೆ ಮತ್ತು ಒಂದು ಮತವನ್ನು ಸೇರಿಸಿದರೆ ಆ ಯಾವುದೇ ಅಭ್ಯರ್ಥಿಗಳು ಚುನಾಯಿತರೆಂದು ಘೋಷಿತರಾಗಲು ಹಕ್ಕುಳ್ಳವರಾಗುತ್ತಾರೆಂದು ಕಂಡುಬಂದರೆ, ಆಗ ನ್ಯಾಯಾಲಯವು, ಅವರ ನಡುವೆ ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಚೀಟಿಯು ಯಾರ ಪರವಾಗಿ ಬಂದಿರುತ್ತದೆಯೋ ಆತನು ಹೆಚ್ಚಿನ ಒಂದು ಮತವನ್ನು ಪಡೆದಿದ್ದಾನೆ ಎಂಬಂತೆ ಮುಂದುವರೆಯತಕ್ಕದ್ದು.

47. ಅಪೀಲು.- ನ್ಯಾಯಾಲಯದ ಆದೇಶದ ಪ್ರತಿಯನ್ನು ಪಡೆದುಕೊಳ್ಳಲು ಅಗತ್ಯವಾದ ಸಮಯವನ್ನು ಹೊರತುಪಡಿಸಿ, ಆದೇಶದ ದಿನಾಂಕದಿಂದ ಮೂವತ್ತು ದಿನಗಳ

ಅವಧಿಯೊಳಗೆ 46ನೇ ಪ್ರಕರಣದ ಅಡಿಯಲ್ಲಿ ಜಿಲ್ಲಾ ಅಥವಾ ಸಿಟಿ ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ಧ ಉಚ್ಚನ್ಯಾಯಾಲಯಕ್ಕೆ ಅಪೀಲು ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಸಾಕಷ್ಟು ಕಾರಣಗಳನ್ನು ಹೊಂದಿದ್ದನೆಂದು ಉಚ್ಚ ನ್ಯಾಯಾಲಯವು ಮನಗಂಡರೆ, ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅದು ಅಪೀಲನ್ನು ಪುರಸ್ಕರಿಸಬಹುದು.

48. ಭ್ರಷ್ಟ ಆಚರಣೆಗಳು.- ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಮುಂದಿನವುಗಳನ್ನು ಭ್ರಷ್ಟ ಆಚರಣೆಗಳೆಂದು ಭಾವಿಸತಕ್ಕದ್ದು, ಎಂದರೆ:-

(ಎ) 'ಲಂಚಗುಳಿತನ' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ ಕೇಂದ್ರ ಅಧಿನಿಯಮ 43)ರ 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿದ ಲಂಚಗುಳಿತನ;

(ಬಿ) 'ಪ್ರಭಾವಕ್ಕೊಳಗಾಗುವುದು' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಿದಂತೆ ಪ್ರಭಾವಕ್ಕೊಳಗಾಗುವುದು;

(ಸಿ) ಅಭ್ಯರ್ಥಿಯು ಅಥವಾ ಆತನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯು, ಯಾರೇ ಇತರೆ ವ್ಯಕ್ತಿಯ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಅಥವಾ ಧಾರ್ಮಿಕ ಚಿಹ್ನೆಗಳ ಬಳಕೆ ಅಥವಾ ಅಪೀಲು ಮಾಡುವ ಮೂಲಕ ಅಥವಾ ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಯಲ್ಲಿ ಪ್ರತಿಕೂಲವಾಗಿ ಪರಿಣಾಮವುಂಟು ಮಾಡಲು ರಾಷ್ಟ್ರ, ಧ್ವಜ ಅಥವಾ ಲಾಂಛನದಂಥ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅಪೀಲು ಮಾಡುವ ಮೂಲಕ ಮತ ಹಾಕುವಂತೆ ಅಥವಾ ಮತ ಹಾಕದಿರುವಂತೆ ಮನವಿ ಮಾಡುವುದು;

(ಡಿ) ಅಭ್ಯರ್ಥಿ ಅಥವಾ ಆತನ ಏಜೆಂಟನ ಅಥವಾ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ, ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲವಾದ ಪರಿಣಾಮವುಂಟು ಮಾಡುವುದಕ್ಕಾಗಿ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಭಾರತದ ನಾಗರಿಕರ ವಿವಿಧ ವರ್ಗಗಳ ನಡುವೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಪ್ರೋತ್ಸಾಹಿಸುವುದು ಅಥವಾ ಪ್ರೋತ್ಸಾಹಿಸಲು ಪ್ರಯತ್ನಿಸುವುದು;

(ಇ) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಯಾರೇ ಇತರ ವ್ಯಕ್ತಿಯು, ತಪ್ಪಾಗಿರುವ ವಾಸ್ತವಾಂಶದ ಯಾವುದೇ ಹೇಳಿಕೆ ಯಾವೊಬ್ಬ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡತೆಯ ಸಂಬಂಧದಲ್ಲಿ ಅಥವಾ ಉಮೇದುವಾರಿಕೆಯ ಸಂಬಂಧದಲ್ಲಿ ಆತನು ಅದು ತಪ್ಪೆಂದು ನಂಬುವುದಾಗಲೀ ಅಥವಾ ಸರಿಯೆಂದು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಪ್ರತಿಕೂಲಕ್ಕೆ ಯುಕ್ತವಾಗಿ ಗಣನೆಗೆ ತೆಗೆದುಕೊಂಡ ಹೇಳಿಕೆಯನ್ನು ಪ್ರಕಟಿಸುವುದು;

(ಎಫ್) ಅಭ್ಯರ್ಥಿಯು ಅಥವಾ ಆತನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಮ್ಮತಿಯೊಂದಿಗೆ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ (ಸ್ವತಃ ಅಭ್ಯರ್ಥಿ ಮತ್ತು ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾರೇ ಮತದಾರನನ್ನು ಯಾವುದೇ ಮತದಾನ ಕೇಂದ್ರಕ್ಕೆ ಕರೆತರುವುದಕ್ಕಾಗಿ ಅಥವಾ ಆ ಮತದಾನ ಕೇಂದ್ರದಿಂದ ಕರೆದೊಯ್ಯುವುದಕ್ಕಾಗಿ ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಯಾವುದೇ ವಾಹನವನ್ನು ಬಾಡಿಗೆಗೆ ಪಡೆಯುವುದು ಅಥವಾ ಒದಗಿಸುವುದು:

ಪರಂತು, ಯಾವುದೇ ಅಂಥ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಮತದಾರನು ತನ್ನ ಖರ್ಚಿನಲ್ಲಿ ಅಥವಾ ಅನೇಕ ಮತದಾರರು ತಮ್ಮ ಜಂಟಿ ಖರ್ಚಿನಲ್ಲಿ ವಾಹನವನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆಗೆ ಪಡೆದುಕೊಂಡ ವಾಹನವು ಯಂತ್ರಚಾಲಿತ ವಾಹನವಾಗಿರದಿದ್ದರೆ, ಈ ಖಂಡದ ಮೇರೆಗೆ ಅದನ್ನು ಭ್ರಷ್ಟ ಆಚರಣೆ ಎಂದು ಭಾವಿಸತಕ್ಕದ್ದಲ್ಲ:

ಮತ್ತು ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾರೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನವನ್ನು ಅಥವಾ ಯಾವುದೇ ರೈಲ್ವೆ ಬೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟ ಆಚರಣೆ ಎಂದು ಭಾವಿಸತಕ್ಕದ್ದಲ್ಲ;

ವಿವರಣೆ.- ಈ ಖಂಡದಲ್ಲಿ 'ವಾಹನ' ಎಂದರೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ, ಅದು ಯಂತ್ರ ಚಾಲಿತವಾದುದಾಗಿರಬಹುದು ಅಥವಾ ಬೇರೆ ರೀತಿಯದ್ದಾಗಿರಬಹುದು ಮತ್ತು ಅದು ಬೇರೆ ವಾಹನವನ್ನು ಎಳೆಯಲು ಉಪಯೋಗಿಸುವಂಥದ್ದಾಗಿರಬಹುದು ಅಥವಾ ಬೇರೆ ರೀತಿಯದ್ದಾಗಿರಬಹುದು.

(ಜಿ) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ, ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಸರ್ಕಾರದ ಸೇವೆಯಲ್ಲಿರುವ ಅಥವಾ ನಗರ ಪಾಲಿಕೆಯ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯಿಂದ ಯಾವುದೇ ನೆರವನ್ನು (ಮತ ನೀಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯು ಪಡೆಯುವುದು ಅಥವಾ ದೊರಕಿಸಿಕೊಳ್ಳುವುದು ಅಥವಾ ದುಷ್ಪ್ರೇರಿಸುವುದು ಅಥವಾ ಪಡೆಯಲು ಅಥವಾ ದೊರಕಿಸಿಕೊಳ್ಳಲು ಪ್ರಯತ್ನಿಸುವುದು;

(ಎಚ್) ಭ್ರಷ್ಟ ಆಚರಣೆ ಎಂದು ನಿಯಮಗಳ ಮೂಲಕ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಪದ್ಧತಿ.

49. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಬೆಳೆಸುವುದು.- ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಭಾರತದ ನಾಗರಿಕರ ವಿವಿಧ ವರ್ಗಗಳ ನಡುವೆ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವ ಅಥವಾ ಬೆಳೆಸಲು ಪ್ರಯತ್ನಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

50. ಚುನಾವಣೆ ಹಿಂದಿನ ಮೊದಲು ಎರಡು ದಿನಗಳು ಹಾಗೂ ಚುನಾವಣೆಯ ದಿನದಂದು ಸಾರ್ವಜನಿಕ ಸಭೆಗಳ ನಿಷೇಧ.- (1) ಯಾವೊಬ್ಬ ವ್ಯಕ್ತಿಯು, ಮತದಾನ ಪ್ರಾರಂಭದ ದಿನಾಂಕದ ಅಥವಾ ಆ ವಾರ್ಡ್‌ನಲ್ಲಿ ಚುನಾವಣೆಗಾಗಿ ಮತದಾನವನ್ನು ಕೈಗೊಂಡ ದಿನ ಅಥವಾ ದಿನಗಳ ಮೊದಲು ನಲವತ್ತೆಂಟು ಗಂಟೆಗಳ ಒಳಗೆ ಯಾವುದೇ ವಾರ್ಡ್‌ನೊಳಗೆ ಯಾವುದೇ ಸಾರ್ವಜನಿಕ ಸಭೆಯನ್ನು ಕರೆಯತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ಅದಕ್ಕೆ ಹಾಜರಾಗತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

51. ಚುನಾವಣಾ ಸಭೆಗಳಲ್ಲಿ ಗಲಭೆಗಳು.- (1) ಈ ಪ್ರಕರಣವು ಅನ್ವಯವಾಗುವ ಸಾರ್ವಜನಿಕ ಸಭೆಯಲ್ಲಿ, ಯಾವೊಬ್ಬ ವ್ಯಕ್ತಿಯು, ಯಾವ ಕಾರ್ಯಕಲಾಪಗಳ ವ್ಯವಹಾರಕ್ಕಾಗಿ ಸಭೆಯನ್ನು ಕರೆಯಲಾಗಿದೆಯೋ ಅದನ್ನು ತಡೆಗಟ್ಟುವ ಉದ್ದೇಶಕ್ಕಾಗಿ, ಅವ್ಯವಸ್ಥಿತವಾದ ರೀತಿಯಲ್ಲಿ ವರ್ತಿಸುವನೋ ಅಥವಾ ಇತರರಿಗೆ ಹಾಗೆ ವರ್ತಿಸಲು ಪ್ರಚೋದಿಸುವನೋ, ಆತನು,

ಅಪರಾಧ ನಿರ್ಣೀತನಾದ ಮೇಲೆ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣವು, **ನಗರ** ಪಾಲಿಕೆ ಸದಸ್ಯ ಅಥವಾ **ನಗರ** ಪಾಲಿಕೆ ಸದಸ್ಯರನ್ನು ಚುನಾಯಿಸಲು ಮತದಾನದ ದಿನಾಂಕವನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ ದಿನ ಮತ್ತು ಚುನಾವಣೆಯು ನಡೆಯುವ ದಿನದ ನಡುವೆ ಯಾವುದೇ ವಾರ್ಡ್‌ನಲ್ಲಿ ನಡೆಸುವ ನಗರ ಪಾಲಿಕೆಯ ಚುನಾವಣೆಗಳಿಗೆ ಸಂಬಂಧಿಸಿದ ಯಾವುದೇ ಸಾರ್ಜಜನಿಕ ಸಭೆಗೆ ಅನ್ವಯಿಸುತ್ತದೆ.

(3) ಯಾವೊಬ್ಬ ಪೊಲೀಸ್ ಅಧಿಕಾರಿಯು, (1)ನೇ ಉಪಪ್ರಕಣದ ಅಡಿಯಲ್ಲಿನ ಅಪರಾಧವನ್ನು ಎಸಗಿದ್ದಾನೆಂದು ಯಾವೊಬ್ಬ ವ್ಯಕ್ತಿಯನ್ನು ಯುಕ್ತವಾಗಿ ಸಂದೇಹಿಸಿದಲ್ಲಿ, ಆತನು, ಸಭೆಯ ಅಧ್ಯಕ್ಷನನ್ನು ಹಾಗೆ ಮಾಡಬೇಕೆಂದು ಕೋರಿದಲ್ಲಿ, ಆ ವ್ಯಕ್ತಿಯನ್ನು ಆತನ ಹೆಸರು ಮತ್ತು ವಿಳಾಸವನ್ನು ತನಗೆ ತಕ್ಷಣವೇ ಘೋಷಿಸಬೇಕೆಂದು ಅಗತ್ಯಪಡಿಸಬಹುದು, ಆ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಘೋಷಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಅಥವಾ ತಪ್ಪು ಹೆಸರು ಅಥವಾ ವಿಳಾಸವನ್ನು ನೀಡಿದ್ದಾನೆಂದು ಆತನನ್ನು ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಿಸಿದರೆ, ಪೊಲೀಸ್ ಅಧಿಕಾರಿಯು ಆತನನ್ನು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

52. ಕರಪತ್ರಗಳು, ಪೋಸ್ಟರುಗಳು ಮತ್ತು ಇತರೆಗಳನ್ನು ಮುದ್ರಿಸುವುದರ ಮೇಲೆ ನಿರ್ಬಂಧಗಳು.- (1) ಯಾವೊಬ್ಬ ವ್ಯಕ್ತಿಯು, ಮುದ್ರಕನ ಮತ್ತು ಪ್ರಕಾಶನದ ಹೆಸರುಗಳು ಮತ್ತು ವಿಳಾಸಗಳನ್ನು **ಅದರ** ಮುಖಪುಟದ ಮೇಲೆ ಹೊಂದಿಲ್ಲದ ಯಾವುದೇ ಚುನಾವಣಾ ಕರಪತ್ರ ಅಥವಾ ಪೋಸ್ಟರ್ ಅನ್ನು ಮುದ್ರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯು, ತಾನು ಸಹಿ ಮಾಡಿದ ಮತ್ತು ತನ್ನನ್ನು ವೈಯಕ್ತಿಕವಾಗಿ ಬಲ್ಲ ಇಬ್ಬರು ವ್ಯಕ್ತಿಗಳು ದೃಢೀಕರಿಸಿದ ಅದರ ಪ್ರಕಾಶಕನ ಗುರುತಿಸುವ ಘೋಷಣೆಯನ್ನು ಮುದ್ರಕನಿಗೆ ದ್ವಿಪ್ರತಿಯಲ್ಲಿ ನೀಡಿದ ಹೊರತು, ಯಾವುದೇ ಚುನಾವಣಾ ಕರಪತ್ರ ಅಥವಾ ಪೋಸ್ಟರ್ ಅನ್ನು ಮುದ್ರಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

53. ರಹಸ್ಯ ಮತದಾನದ ನಿರ್ವಹಣೆ.- (1) ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಯಲ್ಲಿ ಮತಗಳನ್ನು ದಾಖಲಿಸುವುದು ಅಥವಾ ಎಣಿಕೆ ಮಾಡುವುದರ ಸಂಬಂಧದಲ್ಲಿ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಯಾವೊಬ್ಬ ಅಧಿಕಾರಿ, ನೌಕರ, ಏಜೆಂಟ್ ಅಥವಾ ಇತರ ವ್ಯಕ್ತಿಯು ರಹಸ್ಯ ಮತದಾನವನ್ನು ನಿರ್ವಹಿಸತಕ್ಕದ್ದು ಮತ್ತು ನಿರ್ವಹಿಸುವಲ್ಲಿ ನೆರವು ನೀಡತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಅಧಿಕೃತಗೊಳಿಸಿದ ಕೆಲವು ಉದ್ದೇಶಕ್ಕಾಗಿ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸುವುದನ್ನು ಹೊರತುಪಡಿಸಿ, ಅಂಥ ರಹಸ್ಯವನ್ನು ಉಲ್ಲಂಘಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

54. ಮತಗಟ್ಟೆಗಳಲ್ಲಿ ಅಥವಾ ಅವುಗಳ ಹತ್ತಿರ ಪ್ರಚಾರ ಮಾಡುವುದರ ಮೇಲೆ ನಿಷೇಧ.- (1) ಯಾವೊಬ್ಬ ವ್ಯಕ್ತಿಯು, ಯಾವುದೇ ಮತಗಟ್ಟೆಯಲ್ಲಿ ಮತದಾನ ನಡೆಯುವ ದಿನ ಅಥವಾ ದಿನಗಳಂದು, ಮತಗಟ್ಟೆಯಲ್ಲಿ ಅಥವಾ ಮತಗಟ್ಟೆಯ ಒಂದು ನೂರು ಮೀಟರುಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಮುಂದಿನ ಯಾವುದೇ ಕೃತ್ಯಗಳನ್ನು ಎಸಗತಕ್ಕದ್ದಲ್ಲ, ಎಂದರೆ:-

(ಎ) ಮತಗಳಿಗಾಗಿ ಪ್ರಚಾರಮಾಡುವುದು; ಅಥವಾ

(ಬಿ) ಯಾರೇ ಮತದಾರನ ಮತವನ್ನು ಕೋರುವುದು; ಅಥವಾ

(ಸಿ) ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತಹಾಕದಂತೆ ಯಾವೊಬ್ಬ ಮತದಾರನನ್ನು ಪುಸಲಾಯಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತಹಾಕದಿರುವಂತೆ ಯಾವೊಬ್ಬ ಮತದಾರನನ್ನು ಪುಸಲಾಯಿಸುವುದು; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಸರ್ಕಾರಿ ನೋಟೀಸನ್ನು ಹೊರತುಪಡಿಸಿ) ಯಾವುದೇ ನೋಟೀಸು ಅಥವಾ ಸಂಕೇತವನ್ನು ಪ್ರದರ್ಶಿಸುವುದು.

(2) ಉಪಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

55. ಮತಗಟ್ಟೆ ಅಥವಾ ಅದರ ಹತ್ತಿರದಲ್ಲಿ ಅನುಚಿತ ನಡತೆಗಾಗಿ ದಂಡ.- (1) ಯಾರೇ ವ್ಯಕ್ತಿಯು, ಯಾವುದೇ ಮತಗಟ್ಟೆಯಲ್ಲಿ ಮತದಾನವು ನಡೆಯುವ ದಿನ ಅಥವಾ ದಿನಗಳಂದು.-

(ಎ) ಮತಗಟ್ಟೆಯೊಳಗೆ ಅಥವಾ ಪ್ರವೇಶಿಸುವಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ, ಮೆಗಾಫೋನ್ ಅಥವಾ ಧ್ವನಿವರ್ಧಕಗಳಿಂದ ಮಾನವ ಧ್ವನಿಯನ್ನು ಹೆಚ್ಚಿಸುವ ಅಥವಾ ಮತ್ತೆ ಕೇಳಿಸುವಂಥ ಯಾವುದೇ ಸಲಕರಣೆಯನ್ನು ಬಳಸತಕ್ಕದ್ದಲ್ಲ ಅಥವಾ ಕಾರ್ಯಾಚರಣೆ (operate) ಮಾಡತಕ್ಕದ್ದಲ್ಲ; ಅಥವಾ

(ಬಿ) ಮತಗಟ್ಟೆಯೊಳಗೆ ಅಥವಾ ಮತಗಟ್ಟೆಯ ಪ್ರವೇಶದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ, ಮತದಾನಕ್ಕಾಗಿ ಮತಗಟ್ಟೆಗೆ ಬರುವ ಯಾರೇ ವ್ಯಕ್ತಿಗೆ ತೊಂದರೆ ಉಂಟುಮಾಡುವಂತೆ ಅಥವಾ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಇತರ ವ್ಯಕ್ತಿಯ ಕೆಲಸದಲ್ಲಿ ಹಸ್ತಕ್ಷೇಪ ಮಾಡುವಂತೆ, ಅರಚುವುದು ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ;

(2) ಉಪಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘನೆ ಮಾಡುವ ಅಥವಾ ಉದ್ದೇಶಪೂರ್ವಕವಾಗಿ ಉಲ್ಲಂಘನೆಗೆ ನೆರವಾಗುವ ಅಥವಾ ದುಷ್ಪ್ರೇರಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(3) ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯು, ಈ ಪ್ರಕರಣದಡಿ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಎಸಗುತ್ತಿದ್ದಾನೆ ಅಥವಾ ಎಸಗಿದ್ದಾನೆ ಎಂದು ನಂಬಲು ಕಾರಣವಿದ್ದಲ್ಲಿ, ಆತನು ಪೊಲೀಸ್ ಅಧಿಕಾರಿಗೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ನಿರ್ದೇಶಿಸಬಹುದು ಮತ್ತು ಅದರ ಮೇರೆಗೆ ಪೊಲೀಸ್ ಅಧಿಕಾರಿಯು ಆತನನ್ನು ದಸ್ತಗಿರಿ ಮಾಡತಕ್ಕದ್ದು. ಯಾರೇ ಪೊಲೀಸ್ ಅಧಿಕಾರಿಯು, (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯಕವಾಗಬಹುದಾದ ಯಾವುದೇ ಅಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಅಂಥ ಬಲವನ್ನು (Force) ಬಳಸಬಹುದು ಹಾಗೂ ಅಂಥ ಉಲ್ಲಂಘನೆಗಾಗಿ ಬಳಸಲಾದ ಸಲಕರಣೆಗಳನ್ನು ವಶಪಡಿಸಿಕೊಳ್ಳಬಹುದು.

56. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನು ಬಾಹಿರವಾಗಿ ಬಾಡಿಗೆಗೆ ಪಡೆಯುವುದಕ್ಕೆ ಅಥವಾ ಪಡೆದು ಒದಗಿಸುವುದಕ್ಕಾಗಿ ದಂಡನೆ.- ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ 48ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು ಅಪರಾಧ

ನಿರ್ಣೀತನಾದ ಮೇಲೆ, ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

57. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರೀ ಕರ್ತವ್ಯದ ಉಲ್ಲಂಘನೆಗಳು.- (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ ತನ್ನ ಸರ್ಕಾರಿ ಕರ್ತವ್ಯವನ್ನು ಉಲ್ಲಂಘಿಸಿ ಯಾವುದೇ ಕೃತ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ ಅಪರಾಧ ನಿರ್ಣೀತನಾದ ಮೇಲೆ ಅವನು ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮೇಲೆ ಹೇಳಿರುವ ಯಾವುದೇ ಅಂಥ ಕಾರ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದಂತೆ **ಹಾನಿ ಪರಿಹಾರಕ್ಕಾಗಿ** ಅಂಥ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು ಯಾರೆಂದರೆ, ರಿಟರ್ನಿಂಗ್ ಆಫೀಸರ್, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್, ಪ್ರಿಸೈಂಡಿಂಗ್ ಆಫೀಸರ್‌ಗಳು, ಪೋಲಿಂಗ್ ಆಫೀಸರುಗಳು ಮತ್ತು ಚುನಾವಣೆಯಲ್ಲಿ ಅಭ್ಯರ್ಥಿಯ ನಾಮಪತ್ರಗಳನ್ನು ಸ್ವೀಕರಿಸುವುದಕ್ಕೆ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡ ಯಾರೇ ಇತರ ವ್ಯಕ್ತಿ; ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು, ಆದರೆ ಅದು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

58. ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು.- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ನಗರ ಪಾಲಿಕೆ ಸದಸ್ಯರುಗಳ ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನೇಮಕಗೊಂಡ ರಿಟರ್ನಿಂಗ್ ಆಫೀಸರ್, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಪೋಲಿಂಗ್ ಆಫೀಸರ್ ಮತ್ತು ಇತರ ಯಾರೇ ಅಧಿಕಾರಿಯು ಮತ್ತು ಸರ್ಕಾರವು ತತ್ಕಾಲಕ್ಕೆ ನೇಮಿಸಿದ ಯಾರೇ ಪೊಲೀಸು ಅಧಿಕಾರಿಯು ಅಂಥ ಚುನಾವಣೆಯನ್ನು ನಡೆಸುವುದಕ್ಕೆ ಕರೆ ನೀಡುವ ಅಧಿಸೂಚನೆಯ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಾರಂಭವಾಗುವ ಮತ್ತು ಅಂಥ ಚುನಾವಣೆಯ ಫಲಿತಾಂಶಗಳನ್ನು ಘೋಷಿಸಿದ ದಿನಾಂಕದೊಂದಿಗೆ ಮುಕ್ತಾಯವಾಗುವ ಅವಧಿಗೆ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅಂಥ ಅಧಿಕಾರಿಯು ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣಕ್ಕೆ, ಅಧೀಕ್ಷಣೆಗೆ ಮತ್ತು ಶಿಸ್ತಿಗೆ ಒಳಪಟ್ಟಿರತಕ್ಕದ್ದು.

59. ಸರ್ಕಾರಿ ನೌಕರನು, ಚುನಾವಣಾ ಏಜೆಂಟನಾಗಿ, ಪೋಲಿಂಗ್ ಏಜೆಂಟನಾಗಿ ಅಥವಾ ಎಣಿಕೆ ಏಜೆಂಟನಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ದಂಡನೆ.- ಸರ್ಕಾರಿ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್‌ನಾಗಿ, ಪೋಲಿಂಗ್ ಏಜೆಂಟ್‌ನಾಗಿ ಅಥವಾ ಎಣಿಕೆ ಏಜೆಂಟನಾಗಿ ಕಾರ್ಯನಿರ್ವಹಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

60. ಮತಗಟ್ಟೆಯಿಂದ ವಿದ್ಯುನ್ಮಾನ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಪರಾಧ.-(1) ಯಾರೇ ವ್ಯಕ್ತಿಯು, ಯಾವುದೇ ಚುನಾವಣೆಯಲ್ಲಿ ಮತಗಟ್ಟೆಯಿಂದ ಹೊರಕ್ಕೆ ವಿದ್ಯುನ್ಮಾನ ಮತಯಂತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವಾದರೆ ಅಥವಾ ದುಷ್ಪ್ರೇರಿಸಿದರೆ, ಅವನು, ಅಪರಾಧ ನಿರ್ಣೀತನಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ

ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್ ನಂಬಲು ಕಾರಣವಿದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಮತಗಟ್ಟೆಯನ್ನು ಬಿಡುವುದಕ್ಕೆ ಮುಂಚೆ ಅವನನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯ ಶೋಧನೆಯನ್ನು ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಯಿಂದ ಅಂಥ ವ್ಯಕ್ತಿಯ ಶೋಧನೆ ಮಾಡಿಸಬಹುದು:

ಪರಂತು, ಮಹಿಳೆಯನ್ನು ಶೋಧನೆ ಮಾಡಿಸುವುದು ಅವಶ್ಯವಿರುವಾಗ, ಆ ಶೋಧನೆಯನ್ನು, ಸಭ್ಯತೆಗೆ ಕಟ್ಟುನಿಟ್ಟಾಗಿ ಗಮನ ನೀಡಿ ಮತ್ತೊಬ್ಬ ಮಹಿಳೆಯಿಂದ ಮಾಡಿಸತಕ್ಕದ್ದು.

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ವಿದ್ಯುನ್ಮಾನ ಮತಯಂತ್ರವನ್ನು ಪ್ರಿಸೈಡಿಂಗ್ ಆಫೀಸರ್, ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಆ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗಿನ ದಂಡನೀಯ ಅಪರಾಧವು ಸಂಜ್ಞೇಯವಾದುದಾಗಿರತಕ್ಕದ್ದು.

ವಿವರಣೆ: ಈ ಅಧ್ಯಾಯದಲ್ಲಿ ವಿದ್ಯುನ್ಮಾನ ಮತದಾನ ಯಂತ್ರದ ಬಗ್ಗೆ ಮಾಡಿದ ಉಲ್ಲೇಖವನ್ನು ರಾಜ್ಯ ಚುನಾವಣಾ ಆಯೋಗವು ಮತಪತ್ರ/ಮತಪೆಟ್ಟಿಗೆ ಮೂಲಕ ಎಲ್ಲಿ ಚುನಾವಣೆಗಳನ್ನು ನಡೆಸುವುದೋ ಅಲ್ಲೆಲ್ಲಾ ಮತಪತ್ರಕ್ಕೆ/ಮತಪೆಟ್ಟಿಗೆ ಬಗ್ಗೆ ಮಾಡಿದ ಉಲ್ಲೇಖ ಎಂಬುದಾಗಿ ಸಹ ಅರ್ಥೈಸಿಕೊಳ್ಳತಕ್ಕದ್ದು.

61. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು.- (1) ಯಾರೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ರಿಟರ್ನಿಂಗ್ ಆಫೀಸರ್ ಅಧಿಕಾರದ ಮೂಲಕ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿಯನ್ನು ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ **ವಿದ್ಯುನ್ಮಾನ** ಮತಯಂತ್ರವನ್ನು ಅಥವಾ ಯಾವುದೇ **ವಿದ್ಯುನ್ಮಾನ** ಮತಯಂತ್ರದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಗೆ ಯಾವುದೇ **ವಿದ್ಯುನ್ಮಾನ** ಮತಯಂತ್ರವನ್ನು ಒದಗಿಸಿದರೆ ಅಥವಾ ಯಾರೇ ವ್ಯಕ್ತಿಯಿಂದ ಯಾವುದೇ **ವಿದ್ಯುನ್ಮಾನ** ಮತಯಂತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಅಥವಾ ಮತಯಂತ್ರವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

(ಇ) ಆತನಿಗೆ ಕಾನೂನಿನ ಮೂಲಕ ಮತಹಾಕಲು ಅಧಿಕೃತಗೊಳಿಸಿದ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಮತ್ತು ಮತದಾರನು ತಾಳೆ ನೋಡಬಹುದಾದ ಕಾಗದ ತಾಳೆ ದರ್ಶಕ ಯಂತ್ರ (ವಿ.ವಿ ಪ್ಯಾಟ್)ಗಳನ್ನು ಹೊರತುಪಡಿಸಿದಂತೆ ಏನನ್ನಾದರೂ ಯಾವುದೇ ವಿದ್ಯುನ್ಮಾನ ಮತಯಂತ್ರದೊಳಗೆ ಮೋಸದಿಂದ ಹಾಕಿದರೆ; ಅಥವಾ

(ಎಫ್) ಸೂಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿದ್ದ ಯಾವುದೇ **ವಿದ್ಯುನ್ಮಾನ** ಮತಯಂತ್ರವನ್ನು ನಾಶಪಡಿಸಿದರೆ,

ತೆಗೆದುಕೊಂಡುಹೋದರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಸೂಕ್ತ ಅಧಿಕಾರವಿಲ್ಲದೆ, ಮೇಲೆ ಹೇಳಿದ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಣೆ ಮಾಡಿದರೆ,

- ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಚುನಾವಣಾ ಅಪರಾಧದ ತಪ್ಪಿತಸ್ಥನಾಗಿರುವ ಯಾರೇ ವ್ಯಕ್ತಿಯು,-

(ಎ) ಅವನು ಮತಗಟ್ಟೆಯಲ್ಲಿ ರಿಟರ್ನಿಂಗ್ ಆಫೀಸರ್ ಅಥವಾ ಅಸಿಸ್ಟಂಟ್ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿದ್ದರೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜಿತನಾದ ಯಾರೇ ಅಧಿಕಾರಿ ಅಥವಾ ಇತರ ವ್ಯಕ್ತಿಯಾಗಿದ್ದರೆ, ಅವನು ಅಪರಾಧ ನಿರ್ಣೀತನಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅವನು ಇತರ ಯಾರೇ ವ್ಯಕ್ತಿಯಾಗಿದ್ದರೆ, ಅಪರಾಧ ನಿರ್ಣೀತನಾದ ಮೇಲೆ ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಕ್ಕಾಗಿ ವ್ಯಕ್ತಿಯು ಮತಗಳ ಎಣಿಕೆಯೂ ಒಳಗೊಂಡಂತೆ ಚುನಾವಣೆಯನ್ನು ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಪಾಲ್ಗೊಳ್ಳುವುದು ಅವನ ಕರ್ತವ್ಯವಾಗಿದ್ದರೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಲಾದ ಮತಪತ್ರಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯವೂ ಜವಾಬ್ದಾರನಾಗಿರುವುದು ಅವನ ಕರ್ತವ್ಯವಾಗಿದ್ದರೆ, ಅವನು ಸರ್ಕಾರಿ ಕರ್ತವ್ಯದ ಮೇಲಿರುವನೆಂದು ಭಾವಿಸತಕ್ಕದ್ದು, ಆದರೆ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ, "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) ಉಪಪ್ರಕರಣ (2)ರ (ಬಿ) ಖಂಡದ ಮೇರೆಗಿನ ದಂಡನೀಯವಾದ ಅಪರಾಧವು ಸಂಜ್ಞೇಯವಾದುದಾಗಿರತಕ್ಕದ್ದು.

62. ಕೆಲವು ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್.- ನಿಯಮಿಸಬಹುದಾದಂಥ ಅಧಿಕಾರಿಯ ಆದೇಶದ ಮೂಲಕ ಅಥವಾ ಅಂಥ ಅಧಿಕಾರಿಯಿಂದ ಪಡೆದ ಅಧಿಕಾರದ ಮೇರೆಗೆ ಮಾಡಿದ್ದ ದೂರು ಇದ್ದ ಹೊರತು, 60ನೇ ಪ್ರಕರಣದ ಮೇರೆಗಿನ ಅಥವಾ 61ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

63. ಮತದಾನದ ಹಕ್ಕು.- ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಯಾವ **ವಾರ್ಡಿಗೆ** ಅಂಥ ಮತದಾರ ಪಟ್ಟಿಯು ಸಂಬಂಧಪಟ್ಟಿರುತ್ತದೋ, ಆ **ವಾರ್ಡಿಗೆ** ನಡೆಯುವ **ನಗರಪಾಲಿಕೆ ಸದಸ್ಯರ** ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹನಾಗಿರತಕ್ಕದ್ದು.

64. ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅದರ ಗರಿಷ್ಠ ಮಿತಿ.- (1) ಈ ಅಧಿನಿಯಮದ ಮೇರೆಗೆ, ಚುನಾವಣಾ ಕಣದಲ್ಲಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಅವನು ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾದ ದಿನಾಂಕ ಮತ್ತು ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕ ಎರಡೂ ದಿನಗಳು ಸೇರಿ, ಇವುಗಳ ನಡುವಣ ಅವಧಿಯಲ್ಲಿ, ಅವನು ಅಥವಾ ಅವನ ಚುನಾವಣಾ ಏಜೆಂಟನು ಭರಿಸಿದ ಅಥವಾ ಅಧಿಕೃತಗೊಳಿಸಿದ, ಚುನಾವಣೆಗೆ ಸಂಬಂಧಿತ ಎಲ್ಲಾ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು

ಸರಿಯಾದ ಲೆಕ್ಕವನ್ನು ಸ್ವತ: ತಾನಾಗಲೀ ಅಥವಾ ಆತನ ಚುನಾವಣಾ ಏಜೆಂಟನಾಗಲೀ ಇಡತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದಂತೆ ಒಂದು ರಾಜಕೀಯ ಪಕ್ಷವು ಅಥವಾ ಇತರ ಯಾವುದೇ ಸಂಘವು ಅಥವಾ ನಿಕಾಯವು ಅಥವಾ ವ್ಯಕ್ತಿಗಳು ಅಥವಾ ಯಾರೇ ವ್ಯಕ್ತಿಯು (ಅಭ್ಯರ್ಥಿಯನ್ನು ಅಥವಾ ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಅಧಿಕೃತಗೊಳಿಸಿದ ಯಾವುದೇ ವೆಚ್ಚವನ್ನು (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, ಚುನಾವಣೆಗೆ ಸಂಬಂಧಿಸಿದಂತೆ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

ವಿವರಣೆ 1.- ಈ ಉಪಪ್ರಕರಣದ ಉದ್ದೇಶಕ್ಕಾಗಿ ``ರಾಜಕೀಯ ಪಕ್ಷ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಚಿಹ್ನೆಗಳ (ಮೀಸಲು ಮತ್ತು ಹಂಚಿಕೆ) ಆದೇಶ, 1968ರಲ್ಲಿ ಇರುವ ಅರ್ಥವನ್ನೇ ಹೊಂದಿರತಕ್ಕದ್ದು.

ವಿವರಣೆ 2.- ಸಂದೇಹಗಳ ನಿವಾರಣೆಗಾಗಿ, ಯಾರೇ ಅಭ್ಯರ್ಥಿಗಾಗಿ ಅಥವಾ ಅವನ ಚುನಾವಣಾ ಏಜೆಂಟನಿಗಾಗಿ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಒಪ್ಪಿಗೆ ಪಡೆದು ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಗಾಗಿ (ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಆಗಲಿ ಅಥವಾ ಯಾವುದೇ ಇತರ ಕಾರಣದಿಂದಾಗಿ ಆಗಲಿ) ಅಥವಾ ಅವನಿಗೆ ಅಥವಾ ಅವನ ಸಲುವಾಗಿ ಸರ್ಕಾರದ ಸೇವೆಯಲ್ಲಿರುವ ಅಥವಾ **ನಗರ** ಪಾಲಿಕೆ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ತನ್ನ ಅಧಿಕೃತ ಕರ್ತವ್ಯದ ನಿರ್ವಹಣೆಯಲ್ಲಿ ಅಥವಾ ಕರ್ತವ್ಯ ನಿರ್ವಹಣೆಯಲ್ಲಿರುವನೆಂದು ತಾತ್ಪರ್ಯವಾಗುವಲ್ಲಿ ಅವನು ಮಾಡಿದ ಯಾವುದೇ ಏರ್ಪಾಡಿಗೆ, ಒದಗಿಸಿದ ಸೌಲಭ್ಯಗಳಿಗೆ ಅಥವಾ ಮಾಡಿದ ಇತರ ಯಾವುದೇ ಕೃತ್ಯಕ್ಕೆ ಅಥವಾ ಕಾರ್ಯಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ವೆಚ್ಚವನ್ನು ಈ ಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿದ ಅಥವಾ ಅಧಿಕೃತಗೊಳಿಸಿದ ಚುನಾವಣೆಗೆ ಸಂಬಂಧಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಗಳು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ವೆಚ್ಚದ ಒಟ್ಟು ಮೊತ್ತವು, ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕದ್ದಲ್ಲ.

65. ಚುನಾವಣಾ ಅಧಿಕಾರಿಗೆ ಲೆಕ್ಕವನ್ನು ಸಲ್ಲಿಸುವುದು.- ಈ ಅಧಿನಿಯಮದ ಮೇರೆಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, **ಚುನಾಯಿತ** ಅಭ್ಯರ್ಥಿಯ ಚುನಾವಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಥವಾ ಚುನಾವಣೆಯಲ್ಲಿ ಒಬ್ಬರಿಗಿಂತ ಹೆಚ್ಚು **ಚುನಾಯಿತ** ಅಭ್ಯರ್ಥಿಗಳಿದ್ದರೆ ಮತ್ತು ಚುನಾವಣೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳ ಪೈಕಿ, ತರುವಾಯದ ದಿನಾಂಕದಿಂದ, ಮೂವತ್ತು ದಿನಗಳೊಳಗೆ ತಾನು ಅಥವಾ ತನ್ನ ಚುನಾವಣಾ ಏಜೆಂಟನು ಇಟ್ಟಿರುವ ಲೆಕ್ಕದ ಒಂದು ಯಥಾ ಪ್ರತಿಯಾಗಿರುವ ತನ್ನ ಚುನಾವಣೆಯ ವೆಚ್ಚದ ಲೆಕ್ಕವನ್ನು ಈ ಅಧಿನಿಯಮದ ಮೇರೆಗೆ ಚುನಾವಣೆಗಾಗಿ ನೇಮಕಗೊಂಡ ಚುನಾವಣಾ ಅಧಿಕಾರಿಗೆ ಸಲ್ಲಿಸತಕ್ಕದ್ದು.

66. ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲವಾಗುವುದು.- ಯಾರೇ ವ್ಯಕ್ತಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ಅಗತ್ಯಪಡಿಸಿದ ಸಮಯದೊಳಗೆ ಮತ್ತು ವಿಧಾನದಲ್ಲಿ, ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗಿರುವನೆಂದು; ಮತ್ತು

(ಬಿ) ಹಾಗೆ ಸಲ್ಲಿಸಲು ವಿಫಲನಾದುದಕ್ಕೆ ಯಾವುದೇ ಯುಕ್ತ ಕಾರಣ ಅಥವಾ ಸಮರ್ಥನೆ ಇಲ್ಲವೆಂದು,

- ರಾಜ್ಯ ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ರಾಜ್ಯ ಚುನಾವಣಾ ಆಯೋಗವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಅವನನ್ನು ಅನರ್ಹನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾರೇ ವ್ಯಕ್ತಿಯು, ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅನರ್ಹನಾಗಿರತಕ್ಕದ್ದು.

67. ಚುನಾವಣೆಗಳಲ್ಲಿ ಮತಯಂತ್ರಗಳು.- ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಮತಯಂತ್ರಗಳ ಮೂಲಕ ಮತಗಳನ್ನು ನೀಡುವುದನ್ನು ಅಥವಾ ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ 'ಮತಯಂತ್ರ' ಎಂದರೆ, ಮತಗಳನ್ನು ನೀಡುವುದಕ್ಕಾಗಿ ಅಥವಾ ದಾಖಲಿಸುವುದಕ್ಕಾಗಿ ಬಳಸುವ, ವಿದ್ಯುನ್ಮಾನದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲೀ ನಿರ್ವಹಿಸಲಾಗುವ, ಯಾವುದೇ ಯಂತ್ರ ಅಥವಾ ಉಪಕರಣ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತಪೆಟ್ಟಿಗೆಗೆ ಅಥವಾ ಮತಪತ್ರಕ್ಕೆ ಮಾಡಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರವನ್ನು ಬಳಸುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಮಾಡಲಾದ ಉಲ್ಲೇಖವನ್ನು ಒಳಗೊಳ್ಳುವುದಾಗಿ ಅರ್ಥೈಸತಕ್ಕದ್ದು.

68. ಚುನಾವಣಾ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸುವ ಸರ್ಕಾರದ ಅಧಿಕಾರ.-

ನಗರಪಾಲಿಕೆ ಸದಸ್ಯರು, ಮಹಾಪೌರ, ಉಪ-ಮಹಾಪೌರ ಮತ್ತು ಸ್ಥಾಯಿ ಸಮಿತಿಯ ಅಧ್ಯಕ್ಷರ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಎಲ್ಲಾ ಅಥವಾ ಯಾವುದೇ ವಿಷಯಗಳನ್ನು ನಿಯಂತ್ರಿಸಲು ಅಂಥ ನಿಯಮಗಳು ಅಥವಾ ವಿನಿಯಮಗಳನ್ನು ಸರ್ಕಾರವು ನಿಯಮಿಸಬಹುದು.

69. ಏಕಕಾಲಿಕ ಸದಸ್ಯತ್ವದ ನಿಷೇಧ.- (1) ಒಬ್ಬ ವ್ಯಕ್ತಿಯು, ನಗರಪಾಲಿಕೆಯಲ್ಲಿ ಒಂದಕ್ಕಿಂತ ಹೆಚ್ಚಿನ ವಾರ್ಡ್‌ಗಳಿಗೆ ಚುನಾಯಿತನಾಗಿದ್ದರೆ, ಅಂಥ ಚುನಾವಣೆಗಳ ಕೊನೆಯ ದಿನಾಂಕದಿಂದ ಮೂರು ದಿನಗಳೊಳಗಾಗಿ ತಾನು ಸಹಿ ಮಾಡಿರುವ ಲಿಖಿತ ನೋಟೀಸನ್ನು ಆಯುಕ್ತರಿಗೆ ತಲುಪಿಸುವ ಮೂಲಕ ಅವನು ಯಾವ ವಾರ್ಡ್‌ನಿಂದ ಸೇವೆ ಸಲ್ಲಿಸಲು ಆಯ್ಕೆ ಮಾಡಿಕೊಳ್ಳುವನೋ ಆ ವಾರ್ಡನ್ನು ತಿಳಿಸತಕ್ಕದ್ದು ಮತ್ತು ಆ ಆಯ್ಕೆಯು ಅಂತಿಮವಾದುದಾಗಿರತಕ್ಕದ್ದು.

(2) ಅಭ್ಯರ್ಥಿಯು ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಆಯ್ಕೆಯನ್ನು ಮಾಡದಿದ್ದರೆ, ಒಂದೇ ನಗರ ಪಾಲಿಕೆಯೊಳಗಿನ ಒಂದಕ್ಕಿಂತ ಹೆಚ್ಚು ವಾರ್ಡ್‌ಗಳಿಂದ ಅಭ್ಯರ್ಥಿಯು ಚುನಾಯಿತನಾದ ಸಂದರ್ಭದಲ್ಲಿ ಆಯುಕ್ತರು, ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು ಮತ್ತು ಅಂಥ ಅಭ್ಯರ್ಥಿಯು ಸೇವೆ **ಸಲ್ಲಿಸತಕ್ಕ** ಆ ಒಂದು ವಾರ್ಡನ್ನು ಅಧಿಸೂಚಿಸತಕ್ಕದ್ದು.

(3) ಸದರಿ ವ್ಯಕ್ತಿಯು ಹಾಗೆ ಆಯ್ಕೆ ಮಾಡಿಕೊಂಡ ಅಥವಾ ಸಂದರ್ಭಾನುಸಾರ, ಅಧಿಸೂಚಿಸಿದ ವಾರ್ಡಿನ ಸ್ಥಾನಕ್ಕಾಗಿ ಮಾತ್ರವೇ ಚುನಾಯಿತನಾಗಿರುವನೆಂದು ಭಾವಿಸತಕ್ಕದ್ದು ಮತ್ತು ಅದರಿಂದ ತೆರವಾಗುವ ಇತರ ಸ್ಥಾನ ಅಥವಾ ಸ್ಥಾನಗಳಿಗೆ ಹೊಸದಾಗಿ ಚುನಾವಣೆ ನಡೆಸುವ ಮೂಲಕ ಭರ್ತಿ ಮಾಡತಕ್ಕದ್ದು.

(4) ವಾರ್ಡಿನ ಪಾಲಿಕೆ ಸದಸ್ಯನಾಗಿ ಆಯ್ಕೆಯಾದ ವ್ಯಕ್ತಿಯು, ಸಂಸತ್ತಿನ ಯಾವುದೇ ಸದನದ ಅಥವಾ ರಾಜ್ಯ ವಿಧಾನಮಂಡಲದ ಯಾವುದೇ ಸದನದ ಸದಸ್ಯನಾದಲ್ಲಿ ಅಥವಾ ಆಗಿದ್ದಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶವನ್ನು ಹೊರತುಪಡಿಸಿ **ನಗರಸಭೆ** ಸದಸ್ಯ ಅಥವಾ **ನಗರ** ಪಾಲಿಕೆ ಸದಸ್ಯ ಅಥವಾ ಪುರಸಭಾ ಸದಸ್ಯ ಅಥವಾ ಪಟ್ಟಣ ಪಂಚಾಯಿತಿಯ ಸದಸ್ಯ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯ ಆದಲ್ಲಿ ಅಥವಾ ಆಗಿದ್ದಲ್ಲಿ, ಆಗ ಸದಸ್ಯರ ಹೆಸರಿನ ಅಧಿಸೂಚನೆಯ ದಿನಾಂಕದಿಂದ ಹದಿನೈದು ದಿನಗಳ ಅವಧಿಯು ಮುಕ್ತಾಯವಾದಾಗ ಅಥವಾ ಸಂದರ್ಭಾನುಸಾರ, ಸಂಸತ್ತಿನ ಯಾವುದೇ ಸದನದ, ರಾಜ್ಯ ವಿಧಾನಮಂಡಲದ ಯಾವುದೇ ಸದನದ ಸದಸ್ಯನ ಅಥವಾ ಗ್ರೇಟರ್ ಬೆಂಗಳೂರು ಪ್ರದೇಶವನ್ನು ಹೊರತುಪಡಿಸಿ **ನಗರಸಭೆ** ಸದಸ್ಯ ಅಥವಾ **ನಗರ** ಪಾಲಿಕೆ ಸದಸ್ಯ ಅಥವಾ ಪುರಸಭಾ ಸದಸ್ಯ ಅಥವಾ ಪಟ್ಟಣ ಪಂಚಾಯಿತಿಯ ಸದಸ್ಯ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯನ ಪದಾವಧಿಯ ಪ್ರಾರಂಭದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಸಂಸತ್ತಿನ ಯಾವುದೇ ಸದನದ, ರಾಜ್ಯ ವಿಧಾನಮಂಡಲದ ಯಾವುದೇ ಸದನದ ಸದಸ್ಯ, ಗ್ರೇಟರ್ ಬೆಂಗಳೂರು ಪ್ರದೇಶವನ್ನು ಹೊರತುಪಡಿಸಿ **ನಗರಸಭೆ** ಸದಸ್ಯ ಅಥವಾ **ನಗರ**ಪಾಲಿಕೆ ಸದಸ್ಯ ಅಥವಾ ಪುರಸಭಾ ಸದಸ್ಯ ಅಥವಾ ಪಟ್ಟಣ

ಪಂಚಾಯಿತಿಯ ಸದಸ್ಯ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯ ಅಥವಾ ಸಂದರ್ಭಾನುಸಾರ ತನ್ನ **ಸ್ಥಾನಕ್ಕೆ** ಈ ಹಿಂದೆಯೇ ರಾಜೀನಾಮೆ ನೀಡಿದ್ದ ಹೊರತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಆತನ ಸೀಟು ಖಾಲಿಯಾಗತಕ್ಕದ್ದು.

70. ಚುನಾವಣಾ ಉದ್ದೇಶಗಳಿಗಾಗಿ ಆವರಣಗಳು, ವಾಹನಗಳು, ಇತ್ಯಾದಿಗಳನ್ನು ಕೋರುವುದು.- (1) ಈ ಅಧಿನಿಯಮದ ಅಡಿಯಲ್ಲಿ **ಆಯುಕ್ತನಿಗೆ ಅಥವಾ ನಗರ** ಪಾಲಿಕೆಗೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ರಾಜ್ಯ ಚುನಾವಣಾ ಆಯೋಗವು ಅಧಿಕೃತಗೊಳಿಸಿದ ಅಧಿಕಾರಿಗೆ (ಇದರಲ್ಲಿ ಇನ್ನು ಮುಂದೆ "ಕೋರಿಕೆ ಪ್ರಾಧಿಕಾರಿ" ಎಂದು ಉಲ್ಲೇಖಿಸಿದೆ) ಈ ಅಧಿನಿಯಮದ ಮೇರೆಗೆ ಚುನಾವಣೆಗೆ ಸಂಬಂಧಿಸಿದಂತೆ,-

(ಎ) ಯಾವುದೇ ಆವರಣವು, ಮತಗಟ್ಟೆಯಾಗಿ ಬಳಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆದ ತರುವಾಯ ಮತಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ಬೇಕಾಗಿದೆಯೆಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ; ಅಥವಾ

(ಬಿ) ಯಾವುದೇ ವಾಹನವು, ನೌಕೆಯು ಅಥವಾ ಪ್ರಾಣಿಯು ಯಾವುದೇ ಮತಗಟ್ಟೆಗೆ ಅಥವಾ ಯಾವುದೇ ಮತಗಟ್ಟೆಯಿಂದ ಮತಪೆಟ್ಟಿಗೆಗಳನ್ನು ಸಾಗಿಸುವ ಅಥವಾ ಅಂಥ ಚುನಾವಣೆಯನ್ನು ನಡೆಸುವಾಗ ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸರನ್ನು ಸಾಗಿಸುವ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಯಾರೇ ಅಧಿಕಾರಿಯನ್ನು ಅಥವಾ ಇತರ ವ್ಯಕ್ತಿಯನ್ನು ಸಾಗಿಸುವ ಉದ್ದೇಶಕ್ಕಾಗಿ ಬೇಕಾಗಿದೆ ಎಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ,

- ಕೋರಿಕೆ ಪ್ರಾಧಿಕಾರಿಯು ಲಿಖಿತ ಆದೇಶದ ಮೂಲಕ ಅಂಥ ಆವರಣವನ್ನು ಅಥವಾ ಸಂದರ್ಭಾನುಸಾರ, ಅಂಥ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಒದಗಿಸುವಂತೆ ಕೋರಬಹುದು ಮತ್ತು ಆ ಕೋರಿಕೆಯ ಸಂಬಂಧದಲ್ಲಿ ತನಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಯಾರೇ ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಅಭ್ಯರ್ಥಿ ಅಥವಾ ಅವನ ಏಜೆಂಟನು ಕಾನೂನುಬದ್ಧವಾಗಿ ಉಪಯೋಗಿಸುತ್ತಿರುವಂಥ ಯಾವುದೇ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಅಂಥ ಚುನಾವಣೆಗಳ ಮತದಾನವು ಮುಕ್ತಾಯವಾಗುವವರೆಗೆ ಈ ಉಪ-ಪ್ರಕರಣದ ಮೇರೆಗೆ ಕೋರತಕ್ಕದ್ದಲ್ಲ.

(2) ಕೋರಿಕೆ ಪ್ರಾಧಿಕಾರಿಯು, ಸ್ವತ್ತಿನ ಮಾಲೀಕನಾಗಿರುವುದಾಗಿ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಯಾಗಿರುವುದಾಗಿ ಭಾವಿಸಲಾದ ವ್ಯಕ್ತಿಯ ಹೆಸರಿಗೆ ಹೊರಡಿಸಿದ ಲಿಖಿತ ಆದೇಶದ ಮೂಲಕ ಕೋರಿಕೆಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಆದೇಶವನ್ನು, ಅದನ್ನು ಯಾರ ಹೆಸರಿಗೆ ಹೊರಡಿಸಲಾಗಿದೆಯೋ ಆ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ, ಅಂಥ ಕೋರಿಕೆಯ ಅವಧಿಯನ್ನು, ಆ ಉಪಪ್ರಕರಣದಲ್ಲಿ ತಿಳಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಸ್ವತ್ತು ಯಾವ ಅವಧಿಗೆ ಬೇಕಾಗಿದೆಯೋ ಆ ಅವಧಿಯನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿ,-

(ಎ) "ಆವರಣ" ಎಂದರೆ, ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಗುಡಿಸಲು, ಷೆಡ್ಡು ಅಥವಾ ಇತರ ರಚನೆ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಬಿ) "ವಾಹನ" ಎಂದರೆ, ಯಾಂತ್ರಿಕ ಶಕ್ತಿಯಿಂದ ಅಥವಾ ಅನ್ಯಥಾ ಚಾಲಿತವಾಗುವ ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಬಳಸಲಾಗುವ ಅಥವಾ ಬಳಸಲು ಯೋಗ್ಯವಾದ ಯಾವುದೇ ವಾಹನ.

71. ಪರಿಹಾರ ಸಂದಾಯ.- (1) 70ನೇ ಪ್ರಕರಣದ ಅನುಸಾರವಾಗಿ ಕೋರಿಕೆ ಪ್ರಾಧಿಕಾರಿಯು ಯಾವುದೇ ಆವರಣವನ್ನು ಕೋರಿದಾಗಲೆಲ್ಲಾ, ಸಂಬಂಧಪಟ್ಟ ನಗರ

ಪಾಲಿಕೆಯು, ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಪರಿಹಾರವನ್ನು ಸಂದಾಯ ಮಾಡತಕ್ಕದ್ದು. ಪರಿಹಾರದ ಮೊಬಲಗನ್ನು ಕೋರಿಕೆ ಪ್ರಾಧಿಕಾರಿಯು, ಈ ಕೆಳಕಂಡ ಅಂಶಗಳನ್ನು ಪರ್ಯಾಲೋಚಿಸಿ ನಿರ್ಧರಿಸತಕ್ಕದ್ದು, ಎಂದರೆ:-

(i) ಆವರಣಕ್ಕೆ ಸಂಬಂಧಿಸಿದಲ್ಲಿ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಹಾಗೆ ಸಂದಾಯ ಮಾಡುವುದು ಅಗತ್ಯವಿಲ್ಲದಿದ್ದರೆ, ಆ ಸ್ಥಳದಲ್ಲಿ ಅಂಥದೇ ಆವರಣಕ್ಕೆ ಸಂದಾಯ ಮಾಡಬೇಕಾದ ಬಾಡಿಗೆ;

(ii) ಆವರಣಗಳನ್ನು ಕೋರಿದ ಪರಿಣಾಮವಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಯು ಅವನ ವಾಸಸ್ಥಳವನ್ನು ಅಥವಾ ವ್ಯವಹಾರದ ಸ್ಥಳವನ್ನು ಬಲವಂತವಾಗಿ ಬದಲಾಯಿಸಬೇಕಾಗಿ ಬಂದರೆ, ಅಂಥ ಬದಲಾವಣೆಗೆ ಪ್ರಾಸಂಗಿಕವಾದ ಯುಕ್ತ ವೆಚ್ಚಗಳು, ಯಾವುದಾದರೂ ಇದ್ದರೆ, ಅವುಗಳು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರದ ಮೊಬಲಗಿನಿಂದ ಬಾಧಿತನಾದ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು (1)ನೇ ಉಪ-ಪ್ರಕರಣದ ಮೇರೆಗಿನ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕೋರಿಕೆ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದಾಗ, ಕೋರಿಕೆ ಪ್ರಾಧಿಕಾರಿಯು ಆ ವಿಷಯವನ್ನು ನಿರ್ಧರಣೆಗಾಗಿ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶರು / ಸಿಟಿ ಸಿವಿಲ್ ನ್ಯಾಯಾಧೀಶರಿಗೆ ಒಪ್ಪಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗು ಆ ಸಿವಿಲ್ ನ್ಯಾಯಾಧೀಶರು / ಸಿಟಿ ಸಿವಿಲ್ ನ್ಯಾಯಾಧೀಶರು ನಿರ್ಧರಿಸಬಹುದಾದಂತೆ ಇರತಕ್ಕದ್ದು.

ವಿವರಣೆ.- ಈ ಉಪ-ಪ್ರಕರಣದಲ್ಲಿ "ಹಿತಾಸಕ್ತಿಯುಳ್ಳ ವ್ಯಕ್ತಿ" ಎಂದರೆ, ಕೋರಿಕೆಯ ನಿಕಟಪೂರ್ವದಲ್ಲಿ ಕೋರಿದ ಆವರಣದ ವಾಸ್ತವಿಕ ಸ್ವಾಧೀನತೆಯನ್ನು ಹೊಂದಿದ್ದ ವ್ಯಕ್ತಿ ಅಥವಾ ಯಾರೇ ವ್ಯಕ್ತಿಯು ಅಂಥ ವಾಸ್ತವಿಕ ಸ್ವಾಧೀನತೆಯನ್ನು ಹೊಂದಿಲ್ಲದಿರುವಲ್ಲಿ ಅಂಥ ಆವರಣದ ಮಾಲೀಕ.

(2) 73ನೇ ಪ್ರಕರಣದ ಅನುಸಾರವಾಗಿ ಕೋರಿಕೆ ಪ್ರಾಧಿಕಾರಿಯು ಯಾವುದೇ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಕೋರಿದಾಗಲೆಲ್ಲಾ ನಗರ ಪಾಲಿಕೆಯು ಅದರ ಮಾಲೀಕನಿಗೆ ಪರಿಹಾರವನ್ನು ಸಂದಾಯ ಮಾಡತಕ್ಕದ್ದು, ಕೋರಿಕೆ ಪ್ರಾಧಿಕಾರಿಯು ಪರಿಹಾರದ ಮೊಬಲಗನ್ನು ಅಂಥ ವಾಹನದ, ನೌಕೆಯ ಅಥವಾ ಪ್ರಾಣಿಯ ಬಾಡಿಗೆಗಾಗಿ ಆ ಸ್ಥಳದಲ್ಲಿ ಚಾಲ್ತಿಯಲ್ಲಿರುವ ಬೆಲೆಗಳು ಅಥವಾ ದರಗಳ ಆಧಾರಗಳ ಮೇಲೆ ನಿರ್ಧರಿಸತಕ್ಕದ್ದು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರ ಮೊಬಲಗಿನಿಂದ ಬಾಧಿತನಾದ, ಅಂಥ ವಾಹನದ, ನೌಕೆಯ ಅಥವಾ ಪ್ರಾಣಿಯ ಮಾಲೀಕನು ಕೋರಿಕೆ ಪ್ರಾಧಿಕಾರಿಗೆ ಮೂವತ್ತು ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸುವಲ್ಲಿ, ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶರು / ಸಿಟಿ ಸಿವಿಲ್ ನ್ಯಾಯಾಧೀಶರಿಗೆ ಆ ವಿಷಯವನ್ನು ಒಪ್ಪಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗು ಆ ಸಿವಿಲ್ ನ್ಯಾಯಾಧೀಶರು / ಸಿಟಿ ಸಿವಿಲ್ ನ್ಯಾಯಾಧೀಶರು ನಿರ್ಧರಿಸಬಹುದಾದಂತೆ ಇರತಕ್ಕದ್ದು.

ಮತ್ತು ಪರಂತು, ಕೋರಿಕೆಯ ನಿಕಟಪೂರ್ವದಲ್ಲಿ ವಾಹನವು ಅಥವಾ ನೌಕೆಯು ಕಂತು ಖರೀದಿ ಒಪ್ಪಂದದ ಕಾರಣದಿಂದಾಗಿ ಅದರ ಮಾಲೀಕನಲ್ಲದ ವ್ಯಕ್ತಿಯ ಸ್ವಾಧೀನದಲ್ಲಿ ಇದ್ದಾಗ, ಈ ಉಪ-ಪ್ರಕರಣದ ಮೇರೆಗೆ ಒಟ್ಟು ಪರಿಹಾರವಾಗಿ ನಿರ್ಧರಿಸಿದ ಮೊಬಲಗನ್ನು ಆ ವ್ಯಕ್ತಿಯ ಮತ್ತು ಮಾಲೀಕನ ನಡುವೆ, ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಅವರು ಒಪ್ಪದಿದ್ದರೆ, ಆ ಬಗ್ಗೆ ಕೋರಿಕೆ ಪ್ರಾಧಿಕಾರಿಯು ನೇಮಕ ಮಾಡಿದ ಮಧ್ಯಸ್ಥಗಾರನು ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಹಂಚತಕ್ಕದ್ದು.

72. ಮಾಹಿತಿಯನ್ನು ಪಡೆಯಲು ಅಧಿಕಾರ.- ಕೋರಿಕೆ ಪ್ರಾಧಿಕಾರವು, 70ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕೋರುವ ಅಥವಾ 71ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ, ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಪಟ್ಟಂತೆ ಅವನಲ್ಲಿರುವಂಥ ಮಾಹಿತಿಯನ್ನು ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

73. ಆವರಣಗಳು ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ.- (1) ಕೋರಿಕೆ ಪ್ರಾಧಿಕಾರಿಯು ಈ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯು 70ನೇ ಪ್ರಕರಣದ ಮೇರೆಗೆ ಯಾವುದೇ ಆವರಣಗಳು, ವಾಹನ, ನೌಕೆ ಅಥವಾ ಪ್ರಾಣಿಗೆ ಸಂಬಂಧಪಟ್ಟಂತೆ ಆದೇಶವನ್ನು ಮಾಡಬೇಕೇ ಮತ್ತು ಹಾಗೆ ಮಾಡಬೇಕಾದರೆ ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಆ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಅಂಥ ಯಾವುದೇ ಆವರಣಗಳೊಳಕ್ಕೆ ಪ್ರವೇಶಿಸಬಹುದು ಮತ್ತು ಅಂಥ ಆವರಣಗಳನ್ನು ಮತ್ತು ಅದರಲ್ಲಿರುವ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಪರಿಶೀಲಿಸಬಹುದು.

(2) ಈ ಪ್ರಕರಣದಲ್ಲಿ "ಆವರಣಗಳು" ಮತ್ತು "ವಾಹನ" ಎಂಬ ಪದಗಳು 70ನೇ ಪ್ರಕರಣದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತವೆ.

74. ಕಡ್ಡಾಯವಾಗಿ ಕೋರಿರುವ ಆವರಣಗಳಿಂದ ಹೊರಹಾಕುವುದು.- (1) 70ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ, ಕೋರಿದ ಯಾವುದೇ ಆವರಣದ ಸ್ವಾಧೀನತೆಯನ್ನು ಉಳಿಸಿಕೊಂಡಿರುವ ಯಾರೇ ವ್ಯಕ್ತಿಯನ್ನು, ಈ ಬಗ್ಗೆ ಕೋರಿಕೆ ಪ್ರಾಧಿಕಾರಿಯಿಂದ ಅಧಿಕಾರ ಪಡೆದಿರುವ ಯಾರೇ ಅಧಿಕಾರಿಯು ಆ ಆವರಣದಿಂದ ಕ್ಷಿಪ್ರವಾಗಿ ಹೊರ ಹಾಕಬಹುದು.

(2) ಹಾಗೆ ಅಧಿಕಾರ ಪಡೆದಿರುವ ಯಾರೇ ಅಧಿಕಾರಿಯು ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಯಾರೇ ಮಹಿಳೆಗೆ ಆವರಣವನ್ನು ಬಿಟ್ಟು ಹೋಗಲು ಸೂಕ್ತ ಎಚ್ಚರಿಕೆಯನ್ನು ಮತ್ತು ಸೌಲಭ್ಯವನ್ನು ಕೊಟ್ಟ ತರುವಾಯ, ಯಾವುದೇ ಕಟ್ಟಡದ ಯಾವುದೇ ಬೀಗವನ್ನು ಅಥವಾ ಚಿಲಕವನ್ನು ಕಿತ್ತು ಹಾಕಬಹುದು ಅಥವಾ ತೆರೆಯಬಹುದು ಅಥವಾ ಅದರ ಯಾವುದೇ ಬಾಗಿಲನ್ನು ಒಡೆಯಬಹುದು ಅಥವಾ ಹಾಗೆ ಹೊರಹಾಕುವುದಕ್ಕಾಗಿ ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

75. ಕೋರಿಕೆಯಿಂದ ಆವರಣಗಳ ಬಿಡುಗಡೆ.- (1) 70ನೇ ಪ್ರಕರಣದ ಮೇರೆಗೆ ಕೋರಲಾದ ಯಾವುದೇ ಅವರಣವನ್ನು ಕೋರಿಕೆಯಿಂದ ಬಿಡುಗಡೆ ಮಾಡಬೇಕಾದಾಗ, ಅದರ ಸ್ವಾಧೀನತೆಯನ್ನು, ಆವರಣವನ್ನು ಕೋರಿದ ಸಮಯದಲ್ಲಿ ಯಾರಿಂದ ಅದನ್ನು ಸ್ವಾಧೀನಕ್ಕೆ ಪಡೆಯಲಾಯಿತೋ ಆ ವ್ಯಕ್ತಿಗೆ ಅಥವಾ ಅಂಥ ಯಾರೇ ವ್ಯಕ್ತಿಯು ಇಲ್ಲದಿದ್ದರೆ ಅಂಥ ಆವರಣದ ಮಾಲೀಕನೆಂದು ಕೋರಿಕೆ ಪ್ರಾಧಿಕಾರಿಯು ಭಾವಿಸಿದ ವ್ಯಕ್ತಿಗೆ ವಾಪಸ್ಸು ನೀಡತಕ್ಕದ್ದು ಮತ್ತು ಹಾಗೆ ಸ್ವಾಧೀನತೆಯನ್ನು ವಾಪಸ್ಸು ನೀಡುವುದು, ಹಾಗೆ ವಾಪಸ್ಸು ನೀಡುವುದಕ್ಕೆ ಸಂಬಂಧಿಸಿದಂತೆ ಎಲ್ಲ ಹೊಣೆಗಾರಿಕೆಗಳಿಂದ ಕೋರಿಕೆ ಪ್ರಾಧಿಕಾರಿಯನ್ನು ಪೂರ್ಣವಾಗಿ ವಿಮೋಚನೆಗೊಳಿಸಿದಂಥಾಗತಕ್ಕದ್ದು. ಆದರೆ, ಆ ಆವರಣಗಳ ಸ್ವಾಧೀನತೆಯನ್ನು ಯಾರಿಗೆ ಹಾಗೆ ವಾಪಸ್ಸು ನೀಡಲಾಯಿತೋ ಆ ವ್ಯಕ್ತಿಯ ವಿರುದ್ಧ, ಆವರಣಗಳಿಗೆ ಸಂಬಂಧಿಸಿದ ಯಾವ ಹಕ್ಕುಗಳನ್ನು ಯಾರೇ ಇತರ ವ್ಯಕ್ತಿಯು, ಕಾನೂನಿನ ಯುಕ್ತ ಕ್ರಮದ ಮೂಲಕ ಜಾರಿಗೊಳಿಸಲು ಹಕ್ಕುಳ್ಳವನಾಗಿರಬಹುದೋ ಆ ಯಾವುದೇ ಹಕ್ಕುಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) 70ನೇ ಪ್ರಕರಣದ ಮೇರೆಗೆ ಕೋರಲಾದ ಯಾವುದೇ ಆವರಣದ ಸ್ವಾಧೀನತೆಯನ್ನು (1)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೀಡಬೇಕಾಗಿದೆಯೋ ಆ ವ್ಯಕ್ತಿಯು ಸಿಗದಿರುವಲ್ಲಿ ಅಥವಾ ತಕ್ಷಣಕ್ಕೆ ಅವನ ಬಗ್ಗೆ ಖಚಿತಪಡಿಸಿಕೊಳ್ಳಲು ಆಗದಿರುವಲ್ಲಿ ಅಥವಾ ಅವನ ಪರವಾಗಿ ವಾಪಸು ನೀಡುವುದನ್ನು ಸ್ವೀಕರಿಸಲು ಅಧಿಕಾರ ಪಡೆದ ಯಾರೇ ಏಜೆಂಟನು ಅಥವಾ ಯಾರೇ ಇತರ ವ್ಯಕ್ತಿಯು ಇಲ್ಲದಿರುವಲ್ಲಿ, ಕೋರಿಕೆ ಪ್ರಾಧಿಕಾರಿಯು, ಅಂಥ ಆವರಣವನ್ನು ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ನೋಟೀಸನ್ನು ಅಂಥ ಆವರಣದ ಎದ್ದು ಕಾಣುವ ಭಾಗದಲ್ಲಿ ಮತ್ತು ನಗರ ಪಾಲಿಕೆಯ ಕಚೇರಿಯ ಸೂಚನಾ ಫಲಕದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(3) (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದಂತೆ, ನೋಟೀಸನ್ನು ಸೂಚನಾಫಲಕದ ಮೇಲೆ ಅಂಟಿಸಿದಾಗ, ಅಂಥ ನೋಟಿಸಿನಲ್ಲಿ, ನಿರ್ದಿಷ್ಟಪಡಿಸಿದ ಆವರಣಗಳು, ಆ ನೋಟೀಸನ್ನು ಹಾಗೆ ಅಂಟಿಸಿದ ದಿನಾಂಕದಂದು ಮತ್ತು ದಿನಾಂಕದಂದಿನಿಂದ ಕಡ್ಡಾಯ ಕೋರಿಕೆಗೆ

ಒಳಪಟ್ಟಿರುವುದು ನಿಂತುಹೋಗತಕ್ಕದ್ದು ಮತ್ತು ಅದರ ಸ್ವಾಧೀನತೆಯನ್ನು ಹೊಂದಲು ಹಕ್ಕುಳ್ಳ ವ್ಯಕ್ತಿಗೆ ಅದನ್ನು ವಾಪಸ್ಸು ನೀಡಿರುವುದಾಗಿ ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದ ತರುವಾಯದ ಯಾವುದೇ ಅವಧಿಗೆ ಅಂಥ ಆವರಣಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಹಾರಕ್ಕೆ ಅಥವಾ ಇತರ ಕ್ಲೇಮಿಗಾಗಿ ಕೋರಿಕೆ ಪ್ರಾಧಿಕಾರಿಯು ಅಥವಾ ನಗರ ಪಾಲಿಕೆಯು ಹೊಣೆಯಾಗಿರತಕ್ಕದ್ದಲ್ಲ.

76. ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ.- ಯಾರೇ ವ್ಯಕ್ತಿಯು, 70ನೇ ಪ್ರಕರಣದ ಅಥವಾ 73ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಅಪರಾಧ ನಿರ್ಣೀತನಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಅಧ್ಯಾಯ-VII
ಮಹಾಪೌರ, ಉಪಮಹಾಪೌರ, ಆಯುಕ್ತ, ಸ್ಥಾಯಿ ಸಮಿತಿ, ವಾರ್ಡ್ ಸಮಿತಿ

77. ಮಹಾಪೌರ ಮತ್ತು ಉಪಮಹಾಪೌರ.- ಪ್ರತಿ ನಗರ ಪಾಲಿಕೆಯ ಸದಸ್ಯರು, ಪ್ರತಿ ನಗರ ಪಾಲಿಕೆಯ ಮೊದಲ ಸಭೆಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ತನ್ನ ಕೌನ್ಸಿಲರ್‌ಗಳಲ್ಲಿ ಒಬ್ಬರನ್ನು ನಗರ ಪಾಲಿಕೆಯ ಮಹಾಪೌರರಾಗಿ ಮತ್ತು ಇನ್ನೊಬ್ಬರನ್ನು ಉಪಮಹಾಪೌರರಾಗಿ ಚುನಾಯಿಸತಕ್ಕದ್ದು. ಮಹಾಪೌರ ಅಥವಾ ಉಪಮಹಾಪೌರರ ಪದದಲ್ಲಿ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ ನಗರ ಪಾಲಿಕೆಯು ಅಂಥ ಖಾಲಿ ಸ್ಥಾನವು ಉಂಟಾದ ಒಂದು ತಿಂಗಳೊಳಗೆ ಆ ಸ್ಥಾನಗಳನ್ನು ಭರ್ತಿ ಮಾಡತಕ್ಕದ್ದು.

78. ಮಹಾಪೌರ ಮತ್ತು ಉಪಮಹಾಪೌರನ ಪದಾವಧಿ.-ನಗರ ಪಾಲಿಕೆಯ ಮಹಾಪೌರ ಅಥವಾ ಉಪ-ಮಹಾಪೌರನು ಮೂವತ್ತು ತಿಂಗಳ ಅವಧಿಗಾಗಿ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ನಗರ ಪಾಲಿಕೆಯು ಅಸ್ತಿತ್ವದಲ್ಲಿರುವವರೆಗೆ ಪದಾವಧಿಯನ್ನು ಹೊಂದಿರತಕ್ಕದ್ದು. ಆದಾಗ್ಯೂ, ಅಂಥ ಮಹಾಪೌರ ಅಥವಾ ಉಪ-ಮಹಾಪೌರರ ಪದಾವಧಿಯು ಪ್ರಾರಂಭದ ದಿನಾಂಕದಿಂದ ಆರು ತಿಂಗಳ ತರುವಾಯ ಮಾತ್ರವೇ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಅವಕಾಶವಿರುತ್ತದೆ.

ಪರಂತು, ಯಾವುದೇ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ, ಮುಂದಿನ ಆರು ತಿಂಗಳವರೆಗೆ ಇನ್ನೊಂದು ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

79. ಮಹಾಪೌರ ಮತ್ತು ಉಪ-ಮಹಾಪೌರ ಹುದ್ದೆಯ ಮೀಸಲಾತಿ.- ಖಾಲಿ ಸ್ಥಾನವು ಉದ್ಭವವಾದಾಗ ಸರದಿಯ ಮೇಲೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮತ್ತು ಮಹಿಳೆಯರಿಗೆ ನಗರಪಾಲಿಕೆಯ ಮಹಾಪೌರ ಮತ್ತು ಉಪ-ಮಹಾಪೌರ ಹುದ್ದೆಯನ್ನು ರಾಜ್ಯ ಸರ್ಕಾರವು ನಿಯಮಿಸಲಾದ ವಿಧಾನದಲ್ಲಿ ಮೀಸಲಿರಿಸತಕ್ಕದ್ದು.

80. ಮಹಾಪೌರನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಮಹಾಪೌರನು, ಈ ಅಧಿನಿಯಮದ ಮೂಲಕ ತನಗೆ ವಹಿಸಲಾದ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಮಹಾಪೌರನ ಹುದ್ದೆಯು ಖಾಲಿಯಾದಾಗ, ಉಪಮಹಾಪೌರನು ಮಹಾಪೌರನಾಗಿ ಕರ್ತವ್ಯ ನಿರ್ವಹಿಸತಕ್ಕದ್ದು ಮತ್ತು ಮಹಾಪೌರನನ್ನು ನೇಮಕ ಮಾಡುವ ಅಂಥ ಸಮಯದವರೆಗೆ ತನಗೆ ಗೊತ್ತುಪಡಿಸಿದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ಮಹಾಪೌರನು ನಗರ ಪಾಲಿಕೆಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಹಾಪೌರನು ಪರಿವೀಕ್ಷಣೆಯ ಸಾಮಾನ್ಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ನಗರ ಪಾಲಿಕೆಯ ಯಾವುದೇ ಕಡ್ಡಾಯ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ ನಗರಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಯಾವುದೇ ನಿರ್ಣಯವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಆಯುಕ್ತನಿಗೆ ನಿರ್ದೇಶನವನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಆಯುಕ್ತರು ಪಾಲಿಸತಕ್ಕದ್ದು. ಮಹಾಪೌರನು ನಗರ ಪಾಲಿಕೆಯ ಯಾವುದೇ ದಾಖಲೆಯನ್ನು ಆಯುಕ್ತರಿಂದ

ತರಿಸಿಕೊಳ್ಳಬಹುದು ಮತ್ತು ತಮಗೆ ಒದಗಿಸಿದ ದಾಖಲೆಗಳನ್ನು, ಅವುಗಳನ್ನು ತಮಗೆ ಒದಗಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಮಹಾಪೌರನು ಹಿಂದಿರುಗಿಸತಕ್ಕದ್ದು.

(5) ಮಹಾಪೌರನು ಲಿಖಿತ ಆದೇಶದ ಮೂಲಕ ತಮ್ಮ ಯಾವುದೇ ಪ್ರಕಾರ್ಯಗಳನ್ನು ಉಪ-ಮಹಾಪೌರನಿಗೆ ವಹಿಸಿಕೊಡಬಹುದು.

(6) ಮಹಾಪೌರನು ಯಾವುದೇ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(7) ಮಹಾಪೌರನು ತಾನು ಮಹಾಪೌರನಾಗಿ ಚುನಾಯಿತರಾಗುವ ಕಾಲದಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದರೆ ಅಥವಾ ಚುನಾಯಿತ ಸದಸ್ಯರಾಗಿದ್ದರೆ, ಅವರು ಅಂಥ ಸಮಿತಿಯ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕದ್ದು.

(8) ಯಾವುದೇ ಸ್ಥಾಯಿ ಸಮಿತಿಯ ಅಧ್ಯಕ್ಷರ ಪದದಲ್ಲಿ ಯಾವುದೇ ಖಾಲೀಸ್ಥಾನ ಉಂಟಾದರೆ ಬೇರೊಬ್ಬ ಅಧ್ಯಕ್ಷರನ್ನು ಚುನಾಯಿಸುವುದಕ್ಕಾಗಿ ಮಹಾಪೌರನು ಅಂಥ ಸಮಿತಿಯ ಸಭೆಯನ್ನು ಕರೆಯತಕ್ಕದ್ದು.

81. ಉಪ-ಮಹಾಪೌರನ ಪ್ರಕಾರ್ಯಗಳು.- (1) ಮಹಾಪೌರನ ಹುದ್ದೆಯು ಖಾಲಿ ಇರುವಾಗ ಮತ್ತೊಬ್ಬ ಹೊಸ ಮಹಾಪೌರನನ್ನು ಚುನಾಯಿಸುವವರೆಗೆ ಅವರ ಪ್ರಕಾರ್ಯಗಳು ಉಪ-ಮಹಾಪೌರನಿಗೆ ಪ್ರಾಪ್ತವಾಗತಕ್ಕದ್ದು.

(2) ಮಹಾಪೌರನು, ಸತತವಾಗಿ ಎಂಟು ದಿನಗಳಿಗಿಂತಲೂ ಹೆಚ್ಚು ಕಾಲ ನಗರದಲ್ಲಿರದಿದ್ದರೆ ಅಥವಾ ಎಂಟು ದಿನಗಳಿಗಿಂತಲೂ ಹೆಚ್ಚು ಕಾಲ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದರೆ ಮಹಾಪೌರನು ನಗರಕ್ಕೆ ಹಿಂತಿರುಗುವವರೆಗೆ ಅಥವಾ ಸಂದರ್ಭಾನುಸಾರ, ಅವರು ಆಸಾಮರ್ಥ್ಯತೆಯಿಂದ ಚೇತರಿಸಿಕೊಳ್ಳುವವರೆಗೆ ಅವರ ಪ್ರಕಾರ್ಯಗಳು ಉಪಮಹಾಪೌರನಿಗೆ ಪ್ರಾಪ್ತವಾಗತಕ್ಕದ್ದು.

(3) ಉಪ-ಮಹಾಪೌರನು, ಆಡಳಿತ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಕಾಲದಲ್ಲಿ ಸಿದ್ಧಪಡಿಸುವಂತೆ ಆಯುಕ್ತರಿಗೆ ನಿರ್ದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಉಪ-ಮಹಾಪೌರನು, ಮಹಾಪೌರನು ತಮಗೆ ವಹಿಸಿಕೊಡಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

82. ಮಹಾಪೌರ ಮತ್ತು ಉಪ-ಮಹಾಪೌರನ ರಾಜೀನಾಮೆ.- (1) ಮಹಾಪೌರನು ಯಾವುದೇ ಸಮಯದಲ್ಲಿ ಉಪ-ಮಹಾಪೌರನಿಗೆ ಸಂಭೋದಿಸಿ, ತಮ್ಮ ಸ್ವಹಸ್ತಾಕ್ಷರದಲ್ಲಿ ಲಿಖಿತವಾಗಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು ಮತ್ತು ಉಪ-ಮಹಾಪೌರನು ಯಾವುದೇ ಸಮಯದಲ್ಲಿ ಮಹಾಪೌರನಿಗೆ ಸಂಭೋದಿಸಿ ತಮ್ಮ ಸ್ವಹಸ್ತಾಕ್ಷರದಲ್ಲಿ ಲಿಖಿತವಾಗಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು:

ಪರಂತು, ಮಹಾಪೌರ ಅಥವಾ ಉಪ-ಮಹಾಪೌರ ಪದವು ಖಾಲಿ ಇದ್ದ ಸಂದರ್ಭದಲ್ಲಿ ರಾಜೀನಾಮೆ ಪತ್ರವನ್ನು *ಗ್ರೇಟರ್* ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ಸಂಬೋಧಿಸಿ ಸಲ್ಲಿಸತಕ್ಕದ್ದು.

(2) *ಗ್ರೇಟರ್* ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಮಹಾಪೌರ ಅಥವಾ ಉಪ-ಮಹಾಪೌರರ ಹುದ್ದೆಯು ಖಾಲಿಯಾದ ದಿನಾಂಕದಿಂದ ಒಂದು ತಿಂಗಳೊಳಗಾಗಿ ನಿಯಮಿಸಲಾದಂಥ ಕಾರ್ಯವಿಧಾನಕ್ಕನುಸಾರವಾಗಿ ಅಂಥ ಹುದ್ದೆಗಳಿಗೆ ಚುನಾವಣೆಗಳನ್ನು ನಡೆಸತಕ್ಕದ್ದು.

(3) ಮಹಾಪೌರ ಮತ್ತು ಉಪ-ಮಹಾಪೌರ ಹುದ್ದೆಯು ಖಾಲಿಯಿದ್ದ ಸಂದರ್ಭದಲ್ಲಿ, ಆಡಳಿತ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಸ್ಥಾಯಿ ಸಮಿತಿಯ ಅಧ್ಯಕ್ಷರು, (2)ನೇ ಉಪ-ಪ್ರಕರಣದಡಿಯಲ್ಲಿ ಅಂಥ ಚುನಾವಣೆಗಳನ್ನು ನಡೆಸುವವರೆಗೆ ಮಹಾಪೌರ ಹುದ್ದೆಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) (1)ನೇ ಉಪ-ಪ್ರಕರಣದಡಿಯಲ್ಲಿ ನೀಡಲಾದಂಥ ರಾಜೀನಾಮೆಯು, ಅದನ್ನು ನೀಡಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

83. ಗೌರವಧನ, ಫೀಜು ಅಥವಾ ಭತ್ಯೆಗಳು.- (1) ಮಹಾಪೌರನಿಗೆ, ಉಪ-ಮಹಾಪೌರನಿಗೆ ಮತ್ತು ನಗರ ಪಾಲಿಕೆಯ ಸದಸ್ಯರಿಗೆ ಸರ್ಕಾರವು ನಿರ್ಧರಿಸಬಹುದಾದಂಥ ಗೌರವಧನ, ಫೀಜು ಅಥವಾ ಭತ್ಯೆಗಳನ್ನು ನಗರ ಪಾಲಿಕೆ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(2) ನಗರ ಪಾಲಿಕೆಯು, ನಿಯಮಿಸಬಹುದಾದಂಥ ಮಿತಿಯನ್ನು ಮೀರದಷ್ಟು ಮೊತ್ತವನ್ನು ಆದರಾತಿಥ್ಯ ಭತ್ಯದ ರೂಪದಲ್ಲಿ ಪ್ರತಿವರ್ಷ ಮಹಾಪೌರನಲ್ಲಿ ಇಡತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಹಿಂದೆ ಹೇಳಿದಂತೆ, ಯಾರೇ ವ್ಯಕ್ತಿಯು ಮಹಾಪೌರ, ಉಪ-ಮಹಾಪೌರ ಅಥವಾ ಪಾಲಿಕೆ ಸದಸ್ಯನಾಗಿ ಗೌರವಧನವನ್ನು, ಫೀಜನ್ನು ಅಥವಾ ಭತ್ಯೆಯನ್ನು ಸ್ವೀಕರಿಸುವುದು, ನಗರ ಪಾಲಿಕೆ ಸದಸ್ಯನಾಗಿ ಚುನಾಯಿತನಾಗಲು ಅಥವಾ ನಗರ ಪಾಲಿಕೆ ಸದಸ್ಯನಾಗಿರಲು ಅವನನ್ನು ಅನರ್ಹಗೊಳಿಸತಕ್ಕದ್ದಲ್ಲ.

84. ಆಯುಕ್ತ.- (1) ಸರ್ಕಾರವು ಆಯುಕ್ತರನ್ನು ನೇಮಿಸತಕ್ಕದ್ದು.

(2) ಆಯುಕ್ತರು, ಸರ್ಕಾರದ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು.

(3) ಆಯುಕ್ತರು, ಸರ್ಕಾರದ ಇಚ್ಛೆಗೊಳಪಟ್ಟು ಎರಡು ವರ್ಷಗಳ ಅವಧಿಗಾಗಿ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ನಗರ ಪಾಲಿಕೆಯ ಪರಿಣಾಮಕಾರಿ ಆಡಳಿತ ನಿರ್ವಹಣೆಗಾಗಿ ಅಗತ್ಯಪಡಿಸಬಹುದಾದಂತೆ, ಸರ್ಕಾರವು ವರ್ಗಾವಣೆ ಮಾಡಬಹುದು.

(4) ಸರ್ಕಾರವು ಆಯುಕ್ತರ ವರ್ಗಾವಣೆಯನ್ನು ಮಾಡತಕ್ಕದ್ದು.

85. ಆಯುಕ್ತರ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ಆಯುಕ್ತರು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(1) ಆಯುಕ್ತರು ನಗರಪಾಲಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಅಗತ್ಯವಾಗಬಹುದಾದಂತಹ ವಿಷಯಗಳ ಮೇಲೆ ಜಂಟಿ ಆಯುಕ್ತರ ಮತ್ತು ಇತರೆ ಅಧೀನ ಅಧಿಕಾರಿಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ದೇಶನ ನೀಡುವುದು;

(2) ಅವಶ್ಯವಾದ ಎಲ್ಲಾ ವಿಷಯಗಳಿಗಾಗಿ ಮಹಾಪೌರ, ಉಪ-ಮಹಾಪೌರ, ಕೌನ್ಸಿಲ್ ಮತ್ತು ವಾರ್ಡ್ ಸಮಿತಿಗಳ ನಡುವೆ ಸಮನ್ವಯ ಉಂಟು ಮಾಡುವುದು;

(3) ತನಗೆ ಉಲ್ಲೇಖಿಸಬಹುದಾದ ಕೆಲವು ಆಂತರಿಕ ವಿಷಯಗಳ ಮೇಲೆ ತೀರ್ಮಾನ ಕೈಗೊಳ್ಳುವುದು;

(4) ಈ ಅಧಿನಿಯಮದ ಅಡಿಯಲ್ಲಿ ಅವನು ಹಾಗೆ ಮಾಡುವುದು ಅಗತ್ಯಪಡಿಸಬಹುದಾದಂತೆ ಅಥವಾ ಮಹಾಪೌರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ಸರ್ಕಾರದ ನಿರ್ದೇಶನದ ಮೇರೆಗೆ ಅಂಥ ಇತರ ಪ್ರಕಾರ್ಯಗಳನ್ನು ಕೈಗೊಳ್ಳತಕ್ಕದ್ದು;

(5) ನಗರ ಪಾಲಿಕೆಯ ಅಥವಾ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆಗೆ ಅಥವಾ ಅನುಮತಿಗೆ ಒಳಪಟ್ಟು ಮತ್ತು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ವಿಧಿಸಿದ ಇತರ ಎಲ್ಲ ನಿರ್ಬಂಧಗಳು, ಪರಿಮಿತಿಗಳು ಮತ್ತು ಷರತ್ತುಗಳಿಗೂ ಸಹ ಒಳಪಟ್ಟು ನಗರ ಪಾಲಿಕೆಗೆ ಯಾವುದೇ ಕರ್ತವ್ಯವನ್ನು ವಿಧಿಸುವ ಅಥವಾ ಯಾವುದೇ ಅಧಿಕಾರವನ್ನು ಪ್ರದಾನ ಮಾಡುವ ಈ ಅಧಿನಿಯಮದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳು ಇರದಿದ್ದರೆ ಅವುಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಕಾರ್ಯಾಂಗ ಅಧಿಕಾರವನ್ನು ಆಯುಕ್ತರಲ್ಲಿ ನಿಹಿತಗೊಳಿಸತಕ್ಕದ್ದೆಂದು, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿದಾಗಲೆಲ್ಲಾ ಆ ಕಾರ್ಯಾಂಗ ಅಧಿಕಾರವನ್ನು ಅವರಲ್ಲಿ ನಿಹಿತಗೊಳಿಸತಕ್ಕದ್ದು, ಅವರು,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅವರಿಗೆ ನಿರ್ದಿಷ್ಟವಾಗಿ ವಿಧಿಸಿದ ಎಲ್ಲ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಪ್ರದಾನ ಮಾಡಿದ ಎಲ್ಲ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು;

(ಬಿ) ಯಾವುದೇ ತುರ್ತು ಪರಿಸ್ಥಿತಿಯಲ್ಲಿ, ಸಾರ್ವಜನಿಕರ ಸೇವೆಗಾಗಿ ಅಥವಾ ಸುರಕ್ಷೆಗಾಗಿ ಅಥವಾ ಪಾಲಿಕೆಯ ಸ್ವತ್ತಿನ ರಕ್ಷಣೆಗಾಗಿ, ತಕ್ಷಣದ ಕ್ರಮವನ್ನು ಇನ್ನಾವುದೇ ನಗರ ಪೌರ ಪ್ರಾಧಿಕಾರದಿಂದ ಅಥವಾ ಸರ್ಕಾರದಿಂದ ಮಂಜೂರಾತಿ, ಅನುಮೋದನೆ ಅಥವಾ ಅಧಿಕಾರವನ್ನು ಪಡೆಯದೆಯೇ ಈ ಅಧಿನಿಯಮದ ಮೇರೆಗೆ ಕೈಗೊಳ್ಳಲಾಗದಿದ್ದರೂ, ತುರ್ತು ಪರಿಸ್ಥಿತಿಯಿಂದಾಗಿ ಅಂಥ ತಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಅವರಿಗೆ ಕಂಡು ಬಂದರೆ ಅಥವಾ ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ತುರ್ತುಪರಿಸ್ಥಿತಿಯು ಸಮರ್ಥನೆ ಒದಗಿಸಿದರೆ ಅಥವಾ ಅಗತ್ಯಪಡಿಸಿದರೆ ಅಂಥ ತಕ್ಷಣದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಆಯುಕ್ತರು ತಾವು ತೆಗೆದುಕೊಂಡ ಕ್ರಮವನ್ನು ಮತ್ತು ಆ ಕ್ರಮವನ್ನು ತೆಗೆದುಕೊಂಡದ್ದಕ್ಕೆ ಕಾರಣಗಳನ್ನು ಮತ್ತು ಅಂಥ ಕ್ರಮದ ಪರಿಣಾಮವಾಗಿ ವಹಿಸಿದ ಅಥವಾ ವಹಿಸುವ ಸಂಭವವಿರುವ ಆದರೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರಸಕ್ತ ಬಜೆಟ್ ಅನುದಾನದಲ್ಲಿ ಒಳಗೊಂಡಿರದಂಥ ಖರ್ಚಿನ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಕೂಡಲೇ ಸಂಬಂಧಪಟ್ಟ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗೆ ವರದಿ ಮಾಡತಕ್ಕದ್ದು.

(6) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ನಗರ ಪಾಲಿಕೆಗೆ ಪ್ರದಾನ ಮಾಡಿದ ಯಾವುವೇ ಅಧಿಕಾರಗಳನ್ನು ಅಥವಾ ವಿಧಿಸಿದ ಯಾವುವೇ ಕರ್ತವ್ಯಗಳನ್ನು ಮತ್ತು ನಿಹಿತವಾದ ಯಾವುವೇ ಪ್ರಕಾರ್ಯಗಳನ್ನು ಅಂಥ ಕಾನೂನಿನ ಉಪಬಂಧಗಳಿಗೊಳಪಟ್ಟು ಆಯುಕ್ತರು ಚಲಾಯಿಸತಕ್ಕದ್ದು, ನೆರವೇರಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

(7) ಆಯುಕ್ತರು ಸಂಬಂಧಪಟ್ಟ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅನುಮೋದನೆಯೊಂದಿಗೆ ಮುಖ್ಯ ಆಯುಕ್ತರ ಲಿಖಿತ ಆದೇಶದ ಮೂಲಕ ಯಾವುದೇ ಅಂಥ ಅಧಿಕಾರವನ್ನು ಚಲಾಯಿಸುವುದಕ್ಕೆ, ಕರ್ತವ್ಯವನ್ನು ನೆರವೇರಿಸುವುದಕ್ಕೆ ಅಥವಾ ಪ್ರಕಾರ್ಯವನ್ನು ನಿರ್ವಹಿಸುವುದಕ್ಕೆ ತಮ್ಮ ಪರಿಶೀಲನೆಗೆ ಹಾಗೂ ತಾವು ನಿರ್ದಿಷ್ಟಪಡಿಸುವುದು ಸೂಕ್ತವೆಂದು ಭಾವಿಸುವಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ನಗರ ಪಾಲಿಕೆಯ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

86. ಆಯುಕ್ತರು ಪತ್ರ ವ್ಯವಹಾರವನ್ನು ಮಾಡುವುದು.- ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ನಗರ ಪಾಲಿಕೆಯ ಮತ್ತು ಸರ್ಕಾರದ ಅಥವಾ ಇತರೆ ಪ್ರಾಧಿಕಾರದ ನಡುವೆ ವ್ಯವಹರಿಸುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಎಲ್ಲಾ ಪತ್ರ ವ್ಯವಹಾರವನ್ನು ಆಯುಕ್ತರು ಮಾಡತಕ್ಕದ್ದು ಮತ್ತು ಆಯುಕ್ತರು ಅಂಥ ಪತ್ರ ವ್ಯವಹಾರ ಪ್ರತಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

87. ಆಯುಕ್ತರ ಅಧಿಕಾರಗಳ ಪ್ರತ್ಯಾಯೋಜನೆ.- ಆಯುಕ್ತರು, ತನ್ನ ಸ್ವಂತ ಜವಾಬ್ದಾರಿಯ ಮೇಲೆ ಮತ್ತು ಲಿಖಿತ ಆದೇಶದ ಮೂಲಕ ಈ ಅಧಿನಿಯಮದಡಿ ತನಗೆ ಪ್ರದತ್ತವಾದ ಅರೆ ನ್ಯಾಯಿಕ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಸೇರಿದಂತೆ ತನ್ನ ಯಾವುದೇ ಯಾವುದೇ ಅಧಿಕಾರಗಳನ್ನು ತನಗೆ ಅಧೀನನಾದ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

88. ದಾಖಲೆಗಳ ಅಭಿರಕ್ಷೆ.- ಆಯುಕ್ತರು ನಗರ ಪಾಲಿಕೆಯ ಸ್ಥಾಯಿ ಸಮಿತಿಯ ಮತ್ತು ಇತರ ಸಮಿತಿಗಳ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲ ಕಾಗದಪತ್ರಗಳು ಮತ್ತು ದಸ್ತಾವೇಜುಗಳನ್ನು ಒಳಗೊಂಡಂತೆ ನಗರ ಪಾಲಿಕೆಯ ಎಲ್ಲ ದಾಖಲೆಗಳ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು.

89. ನಗರ ಪಾಲಿಕೆಯ ಸಿಬ್ಬಂದಿಯ ಮೇಲೆ ನಿಯಂತ್ರಣ.- ಆಯುಕ್ತರು ನಗರ ಪಾಲಿಕೆಯ ಸಿಬ್ಬಂದಿ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅವರ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣಾಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅವರ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ತೀರ್ಮಾನಿಸತಕ್ಕದ್ದು.

90. ಆಯುಕ್ತರ ಸಂಬಳ ಮತ್ತು ಭತ್ಯೆಗಳು.- ಆಯಕ್ತರಿಗೆ ನಗರ ಪಾಲಿಕೆ ನಿಧಿಯಿಂದ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅಂಥ ತಿಂಗಳ ಸಂಬಳವನ್ನು ಮತ್ತು ಭತ್ಯೆಗಳನ್ನು, ಯಾವುದಾದರೂ ಇದ್ದಲ್ಲಿ, ಪಾವತಿಸತಕ್ಕದ್ದು ಮತ್ತು ವಸತಿ ಸೌಲಭ್ಯ, ವಾಹನಭತ್ಯೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದ ಅಂಥ ಇತರ ಸೌಲಭ್ಯಗಳನ್ನು ಕೂಡಾ ನೀಡತಕ್ಕದ್ದು.

91. ಆಯುಕ್ತರ ಮರಣ, ರಾಜೀನಾಮೆ ಅಥವಾ ಹುದ್ದೆಯಿಂದ ತೆಗೆದುಹಾಕಿದ ಸಂದರ್ಭದಲ್ಲಿ ಸ್ಥಾನಪನ್ನ ಆಯುಕ್ತರನ್ನು ನೇಮಿಸುವುದು.- ಆಯುಕ್ತರ ಮರಣ, ರಾಜೀನಾಮೆ ಅಥವಾ ಹುದ್ದೆಯಿಂದ ತೆಗೆದುಹಾಕಿದ ಕಾರಣದಿಂದಾಗಿ ಆಯುಕ್ತರ ಹುದ್ದೆಯಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದಲ್ಲಿ, ಸರ್ಕಾರವು, ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಹೊಸ ಆಯುಕ್ತರ ನೇಮಕಾತಿಯನ್ನು ಬಾಕಿಯಿರಿಸಿ, ಆರು ತಿಂಗಳುಗಳಿಗೆ ಮೀರದಿರುವ ಅವಧಿಗಾಗಿ ಅವರ ಸ್ಥಾನದಲ್ಲಿ ಹಂಗಾಮಿ ಆಯುಕ್ತರ ಪಾತ್ರವನ್ನು ನಿರ್ವಹಿಸಲು ಸರ್ಕಾರದ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಮತ್ತೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು.

92. ವಲಯದ ಜಂಟಿ ಆಯುಕ್ತರು.- ಸರ್ಕಾರವು, ತಾನು ಅಧಿಸೂಚಿಸಿದ ಪ್ರತಿಯೊಂದು ವಲಯಕ್ಕೆ ಜಂಟಿ ಆಯುಕ್ತರನ್ನು ನೇಮಿಸತಕ್ಕದ್ದು ಮತ್ತು ಆತನು ಸರ್ಕಾರದ ಉಪ ಕಾರ್ಯದರ್ಶಿ ಅಥವಾ ಕರ್ನಾಟಕ ಆಡಳಿತ ಸೇವೆಯ (ಹಿರಿಯ ಶ್ರೇಣಿ) ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವ್ಯಕ್ತಿಯಾಗಿರತಕ್ಕದ್ದು.

93. ಜಂಟಿ ಆಯುಕ್ತರ ಸಂಬಳ ಮತ್ತು ಸೇವಾ ಷರತ್ತುಗಳು.- ಜಂಟಿ ಆಯುಕ್ತರಿಗೆ, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮಾಸಿಕ ವೇತನ ಮತ್ತು ಭತ್ಯೆಗಳನ್ನು ನಗರ ಪಾಲಿಕೆಯ ಮುನ್ಸಿಪಲ್ ನಿಧಿಯಿಂದ ಪಾವತಿಸತಕ್ಕದ್ದು ಮತ್ತು ವಸತಿ ಸೌಲಭ್ಯ, ಸಾರಿಗೆ ಭತ್ಯೆಗೆ ಸಂಬಂಧಿಸಿದ ಅಂಥ ಸೌಲಭ್ಯಗಳು ಮತ್ತು ಸರ್ಕಾರವು ನಿಗದಿಪಡಿಸಬಹುದಾದಂಥ ಇತರ ಸೌಲಭ್ಯಗಳನ್ನು ಸಹಾ ನೀಡತಕ್ಕದ್ದು.

94. ಜಂಟಿ ಆಯುಕ್ತರ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ವಲಯದ ಜಂಟಿ ಆಯುಕ್ತರು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಅವರು ತನ್ನ ಅಧಿಕಾರವ್ಯಾಪ್ತಿಯ ಅಡಿಯಲ್ಲಿ, ಈ ಅಧಿನಿಯಮದ ಅಡಿಯಲ್ಲಿ ವಲಯಕ್ಕಾಗಿ ನಿರ್ದಿಷ್ಟಪಡಿಸಿದ ವಿಷಯಗಳ ಮೇಲೆ ನಾಗರಿಕ ಆಡಳಿತವನ್ನು ಕೈಗೊಳ್ಳುವುದಕ್ಕಾಗಿ ನೋಡಲ್ ಪ್ರಾಧಿಕಾರಿಯಾಗಿರತಕ್ಕದ್ದು;

(ಬಿ) ಅವರು ವಾರ್ಡ್ ಸಮಿತಿಗಳ ಮತ್ತು ಪ್ರತ್ಯಾಯೋಜಿಸಲಾದ ಅಂಥ ವಿಷಯಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ಸಮನ್ವಯ ಮಾಡತಕ್ಕದ್ದು;

(ಸಿ) ಅವರು ಕಾಲಕಾಲಕ್ಕೆ ಆಯುಕ್ತರು ಅಥವಾ ಮಹಾಪೌರರು ನಿರ್ದೇಶಿಸಿದಂತೆ ಪ್ರಕಾರ್ಯಗಳನ್ನು ಕೈಗೊಳ್ಳತಕ್ಕದ್ದು; ಮತ್ತು

(ಡಿ) ಅವರು ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು, ಜಂಟಿ ಆಯುಕ್ತನು ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದಂತೆ ತನ್ನ ಸಾಮಾನ್ಯ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ತನ್ನ ಯಾವುದೇ ಅಧೀನ ಪಾಲಿಕೆ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

95. ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನೆ ಮತ್ತು ಸಮನ್ವಯ ಸಮಿತಿ.- (1) ಸರ್ಕಾರವು, ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯನ್ನು ರಚಿಸತಕ್ಕದ್ದು, ಅದು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಪ್ರದೇಶದ ವಿಧಾನಸಭೆಯ ಸದಸ್ಯನು ಅಧ್ಯಕ್ಷನಾಗಿರತಕ್ಕದ್ದು;

(ಬಿ) ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರು;

(ಸಿ) ಪ್ರದೇಶವನ್ನು ಪ್ರತಿನಿಧಿಸುವ ನಗರ ಪಾಲಿಕೆ ಸದಸ್ಯರು; ಮತ್ತು

(ಡಿ) ಪ್ರದೇಶದ ಇತರ ಇಲಾಖೆಗಳು ಮತ್ತು ಏಜೆನ್ಸಿಗಳಿಂದ ಅಂಥ ಅಧಿಕಾರಿಗಳನ್ನು ಶಾಶ್ವತ ಸದಸ್ಯರನ್ನಾಗಿ ಆಹ್ವಾನಿಸತಕ್ಕದ್ದು.

(2) ಸಮಿತಿಯು ತಿಂಗಳಲ್ಲಿ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

96. ವಿಧಾನಸಭಾ ಕ್ಷೇತ್ರಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯ ಪ್ರಕಾರ್ಯಗಳು.- ವಿಧಾನಸಭಾ ಕ್ಷೇತ್ರಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಕಾಮಗಾರಿಗಳು, ಯೋಜನೆ ಮತ್ತು ಪ್ರಾಜೆಕ್ಟ್‌ಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಅರೆ ಸರ್ಕಾರಿ (Parastatals) ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದು;

(ಬಿ) ಕ್ಷೇತ್ರದಲ್ಲಿನ ಯಾವುದೇ ಪ್ರಾಜೆಕ್ಟ್ ಗಳ ಅನುಷ್ಠಾನಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು;

(ಸಿ) ಈ ಅಧಿನಿಯಮದಡಿ ಅಧಿಕಾರ ಪಡೆದ ಯಾವುದೇ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಜನಸಾಮಾನ್ಯರಿಂದ ಯಾವುದೇ ದೂರುಗಳನ್ನು ಸ್ವೀಕರಿಸುವುದು;

(ಡಿ) ವಾರ್ಡ್ ಸಮಿತಿಗಳ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅವುಗಳಿಗೆ ನೆರವು ಮತ್ತು ಸಲಹೆ ನೀಡುವುದು;

(ಇ) ವಾರ್ಡುಗಳ ಸುಧಾರಣೆ ಅಥವಾ ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡುವುದು;

(ಎಫ್) ಒಮ್ಮೆ ಸಭೆ ನೋಟೀಸನ್ನು ಹೊರಡಿಸಿದ ಮೇಲೆ ಮತ್ತು ಅಧ್ಯಕ್ಷನಾಗಿರುವ ಪ್ರದೇಶದ ವಿಧಾನಸಭೆಯ ಸದಸ್ಯರು ಅಸ್ವಸ್ಥರಾಗಿರುವ ಯಾವುದೇ ಕಾರಣಕ್ಕಾಗಿ ಸಭೆಯನ್ನು ಮುಂದೂಡದೆ, ಸಮಿತಿಯ ಅಧ್ಯಕ್ಷರು ನಾಮನಿರ್ದೇಶಿಸಿದ ಸಮಿತಿಯ ಚುನಾಯಿತ ಪ್ರತಿನಿಧಿಯೊಬ್ಬರು ಸಭೆಯನ್ನು ನಡೆಸತಕ್ಕದ್ದು; ಮತ್ತು

(ಜಿ) ಸಮಿತಿಯು ತಿಂಗಳಲ್ಲಿ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

97. ನಿಧಿಗಳ ಹಂಚಿಕೆ.- (1) ನಗರ ಪಾಲಿಕೆಯು, ಈ ಅಧಿನಿಯಮದ ಅಡಿಯಲ್ಲಿ ನಮೂದಿಸಲಾದ ಅದರ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ ವಾರ್ಡ್ ಸಮಿತಿಗಳಿಗೆ ನಿಗದಿಪಡಿಸಿದ ಆಯವ್ಯಯದಿಂದ ಅಂಥ ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು.

(2) ನಾಗರಿಕ ಸೇವೆಗಳ ನಿರ್ವಹಣೆಗಾಗಿ ನಗರ ಪಾಲಿಕೆಗೆ ಮೀಸಲಿರಿಸಿದ ನಿಧಿಗಳ ಹಂಚಿಕೆ ಮತ್ತು ಬಳಕೆಯು ಸರ್ಕಾರವು ನಿಯಮಿಸಬಹುದಾದ ರೀತಿಯಲ್ಲಿರತಕ್ಕದ್ದು ಮತ್ತು ಪಾಲಿಕೆಯು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ನಮೂನೆಗಳಲ್ಲಿ ನಗರಪಾಲಿಕೆಗೆ ಬಳಕೆ ವರದಿಯನ್ನು ಒದಗಿಸುವುದು ಅಗತ್ಯವಾಗಿರತಕ್ಕದ್ದು.

98. ಸ್ಥಾಯಿ ಸಮಿತಿಗಳ ಸ್ಥಾಪನೆ.- (1) ನಗರ ಪಾಲಿಕೆಗಾಗಿ ಈ ಕೆಳಕಂಡ ಸ್ಥಾಯಿ ಸಮಿತಿಗಳು ಇರತಕ್ಕದ್ದು,-

(ಎ) ಆಡಳಿತ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ;

(ಬಿ) ಕಂದಾಯ ಮತ್ತು ಹಣಕಾಸು ಸ್ಥಾಯಿ ಸಮಿತಿ;

(ಸಿ) ಸಾರ್ವಜನಿಕ ಕಾಮಗಾರಿಗಳು ಮತ್ತು ಎಂಜಿನಿಯರಿಂಗ್ ಸ್ಥಾಯಿ ಸಮಿತಿ;

(ಡಿ) ಸಾರ್ವಜನಿಕ ಆರೋಗ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ;

(ಇ) ಅರಣ್ಯ, ಪರಿಸರ, ಜೀವಿಶಾಸ್ತ್ರ, ಕೆರೆಗಳು, ತೋಟಗಾರಿಕೆ ಮತ್ತು ಮೀನುಗಾರಿಕೆಗಳ ಸ್ಥಾಯಿ ಸಮಿತಿ;

(ಎಫ್) ಮೂಲಸೌಕರ್ಯ ಸ್ಥಾಯಿ ಸಮಿತಿ; ಮತ್ತು

(ಜಿ) ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಸ್ಥಾಯಿ ಸಮಿತಿ.

(2) ಪ್ರತಿಯೊಂದು ಸ್ಥಾಯಿ ಸಮಿತಿಯು ಕೌನ್ಸಿಲ್ ಮೂಲಕ ಚುನಾಯಿಸಲ್ಪಡುವ ಅಧ್ಯಕ್ಷರನ್ನೊಳಗೊಂಡು ಕನಿಷ್ಟ ಒಂಭತ್ತು ಮತ್ತು ಗರಿಷ್ಟ ಹದಿನೈದು ನಗರ ಪಾಲಿಕೆ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ಸ್ಥಾಯಿ ಸಮಿತಿಯು ತನ್ನ ಮೊದಲ ಸಭೆಯಲ್ಲಿ ಅಂಥ ಸ್ಥಾಯಿ ಸಮಿತಿಯ ಸದಸ್ಯರ ಮೂಲಕ ಮತ್ತು ನಿಯಮಿಸಬಹುದಾಂಥ ವಿಧಾನದಲ್ಲಿ ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ತತ್ವಕ್ಕೆ ಅನುಸಾರವಾಗಿ

ಪ್ರತಿಯೊಂದು ನಂತರದ ವರ್ಷದ ಅದೇ ತಿಂಗಳ ಮೊದಲ ಸಭೆಯಲ್ಲಿ ನೇಮಕವಾಗತಕ್ಕ ಅಧ್ಯಕ್ಷರನ್ನು ಹೊಂದಿರತಕ್ಕದ್ದು.

(4) ಸ್ಥಾಯಿ ಸಮಿತಿಯ ಅವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು.

(5) ಮಹಾಪೌರ ಮತ್ತು ಉಪಮಹಾಪೌರರು ಎಲ್ಲಾ ಸ್ಥಾಯಿ ಸಮಿತಿಗಳ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(6) ಯಾರೇ ವ್ಯಕ್ತಿಯು, ನಗರ ಪಾಲಿಕೆ ಸದಸ್ಯನಾಗಿರುವುದು ಮುಕ್ತಾಯವಾದರೆ ಅಥವಾ ಆತನು ಸ್ಥಾಯಿ ಸಮಿತಿಯ ಮೂರು ಸಭೆಗಳಿಗೆ ಸತತವಾಗಿ ಸ್ಥಾಯಿ ಸಮಿತಿಯ ಅನುಮತಿಯಿಲ್ಲದೆ ಸ್ವತಃ ಗೈರುಹಾಜರಾದರೆ ಆತನು ಸ್ಥಾಯಿ ಸಮಿತಿಯ ಸದಸ್ಯನಾಗಿರುವುದು ಮುಕ್ತಾಯವಾಗತಕ್ಕದ್ದು.

(7) ಸ್ಥಾಯಿ ಸಮಿತಿಯ ಸದಸ್ಯತ್ವದಲ್ಲಿ ಆಕಸ್ಮಿಕ ಖಾಲೀಸ್ಥಾನ ಉಂಟಾದಲ್ಲಿ ನಗರ ಪಾಲಿಕೆಯು ಚುನಾವಣೆಯ ಮೂಲಕ ಅದನ್ನು ಭರ್ತಿಮಾಡತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು, ಯಾವ ವ್ಯಕ್ತಿಯ ಸ್ಥಾನಕ್ಕೆ ಅವನು ಚುನಾಯಿತನಾಗಿದ್ದನೋ, ಆತನ ಸ್ಥಾನವು ಖಾಲಿಯಾಗಿರದಿದ್ದರೆ ಆ ವ್ಯಕ್ತಿಯು ಎಲ್ಲಿಯವರೆಗೆ ಪದಧಾರಣ ಮಾಡುತ್ತಿದ್ದನೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(8) ಸ್ಥಾಯಿ ಸಮಿತಿಯ ಸದಸ್ಯನು, ಸ್ಥಾಯಿ ಸಮಿತಿಯ ಅಧ್ಯಕ್ಷರಿಗೆ ಸಂಬೋಧಿಸಿದ ಅಥವಾ ಅಧ್ಯಕ್ಷರು ಇಲ್ಲದಿದ್ದರೆ ಮಹಾಪೌರನಿಗೆ ಸಂಭೋದಿಸಿ, ಅಧ್ಯಕ್ಷರಿಗೆ ಅಥವಾ ಸಂದರ್ಭಾನುಸಾರ, ಮಹಾಪೌರನಿಗೆ ಲಿಖಿತ ನೋಟೀಸ್ ನೀಡುವ ಮೂಲಕ ಯಾವುದೇ ಕಾಲದಲ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ನೀಡಿದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

99. ಸ್ಥಾಯಿ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.-(1) ಅಧಿನಿಯಮ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಸ್ಥಾಯಿ ಸಮಿತಿಯು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಆಡಳಿತ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದೈಹಿಕ ಶಿಕ್ಷಣವನ್ನು ಒಳಗೊಂಡು ಪೂರ್ವ-ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಹಾಗೂ ಕ್ರೀಡೆಗಳು ಮತ್ತು ಆಟದ ಮೈದಾನಗಳ ಸ್ಥಾಪನೆ ಮತ್ತು ಆಡಳಿತಾತ್ಮಕ ಸುಧಾರಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಸಮಾಜದ ಇತರ ದುರ್ಬಲ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮತ್ತು ಮಹಿಳೆಯರಿಗೆ ಭದ್ರತೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸತಕ್ಕದ್ದು;

(ಬಿ) ಕಂದಾಯ ಮತ್ತು ಹಣಕಾಸು ಸ್ಥಾಯಿ ಸಮಿತಿಯು ಹಣಕಾಸು, ತೆರಿಗೆ ನಿರ್ಧರಣೆ ಮತ್ತು ಅಪೀಲು ಹಾಗೂ ಯಾವುದೇ ಇತರ ಸ್ಥಾಯಿ ಸಮಿತಿಗೆ ನಿರ್ದಿಷ್ಟವಾಗಿ ವಹಿಸದಿರುವ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಸಿ) ಸಾರ್ವಜನಿಕ ಕಾಮಗಾರಿಗಳು ಮತ್ತು ಎಂಜಿನಿಯರಿಂಗ್ ಸ್ಥಾಯಿ ಸಮಿತಿಯು ಸಾರ್ವಜನಿಕ ಕಾಮಗಾರಿಗಳು ಮತ್ತು ಎಂಜಿನಿಯರಿಂಗ್‌ಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಡಿ) ಸಾರ್ವಜನಿಕ ಆರೋಗ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿಯು ಸಾರ್ವಜನಿಕ ಆರೋಗ್ಯ ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಇ) ಅರಣ್ಯ, ಪರಿಸರ, ಜೀವಿಶಾಸ್ತ್ರ, ಕೆರೆಗಳು, ತೋಟಗಾರಿಕೆ ಮತ್ತು ಮೀನುಗಾರಿಕೆಗಳ ಸ್ಥಾಯಿ ಸಮಿತಿಯು ಅರಣ್ಯ, ಪರಿಸರ, ಜೀವಿಶಾಸ್ತ್ರ, ಕೆರೆಗಳು ಮತ್ತು ಉದ್ಯಾನಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಎಫ್) ಮೂಲಸೌಕರ್ಯ ಸ್ಥಾಯಿ ಸಮಿತಿಯು ಮೂಲಸೌಕರ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ವ್ಯವಹರಿಸತಕ್ಕದ್ದು;

(ಜಿ) ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಸ್ಥಾಯಿ ಸಮಿತಿಯು ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(2) ಸ್ಥಾಯೀ ಸಮಿತಿಗಳು-

(i) ದೈನಂದಿನ ವ್ಯವಹಾರದ ನಿರ್ವಹಣೆಗೆ ಅಗತ್ಯಪಡಿಸಲಾದ ಅಂಥ ದಾಖಲೆಗಳನ್ನು ತರಿಸಿಕೊಳ್ಳಲು; ಮತ್ತು

(ii) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು,

- ಕೂಡ ಅಧಿಕಾರವನ್ನು ಹೊಂದಿರತಕ್ಕದ್ದು.

100. ವಾರ್ಡ್ ಸಮಿತಿಯ ರಚನೆ ಮತ್ತು ಸಂಯೋಜನೆ.- (1) ನಗರ ಪಾಲಿಕೆಯಲ್ಲಿನ ಪ್ರತಿ ವಾರ್ಡ್‌ಗಾಗಿ ವಾರ್ಡ್ ಸಮಿತಿ ಇರತಕ್ಕದ್ದು.

(2) ಪ್ರತಿಯೊಂದು ವಾರ್ಡ್ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು ಎಂದರೆ:-

(ಎ) ವಾರ್ಡನ್ನು ಪ್ರತಿನಿಧಿಸುವ ನಗರ ಪಾಲಿಕೆಯ ಸದಸ್ಯ ವಾರ್ಡ್ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

(ಬಿ) ಈ ಕೆಳಗಿನಂತೆ ಹದಿನಾಲ್ಕು ಇತರ ಸದಸ್ಯರು, ಎಂದರೆ:-

(i) ಅನುಸೂಚಿತ ಜಾತಿಗಳಿಗೆ ಹಾಗೂ ಅನುಸೂಚಿತ ಪಂಗಡಗಳಿಗೆ ಸೇರಿದ ಕನಿಷ್ಠ ಇಬ್ಬರು ಸದಸ್ಯರು;

(ii) ಕನಿಷ್ಠ ಮೂವರು ಮಹಿಳಾ ಸದಸ್ಯರು; ಮತ್ತು

(iii) ಈ ಕೆಳಗೆ ತಿಳಿಸಿದ ಎಲ್ಲ ಷರತ್ತುಗಳನ್ನು ಪೂರೈಸುವ, ಯಾವುದೇ ಹೆಸರಿನಿಂದ ಕರೆಯಲಾಗುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವನ್ನು ಪ್ರತಿನಿಧಿಸುವ ಕನಿಷ್ಠ ಇಬ್ಬರು ಸದಸ್ಯರು, ಎಂದರೆ:-

(ಎ) ಅದರ ನೋಂದಾಯಿತ ಕಚೇರಿಯು, ಆ ವಾರ್ಡ್‌ನ ಅಧಿಕಾರ ವ್ಯಾಪ್ತಿಯಲ್ಲಿರತಕ್ಕದ್ದು;

(ಬಿ) ಅದು ಮೂರು ವರ್ಷಗಳಿಗಿಂತ ಕಡಿಮೆಯಿರದಷ್ಟು ಅವಧಿಗೆ ತನ್ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ನಿರತವಾಗಿರತಕ್ಕದ್ದು; ಮತ್ತು

(ಸಿ) ಅದು, ವಿಶ್ವಾಸಾರ್ಹ ಸಾಮರ್ಥ್ಯದಿಂದ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳನ್ನು ಒಳಗೊಂಡ ಯಾವುದೇ ಹೆಸರಿನಿಂದ ಕರೆಯಲಾಗುವ ನೋಂದಾಯಿತ ಸಂಘ ಆಗಿರತಕ್ಕದ್ದು:

(iv) ವಾರ್ಡಿನ ನೋಂದಾಯಿತ ಮತದಾರರ ಪೈಕಿಯಿಂದ ನಗರಪಾಲಿಕೆಯು ನಾಮನಿರ್ದೇಶನ ಮಾಡುವ ಏಳು ಸದಸ್ಯರು:

ಪರಂತು ನಗರಪಾಲಿಕೆಯು ನಾಮನಿರ್ದೇಶಿಸಿದ ಏಳು ಸದಸ್ಯರನ್ನು ಹೊರತುಪಡಿಸಿ, ಉಳಿದ ಏಳು ಜನ ಸದಸ್ಯರನ್ನು ವಾರ್ಡ್ ಸಮಿತಿಯ ಸದಸ್ಯರಾಗಬೇಕೆಂದು ಕೋರಿರುವ ಅರ್ಹ ಅರ್ಜಿದಾರರ ಪೈಕಿಯಿಂದ ಯಾದೃಚ್ಛಿಕವಾಗಿ ಚೀಟಿ ಎತ್ತುವ ಮೂಲಕ ಆಯ್ಕೆ ಮಾಡತಕ್ಕದ್ದು.

ಮತ್ತು ಪರಂತು ನಗರಪಾಲಿಕೆಯಿಂದ ನಾಮನಿರ್ದೇಶನಗೊಂಡ ಏಳು ಸದಸ್ಯರಲ್ಲಿ ಒಬ್ಬರು ಹಿಂದುಳಿದ ವರ್ಗದವರಾಗಿರತಕ್ಕದ್ದು ಹಾಗೂ ಒಬ್ಬರು ಅಲ್ಪಸಂಖ್ಯಾತ ವರ್ಗದವರಾಗಿರತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ, ನಗರಪಾಲಿಕೆ ಸದಸ್ಯನಾಗಿ ಚುನಾಯಿತನಾಗಲು ಅನರ್ಹನಾದ ವ್ಯಕ್ತಿಯು ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನಗೊಳ್ಳಲು ಅಥವಾ ಅಂಥ ಸದಸ್ಯನಾಗಿ ಮುಂದುವರಿಯಲು ಅನರ್ಹನಾಗತಕ್ಕದ್ದು.

(4) ವಾರ್ಡ್ ಸಮಿತಿಯ ಪದಾವಧಿಯು, ಕೇವಲ ಇಪ್ಪತ್ತು ತಿಂಗಳುಗಳಾಗಿರತಕ್ಕದ್ದು.

101. ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನ ಹೊಂದಲು ಇರುವ ಕಾರ್ಯವಿಧಾನ.- ಆಯುಕ್ತರು ಅಥವಾ ಆಯುಕ್ತನಿಂದ ಪ್ರಾಧಿಕೃತನಾದ ಅಧಿಕಾರಿಯು, ನಗರ ಪಾಲಿಕೆಯ ಚುನಾವಣೆಗಳು ಪೂರ್ಣಗೊಂಡ ಮೂವತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ರೀತಿಯಲ್ಲಿ ವಾರ್ಡ್ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಕ್ಕದ್ದು.

102. ವಾರ್ಡ್ ಸಮಿತಿಯ ಸಭೆ.- (1) ವಾರ್ಡ್ ಸಮಿತಿಯು, ಕಾಲಕಾಲಕ್ಕೆ, ಅಧಿನಿಯಮದ ಅಡಿಯಲ್ಲಿ ಅದಕ್ಕೆ ವಹಿಸಿದ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಕನಿಷ್ಠಪಕ್ಷ ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ವಾರ್ಡ್ ಸಮಿತಿಗೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು, ಸಂಬಂಧಪಟ್ಟ ವಲಯದ ಆಯುಕ್ತರು ಸೂಕ್ತ ದರ್ಜೆಯ ಒಬ್ಬ ಅಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು ಮತ್ತು ವಾರ್ಡ್ ಸಮಿತಿಗೆ ಆಡಳಿತಾತ್ಮಕ ನೆರವು ನೀಡಲು, ಆತನು ಅದರ ಸದಸ್ಯನು ಸಹ ಆಗಿರತಕ್ಕದ್ದು.

(3) ವಾರ್ಡ್ ಸಮಿತಿಯ ಸಭೆಯ ವ್ಯವಹರಣೆಗಳ ಎಲ್ಲಾ ನಡವಳಿಗಳನ್ನು ಕಾರ್ಯದರ್ಶಿಯು ದಾಖಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ನಗರ ಪಾಲಿಕೆಗೆ ಕಳುಹಿಸತಕ್ಕದ್ದು.

(4) ವಾರ್ಡ್ ಸಮಿತಿಯ ಕಾರ್ಯದರ್ಶಿಯು, ಅದರ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ವಾರ್ಡ್ ಸಮಿತಿಯ ಸಭೆಯನ್ನು ಕರೆಯತಕ್ಕದ್ದು.

(5) ವಾರ್ಡ್ ಸಮಿತಿಯ ಯಾವುದೇ ಸಭೆಯನ್ನು ಸಾರ್ವಜನಿಕ ರಜಾ ದಿನದಂದು ಮತ್ತು ನಗರ ಪಾಲಿಕೆಯ ಸಭೆಯನ್ನು ನಡೆಸಲು ನಿಗದಿಪಡಿಸಿರುವ ದಿನದಂದು ನಡೆಸತಕ್ಕದ್ದಲ್ಲ.

(6) ಸಭೆಯನ್ನು ನಡೆಸಬೇಕೆಂದಿರುವ ದಿನದ ಮತ್ತು ಸಮಯದ ಹಾಗೂ ಕಾರ್ಯಸೂಚಿಯ ನೋಟೀಸನ್ನು ಅನ್ಯಥಾ ಸಭೆಯ ದಿನಾಂಕಕ್ಕೆ ಐದು ದಿನಗಳ ಮೊದಲು ನೀಡದೆ, ಯಾವುದೇ ಸಭೆಯನ್ನು ನಡೆಸತಕ್ಕದ್ದಲ್ಲ.

(7) ಸಭೆಯ ಕೋರಂ ಒಟ್ಟು ಸದಸ್ಯರ ಮೂರನೇ ಒಂದರಷ್ಟಿರತಕ್ಕದ್ದು.

(8) ವಾರ್ಡ್ ಸಮಿತಿ ಸಭೆಗಳ ನಿರ್ಣಯಗಳನ್ನು ಸಾಮಾನ್ಯವಾಗಿ ಸರಳ ಬಹುಮತದ ಆಧಾರದ ಮೇಲೆ ತೆಗೆದುಕೊಳ್ಳತಕ್ಕದ್ದು:

ಪರಂತು, ವಾರ್ಡ್ ಸಮಿತಿಯ ಅಧ್ಯಕ್ಷರು ಯಾವುದೇ ನಿರ್ಣಯಕ್ಕೆ ನಿರ್ಣಾಯಕ ಮತವನ್ನು ಚಲಾಯಿಸಲು ಅಧಿಕಾರ ಹೊಂದಿರತಕ್ಕದ್ದು.

(9) ಈ ಅಧಿನಿಯಮದ ಅಡಿಯಲ್ಲಿ ವಾರ್ಡ್ ಸಮಿತಿಯು ಕೈಗೊಂಡ ಕಾರ್ಯ ಅಥವಾ ವ್ಯವಹರಣೆಗಳು, ಕೇವಲ ಅದರಲ್ಲಿನ ಯಾವುದೇ ಖಾಲಿ ಸ್ಥಾನದ ಕಾರಣದ ಮೇಲೆ ಅಸಿಂಧುಗೊಳ್ಳತಕ್ಕದ್ದಲ್ಲ.

(10) ಆಯುಕ್ತರು ಅಥವಾ ಆತನ ನಾಮನಿರ್ದೇಶಿತನು, ವಾರ್ಡ್ ಸಮಿತಿಯ ಸಭೆಗಳಲ್ಲಿ ಮತ್ತು ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವರಾಗಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(11) ವಾರ್ಡ್ ಸಮಿತಿಯ ಅಧ್ಯಕ್ಷರು, ಸಭೆಗಳಲ್ಲಿ ಭಾಗವಹಿಸಲು ವಿಶೇಷ ಆಹ್ವಾನಿತರನ್ನಾಗಿ ನಗರ ಪಾಲಿಕೆಯ ಸಂಬಂಧಪಟ್ಟ ಇಲಾಖೆಗಳ ಪ್ರತಿನಿಧಿಗಳನ್ನು ಕೋರಬಹುದು.

(12) ಅಧ್ಯಕ್ಷನು ಅಥವಾ ಆತನ ಅನುಪಸ್ಥಿತಿಯಲ್ಲಿ, ಹಾಜರಿರುವ ಸದಸ್ಯರು ತಮ್ಮ ಪೈಕಿಯಿಂದ ಆಯ್ಕೆ ಮಾಡಿದ ಒಬ್ಬ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(13) ವಾರ್ಡ್ ಸಮಿತಿಯ ಸಭೆಗಳಲ್ಲಿನ ವ್ಯವಹಾರಗಳ ನಿರ್ವಹಣೆಯ ರೀತಿಯು ನಿಯಮಿಸಬಹುದಾದಂತಿರತಕ್ಕದ್ದು.

103. ವಾರ್ಡ್ ಸಮಿತಿಯ ಪ್ರಕಾರ್ಯಗಳು.- (1) ವಾರ್ಡ್ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ನಿಧಿಗಳ ಹಂಚಿಕೆಗಾಗಿ, ವಾರ್ಡ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ, ನಗರ ಪಾಲಿಕೆಗೆ ಸಲ್ಲಿಸುವುದು;

(ಬಿ) ನಿಧಿಯ ಹಂಚಿಕೆಗಾಗಿ ಮುಂದಿನ ಹಣಕಾಸಿನ ವರ್ಷದಲ್ಲಿ ಅನುಷ್ಠಾನಗೊಳಿಸಬೇಕಾದ ಪ್ರಸ್ತಾವಿತ ಪ್ರಾಜೆಕ್ಟ್‌ಗಳು ಮತ್ತು ಸ್ಕೀಮುಗಳನ್ನು ನಿರ್ದಿಷ್ಟಪಡಿಸುವ ಆದ್ಯತಾಪಟ್ಟಿಯ ರೂಪದಲ್ಲಿ, ಬೆಂಗಳೂರು ಮಹಾನಗರ ಯೋಜನಾ ಸಮಿತಿ ಮತ್ತು ನಗರ ಪಾಲಿಕೆಯು ಸಿದ್ಧಪಡಿಸಿದ ಯೋಜನೆಗಳಿಗನುಸಾರವಾಗಿ ಮಾಡಿದ ವಾರ್ಷಿಕ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು ಹಾಗೂ ವಾರ್ಡ್‌ನಲ್ಲಿ ವಾರ್ಡ್ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಹಂಚಿಕೆಯಾದ ನಿಧಿಯ ಕ್ರಮಬದ್ಧ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು;

(ಸಿ) ವಾರ್ಡ್‌ನಲ್ಲಿ ಗರಿಷ್ಠ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡು ಅದಕ್ಕಾಗಿ ಯುಕ್ತ ಪ್ರಚಾರ ಮತ್ತು ನೋಟೀಸನ್ನು ಕೊಟ್ಟು, ವಾರ್ಷಿಕ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ರೂಪಿಸಲು ವಿಷಯಗಳನ್ನು ಒದಗಿಸುವುದಕ್ಕಾಗಿ ವಾರ್ಡ್‌ನಲ್ಲಿ ಮತದಾರರಾಗಿ ನೋಂದಣಿಯಾಗಿರುವ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ವಾರ್ಡ್ ಸಭೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವುದು;

(ಡಿ) ಸಾರ್ವಜನಿಕರ ಭಾಗವಹಿಸುವಿಕೆಯ ಮೂಲಕ ನಿರ್ಧಾರವನ್ನು ಕೈಗೊಳ್ಳಲು ಅಗತ್ಯವಿರುವ ಯಾವುದೇ ವಿಷಯವನ್ನು ಚರ್ಚಿಸಲು ಯಾವುದೇ ಸಾಮಾನ್ಯ ಸಭೆಯನ್ನು ಕರೆಯುವುದು;

(ಇ) ಫಲಾನುಭವಿಯ ಆಯ್ಕೆಗಾಗಿ ಅರ್ಜಿಗಳನ್ನು ಆಹ್ವಾನಿಸುವುದು ಮತ್ತು ಈ ಬಗ್ಗೆ ಸ್ವೀಕರಿಸಿದ ಅರ್ಜಿಗಳ ಮೇಲೆ ವಿಚಾರಣೆಯನ್ನು ನಡೆಸಿದ ತರುವಾಯ ಕರಡು ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ಸಂಬಂಧಪಟ್ಟ ಕ್ಷೇತ್ರ ಸಮಾಲೋಚನೆ ಮತ್ತು ಸಮನ್ವಯ ಸಮಿತಿಗೆ ಕಳುಹಿಸುವುದು ಮತ್ತು ನಗರ ಪಾಲಿಕೆಗೆ ಸಲ್ಲಿಸುವುದಕ್ಕಾಗಿ ಅಭಿಪ್ರಾಯಗಳ ಕ್ಷೇತ್ರ ಸಮಾಲೋಚನೆ ಮತ್ತು ಸಮನ್ವಯ ಸಮಿತಿಯ ಅಭಿಪ್ರಾಯಗಳ ಆಧಾರದ ಮೇಲೆ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು;

(ಎಫ್) ವಾರ್ಡ್‌ನಲ್ಲಿ ವಾರ್ಡ್ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಂಚಿಕೆಯಾದ ನಿಧಿಗಳ ಕ್ರಮಬದ್ಧ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು;

(ಜಿ) ನಗರ ಪಾಲಿಕೆಗೆ ಬಾಕಿಯಿರುವ ತೆರಿಗೆಗಳು, ಶುಲ್ಕಗಳು ಮತ್ತು ಇತರ ಮೊತ್ತಗಳ ಸಕಾಲಿಕ ಸಂಗ್ರಹವನ್ನು ಖಚಿತಪಡಿಸಿಕೊಳ್ಳುವುದು;

(ಎಚ್) ವಾರ್ಡ್‌ನಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಸಾರ್ವಜನಿಕ ಕೊಳಾಯಿಗಳು ಮತ್ತು ಸಾರ್ವಜನಿಕ ಬಾವಿಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಐ) ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು;

(ಜೆ) ವಾರ್ಡ್‌ನಲ್ಲಿ ಕ್ರಮಬದ್ಧ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತು ನೈರ್ಮಲ್ಯ ಕಾರ್ಯವನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಸಾರ್ವಜನಿಕ ನೈರ್ಮಲ್ಯ ಘಟಕಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಕೆ) ವಾರ್ಡ್‌ನಲ್ಲಿ ಬೀದಿದೀಪಗಳ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಬೀದಿ ದೀಪಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಎಲ್) ವಾರ್ಡ್‌ನಲ್ಲಿನ ಉದ್ಯಾನಗಳು, ಮುಕ್ತ ಪ್ರದೇಶಗಳು, ಪ್ರದೇಶದಲ್ಲಿ ಹಸಿರನ್ನು ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು;

(ಎಂ) ಅರಣ್ಯೀಕರಣ ಮತ್ತು ಮಳೆ ನೀರು ಕೊಯ್ಲು ಯೋಜನೆಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳವುದು;

(ಎನ್) ನಗರ ಪಾಲಿಕೆಗೆ ಸೇರಿರುವ ಅಥವಾ ನಡೆಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮತ್ತು ಶಾಲೆಗಳ ಪ್ರಕಾರ್ಯ ನಿರ್ವಹಣೆಯಲ್ಲಿ ನೆರವು ನೀಡುವುದು;

(ಒ) ವಾರ್ಡ್ ಅಭಿವೃದ್ಧಿ ಸ್ಕೀಂ ಮತ್ತು ನಗರ ಪಾಲಿಕೆಯ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ಸರಕುಗಳು ಅಥವಾ ಹಣದ ರೂಪದಲ್ಲಿ ಸ್ವಯಂ ದುಡಿಮೆ ಮತ್ತು ದೇಣಿಗೆಯನ್ನು ಸಂಗ್ರಹಿಸುವುದು;

(ಪಿ) ನಗರ ಪಾಲಿಕೆಗೆ ಸೇರಿದ ಭೂಮಿಯ ಯಾವುದೇ ಒತ್ತುವರಿಯ ಬಗ್ಗೆ ನಗರ ಪಾಲಿಕೆಗೆ ಮಾಹಿತಿ ಒದಗಿಸುವುದು;

(ಕ್ಯೂ) ಸಾರ್ವಜನಿಕ ಮಾಹಿತಿಗಾಗಿ ವಾರ್ಡ್ ಆಯವ್ಯಯ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸುವುದು; ಮತ್ತು

(ಆರ್) ನಗರ ಪಾಲಿಕೆಯ ಉಪವಿಧಿಗಳ ಅನ್ವಯ ಅದಕ್ಕೆ ವಹಿಸಬಹುದಾದಂಥ ಇತರ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸುವುದು;

(2) ವಾರ್ಡ್ ಸಮಿತಿಯು ಅದರ ಕಾರ್ಯಕಲಾಪ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ವಾರ್ಡ್ ಸಮಿತಿಯು ಸಂಬಂಧಪಟ್ಟ ವಾರ್ಡ್ ಕಚೇರಿಯಿಂದ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು.

(4) ವಾರ್ಡ್ ಸಮಿತಿಯ ಶಿಫಾರಸ್ಸುಗಳು ಸಲಹಾ ಸ್ವರೂಪದಲ್ಲಿರತಕ್ಕದ್ದು.

104. ನಗರಪಾಲಿಕೆ ಸದಸ್ಯರ ಅಧಿಕಾರ.- (1) ನಗರ ಪಾಲಿಕೆಯ ಕಾರ್ಯದ ನಿರ್ವಹಣೆಯಲ್ಲಿನ ಯಾವುದೇ ನಿರ್ಲಕ್ಷ್ಯದ ಬಗ್ಗೆ, ನಗರ ಪಾಲಿಕೆಯ ಸ್ವತ್ತಿನ ಯಾವುದೇ ಬಗೆಯ ಪೋಲು ಕುರಿತಂತೆ ಅಥವಾ ಯಾವುದೇ ಪ್ರದೇಶದ ಅಗತ್ಯತೆಗಳ ಬಗ್ಗೆ, ಯಾರೇ ನಗರಪಾಲಿಕೆ ಸದಸ್ಯನು ಸೂಕ್ತ ಪ್ರಾಧಿಕಾರಿಯ ಗಮನ ಸೆಳೆಯಬಹುದು ಮತ್ತು ತಾನು ಅಪೇಕ್ಷಣೀಯವೆಂದು ಪರಿಗಣಿಸುವಂಥ ಯಾವುದೇ ಸುಧಾರಣೆಗಳನ್ನು ಸೂಚಿಸಬಹುದು.

(2) ಕೌನ್ಸಿಲರ್‌ನು, ಆತನು ಆಯ್ಕೆಯಾಗಿರುವ ನಗರ ಪಾಲಿಕೆಯ ವಾರ್ಡ್‌ನ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕೆ ಮತ್ತು ಆತನು ಅಧ್ಯಕ್ಷನಾಗಿರುವ ವಾರ್ಡ್ ಸಮಿತಿಯಿಂದ ಮಾಡಲಾದ ಪ್ರಸ್ತಾವನೆಗಳು ಮತ್ತು ನಿರ್ಣಯಗಳ ಬಗ್ಗೆ ಮಹಾಪೌರರ ಗಮನವನ್ನು ಸೆಳೆಯುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಬ್ಬ ನಗರ ಪಾಲಿಕೆ ಸದಸ್ಯನು, ಈ ಬಗ್ಗೆ ರೂಪಿಸಲಾದ ವಿನಿಯಮಗಳಿಗೆ ಒಳಪಟ್ಟು ನಗರ ಪಾಲಿಕೆಯ ಆಡಳಿತ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳ ಮೇಲೆ ಪ್ರಶ್ನಿಸಲು ಹಕ್ಕುಳ್ಳವನಾಗಿರತಕ್ಕದ್ದು.

105. ಮಹಾಪೌರ, ಉಪಮಹಾಪೌರ ಮುಂತಾದವರ ಚುನಾವಣೆಗೆ ಅಪೀಲು.- (1) ಮಹಾಪೌರ, ಉಪಮಹಾಪೌರ, ಸ್ಥಾಯಿಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರ ಹುದ್ದೆಯ ಚುನಾವಣೆಯ ಸಂಬಂಧದಲ್ಲಿ ಮುಖ್ಯ ಆಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ಆಯುಕ್ತರ ನಿರ್ಧಾರದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ನಿರ್ಧಾರವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕಾರಣಕ್ಕೆ ಅಂಥ ನಿರ್ಧಾರಗಳ ವಿರುದ್ಧವಾಗಿ ಅಪೀಲು ಸಲ್ಲಿಸಬಹುದು.

(2) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಮೂಲಕ ಪ್ರಾಧಿಕೃತರಾದವರ ಅಂಥ ದಾವೆಯನ್ನು ಹೊರತುಪಡಿಸಿ, ಮಹಾಪೌರ, ಉಪಮಹಾಪೌರ ಮತ್ತು ಸ್ಥಾಯಿ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ಚುನಾವಣೆ ಅಥವಾ ತೆಗೆದುಹಾಕುವಿಕೆಗೆ ಸಂಬಂಧಿಸಿದ ಯಾವುದೇ ವಿಷಯದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯವು ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

ಅಧ್ಯಾಯ VIII

ನಗರ ಪಾಲಿಕೆ ಅಧಿಕಾರಿಗಳು ಮತ್ತು ನೌಕರರು ಹಾಗೂ ಅವರ ನೇಮಕಾತಿಗಳು ಮತ್ತು ಸೇವಾ ಷರತ್ತುಗಳು

106. ನಗರ ಪಾಲಿಕೆಯ ಅಧೀನದಲ್ಲಿರುವ ಕೆಲವು ಹುದ್ದೆಗಳಿಗೆ ಕರ್ನಾಟಕ ಪೌರಾಡಳಿತ ಸೇವೆಯಿಂದ ನೇಮಕ ಮಾಡುವುದು.- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಪೌರಾಡಳಿತ ಸೇವೆಯಲ್ಲಿ ಒಳಗೊಂಡಿರುವ ನಗರ ಪಾಲಿಕೆಯ ಅಧೀನದಲ್ಲಿರುವಂಥ ಹುದ್ದೆಗಳನ್ನು ಸರ್ಕಾರವು ಕರ್ನಾಟಕ ಪೌರಾಡಳಿತ ಸೇವೆಗೆ ಸೇರಿರುವ ಅಧಿಕಾರಿಗಳನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ಕರ್ನಾಟಕ ಪೌರಾಡಳಿತ ಸೇವೆಯ ಅಧಿಕಾರಿಗಳಿಗೆ, ಅವರಿಗೆ ಅನ್ವಯವಾಗುವ ನೇಮಕಾತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಉಪಬಂಧಗಳಿಗೆ ಒಳಪಟ್ಟು, ನಗರ ಪಾಲಿಕೆಯ ಅಧೀನದಲ್ಲಿನ ಅವರ ಸೇವಾ ಅವಧಿಯವರೆಗೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ, ವಿನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳು ಅನ್ವಯವಾಗತಕ್ಕದ್ದು.

(3) ಕರ್ನಾಟಕ ಪೌರಾಡಳಿತ ಸೇವಾ ಅಧಿಕಾರಿಗಳಿಗೆ ಸಂದಾಯ ಮಾಡಬೇಕಾದ ಸಂಬಳಗಳು, ಭತ್ಯೆಗಳು, ನಿವೃತ್ತಿ ವೇತನ, ಭವಿಷ್ಯ ನಿಧಿ, ಉಪದಾನಗಳಿಗೆ ಮತ್ತು ಇತರ ಅಗತ್ಯ ವೆಚ್ಚವನ್ನು ಭರಿಸಲು ಪ್ರತಿಯೊಂದು ನಗರ ಪಾಲಿಕೆಯು ತನ್ನ ರಾಜಸ್ವಗಳಲ್ಲಿ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಶೇಕಡಾ ಪ್ರಮಾಣವನ್ನು, ಅಂಥ ರೀತಿಯಲ್ಲಿ ಮತ್ತು ಅಂಥ ಸಮಯಗಳಲ್ಲಿ ವಂತಿಗೆ ನೀಡತಕ್ಕದ್ದು ಮತ್ತು ನಗರ ಪಾಲಿಕೆಯ ಅಡಿಯಲ್ಲಿನ ಆಯುಕ್ತರು ಅದನ್ನು ಮಾಡತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ನಗರ ಪಾಲಿಕೆಯು ಸಂದಾಯ ಮಾಡಲು ತಪ್ಪಿದರೆ, ಸರ್ಕಾರ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ನಗರ ಪಾಲಿಕೆಯ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ಅಧಿಕಾರಿಗೆ, ಅಂಥ ಮೊಬಲಗನ್ನು ಸಂದಾಯ ಮಾಡುವಂತೆ ಅಥವಾ ಅವರ ವಶದಲ್ಲಿರುವ ನಗರ ಪಾಲಿಕೆಯ ನಿಧಿಯ ಶಿಲ್ಕಿನಿಂದ ಆ ಮೊಬಲಗಿನಲ್ಲಿ ಎಷ್ಟನ್ನು ಸಂದಾಯ ಮಾಡಲು ಸಾಧ್ಯವೋ ಅಷ್ಟು ಮೊಬಲಗನ್ನು ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

107. ಇಂಜಿನಿಯರ್, ನಗರ ಯೋಜಕ, ಆರೋಗ್ಯಾಧಿಕಾರಿ, ಲೆಕ್ಕಾಧಿಕಾರಿ ಮುಂತಾದವರ ನೇಮಕ.- (1) ನಗರ ಪಾಲಿಕೆಯ ದಕ್ಷ ಕಾರ್ಯನಿರ್ವಹಣೆಗಾಗಿ ಸರ್ಕಾರವು, ಇಂಜಿನಿಯರ್, ನಗರ ಯೋಜಕ, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮುಖ್ಯ ಲೆಕ್ಕಾಧಿಕಾರಿ ಮತ್ತು ಕೌನ್ಸಿಲ್ ಕಾರ್ಯದರ್ಶಿಯಾಗಲು ಸೂಕ್ತವೆಂದು ತಾನು ಪರಿಗಣಿಸುವಂಥ ರಾಜ್ಯದ ಸಿವಿಲ್ ಸೇವೆಗಳಿಂದ ಅಂಥ ಅಧಿಕಾರಿಗಳನ್ನು ನಗರ ಪಾಲಿಕೆಗೆ ಪ್ರತಿನಿಯೋಜನೆ ಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಗಳು ನಗರ ಪಾಲಿಕೆಯಲ್ಲಿನ ಅವರಿಗೆ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಆಯುಕ್ತರಿಗೆ ಅಧೀನರಾಗಿರತಕ್ಕದ್ದು. ಸರ್ಕಾರವು ಅಗತ್ಯವಾಗಬಹುದಾದಂಥ ಸಂಖ್ಯೆಯ ಉಪ ಆಯುಕ್ತರುಗಳನ್ನು ಮತ್ತು ಸಹಾಯಕ ಆಯುಕ್ತರುಗಳನ್ನು ಸಹ ನಿಯೋಜಿಸಬಹುದು. ಅವರು ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಅವರು ಆಯುಕ್ತರಿಗೆ ಅಧೀನರಾಗಿರತಕ್ಕದ್ದು.

(2) ಸರ್ಕಾರವು ನಗರ ಯೋಜನೆಗೆ ಸಂಬಂಧಿಸಿರುವ ವಿಷಯದಲ್ಲಿ ನಗರ ಪಾಲಿಕೆಗೆ ನೆರವು ನೀಡಲು ನಗರ ಮತ್ತು ಗ್ರಾಮಾಂತರ ಯೋಜನಾ ಅಪರ ನಿರ್ದೇಶಕರ ದರ್ಜೆಯ ಅಪರ ಮುಖ್ಯ ನಗರ ಯೋಜಕರನ್ನು ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯನ್ನು ಹೊಂದಿರುವಂಥ ಇತರೆ ಅಧಿಕಾರಿಗಳನ್ನು ನಿಯೋಜಿಸತಕ್ಕದ್ದು, ಅವರು ಆಯುಕ್ತರಿಗೆ ಅಧೀನರಾಗಿರತಕ್ಕದ್ದು.

(3) ನಗರ ಪಾಲಿಕೆಯು, ಅದರ ಅಧಿಕಾರ ಕ್ಷೇತ್ರವ್ಯಾಪ್ತಿಯೊಳಗೆ ಯಾವುದೇ ಅಸಾಮಾನ್ಯ ಮರಣ ಅಥವಾ ಯಾವುದೇ ಅಪಾಯಕಾರಿ ರೋಗದ ಹರಡುವಿಕೆ ಬಗ್ಗೆ ತನಿಖೆ ಮಾಡುವ

ಅಥವಾ ಅದನ್ನು ತಡೆಗಟ್ಟುವ ಅಥವಾ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ವಿಶೇಷ ಆರೋಗ್ಯ ಅಧಿಕಾರಿಗಳನ್ನು ಮತ್ತು ನಗರ ಪಾಲಿಕೆಯು ಕೈಗೊಂಡ ಯಾವುದೇ ಯೋಜನಾ ಕಾಮಗಾರಿಗಳನ್ನು ಸಿದ್ಧಪಡಿಸುವ, ಕಾರ್ಯಗತಗೊಳಿಸುವ ಅಥವಾ ಮೇಲುಸ್ತುವಾರಿ ಮಾಡುವ ಉದ್ದೇಶಕ್ಕಾಗಿ ನಗರ ಸುಧಾರಣೆ ಅಥವಾ ನಗರ ಯೋಜನೆಯಲ್ಲಿ ಇಂಜಿನಿಯರ್‌ಗಳು, ಆರ್ಕಿಟೆಕ್ಟರ್‌ಗಳು ಅಥವಾ ತಜ್ಞರನ್ನು ನೇಮಕ ಮಾಡಬಹುದು.

108. ಕಾನೂನು ಕೋಶ.- (1) ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರುವ ಅಂಥ ಸಂಖ್ಯೆಯ ಅಧಿಕಾರಿಗಳನ್ನು ಒಳಗೊಂಡ ಕಾನೂನು ಕೋಶವು ನಗರ ಪಾಲಿಕೆಯಲ್ಲಿ ಇರತಕ್ಕದ್ದು.

(2) ನಗರ ಪಾಲಿಕೆಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ, ವಿನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳ ಅರ್ಥವಿವರಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಮತ್ತು ನಗರ ಪಾಲಿಕೆಯು ಪಕ್ಷಕಾರ ಆಗಿರುವ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವುದಕ್ಕೆ, ಅವುಗಳಲ್ಲಿ ಪ್ರತಿರಕ್ಷಿಸಿಕೊಳ್ಳುವುದಕ್ಕೆ, ಅವುಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಹ ಕಾನೂನು ಕೋಶದೊಂದಿಗೆ ಸಮಾಲೋಚಿಸತಕ್ಕದ್ದು.

(3) ಕಾನೂನು ಕೋಶದ ವೆಚ್ಚವನ್ನು ನಗರ ಪಾಲಿಕೆಯ ನಿಧಿಗಳಿಂದ ಭರಿಸತಕ್ಕದ್ದು.

109. ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ವಂತಿಗೆ.- (1) ನಗರ ಪಾಲಿಕೆಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ಸೇವೆ ಸಲ್ಲಿಸಿದ್ದ ಅಧಿಕಾರಿಯನ್ನು ಅಥವಾ ನೌಕರನನ್ನು ಸರ್ಕಾರದ ಸೇವೆಯಿಂದ ಅಥವಾ ಸರ್ಕಾರದ ಸೇವೆಗೆ ವರ್ಗಾಯಿಸಿದರೆ ಅಥವಾ ಅವನನ್ನು ಭಾಗಶಃ ಸರ್ಕಾರದ ಅಧೀನದಲ್ಲಿ ಮತ್ತು ಭಾಗಶಃ ನಗರ ಪಾಲಿಕೆಯಿಂದ ನಿಯೋಜಿಸಲಾಗಿದ್ದರೆ, ಅವನು ಸರ್ಕಾರಿ ಸೇವೆಯ ಯಾವ ಶಾಖೆಗೆ ಸೇರಿರುವನೋ ಆ ಶಾಖೆಯ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಅವನು ಅಥವಾ ಅವನ ಪರವಾಗಿ ಸಂದಾಯ ಮಾಡಬೇಕಾದಂಥ ಅವನ ರಜೆ ಭತ್ಯೆಗಳು, ನಿವೃತ್ತಿವೇತನ ಮತ್ತು ಭವಿಷ್ಯನಿಧಿಯ ಬಾಬಿಗೆ ನಗರ ಪಾಲಿಕೆಯು ಅಂಥ ವಂತಿಗೆಯನ್ನು ನೀಡತಕ್ಕದ್ದು.

(2) ನಗರ ಪಾಲಿಕೆಯಿಂದ ನಿಯೋಜಿತನಾದ ಪ್ರತಿಯೊಬ್ಬ ಸರ್ಕಾರಿ ನೌಕರನು, ಅವನು ಸರ್ಕಾರಿ ಸೇವೆಯ ಯಾವ ಶಾಖೆಗೆ ಸೇರಿರುವನೋ ಆ ಶಾಖೆಯ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ಸಂಬಳ, ರಜೆ ಮತ್ತು ಇತರ ಸವಲತ್ತುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

ಅಧ್ಯಾಯ IX
ನಗರ ಪಾಲಿಕೆಯ ಮತ್ತು ಸಮಿತಿಗಳ ಅಧಿಕಾರಗಳು, ಪ್ರಕಾರ್ಯಗಳು ಹಾಗೂ ಕಾರ್ಯವಿಧಾನ

110. ನಗರ ಪಾಲಿಕೆಯ ಸಾಮಾನ್ಯ ಅಧಿಕಾರಗಳು.- (1) ಈ ಅಧಿನಿಯಮದ ಹಾಗೂ ಅದರಡಿ ರಚಿತವಾದ ನಿಯಮಗಳು, ವಿನಿಯಮಗಳು ಮತ್ತು ಉಪ-ವಿಧಿಗಳ ಉಪಬಂಧಗಳಿಗೆ ಒಳಪಟ್ಟು, ಅಧಿಕಾರವ್ಯಾಪ್ತಿಯಲ್ಲಿನ ಪ್ರದೇಶಗಳ ಪೌರ ಆಡಳಿತವು ನಗರ ಪಾಲಿಕೆಯಲ್ಲಿ ನಿಹಿತವಾಗಿರತಕ್ಕದ್ದು.

(2) ಉಪ-ಪ್ರಕರಣ (1)ರ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಈ ಅಧಿನಿಯಮದ ಮೂಲಕ ಮತ್ತು ಅದರ ಅಡಿಯಲ್ಲಿ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸುವುದು, ಅಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

111. ನಗರ ಪಾಲಿಕೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಇತರ ಅಧಿನಿಯಮಗಳ ಉಪಬಂಧಗಳಿಗೆ, ನಿಯಮಗಳಿಗೆ ಹಾಗೂ ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಇತರ ಉಪಬಂಧಗಳಿಗೆ ಒಳಪಟ್ಟು, ನಗರ ಪಾಲಿಕೆಯು, ಮೊದಲನೇ ಅನುಸೂಚಿಯಲ್ಲಿ ನಿರೂಪಿಸಿರುವ ವಿಷಯಗಳ ಸಂಬಂಧದಲ್ಲಿನ ನಗರಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಯೋಜನೆಗಳನ್ನು

ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರವನ್ನು ಮತ್ತು ಜವಾಬ್ದಾರಿಯನ್ನು ಹೊಂದಿರತಕ್ಕದ್ದು:

ಪರಂತು, ಮೊದಲ ಅನುಸೂಚಿಯಲ್ಲಿ ಮುಖ್ಯ ಪ್ರಕಾರ್ಯಗಳಾಗಿ ನಿರೂಪಿಸಿದ ವಿಷಯಗಳ ಸಂಬಂಧದಲ್ಲಿ ನಗರ ಪಾಲಿಕೆಯ ಪ್ರದೇಶದೊಳಗಿನ ನಿವಾಸಿಗಳಿಗೆ ಅವಶ್ಯಕ ಸೇವೆಗಳನ್ನು ಸಲ್ಲಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು;

(2) ನಗರ ಪಾಲಿಕೆಗೆ ವಹಿಸಿದ ವಿಷಯಗಳ ಸಂಬಂಧದಲ್ಲಿ ಸ್ವಯಂ-ಆಡಳಿತದ ಸಂಸ್ಥೆಯಾಗಿ ಪ್ರಕಾರ್ಯ ನಿರ್ವಹಿಸಲು ಅದನ್ನು ಶಕ್ತಗೊಳಿಸಲು, ನಿಯಮಿಸಬಹುದಾದಂಥ ಅಧಿಕಾರಗಳನ್ನು, ಪ್ರಾಧಿಕಾರಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರತಕ್ಕದ್ದು.

(3) ಸರ್ಕಾರವು ಮೊದಲನೇ ಅನುಸೂಚಿಯಲ್ಲಿ ಉಪಬಂಧಿಸಿದ ವಿಷಯಗಳ ಸಂಬಂಧದಲ್ಲಿನ ವಾರ್ಷಿಕ ಆಯವ್ಯಯ ಹಂಚಿಕೆಯನ್ನು ನಗರ ಪಾಲಿಕೆಗೆ ಸಂಪೂರ್ಣವಾಗಿ ಹಂಚಿಕೆ ಮಾಡತಕ್ಕದ್ದು.

(4) ಸರ್ಕಾರದ ಮಾರ್ಗಸೂಚಿಗಳು ಮತ್ತು ತಾಂತ್ರಿಕ ನಿರ್ದೇಶನಗಳಿಗೆ ಒಳಪಟ್ಟು ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗನುಸಾರವಾಗಿ ನಗರ ಪಾಲಿಕೆಗೆ ಹಂಚಿಕೆ ಮಾಡಿದ ಸಂಸ್ಥೆಗಳನ್ನು ಮತ್ತು ಯೋಜನೆಗಳನ್ನು ನಿರ್ವಹಿಸತಕ್ಕದ್ದು.

(5) ಯಾವುದೇ ಅಭಿವೃದ್ಧಿ ಯೋಜನೆ, ಪರಿಯೋಜನೆ ಅಥವಾ ಯೋಜನೆಯು ಫಲಾನುಭವಿಗಳ ಆಯ್ಕೆಯನ್ನು ಒಳಗೊಂಡಿದ್ದಲ್ಲಿ, ಅರ್ಹತೆಯ ಮಾನದಂಡಗಳು ಮತ್ತು ಅಂಥ ಆಯ್ಕೆಗೆ ಆದ್ಯತೆಯನ್ನು, ಅಂಥ ಸ್ಕೀಮ್, ಪರಿಯೋಜನೆ ಅಥವಾ ಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನಗರ ಪಾಲಿಕೆಯು ನಿರ್ಧರಿಸತಕ್ಕದ್ದು ಹಾಗೂ ಅಂಥ ಮಾನದಂಡವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಂಬಂಧಪಟ್ಟ ವಾರ್ಡ್ ಸಮಿತಿಗೆ ಸೂಚಿಸತಕ್ಕದ್ದು.

112. ಸರ್ಕಾರವು ವಹಿಸಿದ ಹೆಚ್ಚುವರಿ ಪ್ರಕಾರ್ಯಗಳು.- (1) ನಗರ ಪಾಲಿಕೆಯು, ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅನುಮೋದನೆ ಮೂಲಕ ಮತ್ತು ಅವುಗಳ ಅನುಮೋದನೆಯ ಮೇರೆಗೆ, ವೆಚ್ಚಗಳ ಖಾತರಿ ನೀಡಿಕೆಗೆ ಒಳಪಟ್ಟು, ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಪ್ರಕಾರ್ಯಗಳ ಕ್ಷೇತ್ರಕ್ಕೆ ಸೇರಿದ ಯಾವುದೇ ಪ್ರಕಾರ್ಯವನ್ನು ಕೈಗೊಳ್ಳಬಹುದು ಹಾಗೂ ಅಂಥ ಪ್ರಕಾರ್ಯಗಳು, ಪ್ರಾಥಮಿಕ ಶಿಕ್ಷಣ, ಗುಣಪಡಿಸಬಹುದಾದ ಆರೋಗ್ಯ, ನಗರ ಸಾರಿಗೆ, ಇಂಧನ ಸರಬರಾಜು, ಅಗ್ನಿ ಶಾಮಕ ಮತ್ತು ಅಗ್ನಿ ಸುರಕ್ಷತೆ ಹಾಗೂ ನಗರ ಬಡತನ ನಿರ್ಮೂಲನೆಯನ್ನು ಒಳಗೊಳ್ಳಬಹುದಾದಂಥ ಪ್ರಕಾರ್ಯಗಳನ್ನು ಕೈಗೊಳ್ಳಬಹುದು.

(2) ರಾಜ್ಯ ಸರ್ಕಾರದ ಆದೇಶಗಳಿಗೆ ಒಳಪಟ್ಟು ನಗರ ಪಾಲಿಕೆಯು, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂಥ ಅಥವಾ ಎಲ್ಲಾ ಪ್ರಕಾರ್ಯಗಳನ್ನು ಕೈಗೊಳ್ಳಬಹುದು.-

(ಎ) ವಾಣಿಜ್ಯ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಒಳಗೊಂಡು ನಗರಾಭಿವೃದ್ಧಿ;

(ಬಿ) ಸಮುದಾಯ ಸಂಬಂಧಗಳು ಸೇರಿದಂತೆ ಸಾರ್ವಜನಿಕ ಕ್ಷೇಮಾಭಿವೃದ್ಧಿ; ಮತ್ತು

(ಸಿ) ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳು.

113. ನಗರ ಪಾಲಿಕೆಯ ನಿಧಿಯ ಕುರಿತು ಮೊದಲ ಆದ್ಯತೆ (ಚಾರ್ಜ್).- (1) ನಗರ ಪಾಲಿಕೆಯ ಮುಖ್ಯ ಪ್ರಕಾರ್ಯಗಳು, ನಗರ ಪಾಲಿಕೆಯ ನಿಧಿಯ ಕುರಿತು ಮೊದಲ ಆದ್ಯತೆ (ಚಾರ್ಜ್‌ನ್ನು) ಆಗಿರತಕ್ಕದ್ದು.

(2) ಮುಖ್ಯ ಪ್ರಕಾರ್ಯಗಳ ತೃಪ್ತಿದಾಯಕ ನೆರವೇರಿಕೆ ಮತ್ತು ನಗರ ಪಾಲಿಕೆಯ ನಿಧಿಗಳ ಲಭ್ಯತೆಗೆ ಒಳಪಟ್ಟು, ಮೊದಲನೇ ಅನುಸೂಚಿಯಲ್ಲಿ ಉಲ್ಲೇಖಿಸಲಾದ ಯಾವುದೇ ಸಾಮಾನ್ಯ ಪ್ರಕಾರ್ಯಗಳ ಅಥವಾ ವಲಯವಾರು ಪ್ರಕಾರ್ಯಗಳನ್ನು ಕೈಗೊಳ್ಳುವುದು ಅಥವಾ ನೆರವೇರಿಸುವುದು ಅಥವಾ ನೆರವೇರಿಸಲು ಉತ್ತೇಜಿಸುವುದು.

114. ನಗರ ಪಾಲಿಕೆಯ ಮತ್ತು ಸ್ಥಾಯಿ ಸಮಿತಿಗಳ ವ್ಯವಹರಣೆಗಳು.- (1) ಸಾರ್ವತ್ರಿಕ ಚುನಾವಣೆಯ ತರುವಾಯ ನಗರ ಪಾಲಿಕೆಯ ಮೊದಲ ಸಭೆಯನ್ನು ಅಂಥ ಚುನಾವಣೆಯ ಫಲಿತಾಂಶಗಳು ಪ್ರಕಟವಾದ ತರುವಾಯ ಆದಷ್ಟು ಬೇಗನೆ ನಡೆಸತಕ್ಕದ್ದು

ಮತ್ತು ಆಯುಕ್ತರು ಆ ಸಭೆಯನ್ನು ಕರೆಯತಕ್ಕದ್ದು. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(2) ನಗರ ಪಾಲಿಕೆಯ ಮತ್ತು ಸ್ಥಾಯಿ ಸಮಿತಿಗಳ ಸಭೆಗಳನ್ನು ನಗರ ಪಾಲಿಕೆಯ ಕಚೇರಿಯಲ್ಲಿ ನಡೆಸತಕ್ಕದ್ದು ಮತ್ತು ಆ ಸಭೆಗಳ ಮುಂದೆ ಇರುವ ಕಾರ್ಯಕಲಾಪಗಳನ್ನು ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಲೇ ಮಾಡತಕ್ಕದ್ದು, ಅಂಥ ಸಭೆಗಳ ನೋಟೀಸುಗಳನ್ನು ಕೌನ್ಸಿಲ್ ಕಾರ್ಯದರ್ಶಿಯವರು ನೀಡತಕ್ಕದ್ದು, ಅವರು ನಗರ ಪಾಲಿಕೆಯ ಸಭೆಗಳ ಸಂದರ್ಭದಲ್ಲಿ ಮಹಾಪೌರರೊಂದಿಗೆ ಮತ್ತು ಆಯುಕ್ತರೊಂದಿಗೆ ಸಮಾಲೋಚಿಸಿ ಮತ್ತು ಸ್ಥಾಯಿ ಸಮಿತಿಯ ಸಭೆಗಳ ಸಂದರ್ಭದಲ್ಲಿ, ಅಂಥ ಸಮಿತಿಯ ಅಧ್ಯಕ್ಷರೊಂದಿಗೆ ಮತ್ತು ಆಯುಕ್ತರೊಂದಿಗೆ ಸಮಾಲೋಚಿಸಿ ನೋಟೀಸುಗಳನ್ನು ನೀಡತಕ್ಕದ್ದು. ಪ್ರತಿಯೊಂದು ನೋಟೀಸಿನಲ್ಲಿ ಸಭೆಯ ಕಾರ್ಯಸೂಚಿಯನ್ನು ನಿರ್ದಿಷ್ಟಪಡಿಸತಕ್ಕದ್ದು. ಮಹಾಪೌರರು ಅಥವಾ ಅಧ್ಯಕ್ಷರು ತುರ್ತು ವಿಷಯಗಳು ಎಂದು ಪರಿಗಣಿಸುವ ವಿಷಯಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಕಾರ್ಯಸೂಚಿಯಲ್ಲಿ ಒಳಗೊಂಡಿರದ ಯಾವುದೇ ವಿಷಯವನ್ನು ಸಭೆಯಲ್ಲಿ ಕೈಗೆತ್ತಿಕೊಳ್ಳತಕ್ಕದ್ದಲ್ಲ. ಅಂಥ ತುರ್ತು ವಿಷಯಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ಪೂರಕ ಕಾರ್ಯಸೂಚಿಯನ್ನು ಸಭೆಗೆ ಮುಂಚೆ ನಗರ ಪಾಲಿಕೆ ಸದಸ್ಯರುಗಳಿಗೆ ಅಥವಾ ಸದಸ್ಯರಿಗೆ ಕೊಟ್ಟಿದ್ದರೆ ಪರಿಗಣಿಸಬಹುದು.

(3) ನಗರ ಪಾಲಿಕೆಯು ತನ್ನ ಅಧಿಕಾರಿಗಳ ಪೈಕಿ ಯಾರೇ ಅಧಿಕಾರಿಯನ್ನು, ಅಂಥ ಅಧಿಕಾರಿಯು ತನ್ನ ಕರ್ತವ್ಯ ಪಾಲನೆಯಲ್ಲಿ ವ್ಯವಹರಿಸಿದ ಯಾವುದೇ ವಿಷಯವನ್ನು ನಗರಪಾಲಿಕೆಯ ಯಾವ ಸಭೆಯಲ್ಲಿ ಚರ್ಚಿಸಲಾಗುವುದೋ ಆ ಸಭೆಗೆ ಹಾಜರಾಗುವಂತೆ ಅಗತ್ಯಪಡಿಸಬಹುದು, ಹಾಗೆ ಯಾರೇ ಅಧಿಕಾರಿಯನ್ನು ಅಂಥ ಯಾವುದೇ ಸಭೆಗೆ ಹಾಜರಾಗುವಂತೆ ಅಗತ್ಯಪಡಿಸಿದಾಗ ಅವನು ವ್ಯವಹರಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ನಗರ ಪಾಲಿಕೆಯು ಅಗತ್ಯಪಡಿಸಬಹುದಾದಂಥ ವಾಸ್ತವಾಂಶಗಳ ಹೇಳಿಕೆಯನ್ನು ನೀಡುವಂತೆ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಬಳಿ ಇರುವಂಥ ಮಾಹಿತಿಯನ್ನು ಒದಗಿಸುವಂತೆ ಆತನಿಗೆ ಕೇಳಬಹುದು.

115. ನಗರ ಪಾಲಿಕೆಯ ನಿರ್ಣಯಗಳನ್ನು ಕಾರ್ಯಗತಗೊಳಿಸುವುದಕ್ಕೆ ಉಳಿದ ಪಾಲಿಕೆ ಪ್ರಾಧಿಕಾರಗಳ ಮೇಲೆ ಹೊರಿಸಿದ ಹೊಣೆಗಾರಿಕೆ.- ಆಯುಕ್ತರು ನಗರ ಪಾಲಿಕೆಯ ಪ್ರತಿಯೊಂದು ನಿರ್ಣಯವನ್ನು, ಸರ್ಕಾರವು ಅಂಥ ನಿರ್ಣಯವನ್ನು ಪೂರ್ಣವಾಗಿ ಅಥವಾ ಭಾಗಶಃ ರದ್ದುಗೊಳಿಸಿದ ಹೊರತು, ಕಾರ್ಯಗತಗೊಳಿಸಲು ಬದ್ಧರಾಗಿರತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ ರಚಿಸಿದ ನಗರ ಪಾಲಿಕೆಯ ಅಥವಾ ಸಮಿತಿಯ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ವಿನಿಯಮ ಅಥವಾ ಉಪವಿಧಿಯನ್ನು ಉಲ್ಲಂಘಿಸುತ್ತದೆಂದು ಅಥವಾ ನಗರ ಪಾಲಿಕೆಯ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆಂದು ಆಯುಕ್ತರು ಅಭಿಪ್ರಾಯಪಟ್ಟರೆ, ಅವರು ಆ ನಿರ್ಣಯವನ್ನು ಅಂಗೀಕರಿಸಿದ ನಲವತ್ತೈದು ದಿನಗಳ ಒಳಗಾಗಿ, ಆದೇಶಗಳಿಗಾಗಿ ಸರ್ಕಾರಕ್ಕೆ ಆ ವಿಷಯವನ್ನು ಕಳುಹಿಸತಕ್ಕದ್ದು ಮತ್ತು ಸಂದರ್ಭಾನುಸಾರ ನಗರ ಪಾಲಿಕೆಗೆ ಅಥವಾ ಸಮಿತಿಗೆ ತಾನು ಕೈಕೊಂಡ ಕ್ರಮದ ಬಗ್ಗೆ ಅದರ ಮುಂದಿನ ಸಭೆಯಲ್ಲಿ ತಿಳಿಸತಕ್ಕದ್ದು ಮತ್ತು ಹಾಗೆ ಕಳುಹಿಸಿದ ವಿಷಯದ ಬಗ್ಗೆ ಸರ್ಕಾರದ ಆದೇಶವನ್ನು ಸ್ವೀಕರಿಸುವವರೆಗೆ ಆಯುಕ್ತರು ಆ ನಿರ್ಣಯವನ್ನು ಕಾರ್ಯಗತಗೊಳಿಸಲು ಬದ್ಧರಾಗಿರತಕ್ಕದ್ದಲ್ಲ.

116. ನಗರ ಪಾಲಿಕೆಯು, ವ್ಯವಹರಣೆಗಳು, ಮುಂತಾದವುಗಳ ಉದ್ಭೃತ ಭಾಗಗಳನ್ನು ಸ್ಥಾಯಿ ಸಮಿತಿಯಿಂದ ತರಿಸಿಕೊಳ್ಳಬಹುದು, ಇತ್ಯಾದಿ.- **ನಗರ** ಪಾಲಿಕೆಯು ಈ ಅಧಿನಿಯಮದ ಮೇರೆಗೆ ರಚಿತವಾದ ಯಾವುದೇ ಸಮಿತಿಯ ಯಾವುವೇ ವ್ಯವಹರಣೆಗಳ ಉದ್ಭೃತ ಭಾಗವನ್ನು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ವಿಷಯದ ಬಗ್ಗೆ ವ್ಯವಹರಿಸಲು ಅಂಥ ಯಾವುದೇ ಸಮಿತಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಪಡುವ ಅಥವಾ ಸಂಬಂಧಿಸಿದ ಯಾವುದೇ ವಿವರಪಟ್ಟಿಕೆ, ವಿವರಣಾ ಪತ್ರ, ಲೆಕ್ಕಪತ್ರ ಅಥವಾ ವರದಿಯನ್ನು ಯಾವುದೇ ಕಾಲದಲ್ಲಿ ತರಿಸಿಕೊಳ್ಳಬಹುದು ಮತ್ತು ಅಂಥ ಪ್ರತಿಯೊಂದು ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಸಮಿತಿಯು ಪಾಲಿಸತಕ್ಕದ್ದು.

117. ನಗರ ಪಾಲಿಕೆಯ ವ್ಯವಹರಣೆಗಳು, ಮುಂತಾದವುಗಳು, ಅದರ ಸದಸ್ಯರ ಅನರ್ಹತೆ, ಇತ್ಯಾದಿಗಳಿಂದಾಗಿ ನಿರರ್ಥಕಗೊಳ್ಳತಕ್ಕದ್ದಲ್ಲ.- (1) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ವ್ಯವಹರಣೆಯನ್ನು,-

(ಎ) ನಗರ ಪಾಲಿಕೆಯಲ್ಲಿ ಅಥವಾ ಯಾವುದೇ ಸ್ಥಾಯಿ ಸಮಿತಿಯಲ್ಲಿ ಯಾವುದೇ ಖಾಲೀ ಸ್ಥಾನ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಬಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಕಾರ್ಯ ಅಥವಾ ವ್ಯವಹರಣೆಯಲ್ಲಿ ಯಾವುದೇ ದೋಷ ಅಥವಾ ಅಕ್ರಮತೆ ಇರುವ,

- ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

(2) ನಗರಪಾಲಿಕೆ ಸದಸ್ಯನಾಗಿ, ಮಹಾಪೌರ ಆಗಿ ಅಥವಾ ಉಪಮಹಾಪೌರ ಆಗಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ಅನರ್ಹತೆಯು ಅಥವಾ ಅವರ ಚುನಾವಣೆಯಲ್ಲಿನ ಅಥವಾ ನೇಮಕದಲ್ಲಿನ ನ್ಯೂನತೆಯು ಅಂಥ ವ್ಯಕ್ತಿಯು ಪಾಲ್ಗೊಂಡಿದ್ದ ನಗರ ಪಾಲಿಕೆಯ ಅಥವಾ ಯಾವುದೇ ಸ್ಥಾಯಿ ಸಮಿತಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ನಿರರ್ಥಕಗೊಳಿಸುವುದೆಂದು ಭಾವಿಸತಕ್ಕದ್ದಲ್ಲ. ಆದರೆ, ಅಂಥ ಕಾರ್ಯದ ಅಥವಾ ವ್ಯವಹರಣೆಗಳ ಪಕ್ಷಕಾರರಾಗಿರುವ ವ್ಯಕ್ತಿಗಳಲ್ಲಿ ಬಹುತೇಕರು ಆ ಕಾರ್ಯ ಮಾಡಲು ಹಕ್ಕುಳ್ಳವರಾಗಿರಬೇಕು.

118. ವ್ಯವಹರಣೆಗಳನ್ನು ದಾಖಲಿಸುವುದು.- ನಗರ ಪಾಲಿಕೆಯ ಮತ್ತು ಸ್ಥಾಯಿ ಸಮಿತಿಗಳ ಸಭೆಗಳ ವ್ಯವಹರಣೆಯನ್ನು ಕೌನ್ಸಿಲ್ ಕಾರ್ಯದರ್ಶಿಯವರು ದಾಖಲು ಮಾಡತಕ್ಕದ್ದು ಮತ್ತು ಸ್ಥಿರೀಕರಣಕ್ಕಾಗಿ ಮುಂದಿನ ಸಭೆಯ ಮುಂದೆ ಇಡತಕ್ಕದ್ದು.

119. ಸಭೆಗಳ ವ್ಯವಹರಣೆಗಳು ತದ್ವಿರುದ್ಧವಾಗಿರುವುದು ರುಜುವಾತಾಗುವವರೆಗೆ ಸರಿಯಾದವುಗಳು ಮತ್ತು ಸಿಂಧುವಾದವುಗಳು ಆಗಿರತಕ್ಕದ್ದು.- ತದ್ವಿರುದ್ಧವಾಗಿರುವುದು ರುಜುವಾತಾಗುವವರೆಗೆ, ಈ ಅಧಿನಿಯಮದ ಅಥವಾ ನಿಯಮಗಳಿಗೆ ಅನುಸಾರವಾಗಿ ಯಾವ ಸಭೆಯ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸಂಕ್ಷಿಪ್ತ ನಡವಳಿಯನ್ನು ಮಾಡಲಾಗಿದೆಯೋ ಮತ್ತು ಅದಕ್ಕೆ ಸಹಿ ಮಾಡಲಾಗಿದೆಯೋ ನಗರ ಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಅಂಥ ಪ್ರತಿಯೊಂದು ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿದೆ ಮತ್ತು ನಡೆಸಲಾಗಿದೆ ಮತ್ತು ಅದು ಎಲ್ಲ ನ್ಯೂನತೆಗಳಿಂದ ಹಾಗೂ ಅಕ್ರಮತೆಗಳಿಂದ ಮುಕ್ತವಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಆ ಸಭೆಯ ಎಲ್ಲ ಸದಸ್ಯರು ಕ್ರಮಬದ್ಧವಾಗಿ ಅರ್ಹರಾಗಿದ್ದಾರೆಂದು ಭಾವಿಸತಕ್ಕದ್ದು; ಮತ್ತು ಆ ವ್ಯವಹರಣೆಗಳು ಸ್ಥಾಯಿ ಸಮಿತಿಯ ವ್ಯವಹರಣೆಗಳಾಗಿದ್ದಲ್ಲಿ ಅಂಥ ಸ್ಥಾಯಿ ಸಮಿತಿಯು ಕ್ರಮಬದ್ಧವಾಗಿ ರಚಿತವಾಗಿದೆ ಮತ್ತು ನಡವಳಿಯಲ್ಲಿ ಉಲ್ಲೇಖಿಸಲಾದ ವಿಷಯಗಳ ಬಗ್ಗೆ ವ್ಯವಹರಿಸಲು ಅದು ಅಧಿಕಾರ ಹೊಂದಿರುತ್ತದೆ ಎಂದು ಭಾವಿಸತಕ್ಕದ್ದು.

120. ಚರ್ಚೆಯಲ್ಲಿ ಹಾಜರಿರಲು ಮತ್ತು ಭಾಗವಹಿಸಲು ಆಯುಕ್ತನಿಗಿರುವ ಹಕ್ಕು, ಆದರೆ ನಿರ್ಣಯವನ್ನು ಮಂಡಿಸಲು ಅಥವಾ ಮತ ನೀಡಲು ಹಕ್ಕು ಇರತಕ್ಕದ್ದಲ್ಲ.- (1) ಆಯುಕ್ತರು ನಗರ ಪಾಲಿಕೆಯ ಅಥವಾ ಯಾವುದೇ ಸ್ಥಾಯಿ ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು ಆದರೆ ಯಾವುದೇ ನಿರ್ಣಯವನ್ನು ಮಂಡಿಸಲು ಅಥವಾ ಮತ ನೀಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(2) ನಗರ ಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಯಾವುದೇ ಸಭೆಗೆ ಹಾಜರಾಗುವಂತೆ ಮಹಾಪೌರರು ಅಗತ್ಯಪಡಿಸಿದರೆ ಅವರು ಆ ಸಭೆಗೆ ಹಾಜರಾಗಬಹುದು.

121. ನಗರ ಪಾಲಿಕೆ ಸದಸ್ಯನು ಅವನು ಆರ್ಥಿಕ ಹಿತಾಸಕ್ತಿ ಹೊಂದಿರುವಂಥ ಪ್ರಶ್ನೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸದಿರುವುದು ಮತ್ತು ಮತ ನೀಡದಿರುವುದು.- (1) ಯಾರೇ ಪಾಲಿಕೆ ಸದಸ್ಯನು, ನಗರ ಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬರುವ ಯಾವುದೇ ಪ್ರಶ್ನೆಯು, ಯಾವ ಪ್ರಶ್ನೆಯಲ್ಲಿ ಸಾರ್ವಜನಿಕರಿಗೆ ಸಾಮಾನ್ಯವಾಗಿ ಅದು ಅನ್ವಯವಾಗುವುದರ ಜೊತೆಗೆ ಸ್ವತಃ ತಾನು ಅಥವಾ ತನ್ನ ಪಾಲುದಾರನು ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಆರ್ಥಿಕ ಹಿತಾಸಕ್ತಿಯನ್ನು

ಹೊಂದಿರುವನೋ ಅಂಥ ಪ್ರಶ್ನೆ ಆಗಿದ್ದರೆ ಆ ಪ್ರಶ್ನೆಯ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ.

(2) ಮಹಾಪೌರ ಯಾರೇ ನಗರ ಪಾಲಿಕೆ ಸದಸ್ಯನು ಅಂಥ ಹಿತಾಸಕ್ತಿಯನ್ನು ಹೊಂದಿರುವನೆಂದು ನಂಬಲಾದ ಯಾವುದೇ ವಿಷಯದ ಮೇಲೆ ಮತ ನೀಡದಂತೆ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸದಂತೆ ಆ ನಗರ ಪಾಲಿಕೆ ಸದಸ್ಯನನ್ನು ಪ್ರತಿಬಂಧಿಸಬಹುದು ಅಥವಾ ಅವರು ಆ ಚರ್ಚೆಯಾಗುವಾಗ ಗೈರು ಹಾಜರಾಗುವಂತೆ ಆ ನಗರ ಪಾಲಿಕೆ ಸದಸ್ಯನನ್ನು ಅಗತ್ಯಪಡಿಸಬಹುದು.

(3) ನಗರ ಪಾಲಿಕೆಯ ಅಂಥ ಸದಸ್ಯನು ಮಹಾಪೌರನ ತೀರ್ಮಾನವನ್ನು ಪ್ರಶ್ನಿಸಬಹುದು. ಆಮೇಲೆ ಮಹಾಪೌರನು ಆ ಪ್ರಶ್ನೆಯನ್ನು ಮತಕ್ಕೆ ಹಾಕತಕ್ಕದ್ದು ಮತ್ತು ಸಭೆಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಸಭೆಯಲ್ಲಿ ಹಾಜರಿರುವ ಯಾರೇ ನಗರ ಪಾಲಿಕೆ ಸದಸ್ಯನು, ಮಹಾಪೌರ ಅಥವಾ ಅಧ್ಯಕ್ಷನು ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಯಾವುದೇ ಹಿತಾಸಕ್ತಿ ಹೊಂದಿರುವನೆಂದು ಆಪಾದಿಸಿದಲ್ಲಿ, ಆತನು ಅಂಥ ನಗರ ಪಾಲಿಕೆ ಸದಸ್ಯನ ನಿಲುವಳಿಯ ಮೇಲೆ ಚರ್ಚೆ ನಡೆಯುವ ಸಮಯದಲ್ಲಿ ಸಭೆಯಿಂದ ಆತನು ತಾನಾಗಿಯೇ ಗೈರು ಹಾಜರಿಯಾಗುವಂತೆ ಅಗತ್ಯಪಡಿಸಬಹುದು.

(5) ಸಂಬಂಧಪಟ್ಟ ನಗರ ಪಾಲಿಕೆ ಸದಸ್ಯನು ಉಪ-ಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ವಿಚಾರದ ಮೇಲೆ ಮತವನ್ನು ಹಾಕಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಸಂಬಂಧಪಟ್ಟ ಮಹಾಪೌರ ಅಥವಾ ಅಧ್ಯಕ್ಷನು ಉಪ-ಪ್ರಕರಣ (4)ರಲ್ಲಿ ಉಲ್ಲೇಖಿಸಲಾದ ವಿಚಾರದ ಮೇಲೆ ಮತವನ್ನು ಹಾಕಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

122. ಆಡಳಿತ ವರದಿ ಸಲ್ಲಿಕೆ.- (1) ಪ್ರತಿ ವರ್ಷದ ಏಪ್ರಿಲ್ ತಿಂಗಳ ಮೊದಲ ದಿನದ ನಂತರ ಆದಷ್ಟು ಬೇಗನೆ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ನಿರ್ಧರಿಸಬಹುದಾದಂಥ ದಿನಾಂಕವನ್ನು ಮೀರದಂತೆ ನಗರ ಪಾಲಿಕೆಯು, ಗ್ರೇಟರ್ ಬೆಂಗಳೂರು ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಹಿಂದಿನ ವರ್ಷದ ಸವಿವರವಾದ ಆಡಳಿತ ವರದಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಅಂಥ ವರದಿಯನ್ನು ಆಯುಕ್ತರು ಸಿದ್ಧಪಡಿಸತಕ್ಕದ್ದು ಮತ್ತು ಆ ವರದಿಯನ್ನು ನಗರ ಪಾಲಿಕೆಯು ಪರಿಶೀಲಿಸಿ ಅದರ ಮೇಲೆ ತನ್ನ ನಿರ್ಣಯಗಳು ಯಾವುದಾದರೂ ಇದ್ದರೆ ಅವುಗಳೊಂದಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) ಆಡಳಿತ ವರದಿಯ ಪ್ರತಿಗಳನ್ನು ನಗರ ಪಾಲಿಕೆಯ ಕಛೇರಿಯಲ್ಲಿ ಮಾರಾಟಕ್ಕಾಗಿ ಇಡತಕ್ಕದ್ದು.

ಅಧ್ಯಾಯ X
ಅತ್ಯಾವಶ್ಯಕ ಸೇವೆಗಳು

123. ಅತ್ಯಾವಶ್ಯಕ ಸೇವೆಗಳು ಇತ್ಯಾದಿಗಳ ಘೋಷಣೆ.- (1) ನಗರ ಪಾಲಿಕೆಯು ಕಾಲಕಾಲಕ್ಕೆ ಅದು ಅವಶ್ಯಕವೆಂದು ಪರಿಗಣಿಸುವಂಥ ತನ್ನ ಸೇವೆಗಳ ಅಂಥ ವರ್ಗಗಳನ್ನು ಅತ್ಯಾವಶ್ಯಕ ಸೇವೆಗಳೆಂದು ಘೋಷಿಸಬಹುದು.

(2) ಅತ್ಯಾವಶ್ಯಕ ಸೇವೆಯ ಯಾರೇ ಸದಸ್ಯನು,-

(ಎ) ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತನ್ನನ್ನು ಅಸಮರ್ಥನನ್ನಾಗಿಸಿರುವ ಕಾಯಿಲೆಯ ಅಥವಾ ಅಪಘಾತಗಳ ಸಂದರ್ಭದಲ್ಲಿ ಅಥವಾ ಆಯುಕ್ತರು ಅಥವಾ ಅಂಥ ಅಧಿಕಾರಿಯು ಪರ್ಯಾಪ್ತವೆಂದು ಒಪ್ಪಿಕೊಂಡ ಇತರ ಹೊರತು, ಆಯುಕ್ತರಿಗೆ ಕನಿಷ್ಠ ಎರಡು ತಿಂಗಳ ಲಿಖಿತ ನೋಟೀಸನ್ನು ಕೊಡದೆಯೆ ಆಯುಕ್ತರ ಅಥವಾ ಈ ಬಗ್ಗೆ ಅವರಿಂದ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ತನ್ನ ಹುದ್ದೆಗೆ ರಾಜೀನಾಮೆ ನೀಡತಕ್ಕದ್ದಲ್ಲ, ತನ್ನ

ಕರ್ತವ್ಯಗಳಿಂದ ಹಿಂದೆ ಸರಿಯತಕ್ಕದ್ದಲ್ಲ ಅಥವಾ ಗೈರುಹಾಜರಾಗತಕ್ಕದ್ದಲ್ಲ; ಅಥವಾ

(ಬಿ) ಆಯುಕ್ತರ ಅಥವಾ ಅಂಥ ಅಧಿಕೃತ ಅಧಿಕಾರಿಯ ಅಭಿಪ್ರಾಯದಲ್ಲಿ ಪರಿಣಾಮಕಾರಿಯಾಗಿರುವ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ನಿರ್ಲಕ್ಷಿಸತಕ್ಕದ್ದಲ್ಲ ಅಥವಾ ಅವುಗಳನ್ನು ಅಂಥ ರೀತಿಯಲ್ಲಿ ನೆರವೇರಿಸಲು ಉದ್ದೇಶಪೂರ್ವಕವಾಗಿ ನಿರಾಕರಿಸತಕ್ಕದ್ದಲ್ಲ.

124. ತುರ್ತು ಪರಿಸ್ಥಿತಿಯನ್ನು ಘೋಷಿಸಲು ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ.- ಅತ್ಯಾವಶ್ಯಕ ಸೇವೆಗಳಲ್ಲಿ ಯಾವುದೇ ಆಗಲಿ ನೆರವೇರುವುದು ನಿಲ್ಲಿಸಿದಾಗ ಅಥವಾ ಸಮಾಪ್ತಿಗೊಳಿಸಿದಾಗ ನಗರ ಪಾಲಿಕೆಗಳಲ್ಲಿನ ಸಮುದಾಯದ ಸುರಕ್ಷತೆಗೆ ಅಥವಾ ಆರೋಗ್ಯಕ್ಕೆ ಅಥವಾ ಸಮುದಾಯದ ಬದುಕಿಗೆ ಅತ್ಯವಶ್ಯಕವಾದ ಸೇವೆಗಳ ನಿರ್ವಹಣೆಗೆ ಪ್ರತಿಕೂಲವಾಗುತ್ತದೆಂದು ಸರ್ಕಾರ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ನಗರದಲ್ಲಿ ತುರ್ತು ಪರಿಸ್ಥಿತಿ ಅಸ್ತಿತ್ವದಲ್ಲಿದೆ ಎಂದು ಅಧಿಸೂಚನೆಯ ಮೂಲಕ ಘೋಷಿಸಬಹುದು ಮತ್ತು ಆ ಪರಿಣಾಮವಾಗಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅತ್ಯಾವಶ್ಯಕ ಸೇವೆಗಳ ಯಾರೇ ಸದಸ್ಯನು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಏನೇ ಇದ್ದರೂ,-

(ಎ) ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತನ್ನನ್ನು ಅನರ್ಹನನ್ನಾಗಿಸಿದ ಕಾಯಿಲೆಯ ಅಥವಾ ಅಪಘಾತದ ಸಂದರ್ಭದಲ್ಲಿ ಹೊರತು, ತನ್ನ ಕರ್ತವ್ಯಗಳಿಂದ ಹಿಂದೆ ಸರಿಯತಕ್ಕದ್ದಲ್ಲವೆಂದು ಅಥವಾ ಸ್ವತಃ ಗೈರುಹಾಜರಾಗತಕ್ಕದ್ದಲ್ಲವೆಂದು; ಅಥವಾ

(ಬಿ) ತನ್ನ ಕರ್ತವ್ಯಗಳನ್ನು ನೆರವೇರಿಸಲು ನಿರ್ಲಕ್ಷಿಸತಕ್ಕದ್ದಲ್ಲವೆಂದು ಅಥವಾ ನಿರಾಕರಿಸತಕ್ಕದ್ದಲ್ಲವೆಂದು ಅಥವಾ ಅವುಗಳನ್ನು ನೆರವೇರಿಸುವ ರೀತಿಯು ಅಸಮರ್ಥವಾದುದೆಂದು ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು ಅಭಿಪ್ರಾಯಪಟ್ಟರೆ ಅವುಗಳನ್ನು ಉದ್ದೇಶಪೂರ್ವಕವಾಗಿ ಆ ರೀತಿಯಲ್ಲಿ ನೆರವೇರಿಸತಕ್ಕದ್ದಲ್ಲವೆಂದು,

- ಸಹ ಘೋಷಿಸಬಹುದು.

ಅಧ್ಯಾಯ - XI
ಸರ್ಕಾರದ ಅಧಿಕಾರಗಳು

125. ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಪರಿಶೀಲನೆ ಮಾಡಿಸಲು ಸರ್ಕಾರದ ಅಧಿಕಾರ.- (1) ಸರ್ಕಾರವು ಯಾವುದೇ ಸಮಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ**,-**

(ಎ) ಯಾವುದೇ ದಾಖಲೆ, ವ್ಯವಹರಣೆ, ಪತ್ರವ್ಯವಹಾರ, ನಕ್ಷೆ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವಂತೆ;

(ಬಿ) ನಗರ ಪಾಲಿಕೆಯ ಅಥವಾ ನಗರ ಪಾಲಿಕೆಯ ಯಾವುದೇ ಪ್ರಾಧಿಕಾರದ ವ್ಯವಹರಣೆಗಳು, ಕರ್ತವ್ಯಗಳು ಅಥವಾ ಕಾಮಗಾರಿಗಳಿಗೆ ಸಂಬಂಧಪಟ್ಟ ಯಾವುದೇ ವಿವರಪಟ್ಟಿಕೆ, ನಕ್ಷೆ, ಅಂದಾಜು ಪತ್ರ, ವಿವರಣಾಪತ್ರ, ಲೆಕ್ಕಪತ್ರ ಅಥವಾ ಅಂಕಿಅಂಶಗಳನ್ನು ಒದಗಿಸುವಂತೆ; ಮತ್ತು

(ಸಿ) ಯಾವುದೇ ವರದಿಯನ್ನು ಒದಗಿಸುವಂತೆ ಅಥವಾ ಪಡೆದು ಒದಗಿಸುವಂತೆ

- ನಗರ ಪಾಲಿಕೆಯನ್ನು ಅಥವಾ ಆಯುಕ್ತರನ್ನು ಅಗತ್ಯಪಡಿಸಬಹುದು.

(2) ಸರ್ಕಾರದಿಂದ ಅಥವಾ ಆಯುಕ್ತನಿಂದ ಅಧಿಕೃತಗೊಂಡ ಸರ್ಕಾರದ ಯಾರೇ ಅಧಿಕಾರಿಯು,-

(ಎ) ನಗರ ಪಾಲಿಕೆ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಯಾವುದೇ ಸಂಸ್ಥೆಯ ಅಧಿಭೋಗದಲ್ಲಿರುವ ಯಾವುದೇ ಸ್ಥಿರ ಸ್ವತ್ತನ್ನು ಅಥವಾ ಅದರ ಅಡಿಯಲ್ಲಿ ಅಥವಾ ನಿರ್ದೇಶನದಲ್ಲಿ

ಪ್ರಗತಿಯಲ್ಲಿರುವ ಯಾವುದೇ ಕಾಮಗಾರಿಯನ್ನು, ಪ್ರವೇಶಿಸಲು ಮತ್ತು ಪರಿಶೀಲಿಸಲು ಅಥವಾ ಪ್ರವೇಶಿಸುವಂತೆ ಮತ್ತು ಪರಿಶೀಲಿಸುವಂತೆ ಮಾಡಲು;

(ಬಿ) ನಗರ ಪಾಲಿಕೆಯ ಅಥವಾ ಯಾವುದೇ ಸಮಿತಿಯ ವ್ಯವಹರಣೆಯಿಂದ ಅಥವಾ ನಗರ ಪಾಲಿಕೆಯ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕದಿಂದ ಅಥವಾ ದಸ್ತಾವೇಜಿನಿಂದ ಯಾವುದೇ ಉದ್ಧೃತ ಭಾಗವನ್ನು ತರಿಸಿಕೊಳ್ಳಲು; ಮತ್ತು

(ಸಿ) ಒಂದು ನಗರ ಪಾಲಿಕೆಯು ಮಾಡಲಿರುವ ಅಥವಾ ಮಾಡುತ್ತಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವುದೇ ಆಕ್ಷೇಪಣೆ ಇದೆಯೆಂದು ತನಗೆ ಕಂಡುಬಂದರೆ ಅಂಥ ಆಕ್ಷೇಪಣೆಯನ್ನು ಅಥವಾ ಆತ ಒದಗಿಸಲು ಸಾಧ್ಯವಿರುವ ಹಾಗೂ ನಗರ ಪಾಲಿಕೆಯು ಕೆಲವೊಂದು ಕೆಲಸವನ್ನು ಮಾಡುವುದನ್ನು ಅವಶ್ಯಗೊಳಿಸುತ್ತದೆ ಎಂದು ಆತನಿಗೆ ಕಂಡುಬರುವ ಯಾವುದೇ ಮಾಹಿತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮತ್ತು ಯುಕ್ತ ಕಾಲದೊಳಗೆ ಅಂಥ ಕಾರ್ಯವನ್ನು ಮಾಡುವುದರಿಂದ ವಿಮುಖವಾಗದೆ ಇರಲು ಮತ್ತು ಅಂಥ ಕಾರ್ಯವನ್ನು ಮಾಡದಿರಲು ಅದರ ಕಾರಣಗಳನ್ನು ತಿಳಿಸಿ ಯುಕ್ತ ಸಮಯದೊಳಗೆ ತನಗೆ ಲಿಖಿತ ಉತ್ತರ ನೀಡುವಂತೆ ನಗರ ಪಾಲಿಕೆಯನ್ನು ಅಗತ್ಯಪಡಿಸಲು,

- ಅಧಿಕಾರ ಹೊಂದಿರತಕ್ಕದ್ದು.

(3) ನಗರ ಪಾಲಿಕೆಯು ಮತ್ತು ಪ್ರತಿಯೊಂದು ನಗರಪಾಲಿಕೆ ಪ್ರಾಧಿಕಾರವು ಮತ್ತು ನಗರ ಪಾಲಿಕೆಯ ಎಲ್ಲ ಅಧಿಕಾರಿಗಳು ಮತ್ತು ನಗರ ಪಾಲಿಕೆಯ ಇತರ ನೌಕರರು, ಉಪ-ಪ್ರಕರಣ (2)ರ ಮೇರೆಗೆ ಅಧಿಕೃತನಾದ ಅಧಿಕಾರಿಗೆ ಎಲ್ಲಾ ಯುಕ್ತ ಕಾಲದಲ್ಲಿ ನಗರ ಪಾಲಿಕೆಯ ಆವರಣಗಳಿಗೆ ಮತ್ತು ಸ್ವತ್ತುಗಳಿಗೆ ಪ್ರವೇಶಾವಕಾಶ ನೀಡಲು ಮತ್ತು ತಮ್ಮ ಕರ್ತವ್ಯಗಳ ನಿರ್ವಹಣೆಗೆ ಸಾಧ್ಯವಾಗಿಸಲು ಪರಿಶೀಲನೆ ಮಾಡುವುದು ಅವಶ್ಯಕವೆಂದು ಪರಿಗಣಿಸಬಹುದಾದಂಥ ಎಲ್ಲಾ ದಾಖಲೆಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಅವರಿಗೆ ಒದಗಿಸಲು ಬದ್ಧರಾಗಿರತಕ್ಕದ್ದು.

(4) ಉಪ-ಪ್ರಕರಣ (2)ರ ಮೇರೆಗೆ ಅಧಿಕೃತಗೊಂಡ ಅಧಿಕಾರಿಯು, ಅಂಥ ಪರಿಶೀಲನೆಯ ತರುವಾಯ, ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಬಹುದು.

126. ನಗರ ಪಾಲಿಕೆಯಲ್ಲಿ ವಿಲೇಯಾಗದೆ ಬಾಕಿ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸರ್ಕಾರದ ಅಧಿಕಾರ.- (1) ಸರ್ಕಾರವು, **ಯಾವುದೇ ಸಮಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ**, ನಗರ ಪಾಲಿಕೆಯಲ್ಲಿ ಬಾಕಿ ಇರುವ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಆಯುಕ್ತರಿಂದ ತರಿಸಿಕೊಳ್ಳಬಹುದು ಮತ್ತು ಅಂಥ ದಾಖಲೆಗಳನ್ನು ಸ್ವೀಕರಿಸಿದ ನಂತರ, ಅದು, ಅವುಗಳನ್ನು ಪರಿಶೀಲಿಸಬಹುದು.

(2) ಯಾವುದೇ ವಿಷಯವನ್ನು ನಗರ ಪಾಲಿಕೆಯ ಮುಂದೆ ತಂದ ದಿನಾಂಕದಿಂದ ಮೂರು ತಿಂಗಳಿಗೂ ಹೆಚ್ಚು ಕಾಲ ನಗರ ಪಾಲಿಕೆಯಲ್ಲಿ ಅದು ಬಾಕಿ ಇದೆಯೋ ಅಥವಾ ಸ್ಥಾಯಿ ಸಮಿತಿಯ ಮುಂದೆ ಅದನ್ನು ಇಟ್ಟ ತರುವಾಯ ಅರವತ್ತು ದಿನಗಳಿಗೂ ಹೆಚ್ಚು ಕಾಲ ಅದರ ಬಳಿ ಬಾಕಿ ಇದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ನಗರ ಪಾಲಿಕೆಯ ಆಡಳಿತದ ಹಿತದೃಷ್ಟಿಯಿಂದ ಜರೂರಾಗಿ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯವಾಗಿದೆ ಎಂದು ಕಂಡುಬಂದರೆ, ಆಗ, ಸರ್ಕಾರವು ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,-

(i) ನಗರ ಪಾಲಿಕೆಗೆ ಹದಿನೈದು ದಿನಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ ಅಂಥ ವಿಷಯಕ್ಕೆ ಸಂಬಂಧಿಸಿದಂತೆ ತಾನು ಅವಶ್ಯಕವೆಂದು ಪರಿಗಣಿಸುವಂಥ ಆದೇಶಗಳನ್ನು ಹೊರಡಿಸಬಹುದು; ಅಥವಾ

(ii) ಸ್ಥಾಯಿ ಸಮಿತಿಯ ಮುಂದೆ ಬಾಕಿ ಇರುವ ವಿಷಯವನ್ನು ನಗರ ಪಾಲಿಕೆಗೆ ಒಪ್ಪಿಸಿರುವುದಾಗಿ ಭಾವಿಸತಕ್ಕದ್ದೆಂದು ಮತ್ತು ಆ ಆಧಾರದ ಮೇಲೆ ಅದನ್ನು ವಿಲೇಮಾಡತಕ್ಕದೆಂದು ನಿರ್ದೇಶಿಸಬಹುದು:

ಪರಂತು, ನಗರ ಪಾಲಿಕೆಯಲ್ಲಿ ಬಾಕಿ ಇರುವ ಸಾರ್ವಜನಿಕ ಮಹತ್ವದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಂಥ ಯಾವುದೇ ನೋಟೀಸು ಅಗತ್ಯವಾಗತಕ್ಕದ್ದಲ್ಲ ಮತ್ತು ಆ

ವಿಷಯವು ಸಾರ್ವಜನಿಕ ಮಹತ್ವದ್ದೇ ಅಥವಾ ಅಲ್ಲವೇ ಎಂಬ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಸರ್ಕಾರವು ಹೊರಡಿಸಿದ ಪ್ರತಿಯೊಂದು ಆದೇಶವನ್ನು ಆಯುಕ್ತರಿಗೆ ಕಳುಹಿಸಿಕೊಡತಕ್ಕದ್ದು. ಅವರು ಅಂಥ ಆದೇಶವು ಪಾಲಿಕೆಯ ನಿರ್ಣಯವಾಗಿದ್ದಿದ್ದರೆ ಹೇಗೋ ಹಾಗೆ ಅಂಥ ಆದೇಶವನ್ನು ಶೀಘ್ರವಾಗಿ ಜಾರಿಗೊಳಿಸತಕ್ಕದ್ದು.

127. ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ.- ಪಡೆದುಕೊಂಡ ಯಾವುದೇ ಮಾಹಿತಿಯನ್ನು ಅಥವಾ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಸರ್ಕಾರವು,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ನಗರ ಪಾಲಿಕೆಯ ಪ್ರಾಧಿಕಾರಿಗೆ ವಿಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸಿಲ್ಲವೆಂದು ಅಥವಾ ಅಪರಿಪೂರ್ಣ, ಅಸಮರ್ಥ ಅಥವಾ ಸೂಕ್ತವಲ್ಲದ ರೀತಿಯಲ್ಲಿ ನೆರವೇರಿಸಲಾಗಿದೆ ಎಂದು; ಅಥವಾ

(ಬಿ) ಅಂಥ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಸಾಕಷ್ಟು ಹಣಕಾಸು ಏರ್ಪಾಟು ಮಾಡಿಲ್ಲವೆಂದು ಅಭಿಪ್ರಾಯಪಟ್ಟರೆ, ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಹದಿನೈದು ದಿನಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸುವ ಅವಧಿಯೊಳಗೆ, ಸಂದರ್ಭಾನುಸಾರ, ಆ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವುದಕ್ಕಾಗಿ ತನಗೆ ತೃಪ್ತಿಕರವಾದ ವ್ಯವಸ್ಥೆಗಳನ್ನು ಮಾಡುವಂತೆ ಅಥವಾ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ತನಗೆ ತೃಪ್ತಿಕರವಾದ ಹಣಕಾಸಿನ ಏರ್ಪಾಟು ಮಾಡುವಂತೆ ನಗರ ಪಾಲಿಕೆಗೆ ಅಥವಾ ಆಯುಕ್ತರಿಗೆ ನಿರ್ದೇಶಿಸಬಹುದು ಮತ್ತು ನಗರಪಾಲಿಕೆಯು ಅಥವಾ ಆಯುಕ್ತರು ಅಂಥ ಆದೇಶಗಳನ್ನು ಪಾಲಿಸತಕ್ಕದ್ದು:

ಪರಂತು, ತುರ್ತು ಸಂದರ್ಭಗಳಲ್ಲಿ ಯಾವುದೇ ನೋಟೀಸಿನ ಅವಶ್ಯಕತೆ ಇರತಕ್ಕದ್ದಲ್ಲ.

128. ಕರ್ತವ್ಯ ಲೋಪವಾದಾಗ ಕ್ರಮಕೈಗೊಳ್ಳುವುದಕ್ಕಾಗಿ ನಗರ ಪಾಲಿಕೆಯ ವೆಚ್ಚದಲ್ಲಿ ಅಧಿಕಾರಿಯನ್ನು ನೇಮಕಮಾಡಲು ಸರ್ಕಾರದ ಅಧಿಕಾರ.- (1) ಆದೇಶದ ಮೂಲಕ ಗೊತ್ತುಪಡಿಸಿದ ಅವಧಿಯೊಳಗೆ, ಆ ಪ್ರಕರಣದ ಮೇರೆಗೆ ನಿರ್ದೇಶಿಸಿದ ಯಾವುದೇ ಕ್ರಮವನ್ನು ಕ್ರಮಬದ್ಧವಾಗಿ ಕೈಗೊಳ್ಳದಿದ್ದರೆ, ಸರ್ಕಾರವು ಆದೇಶದ ಮೂಲಕ,-

(ಎ) ಹಾಗೆ ನಿರ್ದೇಶಿಸಿದ ಕ್ರಮವನ್ನು ಕೈಗೊಳ್ಳಲು ಸರ್ಕಾರದ ಒಬ್ಬ ಅಧಿಕಾರಿಯನ್ನು ನೇಮಕಮಾಡಬಹುದು;

(ಬಿ) ಅವರಿಗೆ ಸಂದಾಯ ಮಾಡಬೇಕಾದ ಪರಿಶ್ರಮಧನವನ್ನು ನಿಗದಿಪಡಿಸಬಹುದು; ಮತ್ತು

(ಸಿ) ಅಂಥ ಪರಿಶ್ರಮಧನವನ್ನು ಮತ್ತು ಅಂಥ ಕ್ರಮವನ್ನು ಕೈಗೊಳ್ಳಲು ತಗಲುವ ಖರ್ಚನ್ನು ನಗರ ಪಾಲಿಕೆಯ ನಿಧಿಯಿಂದ ಭರಿಸತಕ್ಕದ್ದೆಂದು ಮತ್ತು ಅವಶ್ಯವಾದರೆ ಅಧಿಕೃತಗೊಳಿಸಿದ ಯಾವುದೇ ಒಂದು ಅಥವಾ ಹೆಚ್ಚು ತೆರಿಗೆಗಳನ್ನು ಈ ಅಧಿನಿಯಮದಲ್ಲಿ ಹೇಳಲಾದ ಯಾವುದೇ ಗರಿಷ್ಠ ಮಿತಿಯನ್ನು ಮೀರದ ಹಾಗೆ ವಿಧಿಸತಕ್ಕದ್ದೆಂದು ಅಥವಾ ಹೆಚ್ಚಿಸತಕ್ಕದ್ದೆಂದು ಆದರೆ ಈ ಅಧಿನಿಯಮದಲ್ಲಿ ಹೇಳಲಾದ ಯಾವುದೇ ಗರಿಷ್ಠ ಮಿತಿಯನ್ನು ನೀಡತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(2) ಮೇಲೆ ಹೇಳಿದಂತೆ ನಿರ್ದೇಶಿಸಿದ ಕ್ರಮವನ್ನು ಕೈಗೊಳ್ಳುವ ಉದ್ದೇಶಕ್ಕಾಗಿ, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಯು ಅವಶ್ಯವಾಗುವಂಥ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ನಗರ ಪಾಲಿಕೆ ಪ್ರಾಧಿಕಾರಕ್ಕೆ ಪ್ರದತ್ತವಾದ ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅವರು ನಗರ ಪಾಲಿಕೆ ಪ್ರಾಧಿಕಾರಿಯಾಗಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ರಕ್ಷಣೆಗೆ ಹಕ್ಕುಳ್ಳವರಾಗಿರತಕ್ಕದ್ದು.

(3) ಸರ್ಕಾರವು ಸದರಿ ತೆರಿಗೆಗಳಲ್ಲಿ ಯಾವುದನ್ನಾದರೂ ವಿಧಿಸುವಂತೆ ಅಥವಾ ಹೆಚ್ಚಿಸುವಂತೆ ನಿರ್ದೇಶಿಸುವುದರ ಜೊತೆಗೆ ಅಥವಾ ಹಾಗೆ ನಿರ್ದೇಶಿಸುವುದಕ್ಕೆ ಬದಲಾಗಿ ಅಧಿಸೂಚನೆಯ ಮೂಲಕ ಅದರ ಆದೇಶಗಳನ್ನು ಜಾರಿಗೊಳಿಸಲು ಅಗತ್ಯವೆಂದು ತಾನು ಅಭಿಪ್ರಾಯಪಡುವಂಥ ಯಾವುದೇ ಮೊತ್ತವನ್ನು ಅಥವಾ ಹಣವನ್ನು `ಡಿಬೆಂಚರ್' ಮೂಲಕ ಹಾಗೂ ಸದರಿ ಎಲ್ಲ ಅಥವಾ ಯಾವುದೇ ತೆರಿಗೆಗಳ ಭದ್ರತೆಯ ಮೇಲೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬಡ್ಡಿಯ ದರದಲ್ಲಿ ಮತ್ತು ಮರುಸಂದಾಯದ ಕಾಲಕ್ಕೆ ಸಂಬಂಧಿಸಿದ ನಿಬಂಧನೆಗಳ ಮೇಲೆ ಮತ್ತು ಅನ್ಯಥಾ ಸಾಲವಾಗಿ ಪಡೆಯಬಹುದೆಂದು ನಿರ್ದೇಶಿಸಬಹುದು.

129. ನಿರ್ಣಯವನ್ನು ಮತ್ತು ಆದೇಶಗಳನ್ನು ರದ್ದುಗೊಳಿಸುವ ಅಧಿಕಾರ.-(1) ಆಯುಕ್ತರು ನಗರ ಪಾಲಿಕೆಯ ಎಲ್ಲ ನಿರ್ಣಯಗಳ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ನಗರ ಪಾಲಿಕೆಯ ಅಥವಾ ಯಾವುದೇ ಇತರ ಪ್ರಾಧಿಕಾರದ ಅಥವಾ ಅದಕ್ಕೆ ಅಧೀನರಾದ ಅಧಿಕಾರಿಯ ಯಾವುದೇ ನಿರ್ಣಯವನ್ನು ಅಥವಾ ಆದೇಶವನ್ನು ಜಾರಿಗೊಳಿಸುವುದು ಅಥವಾ ನಗರ ಪಾಲಿಕೆಯು ಅಥವಾ ಅದರ ಪರವಾಗಿ ಮಾಡಲಿರುವ ಅಥವಾ ಮಾಡಲಾಗುತ್ತಿರುವ ಯಾವುದೇ ಕಾರ್ಯವನ್ನು ಮಾಡುವುದು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಪ್ರದತ್ತವಾದ ಅಧಿಕಾರಗಳ ಉಲ್ಲಂಘನೆಯಾಗುತ್ತದೆಂದು ಅಥವಾ ಅವುಗಳನ್ನು ಮೀರುತ್ತದೆ ಎಂದು ಅಥವಾ ಶಾಂತಿ ಭಂಗವನ್ನು ಉಂಟುಮಾಡುವ ಅಥವಾ ಸಾರ್ವಜನಿಕರಿಗೆ ಅಥವಾ ವ್ಯಕ್ತಿಗಳ ಯಾವುದೇ ವರ್ಗಕ್ಕೆ ಅಥವಾ ನಿಕಾಯಕ್ಕೆ ಕ್ಷತಿ ಅಥವಾ ಕಿರುಕುಳವನ್ನು ಉಂಟುಮಾಡುವ ಸಂಭವವಿದೆ ಎಂದು ಅಥವಾ ನಗರ ಪಾಲಿಕೆಯ ಹಿತಾಸಕ್ತಿಗೆ ಬಾಧಕವನ್ನುಂಟು ಮಾಡುತ್ತದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು,-

(ಎ) ನಿರ್ಣಯವನ್ನು ಅಥವಾ ಆದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಏಕೆ ರದ್ದುಗೊಳಿಸಬಾರದು; ಅಥವಾ

(ಬಿ) ಸಂಬಂಧಪಟ್ಟ ಯಾವುದೇ ಉಪವಿಧಿಯನ್ನು ಅಥವಾ ವಿನಿಯಮವನ್ನು ಪೂರ್ಣವಾಗಿ ಅಥವಾ ಭಾಗಶಃ ಏಕೆ ನಿರಸನಗೊಳಿಸಬಾರದು

- ಎಂಬುದಕ್ಕೆ ಹದಿನೈದು ದಿನಗಳಿಗೆ ಕಡಿಮೆ ಇಲ್ಲದಂಥ ನಿರ್ದಿಷ್ಟಪಡಿಸಲಾಗುವ ದಿನಾಂಕದೊಳಗೆ ಕಾರಣ ಕೇಳಿ ನಗರ ಪಾಲಿಕೆಗೆ ನೋಟೀಸನ್ನು ಕೊಟ್ಟ ತರುವಾಯ, ಲಿಖಿತ ಆದೇಶದ ಮೂಲಕ ಅಂಥ ನಿರ್ಣಯದ ಅಥವಾ ಆದೇಶದ ಜಾರಿಯನ್ನು ಅಮಾನತಿನಲ್ಲಿಡಬಹುದು ಅಥವಾ ಯಾವುದೇ ಅಂಥ ಕಾರ್ಯ ಮಾಡುವುದನ್ನು ನಿಷೇಧಿಸಬಹುದು.

(3) ನಗರ ಪಾಲಿಕೆಯಿಂದ ಸ್ವೀಕರಿಸಿದ ಉತ್ತರ ಯಾವುದಾದರೂ ಇದ್ದರೆ, ಅದನ್ನು ಪರಿಗಣಿಸಿದ ಮೇಲೆ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಸರ್ಕಾರವು ನಿರ್ಣಯವನ್ನು ಅಥವಾ ಆದೇಶವನ್ನು ರದ್ದುಗೊಳಿಸುವ ಅಥವಾ ಉಪ-ವಿಧಿಯನ್ನು ಅಥವಾ ವಿನಿಯಮವನ್ನು ನಿರಸನಗೊಳಿಸುವ ಆದೇಶಗಳನ್ನು ಮಾಡಬಹುದು ಮತ್ತು ಅದನ್ನು ನಗರ ಪಾಲಿಕೆಗೆ ತಿಳಿಸಬಹುದು.

(4) ಸರ್ಕಾರವು ಯಾವುದೇ ಕಾಲದಲ್ಲಿ ನಗರ ಪಾಲಿಕೆಯು ಮಾಡಿಕೊಂಡ ಮುಂದಿನ ನಿವೇದನೆಯ ಮೇಲೆ ಅಥವಾ ಅನ್ಯಥಾ (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಪರಿಷ್ಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ರದ್ದುಪಡಿಸಬಹುದು.

130. ನಗರ ಪಾಲಿಕೆಯನ್ನು ವಿಸರ್ಜಿಸಲು ಸರ್ಕಾರದ ಅಧಿಕಾರ.- (1) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಗರ ಪಾಲಿಕೆಯ ಮೇಲೆ ವಿಧಿಸಿದ ಅಥವಾ ಅದು ಕೈಗೊಂಡ ಯಾವುದೇ ಕರ್ತವ್ಯಗಳನ್ನು ನೆರವೇರಿಸಲು ಅದು ಸಕ್ಷಮವಾಗಿಲ್ಲ ಅಥವಾ ಅವುಗಳನ್ನು ನೆರವೇರಿಸುವುದರಲ್ಲಿ ತಪ್ಪಿದೆ ಅಥವಾ ಅದು ಅದರ ಅಧಿಕಾರಗಳನ್ನು ಮೀರುತ್ತದೆ ಅಥವಾ ದುರುಪಯೋಗಪಡಿಸಿಕೊಳ್ಳುತ್ತದೆ ಎಂದು ಅಥವಾ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಸರ್ಕಾರವು ಕೊಟ್ಟ ನಿರ್ದೇಶನಗಳನ್ನು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸಲು ವಿಫಲವಾಗಿದೆ ಅಥವಾ ನಗರ ಪಾಲಿಕೆಯ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು,

ಸರ್ಕಾರಿ ರಾಜ್ಯಪತ್ರದಲ್ಲಿ ಅದಕ್ಕಾಗಿನ ಕಾರಣಗಳ ನಿರೂಪಣೆಯ ಜೊತೆಗೆ, ಆದೇಶವನ್ನು ಪ್ರಕಟಿಸುವ ಮೂಲಕ, ಸಂದರ್ಭಾನುಸಾರ ನಗರ ಪಾಲಿಕೆಯು ಸಕ್ಷಮವಾದುದಾಗಿಲ್ಲ ಎಂದು ಅಥವಾ ತಪ್ಪಿದೆ ಎಂದು ಅಥವಾ ಅದರ ಅಧಿಕಾರಗಳನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆ ಎಂದು ಅಥವಾ ಅದಕ್ಕೆ ಕೊಟ್ಟ ನಿರ್ದೇಶನಗಳನ್ನು ಕಾರ್ಯಗತಗೊಳಿಸುವಲ್ಲಿ ವಿಫಲವಾಗಿದೆ ಎಂದು ಅಥವಾ ನಗರ ಪಾಲಿಕೆಯ ಹಿತಾಸಕ್ತಿಗಳಿಗೆ ಬಾಧಕವಾಗುವಂಥ ರೀತಿಯಲ್ಲಿ ವರ್ತಿಸುತ್ತಿದೆ ಎಂದು ಘೋಷಿಸಬಹುದು ಮತ್ತು ನಗರ ಪಾಲಿಕೆಯನ್ನು ವಿಸರ್ಜನೆಗೊಳಿಸಬಹುದು:

ಪರಂತು, ಮೇಲೆ ಹೇಳಿದಂತೆ ವಿಸರ್ಜನೆಯ ಆದೇಶವನ್ನು ಮಾಡುವುದಕ್ಕೆ ಮೊದಲು ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ಕೇಳಿ ನಗರ ಪಾಲಿಕೆಗೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗಿನ ಆದೇಶದ ಮೂಲಕ ನಗರ ಪಾಲಿಕೆಯನ್ನು ವಿಸರ್ಜನೆ ಮಾಡಿದಾಗ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು,-

(ಎ) ನಗರ ಪಾಲಿಕೆಯ ಎಲ್ಲ ಪಾಲಿಕೆ ಸದಸ್ಯರು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು, ಚುನಾವಣೆಗೆ ಸ್ಪರ್ಧಿಸಲು ತಮ್ಮ ಅರ್ಹತೆಗೆ ಬಾಧಕವಾಗದಂತೆ, ಅಂಥ ನಗರ ಪಾಲಿಕೆ ಸದಸ್ಯರುಗಳಾಗಿ ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು;

(ಬಿ) ನಗರ ಪಾಲಿಕೆಯನ್ನು ವಿಸರ್ಜನೆಯ ಅವಧಿಯಲ್ಲಿ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಮೇರೆಗೆ ನಗರ ಪಾಲಿಕೆಗೆ ಮತ್ತು ನಗರ ಪಾಲಿಕೆಯ ಸ್ಥಾಯಿ ಸಮಿತಿಗಳಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಮತ್ತು ವಿಧಿಸಿದ ಎಲ್ಲ ಕರ್ತವ್ಯಗಳನ್ನು ಈ ಬಗ್ಗೆ ಸರ್ಕಾರವು ನೇಮಕ ಮಾಡಿದ ಮುಖ್ಯ ಆಯುಕ್ತರು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು;

(ಸಿ) ನಗರ ಪಾಲಿಕೆಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತು, ಅದನ್ನು ಪುನರ್ ರಚಿಸುವವರೆಗೆ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ನಗರ ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ನಗರ ಪಾಲಿಕೆಯ ಮಹಾಪೌರನಿಗೆ ಮಾಡಿರುವ ಉಲ್ಲೇಖಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(4) ನಗರ ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯದಲ್ಲಿ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ನಿರ್ದೇಶನವು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಡುತ್ತದೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(5) ನಗರ ಪಾಲಿಕೆಯನ್ನು ವಿಸರ್ಜಿಸಿದಾಗ, ಅಂಥ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮೊದಲು ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಅದನ್ನು ಪುನರ್ ರಚಿಸತಕ್ಕದ್ದು:

ಪರಂತು, ವಿಸರ್ಜಿತ ನಗರ ಪಾಲಿಕೆಯು ಯಾವ ಅವಧಿಗೆ ಮುಂದುವರಿಯಬಹುದಾಗಿತ್ತೋ ಆ ಉಳಿದ ಅವಧಿಯು ಆರು ತಿಂಗಳುಗಳಿಗಿಂತ ಕಡಿಮೆಯಾಗಿದ್ದರೆ, ಅಂಥ ಅವಧಿಗೆ ನಗರ ಪಾಲಿಕೆಯನ್ನು ರಚಿಸುವುದಕ್ಕೆ ಈ ಪ್ರಕರಣದ ಮೇರೆಗೆ ಚುನಾವಣೆ ನಡೆಸುವುದು ಅಗತ್ಯವಿರತಕ್ಕದ್ದಲ್ಲ.

(6) ಒಂದು ನಗರ ಪಾಲಿಕೆಯನ್ನು, ಅದರ ಅವಧಿಯು ಪೂರ್ಣಗೊಳ್ಳುವುದಕ್ಕೆ ಮುಂಚೆ ವಿಸರ್ಜಿಸಿದ ತರುವಾಯ ರಚಿಸಿದಲ್ಲಿ, ವಿಸರ್ಜಿತ ಪಾಲಿಕೆಯು ಅದನ್ನು ಹಾಗೆ ವಿಸರ್ಜಿಸಿರದಿದ್ದರೆ ಯಾವ ಅವಧಿಗೆ ಮುಂದುವರೆಯಬಹುದಾಗಿತ್ತೋ ಆ ಉಳಿದ ಅವಧಿಗೆ ಮಾತ್ರ ಮುಂದುವರೆಯತಕ್ಕದ್ದು.

(7) ಉಪಪ್ರಕರಣ (1)ರ ಮೇರೆಗೆ ನಗರ ಪಾಲಿಕೆಯನ್ನು ವಿಸರ್ಜಿಸಿದ ಆದೇಶವನ್ನು ಅದಕ್ಕೆ ಕಾರಣಗಳ ನಿರೂಪಣೆಯ ಜೊತೆಗೆ, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

131. ನಗರ ಪಾಲಿಕೆ ಆಡಳಿತಾಧಿಕಾರಿಯ ನೇಮಕ.- (1) ನಗರ ಪಾಲಿಕೆಯನ್ನು ರಚಿಸಲು, ಅದನ್ನು ವಿಸರ್ಜಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಮುಕ್ತಾಯಕ್ಕೆ ಮುಂಚೆ ಚುನಾವಣೆಯನ್ನು ಪೂರ್ಣಗೊಳಿಸತಕ್ಕದ್ದು.

(2) ನಗರ ಪಾಲಿಕೆಯನ್ನು ವಿಸರ್ಜಿಸಿದಾಗ, ಸರ್ಕಾರವು ಅಧಿಸೂಚನೆ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು ಮತ್ತು ಸದರಿ ಅಧಿಸೂಚನೆ ಮೂಲಕ, ಅಗತ್ಯವಾಗಬಹುದಾದಂತೆ ಅಂಥ ನೇಮಕಾತಿ ಅವಧಿಯನ್ನು ಮೊಟಕುಗೊಳಿಸುವುದಾಗಲಿ ಅಥವಾ ವಿಸ್ತರಿಸುವುದಾಗಲಿ ಮಾಡತಕ್ಕದ್ದು;

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಮೇರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ ಮೇಲೆ, ಅಂಥ ನೇಮಕದ ಅವಧಿಯಲ್ಲಿ, ಈ ಅಧಿನಿಯಮದ ಮತ್ತು ಅದರಡಿ ಮಾಡಲಾದ ನಿಯಮಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊತ್ತಿರುವ ನಗರ ಪಾಲಿಕೆ ಮತ್ತು ನಗರ ಪಾಲಿಕೆಯಡಿ ಕಾರ್ಯನಿರ್ವಹಿಸುವ ಎಲ್ಲಾ ಪ್ರಾಧಿಕಾರಗಳು, ಈ ಅಧಿನಿಯಮದ ಮತ್ತು ಅದರಡಿ ಮಾಡಲಾದ ನಿಯಮಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅವರಿಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ವಿಧಿಸಲಾದ ಯಾವುವೇ ಕರ್ತವ್ಯಗಳನ್ನು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಮತ್ತು ನಿರ್ವಹಿಸುವುದು ನಿಂತುಹೋಗತಕ್ಕದ್ದು ಹಾಗೂ ಆಡಳಿತಾಧಿಕಾರಿಯು ಅಥವಾ ಆಡಳಿತಾಧಿಕಾರಿಯಿಂದ ಅಧಿಕೃತಗೊಂಡ ಇತರೆ ಅಧಿಕಾರಿಗಳು ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಆಡಳಿತಾಧಿಕಾರಿಗೆ, ಸರ್ಕಾರ ಆದೇಶದ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಮಾಸಿಕ ವೇತನ ಮತ್ತು ಭತ್ಯೆಗಳನ್ನು ನಗರ ಪಾಲಿಕೆ ನಿಧಿಯಿಂದ ಸಂದಾಯ ಮಾಡತಕ್ಕದ್ದು ಮತ್ತು ನಗರ ಪಾಲಿಕೆಯು, ಸಂದರ್ಭಾನುಸಾರ ಅವನಿಗಾಗಿ ಸಂದಾಯ ಮಾಡಲು ಸರ್ಕಾರದ ಅಧೀನದಲ್ಲಿ ಬರುವ ಸೇವಾ ಷರತ್ತುಗಳ ಮೂಲಕ ಅಗತ್ಯಪಡಿಸಬಹುದಾದಂಥ ಅಧಿಕಾರಿಗೆ ರಜೆ, ಭತ್ಯೆಗಳು, ಪಿಂಚಣಿ ಮತ್ತು ಭವಿಷ್ಯ ನಿಧಿಯ ಸಲುವಾಗಿ ವಂತಿಗೆಯನ್ನು ನೀಡತಕ್ಕದ್ದು.

(5) ನಗರ ಪಾಲಿಕೆಯನ್ನು ವಿಸರ್ಜಿಸಿದ ದಿನಾಂಕದಿಂದ ಆಡಳಿತಾಧಿಕಾರಿಯು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯದಲ್ಲಿ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು; ಮತ್ತು ನಿರ್ದೇಶನವು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಡುತ್ತದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

132. ಕಾರ್ಯನಿರ್ವಹಣಾ ವ್ಯವಸ್ಥೆಯ ಸ್ಥಾಪನೆ.-(1) ಸರ್ಕಾರವುಅದರ ಅಧಿಕಾರಿಗಳನ್ನು ಪರಿಣಾಮಕಾರಿಯಾಗಿ ಸುಧಾರಣೆ ಮಾಡಲು ಮತ್ತು ಇಡೀ ನಗರ ಪಾಲಿಕೆಯ ವ್ಯವಸ್ಥಾಪನೆಯನ್ನು ಸುಧಾರಣೆ ಮಾಡುವುದಕ್ಕಾಗಿ ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು ಹಾಗೂ ಮೇಲ್ವಿಚಾರಣೆ ಮತ್ತು ಅದರ ನಿರ್ವಹಣೆಯನ್ನು ಪುನರ್ ಪರಿಶೀಲಿಸಲು ಆಡಳಿತ ವ್ಯವಸ್ಥೆಯನ್ನು ಸಹ ಸ್ಥಾಪಿಸತಕ್ಕದ್ದು.

(2) ಸರ್ಕಾರವು ನಗರ ಪಾಲಿಕೆಯ ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನಗರ ಪಾಲಿಕೆಗೆ ಸಹಾಯ ಮಾಡಬಹುದು ಮತ್ತು ಪ್ರಸ್ತಾವಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ನಗರ ಪಾಲಿಕೆಗೆ ಅದನ್ನು ಸಲ್ಲಿಸುವುದು.

(3) ನಗರ ಪಾಲಿಕೆಯ ಕಾರ್ಯನಿರ್ವಹಣಾ ವ್ಯವಸ್ಥೆಯು,-

(ಎ) ನಗರ ಪಾಲಿಕೆಯ ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ಫಲಿತಾಂಶಗಳು ಮತ್ತು ಪರಿಣಾಮವನ್ನು ಒಳಗೊಂಡಂತೆ ಕಾರ್ಯಕ್ಷಮತೆಯನ್ನು ಅಳೆಯುವುದಕ್ಕಾಗಿನ ಮಾನದಂಡವಾಗಿ ಸೂಕ್ತ ಪ್ರಮುಖ ಕಾರ್ಯನಿರ್ವಹಣಾ ಸೂಚಕಗಳನ್ನು ರೂಪಿಸುವುದು;

(ಬಿ) ಈ ಪ್ರತಿಯೊಂದು ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ಮಾಪನ ಮಾಡಬಹುದಾದಂಥ ಕಾರ್ಯಕ್ಷಮತ ಗುರಿಗಳನ್ನು ನಿರ್ಧರಿಸುವುದು;

(ಸಿ) ನಿರ್ಧರಿಸಿದ ಕಾರ್ಯಕ್ಷಮತಾ ಸೂಚಕಗಳು ಮತ್ತು ಗುರಿಗಳ ಪೈಕಿ ಸಾಧಿಸಿದ ವಾಸ್ತವಿಕ ಕಾರ್ಯನಿರ್ವಹಣೆಯನ್ನು ಮಾಪನ ಮಾಡುವುದು ಮತ್ತು ಪುನರ್ ಪರಿಶೀಲಿಸುವುದು;

(ಡಿ) ಕಾರ್ಯನಿರ್ವಹಣಾ ಗುರಿಗಳನ್ನು ಸಾಧಿಸದೇ ಇರುವ ಸಂದರ್ಭದಲ್ಲಿ ಈ ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣೆಯನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳುವುದು; ಮತ್ತು

(ಇ) ಸಂದರ್ಭಾನುಸಾರ ಮಹಾಪೌರ, ಆಯುಕ್ತ ಅಥವಾ ವಲಯದ ಜಂಟಿ ಆಯುಕ್ತರಿಗೆ ನಿಯತ ವರದಿಯ ಕಾರ್ಯವಿಧಾನವನ್ನು ರಚಿಸುವುದು.

(4) ನಗರ ಪಾಲಿಕೆಯು ಸಾರ್ವಜನಿಕ ಕ್ಷೇತ್ರ(ಡೊಮೈನ್)ನಲ್ಲಿ ಕಾರ್ಯಕ್ಷಮತೆ ಸೂಚಕಗಳನ್ನು ಪ್ರಕಟಿಸತಕ್ಕದ್ದು ಮತ್ತು ಅದರ ಯಾರೇ ಅಧಿಕಾರಿಗಳನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಅದರ ಐಕ್ಯತೆಯನ್ನು ಖಚಿತಪಡಿಸತಕ್ಕದ್ದು.

ಅಧ್ಯಾಯ XII
ನಗರ ಪಾಲಿಕೆಯ ಸ್ವತ್ತುಗಳು

133. ನಗರ ಪಾಲಿಕೆಯ ಸ್ವತ್ತುಗಳು.- (1) ಸರ್ಕಾರವು ಅನ್ಯಥಾ ನಿರ್ದಿಷ್ಟವಾಗಿ ಮಾಲೀಕತ್ವ ಹೊಂದಿದ ಮತ್ತು ನಿಯಂತ್ರಿಸಿದ ಅಥವಾ ಯಾವುದೇ ಇತರ ಸಂಸ್ಥೆಯು ನಿರ್ದಿಷ್ಟವಾಗಿ ಮಾಲೀಕತ್ವ ಹೊಂದಿದ ಹೊರತು, ಈ ಮುಂದಿನ ಸ್ವತ್ತುಗಳು ನಗರ ಪಾಲಿಕೆಗೆ ಸೇರಿರುತ್ತವೆ:-

(ಎ) ಸರ್ಕಾರವು ಹೊಂದಿರದ ಅಥವಾ ಅದರ ನಿಯಂತ್ರಣದಲ್ಲಿರದ ಅಥವಾ ನಿರ್ದಿಷ್ಟವಾಗಿ ಯಾರೇ ಇತರ ವ್ಯಕ್ತಿ ಅಥವಾ ಸಂಸ್ಥೆಯ ಮಾಲೀಕತ್ವದಲ್ಲಿರುವ ಎಲ್ಲಾ ಸಾರ್ವಜನಿಕ ಉದ್ಯಾನಗಳು, ಆಟದ ಮೈದಾನಗಳು ಮತ್ತು ವಾಯು ಸಂಚಾರಕ್ಕೆ ಮೀಸಲಿರಿಸಿದ ಬಹಿರಂಗ ಸ್ಥಳಗಳು;

(ಬಿ) ಎಲ್ಲಾ ಸಾರ್ವಜನಿಕ ರಸ್ತೆಗಳು, ಮಾರ್ಗಗಳು, ಪಥಗಳು, ಸೇತುವೆ, ತೂಗು ಸೇತುವೆ, ಕೆಳ ಸೇತುವೆ, ಸುರಂಗ ಮಾರ್ಗ, ಸಾರ್ವಜನಿಕ ದೀಪಗಳು, ಅದಕ್ಕೆ ಸಂಬಂಧಿಸಿರುವ ಅದಕ್ಕೆ ಲಗತ್ತಾದ ದೀಪದ ಕಂಬದ ಸಾಧನಗಳು, ಎಲ್ಲಾ ಗೇಟುಗಳು, ಮಾರುಕಟ್ಟೆಗಳು, ಕಸಾಯಿಖಾನೆಗಳು, ಗೊಬ್ಬರ ಮತ್ತು ಆಶ್ರಯ ಡಿಪೋಗಳು ಮತ್ತು ಪ್ರತಿಯೊಂದು ವಿಧದ ಸಾರ್ವಜನಿಕ ಕಟ್ಟಡಗಳು.

(2) ಈ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ದಿಷ್ಟವಾಗಿ ಮಾಲೀಕತ್ವ ಹೊಂದಿರದ ಮತ್ತು ನಿಯಂತ್ರಿಸದ ಹಾಗೂ ನಿರ್ದಿಷ್ಟವಾಗಿ ಯಾರೇ ಇತರ ವ್ಯಕ್ತಿ ಅಥವಾ ಸಂಸ್ಥೆಯ ಮಾಲೀಕತ್ವದಲ್ಲಿರುವ ಎಲ್ಲಾ ಸ್ವತ್ತುಗಳು ನಗರ ಪಾಲಿಕೆಗೆ ಸೇರತಕ್ಕದ್ದು ಹಾಗೂ ನಗರ ಪಾಲಿಕೆಯ ಅಂಥ ನಿರ್ದೇಶನ, ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

(3) ನಗರ ಪಾಲಿಕೆಯು ಯಾವುದೇ ಸ್ವರೂಪದ ಟ್ರಸ್ಟು ಅಥವಾ ಸ್ವತ್ತಿನ ಕೊಡುಗೆಯನ್ನು ಸ್ವೀಕರಿಸಬಹುದು, ಅದು ಅಂಥ ನಿಹಿತ ನಿಬಂಧನೆಗಳ ಮೇಲೆ ನಗರ ಪಾಲಿಕೆಯಲ್ಲಿ ನಿಹಿತಗೊಳ್ಳತಕ್ಕದ್ದು.

134. ನಗರ ಪಾಲಿಕೆಯಿಂದ ಸ್ವತ್ತುಗಳ ವಿಲೆ.- (1)ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ನಗರ ಪಾಲಿಕೆಯ ಆಯುಕ್ತರು, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ನಗರ ಪಾಲಿಕೆಯ ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ

ಮಾಡುವ ಮೂಲಕ ವಿಲೆ ಮಾಡಬಹುದು ಅಥವಾ ಅಂಥ ಸ್ಥಿರ ಸ್ವತ್ತಿನಿಂದ ಉದ್ಭವಿಸುವ ಅಂಥ ಉತ್ಪನ್ನದ ಅಥವಾ ಪ್ರಯೋಜನದ ಮೇಲೆ ಯಾವುದೇ ಹಕ್ಕಿನ ಬಳಕೆಗೆ ಅಂಥ ಭೋಗ್ಯಕ್ಕೆ ಒಪ್ಪಂದ ಮಾಡಿಕೊಳ್ಳಬಹುದು:

ಪರಂತು, ಸರ್ಕಾರಕ್ಕೆ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹೊರತುಪಡಿಸಿ ಯಾವುದೇ ಸ್ಥಿರ ಸ್ವತ್ತಿನ ಮಾರಾಟವು ಬಹಿರಂಗ ಹರಾಜಿನ ಮೂಲಕ ಮಾಡತಕ್ಕದ್ದು, ಅದರ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು:

ಮತ್ತು ಪರಂತು, ನಗರ ಪಾಲಿಕೆಯ ಸ್ಥಿರ ಸ್ವತ್ತನ್ನು ಸರ್ಕಾರ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಮಾರಾಟ ಮಾಡುವ ಅಥವಾ ವರ್ಗಾಯಿಸುವ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ಆಯುಕ್ತರು, ಸಂಬಂಧಪಟ್ಟ ಕೌನ್ಸಿಲ್‌ನ ಪೂರ್ವ ಮಂಜೂರಾತಿಯೊಂದಿಗೆ ಐದು (5) ವರ್ಷಗಳನ್ನು ಮೀರದ ಅವಧಿಗಾಗಿ ನಗರ ಪಾಲಿಕೆಯ ಸ್ಥಿರ ಸ್ವತ್ತನ್ನು ಭೋಗ್ಯಕ್ಕೆ ನೀಡಬಹುದು.

(3) ಆಯುಕ್ತರು, ನಗರ ಪಾಲಿಕೆಯ ಅಂಥ ಸ್ಥಿರ ಸ್ವತ್ತು ಐದು (5) ವರ್ಷಗಳ ಅವಧಿಯನ್ನು ಮೀರಿದಾಗ ಅಥವಾ ಅಂಥ ಸ್ವತ್ತು 5000 ಚದರಡಿಗಳನ್ನು ಮೀರಿದಾಗ ಯಾವುದೇ ಅವಧಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಕ ಸರ್ಕಾರದ ಪೂರ್ವಾನುಮತಿ ಪಡೆದು ಭೋಗ್ಯಕ್ಕೆ ನೀಡಬಹುದು.

(4) ಈ ಅಧ್ಯಾಯದ ಅಡಿಯಲ್ಲಿ ಸ್ಥಾಯಿ ಸಮಿತಿಯು ಅಥವಾ ಮಹಾಪೌರನು ನೀಡಬಹುದಾದ ಯಾವುದೇ ಅನುಮೋದನೆಗೆ ಆಧಾರವಾಗಿರತಕ್ಕ ಅಂಥ ಷರತ್ತುಗಳನ್ನು ನಗರ ಪಾಲಿಕೆಯು ಮಾರಾಟಕ್ಕೆ ಮತ್ತು ಭೋಗ್ಯಕ್ಕೆ ನಿರ್ದಿಷ್ಟಪಡಿಸತಕ್ಕದ್ದು.

135. ನಗರ ಪಾಲಿಕೆಯಿಂದ ಸ್ವತ್ತುಗಳ ಆರ್ಜನೆ.- (1) ನಗರ ಪಾಲಿಕೆಯ ಪರವಾಗಿ ಆಯುಕ್ತರು, ಯಾವುದೇ ಸ್ಥಿರ ಸ್ವತ್ತನ್ನು ಆರ್ಜಿಸಲು ಕೋರಿದರೆ, ಸರ್ಕಾರ ಅಥವಾ ಮಹಾಪೌರನು ಅನುಮೋದಿಸಿದಂಥ ಆರ್ಜನೆಯ ಉದ್ದೇಶವನ್ನು ಹಾಗೆ ಉಪಬಂಧಿಸಿದಂತೆ ನೀತಿಯಾಗಿಯಾಗಲಿ ಅಥವಾ ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ಆಯುಕ್ತರು ಆರ್ಜನೆ ಮಾಡಬಹುದು.

(2) ಉಪ-ಪ್ರಕರಣ (1)ರ ಪ್ರಕಾರ ಕೈಗೊಳ್ಳಬಹುದಾದ ಯಾವುದೇ ಆರ್ಜನೆಯು, ಭೂ ಆರ್ಜನೆ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥಾಪನೆಯಲ್ಲಿ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 30)ರ ಅನುಸಾರವಾಗಿ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 14ಬಿ ಪ್ರಕರಣದಡಿ ಅಥವಾ ನಿರ್ದಿಷ್ಟ ಆರ್ಜನೆಗಾಗಿ ಉಪಬಂಧಿಸಿದ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು ನೀಡುವ ಮುಖಾಂತರ ಇರತಕ್ಕದ್ದು.

136. ನಗರ ಪಾಲಿಕೆಯು ನಿರ್ವಹಿಸುವ ಸರ್ಕಾರಿ ಸ್ವತ್ತುಗಳು.- (1) ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಅದಕ್ಕೆ ಸೇರಿದ ಯಾವುದೇ ಸ್ವತ್ತನ್ನು ಅದರ ನಿರ್ವಹಣೆಗಾಗಿ ನಗರ ಪಾಲಿಕೆಗೆ ವರ್ಗಾಯಿಸಬಹುದು.

(2) ಸರ್ಕಾರವು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ಅಭಿಪ್ರಾಯ ಪಡೆದ ತರುವಾಯ ಅಥವಾ ಆತನ ವರದಿಯನ್ನಾಧರಿಸಿ, ಅದರ ಸ್ವತ್ತುಗಳನ್ನು ನಗರ ಪಾಲಿಕೆಯು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲ ಅಥವಾ ನಿರ್ವಹಣೆಯ ಅಂಥ ನಿಯಮಿಸಿದ ನಿಬಂಧನೆಗಳು ಮತ್ತು ಷರತ್ತುಗಳನ್ನು ಅದು ಉಲ್ಲಂಘಿಸಿದೆ ಎಂದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಸರ್ಕಾರವು ಅಂಥ ಸ್ವತ್ತುಗಳನ್ನು ತನಗೆ ವರ್ಗಾಯಿಸಿಕೊಳ್ಳಬಹುದು.

137. ನಗರ ಪಾಲಿಕೆಯ ಸ್ವತ್ತುಗಳನ್ನು ನಿರ್ವಹಿಸುವ ಸರ್ಕಾರದ ಅಧಿಕಾರ.- (1) ನಗರ ಪಾಲಿಕೆಗೆ ಸೇರಿದ ಯಾವುದೇ ಸ್ಥಿರ ಸ್ವತ್ತನ್ನು ನಿರ್ವಹಿಸಲು ಅದು ಅಸಮರ್ಥವಾದರೆ, ಮಹಾಪೌರನ ಅನುಮೋದನೆಯೊಂದಿಗೆ ಆಯುಕ್ತರು, ಅಂಥ ಸ್ವತ್ತುಗಳ ನಿರ್ವಹಣೆಗೆ ಸರ್ಕಾರವನ್ನು ಕೋರಬಹುದು.

(2) ನಗರ ಪಾಲಿಕೆಗೆ ಸೇರಿದ ಯಾವುದೇ ಸ್ವತ್ತನ್ನು ನಿರ್ವಹಿಸಲು ಅದು ವಿಫಲವಾಗಿದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಅಂಥ ಸ್ವತ್ತುಗಳನ್ನು ಸರ್ಕಾರಕ್ಕೆ ವರ್ಗಾಯಿಸಲು ನಗರ ಪಾಲಿಕೆಗೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಸರ್ಕಾರವು ಅಧಿಸೂಚನೆ ಮೂಲಕ ಮತ್ತು ನಗರ ಪಾಲಿಕೆಯೊಂದಿಗೆ ಸಮಾಲೋಚಿಸಿದ ನಂತರ ಸಾರ್ವಜನಿಕ ಉದ್ದೇಶಕ್ಕಾಗಿ, ಅದು ನಿರ್ಣಯಿಸಬಹುದಾದಂಥ **ನಿ**ಬಂಧನೆಗಳ ಅನುಸಾರ **ನಗರ** ಪಾಲಿಕೆಗೆ ಸೇರಿದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಭೂಮಿ ಅಥವಾ ಇತರ ಸ್ಥಿರ ಅಥವಾ ಚರ ಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು.

138. ನಗರ ಪಾಲಿಕೆಯಿಂದ ಅಥವಾ ಅದರ ವಿರುದ್ಧ ಸ್ವತ್ತುಗಳ ಬಗೆಗಿನ ಕ್ಲೇಮುಗಳ ನಿರ್ಧಾರ.- (1) ನಗರ ಪಾಲಿಕೆಯ ಮೂಲಕ ಅಥವಾ ನಗರ ಪಾಲಿಕೆಯ ಪರವಾಗಿ ಅಥವಾ ನಗರ ಪಾಲಿಕೆಯ ವಿರುದ್ಧವಾಗಿ ಯಾರೇ ವ್ಯಕ್ತಿಯು ಯಾವುದೇ ಸ್ಥಿರ ಅಥವಾ ಚರ ಸ್ವತ್ತಿನ ಬಗ್ಗೆ ಕ್ಲೇಮು ಮಾಡಿದರೆ, ಆಯುಕ್ತರು ನೋಟೀಸನ್ನು ನೀಡಿದ ತರುವಾಯ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಕ್ಲೇಮುಗಳನ್ನು ನಿರ್ಧರಿಸುವುದಕ್ಕಾಗಿ ಆದೇಶವನ್ನು ಮಾಡತಕ್ಕದ್ದು.

(2) ಮೇಲಿನ ಉಪಪ್ರಕರಣ (1)ರಡಿಯಲ್ಲಿ ಮಾಡಲಾದ ಆದೇಶದಿಂದ ಬಾಧಿತರಾದ ನಗರ ಪಾಲಿಕೆ ಅಥವಾ ವ್ಯಕ್ತಿಯು, ಮುಖ್ಯ ಆಯುಕ್ತನಿಂದ ಮಾಡಿದ ಆದೇಶದ ವಿರುದ್ಧ ಮುಖ್ಯ ಆಯುಕ್ತರು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರಿಗೆ ಅಪೀಲು ಸಲ್ಲಿಸಬಹುದು.

(3) ಮೇಲಿನ ಉಪಪ್ರಕರಣ (2)ರಡಿಯಲ್ಲಿ ಮಾಡಲಾದ ಆದೇಶದಿಂದ ಬಾಧಿತರಾದ ನಗರಪಾಲಿಕೆ ಅಥವಾ ವ್ಯಕ್ತಿಯು, ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಯಾರೇ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ನೋಟಿಸನ್ನು ನೀಡಲಾಗಿದ್ದರೆ, ಈ ಪ್ರಕರಣದ ಮೇರೆಗೆ ವಿಚಾರಣೆ ಯುಕ್ತ ನೋಟಿಸನ್ನು ಅಥವಾ ಆದೇಶವನ್ನು ಆತನು ಪಡೆದಿರುವನೆಂದು ಭಾವಿಸತಕ್ಕದ್ದು.

139. ಖಾಸಗಿ ಸ್ವತ್ತುಗಳನ್ನು ನಿರ್ವಹಿಸುವ ನಗರ ಪಾಲಿಕೆಯ ಅಧಿಕಾರ.- ಅಂಥ ಖಾಸಗಿ ವ್ಯಕ್ತಿಗಳು, ಕಂಪನಿಗಳು, ಟ್ರಸ್ಟ್‌ಗಳು, ಸೊಸೈಟಿಗಳು ಮತ್ತು ಯಾವುದೇ ಇತರ ಸಂಘ-ಸಂಸ್ಥೆಗಳ ಮನವಿಯ ಮೇರೆಗೆ, ನಗರ ಪಾಲಿಕೆಯು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಷರತ್ತುಗಳನುಸಾರ ಅವುಗಳಿಗೆ ಸೇರಿದ ಅಂಥ ಸ್ವತ್ತುಗಳನ್ನು ನಿರ್ವಹಿಸಬಹುದು.

140. ಸ್ವತ್ತು ರಿಜಿಸ್ಟರಿನ ನಿರ್ವಹಣೆ.- (1) ನಗರ ಪಾಲಿಕೆಯು ಅದರ ಸ್ಥಿರ ಸ್ವತ್ತಿನ ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು. ಸ್ವತ್ತು ರಿಜಿಸ್ಟರು ನಗರ ಪಾಲಿಕೆಯಿಂದ ಸ್ಥಿರ ಸ್ವತ್ತಿಗೆ ಹಂಚಿಕೆ ಮಾಡಿದ ಸಂಖ್ಯೆಯನ್ನು, ಅದರ ಮಾಲೀಕತ್ವ, ನಿಯಂತ್ರಣ, ನಿರ್ವಹಣೆ ಅಥವಾ ಮಾಡಲಾದ ಯಾವುದೇ ಕ್ಲೇಮು, ಸ್ಥಳ ಮಾಹಿತಿ, ಸ್ಕೆಚ್, ಅಳತೆಗಳು, ಆಧಾರ, ಗಡಿ ವಿವರಣೆಗಳು ಮತ್ತು ಯುಕ್ತವಾಗಿ ನಿರ್ದಿಷ್ಟಪಡಿಸಿದ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) ಆಯುಕ್ತರು ಸ್ವತ್ತಿನ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ಪಟ್ಟಿಯನ್ನು ನಿಯಮಿಸಬಹುದಾದ ವಿದ್ಯುನ್ಮಾನ ನಮೂನೆಯಲ್ಲಿ ಸೂಕ್ತ ತಂತ್ರಾಂಶವನ್ನು ಬಳಸಿಕೊಂಡು ನಿಯತಕಾಲಿಕವಾಗಿ ನವೀಕರಿಸ**ತಕ್ಕದ್ದು**.

(3) ನಗರ ಪಾಲಿಕೆಯ ಸ್ಥಿರ ಸ್ವತ್ತುಗಳ ದಕ್ಷ ನಿರ್ವಹಣೆಗಾಗಿ ದೈನಂದಿನ ಆಡಳಿತ, ನಿರ್ವಹಣೆ ಮತ್ತು ಅಂಥ ಇತರ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸಲು ಅಗತ್ಯವೆಂದು ಭಾವಿಸುವ**ಂಥ** ಎಸ್ಟೇಟ್ ಅಧಿಕಾರಿಗಳನ್ನು ನೇಮಿಸತಕ್ಕದ್ದು.

(4) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಅಂಥ ನಮೂನೆಯಲ್ಲಿ ಮೇಲಿನ ವಿವರಗಳನ್ನುಳ್ಳ ಪಟ್ಟಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

141. ಈ ಅಧಿನಿಯಮದಲ್ಲಿ ಉಪಬಂಧಿಸಿಲ್ಲದ ಉದ್ದೇಶಗಳು.- ಸರ್ಕಾರವು ನಗರ ಪಾಲಿಕೆಯ ಸಮ್ಮತಿಯೊಂದಿಗೆ ಈ ಅಧಿನಿಯಮದ ಮೂಲಕ ಉಪಬಂಧಿಸಿಲ್ಲದ ಯಾವುದೇ ಸಂಸ್ಥೆಯ ಆಡಳಿತವನ್ನು ಅಥವಾ ಯಾವುದೇ ಕಾಮಗಾರಿಯ ಅನುಷ್ಠಾನವನ್ನು ನಗರ

ಪಾಲಿಕೆಗೆ ವರ್ಗಾಯಿಸಬಹುದು ಮತ್ತು ಆ ತರುವಾಯ ಅಂಥ ಆಡಳಿತವನ್ನು ಅಥವಾ ಅನುಷ್ಠಾನ ಕಾರ್ಯವನ್ನು ವಹಿಸಿಕೊಳ್ಳುವುದು ನಗರ ಪಾಲಿಕೆಗೆ ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ಅಂಥ ಪ್ರತಿಯೊಂದು ಸಂದರ್ಭದಲ್ಲಿ, ಅಂಥ ನಿರ್ವಹಣೆ ಅಥವಾ ಅನುಷ್ಠಾನಕ್ಕಾಗಿ ಅಗತ್ಯವಾದ ನಿಧಿಗಳನ್ನು ಸರ್ಕಾರವು ನಗರ ಪಾಲಿಕೆಯ ಸುಪರ್ದಿಗೆ ನೀಡತಕ್ಕದ್ದು.

ಅಧ್ಯಾಯ XIII
ಕರಾರುಗಳು

142. ಕರಾರುಗಳನ್ನು ಮಾಡಿಕೊಳ್ಳುವ ನಗರ ಪಾಲಿಕೆಯ ಅಧಿಕಾರ.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಗಳಿಗಾಗಿ, ನಗರ ಪಾಲಿಕೆಯು ಯಾವುದೇ ಕರಾರನ್ನು ಮಾಡಿಕೊಳ್ಳಬಹುದು ಮತ್ತು ಕರಾರಿನ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬಾಧ್ಯತೆಯನ್ನು ಈಡೇರಿಸಬಹುದು.

(2) ಈ ಸಂಬಂಧವಾಗಿ ರಚಿಸಿದ ನಿಯಮಗಳಿಗೆ ಒಳಪಟ್ಟು, ಈ ಕೆಳಕಂಡ ಉಪಬಂಧಗಳು ಈ ಅಧಿನಿಯಮದ ಯಾವುದೇ ಉದ್ದೇಶಗಳಿಗಾಗಿ ಕರಾರು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು, ಎಂದರೆ:-

(ಎ) ನಿರ್ದಿಷ್ಟ ವಲಯದ ವ್ಯವಹಾರಗಳಿಗೆ ಸಂಬಂಧಿಸಿದ ಪ್ರತಿಯೊಂದು ಕರಾರನ್ನು, ಐದು ಕೋಟಿ ರೂಪಾಯಿಗಳನ್ನು ಮೀರದ ಮೊತ್ತಕ್ಕಾಗಿ ಆಯುಕ್ತರು, ನಗರ ಪಾಲಿಕೆಯ ಪರವಾಗಿ ಮಾಡಿಕೊಳ್ಳತಕ್ಕದ್ದು;

(ಬಿ) ಎರಡು ಅಥವಾ ಹೆಚ್ಚು ವಲಯಗಳಿಗೆ ವ್ಯಾಪಿಸಿರುವ, ಐದುಕೋಟಿ ರೂಪಾಯಿಗಳ ಮೊತ್ತವನ್ನು ಮೀರುವ ನಿರ್ದಿಷ್ಟ ವಲಯಕ್ಕೆ ಮತ್ತು ಅಂಥ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಇಡೀ ನಗರ ಪಾಲಿಕೆಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರತಿಯೊಂದು ಕರಾರನ್ನು ಆಯುಕ್ತರು, ನಗರಪಾಲಿಕೆಯ ಪರವಾಗಿ ಮಾಡಿಕೊಳ್ಳತಕ್ಕದ್ದು;

(ಸಿ) ಅಧಿಕಾರ ಪ್ರತ್ಯಾಯೋಜನೆಗೊಳಪಟ್ಟು, ಆಯುಕ್ತರು ಸರ್ಕಾರದ ಪೂರ್ವಾನುಮೋದನೆ ಪಡೆಯದೇ ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(ಡಿ) ನಿಯಮಿಸಬಹುದಾದಂಥ ಕಾರ್ಯವಿಧಾನ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ 29)ರ ಉಪಬಂಧಗಳನ್ನು ಅನುಸರಿಸದೆ ನಗರ ಪಾಲಿಕೆಯು ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(3) ಕರಾರಿನ ನಿಬಂಧನೆಗಳನ್ನು ತಿದ್ದುಪಡಿ ಮಾಡುವುದನ್ನು ಅಥವಾ ಅಂಥ ಕರಾರಿನ ದರವನ್ನು ಬದಲಾಯಿಸುವುದನ್ನು ನಗರ ಪಾಲಿಕೆಯು ಆಯ್ಕೆ ಮಾಡಿಕೊಂಡರೆ ಅದಕ್ಕೆ ಈ ಪ್ರಕರಣದ ಅಡಿಯಲ್ಲಿ ನಿಯಮಿಸಿದ ಕಾರ್ಯವಿಧಾನವು ಅನ್ವಯವಾಗತಕ್ಕದ್ದು.

(4) ನಗರ ಪಾಲಿಕೆಯ ಪರವಾಗಿ ಮುಖ್ಯ ಆಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ಆಯುಕ್ತರು ಮಾಡಿಕೊಂಡ ಪ್ರತಿಯೊಂದು ಕರಾರಿನ ಮೇಲೆ ಹಾಕುವ ಸಾಮಾನ್ಯ ಮೊಹರನ್ನು ನಗರ ಪಾಲಿಕೆಯು ಲಭ್ಯವಾಗಿಸತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ ಮಾಡಿಕೊಂಡ ಯಾವುದೇ ಕರಾರು ನಗರ ಪಾಲಿಕೆಗೆ ಬಂಧನಕಾರಿಯಾಗತಕ್ಕದ್ದಲ್ಲ.

143. ಟೆಂಡರುಗಳ ಆಹ್ವಾನ.- (1) ನಗರ ಪಾಲಿಕೆಯು ಸ್ವೀಕರಿಸಿದ ಎಲ್ಲಾ ಟೆಂಡರುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ,

1999 (2000ರ ಕರ್ನಾಟಕ ಅಧಿನಿಯಮ 29)ರ ಅಡಿಯಲ್ಲಿ ನಿಯಮಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಪ್ರಕ್ರಿಯೆಗೊಳಿಸತಕ್ಕದ್ದು.

(2) ನಗರ ಪಾಲಿಕೆಯು ಪ್ರತಿಯೊಂದು ಟೆಂಡರಿನ ಮುಖ್ಯ ನಿಬಂಧನೆಗಳನ್ನು ಗುರುತಿಸತಕ್ಕ ಮಾದರಿ ಟೆಂಡರು ದಸ್ತಾವೇಜನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಮಾದರಿ ಟೆಂಡರನ್ನು ಯಾವುದೇ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಎಲ್ಲಾ ನಗರ ಪಾಲಿಕೆ ಪ್ರಾಧಿಕಾರಗಳು ಅನುಸರಿಸತಕ್ಕದ್ದು.

144. ದತ್ತಾಂಶದ ನಿರ್ವಹಣೆ.- (1) ಮುಖ್ಯ ಆಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಆಯುಕ್ತರು ನಿಯಮಿಸಬಹುದಾದಂಥ ನಮೂನೆಗಳಲ್ಲಿ ನಗರ ಪಾಲಿಕೆಯು ಮಾಡಿಕೊಂಡ ಕರಾರುಗಳ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ನಿರ್ವಹಿಸುವ ಕರಾರು ರಿಜಿಸ್ಟರನ್ನು, ಸಾರ್ವಜನಿಕ ಜಾಲತಾಣದಲ್ಲಿ, ನಿಯಮಿಸಲಾದಂಥ ನಮೂನೆಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಕಾಲಕಾಲಕ್ಕೆ ಇಂದೀಕರಿಸತಕ್ಕದ್ದು.

ಅಧ್ಯಾಯ XIV
ತೆರಿಗೆ ನಿರ್ಧರಣೆ

145. ನಗರ ಪಾಲಿಕೆಯ ರಾಜಸ್ವಗಳು.- ನಗರ ಪಾಲಿಕೆಯ ರಾಜಸ್ವಗಳು ಈ ಮುಂದಿನ ಮೂಲಗಳಿಂದ ಜಮೆಗಳನ್ನು ಒಳಗೊಳ್ಳತಕದ್ದು, ಎಂದರೆ:-

(ಎ) ನಗರ ಪಾಲಿಕೆಯು ವಿಧಿಸಿದ ತೆರಿಗೆಗಳು;
(ಬಿ) ಕಟ್ಟಡ ನಿರ್ಮಾಣ ಅನುಮತಿಗಳಿಗಾಗಿ ನೀಡುವ ಶುಲ್ಕಗಳು, ಲೆವಿ ಚಾರ್ಜು ಮತ್ತು ತಗಾದೆ, ರಾಜೀ ಶುಲ್ಕ;
(ಸಿ) ನಾಗರಿಕ ಸೇವೆಗಳನ್ನು ಒದಗಿಸುವುದಕ್ಕಾಗಿ ವಿಧಿಸಿದ ಬಳಕೆದಾರ ಶುಲ್ಕಗಳು;
(ಡಿ) ನಿಯಂತ್ರಕ ಮತ್ತು ಇತರೆ ಶಾಸನಬದ್ಧ ಪ್ರಕಾರ್ಯಗಳ ನೆರವೇರಿಕೆಗಾಗಿ ವಿಧಿಸಿದ ಶುಲ್ಕಗಳು ಮತ್ತು ಜುಲ್ಮಾನೆಗಳು; ಮತ್ತು
(ಇ) ಈ ಅಧಿನಿಯಮದಡಿ ಅಧಿಕೃತಗೊಳಿಸಿದ ನಗರ ಪಾಲಿಕೆಯ ಮೂಲಕ ವಿಧಿಸಲಾದ ಯಾವುದೇ ಇತರ ಆದಾಯಗಳು.

146. ತೆರಿಗೆಗಳು, ಉಪಕರಗಳು, ಸುಂಕಗಳು ಮತ್ತು ಸೇವಾ ಶುಲ್ಕಗಳನ್ನು ವಿಧಿಸುವ ಅಧಿಕಾರ.- ಪ್ರತಿಯೊಂದು ನಗರ ಪಾಲಿಕೆಯು, ಈ ಮುಂದಿನ ತೆರಿಗೆಗಳು, ಉಪಕರಗಳು, ಸುಂಕಗಳು ಮತ್ತು ಸೇವಾ ಶುಲ್ಕಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರತಕ್ಕದ್ದು,:-

(ಎ) ಭೂಮಿಗಳು ಮತ್ತು ಕಟ್ಟಡಗಳ ಮೇಲೆ ಸ್ವತ್ತು ತೆರಿಗೆ;
(ಬಿ) ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡಲಾದ ಸ್ವತ್ತುಗಳ ಮೇಲಿನ ಸೇವಾ ಶುಲ್ಕ;
(ಸಿ) ಮನರಂಜನಾ ತೆರಿಗೆ;
(ಡಿ) ಜಾಹಿರಾತುಗಳ ಮೇಲಿನ ಶುಲ್ಕ;
(ಇ) ವೃತ್ತಿಗಳು, ಕಸುಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ;
(ಎಫ್) ಘನತ್ಯಾಜ್ಯ ನಿರ್ವಹಣಾ ಉಪಕರ;
(ಜಿ) ಮೂಲಸೌಕರ್ಯ ಉಪಕರ;
(ಎಚ್) ನಗರ ಭೂ ಸಾರಿಗೆ ಉಪಕರ;
(ಐ) ಹೆಚ್ಚುವರಿ ಸ್ಟಾಂಪು ಸುಂಕದ ರೂಪದಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲಿನ ಸುಂಕ;
(ಜೆ) ಕಟ್ಟಡ ಲೈಸೆನ್ಸಿಗೆ ಸಂಬಂಧಿಸಿದ ತೆರಿಗೆಗಳು ಅಥವಾ ಲೆವಿಗಳು;
(ಕೆ) ನಗರ ಪಾಲಿಕೆಯು ನಿರ್ಧರಿಸಬಹುದಾದ /ಅಥವಾ ಸಂಗ್ರಹಿಸಬಹುದಾದ ಕಾನೂನಿನ ಮೂಲಕ ವಹಿಸಲಾದ ಯಾವುದೇ ಇತರ ತೆರಿಗೆಗಳು ಅಥವಾ ಲೆವಿಗಳು;

(ಎಲ್) ಕಟ್ಟಡ ನಿರ್ಮಾಣ ಅನುಮತಿಗಳಿಗಾಗಿ ನೀಡುವ ಶುಲ್ಕಗಳು, ಲೆವಿ, ಉಪಕರ, ಚಾರ್ಜು ಮತ್ತು ತಗಾದೆ, ರಾಜೀ ಶುಲ್ಕ;

147. ಸ್ವತ್ತು ತೆರಿಗೆ ವಿಧಿಸುವಿಕೆ.- (1) ಕರ್ನಾಟಕ ಸ್ಥಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿ ಅಧಿಸೂಚಿಸಲಾದ ಕಟ್ಟಡಗಳು, ಸ್ವತ್ತುಗಳು ಮತ್ತು ಭೂಮಿಗಳ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಬಂಡವಾಳ ಮೌಲ್ಯ ವ್ಯವಸ್ಥೆಯನ್ನು ಅನುಸರಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಮಾಲೋಚನೆಯೊಂದಿಗೆ ಸರ್ಕಾರವು ನಿಗದಿಪಡಿಸಿದ ಮಿತಿಗಳೊಳಗೆ ಅಂಥ ದರಗಳಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಪ್ರತಿ ನಗರ ಪಾಲಿಕೆಯು ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ನಿರ್ಣಯವನ್ನು ಅಂಗೀಕರಿಸಿದಾಗ, ನಗರ ಪಾಲಿಕೆಯು ಅಂಥ ನಿರ್ಣಯದ ಸೂಚನಾ ಪತ್ರವನ್ನು ತನ್ನ ಕಚೇರಿಯ ಸೂಚನಾ ಫಲಕದಲ್ಲಿ, ತನ್ನ ಅಧಿಕೃತ ಜಾಲತಾಣದಲ್ಲಿ ಮತ್ತು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಜಾಹಿರಾತು ನೀಡುವ ಮೂಲಕ ಪ್ರಕಟಿಸತಕ್ಕದ್ದು. ಅಂಥ ಸೂಚನಾ ಪತ್ರದ ಪ್ರಕಟಣೆಯು ಈ ಅಧಿನಿಯಮ ಮತ್ತು ಅದರಡಿ ಮಾಡಲಾದ ನಿಯಮಗಳ ಉಪಬಂಧಗಳ ಅನುಸಾರವಾಗಿ ತೆರಿಗೆಯನ್ನು ವಿಧಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(3) ಪ್ರತಿಯೊಂದು ನಗರ ಪಾಲಿಕೆಯು, ಸರ್ಕಾರಿ ಭೂಮಿ, ಯಾವುದೇ ಸ್ಥಳೀಯ ನಿಕಾಯಕ್ಕೆ ಸೇರಿದ ಭೂಮಿ, ಯಾವುದೇ ಶಾಸನಬದ್ಧ ನಿಕಾಯ ಅಥವಾ ಸರ್ಕಾರದ ಮಾಲೀಕತ್ವ ಅಥವಾ ನಿಯಂತ್ರಣದ ಸಂಸ್ಥೆಗೆ ಸೇರಿದ ಭೂಮಿಯಲ್ಲಿ ಕಾನೂನು ಬಾಹಿರವಾಗಿ ಕಟ್ಟಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪವಿಧಿಯ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಅನಧಿಕೃತ ಬಡಾವಣೆಯಲ್ಲಿ ಅಥವಾ ಕಂದಾಯ ಭೂಮಿಯಲ್ಲಿ ಕಟ್ಟಿದ ಕಟ್ಟಡವನ್ನೂ ಒಳಗೊಂಡಂತೆ ಪ್ರತಿಯೊಂದು ಕಟ್ಟಡ, ಖಾಲಿ ನಿವೇಶನ ಅಥವಾ ಅವುಗಳೆರಡರ ಮೇಲೆ ಅಥವಾ ಅಧಿಭೋಗ ಪ್ರಮಾಣ ಪತ್ರವನ್ನು ಹೊರಡಿಸದೇ ಸ್ವಾಧೀನಕ್ಕೆ ಪಡೆದಿರುವ ಕಟ್ಟಡದ ಮೇಲೆ ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ಸಂಗ್ರಹಿಸಬಹುದು. ಅಂಥ ಕಟ್ಟಡ ಅಥವಾ ಭೂಮಿಗಳಿಂದ ಸ್ವತ್ತು ತೆರಿಗೆ ಸಂಗ್ರಹಿಸಿದ ಸ್ವತ್ತು ತೆರಿಗೆಯನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸತಕ್ಕದ್ದು:

ಪರಂತು, ಈ ಉಪಪ್ರಕರಣದಡಿ ಅಂಥ ಕಟ್ಟಡಗಳಿಗೆ ಸ್ವತ್ತು ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಿಸುವಿಕೆಯು, ಅಂಥ ಕಟ್ಟಡಗಳಿಗಾಗಿ ಮಾಡಿದ ಉಲ್ಲಂಘನೆ ಅಥವಾ ಅಂಥ ಕಟ್ಟಡದ ಹಕ್ಕು, ಮಾಲೀಕತ್ವ ಅಥವಾ ಕಾನೂನು ಮಾನ್ಯತೆಯನ್ನು ಸಕ್ರಮಗೊಳಿಸುವ ಯಾವುದೇ ಹಕ್ಕನ್ನು ಪ್ರಧಾನ ಮಾಡುವುದಿಲ್ಲ. ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳ ಅನುಸಾರ ಅಂಥ ಕಟ್ಟಡಗಳು ಕಾನೂನಿನ ಉಲಂಘನೆಗಾಗಿನ ಯಾವುದೇ ಕ್ರಮಕ್ಕಾಗಿ ಯಾವಾಗಲೂ ಹೊಣೆಯಾಗಿರತಕದ್ದು:

ಮತ್ತು ಪರಂತು, ಸೆಪ್ಟೆಂಬರ್ 30, 2024ರ ತರುವಾಯ ನಿರ್ಮಿಸಿದ ಅಥವಾ ಸೃಜಿಸಿರುವಂಥ ಅನಧಿಕೃತ ಕಟ್ಟಡಗಳು ಅಥವಾ ಖಾಲಿ ನಿವೇಶನಗಳ ಮೇಲೆ ಯಾವುದೇ ಅಂಥ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ ಅಥವಾ ಅಂಥ ಅನಧಿಕೃತ ಕಟ್ಟಡಗಳ ಅಥವಾ ಭೂಮಿಗಳ ನೋಂದಣಿಯನ್ನು ನಗರ ಪಾಲಿಕೆಯ ಯಾವುದೇ ಸ್ವತ್ತು ತೆರಿಗೆ ರಿಜಿಸ್ಟರಿನಲ್ಲಿ ನೋಂದಣಿ ಮಾಡತಕ್ಕದ್ದಲ್ಲ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ಮಾನ್ಯವಾದ ಅಥವಾ ಕ್ರಮಬದ್ಧ ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆಯುವ ದಿನಾಂಕವನ್ನು ಕಟ್ಟಡದ ನಿರ್ಮಾಣದ ದಿನಾಂಕ ಎಂಬುದಾಗಿ ಅರ್ಥೈಸತಕ್ಕದ್ದು ಮತ್ತು ಖಾಲಿ ನಿವೇಶನ ಅಥವಾ ಜಮೀನಿನ ಸಂದರ್ಭದಲ್ಲಿ, ಅಂಥ ನಿವೇಶನ ಅಥವಾ ಜಮೀನಿನ ನೋಂದಣಿಯ ದಿನಾಂಕವು ಅಂಥ ಜಮೀನು ಅಥವಾ ನಿವೇಶನವನ್ನು ಸೃಜಿಸಿದ ದಿನಾಂಕವಾಗಿರತಕ್ಕದ್ದು.

(4) ವಾಸದ ಉದ್ದೇಶಕ್ಕಾಗಿನ ಸ್ವಾನುಭೋಗದ ಕಟ್ಟಡದ ಸಂಬಂಧದಲ್ಲಿ ಮತ್ತು ನಗರ ಪಾಲಿಕೆಯ ಶಿಫಾರಸ್ಸಿನ ಮೇಲೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಸ್ವಾನುಭೋಗದ ನಿವಾಸೇತರ ಕಟ್ಟಡಗಳ ಪ್ರವರ್ಗದ ಸಂಬಂಧದಲ್ಲಿ ಪಾವತಿಸಬೇಕಾದ ಸ್ವತ್ತು ತೆರಿಗೆಯನ್ನು ಶೇಕಡಾ ಐವತ್ತರಷ್ಟು ಕಡಿಮೆ ಮಾಡತಕ್ಕದ್ದು.

(5) ನಗರ ಪಾಲಿಕೆಯ ಆಯುಕ್ತರು ವಲಯಗಳ ವರ್ಗೀಕರಣ, ಬಂಡವಾಳ ಮೌಲ್ಯ ಮತ್ತು ಸ್ವತ್ತಿನ ವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಅನುಮಾನಗಳಿಗೆ ಸ್ಪಷ್ಟೀಕರಣ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು. ನಗರ ಪಾಲಿಕೆ ಆಯುಕ್ತರ ತೀರ್ಮಾನದ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನಿಗೆ ಮೇಲ್ಮನವಿ ಸಲ್ಲಿಸಬಹುದು, ಈ ಕುರಿತು ಆತನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(6) ನಗರ ಪಾಲಿಕೆಯು ವಿವಿಧ ವರ್ಗಗಳ ಸ್ವತ್ತುಗಳಿಗಾಗಿ ವಿವಿಧ ತೆರಿಗೆ ಹಂತಗಳನ್ನು ನಿಯಮಿಸಬಹುದು.

148. ಸ್ವತ್ತಿನ ತೆರಿಗೆಯ ಸಂದಾಯ.- ಪ್ರಾಥಮಿಕವಾಗಿ ಸ್ವತ್ತಿನ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ವ್ಯಕ್ತಿಯು ತನ್ನ ಸ್ವತ್ತಿನ ವಿವರವನ್ನು ಸಲ್ಲಿಸತಕ್ಕದ್ದು ಮತ್ತು ತದನುಸಾರವಾಗಿ ಎರಡು ಸಮ ಕಂತುಗಳಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು. ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಎರಡು ಸಮಾನ ಕಂತುಗಳಿಗಾಗಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಎಂದರೆ, ಸಂಬಂಧಪಟ್ಟ ಆರ್ಥಿಕ ವರ್ಷದ ಮೇ ಅಂತ್ಯದೊಳಗೆ ಮೊದಲನೇ ಕಂತನ್ನು ಮತ್ತು ನವೆಂಬರ್ ಅಂತ್ಯದೊಳಗೆ ಎರಡನೇ ಕಂತನ್ನು ಸಂದಾಯ ಮಾಡುವುದಕ್ಕೆ ಬಾಕಿ ಇರತಕ್ಕದ್ದು. ಆದಾಗ್ಯೂ ಖಾತೆದಾರ ಅಥವಾ ಅಧಿಭೋಗದಾರ ಅಥವಾ ಪ್ರಾಥಮಿಕವಾಗಿ ಸ್ವತ್ತಿನ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ವ್ಯಕ್ತಿಯು ಒಂದೇ ಕಂತಿನಲ್ಲಿ ಸ್ವತ್ತು ತೆರಿಗೆಯನ್ನು ಪಾವತಿಸುವ ಆಯ್ಕೆಯನ್ನು ಮಾಡಿಕೊಳ್ಳಬಹುದು:

ಪರಂತು, ಹಣಕಾಸು ವರ್ಷದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೊಳಗೆ ಆಸ್ತಿ ತೆರಿಗೆಯನ್ನು ಪೂರ್ಣ ವರ್ಷಕ್ಕೆ ಒಂದೇ ಕಂತಿನಲ್ಲಿ ಪಾವತಿಸಿದರೆ, ಪಾವತಿಸಬೇಕಾದ ತೆರಿಗೆಯ ಮೇಲೆ ಶೇಕಡ ಐದರಷ್ಟನ್ನು ಮೀರದ ದರದಲ್ಲಿ ಅಧಿಸೂಚಿಸಿದಂತೆ ಆತನಿಗೆ ರಿಯಾಯಿತಿಯನ್ನು ಅನುಮತಿಸತಕ್ಕದ್ದು:

ಮತ್ತು ಪರಂತು, ರಿಯಾಯಿತಿಯ ಅವಧಿಯನ್ನು ಸರ್ಕಾರವು ಅದನ್ನು ಪಾವತಿಸಬೇಕಾದ ಹಣಕಾಸು ವರ್ಷದ ಮೇ ಅಂತ್ಯದವರೆಗೆ ವಿಸ್ತರಿಸಬಹುದು.

(2) ಯಾರೇ ಖಾತೆದಾರ ಅಥವಾ ಅಧಿಭೋಗದಾರನು ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸುವ ಮೊದಲು, ಮುಂಗಡವಾಗಿ ಅರ್ಧ ವರ್ಷಕ್ಕೆ ಲೆಕ್ಕ ಹಾಕಿದ ತೆರಿಗೆಯನ್ನು ಅಥವಾ ಆತನು ಅಂಥ ವಿವರ ಪಟ್ಟಿಕೆಯಲ್ಲಿ ಘೋಷಿಸಿದ ಆಧಾರದ ಮೇಲೆ ವರ್ಷದಲ್ಲಿ ಆತನು ಪಾವತಿಸಬಹುದಾದ ಸ್ವತ್ತಿನ ತೆರಿಗೆಯ ಪೂರ್ಣ ಮೊತ್ತವನ್ನು ನೈಜ ಮತ್ತು ಪೂರ್ಣವಾಗಿ ಪಾವತಿಸಕ್ಕದ್ದು.

(3) ಈ ಅಧಿನಿಯಮದಡಿ ಸ್ವತ್ತು ತೆರಿಗೆಯನ್ನು ಪಾವತಿಸಲು ಹೊಣೆಗಾರನಾದ ಪ್ರತಿ ಖಾತೆದಾರ ಅಥವಾ ಅಧಿಭೋಗದಾರನು ಪ್ರತಿ ವರ್ಷದ ವಿವರಪಟ್ಟಿಕೆಯನ್ನು ಆಯುಕ್ತನಿಗೆ ಅಥವಾ ಈ ಕುರಿತು ಆತನಿಂದ ಅಧಿಕೃತಗೊಂಡ ಅಧಿಕಾರಿ ಅಥವಾ ಏಜೆನ್ಸಿಗೆ ಸಲ್ಲಿಸಬೇಕಾದ ನಮೂನೆ ಮತ್ತು ವಿಧಾನವನ್ನು ಸರ್ಕಾರವು ನಗರ ಪಾಲಿಕೆಯೊಂದಿಗೆ ಸಮಾಲೋಚಿಸಿ ನಿಯಮಿಸತಕ್ಕದು.

(4) ಯಾವುದೇ ಕಟ್ಟಡ ಅಥವಾ ಖಾಲಿ ಜಾಗ ಅಥವಾ ಅವೆರಡರ ಖಾತೆದಾರ ಅಥವಾ ಅಧಿಭೋಗದಾರನು ವಿವರಪಟ್ಟಿಕೆಯನ್ನು ಸಲ್ಲಿಸುವುದು ಹಾಗೂ ಈ ಪ್ರಕರಣದಡಿ ಸ್ವತ್ತು ತೆರಿಗೆಯ ನಿರ್ಧರಣೆಯನ್ನು ಸುಲಭಗೊಳಿಸುವ ಸಲುವಾಗಿ, **ಆಯುಕ್ತರು** ಕಾಲಕಾಲಕ್ಕೆ ಬಂಡವಾಳ ಮೌಲ್ಯ ಮತ್ತು ಅದರ ಮೇಲೆ ಪಾವತಿಸಬಹುದಾದ ಸ್ವತ್ತು ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು.

(5) ಖಾತೆದಾರ ಅಥವಾ ಅಧಿಭೋಗದಾರನು ಸಲ್ಲಿಸಿದ ಪ್ರತಿಯೊಂದು ವಿವರಪಟ್ಟಿಕೆಯನ್ನು ಆಯುಕ್ತರು ಅಥವಾ ಅಧಿಕೃತಗೊಳಿಸಿದ ಅಧಿಕಾರಿ ನಿಯಮಿಸಿದ ರೀತಿಯಲ್ಲಿ ಸಲ್ಲಿಸಿದ ವಿವರಪಟ್ಟಿಗಳ ಪರಿಶೀಲನೆಗಾಗಿ ಪ್ರಕರಣಗಳನ್ನು ತೆಗೆದುಕೊಳ್ಳದ ಹೊರತು ತೆರಿಗೆಯನ್ನು ನಿರ್ಧರಿಸಿರುವುದಾಗಿ ಭಾವಿಸತಕ್ಕದ್ದು:

ಪರಂತು ಆಯುಕ್ತರು, ಖಾತೆದಾರ ಅಥವಾ ಅಧಿಭೋಗದಾರನು ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿರುವುದಾಗಿ ನಂಬಲು ಕಾರಣವನ್ನು ಹೊಂದಿದ್ದರೆ, ಆತನು ಸ್ವಪ್ರೇರಣೆಯಿಂದ ಅಥವಾ ಅನ್ಯಥಾ ಅಂಥ ಕಟ್ಟಡವನ್ನು ಪರಿಶೀಲಿಸಬಹುದು ಮತ್ತು ತೆರಿಗೆಯನ್ನು ನಿರ್ಧರಿಸಬಹುದು.

(6) ಸ್ವತ್ತು ತೆರಿಗೆಯನ್ನು ಪಾವತಿಸುವ ಪ್ರತಿಯೊಬ್ಬ ವ್ಯಕ್ತಿಗೆ ಅಂಥ ತೆರಿಗೆ ಪಾವತಿಗಾಗಿ ನಗರ ಪಾಲಿಕೆಯು ಸ್ವೀಕೃತಿಯನ್ನು ಅಥವಾ ಖಾತಾವನ್ನು ಒದಗಿಸತಕ್ಕದ್ದು ಹಾಗೂ ಅಂಥ ಸ್ವೀಕೃತಿ ಅಥವಾ ಖಾತಾಗಳು ಕಾನೂನುಬದ್ಧ ಮತ್ತು ಕಾನೂನುಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಜಾಗಗಳಿಗಾಗಿ ಪ್ರತ್ಯೇಕವಾಗಿರತಕ್ಕದ್ದು ಹಾಗೂ ಅಂಥ ಸ್ವೀಕೃತಿ ಅಥವಾ ಖಾತಾಗಳ ನಮೂನೆಯನ್ನು ನಿಯಮಗಳಡಿಯಲ್ಲಿ ಕಾಲಕಾಲಕ್ಕೆ ನಿಯಮಿಸತಕ್ಕದ್ದು.

149. ವರ್ಗಾವಣೆ ನೋಟೀಸನ್ನು ಕೊಡುವುದಕ್ಕಾಗಿ ವರ್ಗಾವಣೆಗೊಂಡ ಮತ್ತು ವರ್ಗಾವಣೆ ಪಡೆದವನ ಬಾಧ್ಯತೆ.- (1) ಖಾತೆದಾರನ ಹಕ್ಕು ಸ್ವಾಮ್ಯವು ವರ್ಗಾವಣೆಗೊಂಡ ಯಾವುದೇ ಸಂದರ್ಭದಲ್ಲಿ, ವರ್ಗಾವಣೆಗೊಂಡ ಖಾತೆದಾರನ ಮತ್ತು ಅದನ್ನು ವರ್ಗಾಯಿಸಲಾದ ವ್ಯಕ್ತಿಯು, ವರ್ಗಾವಣೆ ಪತ್ರವನ್ನು ಬರೆದುಕೊಟ್ಟ ತರುವಾಯ ಅಥವಾ ಅದನ್ನು ನೋಂದಾಯಿಸಿದ್ದರೆ, ಅದರ ನೋಂದಣಿಯ ತರುವಾಯ, ಅಥವಾ ವರ್ಗಾವಣೆಯು ಪರಿಣಾಮಕಾರಿಯಾಗದಿದ್ದರೆ, ವರ್ಗಾವಣೆಯು ಪರಿಣಾಮಕಾರಿಯಾದ ತರುವಾಯ ಮೂರು ತಿಂಗಳೊಳಗೆ ಈ ಕುರಿತು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಆಯುಕ್ತನಿಗೆ ಅಥವಾ ಅಧಿಕೃತಗೊಳಿಸಲಾದ ಅಧಿಕಾರಿಗೆ ಅಂಥ ವರ್ಗಾವಣೆಯ ತಿಳುವಳಿಕೆ ಪತ್ರವನ್ನು (ನೋಟೀಸು) ನೀಡತಕ್ಕದ್ದು:

ಪರಂತು ನಗರ ಪಾಲಿಕೆಗೆ ಸ್ವತ್ತಿನ ವರ್ಗಾವಣೆ ಅಥವಾ ವ್ಯವಹಾರವನ್ನು ಉಪ ನೋಂದಣಾಧಿಕಾರಿಯು ನೇರವಾಗಿ ತಿಳಿಸಿರುವ ಮತ್ತು ಅಧಿಸೂಚಿಸಿರುವ ನೋಂದಾಯಿತ ವ್ಯವಹಾರಗಳ ಸಂದರ್ಭದಲ್ಲಿ, ಖಾತೆದಾರನು ಅಥವಾ ವರ್ಗಾವಣೆ ಪಡೆದವನು ವರ್ಗಾವಣೆಯ ತಿಳುವಳಿಕೆ ಪತ್ರವನ್ನು ನೀಡಲು ಬಾಧ್ಯರಾಗತಕ್ಕದ್ದಲ್ಲ.

(2) ಖಾತೆದಾರನ ಮರಣದ ಸಂದರ್ಭದಲ್ಲಿ, ಮೃತನ ಹಕ್ಕು ಸ್ವಾಮ್ಯವಿರುವ ವ್ಯಕ್ತಿಯ ವಾರಸುದಾರನಿಗೆ ಅಥವಾ ಅನ್ಯಥಾ ವರ್ಗಾಂತರಿತವಾಗತಕ್ಕದ್ದು, ಖಾತೆದಾರನ ಮರಣದಿಂದ ಒಂದು ವರ್ಷದೊಳಗಾಗಿ ಆಯುಕ್ತನಿಗೆ ಅಂಥ ವರ್ಗಾವಣೆಯ ತಿಳುವಳಿಕೆ ಪತ್ರವನ್ನು ನೀಡತಕ್ಕದ್ದು.

(3) ಅಂಥ ನೋಟೀಸಿನ ಮುಖಾಂತರ ಅಥವಾ ಅನ್ಯಥಾ ಅಂಥ ವರ್ಗಾವಣೆಯು ಆಯುಕ್ತರು ಅಥವಾ ಅಧಿಕೃತಗೊಂಡ ಅಧಿಕಾರಿಯ ಅರಿವಿಗೆ ಬಂದ ಯಾವುದೇ ಸಂದರ್ಭದಲ್ಲಾದರೂ, ವರ್ಗಾವಣೆ ಪಡೆದವನ ಹೆಸರನ್ನು ಈ ಕುರಿತು ನಿಯಮಿಸಲಾದ ಕಾರ್ಯವಿಧಾನದ ಪ್ರಕಾರ ಸ್ವತ್ತಿನ ತೆರಿಗೆ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(4) ಆಯುಕ್ತನಿಗೆ ತಿಳುವಳಿಕೆ ಪತ್ರವನ್ನು ನೀಡದೆ, ಮೇಲೆ ಹೇಳಿದಂತೆ ವರ್ಗಾವಣೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನಿರ್ಲಕ್ಷ್ಯದ ಮುಖಾಂತರ ಅವನಿಗೆ ವಹಿಸಬಹುದಾದ ಯಾವುದೇ ಇತರೆ ಹೊಣೆಗಾರಿಕೆಯ ಜೊತೆಗೆ, ಆತನು ತಿಳುವಳಿಕೆ ಪತ್ರವನ್ನು ನೀಡುವವರೆಗೆ ಅಥವಾ ವರ್ಗಾವಣೆಯು ನಗರ ಪಾಲಿಕೆಯ ರಿಜಿಸ್ಟರ್‌ಗಳಲ್ಲಿ ದಾಖಲಿಸುವವರೆಗೆ ವರ್ಗಾಂತರಿತ ಆವರಣಗಳು ಅಥವಾ ಸ್ವತ್ತಿನ ಮೇಲೆ ನಿರ್ಧರಿಸಲಾದ ಸ್ವತ್ತು ತೆರಿಗೆಯನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ಮುಂದುವರಿಸತಕ್ಕದ್ದು, ಆದರೆ ಈ ಪ್ರಕರಣದಲ್ಲಿ ಇರುವುದಾವುದೂ ಮುಂದಿನವುಗಳಿಗೆ ಪರಿಣಾಮ ಬೀರತಕ್ಕದ್ದಲ್ಲ,-

(ಎ) ಸದರಿ ತೆರಿಗೆಯ ಸಂದಾಯಕ್ಕಾಗಿ ವರ್ಗಾವಣೆ ಪಡೆದವನ ಹೊಣೆಗಾರಿಕೆ, ಅಥವಾ

(ಬಿ) ನಗರ ಪಾಲಿಕೆಯ ಮುಂಚಿನ ಚಾರ್ಜು.

(5) ಆಯುಕ್ತ ಅಥವಾ ಈ ಕುರಿತು ಅಧಿಕೃತಗೊಳಿಸಿದ ಅಧಿಕಾರಿಯು, ಸ್ವಪ್ರೇರಣೆಯಿಂದಾಗಲೀ ಅಥವಾ ಅನ್ಯಥಾವಾಗಲೀ, ತಾನು ಅವಶ್ಯಕವೆಂದು ಪರಿಗಣಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ತಪ್ಪು ಅಥವಾ ಮೋಸದಿಂದ ಅಥವಾ ಸಂಗತಿಗಳನ್ನು ಮರೆಮಾಚುವ ಮೂಲಕ ಅಥವಾ ಸುಳ್ಳು, ತಪ್ಪು ಅಥವಾ ಅಪೂರ್ಣ ಸಂಗತಿಗಳನ್ನು ಒದಗಿಸುವ ಮೂಲಕ ನಗರ ಪಾಲಿಕೆಯಲ್ಲಿನ ರಿಜಿಸ್ಟರಿನಲ್ಲಿ ಯಾವುದೇ ಹಕ್ಕುಸ್ವಾಮ್ಯದ ವರ್ಗಾವಣೆ ದಾಖಲಿಸಲಾಗಿದೆ ಎಂದು ಮನಗಂಡರೆ, ಆತನು ಹಕ್ಕು ಸ್ವಾಮ್ಯದ ವರ್ಗಾವಣೆಯನ್ನು ದಾಖಲಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಆತನು ಸೂಕ್ತವೆಂದು ಭಾವಿಸಿದಂತೆ ಪ್ರಕರಣವನ್ನು ಪುನಃ ಪ್ರಾರಂಭಿಸಬಹುದು ಮತ್ತು ಅದರ ಸಂಬಂಧದಲ್ಲಿ ಅಂಥ ಆದೇಶಗಳನ್ನು ಮಾಡಬಹುದು:

ಪರಂತು, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಆದೇಶಗಳನ್ನು ಮಾಡತಕ್ಕದ್ದಲ್ಲ:

ಮತ್ತು ಪರಂತು, ಸರ್ಕಾರ ಅಥವಾ **ನಗರ ಪಾಲಿಕೆ** ಅಥವಾ ಯಾವುದೇ ಸರ್ಕಾರಿ ಏಜೆನ್ಸಿ ಅಥವಾ **ಉದ್ಯಮ** ಅಥವಾ ಪ್ರಾಧಿಕಾರಕ್ಕೆ ಸೇರಿದ ಆಸ್ತಿಗಳ ಸಂದರ್ಭದಲ್ಲಿ ಐದು ವರ್ಷಗಳ ಮಿತಿ ಅವಧಿಯು ಅನ್ವಯವಾಗತಕ್ಕದ್ದಲ್ಲ.

ಮತ್ತೂ ಪರಂತು, ಸ್ವತ್ತು ತೆರಿಗೆ ರಿಜಿಸ್ಟರ್‌ಗಳಲ್ಲಿನ ಮೋಸ ಅಥವಾ ತಪ್ಪು ನಿರೂಪಣೆಯಿಂದ ಮಾಡಿದ ಯಾವುದೇ ನಮೂದಿನ ಸಂದರ್ಭದಲ್ಲಿ, ಸದರಿ ಐದು ವರ್ಷಗಳ ಮಿತಿ ಅವಧಿಯು ಅನ್ವಯವಾಗತಕ್ಕದ್ದಲ್ಲ.

(6) ಆಸ್ತಿ ತೆರಿಗೆ ಮತ್ತು ಸಂಬಂಧಪಟ್ಟ ದಾಖಲೆಗಳಿಗೆ ಸಂಬಂಧಿಸಿದಂತೆ ಅಧಿಕೃತ ಅಧಿಕಾರಿಯು ಮಾಡಿದ ಯಾವುದೇ ಆದೇಶದ ಮೇಲಿನ ಮೇಲ್ಮನವಿಗಳನ್ನು ನಿಯಮಿಸಬಹುದಾದಂತಹ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು:

ಪರಂತು, ಆಯುಕ್ತರು ಸ್ವಯಂಪ್ರೇರಣೆಯಿಂದಾಗಲೀ ಅಥವಾ ಅನ್ಯಥಾವಾಗಲೀ ತಾನು ಸೂಕ್ತವೆಂದು ಪರಿಗಣಿಸುವಂಥ ವಿಚಾರಣೆ ಮಾಡಿದ ತರುವಾಯ, ಯಾವುದೇ **ಹಕ್ಕುಸ್ವಾಮ್ಯದ** ವರ್ಗಾವಣೆಯನ್ನು ತಪ್ಪಾಗಿ ಅಥವಾ ಮೋಸದಿಂದ, ತಪ್ಪು ನಿರೂಪಣೆಯಿಂದ, ಅಥವಾ ಸಂಗತಿಗಳನ್ನು ಮರೆಮಾಚುವ ಮೂಲಕ ಅಥವಾ ಸುಳ್ಳಾದ, ತಪ್ಪಾದ ಅಥವಾ ಅಪೂರ್ಣ ಸಂಗತಿಗಳನ್ನು ಒದಗಿಸುವ ಮೂಲಕ **ನಗರ ಪಾಲಿಕೆಯ** ರಿಜಿಸ್ಟರ್‌ನಲ್ಲಿ ದಾಖಲಿಸಲಾಗಿದೆ ಎಂದು ಮನಗಂಡಲ್ಲಿ, ಅಂಥ ಹಕ್ಕುಸ್ವಾಮ್ಯ ವರ್ಗಾವಣೆಯನ್ನು ದಾಖಲಿಸಿದ ದಿನಾಂಕದಿಂದ ಐದು ವರ್ಷದ ಅವಧಿಯವರೆಗೆ ಯಾವುದೇ ಮೂಲ ಆದೇಶ ಅಥವಾ ತನಗೆ ಅಧೀನದಲ್ಲಿರುವ ಅಧಿಕಾರಿಯ ಮೇಲ್ಮನವಿಗೆ ಮಾಡಿದ ಆದೇಶವನ್ನು ಪರಿಶೀಲಿಸಬಹುದು ಮತ್ತು ಆತನು ಸೂಕ್ತವೆಂದು ಭಾವಿಸಿದಂಥ ಆದೇಶವನ್ನು ಮಾಡಬಹುದು:

ಮತ್ತು ಪರಂತು, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಆದೇಶಗಳನ್ನು ಮಾಡತಕ್ಕದ್ದಲ್ಲ:

(7) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಕರ್ನಾಟಕ ಗೃಹನಿರ್ಮಾಣ ಮಂಡಳಿ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿರುವ ಯಾವುದೇ ಕಟ್ಟಡ ಅಥವಾ ಭೂಮಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಯಾವುದೇ ಮಂಡಳಿ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ **ಮಂಜೂರಾತಿ**, ಹಂಚಿಕೆ ಅಥವಾ ಭೋಗ್ಯಕ್ಕೆ ಅನುಸಾರವಾಗಿ ಸ್ವಾಧೀನವನ್ನು ಯಾರೇ ವ್ಯಕ್ತಿಗೆ ಹಸ್ತಾಂತರಿಸಲ್ಪಟ್ಟಾಗ, ಪ್ರಾಥಮಿಕವಾಗಿ ಸ್ವತ್ತು ತೆರಿಗೆ ಪಾವತಿಗೆ ಹೊಣೆಗಾರರಾಗಿರುವ ಯಾರೇ ವ್ಯಕ್ತಿಯ **ಹಕ್ಕುಸ್ವಾಮ್ಯ** ವರ್ಗಾವಣೆಯನ್ನು, ಸಂಬಂಧಪಟ್ಟ ಮಂಡಳಿ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಪೂರ್ವ ಮಾಹಿತಿಯನ್ನು ನೀಡದೆ ಮತ್ತು ಅವರು ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಲು ಅವಕಾಶವನ್ನು ನೀಡದೆ **ನಗರ ಪಾಲಿಕೆಯ** ರಿಜಿಸ್ಟರ್‌ಗಳಲ್ಲಿ ದಾಖಲಿಸತಕ್ಕದ್ದಲ್ಲ.

150. ತೆರಿಗೆ ವಿವರ ಪಟ್ಟಿಕೆಗಳ ಪರಿಶೋಧನೆ.- (1) ಯಾವುದೇ ಕಟ್ಟಡ ಅಥವಾ ಜಮೀನು ಅಥವಾ ಎರಡರ ಸಂಬಂಧದಲ್ಲಿ ಈ ಅಧ್ಯಾಯದ ಉಪಬಂಧಗಳ ಅಡಿ ಅಗತ್ಯಪಡಿಸಲಾದಂತೆ ಸಲ್ಲಿಸಿದ ವಿವರ ಪಟ್ಟಿಕೆಯ ಪರಿಶೋಧನೆಯ ಉದ್ದೇಶಕ್ಕಾಗಿ ಅಥವಾ ವಿವರಪಟ್ಟಿಕೆಗಳನ್ನು ಸಲ್ಲಿಸದಿರುವ ಸಂದರ್ಭಗಳಲ್ಲಿ, ಆಯುಕ್ತರು ಅಥವಾ ಈ ಕುರಿತು ಆತನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಖಾತೆದಾರ ಅಥವಾ ಅಧಿಭೋಗದಾರನಿಗೆ ಒಂದು ವಾರದ ನೋಟಿಸನ್ನು ನೀಡಿದ ನಂತರ ಯಾವುದೇ ಜಮೀನು ಅಥವಾ ಕಟ್ಟಡವನ್ನು ಪ್ರವೇಶಿಸಬಹುದು, ಪರಿಶೀಲಿಸಬಹುದು, ಸರ್ವೆ ಮಾಡಬಹುದು ಅಥವಾ ಅಳತೆ ಮಾಡಬಹುದು ಹಾಗೂ ಖಾತೆದಾರ ಅಥವಾ ಅಧಿಭೋಗದಾರನು ಅಗತ್ಯಪಡಿಸಲಾದ ಅವಶ್ಯಕ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು ಹಾಗೂ ಅಂಥ ಪರಿಶೀಲನೆ ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಆಯುಕ್ತರು ಅಥವಾ ಹಾಗೆ ಅಧಿಕೃತಗೊಳಿಸಿದ ವ್ಯಕ್ತಿಯು ಸ್ವತ್ತು ತೆರಿಗೆಯನ್ನು ನಿರ್ಧರಿಸತಕ್ಕದ್ದು ಮತ್ತು ಕರನಿರ್ಧರಣೆಯ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಖಾತೆದಾರ ಅಥವಾ ಅಧಿಭೋಗದಾರನಿಗೆ ಕಳುಹಿಸತಕ್ಕದ್ದು. ಯಾವುದೇ ಕಟ್ಟಡ ಅಥವಾ ಖಾಲಿ ಜಮೀನಿನೊಳಗೆ ಅದರ ಮೇಲಿನ ಅಂಥ ಪ್ರವೇಶವು ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಇರತಕ್ಕದ್ದು:

ಪರಂತು ಡ್ರೋನ್/ ವೈಮಾನಿಕ/ ಲಿಡಾರ್ ಚಿತ್ರಗಳು ಮತ್ತು ವಿವಿಧ ಸ್ವರೂಪದ ಜಿಪಿಎಸ್ ಸಾಧನಗಳನ್ನು ಒಳಗೊಂಡ ತಂತ್ರಜ್ಞಾನದ ಬಳಕೆಯಿಂದ ಸದರಿ ಕರ ನಿರ್ಧರಣೆ ಮತ್ತು

ಸಮೀಕ್ಷೆಯನ್ನು ದೂರದಿಂದಲೇ ಮಾಡಬಹುದು ಮತ್ತು ಖಾತೆದಾರರಿಗೆ ಅಥವಾ ಆಸ್ತಿ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ವ್ಯಕ್ತಿಗೆ ಪರಿಷ್ಕೃತ ಕರ ನಿರ್ಧರಣೆಯ ಪ್ರಕಾರ ಆಸ್ತಿ ತೆರಿಗೆಯನ್ನು ಸಂದಾಯ ಮಾಡುವಂತೆ ಕಾರಣಕೇಳಿ ನೋಟೀಸನ್ನು ನೀಡಬಹುದು.

(2) ಸ್ವತ್ತಿನ ಅಧಿಭೋಗದಾರನು ಅಧಿಕೃತ ಅಧಿಕಾರಿಗೆ ಆವರಣದ ಪರಿಶೀಲನೆಗೆ ಪ್ರವೇಶಿಸಲು ನಿರಾಕರಿಸಿದಲ್ಲಿ, ಅಧಿಕಾರಿಯು ಯುಕ್ತ ಅವಕಾಶವನ್ನು ನೀಡಿದ ತರುವಾಯ ನಿರಾಕರಣೆಯನ್ನು ದಾಖಲಿಸತಕ್ಕದ್ದು ಮತ್ತು ಸ್ವತ್ತಿನ ಕರ ನಿರ್ಧರಣೆಗೆ ತನ್ನ ಅತ್ಯುತ್ತಮ ನಿರ್ಣಯದಂತೆ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮತ್ತು ಅಂತ ಇತರೆ ಮೂಲಗಳ ಮುಖಾಂತರ ಪಡೆದ ಸ್ವತ್ತಿನ ಕುರಿತ ದತ್ತಾಂಶವನ್ನು ಉಪಯೋಗಿಸಿಕೊಂಡು ಸ್ವತ್ತಿನ ಕರ ನಿರ್ಧರಣೆಗೆ ಮುಂದುವರೆಯತಕ್ಕದ್ದು:

ಪರಂತು, ಮಾನವ ವಾಸಕ್ಕಾಗಿ ಬಳಸುತ್ತಿರುವ ಕಟ್ಟಡಗಳಾಗಿದ್ದರೆ, ಅಲ್ಲಿ ವಾಸಿಸುತ್ತಿರುವವರ ಸಾಮಾಜಿಕ ಹಾಗೂ ಧಾರ್ಮಿಕ ಬದ್ಧತೆಗಳಿಗೆ ಸೂಕ್ತ ಗೌರವವನ್ನು ನೀಡತಕ್ಕದ್ದು ಮತ್ತು ಮಹಿಳೆಯು ವಾಸ್ತವಿಕವಾಗಿ ವಾಸಿಸುತ್ತಿರುವ ಯಾವುದೇ ಕೋಣೆಯನ್ನು, ಆಕೆಯು ಆ ಕೋಣೆಯಿಂದ ಹೊರಕ್ಕೆ ಹೋಗಲು ಸ್ವತಂತ್ರರಾಗಿದ್ದೀರ ಎಂದು ತಿಳಿಸಿದ್ದ ಹೊರತು ಮತ್ತು ಹೊರಕ್ಕೆ ಹೊಗಲು ಯುಕ್ತ ಅನುಕೂಲವನ್ನು ಒದಗಿಸಿದ ಹೊರತು ಆ ಕೋಣೆಯನ್ನು ಪ್ರವೇಶಿಸತಕ್ಕದ್ದಲ್ಲ.

(3) ಪರಿಶೋಧನೆಯ ತರುವಾಯ, ಅಧಿಕೃತಗೊಳಿಸಿದ ಅಧಿಕಾರಿಯು ಒದಗಿಸಲಾದ ಯಾವುದೇ ವಿವರಪಟ್ಟಿಕೆ, ಕರ ನಿರ್ಧರಣೆಯು ಸರಿಯಿಲ್ಲ ಎಂದು ನಂಬಲು ಕಾರಣವಿದ್ದರೆ ಅಥವಾ ಕಡಿಮೆ ತೆರಿಗೆ ನಿರ್ಧರಣೆಯ ಪರಿಣಾಮ ಸ್ವತ್ತು ತೆರಿಗೆಯಿಂದ ತಪ್ಪಿಸಿಕೊಳ್ಳಲಾಗುತ್ತಿದೆ ಎಂದು ಭಾವಿಸಿದರೆ,-

(ಎ) ಈ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ ವಿಧಾನದಲ್ಲಿ, ದಾಖಲೆಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಮತ್ತು ಭೌತಿಕ ಪರಿಶೀಲನೆಯಿಂದಾಗಲಿ ಅಥವಾ ರಿಮೋಟ್/ವೈಮಾನಿಕ ತಂತ್ರಜ್ಞಾನವನ್ನು ಬಳಸುವ ಮೂಲಕದಿಂದಾಗಲಿ ಸೂಕ್ತ ಪರಿಶೀಲನೆಯ ನಂತರ ಸ್ವತ್ತಿನ ತೆರಿಗೆಯನ್ನು ಮರುನಿರ್ಧರಿಸಲು ಮುಂದುವರೆಯಬಹುದು;

(ಬಿ) ಯಾವುದೇ ಆಸ್ತಿ ಅಥವಾ ಭೂಮಿಯು ಆಸ್ತಿ ತೆರಿಗೆಗೆ ಹೊಣೆಯಾಗಿದ್ದು, ಆದರೆ ತೆರಿಗೆ ನಿರ್ಧರಿತವಾಗಿರದಿದ್ದರೆ ಮತ್ತು ತೆರಿಗೆ ವಿಧಿಸಬಹುದಾದ ಆಸ್ತಿ ದಾಖಲೆಗಳ ಪಟ್ಟಿಯಿಂದ ಹೊರತಾಗಿದ್ದರೆ ಅಥವಾ ಮರು ತೆರಿಗೆ ನಿರ್ಧರಣೆಯಲ್ಲಿ ಆಸ್ತಿ ತೆರಿಗೆಯು ಜಮೆ ಮಾಡಿದ ಆಸ್ತಿ ತೆರಿಗೆಗಿಂತ ಶೇಕಡ ಐದರಷ್ಟು ಹೆಚ್ಚಾಗಿರುವುದು ಕಂಡುಬಂದಲ್ಲಿ, ಹಾಗೆ ತಪ್ಪಿತ ತೆರಿಗೆಗೆ ಸಮನಾದ ದಂಡದ ಜೊತೆಗೆ, ಪಾವತಿಸಿದ ಮತ್ತು ಪಾವತಿಸಬೇಕಾದ ತೆರಿಗೆಯಲ್ಲಿನ ವ್ಯತ್ಯಾಸಕ್ಕೆ ವಾರ್ಷಿಕ ಶೇಕಡ ಒಂಭತ್ತರಷ್ಟು ಬಡ್ಡಿಯೊಂದಿಗೆ ತಪ್ಪಿಸಲಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

ದೃಷ್ಟಾಂತ: 2021ನೇ ಸಾಲಿಗಾಗಿ ಪಾವತಿಸಬೇಕಾದ ತೆರಿಗೆಯು 150 ರೂಪಾಯಿಗಳಾಗಿದ್ದು, ಆದರೆ ವಾಸ್ತವವಾಗಿ ಪಾವತಿಸಿದ ತೆರಿಗೆಯು 100 ರೂಪಾಯಿಗಳಾಗಿದ್ದರೆ, ಆಗ ತಪ್ಪಿಸಲಾದ ತೆರಿಗೆ ಮೊತ್ತವು 50 ರೂಪಾಯಿಗಳಾಗುವುದು. ಪಾವತಿಯನ್ನು 2023ರ ಡಿಸೆಂಬರ್ 23ರಂದು ಮಾಡಬೇಕಾಗಿದ್ದರೆ, ಈ ಮುಂದಿನಂತೆ ಸಂದಾಯ ಮಾಡತಕ್ಕದ್ದು,-

(i) ತಪ್ಪಿತ ಆಸ್ತಿ ತೆರಿಗೆ ಮೊತ್ತ = ರೂ. 50/-

(ii) ತಪ್ಪಿಸಿರುವುದಕ್ಕಾಗಿ ದಂಡ = ರೂ. 50/-

(iii) **ತಪ್ಪಿತ ಆಸ್ತಿ ತೆರಿಗೆ ರೂ**. 50/-**ರ ಮೇಲೆ ಶೇಕಡ** 9**ರ ಬಡ್ಡಿ ದರದಲ್ಲಿ ಈ ಮುಂದಿನಂತೆ ಲೆಕ್ಕ ಹಾಕತಕ್ಕದ್ದು**,-

(**ಎ**) **ಮೇ** 31, 2021**ರಿಂದ ಪಾವತಿಯ** ದಿನಾಂಕದವರೆಗೆ **ರೂ**.50/-**ರ ಪೈಕಿ ಶೇಕಡ** 50**ರಷ್ಟು ಎಂದರೆ ರೂ**. 25/-**ರ ಮೇಲೆ ಶೇಕಡ** 9**ರ ಬಡ್ಡಿ**; **ಮತ್ತು**

(**ಬಿ**) **ನವೆಂಬರ್** 30, 2021**ರಿಂದ ಪಾವತಿಯ ದಿನಾಂಕದವರೆಗೆ ರೂ**.50/-**ರಪೈಕಿ ಶೇಕಡ** 50**ರಷ್ಟು ಎಂದರೆ ರೂ**. 25/-**ರ ಮೇಲೆ ಶೇಕಡ** 9**ರ ಬಡ್ಡಿ**.

ಪರಂತು, ಕಲ್ಲಿನ ಅಥವಾ ಶೀಟ್ ಛಾವಣಿ (RCC ಯೇತರ) ಹೊಂದಿರುವ ಮತ್ತು ನೆಲಮಹಡಿಯು 1000 ಚದರ ಅಡಿಗಿಂತ ಹೆಚ್ಚಿರದ ಮತ್ತು ಸ್ವತಃ ಅಧಿಭೋಗದ ವಾಸದ ಸ್ವತ್ತುಗಳಿಗಾಗಿ ಸಂದಾಯ ಮಾಡಬಹುದಾದ ದಂಡನೆಯು ತಪ್ಪಿಸಲಾದ ತೆರಿಗೆಯ ಶೇಕಡ 25ರಷ್ಟು ಇರತಕ್ಕದ್ದು:

ಮತ್ತು ಪರಂತು, ಸ್ವಂತ ಅಧಿಭೋಗದ ಮತ್ತು 300 ಚದರ ಅಡಿಗಿಂತ ಕಡಿಮೆ ಪ್ರದೇಶವನ್ನು ಹೊಂದಿರುವ ಗುಡಿಸಲುಗಳು, ಬಡವರಿಗಾಗಿನ ಸರ್ಕಾರಿ ಮನೆಗಳು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಕೊಳಚೆ ಪ್ರದೇಶವೆಂದು ಘೋಷಿಸಲಾದ ಮನೆಗಳಂಥ ವಾಸದ ಸ್ವತ್ತುಗಳಿಗಾಗಿ ಯಾವುದೇ ದಂಡವನ್ನು ಪಾವತಿಸತಕ್ಕದ್ದಲ್ಲ:

ಮತ್ತೂ ಪರಂತು ಸ್ವತ್ತು ತೆರಿಗೆ ರಿಜಿಸ್ಟರುಗಳಲ್ಲಿನ ಸ್ವತ್ತುಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸಲು ವಿಫಲವಾದ ಸಂದರ್ಭದಲ್ಲಿ, ಆರ್ಥಿಕ ವರ್ಷದ ಕೊನೆಯಲ್ಲಿ ತೆರಿಗೆಯು ಬಾಕಿಯಾಗುವುದು, ಆರ್ಥಿಕ ವರ್ಷವು ಕೊನೆಗೊಂಡ ಹನ್ನೆರಡು ತಿಂಗಳುಗಳ ತರುವಾಯ ತೆರಿಗೆಯು ಬಾಕಿಯಾದಾಗ, ತೆರಿಗೆಯು ಪಾವತಿಯಾದ ದಿನಾಂಕದವರೆಗೆ ಲೆಕ್ಕಹಾಕಿ ಪಾವತಿಯಾಗದಿರುವ ತೆರಿಗೆಯ ಮೇಲೆ ವಾರ್ಷಿಕವಾಗಿ ಶೇಕಡ 15 ರಷ್ಟು ದರದಲ್ಲಿ ಬಡ್ಡಿಯನ್ನು ಪಾವತಿಸತಕ್ಕದ್ದು:

ಅಲ್ಲದೆ ಪರಂತು, ಸದರಿ ಹನ್ನೆರಡು ತಿಂಗಳುಗಳ ಮುಕ್ತಾಯದ ತರುವಾಯ ಅಂದರೆ ಆರ್ಥಿಕ ವರ್ಷವು ಕೊನೆಗೊಂಡ ಎರಡನೇ ವರ್ಷದ ತರುವಾಯ ತೆರಿಗೆಯು ಬಾಕಿಯಾದಾಗ, ಆವರೆಗೂ ತೆರಿಗೆಯು ಪಾವತಿಯಾಗದಿದ್ದರೆ ಪಾವತಿಯಾಗದ ತೆರಿಗೆಗೆ ಸಮನಾದ ದಂಡದ ಜೊತೆಗೆ ಪಾವತಿಯಾಗದ ತೆರಿಗೆಯ ಮೇಲೆ ವಾರ್ಷಿಕವಾಗಿ ಶೇಕಡ 9ರಷ್ಟು ದರದಲ್ಲಿನ ಬಡ್ಡಿಯೊಂದಿಗೆ ಪಾವತಿಯಾಗದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

ದೃಷ್ಟಾಂತ: 2021-22ನೇ ಸಾಲಿಗಾಗಿ ಆಸ್ತಿ ತೆರಿಗೆಯು ರೂ. 1000/- ಆಗಿದ್ದು, ಆದರೆ ಅದನ್ನು ಪಾವತಿಸದಿದ್ದರೆ, 23ನೇ ಡಿಸೆಂಬರ್, 2023ರಂದು ಪಾವತಿಸಿದರೆ ಆಗ ಈ ಮುಂದಿನಂತೆ ಪಾವತಿಸತಕ್ಕದ್ದು:

1. ಪಾವತಿ ಮಾಡದ ಆಸ್ತಿ ತೆರಿಗೆ ಮೊತ್ತ = ರೂ. 1000/-
2. ಪಾವತಿ ಮಾಡದ ಆಸ್ತಿ ತೆರಿಗೆ ರೂ. 1,000/- ಮೇಲೆ ಶೇಕಡ 9ರ ಬಡ್ಡಿ ದರದಲ್ಲಿ ಈ ಮುಂದಿನಂತೆ ಬಡ್ಡಿಯನ್ನು ಲೆಕ್ಕ ಹಾಕತಕ್ಕದ್ದು:
   (**ಎ**) 1**ನೇ ಜೂನ್**, 2021 **ರಿಂದ** 31.03.2022 **ರವರೆಗೆ ರೂ**.1000/-**ರ ಪೈಕಿ ಶೇಕಡ** 50**ರಷ್ಟು ಎಂದರೆ ರೂ**. 500/-**ರ ಮೇಲೆ ಶೇಕಡ** 9**ರ ಬಡ್ಡಿ**; **ಮತ್ತು**
   (**ಬಿ**) 1**ನೇ ಡಿಸೆಂಬರ್**, 2021 **ರಿಂದ** 31.03.2022 **ರವರೆಗೆ ರೂ**.1000/-**ರ ಪೈಕಿ ಶೇಕಡ** 50**ರಷ್ಟು ಎಂದರೆ ರೂ**. 500/-**ರ ಮೇಲೆ ಶೇಕಡ** 9**ರ ಬಡ್ಡಿ**;
3. 01.04.2022 **ರಿಂದ** 31.03.2023 **ರವರೆಗೆ ಪಾವತಿ ಮಾಡದ ಸ್ವತ್ತು ತೆರಿಗೆ ರೂ**. 1000/-**ಗಳೊಂದಿಗೆ ಶೇಕಡ** 15**ರ ಬಡ್ಡಿ ದರದಲ್ಲಿ ಲೆಕ್ಕ ಹಾಕತಕ್ಕದ್ದು**.
4. 01.04.2023 **ರಿಂದ** 22.12.2023 **ರವರೆಗೆ ಪಾವತಿ ಮಾಡದ ಸ್ವತ್ತು ತೆರಿಗೆ ರೂ**. 1000/-**ಗಳೊಂದಿಗೆ ಶೇಕಡ** 9**ರ ಬಡ್ಡಿ ದರದಲ್ಲಿ ಲೆಕ್ಕ ಹಾಕತಕ್ಕದ್ದು**.
5. **ಪಾವತಿ ಮಾಡದ ತೆರಿಗೆ ರೂ**. 1000/- **ಮೇಲೆ ಶೇಕಡ** 100 **ರಷ್ಟು ದಂಡನೆಯನ್ನು ಸಂದಾಯ ಮಾಡತಕ್ಕದ್ದು**. **ಉದಾಹರಣೆಗೆ**: **ಪಾವತಿ ಮಾಡದ ತೆರಿಗೆ ರೂ**. 1000/- = **ದಂಡ ರೂ**. 1000/-.

(ಸಿ) ಈ ಪ್ರಕರಣದಡಿ ಮಾಡಿದ ಪರಿಶೀಲನೆ ಮತ್ತು ತೆರಿಗೆ ಮರುನಿರ್ಧರಣೆಯ ತರುವಾಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು ತೆರಿಗೆ ಪಾವತಿದಾರನಿಗೆ ನೋಟಿಸು ಜಾರಿ ಮಾಡಿದ ಹದಿನೈದು ದಿನಗಳೊಳಗಾಗಿ ತೆರಿಗೆಯನ್ನು ಕಟ್ಟತಕ್ಕದ್ದು ಎಂದು ಲಿಖಿತದಲ್ಲಿ ಕಾರಣವನ್ನು ನೀಡುವ ಅವಕಾಶವನ್ನು ನೀಡಿದ ನಂತರ ತೆರಿಗೆ ಮರುನಿರ್ಧರಣೆಯ ನೋಟಿಸನ್ನು ನೀಡತಕ್ಕದ್ದು;

(ಡಿ) ಮಾಲೀಕ ಅಥವಾ ಅಧಿಭೋಗದಾರನು ಸ್ವತ್ತಿನ ತೆರಿಗೆ ನಿರ್ಧರಣೆಯನ್ನು ಮತ್ತು ವಿಧಿಸಿದ ದಂಡವನ್ನು **ಒಪ್ಪಬಹುದು** ಅಥವಾ ಈ ಉಪ-ಪ್ರಕರಣದಡಿಯ ನೋಟಿಸನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ ಆಯುಕ್ತನಿಗೆ ಅಥವಾ ಅಧಿಕೃತ ಅಧಿಕಾರಿಗೆ ಆಕ್ಷೇಪಣೆಯನ್ನು ಸಲ್ಲಿಸಬಹದು;

(ಇ) ಆಯುಕ್ತ **ಅಥವಾ** ಅಧಿಕೃತ ಅಧಿಕಾರಿಯು ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕದಿಂದ **ಮೂವತ್ತು** ದಿನಗಳ ಅವಧಿಯೊಳಗೆ ಅಂಥ ಕರನಿರ್ಧರಣೆಯನ್ನು ಸ್ಥಿರೀಕರಿಸತಕ್ಕದ್ದು ಅಥವಾ ಪರಿಷ್ಕರಿಸತಕ್ಕದ್ದು ಮತ್ತು ಆದೇಶದ ಪ್ರತಿಯನ್ನು ಸಂಬಂಧಪಟ್ಟ ಮಾಲೀಕ ಅಥವಾ ಅಧಿಭೋಗದಾರನಿಗೆ ಕಳುಹಿಸತಕ್ಕದ್ದು.

151. ಸ್ವತ್ತು ತೆರಿಗೆಯ ನಿರ್ಧರಣೆಗಾಗಿ ಸೀಮಿತ ಅವಧಿ.- (1) ತೆರಿಗೆ ನಿರ್ಧರಣೆಯಾಗದ ಸ್ವತ್ತುಗಳ ತೆರಿಗೆ ನಿರ್ಧರಣೆ ಅಥವಾ ಈ ಪ್ರಕರಣದಡಿ ತೆರಿಗೆ ನಿರ್ಧರಣೆಯಾಗಿ ಈಗಾಗಲೇ ಸ್ವತ್ತು ತೆರಿಗೆ ಪಾವತಿಸಲಾಗುತ್ತಿರುವ ಸ್ವತ್ತುಗಳ ಮರು-ನಿರ್ಧರಣೆಯನ್ನು, ತೆರಿಗೆ ವಂಚನೆಯು ಗಮನಕ್ಕೆ ಬಂದಾಗ ಅಥವಾ ಸಮರ್ಥನೀಯ ಸನ್ನಿವೇಶಗಳು ಉದ್ಭವಿಸಿದಾಗ, ಯಾವುದೇ ಸಮಯದಲ್ಲಿ ಮಾಡಬಹುದು:

ಪರಂತು, ವಸತಿ ಮತ್ತು ವಸತಿ ರಹಿತವಾಗಿ ಮಿಶ್ರ ಬಳಕೆಯನ್ನು ಹೊಂದಿರುವ ನಗರ ಪಾಲಿಕೆಯ ಸ್ವತ್ತು ತೆರಿಗೆ ರಿಜಿಸ್ಟರ್‌ಗಳಲ್ಲಿ ಒಂದೇ ಐಡಿ ಹೊಂದಿರುವ ನಿವಾಸಿ ಸ್ವತ್ತುಗಳು ಮತ್ತು ಸ್ವತ್ತುಗಳ ಸಂದರ್ಭದಲ್ಲಿ, ಕಡಿಮೆ-ನಿರ್ಧರಣೆ ಮಾಡಲಾದ ಅಥವಾ ನಿರ್ಧರಣೆ ಮಾಡದಿರುವ ಸ್ವತ್ತುಗಳಿಗೆ ಸ್ವತ್ತು ತೆರಿಗೆಯ ಬಾಕಿಗಳು, ಸ್ವತ್ತು ತೆರಿಗೆಯ ಕಡಿಮೆ-ನಿರ್ಧರಣೆ ಅಥವಾ ನಿರ್ಧರಣೆ ಮಾಡದೆ ಐದು ವರ್ಷಗಳನ್ನು ಮೀರಿದ್ದರೂ ಸಹ ಅನ್ವಯಿಸುವ ದಂಡಗಳು ಮತ್ತು ಪಾವತಿಸಬೇಕಾದ ಬಡ್ಡಿಯನ್ನು ಐದು ವರ್ಷಗಳಿಗೆ ಸೀಮಿತಗೊಳಿಸತಕ್ಕದ್ದು.

(2) ಈ ಅಧಿನಿಯಮದಡಿ ಸಂದರ್ಭಾನುಸಾರ, ತೆರಿಗೆ ನಿರ್ಧರಣೆ ಅಥವಾ ತೆರಿಗೆ ಮರುನಿರ್ಧರಣೆಗಾಗಿ ನಿರ್ದಿಷ್ಟಪಡಿಸಲಾದ ಸಮಯದ ಮಿತಿಯನ್ನು ಲೆಕ್ಕಹಾಕುವಲ್ಲಿ, ಮೇಲ್ಮನವಿ ಪ್ರಾಧಿಕಾರ, ನ್ಯಾಯಾಧಿಕರಣ **ಅಥವಾ** ಸಕ್ಷಮ ನ್ಯಾಯಾಲಯವು ತೆರಿಗೆ ನಿರ್ಧರಣೆ ಅಥವಾ ಇತರೆ ವ್ಯವಹರಣೆಗಳ ವಿರುದ್ಧ ಯಾವುದೇ ಮೇಲ್ಮನವಿಯನ್ನು ವಿಲೆ ಮಾಡುವುದಕ್ಕಾಗಿ ತೆಗೆದುಕೊಂಡ ಅವಧಿಯನ್ನು ಸಂದರ್ಭಾನುಸಾರ, ತೆರಿಗೆ ನಿರ್ಧರಣೆ ಅಥವಾ ತೆರಿಗೆ ಮರುನಿರ್ಧರಣೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

152. ಸ್ವತ್ತು ತೆರಿಗೆಯ ಪುನರ್ ಪರಿಷ್ಕರಣೆ.- ಈ ಅಧ್ಯಾಯದಡಿ ನಿರ್ಧರಿಸಲಾದ ಮತ್ತು ವಿಧಿಸಲಾದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಕಟ್ಟಡ, ಸ್ವತ್ತು ಅಥವಾ ಭೂಮಿಯ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯಾದಾಗಲೆಲ್ಲಾ ಪರಿಷ್ಕರಿಸತಕ್ಕದ್ದು:

ಪರಂತು, ಯಾವುದೇ ಕಟ್ಟಡ ಅಥವಾ ಭೂಮಿ ಅಥವಾ ಸ್ವತ್ತಿನಲ್ಲಿ ಸೇರ್ಪಡೆ, ತೆಗೆಯುವಿಕೆ, ಬಳಕೆಯಲ್ಲಿ ಬದಲಾವಣೆ, ಪರಿವರ್ತನೆ ಅಥವಾ ಬದಲಾವಣೆಯಿಂದಾಗಿ ಸ್ವತ್ತು ತೆರಿಗೆಯ ಯಾವುದೇ ಪರಿಷ್ಕರಣೆಯು ತಕ್ಷಣವೇ ಅನ್ವಯಿಸತಕ್ಕದ್ದು ಮತ್ತು ತಕ್ಷಣದ ಮುಂದಿನ ಆಸ್ತಿ ತೆರಿಗೆ ಗಡುವಿನ ದಿನಾಂಕ ಸಂದರ್ಭಾನುಸಾರ ಮೇ 30 ಅಥವಾ ನವೆಂಬರ್ 29-ರಂತೆ ಅನ್ವಯಿಸತಕ್ಕದ್ದು. ಖಾತೆದಾರ ಅಥವಾ ಅಧಿಭೋಗದಾರನು ಅಂಥ ಬದಲಾವಣೆಗಳನ್ನು ಪೂರ್ಣಗೊಳಿಸಿದ ಅಥವಾ ಅಧಿಭೋಗದ ದಿನಾಂಕದಿಂದ **ಆರು** ತಿಂಗಳೊಳಗಾಗಿ ಅಥವಾ ಯಾವುದು ಮೊದಲೋ ಅಲ್ಲಿಯವರೆಗೆ ನಗರ ಪಾಲಿಕೆಗೆ ವರದಿ ಮಾಡತಕ್ಕದ್ದು ಮತ್ತು ಆತನು ಪರಿಷ್ಕೃತ ಸ್ವತ್ತು ತೆರಿಗೆ ವಿವರಪಟ್ಟಿಕೆಗಳನ್ನು ಸಹ ಸಲ್ಲಿಸತಕ್ಕದ್ದು:

ಮತ್ತು ಪರಂತು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಕಟ್ಟಡಗಳು, ಸ್ವತ್ತುಗಳು ಅಥವಾ ಭೂಮಿಗಳ ಮಾರ್ಗಸೂಚಿ ಮೌಲ್ಯದಲ್ಲಿ ಯಾವುದೇ ಪರಿಷ್ಕರಣೆ ಇಲ್ಲದಿದ್ದಲ್ಲಿ, ಅಂಥ ವರ್ಷಕ್ಕೆ ಆಸ್ತಿ ತೆರಿಗೆಯು ಶೇಕಡಾ ಐದರಷ್ಟು ಪರಿಷ್ಕರಿಸಿದಂತಾಗತಕ್ಕದ್ದು:

ಮತ್ತೂ ಪರಂತು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಸರ್ಕಾರವು ಭೂಮಿ ಮತ್ತು ಕಟ್ಟಡಗಳ ಮೌಲ್ಯವನ್ನು ಅಧಿಸೂಚಿಸಿದಾಗಲೆಲ್ಲಾ, ಸ್ವತ್ತು ಅಥವಾ ಭೂಮಿಯ ಹೊಸ ಪರಿಷ್ಕೃತ ಮೌಲ್ಯದ ಆಧಾರದ ಮೇಲೆ ಪರಿಷ್ಕೃತ ಸ್ವತ್ತು ತೆರಿಗೆ ದರಗಳನ್ನು ಲೆಕ್ಕಹಾಕತಕ್ಕದ್ದು ಮತ್ತು ಚಾಲ್ತಿಯಲ್ಲಿರುವ ಸ್ವತ್ತು ತೆರಿಗೆ ದರಗಳೊಂದಿಗೆ ಹೋಲಿಕೆ ಮಾಡತಕ್ಕದ್ದು ಮತ್ತು ಎರಡರಲ್ಲಿ ಹೆಚ್ಚಿನದಾದುದನ್ನು ಅಳವಡಿಸಿಕೊಳ್ಳತಕ್ಕದ್ದು:

ಅಲ್ಲದೆ ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದು ಸ್ವತ್ತು ತೆರಿಗೆಯ ಹಿಂದಿನ ಪರಿಷ್ಕರಣೆಯನ್ನು ನಿರ್ದೇಶಿಸುವ ರಾಜ್ಯ ಸರ್ಕಾರದ ಅಧಿಕಾರದ ಮೇಲೆ ಪರಿಣಾಮ **ಬೀರುವುದೆಂದು** ಭಾವಿಸತಕ್ಕದ್ದಲ್ಲ.

153. ಯಾವುದೇ ಚಾಲ್ತಿಯಲ್ಲಿರುವ ತೆರಿಗೆಯನ್ನು ಅಮಾನತ್ತಿನಲ್ಲಿಡುವ, ಕಡಿಮೆಮಾಡುವ ಅಥವಾ ರದ್ದುಗೊಳಿಸುವ ಅಧಿಕಾರ.- (1) ನಗರ ಪಾಲಿಕೆಯು ಸಾಕಷ್ಟು ಕಾರಣವನ್ನು ನೀಡಿ ಯಾವುದೇ ಸಮಯದಲ್ಲಿ ಯಾವುದೇ ಚಾಲ್ತಿಯಲ್ಲಿರುವ ತೆರಿಗೆಯನ್ನು ಅಮಾನತ್ತಿನಲ್ಲಿಡಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(2) ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದ ಈ ಅಧ್ಯಾಯದ ಉಪಬಂಧಗಳು ಯಾವುದೇ ತೆರಿಗೆಯ ಅಮಾನತ್ತು, ಮಾರ್ಪಾಡು ಅಥವಾ ರದ್ದತಿಗೆ ಸಾಧ್ಯವಾಗಬಹುದಾದಷ್ಟು ಅನ್ವಯವಾಗತಕ್ಕದ್ದು.

154. ಸಾಮಾನ್ಯ ವಿನಾಯಿತಿಗಳು.- (1) ಈ ಕೆಳಕಂಡ ಕಟ್ಟಡಗಳಿಗೆ ಮತ್ತು ಭೂಮಿಗಳಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡತಕ್ಕದ್ದು**:-**

(ಎ**)** ಸಾರ್ವಜನಿಕ ಆರಾಧನೆಗಾಗಿ ಪ್ರತ್ಯೇಕವಾಗಿಟ್ಟ ಮತ್ತು ಹಾಗೆ ವಾಸ್ತವವಾಗಿ ಬಳಸುತ್ತಿರುವ ಅಥವಾ ಯಾವ ಇತರ ಉದ್ದೇಶಗಳಿಗೂ ಬಳಸದಿರುವ ಸ್ಥಳಗಳು**;**

(ಬಿ**)** ಯಾವ ಛತ್ರಗಳಲ್ಲಿ ಇರುವುದಕ್ಕಾಗಿ ಬಾಡಿಗೆಯನ್ನು ವಿಧಿಸುವುದಿಲ್ಲವೋ ಮತ್ತು ಯಾವ ಛತ್ರಗಳಲ್ಲಿ ಇರುವುದಕ್ಕಾಗಿ ವಿಶೇಷವಾಗಿ ಧರ್ಮಾರ್ಥ ಉದ್ದೇಶಗಳಿಗಾಗಿ ಬಾಡಿಗೆಯನ್ನು ವಿಧಿಸಲಾಗಿದೆಯೋ ಆ ಛತ್ರಗಳು**;**

(ಸಿ**)** ನಿರಾಶ್ರಿತರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ಕೊಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುತ್ತಿರುವ ಸ್ಥಳಗಳು ಮತ್ತು ಅನಾಥಾಲಯಗಳು**,** ಕಿವುಡರು ಮತ್ತು ಮೂಕರಿಗಾಗಿ ಗೃಹಗಳು ಮತ್ತು ಶಾಲೆಗಳು**,** ವೃದ್ಧರಿಗೆ ಮತ್ತು ಪತಿತ ಮಹಿಳೆಯರಿಗಾಗಿ ಆಶ್ರಮಗಳು ಮತ್ತು ಸರ್ಕಾರವು ಅನುಮೋದಿಸಿದಂಥ ಲೋಕೋಪಕಾರಿ ರೀತಿಯಲ್ಲಿ ನಡೆಸಲಾಗುತ್ತಿರುವ ಅದೇ ರೀತಿಯ ಸಂಸ್ಥೆಗಳು**;**

(ಡಿ**)** ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ 7) ಮತ್ತು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958 (1958ರ ಕೇಂದ್ರ ಅಧಿನಿಯಮ 24) ರ ಮೇರೆಗೆ ಸಂರಕ್ಷಿತವಾದಂಥ ಪ್ರಾಚೀನ ಸ್ಮಾರಕಗಳು ಅಥವಾ ವಸತಿ ಗೃಹಗಳಾಗಿ ಅಥವಾ ಸರ್ಕಾರಿ ಕಛೇರಿಗಳಾಗಿ ಬಳಸದೇ ಇರುವ ಅವುಗಳ ಭಾಗಗಳು**;**

(ಇ**)** ಧರ್ಮಾರ್ಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು**,** ಆದರೆ ಅವುಗಳಿಗೆ ಲಗತ್ತಾದ ವಸತಿ ಗೃಹಗಳನ್ನು ಒಳಗೊಳ್ಳುವುದಿಲ್ಲ**;**

(ಎಫ್**)** ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದ ರೈಲ್ವೆ ಆಡಳಿತಗಳು ನಿರ್ವಹಿಸುತ್ತಿರುವಂಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು**,** ಆದರೆ ಅವುಗಳಿಗೆ ಲಗತ್ತಾದ ವಸತಿ ಗೃಹಗಳನ್ನು ಒಳಗೊಳ್ಳುವುದಿಲ್ಲ**;**

(ಜಿ**)** ಆಯುಕ್ತರಿಂದ ಪ್ರಕಟಿಸಲಾದ ಪಟ್ಟಿಯಲ್ಲಿ ಇರುವ ಸ್ಮಶಾನ ಮತ್ತು ಶವಸಂಸ್ಕಾರ ಜಾಗಗಳು**;**

(ಹೆಚ್**)** ಲಾಭಕ್ಕಾಗಿ ಸ್ಥಾಪಿಸಿರದ ಅಥವಾ ನಡೆಸದಿರುವ ವಿದ್ಯಾರ್ಥಿ ನಿಲಯಗಳಿಗಾಗಿ, ಸರ್ಕಾರದಿಂದ ಯುಕ್ತವಾಗಿ ಮಾನ್ಯತೆ ಪಡೆದ ಸರ್ಕಾರಿ ಅಥವಾ ಸ್ಥಳೀಯ ನಿಕಾಯದ ಶೈಕ್ಷಣಿಕ ಸಂಸ್ಥೆಗಳಿಗಾಗಿ**,** ಕಾರ್ಮಿಕ ಸಂಘಗಳ ಅಧಿನಿಯಮ, 1926ರಡಿ ನೋಂದಾಯಿತವಾದ ಕಾರ್ಮಿಕ ಸಂಘಗಳಿಗಾಗಿ ಮತ್ತು ಅಂಥ ಸಂಘಕ್ಕೆ ಸೇರಿದ ಕಛೇರಿಗಳಿಗಾಗಿ ಅನನ್ಯವಾಗಿ ಬಳಸುತ್ತಿರುವ ಕಟ್ಟಡ ಅಥವಾ ಭೂಮಿಗಳು**;**

(ಐ**)** ಸರ್ಕಾರದ ಕಂದಾಯ ಲೆಕ್ಕಗಳಲ್ಲಿ ಕೃಷಿ ಉದ್ದೇಶಗಳಿಗಾಗಿ ಬಳಸುತ್ತಿರುವ ಭೂಮಿಯೆಂದು ನೋಂದಾಯಿತವಾಗಿರುವ ಮತ್ತು ಬೆಳೆಗಳ ಸಾಗುವಳಿಗಾಗಿ ವಾಸ್ತವವಾಗಿ ಬಳಸುತ್ತಿರುವ ಭೂಮಿ;

(ಜೆ) ಸರ್ಕಾರದ ಉದ್ದೇಶಗಳಿಗಾಗಿ ಬಳಸುತ್ತಿರುವ ಮತ್ತು ವಸತಿ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸದಿರುವ ಅಥವಾ ಬಳಸಲು ಉದ್ದೇಶಿಸದಿರುವ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಭೂಮಿಗಳು;

(ಕೆ) ಯಾವುದೇ ಮಂಜೂರಾತಿಗೆ, ಹಂಚಿಕೆಗೆ ಅಥವಾ ಗುತ್ತಿಗೆಗೆ ಅನುಸಾರವಾಗಿ ಯಾರೇ ವ್ಯಕ್ತಿಗೆ, ಯಾವ ಕಟ್ಟಡಗಳ ಅಥವಾ ಭೂಮಿಗಳ ಸ್ವಾಧೀನವನ್ನು ಒಪ್ಪಿಸಿಲ್ಲವೊ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987 ರ ಕರ್ನಾಟಕ ಅಧಿನಿಯಮ 34) ಮೇರೆಗೆ ರಚಿಸಿದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಕರ್ನಾಟಕ ಗೃಹ ಮಂಡಳಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿರುವ ಆ ಕಟ್ಟಡಗಳು ಅಥವಾ ಭೂಮಿಗಳು:

ಪರಂತು, **(ಎ), (ಸಿ), (ಇ)** ಮತ್ತು (ಎಚ್) ಖಂಡಗಳಲ್ಲಿ ಒಳಗೊಂಡಿರುವುದು ಯಾವುದೂ, ಯಾವ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಯಾವ ವ್ಯಕ್ತಿಯು ಬಾಡಿಗೆ ಸಂದಾಯ ಮಾಡಬೇಕಾಗಿದೆಯೋ ಅಥವಾ ಸದರಿ ಖಂಡಗಳಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ, ಅದನ್ನು ಯಾವ ವ್ಯಕ್ತಿಯು ಬಳಸುತ್ತಿರುವನೋ ಆ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ, ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡಿದೆ ಎಂದು ಭಾವಿಸತಕ್ಕದ್ದಲ್ಲ.

(2) ಈ ಅಧ್ಯಾಯದ, ಮೇಲೆ ಹೇಳಿದ ಉಪಬಂಧಗಳಲ್ಲಿ, ಏನೇ ಇದ್ದರೂ, **ನಗರ** ಪಾಲಿಕೆಯು, ನಿಯಮಿಸಬಹುದಾದ ರೀತಿಯಲ್ಲಿ, ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬಕ್ಕೆ ಸೇರಿದ ಯಾವುದಾದರೂ ಒಂದು ಭೂಮಿ ಅಥವಾ ಕಟ್ಟಡದ ಮೇಲೆ ಆಸ್ತಿ ತೆರಿಗೆಯ ಶೇಕಡ ಐವತ್ತರಷ್ಟನ್ನು ವಿನಾಯಿತಿ ನೀಡಬಹುದು.

ವಿವರಣೆ.- ಈ **ಉಪ**ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಮಾಜಿ ಸೈನಿಕ" ಎಂದರೆ, ಕೇಂದ್ರದ ವಿದ್ಯುಕ್ತ ಸೇನೆ, ನೌಕಾ ಸೇನೆ ಮತ್ತು ವಾಯು ಸೇನೆಯಲ್ಲಿನ ಯಾವುದೇ ದರ್ಜೆಯಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ರಕ್ಷಣಾ ಭದ್ರತಾ ದಳ, ಸಾಮಾನ್ಯ ಮೀಸಲು ಇಂಜಿನಿಯರಿಂಗ್ ದಳ, ಲೋಕ ಸಹಾಯಕ ಸೇನೆ ಮತ್ತು ಅರೆ ಮಿಲಿಟರಿ ಪಡೆಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು ಒಳಗೊಳ್ಳುವುದು;

(ಬಿ) "ಮೃತ ಮಾಜಿ ಸೈನಿಕನ ಕುಟುಂಬ" ಎಂದರೆ, ಮೃತ ಮಾಜಿ ಸೈನಿಕನ ತಂದೆ, ತಾಯಿ, ಜೀವಂತ ಪತ್ನಿ ಮತ್ತು ಅಪ್ರಾಪ್ತ ವಯಸ್ಕ ಮಕ್ಕಳು:

ಪರಂತು, ಒಂದು ಕಟ್ಟಡದ ಸಂಬಂಧದಲ್ಲಿ, ಇದನ್ನು ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬದ ಸದಸ್ಯರು ಅವರ ನಿವಾಸದ ಉದ್ದೇಶಕ್ಕಾಗಿ ಬಳಸುತ್ತಿರಬೇಕು;

ಮತ್ತು ಪರಂತು, ಮಾಜಿ ಸೈನಿಕ ಅಥವಾ ಸಂದರ್ಭಾನುಸಾರವಾಗಿ, ಆತನ ಕುಟುಂಬವು, ಕರ್ನಾಟಕದ ಸೈನಿಕ ಕಲ್ಯಾಣ ಮಂಡಳಿಯು,-

(i) ಈತನು ಮಾಜಿ ಸೈನಿಕ ಅಥವಾ ಸಂದರ್ಭಾನುಸಾರ, ಮೃತ ಮಾಜಿ ಸೈನಿಕನ ಕುಟುಂಬದ ಸದಸ್ಯನೆಂದು;

(ii) ಈತನು ಕರ್ನಾಟಕದ ಶಾಶ್ವತ ನಿವಾಸಿಯೆಂದು, ಮತ್ತು

(iii) ಈತನು ಅಂಥ ಕಟ್ಟಡದಲ್ಲಿ ವಾಸ ಮಾಡುತ್ತಿದ್ದಾನೆಂದು,

- ನೀಡಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(3) ಈ ಪ್ರಕರಣದಡಿಯಲ್ಲಿ ನೀಡಲಾದ ವಿನಾಯಿತಿಗಳು ಏನೇ ಇದ್ದರೂ, ನಾಗರಿಕ ಸೌಲಭ್ಯಗಳನ್ನು ಒದಗಿಸಲು ಮತ್ತು ನಿಯಮಿಸಬಹುದಾದಂತಹ ದರಗಳಲ್ಲಿ ಸಲ್ಲಿಸಲಾದ ಸಾಮಾನ್ಯ ಅಥವಾ ವಿಶೇಷ ಸೇವೆಗಳಿಗೆ ಸೇವಾ ಶುಲ್ಕಗಳನ್ನು ಸಂಗ್ರಹಿಸಲು ನಗರ ಪಾಲಿಕೆಯು ಮುಕ್ತವಾಗಿರತಕ್ಕದ್ದು:

ಪರಂತು, ಸೇವಾ ಶುಲ್ಕಗಳು ಸ್ವತ್ತು ತೆರಿಗೆ ಮತ್ತು ಪಾವತಿಸಬೇಕಾದ ಉಪಕರದ ಮೊತ್ತದ ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

155. ಸ್ವತ್ತು ಮತ್ತು ಚರಸ್ವತ್ತುಗಳ ಮೇಲೆ ಸ್ವತ್ತು ತೆರಿಗೆಯ ಮೊದಲ ಶುಲ್ಕ.- ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತು ತೆರಿಗೆಯು, ಭೂ ಕಂದಾಯದ ಪೂರ್ವ ಪಾವತಿಗೆ ಒಳಪಟ್ಟು, ಅದರ ಮೇಲೆ ಸರ್ಕಾರಕ್ಕೆ ಯಾವುದಾದರೂ ಬಾಕಿ ಇದ್ದರೆ, ಸದರಿ ಕಟ್ಟಡಗಳು ಅಥವಾ ಭೂಮಿಗಳು ಮತ್ತು ಚರ ಸ್ವತ್ತುಗಳ ಮೇಲಿನ ಮೊದಲ ಶುಲ್ಕವು, ಅಂಥ ಕಟ್ಟಡಗಳು ಅಥವಾ ಭೂಮಿಗಳಲ್ಲಿ ಅಥವಾ ಅವುಗಳ ಮೇಲೆ ಯಾವುದಾದಾರೂ ಕಂಡುಬಂದಲ್ಲಿ, ಅದನ್ನು ಹೊಂದಿರುವ ವ್ಯಕ್ತಿಯು ಅಂಥ ತೆರಿಗೆಗೆ ಹೊಣೆಗಾರನಾಗತಕ್ಕದ್ದು.

156. ಸ್ವತ್ತು ತೆರಿಗೆಯು ಯಾರಿಂದ ಮತ್ತು ಯಾವಾಗ ಸಂದಾಯವಾಗಬೇಕು.- (1) ಉಪಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಸ್ವತ್ತು ತೆರಿಗೆಯು ಮೂಲತಃ,-

(ಎ) ಆವರಣಗಳು, ಸರ್ಕಾರದ ಅಥವಾ ನಗರ ಪಾಲಿಕೆಯ ನಿಕಟ ಸ್ವಾಧೀನದಲ್ಲಿದ್ದರೆ, ಅವುಗಳ ವಾಸ್ತವಿಕ ಅಧಿಭೋಗದಾರನಿಂದ:

ಪರಂತು, ಸರ್ಕಾರದ ಒಡೆತನದಲ್ಲಿರುವ ಮತ್ತು ಬಾಡಿಗೆ ಪಾವತಿಯ ಮೇಲೆ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವ ಆವರಣಗಳಿಗೆ ಸಂಬಂಧಿಸಿದಂತೆ, ಬಾಕಿ ಇರುವ ಸ್ವತ್ತು ತೆರಿಗೆಯನ್ನು ಸರ್ಕಾರವು ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಪಾಲಿಕೆಯ ಒಡೆತನದಲ್ಲಿರುವ ಮತ್ತು ಬಾಡಿಗೆಯ ಪಾವತಿಯ ಮೇಲೆ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವ ಆವರಣಗಳಿಗೆ ಸಂಬಂಧಿಸಿದಂತೆ, ಯಾವುದೇ ಸ್ವತ್ತು ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ;

(ಬಿ) ಆವರಣಗಳು ಹಾಗೆ ಸ್ವಾಧೀನದಲ್ಲಿಲ್ಲದಿದ್ದರೆ,-

(i) ಆವರಣಗಳನ್ನು ಬಾಡಿಗೆಗೆ ಕೊಟ್ಟಿದ್ದರೆ**,** ಬಾಡಿಗೆಗೆ ಕೊಟ್ಟವನಿಂದ**;**

(ii) ಆವರಣಗಳನ್ನು ಒಳಬಾಡಿಗೆಗೆ ಕೊಟ್ಟಿದ್ದರೆ ಮೊದಲು ಬಾಡಿಗೆಗೆ ಕೊಟ್ಟವನಿಂದ**;**

(iii**)** ಅವುಗಳನ್ನು ಬಾಡಿಗೆಗೆ ಕೊಟ್ಟಿರದಿದ್ದರೆ**,** ಯಾವ ವ್ಯಕ್ತಿಯಲ್ಲಿ ಆ ಆವರಣಗಳನ್ನು ಬಾಡಿಗೆಗೆ ಕೊಡುವ ಹಕ್ಕು ನಿಹಿತವಾಗಿದೆಯೋ ಆ ವ್ಯಕ್ತಿಯಿಂದ,

- ಪಾವತಿಯಾಗತಕ್ಕದ್ದು.

(2) ಬಾಡಿಗೆದಾರನಿಗೆ ಯಾವುದೇ ಭೂಮಿಯನ್ನು ಒಂದು ವರ್ಷಕ್ಕೆ ಮೀರಿದ ಯಾವುದೇ ಅವಧಿಗಾಗಿ ಬಾಡಿಗೆಗೆ ಕೊಟ್ಟಿದ್ದರೆ ಮತ್ತು ಅಂಥ ಬಾಡಿಗೆದಾರನು ಅಥವಾ ಅಂಥ ಬಾಡಿಗೆದಾರನಿಂದ ಯಾವುದೇ ರೀತಿಯಲ್ಲಿ ಸ್ವಾಮ್ಯವನ್ನು ಪಡೆದಿರುವ ಯಾರೇ ವ್ಯಕ್ತಿಯು ಆ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿದ್ದರೆ, ಸದರಿ ಭೂಮಿಯ ಮೇಲೆ ಮತ್ತು ಅದರ ಮೇಲೆ ಕಟ್ಟಿದ ಕಟ್ಟಡದ ಮೇಲೆ, ನಿರ್ಧರಣೆ ಮಾಡಿದ ಸ್ವತ್ತು ತೆರಿಗೆಯನ್ನು ಆ ಬಾಡಿಗೆದಾರನು ಅಥವಾ ಆ ವ್ಯಕ್ತಿಯು, ಆ ಆವರಣಗಳು ಸದರಿ ಬಾಡಿಗೆದಾರನ ಅಥವಾ ಆ ವ್ಯಕ್ತಿಯ ಸ್ವಾಧೀನದಲ್ಲಿ ಇರಲಿ ಅಥವಾ ಇಲ್ಲದಿರಲಿ ಮೂಲತಃ ಸಂದಾಯ ಮಾಡತಕ್ಕದ್ದು.

157. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.- (1) ನಗರ ಪಾಲಿಕೆಯು ನಿಯಮಿಸಬಹುದಾದಂಥ ರೀತಿಯಲ್ಲಿ ಸ್ವತ್ತು ತೆರಿಗೆ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಮತ್ತು ವಿಶಿಷ್ಟವಾದ ಆಸ್ತಿ ತೆರಿಗೆ ಗುರುತಿನ ಸಂಖ್ಯೆ, ಭೂಮಿ/ ಕಟ್ಟಡದ ಸ್ವರೂಪ, ಕಟ್ಟಡ ಪ್ರಕರಣದಲ್ಲಿ ನಿರ್ಮಾಣದ ವರ್ಷ, ಭೂಮಿ/ ಕಟ್ಟಡದ ಖಾತೆದಾರರ ಹೆಸರು ಮತ್ತು ವಿಳಾಸ, ಸ್ಥಳ ಮಾಹಿತಿ, ಬಂಡವಾಳ ಮೌಲ್ಯ, ವರ್ಷದ ಸ್ವತ್ತು ತೆರಿಗೆ ಬೇಡಿಕೆ, ಬಾಕಿಯ ವಿವರಗಳು ಮುಂತಾದ ವಿವರಗಳನ್ನು ಒಳಗೊಂಡಂತೆ ಕಟ್ಟಡಗಳು ಅಥವಾ ಜಮೀನುಗಳು ಅಥವಾ ಎರಡಕ್ಕೂ ಸಂಬಂಧಿಸಿದಂತೆ ಅಂಥ ಯಾವುದೇ ಇತರ ಆದರೆ ಸೀಮಿತವಾಗಿರದ ವಿವರಗಳನ್ನು ಹೊಂದಿರತಕ್ಕದ್ದು.

(2) ಯಾರೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು **ನಗರ** ಪಾಲಿಕೆಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಒಳಪಟ್ಟು, ಅಧಿಕೃತ ಅಧಿಕಾರಿಯು ವ್ಯಕ್ತಿಗೆ ಸೂಕ್ತ ಸಮಯದಲ್ಲಿ ಸ್ವತ್ತು ತೆರಿಗೆಯ ರಿಜಿಸ್ಟರನ್ನು ಪರಿಶೀಲಿಸಲು ಅನುಮತಿ ನೀಡಬಹುದು ಅಥವಾ ರಿಜಿಸ್ಟರಿನಲ್ಲಿ ಮಾಡಿದ ನಮೂದುಗಳ ಪ್ರಮಾಣೀಕೃತ ಉದ್ಧೃತ ಪ್ರತಿಯನ್ನು ಅಥವಾ ಅದರ ಪ್ರಮಾಣಿತ ಪ್ರತಿಗಳನ್ನು ನೀಡಬಹುದು.

(3) ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು, ಕಟ್ಟಡದ ಅಥವಾ ಭೂಮಿಗಳ ಪ್ರತಿಯೊಬ್ಬ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ, ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಎಲ್ಲ ವಿವರಗಳನ್ನು ಒಳಗೊಂಡ ಆದರೆ ಮಾಲೀಕರ ವಿವರಗಳು, ವಿಶಿಷ್ಟ

ಆಸ್ತಿ ಗುರುತಿನ ಸಂಖ್ಯೆಗಳಿಗೆ ಸೀಮಿತವಾಗಿರದ ವಿವರಗಳು ಮತ್ತು ಅಂಥ ಕಟ್ಟಡಗಳ ಅಥವಾ ಭೂಮಿಯ ಅಥವಾ ಅವೆರಡಕ್ಕೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾದ ಸ್ವತ್ತು ತೆರಿಗೆಯ ಪ್ರಮಾಣಪತ್ರವನ್ನು ನೀಡಬಹುದು.

(4) ಮೇಲಿನ ರಿಜಿಸ್ಟರ್‌ಗಳು, ಆಸ್ತಿ ತೆರಿಗೆ ದಾಖಲೆಗಳು ಮತ್ತು ಪ್ರಮಾಣಪತ್ರಗಳನ್ನು ಸೂಕ್ತ ತಂತ್ರಾಂಶ ಬಳಸಿ ಸೂಕ್ತ ದತ್ತಾಂಶಗಳಲ್ಲಿ ವಿದ್ಯುನ್ಮಾನ ರೂಪದಲ್ಲಿ ನಿರ್ವಹಿಸಬಹುದು ಮತ್ತು ಪ್ರಕ್ರಿಯೆಗೊಳಿಸಬಹುದು ಮತ್ತು ಸಂಬಂಧಪಟ್ಟ ನಗರ ಪಾಲಿಕೆಯ ಆಯುಕ್ತರು ಕಾಲಕಾಲಕ್ಕೆ ಹಾಗೆ ಅಧಿಸೂಚಿಸಿದಾಗ ಮತ್ತು ಆ ತರುವಾಯ ಈ ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ಸದರಿ ವಿದ್ಯುನ್ಮಾನ ದತ್ತಾಂಶವು ಅದರ ಮೂಲ ದಾಖಲೆಗಳಾಗಿರತಕ್ಕದ್ದು ಮತ್ತು ವಿದ್ಯುನ್ಮಾನ ಪ್ರಕ್ರಿಯೆಗಳು ಸಿಂಧುವಾದ ಪ್ರಕ್ರಿಯೆಗಳಾಗಿರತಕ್ಕದ್ದು.

158. ಭೂಮಿಗಳ ಮತ್ತು ಕಟ್ಟಡಗಳ ಸರ್ವೆ ಮಾಡುವುದು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವುದು.- (1) ಆಯುಕ್ತರು, ನಗರ ಪಾಲಿಕೆಯ ಆದೇಶಗಳಿಗೊಳಪಟ್ಟು, ಸ್ವತ್ತು ತೆರಿಗೆಯ ನಿರ್ಧರಣೆಯ ದೃಷ್ಟಿಯಿಂದ, **ನಗರ** ಪಾಲಿಕೆಯೊಳಗಿನ ಕಟ್ಟಡಗಳನ್ನು ಅಥವಾ ಭೂಮಿಗಳನ್ನು ಅಥವಾ ಅವೆರಡರನ್ನು ಸರ್ವೆ ಮಾಡಲು ನಿರ್ದೇಶಿಸತಕ್ಕದ್ದು ಮತ್ತು ಹಾಗೇ ಸರ್ವೆ ಮಾಡಲು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸಲು ಯಾರೇ ಅರ್ಹ ವ್ಯಕ್ತಿಯ ಅಥವಾ ಏಜೆನ್ಸಿಯ ಸೇವೆಗಳನ್ನು ಪಡೆಯಬಹುದು.

(2) ಯಾವುದೇ ಕಟ್ಟಡಗಳಿಗೆ ಅಥವಾ ಭೂಮಿಗಳಿಗೆ ಅಥವಾ ಅವೆರಡಕ್ಕೂ ಸಂಬಂಧಿಸಿದಂತೆ ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವ ಅಥವಾ ಸ್ವತ್ತು ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ, ಆಯುಕ್ತರು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಂಥ ಪರಿವೀಕ್ಷಣೆ ಮಾಡುವುದಕ್ಕೂ ಮೊದಲು ಖಾತೆದಾರನಿಗೆ ಅಥವಾ ಅಧಿಭೋಗದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಪ್ರವೇಶಿಸಬಹುದು, ಪರಿವೀಕ್ಷಣೆ ಮಾಡಬಹುದು, ಸರ್ವೆ ಮಾಡಬಹುದು ಅಥವಾ ಅಳತೆ ಮಾಡಬಹುದು ಮತ್ತು ಖಾತೆದಾರನು ಅಥವಾ ಅಧಿಭೋಗದಾರನು, ಈ ಉದ್ದೇಶಕ್ಕಾಗಿ ಅಗತ್ಯಪಡಿಸಿದ ಅವಶ್ಯಕ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು:

ಪರಂತು, ಯಾವುದೇ ಕಟ್ಟಡ ಅಥವಾ ಭೂಮಿಯ ಒಳಗೆ ಮತ್ತು ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಪ್ರವೇಶಿಸತಕ್ಕದ್ದು:

ಮತ್ತು ಪರಂತು, ಮಾನವ ವಾಸಕ್ಕಾಗಿ ಬಳಸುತ್ತಿರುವ ಕಟ್ಟಡಗಳಾಗಿದ್ದರೆ, ಅಲ್ಲಿ ವಾಸಿಸುತ್ತಿರುವವರ ಸಾಮಾಜಿಕ ಹಾಗೂ ಧಾರ್ಮಿಕ ಬದ್ಧತೆಗಳಿಗೆ ಸೂಕ್ತ ಗೌರವವನ್ನು ನೀಡತಕ್ಕದ್ದು ಮತ್ತು ಮಹಿಳೆಯು ವಾಸ್ತವಿಕವಾಗಿ ವಾಸಿಸುತ್ತಿರುವ ಯಾವುದೇ ಕೋಣೆಯನ್ನು, ಆಕೆಯು ಆ ಕೋಣೆಯಿಂದ ಹೊರಕ್ಕೆ ಹೋಗಲು ಸ್ವತಂತ್ರರಾಗಿದ್ದೀರ ಎಂದು ತಿಳಿಸಿದ್ದ ಹೊರತು ಮತ್ತು ಹೊರಕ್ಕೆ ಹೊಗಲು ಯುಕ್ತ ಅನುಕೂಲವನ್ನು ಒದಗಿಸಿದ ಹೊರತು ಆ ಕೋಣೆಯನ್ನು ಪ್ರವೇಶಿಸತಕ್ಕದ್ದಲ್ಲ.

ಮತ್ತೂ ಪರಂತು, ಆಯುಕ್ತರು ಕಾಲಕಾಲಕ್ಕೆ ಅನುಮೋದಿಸಬಹುದಾದ ತಂತ್ರಜ್ಞಾನ ಮತ್ತು ವೈಮಾನಿಕ ಹಾಗೂ ಇತರ ಚಿತ್ರಣಗಳನ್ನು ಬಳಸಿಕೊಂಡು ಸದರಿ ಸರ್ವೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

159. ಸ್ವತ್ತು ತೆರಿಗೆ ಪಾವತಿ ಮಾಡುವುದಕ್ಕಾಗಿ ತಗಾದೆ ನೋಟೀಸು ಮತ್ತು ಅಂಥ ತಗಾದೆ ನೋಟೀಸಿನ ವಿರುದ್ಧ ಅಪೀಲು.- (1) ಈ ಅಧ್ಯಾಯದ ಮೇರೆಗೆ ವಿಧಿಸಬಹುದಾದ ದಂಡವನ್ನು ಒಳಗೊಂಡಂತೆ ಸ್ವತ್ತು ತೆರಿಗೆಯನ್ನು ಅದು ಬಾಕಿಯಾದ ತರುವಾಯವೂ ಪಾವತಿ ಮಾಡದಿದ್ದರೆ, ಅದನ್ನು ಪಾವತಿ ಮಾಡಲು ಹೊಣೆಗಾರನಾದ ವ್ಯಕ್ತಿಗೆ ನಗರ ಪಾಲಿಕೆಯು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ತಗಾದೆ ನೋಟೀಸನ್ನು ಜಾರಿ ಮಾಡಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಯಾವ ವ್ಯಕ್ತಿಗೆ ತಗಾದೆ ನೋಟೀಸನ್ನು ಜಾರಿಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ತಗಾದೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ,-

(ಎ) ನೋಟೀಸಿನಲ್ಲಿ ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ, ಅಥವಾ

(ಬಿ) ತಗಾದೆಯ ವಿರುದ್ಧ (3)ನೇ ಉಪಪ್ರಕರಣದ ಮೇರೆಗೆ ಅಪೀಲು ಸಲ್ಲಿಸದಿದ್ದರೆ,

- ಆತನನ್ನು ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನಂತರ ಅಂಥ ಮೊತ್ತವನ್ನು ನಿಯಮಿಸಬಹುದಾದಂಥ ದಂಡದ ಮತ್ತು ಬಡ್ಡಿಯೊಂದಿಗೆ ಮತ್ತು ಅಂಥ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

(3) ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಜಾರಿ ಮಾಡಿದ ತಗಾದೆ ನೋಟೀಸಿನಲ್ಲಿರುವ ಕ್ಲೇಮಿನ ಬಗ್ಗೆ ವಿವಾದಿಸುವ ಯಾರೇ ವ್ಯಕ್ತಿಯು, ಅಂಥ ನೋಟೀಸನ್ನು ಜಾರಿ ಮಾಡಿದ ತರುವಾಯ ಮೂವತ್ತು ದಿನಗಳೊಳಗೆ ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು:

ಪರಂತು, ಅಪೀಲು ಸಲ್ಲಿಸಲು ಬಯಸುವ ಯಾರೇ ವ್ಯಕ್ತಿಯು ಬೇಡಿಕೆಯ ಮೊತ್ತದ ಶೇಕಡ ಐವತ್ತರಷ್ಟನ್ನು ನಗರ ಪಾಲಿಕೆಯಲ್ಲಿ ಠೇವಣಿ ಮಾಡತಕ್ಕದ್ದು:

ಮತ್ತು ಪರಂತು ಅಪೀಲು ಯಶಸ್ವಿಯಾದರೆ, ಈಗಾಗಲೇ ಠೇವಣಿ ಮಾಡಿದ ಮೊತ್ತದ ಭಾಗಶಃ ಅಥವಾ ಪೂರ್ಣವಾಗಿ ಮರುಪಾವತಿಗೆ ಕಾರಣವಾದರೆ, ಅದನ್ನು ತಕ್ಷಣವೇ ನಗರ ಪಾಲಿಕೆಯು ಮರುಪಾವತಿಸತಕ್ಕದ್ದು ಅಥವಾ ಯಾವುದೇ ಬಾಕಿ ಉಳಿದಿರುವ ಆಸ್ತಿ ತೆರಿಗೆಗಳು ಅಥವಾ ದಂಡಗಳು ಅಥವಾ ಉಪಕರಗಳು ಅಥವಾ ಬಡ್ಡಿ ಅಥವಾ ಇತರ ಲೆವಿಗಳಿಗೆ ಸರಿಹೊಂದಿಸತಕ್ಕದ್ದು.

(4) ಉಪ-ಪ್ರಕರಣ (1) ರಡಿಯಲ್ಲಿ ಯಾರಿಗೆ ತಗಾದೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಅಂತಹ ತಗಾದೆ ನೋಟೀಸನ್ನು ಆತನಿಗೆ ಜಾರಿಗೊಳಿಸಿದ ಮೂವತ್ತು ದಿನಗಳೊಳಗೆ ತೆರಿಗೆಯನ್ನು ಪಾವತಿಸದಿದ್ದರೆ, ಅಪೀಲು ಪ್ರಾಧಿಕಾರವು ತಗಾದೆ ನೋಟಿಸಿಗೆ ಯಾವುದೇ ತಡೆಯಾಜ್ಞೆ ನೀಡದಿದ್ದರೆ, ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು ತಪ್ಪಿತಸ್ಥನ ಅಂತಹ ಚರ ಸ್ವತ್ತನ್ನು ತನ್ನ ವಾರಂಟಿನ ಅಡಿಯಲ್ಲಿ ಜಪ್ತಿ ಮಾಡುವ ಮೂಲಕ ಅಥವಾ ಮಾರಾಟ ಮಾಡುವ ಮೂಲಕ ವಸೂಲಿ ಮಾಡಬಹುದು ಮತ್ತು ತಪ್ಪಿತಸ್ಥನು ಕಟ್ಟಡದ ಅಧಿಭೋಗದಾರನಾಗಿದ್ದರೆ ಅಂಥ ಕಟ್ಟಡ ಅಥವಾ ಭೂಮಿಯ ಮೇಲೆ ಕಂಡುಬರಬಹುದಾದ ಯಾವುದೇ ಚರ ಸ್ವತ್ತನ್ನು ಜಪ್ತಿ ಮತ್ತು ಮಾರಾಟ ಮಾಡುವ ಮೂಲಕ ಅಂಥ ಸ್ವತ್ತು ಜಪ್ತಿ ಮಾಡುವ ಅಥವಾ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಭರಿಸಬಹುದಾದ ಸಂಭಾವ್ಯ ಶುಲ್ಕಗಳು ಸೇರಿದಂತೆ ವಾರಂಟ್ ಶುಲ್ಕ ಮತ್ತು ಜಪ್ತಿ ಶುಲ್ಕದ ಜೊತೆಗೆ ತೆರಿಗೆ ಲೆಕ್ಕದಲ್ಲಿ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡತಕ್ಕದ್ದು.

(5) ಯಾವುದೇ ಕಾರಣಕ್ಕಾಗಿ, ತಪ್ಪಿತಸ್ಥನ ಆಸ್ತಿಯ ಜಪ್ತಿಗೆ ಅಥವಾ ಪರ್ಯಾಪ್ತ ಜಪ್ತಿಗೆ ಸಾಧ್ಯವಾಗದಿದ್ದರೆ, ಆಯುಕ್ತರು ಬಾಕಿಯಿರುವ ಆಸ್ತಿ ತೆರಿಗೆಯನ್ನು ವಸೂಲು ಆಗುವವರೆಗೆ ನಿಯಮಿಸಬಹುದಾದ ರೀತಿಯಲ್ಲಿ, ತಪ್ಪಿತಸ್ಥನ ಬ್ಯಾಂಕ್ ಖಾತೆಯನ್ನು ಅಥವಾ ಸ್ಥಿರಾಸ್ತಿಯನ್ನು ಜಪ್ತಿ ಮಾಡಬಹುದು:

ಪರಂತು, ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿದ ದಿನಾಂಕದಿಂದ ಅರವತ್ತು ದಿನಗಳ ನಂತರವೂ ಬೇಡಿಕೆಯ ಬಾಕಿಗಳನ್ನು ಪಾವತಿಸದಿದ್ದಲ್ಲಿ, ಹಾಗೆ ಜಪ್ತಿಯಾದ ಸ್ಥಿರಾಸ್ತಿಗಳ ಜಪ್ತಿ ಮಾರಾಟದ ಮೂಲಕ ಅದನ್ನು ವಸೂಲು ಮಾಡಬಹುದು. ಅಂಥ ಸ್ವತ್ತು ಜಪ್ತಿ ಮಾಡುವ ಅಥವಾ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಭರಿಸಬಹುದಾದ ಸಂಭಾವ್ಯ ಶುಲ್ಕಗಳು ಸೇರಿದಂತೆ ವಾರಂಟ್ ಶುಲ್ಕ ಮತ್ತು ಜಪ್ತಿ ಶುಲ್ಕದ ಜೊತೆಗೆ ತೆರಿಗೆ ಲೆಕ್ಕದಲ್ಲಿ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡತಕ್ಕದ್ದು:

ಮತ್ತು ಪರಂತು, ಆಸ್ತಿಯನ್ನು ಮಾರಾಟ ಮಾಡುವಲ್ಲಿ ಭರಿಸಲಾದ ಮೊತ್ತದ ಜೊತೆಗೆ ತಗಾದೆ ಮಾಡಲಾದ ಎಲ್ಲಾ ಬಾಕಿಗಳನ್ನು ಮುರಿದುಕೊಂಡ ನಂತರ ಸ್ಥಿರ ಸ್ವತ್ತುಗಳ ಮಾರಾಟದಿಂದ ದೊರೆಯಬಹುದಾದ ಯಾವುದೇ ಹೆಚ್ಚುವರಿ ಮೊತ್ತವನ್ನು ಮಾಲೀಕನಿಗೆ ಹಿಂತಿರುಗಿಸತಕ್ಕದ್ದು:

ಮತ್ತೂ ಪರಂತು, ಆಯುಕ್ತರು ಸಕ್ಷಮ ನ್ಯಾಯಾಲಯದ ಮುಂದೆ ಸುಸ್ಪೀದಾರನನ್ನು ವಿಚಾರಣೆ ಒಳಪಡಿಸತಕ್ಕದ್ದು.

160. ಜಾಹೀರಾತು ಶುಲ್ಕ.- ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ಹಾಕಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ

ಯಾವುದೇ ಜಾಹೀರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಹಾಕಿರುವ, ಪ್ರದರ್ಶಿಸಿರುವ, ಅಳವಡಿಸಿರುವ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹೀರಾತಿನ ಮೇಲೆ ಸರ್ಕಾರದ ಅನುಮೋದನೆಯೊಂದಿಗೆ ಪಾಲಿಕೆಯು ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಅಂಥ ದರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗಳಿಗೊಳಪಟ್ಟು ಲೆಕ್ಕ ಹಾಕಿದ ಜಾಹೀರಾತು ಶುಲ್ಕವನ್ನು ಪಾವತಿಸತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಬಗ್ಗೆ ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತು ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ನಗರ ಪಾಲಿಕೆಯ; ಅಥವಾ

(ಬಿ) ಯಾವುದೇ ಶಾಸನ ರಚನಾ ನಿಕಾಯದ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ,

- ಯಾವುದೇ ಜಾಹೀರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದ ಮೇರೆಗೆ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಮತ್ತೂ ಪರಂತು, ಸರ್ಕಾರವು ಅನುಮೋದಿಸಿದ ನಿಯಮಗಳು ಅಥವಾ ಉಪವಿಧಿಗಳಲ್ಲಿ ಸೂಚಿಸಿದಂತೆ ಜಾಹೀರಾತು ಶುಲ್ಕದಿಂದ ಅಂತಹ ಇತರ ವಿನಾಯಿತಿಗಳನ್ನು ನೀಡಬಹುದು.

161. ಆಯುಕ್ತರ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.- (1) ಈ ಅಧ್ಯಾಯದ ಮೇರೆಗೆ ಶುಲ್ಕ ವಿಧಿಸುವುದನ್ನು ಪಾಲಿಕೆಯು ನಿರ್ಧರಿಸಿದ ತರುವಾಯ, ಆಯುಕ್ತರ ಲಿಖಿತ ಅನುಮತಿ ಇಲ್ಲದೆ ನಗರದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ನಿರ್ಮಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಹಾಕತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಆಯುಕ್ತರು,-

(ಎ) ಜಾಹೀರಾತು ನಗರ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಜಾಹೀರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿರದಿದ್ದರೆ,

- ಅಂಥ ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹೀರಾತು ಶುಲ್ಕವನ್ನು ಸಂದಾಯ ಮಾಡಬೇಕಾದ ಜಾಹೀರಾತಿನ ಸಂದರ್ಭದಲ್ಲಿ, ಆಯುಕ್ತರು, ಶುಲ್ಕ ಪಾವತಿಯು ಯಾವ ಅವಧಿಗೆ ಸಂಬಂಧಪಟ್ಟಿದೆಯೋ ಆ ಯಾವುದೇ ಅವಧಿಗಾಗಿ ಅನುಮತಿಯನ್ನು ನೀಡತಕ್ಕದ್ದು.

162. ಕೆಲವು ಸಂದರ್ಭಗಳಲ್ಲಿ ಆಯುಕ್ತರ ಅನುಮತಿಯು ಅನೂರ್ಜಿತವಾಗತಕ್ಕದ್ದು.- ಈ ಅಧ್ಯಾಯದ ಮೇರೆಗೆ ನೀಡಲಾದ ಅನುಮತಿಯು ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ:-

(ಎ) ಜಾಹೀರಾತು, ನಗರ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಉಲ್ಲಂಘಿಸಿದರೆ;

(ಬಿ) ನಗರ ಪಾಲಿಕೆಯ ಇಂಜಿನಿಯರನ ನಿರ್ದೇಶನದ ಮೇರೆಗೆ ಜಾಹೀರಾತನ್ನು ಸುಭದ್ರವಾಗಿ ನಿಲ್ಲಿಸುವ ಉದ್ದೇಶಕ್ಕಾಗಿ ಅಲ್ಲದೆ ಆ ಜಾಹೀರಾತಿಗೆ ಯಾವುದೇ ಹೆಚ್ಚಿನದನ್ನು ಸೇರಿಸಿದರೆ;

(ಸಿ) ಜಾಹೀರಾತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಪ್ರಮುಖ ಬದಲಾವಣೆಯನ್ನು ಮಾಡಿದರೆ;

(ಡಿ) ಆಕಸ್ಮಿಕವಾಗಿ ಅಲ್ಲದೆ ಅನ್ಯಥಾ ಜಾಹೀರಾತು ಅಥವಾ ಅದರ ಯಾವುದೇ ಭಾಗವು ಕೆಳಗೆ ಬಿದ್ದರೆ;

(ಇ) ಯಾವ ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಆ ಜಾಹೀರಾತನ್ನು ನಿರ್ಮಿಸಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಹಾಕಲಾಗಿದೆಯೋ ಆ ಯಾವುದೇ ಕಟ್ಟಡಕ್ಕೆ, ಗೋಡೆಗೆ ಅಥವಾ ರಚನೆಗೆ ಅಥವಾ ಅದರಲ್ಲಿ ಯಾವುದೇ ಅಂಥ ಸೇರ್ಪಡೆ ಅಥವಾ ಬದಲಾವಣೆ ಮಾಡಿದರೆ, ಅಂಥ ಸೇರ್ಪಡೆಯಿಂದ ಅಥವಾ ಬದಲಾವಣೆಯಿಂದ ಜಾಹೀರಾತಿನ ಅಥವಾ ಅದರ ಯಾವುದೇ ಭಾಗದ ಸ್ಥಾನಪಲ್ಲಟವಾಗುವುದಾದರೆ; ಮತ್ತು

(ಎಫ್) ಯಾವ ಕಟ್ಟಡದ, ಗೋಡೆಯ ಅಥವಾ ರಚನೆ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ನಿರ್ಮಿಸಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಹಾಕಲಾಗಿದೆಯೋ ಆ ಕಟ್ಟಡವನ್ನು, ಗೋಡೆಯನ್ನು ಅಥವಾ ರಚನೆಯನ್ನು ಕೆಡವಿಹಾಕಿದರೆ ಅಥವಾ ನಾಶಪಡಿಸಿದರೆ,

– ಅನೂರ್ಜಿತವಾಗತಕ್ಕದ್ದು.

163. ಅನಧಿಕೃತ ಜಾಹೀರಾತನ್ನು ತೆಗೆದುಹಾಕುವುದು.- ಈ ಅಧ್ಯಾಯದ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹೀರಾತನ್ನು ನಿರ್ಮಿಸಲು, ಪ್ರದರ್ಶಿಸಲು ಅಳವಡಿಸಲು ಅಥವಾ ಹಾಕಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹೀರಾತನ್ನು ಹಾಕಿದರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಆಯುಕ್ತರು ಅಥವಾ ಈ ಬಗ್ಗೆ ಆಯುಕ್ತರ ಅಧಿಕಾರವನ್ನು ಪ್ರತ್ಯಾಯೋಜಿಸಿದ ಅಧಿಕಾರಿಯು ಲಿಖಿತ ನೋಟೀಸನ್ನು ಕೊಡುವ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಹಾಕಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ, ಆ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮಾಲಿಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹೀರಾತನ್ನು ಕೆಳಗೆ ಇಳಿಸುವಂತೆ ಅಥವಾ ತೆಗೆದುಹಾಕುವಂತೆ, ಅಗತ್ಯಪಡಿಸಬಹುದು ಮತ್ತು ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹೀರಾತನ್ನು ತೆಗೆದುಹಾಕಿಸಬಹುದು:

ಪರಂತು, ಅಧಿಕೃತ ಅಥವಾ ಅನಧಿಕೃತವಾಗಿ ಜಾಹೀರಾತು ಶುಲ್ಕ ಮತ್ತು/ಅಥವಾ ದಂಡವನ್ನು ಪಾವತಿಸಲು ಹೊಣೆಗಾರರಾಗಿರುವ ಜಾಹೀರಾತಿನ ಸಂದರ್ಭದಲ್ಲಿ, ಆದರೆ ಅದನ್ನು ಪಾವತಿಸಲು ವಿಳಂಬವಾದರೆ, ಆತನು ಶುಲ್ಕ ಮತ್ತು/ಅಥವಾ ದಂಡದ ಜೊತೆಗೆ ಜಾಹೀರಾತು ಶುಲ್ಕ ಅಥವಾ ದಂಡ ಬಾಕಿಯಾದ ದಿನಾಂಕದಿಂದ ಅದನ್ನು ಪಾವತಿಸುವ ದಿನಾಂಕದವರೆಗೆ ವಾರ್ಷಿಕ ಶೇಕಡಾ ಹದಿನೆಂಟರಷ್ಟರ ದರದಲ್ಲಿ ಅದರ ಮೇಲಿನ ಬಡ್ಡಿಯನ್ನು ಪಾವತಿಸಲು ಜವಾಬ್ದಾರರಾಗಿತಕ್ಕದ್ದು:

ಮತ್ತು ಪರಂತು, ಯಾವುದೇ ಅನಧಿಕೃತ ಜಾಹೀರಾತು ದಂಡವನ್ನು ಪಾವತಿಸಲು ಮತ್ತು ಉಪ-ವಿಧಿಗಳು ಅಥವಾ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಜುಲ್ಮಾನೆಯನ್ನು ಸಹ ಪಾವತಿಸಲು ಹೊಣೆಯಾಗಿರತಕ್ಕದ್ದು. ಸದರಿ ದಂಡದ ಅಥವಾ ಜುಲ್ಮಾನೆಯ ಪಾವತಿಯು ಅನಧಿಕೃತ ಜಾಹೀರಾತನ್ನು ಮುಂದುವರೆಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ ಹಾಗೂ ಅದನ್ನು ಸಂಪೂರ್ಣವಾಗಿ ತೆಗೆದುಹಾಕತಕ್ಕದ್ದು ಅಥವಾ ನಾಶಪಡಿಸತಕ್ಕದ್ದು:

ಮತ್ತೂ ಪರಂತು, ಅನಧಿಕೃತ ಜಾಹೀರಾತುಗಳು ಅಥವಾ ಪ್ರದರ್ಶನಗಳ ಮೇಲಿನ ಜುಲ್ಮಾನೆಯನ್ನು ನಿಯಮಿಸಬಹುದಾದ ವಿಧಾನದಲ್ಲಿ ಸ್ಥಳದಲ್ಲೇ ವಸೂಲು ಮಾಡಬಹುದು:

ಅಲ್ಲದೆ ಪರಂತು, ನಿಯಮಿಸಿದ ಜಾಹೀರಾತು ಶುಲ್ಕದ ಪ್ರಕಾರ ಯಾವುದೇ ಬಾಕಿಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಸ್ವತ್ತು ತೆರಿಗೆಗಾಗಿ ಕಾರಣ ಕೇಳಿ ನೋಟಿಸ್, ತಗಾದೆ ನೋಟಿಸ್ ನೀಡುವುದಕ್ಕೆ ಮತ್ತು ಬಾಕಿಗಳನ್ನು ವಸೂಲು ಮಾಡುವುದಕ್ಕಾಗಿ ಉಪಬಂಧಿಸಲಾದ ರೀತಿಯಲ್ಲಿ ಯಥೋಚ್ಚಿತ ವ್ಯತ್ಯಾಸದೊಂದಿಗೆ ನಿರ್ಧರಿಸಬಹುದು, ಆ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಬಹುದು ಮತ್ತು ವಸೂಲಿ ಮಾಡಬಹುದು.

ಅಲ್ಲದೆ ಪರಂತು, ಅನಧಿಕೃತ ಜಾಹೀರಾತುಗಳಿಗಾಗಿ, ಇತರ ಉಪಬಂಧಗಳ ಜೊತೆಗೆ ಅದನ್ನು ತೆರವುಗೊಳಿಸುವ ವೆಚ್ಚವನ್ನು, ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಮೂಲಕ ಮತ್ತು ಮಾರಾಟ ಮಾಡುವ ಮೂಲಕ ಅಥವಾ ಆಸ್ತಿ ತೆರಿಗೆಯ ಬಾಕಿಗಳನ್ನು ವಸೂಲಿ ಮಾಡುವುದಕ್ಕಾಗಿ ಉಪಬಂಧಿಸಲಾದ ರೀತಿಯಲ್ಲಿ ವಸೂಲು ಮಾಡಬಹುದು.

164. ವಿಧಿಸಬಹುದಾದ ಉಪಕರಗಳು.- ಈ ಕುರಿತು, ರಾಜ್ಯ ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ನಗರ ಪಾಲಿಕೆಯು ಮೂಲಸೌಕರ್ಯ ಉಪಕರ, ಪರಿಸರ ಉಪಕರ, ಘನತ್ಯಾಜ್ಯ ನಿರ್ವಹಣಾ ಉಪಕರ ಮತ್ತು ನಗರ ಸಾರಿಗೆ ಉಪಕರಗಳನ್ನು, ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂತಹ ದರದಲ್ಲಿ ಮತ್ತು ಅಂಥ ರೀತಿಯಲ್ಲಿ ಕರ ವಿಧಿಸಬಹುದು ಅಥವಾ ಹೊರಿಸಬಹುದು. ಮೂಲಸೌಕರ್ಯ ಉಪಕರವನ್ನು, ನಗರ ಪಾಲಿಕೆಗೆ ಸಂಬಂಧಿಸಿದಂತೆ ಹೊಸ ಮೂಲಸೌಕರ್ಯವನ್ನು ಸೃಜಿಸುವ ಉದ್ದೇಶಕ್ಕಾಗಿ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಮೂಲಸೌಕರ್ಯದ ನಿರ್ವಹಣೆಗಾಗಿ ಬಳಸತಕ್ಕದ್ದು ಹಾಗೂ ಯಾವುದೇ ಇತರ ಬಳಕೆಗಾಗಿ ಬದಲಾಯಿಸತಕ್ಕದ್ದಲ್ಲ.

165. ಬಳಕೆದಾರ ಶುಲ್ಕಗಳನ್ನು ವಿಧಿಸುವ ಅಧಿಕಾರ.- ನಗರ ಪಾಲಿಕೆಯು ಬಳಕೆದಾರ ಶುಲ್ಕವನ್ನು,-

(ಎ) ಘನ ತ್ಯಾಜ್ಯ ನಿರ್ವಹಣೆಗಾಗಿ;

(ಬಿ) ವಿವಿಧ ವಾಹನಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತು ಬೇರೆ ಬೇರೆ ಅವಧಿಗಳಿಗಾಗಿ ಪಾರ್ಕಿಂಗ್‌ಗಾಗಿ; ಮತ್ತು

(ಸಿ) ಈ ಅಧಿನಿಯಮದ ಉಪಬಂಧಗಳ ಅನುಸರಣೆಯಲ್ಲಿ ಸಲ್ಲಿಸಿದ ಇತರೆ ನಿರ್ದಿಷ್ಟ ಸೇವೆಗಳಿಗಾಗಿ,

- ಕಾಲಕಾಲಕ್ಕೆ ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ವಿಧಿಸಬಹುದು

166. ಮನರಂಜನಾ ತೆರಿಗೆ ವಿಧಿಸುವಿಕೆ.- (1) ನಗರ ಪಾಲಿಕೆಯು, ಈ ಅಧಿನಿಯಮಕ್ಕನುಸಾರವಾಗಿ ಯಾವುದೇ ಟಿಕೆಟ್ ಆಧಾರಿತ ಮನರಂಜನೆ, ಟಿಕೆಟ್ ಆಧಾರಿತವಲ್ಲದ ಮನರಂಜನೆ ಮತ್ತು ದೂರದರ್ಶನದ ಮೂಲಕ ಪ್ರಸಾರವಾಗುವ ಮನರಂಜನೆಗಳ ಮೇಲೆ ಮನರಂಜನಾ ತೆರಿಗೆಯನ್ನು ವಿಧಿಸಿ ಸಂಗ್ರಹಿಸತಕ್ಕದ್ದು:

ಪರಂತು, ನಗರ ಪಾಲಿಕೆಯು ದೂರದರ್ಶನದ ಮೂಲಕ ಪ್ರಸಾರವಾಗುವ ಮನರಂಜನೆಯ ಮೇಲಿನ ಮನರಂಜನಾ ತೆರಿಗೆಯನ್ನು ನಗರ ಪಾಲಿಕೆ ಪ್ರದೇಶ ವ್ಯಾಪ್ತಿಯೊಳಗೆ ಸಂಗ್ರಹಿಸತಕ್ಕದ್ದು.

(2) ಯಾವುದೇ ಟಿಕೆಟ್ ಆಧಾರಿತ ಮನರಂಜನೆ, ಟಿಕೆಟ್ ಆಧಾರಿತವಲ್ಲದ ಮನರಂಜನೆ ಮತ್ತು ದೂರದರ್ಶನದ ಮೂಲಕ ಪ್ರಸಾರವಾಗುವ ಮನರಂಜನೆಗಳಿಗೆ ಸಂಬಂಧಿಸಿದಂತೆ ವಿಧಿಸಬಹುದಾದ ಮನರಂಜನಾ ತೆರಿಗೆಯ ದರವನ್ನು, ಠರಾವಿನ ಮೂಲಕ ನಗರ ಪಾಲಿಕೆಯು ನಿರ್ಧರಿಸತಕ್ಕದ್ದು.

(3) ಮನೋರಂಜನಾ ತೆರಿಗೆಯನ್ನು ಪಾವತಿಸಲು ಹೊಣೆಯಾಗಿರುವ, ಆದರೆ ಪಾವತಿಯಾಗದೆ ಉಳಿದಿರುವ ಮತ್ತು/ಅಥವಾ ಪಾವತಿಸಲು ವಿಳಂಬವಾಗಿರುವ ಸಂದರ್ಭದಲ್ಲಿ ವಿಳಂಬಕ್ಕಾಗಿ ಅದರ ಮೇಲೆ ಬಡ್ಡಿ ದರವನ್ನು ಮತ್ತು ದಂಡವನ್ನು, ಪಾವತಿಸದ ಸ್ವತ್ತು ತೆರಿಗೆ ಬಾಕಿಗಳಿಗಾಗಿ ನಿಗದಿಪಡಿಸಿದಂತೆ ವಿಧಿಸತಕ್ಕದ್ದು ಮತ್ತು ಸ್ವತ್ತು ತೆರಿಗೆಯ ಬಾಕಿಗಳನ್ನು ವಸೂಲಿ ಮಾಡಲು ಯಥೋಚಿತ ವ್ಯತ್ಯಾಸಗಳೊಂದಿಗೆ ಉಪಬಂಧಿಸಲಾದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು:

ಪರಂತು, ನಗರ ಪಾಲಿಕೆಯು, ಪುರಸಭಾ ಪ್ರದೇಶದಲ್ಲಿನ ಪರಿಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಂಡು, ಮೇಲೆ ಹೇಳಿದ ಯಾವುದೇ ಬಳಕೆ ಶುಲ್ಕಗಳನ್ನು ವಿಧಿಸದೇ ಇರಲು ಅಥವಾ ವಿಧಿಸುವುದನ್ನು ಮುಂದೂಡಲು ನಿರ್ಧರಿಸಬಹುದು.

167. ಶುಲ್ಕಗಳನ್ನು ಮತ್ತು ಜುಲ್ಮಾನೆಗಳನ್ನು ವಿಧಿಸುವ ಅಧಿಕಾರ.- ನಗರ ಪಾಲಿಕೆಯು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಥವಾ ವಿನಿಯಮಗಳ ಮೂಲಕ ಅಥವಾ ಮೇರೆಗೆ ಅದರಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ,-

(ಎ) ಕಟ್ಟಡ ನಕ್ಷೆಗಳ ಮಂಜೂರಾತಿ, ಯಾವುದೇ ವಿಧದ ನಿರ್ಮಾಣ, ಮಾಪಾರ್ಡು, ದುರಸ್ತಿ, ಅಥವಾ ಕೆಡಹುವ ಕಾಮಗಾರಿಗಾಗಿ, ಸಾರ್ವಜನಿಕ ಬೀದಿಗಳ ಮೇಲೆ ಸಾಮಗ್ರಿಗಳನ್ನು ಹಾಕುವುದಕ್ಕೆ ನೆಲ ಬಾಡಿಗೆ, ರಸ್ತೆ ದಾರಿ ಹಕ್ಕಿನ ಅನುಮತಿಗಾಗಿ ಪಾದಾಚಾರಿ ಮಾರ್ಗ ಮತ್ತು ಯುಟಿಲಿಟಿ ಸಂಪರ್ಕಕ್ಕಾಗಿ, ಚರಂಡಿಗಾಗಿ ಮತ್ತು ಕಾರ್ಯಸಮಾಪ್ತಿ ಪ್ರಮಾಣ ಪತ್ರಗಳ ನೀಡಿಕೆಗಾಗಿ ಹಾಗೂ ಕೊಳವೆ ಬಾವಿ/ಬಾವಿಗಳನ್ನು ಕೊರೆಯುವುದಕ್ಕಾಗಿ;

(ಬಿ) ಭೂಮಿ ಮತ್ತು ಕಟ್ಟಡಗಳ ವಿವಿಧ ನಿವಾಸೇತರ ಬಳಕೆಗೆ ಪುರಸಭಾ ಲೈಸೆನ್ಸುಗಳ ನೀಡಿಕೆಗಾಗಿ, ಪುರಸಭಾ ಭೂಮಿಯಲ್ಲಿ ತಾತ್ಕಾಲಿಕ ಶೆಡ್ ಗಳ ನಿರ್ಮಾಣಕ್ಕಾಗಿ ಅನುಮತಿ ನೀಡಿದರೆ ಅದರ ನೆಲಬಾಡಿಗೆಗಾಗಿ;

(ಸಿ) ವಾಸ್ತುತಜ್ಞರು, ಕೊಳಾಯಿಗಾರರು ಮತ್ತು ಮೋಜಣಿದಾರರಂಥ ವಿವಿಧ ವೃತ್ತಿಗರ ವರ್ಗಗಳಿಗೆ ಪರವಾನಗಿ ನೀಡಿಕೆಗಾಗಿ;

(ಡಿ) ಮಾಂಸ, ಮೀನು ಮತ್ತು ಕೋಳಿ ಮಾರಾಟ ಅಥವಾ ಬೀದಿ ವ್ಯಾಪಾರದ ಸರಕುಗಳ ಮಾರಾಟವನ್ನು ತಗ್ಗಿಸುವಂತಹ ಚಟುವಟಿಕೆಗಾಗಿ;

(ಇ) ಜಾಹಿರಾತುಗಳಿಗಾಗಿ ಬಳಸಿದ ನಿವೇಶನಗಳು ಅಥವಾ ಖಾಸಗಿ ಮಾರುಕಟ್ಟೆಗಳಿಗಾಗಿ ಬಳಸಿದ ಆವರಣಗಳು, ಕಸಾಯಿಖಾನೆಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಚಿಕಿತ್ಸಾಲಯಗಳು, ಕಾರ್ಖಾನೆಗಳು, ಉಗ್ರಾಣಗಳು, ಗೋದಾಮುಗಳು, ಸರಕು ಸಾಗಾಣೆ ಡಿಪೋಗಳು, ಭೋಜನಾಲಯಗಳು, ವಸತಿಗೃಹಗಳು, ಸರ್ವಿಸ್ ಅಪಾರ್ಟ್‌ಮೆಂಟುಗಳು, ವಾಣಿಜ್ಯ ಕೇಂದ್ರಗಳು, ವ್ಯಾಪಾರ ಕೇಂದ್ರಗಳು, ಹೋಟೆಲುಗಳು, ರಂಗಮಂದಿರಗಳು, ಚಿತ್ರಮಂದಿರಗಳು ಮತ್ತು ಸಾರ್ವಜನಿಕ ಮನೋರಂಜನಾ ಸ್ಥಳಗಳು ಮತ್ತು ಬ್ಯಾನರುಗಳು, ಬಂಟಿಂಗುಗಳು, ಧ್ವನಿ ವರ್ಧಕಗಳ ಬಳಕೆ (ದಿನಕ್ಕೆ ಅನುಮತಿ) ಗಳನ್ನೊಳಗೊಂಡ ಇತರೆ ನಿವಾಸೇತರ ಬಳಕೆಗಾಗಿ ಆವರಣಗಳಿಗಾಗಿ; ಮತ್ತು

(ಎಫ್) ಪ್ರಾಣಿಗಳು, ಬಂಡಿಗಳು ಅಥವಾ ಸಾಮಾನು ಹೊರುವ ಬಂಡಿಗಳು; ಮತ್ತು

(ಜಿ) ಈ ಅಧಿನಿಯಮದ ಉಪಬಂಧಗಳಡಿ ಲೈಸೆನ್ಸು ಅಥವಾ ಅನುಮತಿಯ ಅಗತ್ಯವಿರುವಂಥ ಕಟ್ಟಡಕ್ಕೆ ಸಂಬಂಧಿಸಿದ ಪರವಾನಗಿ ಶುಲ್ಕಗಳು ಸೇರಿದಂತೆ ಇತರೆ ಚಟುವಟಿಕೆಗಳಿಗಾಗಿ;

-ಶುಲ್ಕಗಳನ್ನು ಮತ್ತು ಜುಲ್ಮಾನೆಗಳನ್ನು ವಿಧಿಸುವ ಅಧಿಕಾರ ಹೊಂದಿರತಕ್ಕದ್ದು.

168. ಅಭಿವೃದ್ಧಿ ಶುಲ್ಕಗಳನ್ನು ವಿಧಿಸುವ ಅಧಿಕಾರ.- ನಗರ ಪಾಲಿಕೆಯು, ನಿಯಮಿಸಲಾದಂತೆ ಕಾಲಕಾಲಕ್ಕಾಗಿ ಉಪವಿಧಿಗಳ ಮೂಲಕ,

(ಎ) ನಿರ್ದಿಷ್ಟ ವರ್ಗದ ಬೀದಿಯೊಂದಿಗೆ ಅದರ ಸ್ಥಳ, ಅದರ ಬಳಕೆಯ ಗುಣಲಕ್ಷಣಗಳು ಮತ್ತು ಮಂಜೂರಾದ ನಿರ್ಮಾಣ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಹದಿನಾಲ್ಕು ಮೀಟರುಗಳಿಗಿಂತ ಹೆಚ್ಚಿನ ಎತ್ತರವಿರುವ ಯಾವುದೇ ವಸತಿ ಕಟ್ಟಡದ ಮೇಲೆ ಅಥವಾ ವಸತಿಯೇತರ ಕಟ್ಟಡದ ಮೇಲೆ; ಮತ್ತು

(ಬಿ) ಯಾವುದೇ ಅಭಿವೃದ್ಧಿ ಯೋಜನೆಯನುಸಾರವಾಗಿ ಯಾವುದೇ ಅಸ್ತಿತ್ವದಲ್ಲಿರುವ ಪ್ರದೇಶದ ಅಭಿವೃದ್ಧಿ ಅಥವಾ ಪುನರಾಭಿವೃದ್ಧಿಗಾಗಿ,

- ನಿರ್ಧರಿಸಬಹುದಾದಂಥ ಅಭಿವೃದ್ಧಿ ಶುಲ್ಕಗಳನ್ನು ವಿಧಿಸಬಹುದು.

169. ತೆರಿಗೆ ಅಥವಾ ಶುಲ್ಕದ ಮೇಲೆ ಅಧಿಕರವನ್ನು ವಿಧಿಸುವುದು.- ನಗರ ಪಾಲಿಕೆಯು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ, ನಿವಾಸೇತರ ಉದ್ದೇಶಗಳಿಗಾಗಿ

ಬಳಸಿದ ಆವರಣಗಳಿಗೆ, ಸಂದರ್ಭಾನುಸಾರ, ತೆರಿಗೆ ಅಥವಾ ಬಳಕೆದಾರರ ಶುಲ್ಕ ಅಥವಾ ಫೀಜಿನ ಮೇಲೆ ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆಯಿರದ ಮತ್ತು ಶೇಕಡ ಎಪ್ಪತ್ತೈದನ್ನು ಮೀರದ ದರದಲ್ಲಿ ಅಧಿಕರವನ್ನು ವಿಧಿಸಬಹುದು.

170. ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲಿನ ಸುಂಕ.- ಗ್ರೇಟರ್ ಬೆಂಗಳೂರು ಪ್ರದೇಶದ ಪರಿಮಿತಿಯಲ್ಲಿ ನೆಲೆಗೊಂಡಿರುವ ಎಲ್ಲಾ ಸ್ಥಿರ ಸ್ವತ್ತನ್ನು ಶಾಶ್ವತವಾಗಿ ಮಾರಾಟ, ದಾನ, ಅಡಮಾನ, ವಿನಿಮಯ ಅಥವಾ ಭೋಗ್ಯದ ಲಿಖಿತಪತ್ರಗಳ ಮೇಲೆ ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲಿನ ಸುಂಕವನ್ನು ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಮೂಲಕ ವಿಧಿಸಲಾದ ಸುಂಕದ ಶೇಕಡ ಎರಡರಷ್ಟು ದರದಲ್ಲಿ ಅಧಿಕರದ ರೂಪದಲ್ಲಿ ವಿಧಿಸತಕ್ಕದ್ದು.

171. ತೆರಿಗೆಗಳು, ಶುಲ್ಕಗಳು, ಉಪಕರಗಳು, ಬಡ್ಡಿ, ದಂಡಗಳು, ಮುಂತಾದವುಗಳನ್ನು ವಸೂಲು ಮಾಡುವ ಅಧಿಕಾರ.- ಈ ಅಧಿನಿಯಮದಡಿ ನಗರ ಪಾಲಿಕೆಗೆ ಪಾವತಿಸಬೇಕೆಂದು ನಿರ್ದಿಷ್ಟಪಡಿಸಲಾದ ಯಾವುದೇ ತೆರಿಗೆ, ಶುಲ್ಕ, ಉಪಕರ, ಲೆವಿ, ಬಡ್ಡಿ, ದಂಡವನ್ನು ಭಾಗಶಃ ಅಥವಾ ಪೂರ್ಣವಾಗಿ ಪಾವತಿಸದಿದ್ದರೆ ಅಥವಾ ನಿಗದಿಪಡಿಸಿದ ಕೊನೆಯ ದಿನಾಂಕವನ್ನು ಮೀರಿ ವಿಳಂಬವಾಗಿ ಪಾವತಿಸಿದ್ದರೆ, ಅದರ ವಸೂಲಾತಿಯ ವಿಧಾನ ಅಥವಾ ಪಾವತಿಸಬೇಕಾದ ಬಡ್ಡಿ ಅಥವಾ ಅದರ ಮೇಲಿನ ದಂಡವನ್ನು ನಿಯಮಿಸದಿರುವಲ್ಲಿ, ಸ್ವತ್ತು ತೆರಿಗೆಯ ವಿಳಂಬ ಪಾವತಿಗಾಗಿ ನಿಯಮಿಸಲಾದ ಅದೇ ರೀತಿಯ ಬಡ್ಡಿಯ ದರ ಮತ್ತು ದಂಡಗಳನ್ನು ವಿಧಿಸತಕ್ಕದ್ದು. ಸದರಿ ಬಾಕಿಗಳ ಎಲ್ಲಾ ವಸೂಲಾತಿಗಳನ್ನು ಪಾವತಿಸದಿದ್ದಲ್ಲಿ, ಸ್ವತ್ತು ತೆರಿಗೆಯ ಬಾಕಿಗಳ ವಸೂಲಾತಿಗೆ ಅನ್ವಯಿಸುವಂತಹ ರೀತಿಯಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ವಸೂಲು ಮಾಡತಕ್ಕದ್ದು.

172. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನಗರ ಪಾಲಿಕೆಗಳ ಆಯುಕ್ತರು ಮತ್ತು ಅಧಿಕೃತಗೊಳಿಸಲಾದ ಅಧಿಕಾರಿಗಳು ಪ್ರತ್ಯೇಕ ಅಧಿಕಾರವ್ಯಾಪ್ತಿ ಹಾಗೂ ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಅಥವಾ ನಗರ ಪಾಲಿಕೆಗಳ ಆಯುಕ್ತರು ಅಥವಾ ಅಧಿಕೃತಗೊಳಿಸಲಾದ ಅಧಿಕಾರಿಗಳು, ಈ ಅಧಿನಿಯಮದಡಿ ಅಥವಾ ಅದರ ಮೂಲಕ ಅವರಿಗೆ ನಿರ್ಧರಿಸಲು, ನಿರ್ಣಯಿಸಲು ಅಥವಾ ವಿಲೇ ಮಾಡಲು ಅಧಿಕಾರ ನೀಡಲಾದ ಯಾವುದೇ ವಿಷಯವನ್ನು ನಿರ್ಧರಿಸುವ, ನಿರ್ಣಯಿಸುವ ಅಥವಾ ವಿಲೇ ಮಾಡುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು ಹಾಗೂ ಸಿವಿಲ್ ನ್ಯಾಯಾಲಯವು ಅಂಥ ಯಾವುದೇ ವಿಷಯಗಳಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸತಕ್ಕದ್ದಲ್ಲ.

(2) ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಪವಾದಗಳಿಗೆ ಒಳಪಟ್ಟು, ಯಾವುದೇ ಸಿವಿಲ್ ನ್ಯಾಯಾಲಯವು, ಈ ಕೆಳಗಿನ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರವ್ಯಾಪ್ತಿಯನ್ನು ಚಲಾಯಿಸತಕ್ಕದ್ದಲ್ಲ, ಎಂದರೆ:-

(ಎ) ಯಾವುದೇ ಕಚೇರಿಗೆ ಅಥವಾ ಇನ್ನಾವುದೇ ಸೇವೆಗಾಗಿ ಸಂಬಂಧಿಸಿದ ಯಾವುದೇ ಸ್ವತ್ತಿನ ಸಂಬಂಧಿಸಿದಂತೆ ಸರ್ಕಾರದ ವಿರುದ್ದದ ಕ್ಲೇಮುಗಳು;

(ಬಿ) ಈ ಮುಂದಿನವುಗಳಿಗೆ ಆಕ್ಷೇಪಣೆಗಳು, -

(i) ಈ ಅಧಿನಿಯಮದಡಿ ಉಪಬಂಧಿಸುವುದಕ್ಕಾಗಿ ಯಾವುದೇ ತೆರಿಗೆ ಅಥವಾ ಉಪಕರ ಅಥವಾ ಶುಲ್ಕ ಅಥವಾ ಬಡ್ಡಿ ಅಥವಾ ದಂಡಗಳ ಮೇಲಿನ ಮೊತ್ತ ಅಥವಾ ದರದ ಪ್ರಮಾಣ ಅಥವಾ ತೆರಿಗೆ ನಿರ್ಧರಣೆ ಅಥವಾ ತಗಾದೆ ಅಥವಾ ಸಂಗ್ರಹಣೆ ಅಥವಾ ಕಾರ್ಯವಿಧಾನಗಳು; ಅಥವಾ

(ii) ತೆರಿಗೆ ನಿರ್ಧರಣೆ ಅಥವಾ ವಿಧಿಸುವಿಕೆ ಅಥವಾ ವಸೂಲಾತಿಯ ವಿಧಾನಕ್ಕೆ ಅಥವಾ ಯಾವ ತತ್ವವನ್ನಾಧರಿಸಿ ಅಂಥ ತೆರಿಗೆ ನಿರ್ಧರಣೆ ಅಥವಾ ಲೆವಿಯನ್ನು ನಿಗದಿಪಡಿಸಲಾಗಿದೆಯೋ ಆ ತತ್ವ; ಅಥವಾ

(iii) ಸರ್ವೆ ಅಧಿಸೂಚನೆಯ ಸಿಂಧುತ್ವ ಅಥವಾ ಪರಿಣಾಮಕಾರಿತ್ವ ಹಾಗೂ ಅದರಡಿಯಲ್ಲಿ ಕೈಗೊಂಡ ಕ್ರಮ;

(ಸಿ) ಈ ಅಧಿನಿಯಮದಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿಯಲ್ಲಿ, ಸ್ವತ್ತು ತೆರಿಗೆಯ ಬಾಕಿಗಳ ವಸೂಲಾತಿಗಾಗಿ ನಿಯಮಿಸಿದ ಕಾರ್ಯವಿಧಾನಕ್ಕನುಸಾರವಾಗಿ ವಸೂಲು ಮಾಡಬಹುದಾದ ಸ್ವತ್ತು ತೆರಿಗೆ ಅಥವಾ ಶುಲ್ಕಗಳು ಅಥವಾ ಉಪಕರ ಅಥವಾ ಇತರೆ ತಗಾದೆಗಳ ನಗದೀಕರಣಕ್ಕಾಗಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದ ಕ್ಲೇಮುಗಳು ಅಥವಾ ಅದರಿಂದ ಉಂಟಾಗುವ ಕ್ಲೇಮುಗಳು;

(ಡಿ) ಸ್ವತ್ತು ತೆರಿಗೆಯ ಬಾಕಿಗಳ ವಸೂಲಾತಿಗಾಗಿ ಮಾರಾಟಗಳು ಅಥವಾ ಸ್ವತ್ತು ತೆರಿಗೆ ಬಾಕಿಗಳ ವಾಸೂಲಾತಿ ಕಾರ್ಯವಿಧಾನಕ್ಕನುಸಾರವಾಗಿ ವಸೂಲು ಮಾಡಬೇಕಾದ ನಿಯಮಿಸಲಾದ ಇತರೆ ಬಾಕಿಗಳನ್ನು ವಸೂಲು ಮಾಡಲು ಅಕ್ರಮ, ತಪ್ಪು ಅಥವಾ ಯಾವುದೇ ಇತರೆ ಕಾರಣಗಳಿಂದಾಗಿ ಮಾರಾಟವನ್ನು ರದ್ದುಗೊಳಿಸಿದ ಕ್ಲೇಮುಗಳು;

(ಇ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ನಗರ ಪಾಲಿಕೆಗಳ ವಿರುದ್ಧದ ಕ್ಲೇಮುಗಳು,-

(i) ಪ್ರಧಾನ ಹಿಡುವಳಿದಾರ, ಅಧೀನ ಹಿಡುವಳಿದಾರ, ಅಧಿಭೋಗದಾರ, ಅಡಮಾನದಾರ, ಭೂಮಾಲೀಕ ಅಥವಾ ಬಾಡಿಗೆದಾರನಾಗಿ ಸ್ವತ್ತು ತೆರಿಗೆಗೆ ಹೊಣೆಗಾರನಾದಂತೆ ಸರ್ವೆ ಅಥವಾ ನಗರ ಪಾಲಿಕೆ ಅಥವಾ ಪ್ರಾಧಿಕಾರದ ದಾಖಲೆಗಳಲ್ಲಿ ಅಥವಾ ಯಾವುದೇ ಭೂಮಿ ಅಥವಾ ಸ್ವತ್ತು ತೆರಿಗೆ ದಾಖಲೆಯಲ್ಲಿ ನಮೂದಿಸುವುದರ ಕುರಿತು; ಅಥವಾ

(ii) ಸ್ವತ್ತು ತೆರಿಗೆ ಅಥವಾ ಸರ್ವೆಯ ಯಾವುದೇ ದಾಖಲೆಯಲ್ಲಿ ಮಾಡಿದ ಯಾವುದೇ ನಮೂದಿನ ಕುರಿತು; ಅಥವಾ

(iii) ಬಿಟ್ಟುಬಿಡಲಾದ ಅಥವಾ ತಿದ್ದುಪಡಿ ಮಾಡಲಾದ ಯಾವುದೇ ಅಂಥ ನಮೂದಿನ ಕುರಿತು;

(ಎಫ್) ಈ ಅಧಿನಿಯಮದಡಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ, ಯಾವುದೇ ಭೂಮಿ ಅಥವಾ ಸ್ವತ್ತು ಅಥವಾ ಕಟ್ಟಡವನ್ನು ಭಾಗ ಮಾಡಿರುವುದರ ಮೇಲೆ ಸ್ವತ್ತು ತೆರಿಗೆ ವಿತರಣೆ ಅಥವಾ ಸ್ವತ್ತು ತೆರಿಗೆಯ ಹಂಚಿಕೆ;

(ಜಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗಳ ವಿರುದ್ಧದ ಕ್ಲೇಮುಗಳು,-

(i) ಸ್ವತ್ತು ತೆರಿಗೆಯ ಪಾವತಿಯಿಂದ ಭೂಮಿ ಅಥವಾ ಸ್ವತ್ತನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಮುಕ್ತವಾಗಿ ಮಾಡಲು ಕುರಿತು;

(ii) ಸ್ವತ್ತು ತೆರಿಗೆಯ ಮೇಲೆ ವಿಧಿಸಲಾದ ಅಥವಾ ಸಂದಾಯ ಮಾಡಬಹುದಾದ ಪಾವತಿಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ; ಅಥವಾ

(iii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಡಿ, ಪಾವತಿಸಬೇಕಾದ ಯಾವುದೇ ಉಪಕರ ಅಥವಾ ದರವನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ;

(iv) ಪ್ರಾಧಿಕಾರ ಅಥವಾ ನಗರ ಪಾಲಿಕೆಗಳಿಗೆ ಸಂಬಂಧಿಸಿದ ಪಾಳು ಅಥವಾ ಖಾಲಿ ಭೂಮಿಯ ಅಧಿಭೋಗಕ್ಕೆ ಸಂಬಂಧಿಸಿದಂತೆ;

(ಎಚ್) ಈ ಅಧಿನಿಯಮದಡಿ ಅಥವಾ ತತ್ಕಾಲದಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿಯಲ್ಲಿ, ಗೊತ್ತುಪಡಿಸಲಾದ ಗಡಿಗಳಿಗೆ ಸಂಬಂಧಿಸಿದಂತೆ ಅಥವಾ ಗಡಿ ಗುರುತುಗಳು ಅಥವಾ ಸರ್ವೇ ಗುರುತುಗಳಿಗೆ ಸಂಬಂಧಿಸಿದಂತೆ ಯಾವುದೇ ಅಂಥ ಕಾನೂನಿನಡಿ ಸಕ್ಷಮ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶವನ್ನು ರದ್ದುಗೊಳಿಸುವ ಕುರಿತಾದ ಕ್ಲೇಮುಗಳು.

173. ಕೆಲವು ದಾವೆಗಳ ಉಳಿಸುವಿಕೆಗಳು.- 177ನೇ ಪ್ರಕರಣದಲ್ಲಿರುವುದು ಯಾವುದೂ, ಸಿವಿಲ್ ನ್ಯಾಯಾಲಯಗಳು ಈ ಕೆಳಗಿನ ಯಾವುದೇ ದಾವೆಗಳನ್ನು ಪುರಸ್ಕರಿಸುವುದರಿಂದ ತಡೆಯತಕ್ಕದ್ದಲ್ಲ, ಎಂದರೆ;

(ಎ) ಯಾವುದೇ ಸ್ವತ್ತು ತೆರಿಗೆ ಅಥವಾ ಇತರೆ ದಾಖಲೆಗಳಲ್ಲಿನ ಯಾವುದೇ ನಮೂದಿನಿಂದ ಅದರ ಮೇಲೆ ಪರಿಣಾಮವನ್ನುಂಟು ಮಾಡಬಹುದಾದರೂ ಸಹ ಯಾವುದೇ ಖಾಸಗಿ ಹಕ್ಕನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಖಾಸಗೀ ಪಕ್ಷಕಾರರ ನಡುವಿನ ದಾವೆಗಳು;

(ಬಿ) ಯಾವುದೇ ಭೂಮಿ ಅಥವಾ ಸ್ವತ್ತಿನ ಸ್ವಾಧೀನಕ್ಕಾಗಿ ಖಾಸಗೀ ಪಕ್ಷಕಾರ ನಡುವಿನ ದಾವೆಗಳು.

174. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗಳ ವಿರುದ್ಧ ದಾವೆ ಅಥವಾ ಇತರೆ ವ್ಯವಹರಣೆ ಹೂಡುವುದಕ್ಕೂ ಮುನ್ನ ಅಪೀಲಿನ ಹಕ್ಕನ್ನು ವಾದಿಯು ಕಳೆದುಕೊಳ್ಳುವುದು.- ವ್ಯಾಜ್ಯ ಅಥವಾ ಇತರ ವ್ಯವಹರಣೆಯನ್ನು ಹೂಡುವುದಕ್ಕೆ ಮುಂಚೆ, ವಾದಿಯು ವಾದವನ್ನು ಹಾಜರುಪಡಿಸಲು ಸಾಧ್ಯವಾಗಬಹುದಾದಂಥ ವಾದ ಅಥವಾ ವ್ಯವಹರಣೆಯನ್ನು ಹೂಡುವುದಕ್ಕಾಗಿ ಅನುಮತಿಸಲಾದ ಕಾಲಮಿತಿಯ ಅವಧಿಯೊಳಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಂಥ ಅಪೀಲುಗಳನ್ನು ದಾಖಲಿಸಲು ಆತನಿಗೆ ಅನುಮತಿಸಿರುವುದು ಸಾಬೀತುಪಡಿಸಿದ ಹೊರತು, ಗ್ರೇಟರ್ ಬೆಂಗಳೂರು ಪ್ರದೇಶದೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ನಗರ ಪಾಲಿಕೆಗಳು ಅಥವಾ ಯಾರೇ ಅದರ ಅಧಿಕಾರಿಯ ಯಾವುದೇ ಕಾರ್ಯ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ನಗರ ಪಾಲಿಕೆಗಳ ವಿರುದ್ಧ ಹೂಡುವ ಯಾವುದೇ ದಾವೆ ಅಥವಾ ಇತರೆ ವ್ಯವಹರಣೆಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

175. ಅಧಿಕಾರ ವ್ಯಾಪ್ತಿಯ ಪ್ರಶ್ನೆಗಳನ್ನು ಉಚ್ಚನ್ಯಾಯಾಲಯಕ್ಕೆ ಉಲ್ಲೇಖಿಸುವ ಸಿವಿಲ್ ನ್ಯಾಯಾಲಯದ ಅಧಿಕಾರ.- (1) ಸಿವಿಲ್ ನ್ಯಾಯಾಲಯದಲ್ಲಿ ಹೂಡಲಾದ ಯಾವುದೇ ವ್ಯಾಜ್ಯ ಅಥವಾ ಸಲ್ಲಿಸಲಾದ ಯಾವುದೇ ಅಪೀಲಿನಲ್ಲಿ, ನ್ಯಾಯಾಧೀಶರಿಗೆ ವ್ಯಾಜ್ಯ ಅಥವಾ ಅಪೀಲನ್ನು ಪುರಸ್ಕರಿಸುವುದರಿಂದ ಅಥವಾ ವಿಲೇ ಮಾಡುವುದರಿಂದ ಈ ಅಧ್ಯಾಯಕ್ಕೆ ಅಡ್ಡಿಯಾಗುವುದಾಗಿ ಅವರು ಅನುಮಾನಪಟ್ಟರೆ, ಅವರು ವಿಷಯವನ್ನು ಉಚ್ಚನ್ಯಾಯಾಲಯಕ್ಕೆ ಉಲ್ಲೇಖಿಸಬಹುದು.

(2) ನ್ಯಾಯಾಧೀಶರು ಮಾಡಿದ ಉಲ್ಲೇಖಕ್ಕೆ ಉಚ್ಚನ್ಯಾಯಾಲಯವು, ಮೊಕದ್ದಮೆಯನ್ನು ಮುಂದುವರೆಸಲು ಅಥವಾ ವಾದಪತ್ರವನ್ನು ಹಿಂದಿರುಗಿಸಲು ಆದೇಶ ಮಾಡಬಹುದು.

(3) ಇದರಡಿಯಲ್ಲಿನ ಪ್ರತಿಯೊಂದು ಉಲ್ಲೇಖವನ್ನು ಉಚ್ಚನ್ಯಾಯಾಲಯದ ಇಬ್ಬರು ನ್ಯಾಯಾಧೀಶರನ್ನೊಳಗೊಂಡಿರುವ ಪೀಠದಿಂದ ವಿಚಾರಣೆಯನ್ನು ನಡೆಸತಕ್ಕದ್ದು.

(4) ಯಾವುದೇ ಅಂಥ ಉಲ್ಲೇಖದ ಮೇಲೆ ಉಚ್ಚ ನ್ಯಾಯಾಲಯದ ಆದೇಶವು ಯಾವುದಾದರೂ ಇದ್ದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗುವುದಕ್ಕೆ ಒಳಪಟ್ಟಿರತಕ್ಕದ್ದು, ಅದು ಅಂತಿಮವಾಗಿರತಕ್ಕದ್ದು:

ಪರಂತು, ಅಂಥ ಉಲ್ಲೇಖದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಸಂದಾಯ ಮಾಡಲು ಹೊಣೆಯಾಗಿರುವ ಸ್ವತ್ತು ತೆರಿಗೆ ಅಥವಾ ಉಪಕರಗಳು ಅಥವಾ ಶುಲ್ಕಗಳು ಅಥವಾ ಇತರೆ ಬಾಕಿಗಳು ಸಂದಾಯ ಮಾಡುವುದನ್ನು ಮುಂದುವರೆಯತಕ್ಕದ್ದು ಹಾಗೂ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯ ಪ್ರಶ್ನೆಯನ್ನು ಉಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸುವಾಗ, ಆ ಬಗ್ಗೆ ಯಾವುದೇ ತಡೆಯಾಜ್ಞೆ ಅಥವಾ ಮಧ್ಯಂತರ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ಅಧ್ಯಾಯ XV
ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

176. ನಗರ ಪಾಲಿಕೆ ನಿಧಿ.- (1) ನಗರ ಪಾಲಿಕೆಯು, ತನ್ನ ಎಲ್ಲಾ ಕಡ್ಡಾಯ ಹಾಗೂ ಆಜ್ಞಾಪಕ ಪ್ರಕಾರ್ಯಗಳನ್ನು ಕೈಗೊಳ್ಳಲು ಹಣಕಾಸಿನ ದೃಷ್ಟಿಯಿಂದ ಸಮರ್ಥವಾದ ರೀತಿಯಲ್ಲಿ ರಚನೆಯಾಗತಕ್ಕದ್ದು.

(2) ಯಾವುದೇ ನಗರ ಪಾಲಿಕೆಗಳು ತಮ್ಮ ಕಡ್ಡಾಯ ಮತ್ತು ಆಜ್ಞಾಪಕ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಮತ್ತು ಸಿಬ್ಬಂದಿ ವೆಚ್ಚವನ್ನು ಭರಿಸುವುದಕ್ಕೆ ಸ್ವತ: ತಾನೇ ಸಾಕಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸುವ ಸ್ಥಿತಿಯಲ್ಲಿಲ್ಲದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು, ಅಂತಹ ಸಂಪನ್ಮೂಲದ ಕೊರತೆಯನ್ನು ನೀಗಿಸಲು ಅಂತಹ ನಗರ ಪಾಲಿಕೆಗೆ ಸಹಾಯಾನುಧಾನವನ್ನು ಒದಗಿಸತಕ್ಕದ್ದು.

(3) ಭಾರತ ಸಂವಿಧಾನದ 243ವೈ ಅನುಚ್ಛೇಧದ ಅಡಿಯಲ್ಲಿ ರಾಜ್ಯ ಹಣಕಾಸು ಆಯೋಗವು, ಪ್ರತಿಯೊಂದು ನಗರ ಪಾಲಿಕೆಗಳ ರಾಜಸ್ವದ ಮೂಲವನ್ನು ಮತ್ತು ವೆಚ್ಚಗಳನ್ನು ಮೌಲ್ಯಮಾಪನ ಮಾಡಿದ ತರುವಾಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ನಗರ ಪಾಲಿಕೆಗಳಿಗೆ ಅಂತಹ ಸಹಾಯಾನುದಾನವನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ಶಿಪಾರಸು ಮಾಡತಕ್ಕದ್ದು. ರಾಜ್ಯ ಹಣಕಾಸು ಆಯೋಗವು, ದರಗಳು ಮತ್ತು ಸಂಗ್ರಹಣಾ ಪರಿಣಾಮಕಾರಿತ್ವದೊಂದಿಗೆ ಪ್ರತಿಯೊಂದು ನಗರ ಪಾಲಿಕೆಯಲ್ಲಿ ಸಂಗ್ರಹಿಸಬಹುದಾದ ಸಂಭಾವ್ಯ ರಾಜಸ್ವದ ಮೂಲಗಳನ್ನು ಸಹ ಗುರುತಿಸತಕ್ಕದ್ದು, ಅಲ್ಲದೆ, ರಾಜಸ್ವದ ಸಂಗ್ರಹಣೆಗಾಗಿ ವಾರ್ಡುಗಳಿಗೆ ಪ್ರೋತ್ಸಾಹ ಧನವನ್ನು ನೀಡತಕ್ಕದ್ದು.

(4) ಈ ಅಧಿನಿಯಮದಡಿ ರಚಿಸಲಾದ ಪ್ರತಿಯೊಂದು ನಗರ ಪಾಲಿಕೆಗಳಿಗಾಗಿ ನಗರ ಪಾಲಿಕೆ ನಿಧಿಯು ಇರತಕ್ಕದ್ದು, ಅದು ರಾಜ್ಯ ಸರ್ಕಾರವು ಒದಗಿಸಿದ ಸಹಾಯಾನುದಾನವನ್ನು ಒಳಗೊಂಡಂತೆ ರಾಜಸ್ವದ ಎಲ್ಲಾ ಮೂಲಗಳಿಂದ ಹಣವನ್ನು ಸ್ವೀಕರಿಸುತ್ತದೆ.

(5) ಈ ಅಧಿನಿಯಮದ ಉಪಬಂಧಗಳ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅನುಸಾರವಾಗಿ ನಗರ ಪಾಲಿಕೆ ನಿಧಿಯನ್ನು ಹೊಂದಿರತಕ್ಕದ್ದು, ವಿನಿಯೋಗಿಸತಕ್ಕದ್ದು ಮತ್ತು ವಿಲೇವಾರಿ ಮಾಡತಕ್ಕದ್ದು.

(6) ಪ್ರತಿಯೊಂದು ಲೆಕ್ಕಶೀರ್ಷಿಕೆಗಳನ್ನು ರಾಜಸ್ವ ಖಾತೆ ಮತ್ತು ಬಂಡವಾಳ ಖಾತೆ ಎಂಬುದಾಗಿ ಸೂಕ್ತವಾಗಿ ವರ್ಗೀಕರಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಎಲ್ಲಾ ಸ್ವೀಕೃತಿಗಳ ಬಾಬ್ತುಗಳನ್ನು ಅಂತಹ ರಾಜಸ್ವ ಖಾತೆ ಅಥವಾ ಬಂಡವಾಳ ಖಾತೆಗಳ ಅಡಿಯಲ್ಲಿ ಯುಕ್ತವಾಗಿ ಇಡತಕ್ಕದ್ದು.

(7) ನಗರ ಪಾಲಿಕೆ ನಿಧಿಯಿಂದಾದ ವೆಚ್ಚವನ್ನು, ಸಂದರ್ಭಾನುಸಾರ ಅಂಥ ರಾಜಸ್ವ ಲೆಕ್ಕಪತ್ರ ಅಥವಾ ಬಂಡವಾಳ ಲೆಕ್ಕಪತ್ರಗಳಡಿ ಸಮರ್ಪಕವಾಗಿ ಇಡತಕ್ಕದ್ದು.

(8) ನಗರ ಪಾಲಿಕೆಯು, ಭಾರತೀಯ ಚಾರ್ಟರ್ಡ್ ಅಕೌಂಟ್ಸ್ ಸಂಸ್ಥೆಯಿಂದ ಶಿಫಾರಸು ಮಾಡಲಾದ ಲೆಕ್ಕಪತ್ರದ ಮಾನದಂಡಗಳನುಸಾರವಾಗಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ದ್ವಿ-ನಮೂದು ಲೆಕ್ಕಪದ್ಧತಿಯನ್ನು ಬಳಸುವ ಮೂಲಕ ಲೆಕ್ಕಪತ್ರಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

177. ನಗರ ಪಾಲಿಕೆ ನಿಧಿಯ ವಿನಿಯೋಗ.- (1) ನಗರ ಪಾಲಿಕೆ ನಿಧಿಗೆ ಕಾಲಕಾಲಕ್ಕೆ ಜಮೆಯಾದ ಹಣಗಳನ್ನು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ಉಪವಿಧಿಗಳ ಉದ್ದೇಶಗಳ ಈಡೇರಿಕೆಗಾಗಿ ಅವಶ್ಯವಾದ ಎಲ್ಲಾ ಮೊತ್ತಗಳು, ಖರ್ಚುಗಳು ಮತ್ತು ವೆಚ್ಚಗಳ ಪಾವತಿಗಾಗಿ ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003 (2003ರ ಕರ್ನಾಟಕ ಅಧಿನಿಯಮ 41)ರ ಅಥವಾ ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗನುಸಾರವಾಗಿ ನಿಯಮಿಸಲಾದ ರೀತಿಯಲ್ಲಿ ನಗರ ಪಾಲಿಕೆ ನಿಧಿಯಿಂದ ಸಂದಾಯ ಮಾಡಬೇಕಾದ ಎಲ್ಲ ಮೊತ್ತಗಳ ಪಾವತಿಗಾಗಿ ವಿನಿಯೋಗಿಸತಕ್ಕದ್ದು.

(2) ಸರ್ಕಾರವು, ನಗರ ಪಾಲಿಕೆಯ ನಿಧಿಯ ವಿನಿಯೋಗ, ಲೆಕ್ಕಪತ್ರ ಪದ್ಧತಿ, ಹಣಕಾಸಿನ ದಸ್ತಾವೇಜುಗಳ ಪ್ರಕಟಣೆಗಾಗಿನ ಕಾರ್ಯವಿಧಾನ ಹಾಗೂ ದಕ್ಷ ಹಣಕಾಸು ನಿರ್ವಹಣೆಗಾಗಿ ಅಂಥ ಇತರೆ ಕಾರ್ಯವಿಧಾನಗಳನ್ನು ನಿಯಮಿಸತಕ್ಕದ್ದು.

178. ನಗರ ಸಾರಿಗೆ ನಿಧಿ. - (1) ನಗರ ಸಾರಿಗೆ ನಿಧಿ ಎಂದು ಕರೆಯುವ ಒಂದು ನಿಧಿಯನ್ನು ರಚಿಸತಕ್ಕದ್ದು ಮತ್ತು ಇದು,-

(ಎ) ಈ ಅಧಿನಿಯಮದ ಅಡಿಯಲ್ಲಿ ಸಂಗ್ರಹಿಸಿದ ನಗರ ಸಾರಿಗೆ ಉಪಕರ;

(ಬಿ) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಅನುದಾನಗಳು ಯಾವುವಾದರೂ ಇದ್ದಲ್ಲಿ; ಮತ್ತು

(ಸಿ) ಈ ನಿಧಿಯ ಆದಾಯದ ಯಾವುದೇ ಇತರ ಸ್ವೀಕೃತಿಗಳು, ಬಡ್ಡಿ ಅಥವಾ ಯಾವುದೇ ಇತರ ರೂಪದ ಆದಾಯ,

- ಇವುಗಳನ್ನು ಒಳಗೊಂಡಿರತಕ್ಕದ್ದು.

(2) ನಗರ ಸಾರಿಗೆ ನಿಧಿಯನ್ನು, -

(ಎ) ನಗರ ಸಾರಿಗೆ ಮತ್ತು ಅವುಗಳ ಸಮಗ್ರ ನಿರ್ವಹಣೆಗೆ ಸಂಬಂಧಿಸಿದಂತೆ ಯೋಜನೆಯನ್ನು ಸಮನ್ವಯಗೊಳಿಸಲು, ಪ್ರಾಜೆಕ್ಟ್ ಗಳನ್ನು ರೂಪಿಸಲು ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ;

(ಬಿ) ಸಾರ್ವಜನಿಕ ಸಾರಿಗೆ ಬಳಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಅಧ್ಯಯನ ಮಾಡಲು, ಸಂಶೋಧನೆ ನಡೆಸಲು, ಉತ್ತೇಜಿಸಲು ಮತ್ತು ಪ್ರಚಾರವನ್ನು ಕೈಗೊಳ್ಳುವುದಕ್ಕಾಗಿ;

(ಸಿ) ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಸಾಮರ್ಥ್ಯ ವರ್ಧನೆಗಾಗಿ; ಮತ್ತು

(ಡಿ) ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಯಾವುದೇ ಇತರ ಉದ್ದೇಶಗಳಿಗಾಗಿ,

- ಬಳಸಿಕೊಳ್ಳತಕ್ಕದ್ದು.

(3) ನಗರ ಭೂ ಸಾರಿಗೆ ನಿರ್ದೇಶನಾಲಯವು, (1) ನೇ ಉಪಪ್ರಕರಣದ ಅಡಿಯಲ್ಲಿ ರಚಿತವಾದ ನಿಧಿಯನ್ನು ನಿರ್ವಹಿಸುವ ಆಡಳಿತ ಕಚೇರಿಯಾಗಿರತಕ್ಕದ್ದು.

(4) ನಗರ ಸಾರಿಗೆ ನಿಧಿಯಿಂದ ಬರುವ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಲಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಇಡತಕ್ಕದ್ದು.

(5) ಸರ್ಕಾರವು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಪ್ರಧಾನ ನಿಯಂತ್ರಕರ ಮೇಲ್ವೀಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಗರ ಸಾರಿಗೆ ನಿಧಿಯ ಲೆಕ್ಕಪರಿಶೋಧನೆಯನ್ನು ನಡೆಸಲು ಲೆಕ್ಕಪರಿಶೋಧಕರನ್ನಾಗಿ ತನ್ನ ಒಬ್ಬ ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಇವರು ನಗರ ಸಾರಿಗೆ ನಿಧಿಗೆ ಸಂಬಂಧಿಸಿದಂತೆ ಎಲ್ಲಾ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಎಲ್ಲಾ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ನಗರ ಭೂ ಸಾರಿಗೆ ನಿರ್ದೇಶಕ ಅಥವಾ ಸಂದರ್ಭಾನುಸಾರ, ಪೌರಾಡಳಿತದ ನಿರ್ದೇಶಕ ಅಥವಾ ನಗರ ಪಾಲಿಕೆಯ ಆಯುಕ್ತರು ಅಥವಾ ನಗರ ಪಾಲಿಕೆಯ ಯಾರೇ ಅಧಿಕಾರಿಯು, ತಾನು ಅಗತ್ಯಪಡಿಸಬಹುದಾದ ಯಾವುದೇ ಸ್ವೀಕೃತಿ ಅಥವಾ ವೆಚ್ಚಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಆತನಿಗೆ ಒದಗಿಸತಕ್ಕದ್ದು.

(6) ಆಯುಕ್ತರು, ನಿಧಿಯ ನಿರ್ವಹಣೆಯ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಲೆಕ್ಕಪರಿಶೋಧನೆ ಮತ್ತು ಇದಕ್ಕೆ ಸಂಬಂಧಿಸಿದ ಅನುಸರಣಾ ವರದಿಯನ್ನು ಸಹ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

179. **ನಗರ ಪಾಲಿಕೆಯಿಂದ ವೆಚ್ಚಕ್ಕೆ ವಂತಿಗೆ ನೀಡಿಕೆ**.- (1) ನಿಯಮಗಳ ಮೂಲಕ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ, ಸರ್ಕಾರವು ಅಥವಾ ನಗರ ಪಾಲಿಕೆಯು ಭರಿಸಿದ ವೆಚ್ಚವು ನಗರದ ನಿವಾಸಿಗಳ ಪ್ರಯೋಜನಕ್ಕಾಗಿ ಭರಿಸಿದಂತಹುದ್ದಾಗಿದ್ದರೆ, ಅಂಥ ವೆಚ್ಚಕ್ಕಾಗಿ ನಗರ ಪಾಲಿಕೆಯು ವಂತಿಗೆಯನ್ನು ನೀಡಬಹುದು.

(2) ಉಪ-ಪ್ರಕರಣ (1) ರ ಅಡಿಯಲ್ಲಿ ಉಲ್ಲೇಖಿಸಿದ ಯಾವುದೇ ವಂತಿಗೆಯನ್ನು ಏಕೆ ನೀಡಬಾರದು ಎಂಬ ನಿರ್ದೇಶನವನ್ನು ಒಳಗೊಂಡ ಆದೇಶವನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳಿಗೆ ಕಡಿಮೆಯಲ್ಲದ, ಈ ಕುರಿತು ಸರ್ಕಾರವು ನಿಗದಿಪಡಿಸಿದ ಅವಧಿಯೊಳಗಾಗಿ ಕಾರಣ ತೋರಿಸಲು ನಗರ ಪಾಲಿಕೆಗೆ ಸರ್ಕಾರವು ನಿರ್ದೇಶನವನ್ನು ನೀಡಬಹುದು.

(3) ಸರ್ಕಾರಕ್ಕೆ ಮನದಟ್ಟಾಗುವಂತೆ ಸದರಿ ಅವಧಿಯೊಳಗೆ ಕಾರಣ ತೋರಿಸಲು ನಗರ ಪಾಲಿಕೆಯು ತಪ್ಪಿದರೆ, ಸರ್ಕಾರವು ಅದು ಹೆಸರಿಸತಕ್ಕಂಥ ವಂತಿಗೆಯನ್ನು ನೀಡುವಂತೆ ನಿರ್ದೇಶಿಸಬಹುದು ಮತ್ತು ಅದಕ್ಕನುಸಾರವಾಗಿ ಅದನ್ನು ಸಂದಾಯ ಮಾಡತಕ್ಕದ್ದು.

180. ಸರ್ಕಾರದಿಂದ ಸಾಲವಾಗಿ ಪಡೆದ ಹಣದ ವಸೂಲಿಗಾಗಿ ನಗರ ಪಾಲಿಕೆಯ ನಿಧಿಯ ಜಪ್ತಿ.- (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ನಂತರ ನಗರ ಪಾಲಿಕೆಯು ಸರ್ಕಾರದಿಂದ ಸಾಲವಾಗಿ ಪಡೆದ ಯಾವುದೇ ಹಣವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ಬಡ್ಡಿಯನ್ನು ಅಥವಾ ವೆಚ್ಚಗಳನ್ನು ಸಾಲದ ಷರತ್ತುಗಳಿಗೆ ಅನುಸಾರವಾಗಿ ಮರುಸಂದಾಯ ಮಾಡದಿದ್ದರೆ, ಸರ್ಕಾರವು ನಗರ ಪಾಲಿಕೆಯ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಜಪ್ತಿ ಮಾಡಬಹುದು.

(2) ಅಂಥ ಜಪ್ತಿಯ ನಂತರ, ಜಪ್ತಿ ಮಾಡಿದ ನಿಧಿಯ ಬಗ್ಗೆ ಸರ್ಕಾರವು ಈ ಸಂಬಂಧವಾಗಿ ನೇಮಿಸಿದ ಅಧಿಕಾರಿಯನ್ನು ಹೊರತುಪಡಿಸಿ, ಬೇರೆ ಯಾರೇ ವ್ಯಕ್ತಿಯು, ಜಪ್ತಿ ಮಾಡಿದ ನಿಧಿಯೊಂದಿಗೆ ಯಾವುದೇ ರೀತಿಯಲ್ಲಿ ವ್ಯವಹರಿಸತಕ್ಕದ್ದಲ್ಲ, ಆದರೆ ಅಂಥ ಜಪ್ತಿಯನ್ನು ಮಾಡದ್ದಿದ್ದರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪೌರ ಪ್ರಾಧಿಕಾರ, ಅಧಿಕಾರಿ ಅಥವಾ ನೌಕರನು ಮಾಡಬಹುದಾಗಿದ್ದ ಎಲ್ಲಾ ಕಾರ್ಯಗಳನ್ನು ಅಂತಹ ಅಧಿಕಾರಿಯು ಮಾಡಬಹುದು ಮತ್ತು ಬಾಕಿಗಳನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಮತ್ತು ಬಾಕಿ ಇರುವ ಎಲ್ಲಾ ಬಡ್ಡಿಯನ್ನು ಮತ್ತು ಜಪ್ತಿ ಮತ್ತು ತರುವಾಯದ ವ್ಯವಹರಣೆಗಳಿಂದ ಉಂಟಾದ ಎಲ್ಲಾ ವೆಚ್ಚಗಳನ್ನು ತೀರಿಸಲು ನಿಧಿಯ ಆದಾಯಗಳನ್ನು ವಿನಿಯೋಗಿಸಬಹುದು:

ಪರಂತು, ಯಾವುದೇ ಅಂಥ ಜಪ್ತಿಯು, ಯಾವ ಋಣಕ್ಕಾಗಿ ಜಪ್ತಿ ಮಾಡಿದ ನಿಧಿಗೆ ಈ ಹಿಂದೆ ಕಾನೂನಿಗನುಸಾರವಾಗಿ ಋಣಭಾರ ಹೊರಿಸಲಾಗಿತ್ತೋ, ಆ ಯಾವುದೇ ಋಣವನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅದಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ ಆದರೆ ಅಂಥ ಎಲ್ಲ ಹಿಂದಿನ ಋಣಭಾರಗಳನ್ನು ಸರ್ಕಾರಕ್ಕೆ ಬಾಕಿಯಿರುವ ಋಣಗಳನ್ನು ತೀರಿಸುವುದಕ್ಕೆ ಆದಾಯದ ಯಾವುದೇ ಭಾಗವನ್ನು ವಿನಿಯೋಗಿಸುವುದಕ್ಕೆ ಮುಂಚೆ ನಿಧಿಯ ಆದಾಯದಿಂದ ಸಂದಾಯ ಮಾಡತಕ್ಕದ್ದು.

181. ನಗರ ಪಾಲಿಕೆಯ ಆಯವ್ಯಯವನ್ನು ಸಿದ್ಧಪಡಿಸುವುದು.- (1) ಪ್ರತಿಯೊಂದು ಸಮಿತಿಯು, ಒಂದು ನಿರ್ದಿಷ್ಟ ವಲಯದೊಳಗೆ ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನದ ಉದ್ದೇಶಕ್ಕಾಗಿ ಚಾಲ್ತಿಯಲ್ಲಿರುವ ಯೋಜನೆಗಳ ಅನುಷ್ಠಾನ, ಬಂಡವಾಳ ವೆಚ್ಚಗಳ ಪಟ್ಟಿ, ಅಗತ್ಯ ಮಾನವ ಸಂಪನ್ಮೂಲ ಮತ್ತು ಅಂಥ ಇತರೆ ವೆಚ್ಚಗಳಿಗಾಗಿ ಅಗತ್ಯ ಪೂರಕ ಆಯವ್ಯಯವನ್ನು ಒಳಗೊಂಡಿರತಕ್ಕ ಆಯವ್ಯಯ ಅಂದಾಜನ್ನು ಮಹಾಪೌರನಿಗೆ ಸಲ್ಲಿಸತಕ್ಕದ್ದು.

(2) ಸಮಿತಿಯು, ವಾರ್ಡ್ ಸಮಿತಿಗಳೊಂದಿಗೆ ಸಮಾಲೋಚಿಸಿದ ಮತ್ತು ಅದರ ಶಿಫಾರಸ್ಸುಗಳನ್ನು ಪರಿಗಣಿಸಿದ ಹೊರತು ಮಹಾಪೌರನಿಗೆ ಆಯವ್ಯಯ ಅಂದಾಜನ್ನು ಸಲ್ಲಿಸತಕ್ಕದ್ದಲ್ಲ.

(3) ವಾರ್ಡ್ ಸಮಿತಿಯು, ಸಮಿತಿಗಳಿಗೆ ಅದರ ಶಿಫಾರಸುಗಳನ್ನು ಮಾಡುವ ಮೊದಲು ಅವಶ್ಯವಿರುವ ಅಂಥ ಸಾರ್ವಜನಿಕ ಸಮಾಲೋಚನೆಗಳನ್ನು ಸಂಘಟಿಸತಕ್ಕದ್ದು.

(4) ಸಮಿತಿಯ ಆಯವ್ಯಯ ಅಂದಾಜಿನ ನಮೂನೆ ಮತ್ತು ಸಲ್ಲಿಸುವಿಕೆಯ ಪ್ರಕ್ರಿಯೆಯೂ ನಿರ್ದಿಷ್ಟಪಡಿಸತಕ್ಕದ್ದು.

(5) ಆಯುಕ್ತರು, ಎಲ್ಲ ಸಮಿತಿಗಳ ಆಯವ್ಯಯ ಅಂದಾಜನ್ನು ಪರಿಗಣಿಸಿದ ಮೇಲೆ ನಗರ ಪಾಲಿಕೆಯ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು.

(6) ಆಯವ್ಯಯದ ಅಂದಾಜು ಈ ಮುಂದಿನವುಗಳನ್ನು ನಿರೂಪಿಸತಕ್ಕದು,-

(ಎ) ಹಿಂದಿನ ಹಣಕಾಸು ವರ್ಷಗಳ ಸ್ವೀಕೃತಿಗಳು ಮತ್ತು ಪಾವತಿಗಳು ಹಾಗೂ ಮುಂಬರುವ ಆರ್ಥಿಕ ವರ್ಷದ ನಿರೀಕ್ಷಿತ ಸ್ವೀಕೃತಿಗಳು ಮತ್ತು ಪಾವತಿಗಳು;

(ಬಿ) ಮಧ್ಯಮಾವಧಿ ವಿತ್ತೀಯ ಯೋಜನೆಯ ಅನುಪಾಲನೆ;

(ಸಿ) ನಿಕಟ ಮುಂದಿನ ಹಣಕಾಸು ವರ್ಷದಲ್ಲಿ ನಗರ ಪಾಲಿಕೆಯು ವಿಧಿಸುವ ವಿವಿಧ ತೆರಿಗೆಗಳು, ಅಧಿಭಾರಗಳು, ಉಪಕರ ಮತ್ತು ಶುಲ್ಕಗಳ ದರಗಳು; ಮತ್ತು

(ಡಿ) ಪ್ರತಿ ಸಮಿತಿಗೆ ಹಂಚಿಕೆಯಾದ ಹಣದ ಮೊತ್ತದಲ್ಲಿ ಮತ್ತು ಅಂಥ ಮೊತ್ತಗಳ ಬಳಕೆಯ ಆಧಾರವನ್ನು ಸಾಲವಾಗಿ ಎತ್ತಬೇಕಾದ ಹಣದ ಮೊತ್ತ;

(7) ಆಯವ್ಯಯವನ್ನು ನಿಯಮಿಸಲಾದ ಅಂಥ ನಮೂನೆ ಮತ್ತು ಅಂಥ ವಿಧಾನ ಹಾಗೂ ಉಪಬಂಧಿಸಲಾದ ಅಂಥ ವಿಷಯಗಳಲ್ಲಿ ಸಿದ್ಧಪಡಿಸತಕ್ಕದ್ದು, ಪ್ರಸ್ತುತಪಡಿಸತಕ್ಕದ್ದು ಮತ್ತು ಅಳವಡಿಸಿಕೊಳ್ಳತಕ್ಕದ್ದು.

182. ತೆರಿಗೆ ನಿರ್ಧರಣೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯು ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವುದು.-(1) ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯು ಜನವರಿ ಹದಿನೈದನೇ ದಿನಾಂಕದಂದು ಅಥವಾ ಆ ತರುವಾಯ ಆದಷ್ಟು ಬೇಗನೆ ಆಯುಕ್ತರ ಅಂದಾಜುಗಳನ್ನು ಮತ್ತು ಪ್ರಸ್ತಾವನೆಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಇತರ ಸ್ಥಾಯಿ ಸಮಿತಿಗಳ ಪ್ರಸ್ತಾವನೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪಡೆದುಕೊಂಡ ತರುವಾಯ, ಹಾಗೂ ತಾನು ಸೂಕ್ತವೆಂದು ಭಾವಿಸುವಂಥ ಅಗತ್ಯವಿರುವ ವಿವರವಾದ ಮಾಹಿತಿ ಯಾವುದಾದರೂ ಇದ್ದರೆ ಅದನ್ನು ಆಯುಕ್ತರಿಂದ ಪಡೆದ ತರುವಾಯ ಮತ್ತು ಈ ಅಧಿನಿಯಮದ ಎಲ್ಲಾ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಎಲ್ಲವುಗಳ ಆಧಾರದ ಮೇಲೆ, ತಾನು ಸೂಕ್ತವೆಂದು ಭಾವಿಸತಕ್ಕಂಥ ಅದರಲ್ಲಿ ಅಥವಾ ಅದಕ್ಕೆ ಮಾಡುವ ಮಾರ್ಪಾಡುಗಳು ಮತ್ತು ಸೇರ್ಪಡೆಗಳಿಗೆ ಒಳಪಟ್ಟು ಮುಂಬರುವ ವರ್ಷಕ್ಕಾಗಿ ನಗರ ಪಾಲಿಕೆಯ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು.

(2) ಅಂಥ ಆಯವ್ಯಯ ಅಂದಾಜಿನಲ್ಲಿ ಸ್ಥಾಯಿ ಸಮಿತಿಯು,-

(ಎ) ಸಾಲಗಳ ಕಾರಣದಿಂದಾಗಿ ಅಸಲಿನ ಯಾವ ಕಂತುಗಳಿಗೆ ಮತ್ತು ಬಡ್ಡಿಗೆ ನಗರ ಪಾಲಿಕೆಯು ಹೊಣೆಯಾಗಬಹುದೋ ಆ ಅಸಲಿನ ಎಲ್ಲ ಕಂತುಗಳನ್ನು ಮತ್ತು ಬಡ್ಡಿಯನ್ನು ಸಂದಾಯ ಮಾಡಬೇಕಾದಾಗ ಅವುಗಳನ್ನು ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸತಕ್ಕದ್ದು;

(ಬಿ) ವಂತಿಗೆಗಳ, ಫೀಜುಗಳ ಅಥವಾ, ಯಾವುದೇ ಮೊಬಲಗನ್ನು ಸಂದಾಯ ಮಾಡಬೇಕಾದಾಗ ಅದರ ಸಂದಾಯಕ್ಕೆ ಅಥವಾ ನಗರ ಪಾಲಿಕೆಯು ಸರ್ಕಾರಕ್ಕೆ ಸಂದಾಯ ಮಾಡಬಹುದಾದಂಥ ಇತರ ಮೊಬಲಗುಗಳ ಸಂದಾಯಕ್ಕೆ ಉಪಬಂಧ ಕಲ್ಪಿಸತಕ್ಕದ್ದು.

(ಸಿ) ಜನರಲ್ ಅಕೌಂಟ್-ರೆವಿನ್ಯೂ ಅಡಿಯಲ್ಲಿ ವರ್ಷದ ಕೊನೆಯಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ನಗದು ಶಿಲ್ಕನ್ನು ಉಳಿಸಿಕೊಳ್ಳಲು ಅವಕಾಶ ನೀಡತಕ್ಕದ್ದು.

(ಡಿ) ಆಯುಕ್ತರು, ಸ್ಥಾಯಿ ಸಮಿತಿಯಿಂದ ಅಂತಿಮವಾಗಿ ಅನುಮೋದನೆಯಾದಂಥ ಆಯವ್ಯಯದ ಅಂದಾಜನ್ನು ಮುದ್ರಣ ಮಾಡಿಸತಕ್ಕದ್ದು ಮತ್ತು ಫೆಬ್ರವರಿ ಮೊದಲನೆಯ ದಿನಕ್ಕೆ ಮೀರದಂತೆ ಅದರ ಮುದ್ರಿತ ಪ್ರತಿಯನ್ನು ಪ್ರತಿಯೊಬ್ಬ ನಗರಪಾಲಿಕೆ ಸದಸ್ಯನಿಗೂ ಕಳುಹಿಸಿಕೊಡತಕ್ಕದ್ದು.

183. ಆಯವ್ಯಯದ ಅನುದಾನವನ್ನು ಮಾರ್ಪಡಿಸಲು ನಗರ ಪಾಲಿಕೆಯ ಅಧಿಕಾರ.- ನಗರ ಪಾಲಿಕೆಯು ಕಾಲಕಾಲಕ್ಕೆ, ಲಿಖಿತವಾಗಿ ವಿವರಿಸಲಾದ ನಿರ್ದಿಷ್ಟ ಕಾರಣಗಳಿಗಾಗಿ, ಆರ್ಥಿಕ ವರ್ಷದಲ್ಲಿ,-

(ಎ) ಯಾವುದೇ ಲೆಕ್ಕಶೀರ್ಷಿಕೆಯಲ್ಲಿ ಆಯವ್ಯಯದ ಯಾವುದೇ ಅನುದಾನದ ಮೊತ್ತವನ್ನು ಹೆಚ್ಚಿಸಬಹುದು;

(ಬಿ) ಸದರಿ ವರ್ಷದಲ್ಲಿ ಉದ್ಭವಿಸುವ ಯಾವುದೇ ವಿಶೇಷ ಅಥವಾ ಅನಿರೀಕ್ಷಿತ ಅಗತ್ಯತೆಗಳನ್ನು ಪೂರೈಸುವ ಉದ್ದೇಶಕ್ಕಾಗಿ ಹೆಚ್ಚುವರಿ ಆಯವ್ಯಯ ಅನುದಾನವನ್ನು ನೀಡಬಹುದು;

(ಸಿ) ಯಾವುದೇ ಆಯವ್ಯಯ ಅನುದಾನ ಹಣವನ್ನು ಅಥವಾ ಅದರ ಭಾಗವನ್ನು ಆಯವ್ಯಯ ಅನುದಾನ ಹಣದ ಒಂದು ಲೆಕ್ಕಶೀರ್ಷಿಕೆಯಿಂದ ಯಾವುದೇ ಇತರ ಲೆಕ್ಕಶೀರ್ಷಿಕೆಗೆ ವರ್ಗಾಯಿಸಬಹುದು;

(ಡಿ) ಯಾವುದೇ ಲೆಕ್ಕಶೀರ್ಷಿಕೆಯಲ್ಲಿನ ಆಯವ್ಯಯ ಅನುದಾನದ ಹಣವನ್ನು ಕಡಿಮೆ ಮಾಡಬಹುದು.

184. ವರ್ಷದ ಪ್ರಾರಂಭಕ್ಕೆ ಮುಂಚೆ ಆಯವ್ಯಯವನ್ನು ಅಂಗೀಕರಿಸುವ ಹೊಣೆಗಾರಿಕೆ.- (1) ನಗರ ಪಾಲಿಕೆಯು ಆಯವ್ಯಯ ಅಂದಾಜು ಯಾವ ವರ್ಷಕ್ಕೆ ಸಂಬಂಧಿಸಿದೆಯೋ ಆ ವರ್ಷದ ಪ್ರಾರಂಭಕ್ಕೆ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅದನ್ನು ಅಂತಿಮವಾಗಿ ಅಂಗೀಕರಿಸತಕ್ಕದ್ದು ಮತ್ತು ತಕ್ಷಣವೇ ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ಸರ್ಕಾರವು ಆಯವ್ಯಯವನ್ನು ಸಮಗ್ರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳಿಗೆ ಒಳಪಟ್ಟು ಮಂಜೂರು ಮಾಡಬಹುದು:

ಪರಂತು, ಆಯವ್ಯಯವನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಸರ್ಕಾರವು ಅದರ ಬಗ್ಗೆ ಯಾವುದೇ ಆದೇಶಗಳನ್ನು ತಿಳಿಸದಿದ್ದರೆ, ಆ ಆಯವ್ಯಯ ಸರ್ಕಾರದಿಂದ ಮುಂಜೂರಾಗಿದೆಯೆಂದು ಭಾವಿಸತಕ್ಕದ್ದು.

185. ನಗರ ಪಾಲಿಕೆಯು ಪೂರಕ ಆಯವ್ಯಯವನ್ನು ಅಂಗೀಕರಿಸಬಹುದು.- ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯ ಶಿಫಾರಸಿನ ಮೇಲೆ ಆ ವರ್ಷದಲ್ಲಿ ಉದ್ಭವಿಸುವ ಯಾವುದೇ ವಿಶೇಷ ಅಥವಾ ಅನಿರೀಕ್ಷಿತ ಅಗತ್ಯತೆಗಳನ್ನು ಪೂರೈಸುವ ಉದ್ದೇಶಕ್ಕಾಗಿ ಪೂರಕ ಆಯವ್ಯಯ ಅಂದಾಜನ್ನು ಅಂಗೀಕರಿಸಬಹುದು. ಆದಾಗ್ಯೂ, ವರ್ಷದ ಕೊನೆಯಲ್ಲಿ ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಅಂದಾಜು ನಗದು ಶಿಲ್ಕನ್ನು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಮಾಡತಕ್ಕದ್ದಲ್ಲ:

ಪರಂತು, ಆಯವ್ಯಯವನ್ನು ಮಂಜೂರು ಮಾಡುವ ಸಮಯದಲ್ಲಿ ಸರ್ಕಾರವು ಅನುಮತಿಸದಿರುವಂಥ ಯಾವುದೇ ಬಾಬ್ತನ್ನು ಪೂರಕ ಆಯವ್ಯಯದಲ್ಲಿ ಸೇರಿಸತಕ್ಕದ್ದಲ್ಲ.

186. ನಗರ ಪಾಲಿಕೆಯು ಅಧಿಕೃತ ವರ್ಷದ ಅವಧಿಯಲ್ಲಿ ಅಗತ್ಯವಾದಗಲೆಲ್ಲ ಆದಾಯ ಮತ್ತು ವೆಚ್ಚದ ಮರುಹೊಂದಾಣಿಕೆ ಮಾಡುವುದು.- (1) ಯಾವುದೇ ವರ್ಷದ ಯಾವುದೇ ಸಮಯದಲ್ಲಿ ನಗರ ಪಾಲಿಕೆಯು ತೆರಿಗೆ ನಿರ್ಧರಣೆ ಮತ್ತು ಹಣಕಾಸು ಸ್ಥಾಯಿ ಸಮಿತಿಯ ಮನವಿಯ ಮೇಲೆ ಈ ಅಧ್ಯಾಯದ ಮೇರೆಗೆ ಆಯವ್ಯಯ ಅನುದಾನಗಳಲ್ಲಿ ಯಾವುದೇ ಕಡಿತಮಾಡಬಹುದಾಗಿದ್ದರೂ, ಸದರಿ ವರ್ಷದ ಅವಧಿಯಲ್ಲಿ ನಗರ ಪಾಲಿಕೆಯ ನಿಧಿಯ ಆದಾಯವು ಸದರಿ ವರ್ಷದ ಆಯವ್ಯಯ ಅಂದಾಜಿನಲ್ಲಿ ಮಂಜೂರಾದ ವೆಚ್ಚವನ್ನು ಭರಿಸಲು ಮತ್ತು ವರ್ಷದ ಕೊನೆಯಲ್ಲಿ ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಿಲ್ಲದಂತೆ ನಗದು ಶಿಲ್ಕನ್ನು ಇಡಲು ಪರ್ಯಾಪ್ತವಾಗಿರುವುದಿಲ್ಲವೆಂದು ನಗರ ಪಾಲಿಕೆಗೆ ಕಂಡುಬಂದರೆ, ಈ ಅಧಿನಿಯಮದ ಎಲ್ಲಾ ಅಗತ್ಯತೆಗಳಿಗೆ ಸೂಕ್ತ ಗಮನ ನೀಡಿ ಸಾಧ್ಯವಾದಷ್ಟು ಮಟ್ಟಿಗೆ ವರ್ಷದ ಮಂಜೂರಾದ ವೆಚ್ಚವನ್ನು ಕಡಿಮೆ ಮಾಡುವುದು ಅಥವಾ ಪೂರಕ ತೆರಿಗೆ ವಿಧಿಸಲು ಅಥವಾ ವರ್ಷದ ಕೊನೆಯಲ್ಲಿ ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಅಂದಾಜು ನಗದು ಶಿಲ್ಕು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂತೆ ಇರುವುದನ್ನು ಖಚಿತಪಡಿಸಿಕೊಳ್ಳಲು ಅವಶ್ಯವಾಗಬಹುದಾದಂಥ ಪ್ರಮಾಣದಲ್ಲಿ ಆ ಎರಡೂ ವಿಹಿತ ಕಾರ್ಯಗಳನ್ನು ಅಳವಡಿಸಿಕೊಳ್ಳುವುದು ನಗರ ಪಾಲಿಕೆಯ ಜವಾಬ್ದಾರಿಯಾಗಿರತಕ್ಕದ್ದು.

(2) ಯಾವುದೇ ವರ್ಷದಲ್ಲಿ ಪೂರಕ ತೆರಿಗೆ ವಿಧಿಸಬೇಕೆಂದು ನಗರ ಪಾಲಿಕೆಯು ನಿರ್ಧರಿಸಿದಾಗಲೆಲ್ಲಾ ಈ ಅಧಿನಿಯಮದಲ್ಲಿ ವಿಧಿಸಿರುವ ಷರತ್ತುಗಳು, ಮಿತಿಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಯಾವುದೇ ತೆರಿಗೆ ಅಥವಾ ಸುಂಕವನ್ನು ಯಾವ ದರದಲ್ಲಿ ವಿಧಿಸಲಾಗುತ್ತಿದೆಯೋ ಆ ದರವನ್ನು ಆ ವರ್ಷದ ಉಳಿದ ಅವಧಿಗೆ ಹೆಚ್ಚಿಸುವ ಮೂಲಕ ಅದು ಹಾಗೆ ಮಾಡತಕ್ಕದ್ದು.

187. ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸಿದ್ಧಪಡಿಸುವುದು.- (1) ಆಯುಕ್ತರು, ಸ್ಥಾಯಿ ಸಮಿತಿಗಳು ಹಾಗೂ ವಾರ್ಡ್ ಸಮಿತಿಗಳೊಂದಿಗೆ ಮಹಾಪೌರರು ಸಮಾಲೋಚಿಸಿ, ನಗರ ಪಾಲಿಕೆಗಾಗಿ ನಿಯಮಿಸಲಾದ ರೀತಿಯಲ್ಲಿ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸಿದ್ಧಪಡಿಸಬಹುದು.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಸಿದ್ಧಪಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆಯು, ಮೂರು ವರ್ಷಗಳಿಗಾಗಿ ಸ್ವೀಕೃತಿಗಳು ಮತ್ತು ಪಾವತಿಗಳ ಮುನ್ನಂದಾಜುಗಳು, ಹಿಂದಿನ ಆಯವ್ಯಯ ಅಂದಾಜುಗಳು ನಿರೂಪಿಸಿದ ಗುರಿಗಳ ಬದಲಾಗಿ ಸಾಮರ್ಥ್ಯದ ಮೌಲ್ಯಮಾಪನ ಆಧಾರಿತ ತೀರ್ಮಾನಗಳನ್ನು ಒಳಗೊಂಡಿರತಕ್ಕದ್ದು.

188. ಸಮಗ್ರ ಋಣ ಮಿತಿ ನೀತಿ.- (1) ನಗರ ಪಾಲಿಕೆಗಳು ಎತ್ತುವ ಅಲ್ಪಾವಧಿ ಸಾಲಗಳೂ ಒಳಗೊಂಡಂತೆ ಸಾಲಗಳ ಸಂದರ್ಭದಲ್ಲಿ ಅನ್ವಯವಾಗುವ ಸಮಗ್ರ ಋಣ ಮಿತಿ ನೀತಿಯನ್ನು ರೂಪಿಸತಕ್ಕದ್ದು ಮತ್ತು ನಗರ ಪಾಲಿಕೆಯು ಅದರ ಹಣಕಾಸು ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಸಾಲಗಳನ್ನು ಪಡೆಯುವ ಸಂದರ್ಭದಲ್ಲಿ ಅದನ್ನು ತೀರಿಸುವ ಸಾಮಾನ್ಯ ತತ್ವಗಳನ್ನು ರೂಪಿಸತಕ್ಕದ್ದು.

(2) ಸಮಗ್ರ ಋಣ ಮಿತಿ ನೀತಿಯ ಅಡಿಯಲ್ಲಿ ಅನುಮತಿಸಿದ ಅಂಥ ಸಾಲ ಅಥವಾ ಎರವಲಿಗೆ ಉಪಬಂಧಿಸಿದ ಸಾಲ ಅಥವಾ ಎರವಲಿನ ಯಾವುದೇ ರೂಪದಲ್ಲಿ ನಗರ ಪಾಲಿಕೆಯು ಸಾಲವನ್ನು ಪಡೆಯಬಹುದು.

189. ಕಡ್ಡಾಯ ಅನುಸರಣೆ. - (1) ನಗರ ಪಾಲಿಕೆಯು ಸಿದ್ಧಪಡಿಸಿದ ಆಯವ್ಯಯ ಅಂದಾಜು, ಮಧ್ಯಮಾವಧಿ ವಿತ್ತೀಯ ಯೋಜನೆ, ಸಮಗ್ರ ಋಣ ಮಿತಿ ನೀತಿ ಮತ್ತು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(2) ಸಮಿತಿಯು ಅನುಮೋದಿಸಿದ ಆಯವ್ಯಯ ಅಂದಾಜು, ಮಧ್ಯಮಾವಧಿ ವಿತ್ತೀಯ ಯೋಜನೆ, ಮತ್ತು ಸಮಗ್ರ ಋಣ ಮಿತಿ ಕಾರ್ಯನೀತಿಯನ್ನು ಪಾಲಿಸಿಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಹೊಸದಾಗಿ ಆಯವ್ಯಯ ಅಂದಾಜನ್ನು ಸಿದ್ಧಪಡಿಸುವಂತೆ ನಗರ ಪಾಲಿಕೆಗೆ ನಿರ್ದೇಶಿಸಬಹುದು.

(3) (2) ನೇ ಉಪಪ್ರಕರಣದ ಅಡಿಯಲ್ಲಿನ ಯಾವುದೇ ನಿರ್ದೇಶನವು ನಗರ ಪಾಲಿಕೆಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡದಂತೆ ಇರತಕ್ಕದ್ದಲ್ಲ.

190. ಸಾಲ ತೀರಿಕೆ ನಿಧಿಯ ಸ್ಥಾಪನೆ.- (1) ನಗರ ಪಾಲಿಕೆಯು, ಈ ಅಧ್ಯಾಯದ ಅಡಿಯಲ್ಲಿ ಎತ್ತಲಾದ ಪ್ರತಿಯೊಂದು ಸಾಲದ ಸಂಬಂಧದಲ್ಲಿ ಪಡೆಯಲಾದ ಎಲ್ಲ ಹಣಕಾಸು ಸಾಲದ ಮರುಪಾವತಿಗಾಗಿ ಸಾಲತೀರಿಕೆ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಪಡೆದ ಸಾಲಕ್ಕಾಗಿ ನಿಗದಿಪಡಿಸಿದ ಅವಧಿಯೊಳಗೆ ಮರುಪಾವತಿಗಾಗಿ ಸಾಕಷ್ಟು ಮೊತ್ತವನ್ನು ಅಂಥ ಸಾಲತೀರಿಕೆ ನಿಧಿಗೆ ಪ್ರತಿ ವರ್ಷವೂ ಪಾವತಿಸತಕ್ಕದ್ದು.

(2) ಈ ಅಧಿನಿಯಮದಡಿ ಯಾವುದೇ ಸಾಲದ ಮರುಪಾವತಿಗಾಗಿ ಸ್ಥಾಪಿಸಲಾದ ಸಾಲ ತೀರಿಕೆ ನಿಧಿಯ ಜಮೆಯಲ್ಲಿ ಇರುವ ಮೊತ್ತವು ಯಾವುದೇ ಸಮಯದಲ್ಲಿ, ಮಂಜೂರಾದ ಬಡ್ಡಿಯ ದರದಲ್ಲಿ ಸಂಗ್ರಹಿಸಿಲು ಅನುಮತಿಸಿದ ಮಾತ್ರವಾದಲ್ಲಿ, ಆಯುಕ್ತರು ಮಹಾಪೌರನ ಪೂರ್ವಾನುಮೋದನೆ ಪಡೆದು ಅಂಥ ನಿಧಿಗೆ ಹೆಚ್ಚು ಸಂದಾಯ ಮಾಡುವುದನ್ನು ನಿಲ್ಲಿಸುವುದು.

191. ಸಾಲ ತೀರಿಕೆ ನಿಧಿಯ ಜಮೆಯಲ್ಲಿ ಮೊತ್ತದ ಹೂಡಿಕೆ.- (1) ಸರ್ಕಾರವು ವಿಧಿಸಿದ ಯಾವುದೇ ಸಾರ್ವಜನಿಕ ಉದ್ಯಮಕ್ಕೆ ಅನ್ವಯವಾಗುವ ಹೂಡಿಕೆ ನೀತಿಗನುಸಾರವಾಗಿ, ಸಾಲ ತೀರಿಕೆ ನಿಧಿಗೆ ಪಾವತಿಸಿದ ಎಲ್ಲಾ ಹಣವನ್ನು ಸಾಧ್ಯವಾದಷ್ಟು ಬೇಗನೆ, ನಗರ ಪಾಲಿಕೆಯು ಹೂಡಿಕೆ ಮಾಡತಕ್ಕದ್ದು.

(2) ಉಪ-ಪ್ರಕರಣ (1)ರ ಅಡಿಯಲ್ಲಿನ ಯಾವುದೇ ಹೂಡಿಕೆಗೆ ಸಂಬಂಧಿಸಿದಂತೆ ಸ್ವೀಕರಿಸಿದ ಎಲ್ಲಾ ಮೊತ್ತವನ್ನು, ಅದನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೇ ಸಾಲ ತೀರಿಕೆ ನಿಧಿಗೆ ಪಾವತಿಸತಕ್ಕದ್ದು ಹಾಗೂ ಆ ಉಪ-ಪ್ರಕರಣದಲ್ಲಿ ಹೇಳಲಾದ ವಿಧಾನದಲ್ಲಿ ಹೂಡಿಕೆಯನ್ನು ಮಾಡತಕ್ಕದ್ದು.

(3) ಎರಡು ಅಥವಾ ಹೆಚ್ಚಿನ ಸಾಲ ತೀರಿಕೆ ನಿಧಿಗಳಲ್ಲಿ ಜಮೆಯಾಗಿರುವ ಹಣವನ್ನು, ನಗರ ಪಾಲಿಕೆಯ ವಿವೇಚನೆಯಲ್ಲಿ, ಒಟ್ಟಾಗಿ ಸಾಮಾನ್ಯ ನಿಧಿಯಲ್ಲಿ ಹೂಡಿಕೆ ಮಾಡಬಹುದು ಹಾಗೂ ನಗರ ಪಾಲಿಕೆಗೆ ಅಂಥ ಹೂಡಿಕೆಗಳಲ್ಲಿ ಇರುವ ಭದ್ರತೆಗಳನ್ನು ಹಲವು ಸಾಲತೀರಿಕೆ ನಿಧಿಗಳಿಗೆ ಹಂಚಿಕೆ ಮಾಡುವುದು ಅಗತ್ಯವಾಗಿರತಕ್ಕದ್ದಲ್ಲ.

(4) ಉಪ-ಪ್ರಕರಣ (1)ರ ಉಪಬಂಧಗಳಿಗೆ ಒಳಪಟ್ಟು, ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಹೂಡಿಕೆಯನ್ನು ಕಾಲಕಾಲಕ್ಕೆ ಮಾರ್ಪಾಡು ಮಾಡಬಹುದು ಅಥವಾ ವರ್ಗಾಯಿಸಬಹುದು.

192. ಸಾಲ ತೀರಿಕೆ ನಿಧಿಯ ವಿನಿಯೋಗ. - ನಗರ ಪಾಲಿಕೆಯು, ಸಾಲ ತೀರಿಕೆ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು, ಅಂಥ ನಿಧಿಯನ್ನು ಯಾವ ಸಾಲಕ್ಕಾಗಿ ಅಥವಾ ಸಾಲದ ಭಾಗಕ್ಕಾಗಿ ಸೃಜಿಸಲಾಗಿತ್ತೋ, ಅಂಥ ಸಾಲವನ್ನು ಅಥವಾ ಅದರ ಭಾಗವನ್ನು ತೀರಿಸುವುದಕ್ಕಾಗಿ ವಿನಿಯೋಗಿಸಬಹುದು ಮತ್ತು ಅಂಥ ಸಾಲವನ್ನು ಅಥವಾ ಸಾಲದ ಭಾಗವನ್ನು ಸಂಪೂರ್ಣವಾಗಿ ತೀರಿಸುವವರೆಗೆ, ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ:

ಪರಂತು, ಯಾವುದೇ ಸಾಲವನ್ನು ಅಥವಾ ಅದರ ಭಾಗಗಳನ್ನು ಸಂಚಿತಗೊಳಿಸಿದಾಗ, ಸಂಚಿತ ಸಾಲದಲ್ಲಿ ಸೇರಿಸಿದ ಮೂಲ ಸಾಲಗಳ ಮೊಬಲಗಿಗೆ ಪ್ರಮಾಣಾನುಸಾರವಾಗಬಹುದಾದ ಮೂಲ ಸಾಲಗಳ ಸಾಲ ತೀರಿಕೆ ನಿಧಿಗಳ ಅಂಥ ಭಾಗವನ್ನು ನಗರ ಪಾಲಿಕೆಯು ಹಾಗೆ ಸೃಜಿಸಿದ ಸಂಚಿತ ಸಾಲದ ಸಾಲ ತೀರಿಕೆ ನಿಧಿಗೆ ವರ್ಗಾಯಿಸತಕ್ಕದ್ದು.

193. ನಗರ ಪಾಲಿಕೆಯಿಂದ ವಾರ್ಷಿಕ ವಿವರಣಾ ಪತ್ರ.- (1) ನಗರ ಪಾಲಿಕೆಯು, ಪ್ರತಿ ವರ್ಷದ ಕೊನೆಯಲ್ಲಿ,-

(i) ವರ್ಷಾವಧಿಯಲ್ಲಿ ಹೂಡಿಕೆ ಮಾಡಿದ ಮೊಬಲಗು;

(ii) ವಿವರಣಾ ಪತ್ರವನ್ನು ಸಲ್ಲಿಸುವುದಕ್ಕೆ ಮುಂಚೆ ಮಾಡಿದ ಕೊನೆಯ ಹೂಡಿಕೆಯ ದಿನಾಂಕವನ್ನು;

(iii) ಆಗ ಅವರ ಬಳಿ ಇದ್ದ ಭದ್ರತಾ ಪತ್ರಗಳ ಒಟ್ಟು ಮೊಬಲಗನ್ನು; ಮತ್ತು

(iv) ವಿವರಣಾ ಪತ್ರದ ದಿನಾಂಕದವರೆಗಿನ ಸಾಲಗಳ ತೀರಿಕೆಗಾಗಿ ವಿನಿಯೋಗಿಸಿದ ಒಟ್ಟು ಮೊಬಲಗನ್ನು,

- ತೋರಿಸುವ ವಿವರಣಾ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಅಂಥ ವಿವರಣಾ ಪತ್ರವನ್ನು ನಗರ ಪಾಲಿಕೆಯ ಮುಂದೆ ಇಡತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

194. ಮುಖ್ಯ ಹಣಕಾಸು ಅಧಿಕಾರಿಯ ನೇಮಕಾತಿ.- (1) ನಗರ ಪಾಲಿಕೆಯು ಸರ್ಕಾರದಿಂದ ಅನುಮೋದನೆ ಪಡೆದು, ಎಲ್ಲಾ ಹಣಕಾಸು ವಿಷಯಗಳಲ್ಲಿ ಅದಕ್ಕೆ ಮಾರ್ಗದರ್ಶನ ಮಾಡಲು ಮತ್ತು ಮಹಾಪೌರರು ಅಥವಾ ಆಯುಕ್ತರು ಕಾಲಕಾಲಕ್ಕೆ ಹಂಚಿಕೆ ಮಾಡುವಂಥ ಕರ್ತವ್ಯಗಳನ್ನು ನಿರ್ವಹಿಸಲು ಮುಖ್ಯ ಹಣಕಾಸು ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು.

(2) ಮುಖ್ಯ ಹಣಕಾಸು ಅಧಿಕಾರಿಯು, ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದರ್ಜೆ ಮತ್ತು ಪದನಾಮವುಳ್ಳವನಾಗಿರತಕ್ಕದ್ದು.

195. ವಾರ್ಷಿಕ ಹಣಕಾಸು ವಿವರಣಾ ಪತ್ರ.- (1) ಆಯುಕ್ತರು, ಹಣಕಾಸು ವರ್ಷ ಮುಗಿದ ಎರಡು ತಿಂಗಳ ಒಳಗಾಗಿ, ನಗರ ಪಾಲಿಕೆಯ ಲೆಕ್ಕಪತ್ರಗಳ ಸಂಬಂಧದಲ್ಲಿ ಹಿಂದಿನ ವರ್ಷದ ಆದಾಯ ಮತ್ತು ವೆಚ್ಚದ ಖಾತೆ, ನಗದು ಹರಿವು ವಿವರಣಾ ಪತ್ರ ಹಾಗೂ ಸ್ವೀಕೃತಿಗಳು ಮತ್ತು ಪಾವತಿ ಲೆಕ್ಕಪತ್ರವನ್ನು ಒಳಗೊಂಡಿರುವ ವಾರ್ಷಿಕ ಹಣಕಾಸು ವಿವರಣಾ ಪತ್ರವನ್ನು ಸಿದ್ಧಪಡಿಸಬೇಕು. ಅಲ್ಲದೆ, ಮಹತ್ವದ ಲೆಕ್ಕಪತ್ರ ನೀತಿಗಳು, ಸಂಚಿತ ಹೊಣೆಗಾರಿಕೆಗಳ ವಿವರಗಳು ಹಾಗೂ ಹಣಕಾಸು ವಿವರಣಾ ಪತ್ರಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಉಪಯುಕ್ತವಾಗಬಹುದಾದ ಅಂಥ ಯಾವುದೇ ಇತರ ಮಾಹಿತಿಯನ್ನು ಒಳಗೊಂಡಿರುವ

ಲೆಕ್ಕಪತ್ರದ ಟಿಪ್ಪಣಿಗಳೊಂದಿಗೆ ಹಿಂದಿನ ಹಣಕಾಸು ವರ್ಷದ ಕೊನೆಯ ದಿನದಲ್ಲಿರುವಂತೆ ಹಣಕಾಸು ವಿವರಪಟ್ಟಿಯನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು.

(2) ಹಣಕಾಸು ವಿವರಣಾ ಪತ್ರ ಮತ್ತು ಶಿಲ್ಕು ಪಟ್ಟಿಯನ್ನು ಸಿದ್ಧಪಡಿಸತಕ್ಕ ನಮೂನೆ ಮತ್ತು ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

196. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.- (1) ನಗರ ಪಾಲಿಕೆಯ ಎಲ್ಲಾ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಇಡತಕ್ಕದ್ದು.

(2) ಸರ್ಕಾರವು, ಅದರ ಅಧಿಕಾರಿಗಳ ಪೈಕಿ ಒಬ್ಬರನ್ನು ನಗರ ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕನನ್ನಾಗಿ ನೇಮಿಸತಕ್ಕದ್ದು. ಅವರು ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಗರ ಪಾಲಿಕೆಯ ಲೆಕ್ಕಪತ್ರಗಳ ಪರಿಶೋಧನೆ ನಡೆಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ನಗರ ಪಾಲಿಕೆಯ ಲೆಕ್ಕಪತ್ರಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಸ್ವೀಕೃತಿಗಳನ್ನು ಮತ್ತು ವೆಚ್ಚದ ಲೆಕ್ಕಗಳನ್ನು ನೋಡಲು ಅವರಿಗೆ ಅವಕಾಶವಿರತಕ್ಕದ್ದು ಮತ್ತು ಯಾವುದೇ ಸ್ವೀಕೃತಿಗೆ ಅಥವಾ ವೆಚ್ಚಕ್ಕೆ ಸಂಬಂಧಿಸಿದಂತೆ ಅವರು ಅಗತ್ಯಪಡಿಸಬಹುದಾದಂಥ ಯಾವುದೇ ಮಾಹಿತಿಯನ್ನು ಆಯುಕ್ತರು ಅವರಿಗೆ ಒದಗಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ನಗರ ಪಾಲಿಕೆಯ ಸ್ವೀಕೃತಿ ಮತ್ತು ವೆಚ್ಚದ ಎಲ್ಲಾ ವ್ಯವಹರಣೆಗಳ ಲೆಕ್ಕಪರಿಶೋಧನೆಯು, ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು ಮತ್ತು ಆತನು ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕನು, ಎಲ್ಲಾ ನಗರ ಪಾಲಿಕೆಗೆ ಸಂಬಂಧಿಸಿದಂತೆ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ನಗರ ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕರು, ವೆಚ್ಚದಲ್ಲಿ ಅಥವಾ ನಗರ ಪಾಲಿಕೆಗೆ ಬರಬೇಕಾದ ಹಣದ ಬಾಕಿ ವಸೂಲಿಯಲ್ಲಿ ಅಥವಾ ನಗರ ಪಾಲಿಕೆಯ ಲೆಕ್ಕಪತ್ರಗಳಲ್ಲಿ ಯಾವುದೇ ಸಮಯದಲ್ಲಿ ಗಮನಿಸಬಹುದಾದ ಯಾವುದೇ ಅನುಚಿತತೆ ಅಥವಾ ಅಕ್ರಮವನ್ನು ನಿಯಮಿಸಿದ ನಗರ ಪಾಲಿಕೆ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅಂಥ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳಲ್ಲಿ ನಿಯಮಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(6) ಸರ್ಕಾರವು ನಿರ್ಧರಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳನ್ನು ಆತನಿಗೆ ಸಂದಾಯ ಮಾಡತಕ್ಕದ್ದು ಮತ್ತು ಆತನು ಸರ್ಕಾರದ ಯಾವ ಸೇವಾ ವಿಭಾಗಕ್ಕೆ ಸೇರಿದ್ದಾರೋ ಆ ವಿಭಾಗದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ವಿಶೇಷಾಧಿಕಾರಗಳಿಗೆ ಅವರು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ನಗರ ಪಾಲಿಕೆಯು ಆತನು ಅಥವಾ ಆತನ ಪರವಾಗಿ ಅಂಥ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಸಂದಾಯ ಮಾಡಬಹುದಾದಂಥ ರಜೆ, ಭತ್ಯೆಗಳು, ನಿವೃತ್ತಿ ವೇತನ ಮತ್ತು ಭವಿಷ್ಯನಿಧಿ ಬಾಬ್ತಿಗೆ ಅಂಥ ವಂತಿಗೆಯನ್ನು ನಗರ ಪಾಲಿಕೆಯ ನಿಧಿಯಿಂದ ನೀಡತಕ್ಕದ್ದು.

(7) ಸರ್ಕಾರಕ್ಕೆ ಸಲ್ಲಿಸಲಾದ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸುವ ಮತ್ತು ನಗರ ಪಾಲಿಕೆ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಬಂದಿರುವ ಉತ್ತರಗಳು ಮತ್ತು ಅದರ ಅನುಪಾಲನೆಯನ್ನು ಮೌಲ್ಯಮಾಪನ ಮಾಡುವ ಮತ್ತು ಉತ್ತರಗಳು ಮತ್ತು ಅನುಪಾಲನೆಯ ಮೇಲಿನ ನಿರ್ಣಯಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಈ ಕೆಳಕಂಡ ಸದಸ್ಯರು ಮತ್ತು ಅಧ್ಯಕ್ಷರುಗಳನ್ನೊಗೊಂಡ ಹಂಗಾಮಿ ಲೆಕ್ಕ ಪರಿಶೋಧನಾ ಸಮಿತಿಯನ್ನು ರಚಿಸತಕ್ಕದ್ದು.

(i) ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ - ಅಧ್ಯಕ್ಷರು

(ii) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು/ ನಗರ ಪಾಲಿಕೆಯ ಆಯುಕ್ತರು - ಸದಸ್ಯರು.

(iii) ಸದಸ್ಯರು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ /ನಗರ ಪಾಲಿಕೆಯಲ್ಲಿ ಲೆಕ್ಕಪರಿಶೋಧನಾ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರು / ಅಪರ ಆಯುಕ್ತರು / ಜಂಟಿ ಆಯುಕ್ತರು - ಸದಸ್ಯ ಕಾರ್ಯದರ್ಶಿ.

(iv) ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ಅಧಿಕಾರಿ - ಸದಸ್ಯರು.

(v) ಗ್ರೇಟರ್ ಬೆಂಗಳೂರು ಪ್ರಾಧಿಕಾರ /ನಗರ ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕರು – ಸದಸ್ಯರು

(vi) ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಯಾರೇ ಇತರ ಅಧಿಕಾರಿ.

ಅಧ್ಯಾಯ - XVI
ಬೀದಿಗಳು

197. ಸಾರ್ವಜನಿಕ ಬೀದಿಗಳು ಮತ್ತು ಅವುಗಳಿಗೆ ಲಗತ್ತಾದವುಗಳು ನಗರ ಪಾಲಿಕೆಯಲ್ಲಿ ನಿಹಿತವಾಗುವುದು.- (1) **ಈ ಮುಂದಿನವುಗಳು ನಗರ ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು**,-

(ಎ) ಸರ್ಕಾರದ ನಿಯಂತ್ರಣದ ಮೇರೆಗೆ ಕಾಯ್ದಿರಿಸಲಾದ ಸರ್ಕಾರದ ಎಲ್ಲಾ ನಗರ ಪಾಲಿಕೆಗಳ ಎಲ್ಲಾ ಸಾರ್ವಜನಿಕ ಬೀದಿಗಳು, ಪಾದಚಾರಿ ಮಾರ್ಗಗಳು, ಕಲ್ಲುಗಳು ಮತ್ತು ಇತರ ಸಾಮಗ್ರಿಗಳು ಮತ್ತು ಅಂಥ ಬೀದಿಗಳಿಗೆ ಒದಗಿಸಲಾದ ಎಲ್ಲ ಕಾಮಗಾರಿ ಸಾಮಗ್ರಿಗಳು, ಉಪಕರಣಗಳು ಮತ್ತು ಇತರ ವಸ್ತುಗಳು;

(ಬಿ) ಸಾರ್ವಜನಿಕವಾದದ್ದೇ ಆಗಲಿ ಅಥವಾ ಖಾಸಗಿಯದ್ದೇ ಆಗಲಿ ಯಾವುದೇ ಬೀದಿಯಲ್ಲಿ ಅಥವಾ ಅದರ ಪಕ್ಕದಲ್ಲಿ ಅಥವಾ ಅದರ ಕೆಳಗೆ ನಗರ ಪಾಲಿಕೆಯ ನಿಧಿಯ ಖರ್ಚಿನಲ್ಲಿ ಅಥವಾ ಅನ್ಯಥಾ ನಿರ್ಮಿಸಿದ ಎಲ್ಲ ಒಳ ಚರಂಡಿಗಳು, ಚರಂಡಿಗಳು, ಚರಂಡಿ ಕಾಮಗಾರಿಗಳು, ಸುರಂಗಗಳು ಮತ್ತು ಅಡಿಗಾಲುವೆಗಳು, ಮತ್ತು

(ಸಿ) ಅವುಗಳಿಗೆ ಲಗತ್ತಾಗಿರುವ ಎಲ್ಲ ಕಾಮಗಾರಿಗಳು, ಸಾಮಗ್ರಿಗಳು, ಉಪಕರಣಗಳು ಮತ್ತು ಇತರ ವಸ್ತುಗಳೊಂದಿಗೆ ಹಾಗೂ ಸಾರ್ವಜನಿಕ ಬೀದಿಗಳಲ್ಲಿ ಅಥವಾ ಅವುಗಳ ಪಕ್ಕದಲ್ಲಿ ಬೆಳೆಯುತ್ತಿರುವ ಖಾಸಗಿ ಸ್ವತ್ತಾಗಿರದ ಎಲ್ಲ ಮರಗಳು.

(2) ಸರ್ಕಾರವು, ನಗರ ಪಾಲಿಕೆಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ, ಅಧಿಸೂಚನೆ ಮೂಲಕ ಯಾವುದೇ ಅಂಥ ಬೀದಿ, ಒಳ ಚರಂಡಿ, ಚರಂಡಿ, ಚರಂಡಿ ಕಾಮಗಾರಿ, ಸುರಂಗ, ಅಡಿಗಾಲುವೆ ಅಥವಾ ಮರಗಳನ್ನು ನಗರ ಪಾಲಿಕೆಯ ನಿಯಂತ್ರಣದಿಂದ ಹಿಂತೆಗೆದುಕೊಳ್ಳಬಹುದು.

(3) ನಗರ ಪಾಲಿಕೆಯಲ್ಲಿ ನಿಹಿತವಾದ ಎಲ್ಲಾ ಸಾರ್ವಜನಿಕ ಬೀದಿಗಳು ಸಂಬಂಧಪಟ್ಟ ನಗರ ಪಾಲಿಕೆಯ ಆಯುಕ್ತರ ನಿಯಂತ್ರಣದಲ್ಲಿ ಇರತಕ್ಕದ್ದು ಹಾಗೂ ಅವುಗಳನ್ನು ಆತನು ಈ ಕುರಿತು ರಚಿಸಲಾದ ಉಪವಿಧಿಗಳಗನುಸಾರವಾಗಿ ಮತ್ತು ಮುಖ್ಯ ಆಯುಕ್ತರು ಹೊರಡಿಸಿದ ಅಂಥ ನಿರ್ದೇಶನಗಳ ಅನುಸಾರವಾಗಿ ನಿರ್ವಹಿಸತಕ್ಕದ್ದು, ನಿಯಂತ್ರಿಸತಕ್ಕದ್ದು ಮತ್ತು ವಿನಿಯಮಿಸತಕ್ಕದ್ದು.

198. ಸಾರ್ವಜನಿಕ ಬೀದಿಗಳಿಗೆ ಸಂಬಂಧಿಸಿದಂತೆ ಆಯುಕ್ತರ ಅಧಿಕಾರಗಳು.- (1) ನಗರ ಪಾಲಿಕೆಯ ಆಯುಕ್ತರು ತಾನಾಗಿಯೇ ಅಥವಾ ವಾರ್ಡ್ ಸಮಿತಿಯ ಮನವಿಯ ಮೇರೆಗೆ ನಗರ ಪಾಲಿಕೆಯಲ್ಲಿ ನಿಹಿತವಾಗಿರುವ ಎಲ್ಲಾ ಸಾರ್ವಜನಿಕ ಬೀದಿಗಳನ್ನು ಕಾಲಕಾಲಕ್ಕೆ ಸಮತಟ್ಟು ಮಾಡುವಂತೆ ಅಥವಾ ದುರಸ್ತಿ ಗೊಳಿಸುವಂತೆ ಮಾಡತಕ್ಕದ್ದು; ಆತನು ಪಾದಚಾರಿಗಳ ಸುರಕ್ಷತೆಗಾಗಿ ಅಂಥ ಯಾವುದೇ ಬೀದಿಯನ್ನು ಕಾಲಕಾಲಕ್ಕೆ ಅಗಲೀಕರಣ, ವಿಸ್ತರಣೆ ಅಥವಾ ಅನ್ಯಥಾ ಸುಧಾರಣೆ ಮಾಡಬಹುದು.

(2) ನಗರ ಪಾಲಿಕೆಯ ಆಯುಕ್ತರು, ಯಾವುದೇ ಸಮಯದಲ್ಲಿ, ತನಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯಲ್ಲಿ ನಿಹಿತಗೊಂಡ ಸಾರ್ವಜನಿಕ ಬೀದಿಯನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಮುಚ್ಚಬಹುದು.

ಪರಂತು, ಹಾಗೆ ಮಾಡುವುದಕ್ಕೂ ಮೊದಲು, ನಗರ ಪಾಲಿಕೆಯು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನೋಟಿಸ್‌ನ್ನು ಪ್ರಕಟಿಸುವ ಮೂಲಕ ಅಂಥ ಮುಚ್ಚುವಿಕೆಯಿಂದ ಬಾಧಿತರಾಗುವ ಸಂಭವವಿರುವ ನಿವಾಸಿಗಳಿಗೆ ಅಂಥ ಮುಚ್ಚುವಿಕೆಗೆ ಸಂಬಂಧಿಸಿದಂತೆ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡಬೇಕು ಮತ್ತು ಸದರಿ ನೋಟಿಸಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಮಾಡಬಹುದಾದ ಎಲ್ಲಾ ಅಂಥ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು.

199. ಎರಡು ಅಥವಾ ಹೆಚ್ಚಿನ ನಗರ ಪಾಲಿಕೆಗಳಲ್ಲಿ ವ್ಯಾಪ್ತವಾಗಿರುವ ಸಾರ್ವಜನಿಕ ಬೀದಿಗಳಿಗೆ ಸಂಬಂಧಿಸಿದಂತೆ ಮುಖ್ಯ ಆಯುಕ್ತರ ಅಧಿಕಾರಗಳು.- ಮುಖ್ಯ ಆಯುಕ್ತರು ಎರಡು ಅಥವಾ ಹೆಚ್ಚಿನ ನಗರ ಪಾಲಿಕೆಗಳಲ್ಲಿ ವ್ಯಾಪ್ತವಾಗಿರುವ ಬೀದಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತೀರ್ಮಾನವನ್ನು ಕೈಗೊಳ್ಳುವ ಅಧಿಕಾರ ಹೊಂದಿರತಕ್ಕದ್ದು.

200. ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವ ಅಧಿಕಾರ.- (1) ಆಯುಕ್ತರು ಮುಖ್ಯ ಆಯುಕ್ತರ ಪೂರ್ವಾನುಮತಿಯೊಂದಿಗೆ ಯಾವುದೇ ಸಮಯದಲ್ಲಿ,-

(ಎ) ಹೊಸ ಸಾರ್ವಜನಿಕ ಬೀದಿಗಳನ್ನು ವಿನ್ಯಾಸಗಳಿಸಬಹುದು ಮತ್ತು ರಚಿಸಬಹುದು;

(ಬಿ) ಸೇತುವೆಗಳು ಮತ್ತು ಒಳದಾರಿ (sub-way) ಗಳನ್ನು ನಿರ್ಮಾಣ ಮಾಡಬಹುದು;

(ಸಿ) ಬೀದಿಗಳ ಪಂಕ್ತೀಕರಣ(alignment)ಕ್ಕಾಗಿ ಅಸ್ತಿತ್ವದಲ್ಲಿರುವ ಸಾರ್ವಜನಿಕ ಬೀದಿಯನ್ನು ತಿರುಗಿಸಬಹುದು ಅಥವಾ ದಿಕ್ಕು ಬದಲಾಯಿಸಬಹುದು;

(ಡಿ) ಯಾವುದೇ ಸಾರ್ವಜನಿಕ ಬೀದಿಯನ್ನು ಅಗಲೀಕರಿಸಬಹುದು, ತೆರೆಯಬಹುದು, ವಿಸ್ತರಿಸಬಹುದು ಅಥವಾ ಅನ್ಯಥಾ ಸುಧಾರಿಸಬಹುದು; ಮತ್ತು

(ಇ) ನಗರ ಪಾಲಿಕೆಯ ಪರಿಮಿತಿಗಳಲ್ಲಿನ ಯಾವುದೇ ಬೀದಿ ಅಥವಾ ಬೀದಿಗಳ ಸ್ಥಿತಿ ಅಥವಾ ದಿಕ್ಕನ್ನು, ಅಕ್ಕಪಕ್ಕದಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವುದಕ್ಕಾಗಿ ಪ್ರಸ್ತಾವನೆಯನ್ನು ಸ್ವೀಕರಿಸದಿದ್ದಾಗ್ಯೂ, ರೂಪಿಸಬಹುದು ಮತ್ತು ನಿರ್ಧರಿಸಬಹುದು.

(2) ನಗರ ಪಾಲಿಕೆಯು ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಮಾರ್ಗದರ್ಶನ ನೀಡತಕ್ಕದ್ದು.

201. ಹೊಸ ಸಾರ್ವಜನಿಕ ಬೀದಿಗಳ ಕನಿಷ್ಠ ಅಗಲ.- ಆಯುಕ್ತರು, ಕಾಲಕಾಲಕ್ಕೆ ಮಾಸ್ಟರ್ ಪ್ಲಾನಿನಲ್ಲಿನ ಪ್ರಸ್ತಾವನೆಯ ಅನುಸಾರವಾಗಿ ಅಥವಾ ಸಂಚಾರ ದಟ್ಟಣೆಯ ಸ್ವರೂಪ ಮತ್ತು ಪ್ರಮಾಣವನ್ನಾಧರಿಸಿ ವಿವಿಧ ಸಾರ್ವಜನಿಕ ಬೀದಿಗಳ ಕನಿಷ್ಠ ಅಗಲವನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ವಾಹನಗಳ ಸುಗಮ ಸಂಚಾರಕ್ಕಾಗಿ ರಸ್ತೆಗಳ ಶ್ರೇಣಿ ವ್ಯವಸ್ಥೆಯನ್ನು ನಿರ್ವಹಿಸಲು ಸಮಾನ ಅಥವಾ ಹೆಚ್ಚಿನ ಬೀದಿಗೆ ಒಂದು ಅಥವಾ ಎರಡೂ ಕಡೆಗಳಲ್ಲಿ ಬೀದಿಗಳನ್ನು ಜೋಡಿಸತಕ್ಕದ್ದು.

202. ಕೆಲವು ರೀತಿಯ ಸಂಚಾರಕ್ಕಾಗಿ ಮತ್ತು ಬೀದಿಬದಿಯಲ್ಲಿನ ವಾಹನ ನಿಲುಗಡೆಗಾಗಿ ಸಾರ್ವಜನಿಕ ಬೀದಿಗಳ ಬಳಕೆಯನ್ನು ನಿಷೇಧಿಸುವ ಅಧಿಕಾರ.- (1) ಆಯುಕ್ತರು ಸಾರ್ವಜನಿಕರಿಗೆ ಅಪಾಯ, ಅಡಚಣೆ ಅಥವಾ ಅನಾನುಕೂಲವಾಗುವದನ್ನು ತಡೆಗಟ್ಟಲು ಅಥವಾ ಆ ಪ್ರದೇಶದಲ್ಲಿ ಶಾಂತತೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಸಾರ್ವಜನಿಕ ಬೀದಿ ಅಥವಾ ಅದರ ಭಾಗದಲ್ಲಿ ವಾಹನ ಸಂಚಾರವನ್ನು ಅಥವಾ ಬೀದಿಬದಿಯಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಬಹುದು.

(2) ಆಯುಕ್ತರು, ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4) ರ 69ನೇ ಪ್ರಕರಣದಲ್ಲಿ ನಿಗದಿಪಡಿಸಿದಂತೆ ಬೀದಿಗಳಲ್ಲಿ ಸಂಚಾರವನ್ನು ನಿಯಂತ್ರಿಸಲು ಪೊಲೀಸರಿಂದ ನೆರವನ್ನು ಕೋರಬಹುದು.

203. ಕಟ್ಟಡ ನಿರ್ಮಾಣ ನಿವೇಶನಗಳಾಗಿ ಭೂಮಿಯನ್ನು ವಿಲೆ ಮಾಡುವಾಗ ಖಾತೆದಾರನ ಹೊಣೆಗಾರಿಕೆ.- ಯಾವುದೇ ಜಮೀನಿನ ಖಾತೆದಾರನು ಕಟ್ಟಡ ನಿರ್ಮಾಣಕ್ಕಾಗಿ

ಜಮೀನನ್ನು ಅಥವಾ ಅದರ ಯಾವುದೇ ಭಾಗವನ್ನು ಬಳಸಿದರೆ, ಮಾರಾಟ ಮಾಡಿದರೆ, ಗುತ್ತಿಗೆಗೆ ಕೊಟ್ಟರೆ ಅಥವಾ ಅನ್ಯಥಾ ವಿಲೆ ಮಾಡಿದರೆ, ಅವನು ನಿವೇಶನಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಮತ್ತು ಹಾಲಿ ಇರುವ ಸಾರ್ವಜನಿಕ ಅಥವಾ ಖಾಸಗಿ ಬೀದಿಗೆ ಸಂಪರ್ಕ ಕಲ್ಪಿಸುವ ಬೀದಿಯನ್ನು ಅಥವಾ ಬೀದಿಗಳನ್ನು ನಿರ್ಮಿಸತಕ್ಕದ್ದು.

204. ಹೊಸ ಖಾಸಗಿ ಬೀದಿಗಳ ರಚನೆ.- (1) ಹೊಸ ಖಾಸಗಿ ಬೀದಿಯನ್ನು ವಿನ್ಯಾಸಗೊಳಿಸುವ ಅಥವಾ ನಿರ್ಮಿಸುವ ಉದ್ದೇಶವಿರುವ ಯಾರೇ ವ್ಯಕ್ತಿಯು, ಈ ಕೆಳಕಂಡ ವಿವರಗಳನ್ನು ತೋರಿಸುವ ಪ್ಲಾನ್‌ನೊಂದಿಗೆ ಲಿಖಿತ ಅರ್ಜಿಯನ್ನು ಆಯುಕ್ತರಿಗೆ ಸಲ್ಲಿಸುವುದು, ಎಂದರೆ ,-

(ಎ) ಬೀದಿಯ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ;

(ಬಿ) ಬೀದಿ ಪಂಕ್ತೀಕರಣ ಮತ್ತು ಕಟ್ಟಡದ ಸಾಲು; ಮತ್ತು

(ಸಿ) ಮಟ್ಟಗೊಳಿಸುವಿಕೆ, ನೆಲಹಾಸುವಿಕೆ, ಲೋಹ ಹೊದಿಸುವಿಕೆ, ಕಂಬಕೂರಿಸುವಿಕೆ, ಸಂಪರ್ಕಗೊಳಿಸುವಿಕೆ, ಒಳಚರಂಡಿ ರಚನೆ, ಕಾಲುವೆ ರಚನೆ, ಸಂರಕ್ಷಣೆ ಮತ್ತು ಬೀದಿ ದೀಪ ವ್ಯವಸ್ಥೆಗಾಗಿ ಮಾಡಬೇಕಾದ ಏರ್ಪಾಡುಗಳು.

(2) ಸಾರ್ವಜನಿಕ ಬೀದಿಗಳ ಮಟ್ಟ ಮತ್ತು ಅಗಲ ಹಾಗೂ ಅದರ ಮೇಲೆ ಕಟ್ಟುವ ಕಟ್ಟಡಗಳ ಎತ್ತರ ಕುರಿತಂತೆ ಈ ಅಧಿನಿಯಮದ ಉಪಬಂಧಗಳು ಮತ್ತು ಅದರಡಿಯಲ್ಲಿ ಮಾಡಿದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಬೀದಿಗಳ ಪ್ರಕರಣಗಳಲ್ಲೂ ಸಹ ಅನ್ವಯಿಸತಕ್ಕದ್ದು ಹಾಗೂ ಈ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಎಲ್ಲಾ ವಿವರಗಳು ಆಯುಕ್ತರ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(3) ಈ ಉಪಪ್ರಕರಣದಡಿ ಅರ್ಜಿಯನ್ನು ಸ್ವೀಕರಿಸಿದ ಅರವತ್ತು ದಿನಗಳೊಳಗೆ ಆಯುಕ್ತರು ತಾನು ಸೂಕ್ತವೆಂದು ಭಾವಿಸಬಹುದಾದ ಷರತ್ತುಗಳ ಮೇಲೆ ಬೀದಿ ನಿರ್ಮಾಣ ಮಂಜೂರಾತಿ ನೀಡತಕ್ಕದ್ದು ಅಥವಾ ನೀಡತಕ್ಕದ್ದಲ್ಲ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಮತ್ತಷ್ಟು ಮಾಹಿತಿಯನ್ನು ಕೋರತಕ್ಕದ್ದು.

(4) ಅಂಥ ಅನುಮತಿಯನ್ನು,-

(ಎ) ಪ್ರಸ್ತಾವಿತ ಬೀದಿಯು, ಆಯುಕ್ತರ ಮಾಡಿರುವ ಅಥವಾ ಮಾಡಬಹುದಾದ ಯಾವುದೇ ವ್ಯವಸ್ಥೆಗಳಿಗೆ ಅಥವಾ ಬೀದಿ ಸುಧಾರಣೆಯ ಯಾವುದೇ ಸಾಮಾನ್ಯ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಮಾಡಬಹುದಾದ ಅಭಿಪ್ರಾಯಕ್ಕೆ ತೊಡಕಾದರೆ;

(ಬಿ) ಪ್ರಸ್ತಾವಿತ ಬೀದಿಯು, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳನ್ನು ಪಾಲಿಸದಿದ್ದರೆ; ಅಥವಾ

(ಸಿ) ಪ್ರಸ್ತಾವಿತ ಬೀದಿಯು, ಈಗಾಗಲೇ ಮುಕ್ತವಾಗಿರುವ ಬೀದಿಯ ಕೊನೆಗೆ ಸಂಪರ್ಕವಿರುವಂತೆ ವಿನ್ಯಾಸಗೊಳಿಸದಿದ್ದರೆ,

- ನಿರಾಕರಿಸಬಹುದು.

(5) ಆಯುಕ್ತರ ಆದೇಶಕ್ಕೆ ಅನರೂಪವಾಗಿಲ್ಲದಂತೆ ಯಾರೇ ವ್ಯಕ್ತಿಯು ಯಾವುದೇ ಹೊಸ ಖಾಸಗಿ ಬೀದಿಯನ್ನು ವಿನ್ಯಾಸಗೊಳಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ. ಹೆಚ್ಚುವರಿ ಮಾಹಿತಿಯನ್ನು ಕೋರಿದಲ್ಲಿ, ಅಂಥ ಮಾಹಿತಿಯನ್ನು ಸ್ವೀಕರಿಸುವ ಮೇರೆಗೆ ಆದೇಶಗಳನ್ನು ಹೊರಡಿಸುವವರೆಗೆ ಬೀದಿಯನ್ನು ವಿನ್ಯಾಸಗೊಳಿಸುವ ಅಥವಾ ನಿರ್ಮಿಸುವ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ:

ಪರಂತು, ಆಯುಕ್ತರು, ಸದರಿ ಅರ್ಜಿಯನ್ನು ಅಂತಿಮವಾಗಿ ವ್ಯವಹರಿಸುವುದಕ್ಕೆ ಸಾಧ್ಯವಾಗಿಸಲು ಅಗತ್ಯವೆಂದು ಪರಿಗಣಿಸಿದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಅಂತಹ ಆದೇಶಗಳನ್ನು ಹೊರಡಿರುವುದು ಯಾವುದೇ ಸಂದರ್ಭದಲ್ಲಿ ಅರವತ್ತು ದಿನಗಳಿಗಿಂತ ಹೆಚ್ಚು ವಿಳಂಬವನ್ನು ಮಾಡತಕದ್ದಲ್ಲ.

(6) ಆಯುಕ್ತರು (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಅಥವಾ (5)ನೇ ಉಪಪ್ರಕರಣದ ಅಡಿಯಲ್ಲಿ ಕೇಳಲಾದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದಂದಿನಿಂದ

ಅರವತ್ತು ದಿನಗಳ ಒಳಗೆ, ಅನುಮತಿಯನ್ನು ನಿರಾಕರಿಸದಿದ್ದರೆ, ಅಂಥ ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು ಹಾಗೂ ಅರ್ಜಿದಾರನು ಬೀದಿಯನ್ನು ನಿರ್ಮಿಸಲು ಮುಂದುವರೆಯಬಹುದು, ಆದರೆ, ಈ ಅಧಿನಿಯಮದಡಿಯಲ್ಲಿ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ಮತ್ತು ಅದರಡಿ ರಚಿಸಿದ ನಿಯಮಗಳು ಅಥವಾ ವಿನಿಯಮಗಳು ಅಥವಾ ಉಪವಿಧಿಗಳನ್ನು ಉಲ್ಲಂಘಿಸಬಾರದು.

205. ಈ ಅಧಿನಿಯವನ್ನು ಉಲ್ಲಂಘಿಸಿ ನಿರ್ಮಿಸಿದ ಬೀದಿಯ ಬದಲಾವಣೆ ಅಥವಾ ಧ್ವಂಸಗೊಳಿಸುವಿಕೆ.- (1) ಯಾರೇ ವ್ಯಕ್ತಿಯು, ರಸ್ತೆಗಳ ಪಂಕ್ತೀಕರಣ ಅಥವಾ ಆಯುಕ್ತರ ಆದೇಶಗಳಿಗೆ ಅನುರೂಪವಾಗಿಲ್ಲದಂತೆ ಈ ಅಧಿನಿಯಮದಲ್ಲಿ ಉಲ್ಲೇಖಿಸಲಾದ ಯಾವುದೇ ಬೀದಿಯನ್ನು ವಿನ್ಯಾಸಗೊಳಿಸಿದ್ದಲ್ಲಿ ಅಥವಾ ಗುರುತು ಮಾಡಿರುವಲ್ಲಿ, ಆಯುಕ್ತರು, ಅಪರಾಧಿಗೆ ಈ ಅಧಿನಿಯಮದ ಅಡಿಯಲ್ಲಿ ಕಾನೂನು ಕ್ರಮಕ್ಕೆ ಗುರಿಪಡಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನೋಟಿಸಿನ ಮೂಲಕ,-

(ಎ) ನೋಟಿಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೂ ಮೊದಲು ಆಯುಕ್ತರಗೆ ತೃಪ್ತಿಯಾಗುವಂತೆ ಅಂಥ ಬೀದಿಯನ್ನು ಏಕೆ ಮಾರ್ಪಾಡು ಮಾಡಲಿಲ್ಲ ಹಾಗೂ ಅಂಥ ಮಾರ್ಪಾಡುಗೊಳಿಸುವಿಕೆಯು ಕಾರ್ಯಸಾಧ್ಯವಲ್ಲ, ಅಂಥ ಬೀದಿಯನ್ನು ಏಕೆ ದ್ವಂಸಗೊಳಿಸಲಿಲ್ಲವೆಂದು ಸಾಕಷ್ಟು ಕಾರಣವನ್ನು ತೋರಿಸುವ ಆತನ ಸಹಿ ಇರುವ ಲಿಖಿತ ಹೇಳಿಕೆಯ ಮೂಲಕ ಸಾಕಷ್ಟು ಕಾರಣವನ್ನು ತೋರಿಸಲು; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು, ಅಂಥ ಸಮಯದಲ್ಲಿ ವೈಯಕ್ತಿಕವಾಗಿ ಅಥವಾ ಯುಕ್ತವಾಗಿ ಅಧಿಕೃತಗೊಳಿಸಿದ ಏಜೆಂಟಿನ ಮೂಲಕ ಮತ್ತು ಮೇಲೆ ಹೇಳಿದ ಕಾರಣಗಳನ್ನು ಸ್ಪಷ್ಟಪಡಿಸಲು ಆಯುಕ್ತನ ಮುಂದೆ ಹಾಜರಾಗಲು,

- ಅಪರಾಧಿಯನ್ನು ಅಗತ್ಯಪಡಿಸಬಹುದು.

(2) ಅಂಥ ನೋಟೀಸನ್ನು ಪಡೆದ ಯಾವೊಬ್ಬ ವ್ಯಕ್ತಿಯು, ಅಂಥ ಬೀದಿಯನ್ನು ಏತಕ್ಕಾಗಿ ಮಾರ್ಪಾಡುಗೊಳಿಸಬಾರದು ಅಥವಾ ಧ್ವಂಸ ಮಾಡಬಾರದೆಂದು ಸಾಕಷ್ಟು ಕಾರಣಗಳನ್ನು ಆಯುಕ್ತರಿಗೆ ಮನವರಿಯಾಗುವಂತೆ ಸ್ಪಷ್ಟಪಡಿಸದಿದ್ದಲ್ಲಿ, ಆಯುಕ್ತರು ಅಂಥ ಬೀದಿಯನ್ನು ಮಾರ್ಪಾಡುಗೊಳಿಸುಲು ಅಥವಾ ಧ್ವಂಸಪಡಿಸುವ ನಿರ್ದೇಶನವಿರುವ ಆದೇಶವನ್ನು ಹೊರಡಿಸಬಹುದು.

(3) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅಂಥ ಕಾಮಗಾರಿಯನ್ನು ಕೈಗೊಳ್ಳದಿದ್ದಲ್ಲಿ, ಆಯುಕ್ತರು, ಆತನು ಸೂಕ್ತವೆಂದು ಭಾವಿಸಿದಲ್ಲಿ, ಅದನ್ನು ಕಾರ್ಯಗತಗೊಳಿಸಬಹುದು ಮತ್ತು ಆಯುಕ್ತನು ಇತ್ಯರ್ಥಪಡಿಸಬಹುದಾದಂಥ ಅನುಪಾತದಲ್ಲಿ ಭರಿಸಲಾದ ವೆಚ್ಚವನ್ನು ನಗರ ಪಾಲಿಕೆಯ ಆಸ್ತಿ ತೆರಿಗೆ ಬಾಕಿಗಳಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಖಾತೆದಾರನು ಪಾವತಿಸತಕ್ಕದ್ದು.

206. ಶಾಶ್ವತವಾಗಿ ಮುಚ್ಚಿರುವ ಬೀದಿಗಳ ಉಪಯೋಗ.- ಯಾವುದೇ ಸಾರ್ವಜನಿಕ ಬೀದಿಯನ್ನು ಶಾಶ್ವತವಾಗಿ ಮುಚ್ಚಿದಾಗ, ನಗರ ಪಾಲಿಕೆಯು ವಾಹನ ನಿಲುಗಡೆ, ಬೀದಿಬದಿ ವ್ಯಾಪಾರ ಚಟುವಟಿಕೆ, ಉದ್ಯಾನಗಳು, ನಡುಗೆ ದಾರಿಗಳನ್ನೊಳಗೊಂಡ ಸಾರ್ವಜನಿಕ ಮೂಲಸೌಕರ್ಯ ಸೌಲಭ್ಯಗಳಿಗಾಗಿ ಅಂಥ ಮುಚ್ಚಿದ ಬೀದಿಗಳ ಭಾಗವನ್ನು ಉಪಯೋಗಿಸಲು ಅನುಮತಿಸಬಹುದು.

207. ಬೀದಿಗಳ ಸುಧಾರಣೆಗಾಗಿ ಭೂಮಿ ಮತ್ತು ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು.- (1) ಆಯುಕ್ತರು, ಯಾವಾಗಲೂ ಅಗತ್ಯಪಡಿಸಬಹುದಾದಂಥ ಮಂಜೂರಾತಿಗೆ ಒಳಪಟ್ಟು,-

(ಎ) ಯಾವುದೇ ಸಾರ್ವಜನಿಕ ಬೀದಿಯನ್ನು ಅಗಲಗೊಳಿಸುವ, ತೆರೆಯುವ, ವಿಸ್ತರಿಸುವ ಅಥವಾ ಅನ್ಯಥಾ ಸುಧಾರಣೆ ಮಾಡುವ ಅಥವಾ ಯಾವುದೇ ಹೊಸ ಸಾರ್ವಜನಿಕ ಬೀದಿಯನ್ನು ನಿರ್ಮಿಸುವ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಭೂಮಿಯನ್ನು ಮತ್ತು ಅಂಥ ಭೂಮಿಯ ಮೇಲಿರುವ ಕಟ್ಟಡ ಯಾವುದಾದರೂ ಇದ್ದರೆ, ಅದನ್ನು;

(ಬಿ) ನಗರ ಪಾಲಿಕೆಯು ಆರ್ಜಿಸುವುದು ವಿಹಿತವೆಂದು ಪರಿಗಣಿಸಬಹುದಾದಂಥ ಉದ್ದೇಶಿತ ಬೀದಿಯ ಪಂಕ್ತೀಕರಣದ ಹೊರಗಡೆಯ ಯಾವುದೇ ಭೂಮಿಯನ್ನು, ಅದರ ಮೇಲೆ ಕಟ್ಟಡ ಯಾವುದಾದರೂ ಇದ್ದರೆ ಅದರ ಸಹಿತ;

- ಅದನ್ನು ಸ್ವಾಧೀನ ಪಡಿಸಿಕೊಳ್ಳಬಹುದು.

(2) ಉಪಪ್ರಕರಣ (1)ರ (ಬಿ) ಖಂಡದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿ ಅಥವಾ ಕಟ್ಟಡವನ್ನು, 212ನೇ ಪ್ರಕರಣದ ಅನುಸಾರವಾಗಿ ಹಾಲಿ ಇರುವ ಕಟ್ಟಡ ಯಾವುದಾದರೂ ಇದ್ದರೆ, ಅದನ್ನು ತೆಗೆದುಹಾಕುವುದು, ನಿರ್ಮಿಸಬೇಕಾದ ಹೊಸ ಕಟ್ಟಡ (ಯಾವುದಾದರೂ ಇದ್ದರೆ) ಅದರ ವಿವರವನ್ನು, ಹೊಸ ಕಟ್ಟಡದ(ಯಾವುದಾದರೂ ಇದ್ದರೆ) ನಿರ್ಮಾಣವನ್ನು ಪೂರ್ಣಗೊಳಿಸಬೇಕಾದ ಅವಧಿ ಅಥವಾ ಇತರ ವಿಷಯಗಳ ಬಗ್ಗೆ ಆಯುಕ್ತರು ಸೂಕ್ತವೆಂದು ನಿರ್ಧರಿಸುವಂಥ ಷರತ್ತುಗಳನ್ನು ಒಳಗೊಂಡಿರಬಹುದಾದ ಉದ್ದೇಶಕ್ಕಾಗಿ ಉಪಯೋಗಿಸಬಹುದು.

208. ಕಟ್ಟಡದ ಸಾಲು ಮತ್ತು ಬೀದಿಯ ಪಂಕ್ತೀಕರಣವನ್ನು ನಿಯಮಿಸಲು ಅಧಿಕಾರಗಳು.- ಆಯುಕ್ತರು,-

(ಎ) ಯಾವುದೇ ಸಾರ್ವಜನಿಕ ಬೀದಿ ಅಥವಾ ಕಟ್ಟಡದ ಸಾಲು ಮತ್ತು ಬೀದಿಯ ಪಂಕ್ತೀಕರಣ ಅಥವಾ ಇವೆರಡನ್ನೂ ನಿಯಮಿಸಬಹುದು, ಅದರೆ, ನಿಯಮಿಸಲಾದ ಕಟ್ಟಡ ಸಾಲು ಮತ್ತು ಬೀದಿಯ ಪಂಕ್ತೀಕರಣವು ಮಾಸ್ಟರ್ ಪ್ಲಾನ್ ಮತ್ತು ವಲಯದ ವಿನಿಯಮಗಳಲ್ಲಿ ನಿಯಮಿಸಲಾದ ಮಾನದಂಡಕ್ಕಿಂತಲೂ ಕಡಿಮೆ ಇರತಕ್ಕದ್ದಲ್ಲ.

(ಬಿ) ಕಾಲಕಾಲಕ್ಕೆ, ಆದರೆ ಪ್ರತಿಯೊಂದು ಪ್ರಕರಣದಲ್ಲಿ ಆ ಬಗ್ಗೆ ನಗರ ಪಾಲಿಕೆಯ ಅಧಿಕಾರವನ್ನು ಅದು ಸ್ವೀಕರಿಸುವುದಕ್ಕೆ ಒಳಪಟ್ಟು ಹಾಗೆ ನಿರ್ಧರಿಸಿದ ಯಾವುದೇ ಮಾರ್ಗಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಬದಲಾಗಿ ಹೊಸ ಮಾರ್ಗವನ್ನು ನಿರ್ಧರಿಸಬಹುದು.

ಪರಂತು,

(i) ನಗರ ಪಾಲಿಕೆಯ ಯಾವ ಸಭೆ ಆ ವಿಷಯವನ್ನು ಪರಿಶೀಲಿಸಬೇಕಾಗಿದೆಯೋ ಆ ಸಭೆಗೆ ಕನಿಷ್ಠ ಒಂದು ತಿಂಗಳ ಮೊದಲು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಜಾಹೀರಾತಿನ ಮೂಲಕ ಆಯುಕ್ತರು ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಟ್ಟಿದ್ದ ಹೊರತು ಮತ್ತು ಅದರ ಬಗ್ಗೆ ಆಯುಕ್ತರು ಸಹಿ ಮಾಡಿದ ವಿಶೇಷ ನೋಟೀಸನ್ನು ಯಾವ ಬೀದಿಯ ಅಥವಾ ಬೀದಿಯ ಭಾಗಕ್ಕೆ ಹೊಸ ಮಾರ್ಗವನ್ನು ನಿರ್ಧರಿಸಲು ಪ್ರಸ್ತಾವಿಸಲಾಗಿದೆಯೋ ಆ ಬೀದಿಯಲ್ಲಿ ಅಥವಾ ಬೀದಿಯ ಭಾಗದಲ್ಲಿ ಹಾಕಿದ್ದ ಹೊರತು; ಮತ್ತು

(ii) ಲಿಖಿತದಲ್ಲಿ ಸಲ್ಲಿಸಿದ ಮತ್ತು ಅಂಥ ಸಭೆಯ ದಿನಕ್ಕೆ ಮುಂಚೆ ಮೂರು ಸ್ಪಷ್ಟ ದಿನಗಳಿಗೆ ಕಡಿಮೆಯಿಲ್ಲದಂತೆ ನಗರ ಪಾಲಿಕೆಯ ಕಚೇರಿಯಲ್ಲಿ ಕೊಟ್ಟ ಸದರಿ ಪ್ರಸ್ತಾವಗಳಿಗೆ ಬಂದ ಎಲ್ಲಾ ಆಕ್ಷೇಪಣೆಗಳನ್ನು ನಗರ ಪಾಲಿಕೆಯು ಪರಿಶೀಲಿಸುವವರೆಗೆ,

- ಅಂಥ ಅಧಿಕಾರ/ ಘೋಷಣೆಯನ್ನು ಮಾಡತಕ್ಕದ್ದಲ್ಲ.

209. ಬೀದಿಯ ಪಂಕ್ತೀಕರಣದೊಳಗೆ ಅಥವಾ ಕಟ್ಟಡಗಳ ಸಾಲಿನೊಳಗೆ ಕಟ್ಟಡಗಳ ನಿರ್ಮಾಣದ ಅಥವಾ ಕಟ್ಟಡಗಳ ವಿಸ್ತರಣೆಯ ಮೇಲೆ ನಿರ್ಬಂಧ.- (1) ಯಾರೇ ವ್ಯಕ್ತಿಯು, ಈ ಅಧ್ಯಾಯದ ಮೇರೆಗೆ ನಿರ್ಧರಿಸಲಾದ ಬೀದಿಯ ಪಂಕ್ತೀಕರಣದೊಳಗೆ ಯಾವುದೇ ಕಟ್ಟಡದ ಯಾವುದೇ ಭಾಗವನ್ನು ನಿರ್ಮಿಸತಕ್ಕದ್ದಲ್ಲ,-

(ಎ) ಆಯುಕ್ತರು ಮುಂಬರುವ ದಿನಗಳಲ್ಲಿ ಆಯುಕ್ತರು ತಮ್ಮ ಅಥವಾ ಅವರ ಉತ್ತರಾಧಿಕಾರಿಗಳು, ನಿರ್ಮಿಸಿದ ಯಾವುದೇ ಕಟ್ಟಡ ಅಥವಾ ಅದರ ಯಾವುದೇ ಭಾಗವನ್ನು ತೆಗೆದುಹಾಕಲು, ಕೋರುವ ಸಂದರ್ಭದಲ್ಲಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಬಾರದು; ಮತ್ತು

(ಬಿ) ಅಂಥ ತೆಗೆದುಹಾಕುವುದರ ವೆಚ್ಚಗಳನ್ನು ಸಂದಾಯ ಮಾಡಲು,

ಪರಂತು, ಆಯುಕ್ತರು ತಾನು ಅನುಮತಿಸುವ ಪ್ರತಿಯೊಂದು ಪ್ರಕರಣದಲ್ಲಿ ಮುಖ್ಯ ಆಯುಕ್ತನಿಗೆ ಲಿಖಿತದಲ್ಲಿ ತನ್ನ ಕಾರಣಗಳನ್ನು ವರದಿ ಮಾಡತಕ್ಕದ್ದು.

(2) ನಿಯಮಿಸಿದ ಬೀದಿಯ ಪಂಕ್ತೀಕರಣದೊಳಗೆ ಸಂಪೂರ್ಣವಾಗಿ ಅಥವಾ ಭಾಗಶಃ ಪ್ರಸ್ತಾವಿಸಿದ ನಿವೇಶನವು ಬರುತ್ತದೆ ಎಂಬ ಕಾರಣದ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಅದಕ್ಕೆ ವಿಸ್ತರಣೆ ಮಾಡಲು, ಅನುಮತಿಯನ್ನು ನೀಡಲು ಆಯುಕ್ತರು ನಿರಾಕರಿಸಿದರೆ, ಹಾಗೂ ಅಂಥ ಪಂಕ್ತೀಕರಣದೊಳಗೆ ಬರುವ ಅಂಥ ನಿವೇಶನವನ್ನು ಅಥವಾ ಅದರ ಭಾಗವನ್ನು ಅಂಥ ನಿರಾಕರಣೆಯ ದಿನಾಂಕದ ತರುವಾಯ ಒಂದು ವರ್ಷದೊಳಗೆ ನಗರ ಪಾಲಿಕೆಯ ಪರವಾಗಿ ಸ್ವಾದೀನಪಡಿಸಿಕೊಳ್ಳದಿದ್ದಲ್ಲಿ, ನಗರ ಪಾಲಿಕೆಯು ಆ ನಿವೇಶನದ ಮಾಲೀಕನಿಗೆ ಸೂಕ್ತ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) ಈ ಅಧ್ಯಾಯದ ಮೇರೆಗೆ ನಿರ್ಧರಿಸಿದ ಬೀದಿಯ ಪಂಕ್ತೀಕರಣ ಮತ್ತು ಕಟ್ಟಡದ ಸಾಲುಗಳ ನಡುವೆ ಯಾವುದೇ ಕಟ್ಟಡವನ್ನು ಯಾರೇ ವ್ಯಕ್ತಿಯು ನಿರ್ಮಿಸತಕ್ಕದ್ದಲ್ಲ ಅಥವಾ ಅದಕ್ಕೆ ವಿಸ್ತರಣೆ ಮಾಡತಕ್ಕದ್ದಲ್ಲ.

210. ಮುಂಚಾಚಿದ ಕಟ್ಟಡವನ್ನು ಅಥವಾ ಗೋಡೆಯನ್ನು ಹಿಂದಕ್ಕೆ ಕಟ್ಟುವುದು. - (1) ಸಾರ್ವಜನಿಕ ಬೀದಿಗೆ ಹೊಂದಿಕೊಂಡಿರುವ ಯಾವುದೇ ಕಟ್ಟಡ ಅಥವಾ ಅದರ ಭಾಗವು ಈ ಅಧ್ಯಾಯದ ಅಡಿಯಲ್ಲಿ ಪರಿಭಾಷಿಸಿದ ಪಂಕ್ತೀಕರಣದೊಳಗೆ ಇರುವಾಗ, ಅದನ್ನು ಪ್ರಸ್ತಾಪಿಸಿದಾಗಲೆಲ್ಲಾ, ಆಯುಕ್ತರು-

(ಎ) ಅಂಥ ಕಟ್ಟಡವನ್ನು ಪುನಃ ನಿರ್ಮಿಸಲು ಅಥವಾ ನೆಲಮಟ್ಟದಕ್ಕಿಂತ ಅದರ ಅರ್ಧದಷ್ಟು ಎತ್ತರಕ್ಕೆ ಮೀರುವಷ್ಟರ ಮಟ್ಟಿಗೆ ಇಳಿಸಲು ಅಂಥ ಅರ್ಧದಷ್ಟನ್ನು ಘನ ಮೀಟರಿನಲ್ಲಿ ಅಳೆಯಬೇಕು; ಅಥವಾ

(ಬಿ) ಬೀದಿಯ ಪಂಕ್ತೀಕರಣದೊಳಗೆ ಇರುವ ಅಂಥ ಕಟ್ಟಡದ ಯಾವುದೇ ಭಾಗವನ್ನು ತೆಗೆದುಹಾಕಲು, ಪುನಃ ನಿರ್ಮಿಸಲು ಅಥವಾ ಅದಕ್ಕೆ ಯಾವುದೇ ವಿಸ್ತರಣೆ ಮಾಡಲು ಬೀದಿಯ ಪಂಕ್ತೀಕರಣದೊಳಗೆ ಬರುವ ಯಾವುದೇ ಕಟ್ಟಡವು ಅಥವಾ ಅದರ ಯಾವುದೇ ಭಾಗವು ಕುಸಿದಾಗ ಅಥವಾ ಸುಟ್ಟುಹೋಗಿರುವಾಗ ಅಥವಾ ಆಯುಕ್ತರ ಆದೇಶದ ಮೂಲಕವಾಗಿಯಾಗಲಿ ಅಥವಾ ಅನ್ಯಥಾ ಇನ್ನಾವುದೇ ರೀತಿಯಲ್ಲಿ ಕೆಡವಲ್ಪಟ್ಟಿದ ಸದರಿ ಕಟ್ಟಡವು ಆಕ್ರಮಿಸಿಕೊಂಡ ಬೀದಿಯ ಪಂಕ್ತೀಕರಣದೊಳಗಿನ ಭೂಮಿಯ ಭಾಗವನ್ನು ನಗರ ಪಾಲಿಕೆಯ ಪರವಾಗಿ ಆಯುಕ್ತನು ಕೊಡಲೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅವಶ್ಯವಿದ್ದರೆ ಅದನ್ನು ತೆರವುಗೊಳಿಸಬಹುದು.

(2) ಈ ಪ್ರಕರಣದ ಮೇರೆಗೆ ಆರ್ಜಿಸಿದ ಭೂಮಿಯನ್ನು ಆ ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ನಗರ ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು.

(3) ಉಪ-ಪ್ರಕರಣ (1)ರ ಮೇರೆಗೆ ಮಾಡಲಾದ ಯಾವುದೇ ಕೋರಿಕೆಗನುಸಾರವಾಗಿ, ಯಾವುದೇ ಕಟ್ಟಡವನ್ನು ಹಿಂದಕ್ಕೆ ಕಟ್ಟಿದಾಗ ಅಥವಾ ಆಯುಕ್ತರು (2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ, ಅದರಿಂದ ಮಾಲೀಕರಿಗೆ ಉಂಟಾಗಬಹುದು ಯಾವುದೇ ಪ್ರತ್ಯಕ್ಷ ಹಾನಿಗಾಗಿ ಅವನಿಗೆ ಸಂಪೂರ್ಣ ನಷ್ಟಪರಿಹಾರವನ್ನು ತತ್‌ಕ್ಷಣವೇ ನೀಡತಕ್ಕದ್ದು.

ವಿವರಣೆ.- ಭೂಮಿಗೆ ಸಂಬಂಧಿಸಿದಂತೆ (3)ನೇ ಉಪಪ್ರಕರಣದಲ್ಲಿ ಬಳಸಿದ `ಪ್ರತ್ಯಕ್ಷ ಹಾನಿ' ಎಂಬ ಪದಾವಳಿಗೆ, ತೆಗೆದುಕೊಳ್ಳಲಾದ ಭೂಮಿಯ ಮಾರುಕಟ್ಟೆ ಮೌಲ್ಯ ಮತ್ತು ಆ ಪ್ರದೇಶದ ವಿಸ್ತೀರ್ಣವು ಕಡಿಮೆಯಾಗಿದ್ದರಿಂದ ಉಂಟಾಗುವ ಉಳಿದ ಭೂಮಿಯ ಸಾಮಾನ್ಯ ಮಾರುಕಟ್ಟೆ ಮೌಲ್ಯದಲ್ಲಿನ ಸವಕಳಿ ಯಾವುದಾದರೂ ಇದ್ದರೆ ಅದು, ಆದರೆ ಅಂಥ ಬಳಕೆಗೆ ಆ ನಿವೇಶನದ ವಿಸ್ತೀರ್ಣವು ಕಡಿಮೆಯಾಗಿದ್ದರಿಂದ ಹಾನಿಕರವಾಗಿ ಪರಿಣಾಮಬೀರಬಹುದಾಗಿದ್ದರೂ ಯಾವ ವಿಶಿಷ್ಟ ಬಳಕೆಗೆ ಆ ಖಾತದಾರನು ತನ್ನ ಭೂಮಿಯನ್ನು ಬಳಸಲು ಉದ್ದೇಶಿಸಿರುವನೆಂದು ಹೇಳಬಹುದೋ ಆ ಯಾವುದೇ ವಿಶಿಷ್ಟ ಬಳಕೆಯಲ್ಲಿ ಇನ್ನು ಮುಂದೆ ಆಗುವ ನಷ್ಟದಿಂದ ಉಂಟಾಗುವ ಹಾನಿಯನ್ನು ಒಳಗೊಳ್ಳುವುದಿಲ್ಲ.

211. ಬೀದಿಯ ನಿಯತ ರೇಖೆಯ ಹಿಂದಕ್ಕೆ ಕಟ್ಟಡಗಳನ್ನು ಕಟ್ಟುವುದಕ್ಕೆ ಆದೇಶಿಸಲು ಆಯುಕ್ತರಿಗೆ ಹೆಚ್ಚಿನ ಅಧಿಕಾರ.- (1) ಸಾರ್ವಜನಿಕ ಬೀದಿಯ ನಿಯತ ರೇಖೆಯೊಳಗೆ ಯಾವುದೇ ಕಟ್ಟಡವು ಅಥವಾ ಅದರ ಯಾವುದೇ ಭಾಗವು ಇದ್ದರೆ ಮತ್ತು ಆ ಬೀದಿಯ ನಿಯತ ರೇಖೆಗೆ ಆ ಕಟ್ಟಡವನ್ನು ಹಿಂದಕ್ಕೆ ಕಟ್ಟುವುದು ಅವಶ್ಯಕವೆಂದು ಆಯುಕ್ತರು ಅಭಿಪ್ರಾಯಪಟ್ಟರೆ, 216ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಿದ್ದರೆ, ಲಿಖಿತ ನೋಟೀಸಿನ ಮೂಲಕ, ಅವನು-

(ಎ) ಆ ರಸ್ತೆಯ ನಿಯತ ರೇಖೆಯೊಳಗಿರುವ ಆ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಸದರಿ ರೇಖೆಯೊಳಗಿರುವ ಭೂಮಿಯನ್ನು ಆಯುಕ್ತರು ಏಕೆ ಸ್ವಾಧೀನಪಡಿಸಿಕೊಳ್ಳಬಾರದು ಎಂಬುದಕ್ಕೆ ಅಂಥ ಕಟ್ಟಡದ ಖಾತೆದಾರನನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವ ಅವಧಿಯೊಳಗೆ ಅವನು ಅಥವಾ ಆ ಬಗ್ಗೆ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನು ಸಹಿ ಮಾಡಿದ ಮತ್ತು ಆಯುಕ್ತರಿಗೆ ಸಂಬೋಧಿಸಿದ ಲಿಖಿತ ಹೇಳಿಕೆ ಮೂಲಕ ಕಾರಣ ತೋರಿಸಲು ಅಗತ್ಯಪಡಿಸಬಹುದು; ಅಥವಾ

(ಬಿ) ಆ ಬೀದಿಯ ನಿಯತ ರೇಖೆಯೊಳಗಿರುವ ಅಂಥ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಆ ರೇಖೆಯೊಳಗಿನ ಭೂಮಿಯನ್ನು ಆಯುಕ್ತರ ಏಕೆ ಸ್ವಾಧೀನಪಡಿಸಿಕೊಳ್ಳಬಾರದು ಎಂಬುದಕ್ಕೆ ಕಾರಣ ತೋರಿಸಲು ಆ ಖಾತೆದಾರನನ್ನು, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ದಿನದಂದು ಮತ್ತು ಅಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಖುದ್ದಾಗಿ ಅಥವಾ ಆ ಬಗ್ಗೆ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯ ಮೂಲಕ ಹಾಜರಾಗಲು ಅಗತ್ಯಪಡಿಸಬಹುದು.

(2) ಅಂಥ ಖಾತೆದಾರನು, ಬೀದಿಯ ನಿಯತ ರೇಖೆಯೊಳಗಿರುವ ಅಂಥ ಕಟ್ಟಡವನ್ನು ಅಥವಾ ಅದರ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಸದರಿ ರೇಖೆಯೊಳಗಿರುವ ಭೂಮಿಯನ್ನು ಮೇಲೆ ಹೇಳಿರುವಂತೆ ಏಕೆ ಸ್ವಾಧೀನಪಡಿಸಿಕೊಳ್ಳಬಾರದು ಎಂಬುದಕ್ಕೆ ಆಯುಕ್ತರಿಗೆ ಮನವರಿಕೆಯಾಗುವಂಥ ಸಾಕಷ್ಟು ಕಾರಣವನ್ನು ತೋರಿಸಲು ವಿಫಲನಾದರೆ, ಮುಖ್ಯ ಆಯುಕ್ತನ ಅನುಮೋದನೆಯೊಂದಿಗೆ ಲಿಖಿತ ನೋಟೀಸಿನ ಮೂಲಕ ಆ ನೋಟೀಸಿನಲ್ಲಿ ನಿಯಮಿಸಿರುವ ಅವಧಿಯೊಳಗೆ ಆ ಬೀದಿಯ ನಿಯತ ರೇಖೆಯೊಳಗಿರುವ ಆ ಕಟ್ಟಡವನ್ನು ಅಥವಾ ಅದರ ಭಾಗವನ್ನು ಕೆಡವಿಹಾಕುವಂತೆ ಅಂಥ ಖಾತೆದಾರನನ್ನು ಅಗತ್ಯಪಡಿಸಬಹುದು.

(3) ಅಂಥ ಕಟ್ಟಡದ ಖಾತೆದಾರನು ಅಂಥ ಅವಧಿಯೊಳಗೆ ಸದರಿ ರೇಖೆಯೊಳಗೆ ಬರುವ ಅಂಥ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಕೆಡವಿಹಾಕಲು ವಿಫಲನಾದರೆ, ಆಯುಕ್ತರು, ಅದನ್ನು ಕೆಡವಿಹಾಕಬಹುದು ಮತ್ತು ಹಾಗೆ ಕೆಡವಿ ಹಾಕುವುದಕ್ಕಾಗಿ ಭರಿಸಿದ ಎಲ್ಲ ವೆಚ್ಚಗಳನ್ನು ಆ ಖಾತೆದಾರನು ಸಂದಾಯ ಮಾಡತಕ್ಕದ್ದು.

(4) ಆಯುಕ್ತರು ನಗರ ಪಾಲಿಕೆಯ ಪರವಾಗಿ ಕೂಡಲೇ, ಸದರಿ ಕಟ್ಟಡಗಳು ಆ ತನಕ ಸದರಿ ರೇಖೆಯೊಳಗಿನ ಭೂಮಿಯಲ್ಲಿ ಆಕ್ರಮಿಸಿಕೊಂಡಿದ್ದಷ್ಟು ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂದಿನಿಂದ ಅಂಥ ಭೂಮಿಯನ್ನು ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ನಗರ ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು.

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಸರ್ಕಾರದಲ್ಲಿ ನಿಹಿತವಾಗಿರುವ ಕಟ್ಟಡಗಳಿಗೆ ಅನ್ವಯವಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ.

212. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅಧಿಕಾರ.- (1) ಚರಂಡಿ ಸೇರಿದಂತೆ ಯಾವುದೇ ಖಾಸಗಿ ಬೀದಿಯು ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವಾಗುವಂಥ ಸ್ಥಿತಿಯಲ್ಲಿದ್ದರೆ ನಗರ ಪಾಲಿಕೆ ಆಯುಕ್ತರು ಆ ಖಾಸಗಿ ಬೀದಿಗೆ ಸಂಬಂಧಿಸಿದಂತೆ ತಾನೇ ಸ್ವತಃ ಅಥವಾ ಸದರಿ ಖಾಸಗಿ ಬೀದಿಯ ಮಾಲೀಕರ ಅಥವಾ ಅಂಥ ಬೀದಿಯ ಮುಂಭಾಗದಲ್ಲಿರುವ ಅಥವಾ ಹೊಂದಿಕೊಂಡಿರುವ ಕಟ್ಟಡದ ಅಥವಾ ಭೂಮಿಗಳ ಮಾಲೀಕರ ಕೋರಿಕೆಯ ಮೇರೆಗೆ ಸಾರ್ವಜನಿಕ ನೋಟೀಸು ಮತ್ತು ಅಂಥ ಮಾಲೀಕರಿಗೆ ನೋಟಿಸ್ ನೀಡುವ ಮೂಲಕ ಸದರಿ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅದರ ಉದ್ದೇಶವನ್ನು ತಿಳಿಸತಕ್ಕದ್ದು. ಆನಂತರ,

ಅಂಥ ಮಾಲೀಕರು ಅಥವಾ ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯು ಸದರಿ ಉದ್ದೇಶದ ವಿರುದ್ಧ ಯಾವುದೇ ಆಕ್ಷೇಪಣೆಗಳೇನಾದರು ಇದ್ದರೆ ಅಂಥ ಸಾರ್ವಜನಿಕ ನೋಟಿಸ್ ಜಾರಿ ಮಾಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ನಗರ ಪಾಲಿಕೆ ಆಯುಕ್ತರು ಆಕ್ಷೇಪಣೆಗಳೇನಾದರು ಇದ್ದರೆ, ಅವುಗಳನ್ನು ಪರಿಶೀಲಿಸಿದ ತರುವಾಯ ಅಂಥ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸಬಹುದು:

ಪರಂತು, ಖಾಸಗಿ ಬೀದಿಯು ಒಂದಕ್ಕಿಂತ ಹೆಚ್ಚಿನ ನಗರ ಪಾಲಿಕೆಯಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಆಯುಕ್ತರು ನೋಟಿಸ್ ನೀಡತಕ್ಕದ್ದು ಮತ್ತು ಆನಂತರ ತನ್ನ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಆ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸತಕ್ಕದ್ದು:

ಮತ್ತು ಪರಂತು, ಸಾರ್ವಜನಿಕ ಬೀದಿಯೆಂದು ಘೋಷಿಸುವ ಖಾಸಗಿ ಬೀದಿಯು ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಬೀದಿಯಿಂದ ಸಂಪರ್ಕ ಹೊಂದಿರತಕ್ಕದ್ದು.

(2) ಬೀದಿ ಅಥವಾ ಅಂಥ ಬೀದಿಯ ಭಾಗವನ್ನು ಹಿಂದಿನ ಭೂ ಮಾಲೀಕನು ಕ್ರಯಪತ್ರದಲ್ಲಿ ರಸ್ತೆಯನ್ನಾಗಿ ತೋರಿಸಿದ್ದಲ್ಲಿ ಮತ್ತು ಅದನ್ನಾಧರಿಸಿ ಕಟ್ಟಡದ ನಿವೇಶನಕ್ಕೆ ಹೊಂದಿಕೊಂಡಿರುವಂತೆ ಭೂ ಮಾಲೀಕನು ಹೊಂದಿಕೊಂಡಿರುವ ಕಟ್ಟಡ ನಿವೇಶನಗಳನ್ನು ಮಾರಾಟ ಮಾಡುವ ಮೂಲಕ ಅಂಥ ರಸ್ತೆ ಅಥವಾ ಬೀದಿಯ ಪ್ರಯೋಜನವನ್ನು ಪಡೆದುಕೊಂಡಿರುವಲ್ಲಿ ಮತ್ತು (1)ನೇ ಉಪ ಪ್ರಕರಣದ ಮೇರೆಗೆ ಅಂಥ ರಸ್ತೆಯನ್ನು ಸಾರ್ವಜನಿಕ ಬೀದಿಯಾಗಿ ಘೋಷಿಸಿರುವಲ್ಲಿ, ಭೂ ಮಾಲೀಕನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದ ಮೇರೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಸೇರಿದಂತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಜಿತ ಪರಿಹಾರ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ, 2013 ಅಥವಾ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗತಕ್ಕದ್ದಲ್ಲ.

ವಿವರಣೆ I: "ಹಿಂದಿನ ಭೂ ಮಾಲೀಕರು" ಎಂದರೆ, ನಿವೇಶನಗಳನ್ನು ಮಾರಾಟ ಮಾಡುವ ಸಮಯದಲ್ಲಿ ಯಾವ ವ್ಯಕ್ತಿಯ ಹೆಸರಿನಲ್ಲಿ ಕೃಷಿ ಅಥವಾ ಪರಿವರ್ತಿತ ಭೂಮಿ ಇತ್ತೋ ಆ ವ್ಯಕ್ತಿ ಮತ್ತು ಆತನ ಮೇರೆಗೆ ಅಥವಾ ಮೂಲಕ ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

ವಿವರಣೆ II: "ಸಾರ್ವಜನಿಕ ಬೀದಿ" ಎಂದರೆ, ಪಾಲಿಕೆ ಅಥವಾ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುವ ದಾರಿಯ ಹಕ್ಕನ್ನು ಹೊಂದಿರುವ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಓಣಿ, ಹಾದಿ ಅಥವಾ ಅದು ಹೆದ್ದಾರಿಯಾಗಿರಲಿ ಅಥವಾ ಇಲ್ಲದಿರಲಿ ಸವಾರಿ ಮಾರ್ಗ ಮತ್ತು ಈ ಕೆಳಗಿನವುಗಳನ್ನು ಒಳಗೊಂಡಿದೆ:-

(ಎ) ಯಾವುದೇ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮೇಲಿನ ರಸ್ತೆ;

(ಬಿ) ಯಾವುದೇ ಅಂತಹ ಬೀದಿ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿಗೆ ಜೋಡಿಸಲಾದ ಪಾದಚಾರಿ ಮಾರ್ಗ; ಮತ್ತು

ಅಂತಹ ಯಾವುದೇ ರಸ್ತೆ, ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮತ್ತು ಭೂಮಿಗೆ ಹೊಂದಿಕೊಂಡಿರುವ ಚರಂಡಿಗಳು, ಅಕ್ಕಪಕ್ಕದ ಸ್ವತ್ತುಗಳ ಗಡಿಗಳವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ ಯಾವುದೇ ಪಾದಚಾರಿ ವರಾಂಡಾ ಅಥವಾ ಇತರ ನಿರ್ಮಾಣಗಳಿಂದ ಆವೃತವಾಗಿರಲೀ ಅಥವಾ ಇಲ್ಲದಿರಲೀ, ಆ ಸ್ವತ್ತು ಖಾಸಗಿಯೇ ಅಥವಾ ಸರ್ಕಾರದ್ದೇ ಅಥವಾ ಅದು ಪಾಲಿಕೆಗೆ ಸೇರಿದ್ದಾಗಿರಲಿ.

213. ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾವೇ ಕಾರ್ಯಗತಗೊಳಿಸಲು ಆಯುಕ್ತನ ಅಧಿಕಾರ.- (1) 212ನೇ ಪ್ರಕರಣದ ಅಡಿಯಲ್ಲಿ ನೋಟಿಸ್ ನೀಡಿದ ತರುವಾಯ, ಆಕ್ಷೇಪಣೆಗಳು ಅಥವಾ ಯಾವುದೇ ಇತರೆ ಕಾರಣದಿಂದಾಗಿ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಉದ್ದೇಶದಿಂದ ಹಿಂದೆ ಸರಿಯುವುದಕ್ಕೆ ಕಾರಣವಾಗಿದ್ದರೆ, ಆದರೆ ಅನುಭೋಗದ ಹಕ್ಕಿನ ರೂಪದಲ್ಲಿ ಸದರಿ ಬೀದಿಯನ್ನು ಬಳಸುವ ವ್ಯಕ್ತಿಗಳ ಪ್ರಯೋಜನಕ್ಕಾಗಿ ರಸ್ತೆ ಪಕ್ಕದ ಚರಂಡಿಗಳೂ ಸೇರಿದಂತೆ ಖಾಸಗಿ ಬೀದಿ ಅಥವಾ ಅದರ ಭಾಗವನ್ನು

ಸುಧಾರಿಸುವುದು, ಅಭಿವೃದ್ಧಿಪಡಿಸುವುದು, ನಿರ್ವಹಿಸುವುದು ಅಗತ್ಯವಾಗಿದ್ದರೆ, ಆಯುಕ್ತರು ತಮ್ಮ ಅಭಿಪ್ರಾಯದಲ್ಲಿ ಅಗತ್ಯವಾಗಬಹುದಾದಂಥ ಯಾವುದೇ ಕಾಮಗಾರಿಯನ್ನು ಕೈಗೊಳ್ಳುವಂತೆ ಅಂಥ ಮಾಲಿಕರಿಗೆ ನಿರ್ದೇಶಿಸಿ ನೋಟಿಸ್ ನೀಡಬಹುದು ಮತ್ತು ಅಂಥ ನೋಟಿಸ್‌ನಲ್ಲಿ ಯಾವ ಅವಧಿಯೊಳಗೆ ಕಾಮಗಾರಿಯನ್ನು ಕೈಗೊಳ್ಳಬೇಕೆಂಬುದನ್ನು ಸಹ ನಿರ್ದಿಷ್ಟಪಡಿಸಬಹುದು.

(2) ಅಂಥ ಕಾಮಗಾರಿಯನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಕೈಗೊಳ್ಳದಿದ್ದರೆ, ಆಯುಕ್ತನು, ತಾನು ಸೂಕ್ತ ಎಂದು ಭಾವಿಸಿದರೆ, ಆ ಕಾಮಗಾರಿಯನ್ನು ಕೈಗೊಳ್ಳಬಹುದು ಮತ್ತು ಅದಕ್ಕೆ ತಗಲಿದ ವೆಚ್ಚಗಳನ್ನು ಆಯುಕ್ತರು ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮಾಲಿಕರ ಮೂಲಕ ಸಂದಾಯ ಮಾಡತಕ್ಕದ್ದು:

ಪರಂತು, ಸಂದಾಯ ಮಾಡಬೇಕಾದ ವೆಚ್ಚವನ್ನು ಸಂದಾಯ ಮಾಡದಿದ್ದರೆ, ಆಸ್ತಿ ತೆರಿಗೆ ಬಾಕಿಗಳಂತೆ ಮತ್ತು ಆಸ್ತಿ ತೆರಿಗೆ ಬಾಕಿಗಳ ವಸೂಲಿಗಾಗಿ ನಿಯಮಿಸಿದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

214. ಬೀದಿಗಳ ಮೇಲೆ ಮುಂಚಾಚುವಿಕೆಗಳ (projection) ನಿಷೇಧ.- (1) ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಅಥವಾ ಅನಾನುಕೂಲವನ್ನು ಉಂಟು ಮಾಡುವಂಥ ರೀತಿಯಲ್ಲಿ ಮುಂಚಾಚುವಿಕೆಗಳನ್ನು ಯಾವೊಬ್ಬ ವ್ಯಕ್ತಿಯು ನಿಲ್ಲಿಸತಕ್ಕದ್ದಲ್ಲ.

(2) ಅಂಥ ಮುಂಚಾಚುವಿಕೆಗಳನ್ನು ವ್ಯಕ್ತಿಯು ನಿಲ್ಲಿಸಿದ ಸಂದರ್ಭದಲ್ಲಿ, ಆಯುಕ್ತರು ಅಂಥ ಮುಂಚಾಚುವಿಕೆಗಳನ್ನು ತೆಗೆದು ಹಾಕುವಂತೆ ಆತನನ್ನು ಅಗತ್ಯಪಡಿಸತಕ್ಕದ್ದು, ವಿಫಲವಾದಲ್ಲಿ ಆತನ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬಹುದು.

(3) ನಿಯಮಗಳು ಅಥವಾ ಅದರಡಿಯಲ್ಲಿ ನಿಯಮಿಸಿದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

215. ಬೀದಿಗಳಲ್ಲಿ ಅಡ್ಡಿಯನ್ನು ಉಂಟುಮಾಡುವ ರಚನೆಗಳ ಅಥವಾ ಜೋಡಣೆಗಳ ನಿರ್ಬಂಧ.- ಯಾರೇ ವ್ಯಕ್ತಿಯು, ಆಯುಕ್ತನಿಂದ ಅನುಮತಿ ಪಡೆದ ಹೊರತು, ಸ್ಥಿರವಾದ ಅಥವಾ ಚಲಿಸಬಹುದಾದ ಅಥವಾ ಶಾಶ್ವತ ಅಥವಾ ತಾತ್ಕಾಲಿಕ ಸ್ವರೂಪದ ಯಾವುದೇ ಗೋಡೆ, ತಂತಿಬೇಲಿ, ಅಡ್ಡಕಂಬಿ, ಕಂಬ, ಮೆಟ್ಟಿಲು, ರ್‍ಯಾಂಪ್, ಗುಡಾರ (booth) ವನ್ನು ಅಥವಾ ಯಾವುದೇ ಬೀದಿಯಲ್ಲಿ ಅಥವಾ ಅದರ ಮೇಲೆ ಅಥವಾ ಯಾವುದೇ ಮುಕ್ತ ಮಾರ್ಗದ ಮೇಲೆ ಯಾವುದೇ ಬೀದಿಯಲ್ಲಿನ ಕಾಲುವೆ, ಬಾವಿ ಅಥವಾ ಕೆರೆಗೆ ಅಡ್ಡಿಯಾಗುವ ರೀತಿಯಲ್ಲಿ ಅಂಥ ಬೀದಿ ಅಥವಾ ಯಾವುದೇ ಭಾಗ, ಮಾರ್ಗ, ಕಾಲುವೆ, ಬಾವಿ ಅಥವಾ ಕೆರೆಯನ್ನು ಒತ್ತುವರಿ ಮಾಡಿಕೊಂಡು ಅವುಗಳ ಮೇಲೆ ಅಥವಾ ಅವುಗಳಲ್ಲಿ ಯಾವುದೇ ಜೋಡಣೆಯನ್ನು ನಿಲ್ಲಿಸತಕ್ಕದ್ದಲ್ಲ ಅಥವಾ ಸ್ಥಾಪಿಸತಕ್ಕದ್ದಲ್ಲ.

216. ಒತ್ತುವರಿಗಳನ್ನು ತೆರವುಗೊಳಿಸುವುದು.- (1) ಆಯುಕ್ತರು ಅಥವಾ ಅಧಿಕೃತಗೊಂಡ ಅಧಿಕಾರಿಯು, ನೋಟಿಸಿನ ಮೂಲಕ ಯಾವುದೇ ಅಂಥ ಆವರಣಗಳ ಮುಂದೆ ಅಥವಾ ಎದುರಾಗಿ ಇರುವ ಮತ್ತು ಯಾವುದೇ ಅಂಥ ಬೀದಿಯಲ್ಲಿ ಅಥವಾ ಮೇಲೆ ಬಾಗಿಲು, ಗೇಟ್, ಕಂಬಿ ಅಥವಾ ನೆಲಮಹಡಿಯ ಕಿಟಕಿಯನ್ನು ಹೊರತುಪಡಿಸಿ ಯಾವುದೇ ಮುಂಚಾಚುವಿಕೆ, ಒತ್ತುವರಿ ಅಥವಾ ಅಡೆತಡೆಯನ್ನು ನಿವಾರಿಸುವಂತೆ ಅಥವಾ ಮಾರ್ಪಾಡುಗೊಳಿಸುವಂತೆ ಯಾವುದೇ ಆವರಣಗಳ ಖಾತೆದಾರ ಅಥವಾ ಅಧಿಭೋಗದಾರರನ್ನು ಅಗತ್ಯಪಡಿಸಬಹುದುದು.

(2) ಆಯುಕ್ತರು, ನಗರ ಪಾಲಿಕೆಗೆ ಸೇರಿರುವ ಅಥವಾ ಅದರಲ್ಲಿ ನಿಹಿತವಾದ ಅಥವಾ ಅನ್ಯತಾ ಯಾವುದೇ ಪಾದಚಾರಿ ಮಾರ್ಗವನ್ನು ಒಳಗೊಂಡಂತೆ ಯಾವುದೇ ರಸ್ತೆ ಅಥವಾ ಬೀದಿ ಯಾವುದಾದರೂ ಇದ್ದಲ್ಲಿ ಅದನ್ನು ಯಾರೇ ವ್ಯಕ್ತಿಯು ಬೀದಿಯ ಸಂಚಾರ ಅಥವಾ ಪಾದಾಚಾರಿಗಳ ಓಡಾಟಕ್ಕೆ ಮತ್ತು ಬಳಕೆದಾರರಿಗೆ ಅಡಚಣೆ ಅಥವಾ ಅನಾನುಕೂಲವನ್ನು ಉಂಟು ಮಾಡುವಂತೆ ತಾತ್ಕಲಿಕವಾಗಿಯಾಗಲಿ ಅಥವಾ ಶಾಶ್ವತವಾಗಿಯಾಗಲಿ ಯಾವುದೇ ರೀತಿಯಲ್ಲಿ ಒತ್ತುವರಿ ಮಾಡಿದ್ದನೆಂದು ಮನಗಂಡರೆ, ಆಯುಕ್ತರು ಅಂಥ ಒತ್ತುವರಿಗಳನ್ನು ಕೂಡಲೇ ತೆರವುಗೊಳಿಸತಕ್ಕದ್ದು.

(3) ತೊರೆಯುವಂತೆ ನಿರ್ದೇಶಿಸಲಾದ ಅಂಥ ವ್ಯಕ್ತಿಯು ಅದನ್ನು ಪಾಲಿಸುವುದು ಮತ್ತು ಆ ವ್ಯಕ್ತಿಯು ತೊರೆಯುವಲ್ಲಿ ವಿಫಲನಾದರೆ, ಆಯುಕ್ತನು, ಅಂಥ ವ್ಯಕ್ತಿಯ ವಿರುದ್ಧವಾಗಿ ಕ್ರಿಮಿನಲ್ ದೂರನ್ನು ದಾಖಲಿಸಬಹುದು.

217. ಬೀದಿಗಳ ದುರಸ್ತಿಯ ಸಮಯದಲ್ಲಿನ ಮುನ್ನೆಚ್ಚರಿಕೆಗಳು.- (1) ಆಯುಕ್ತರು, ನಗರ ಪಾಲಿಕೆಯಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಬೀದಿಯ ನಿರ್ಮಾಣ ಅಥವಾ ದುರಸ್ತಿಯ ಸಮಯದಲ್ಲಿ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ,-

(ಎ)ಅದಕ್ಕೆ ಬೇಲಿ ಹಾಕುವಂತೆ ಮತ್ತು ಕಾವಲಿರುವಂತೆ ನೋಡಿಕೊಳ್ಳತಕ್ಕದ್ದು;

(ಬಿ) ಪಕ್ಕದಲ್ಲಿರುವ ಕಟ್ಟಡಗಳನ್ನು ಸಂರಕ್ಷಿಸುವ ಮೂಲಕ ಅನಾಹುತಗಳ ವಿರುದ್ಧ ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು;

(2) ಆಯುಕ್ತರು, ನಿರ್ಮಾಣ ಅಥವಾ ದುರಸ್ತಿಯು ನಡೆಯುವಾಗ ರಾತ್ರಿಯ ಸಮಯದಲ್ಲಿ ಅಂಥ ಬೀದಿಯನ್ನು ಸಾಕಷ್ಟು ಬೆಳಕಿರುವಂತೆ ಅಥವಾ ಕಾವಲಿರುವಂತೆ ನೋಡಿಕೊಳ್ಳತಕ್ಕದ್ದು.

(3) ಆಯುಕ್ತರು, ಸದರಿ ಕಾಮಗಾರಿಯನ್ನು ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಮತ್ತು ಆದಷ್ಟು ಬೇಗನೆ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಪೂರ್ಣಗೊಳಿಸುವ ಹಾಗೆ ಮಾಡತಕ್ಕದ್ದು.

218. ಅನುಮತಿ ಪಡೆಯದೇ ಬೀದಿಗಳನ್ನು ಮುಕ್ತವಾಗಿಸುವಂತಿಲ್ಲ ಅಥವಾ ಹೊಡೆದುಹಾಕುವಂತಿಲ್ಲ ಮತ್ತು ಅದರ ಮೇಲೆ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸುವಂತಿಲ್ಲ.- (1) ಆಯುಕ್ತನು ಅಥವಾ ಆಯುಕ್ತನ ಲಿಖಿತ ಅನುಮತಿ ಇಲ್ಲದೆ ನಗರ ಪಾಲಿಕೆಯ ನೌಕರರನ್ನು ಹೊರತುಪಡಿಸಿ ಯಾರೇ ವ್ಯಕ್ತಿ ಅಥವಾ ಏಜೆನ್ಸಿಯು,-

(ಎ) ಯಾವುದೇ ಬೀದಿಯ ಭಾಗವಾಗಿ ರೂಪುಗೊಂಡ ಯಾವುದೇ ಸಾಮಗ್ರಿಯನ್ನು ಮುಕ್ತಗೊಳಿಸತಕ್ಕದ್ದಲ್ಲ, ಹೊಡೆದುಹಾಕತಕ್ಕದ್ದಲ್ಲ, ಸ್ಥಳಾಂತರಿಸತಕ್ಕದ್ದಲ್ಲ, ಕೈಗೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಮಾರ್ಪಾಡು ಮಾಡತಕ್ಕದ್ದಲ್ಲ;

(ಬಿ) ಕಟ್ಟಡದ ನಿರ್ಮಾಣದ ಸಮಯದಲ್ಲಿ ಯಾವುದೇ ಬೀದಿಯಲ್ಲಿ ಯಾವುದೇ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸತಕ್ಕದ್ದಲ್ಲ;

(2) ಆಯುಕ್ತನು ನೋಟೀಸನ್ನು ನೀಡದೆ, ಮೇಲಿನ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅನುಮತಿಯನ್ನು ಪಡೆಯದೇ ಯಾವುದೇ ಬೀದಿಯಲ್ಲಿ ಸಂಗ್ರಹಿಸಿದ ಅಥವಾ ಹಾಕಿದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಸ್ತುಗಳನ್ನು ತೆಗೆದುಹಾಕಿಸಬಹುದು.

219. ಹೆಸರಿಡುವುದು ಮತ್ತು ಸಂಖ್ಯೆ ನೀಡುವುದು.- (1) ಆಯುಕ್ತನು ಯಾವುದೇ ಕಟ್ಟಡದ ಮುಂಭಾಗದಲ್ಲಿ, ಪಕ್ಕಕ್ಕೆ ಅಥವಾ ಹೊರಬಾಗಿಲಿಗೆ ಅಥವಾ ಆವರಣದ ಪ್ರವೇಶದ್ವಾರದಲ್ಲಿರುವ ಯಾವುದಾದರೂ ಸ್ಥಳದಲ್ಲಿ ಸಂಖ್ಯೆಯನ್ನು ಹಾಕುವಂತೆ ಮಾಡಬಹುದು.

(2) ಕಾನೂನುಬದ್ಧ ಅಧಿಕಾರವನ್ನು ಹೊಂದಿರದ ಯಾರೇ ವ್ಯಕ್ತಿಯು, ಅಂಥ ಯಾವುದೇ ಸಂಖ್ಯೆಯನ್ನು ನಾಶಮಾಡತಕ್ಕದ್ದಲ್ಲ, ಕೆಡವತಕ್ಕದ್ದಲ್ಲ ಅಥವಾ ವಿರೂಪಗೊಳಿಸತಕ್ಕದ್ದಲ್ಲ.

(3) ಉಪ-ಪ್ರಕರಣ (1)ರ ಮೇರೆಗೆ ಸಂಖ್ಯೆಯನ್ನು ಹಾಕಿರುವಲ್ಲಿ, ಅಂಥ ಸಂಖ್ಯೆಯನ್ನು ಕಾಪಾಡಿಕೊಳ್ಳುವುದಕ್ಕೆ ಮತ್ತು ಅದನ್ನು ತೆಗೆದುಹಾಕಿದ್ದರೆ ಅಥವಾ ವಿರೂಪಗೊಳಿಸಿದ್ದರೆ ಅದನ್ನು ಬದಲಾಯಿಸುವುದಕ್ಕೆ ಕಟ್ಟಡದ ಮಾಲೀಕನು ಬದ್ಧನಾಗಿರತಕ್ಕದ್ದು. ಆತನು ಹಾಗೆ ಮಾಡಲು ವಿಫಲನಾದರೆ, ಆಯುಕ್ತನು ನೋಟೀಸು ನೀಡುವ ಮೂಲಕ ಅದನ್ನು ಬದಲಾಯಿಸುವಂತೆ ಆತನನ್ನು ಅಗತ್ಯಪಡಿಸಬಹುದು.

(4) ಆಯುಕ್ತರ ಆದೇಶದ ಮೂಲಕ, ಹಾಗೆ ಪ್ರದರ್ಶಿಸಿ ಇರಿಸಲಾದ ಅಥವಾ ಬಣ್ಣದಿಂದ ಬರೆಯಲಾದ ಯಾವುದೇ ಹೆಸರನ್ನು, ಯಾರೇ ವ್ಯಕ್ತಿಯು ಕಾನೂನುಬದ್ಧ ಅಧಿಕಾರವಿಲ್ಲದೆ ನಾಶಮಾಡುವುದು, ತೆಗೆದುಹಾಕುವುದು, ಕೆಡವಿಹಾಕುವುದು, ವಿರೂಪಗೊಳಿಸುವುದು ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸುವುದು ಅಥವಾ ಅದರ ಮೇಲೆ ಬಣ್ಣ ಬಳಿಯುವ ಮೂಲಕ ಬದಲಾಯಿಸತಕ್ಕದ್ದಲ್ಲ.

(5) ಆಯುಕ್ತನು, ಪ್ರತಿಯೊಂದು ಸಾರ್ವಜನಿಕ ಬೀದಿಯ ಹೆಸರನ್ನು ಪ್ರತಿಯೊಂದು ಬೀದಿಯಲ್ಲಿ ಅಥವಾ ಬೀದಿಯ ಕೊನೆಯಲ್ಲಿ, ಮೂಲೆಯಲ್ಲಿ ಅಥವಾ ಪ್ರವೇಶದಲ್ಲಿ, ಕೆಲವು

ಕಟ್ಟಡ, ಗೋಡೆ ಅಥವಾ ಸ್ಥಳಗಳಲ್ಲಿ ಎದ್ದುಕಾಣುವ ಭಾಗದಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಹಾಕತಕ್ಕದ್ದು ಅಥವಾ ಬಣ್ಣದಲ್ಲಿ ಬರೆಸತಕ್ಕದ್ದು.

(6) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಬೀದಿಗಳು, ಆಟದ ಮೈದಾನಗಳು, ಬಡಾವಣೆಗಳು, ಲೇಔಟುಗಳು, ಪ್ರದೇಶಗಳು, ಸಾರ್ವಜನಿಕ ಉದ್ಯಾನ ಅಥವಾ ಅಂಥ ಇತರೆ ನಗರಪಾಲಿಕೆಯ ಸ್ವತ್ತಿಗಳಿಗೆ ಹೆಸರಿಡಲು, ಆಸ್ತಿಗಳಿಗೆ ಮರುಸಂಖ್ಯೆ ನೀಡಲು ಅವಶ್ಯಕ ವಿನಿಯಮಗಳನ್ನು ರಚಿಸತಕ್ಕದ್ದು. ಈ ಬಗ್ಗೆ ಮುಖ್ಯ ಆಯುಕ್ತರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

220. ಸಾರ್ವಜನಿಕ ಬೀದಿಗಳಿಗೆ ದೀಪಗಳನ್ನು ಹಾಕುವುದಕ್ಕೆ ಅವಕಾಶ.- (1) ನಗರ ಪಾಲಿಕೆಯು ಸಾರ್ವಜನಿಕ ಬೀದಿಗಳಿಗೆ ಬೀದಿದೀಪಗಳನ್ನು ಹಾಕುವಂತೆ ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅಗತ್ಯವಿರಬಹುದಾದಷ್ಟು ಬೀದಿ ದೀಪಗಳನ್ನು ಒದಗಿಸತಕ್ಕದ್ದು.

(2) ಆಯುಕ್ತನು ಅಂಥ ಎಲ್ಲಾ ಸಾರ್ವಜನಿಕ ಬೀದಿಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಸೂಕ್ತ ರೀತಿಯಲ್ಲಿ ಬೀದಿ ದೀಪಗಳನ್ನು ಹಾಕಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕದ್ದು.

(3) ಆಯುಕ್ತನು ಸದರಿ ಉದ್ದೇಶಕ್ಕಾಗಿ ಅಗತ್ಯವಿರಬಹುದಾದಷ್ಟು ಸಂಖ್ಯೆಯ ಬೀದಿ ದೀಪಗಳು, ಲ್ಯಾಂಪ್‌ಗಳು, ದೀಪದ ಕಂಬಗಳು ಮತ್ತು ಇತರ ಬಿಡಿ ಭಾಗಗಳ ಖರೀದಿ, ಅಳವಡಿಕೆ ಮತ್ತು ನಿರ್ವಹಣೆಯನ್ನು ಮಾಡತಕ್ಕದ್ದು.

221. ಬೀದಿ ದೀಪಗಳನ್ನು ತೆಗೆಯುವುದಕ್ಕೆ ನಿಷೇಧ.- (1) ಯಾರೇ ವ್ಯಕ್ತಿಯು, ಯಾವುದೇ ಕಾನೂನುಬದ್ಧ ಅಧಿಕಾರವಿಲ್ಲದೆ,-

(ಎ)ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಿದ ಯಾವುವೇ ಬೀದಿ ದೀಪಗಳು, ಲ್ಯಾಂಪ್ ಅಥವಾ ದೀಪದ ಕಂಬವನ್ನು; ಮತ್ತು

(ಬಿ) ಅಂಥ ಬೀದಿ ದೀಪ ಅಥವಾ ಲ್ಯಾಂಪನ್ನು ಬೆಳಗಿಸುವ ಯಾವುದೇ ವಿದ್ಯುತ್ ತಂತಿಯನ್ನು,

-ತೆಗೆದುಕೊಂಡು ಹೋಗುವುದಾಗಲಿ ಅಥವಾ ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಒಡೆದುಹಾಕುವುದಾಗಲಿ ಅಥವಾ ಕೆಳಗೆ ಬೀಳಿಸುವುದಾಗಲಿ ಅಥವಾ ಹಾನಿಗೊಳಿಸುವುದಾಗಲಿ ಮಾಡತಕ್ಕದ್ದಲ್ಲ.

(2) ಯಾವುದೇ ಸಾರ್ವಜನಿಕ ಬೀದಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಿದ ಯಾವುದೇ ಬೀದಿ ದೀಪ ಅಥವಾ ಲ್ಯಾಂಪನ್ನು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ನಂದಿಸತಕ್ಕದ್ದಲ್ಲ.

(3) ಉಪ-ಪ್ರಕರಣ(1)ರಲ್ಲಿ ವಿವರಿಸಿದ ಯಾವುವೇ ವಸ್ತುಗಳನ್ನು, ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಅಥವಾ ಆಕಸ್ಮಿಕವಾಗಿ ಒಡೆದುಹಾಕಿದರೆ ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸಿದರೆ, ಆತನು ಈ ಅಧಿನಿಯಮದ ಮೇರೆಗೆ ಒಳಪಡಬಹುದಾದ ಯಾವುದೇ ದಂಡದ ಜೊತೆಗೆ ಆತನಿಂದ ಉಂಟಾದ ಹಾನಿಯ ದುರಸ್ತಿಗೆ ತಗಲುವ ವೆಚ್ಚವನ್ನು ಆತನು ಸಂದಾಯ ಮಾಡತಕ್ಕದ್ದು ಹಾಗೂ ಆಯುಕ್ತನು ಅಂಥ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ದೂರನ್ನು ನೀಡಬಹುದು.

222. ಕೆಲವು ನಿರ್ಮಾಣಗಳಿಗೆ ಅವಕಾಶ ನೀಡುವ ಅಧಿಕಾರ.- (1) ಆಯುಕ್ತನು, ತಾನು ಸೂಕ್ತವೆಂದು ಭಾವಿಸುವಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಬೀದಿಗೆ ಹೊಂದಿಕೊಂಡಿರುವ ಯಾವುದೇ ಆವರಣದ ಖಾತೆದಾರನಿಗೆ ಅಥವಾ ಅಧಿಭೋಗದಾರನಿಗೆ,-

(ಎ) ತಾತ್ಕಾಲಿಕ ರಚನೆ, ವಾತಾವರಣದ ಚೌಕಟ್ಟುಗಳು, ಸಾಂದರ್ಭಿಕ ಸೌಲಭ್ಯವಾದ ಶಾಮಿಯಾನಗಳು ಮತ್ತು ಅಂತಹವುಗಳನ್ನು ಬೀದಿಯ ಮೇಲೆ ಮುಂಚಾಚಿದಂತೆ ನಿರ್ಮಿಸಲು ಅಥವಾ ಅವುಗಳನ್ನು ಹಾಗೆ ಉಳಿಸಿಕೊಂಡು ಹೋಗಲು; ಅಥವಾ

(ಬಿ) ಯಾವ ಬೀದಿಗಳಲ್ಲಿ ಆರ್ಕೇಡ್‌ಗಳನ್ನು ನಿರ್ಮಿಸಲು ಅಥವಾ ಆರ್ಕೇಡ್‌ಗಳನ್ನು ಉಳಿಸಿಕೊಂಡು ಹೋಗಲು ನಗರ ಪಾಲಿಕೆಯು ಮಂಜೂರಾತಿಯನ್ನು ನೀಡಿದೆಯೋ ಆ ಬೀದಿಗಳಲ್ಲಿ ಆರ್ಕೇಡ್‌ಗಳನ್ನು ನಿರ್ಮಿಸಲು ಅಥವಾ ಉಳಿಸಿಕೊಂಡು ಹೋಗಲು; ಅಥವಾ

(ಸಿ) ಆವರಣದೊಳಗೆ ಪ್ರವೇಶಿಸುವುದಕ್ಕಾಗಿ ಅಗತ್ಯವಾದ ಯಾವುದೇ ಮೆಟ್ಟಿಲನ್ನು ಅಥವಾ ಚರಂಡಿ ಮುಚ್ಚಿಕೆಯನ್ನು ನಿರ್ಮಿಸಲು

- ಲೈಸೆನ್ಸ್‌ನ್ನು ಕೊಡಬಹುದು.

(2) ಆಯುಕ್ತನು, ಯಾವ ಬೀದಿಯ ಅಥವಾ ಸಾರ್ವಜನಿಕ ಸ್ಥಳದ ನಿಯಂತ್ರಣವು ನಗರ ಪಾಲಿಕೆಯಲ್ಲಿ ನಿಹಿತವಾಗಿದೆಯೋ ಆ ಯಾವುದೇ ಬೀದಿಯಲ್ಲಿ ಅಥವಾ ಆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ತಾವು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಯಾವುದೇ ತಾತ್ಕಾಲಿಕ ನಿರ್ಮಾಣಕ್ಕೆ ಲೈಸೆನ್ಸ್ ಕೊಡಬಹುದು.

(3) ಆ ರಚನೆ ಅಥವಾ ನಿರ್ಮಾಣವು ಆರೋಗ್ಯಕ್ಕೆ ಹಾನಿಕರವಾಗುವ ಅಥವಾ ಸಾರ್ವಜನಿಕರಿಗೆ ಅನಾನುಕೂಲ ಉಂಟುಮಾಡುವ ಅಥವಾ ಬೀದಿಯನ್ನು ಹಾಗೆ ಉಪಯೋಗಿಸುವುದಕ್ಕೆ ವಾಸ್ತವವಾಗಿ ಅನ್ಯಥಾ ಅಡ್ಡಿ ಉಂಟು ಮಾಡುವ ಸಂಭವವಿದ್ದರೆ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಲೈಸೆನ್ಸ್ ಕೊಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಯಾವ ಅವಧಿಗೆ ಲೈಸೆನ್ಸನ್ನು ಕೊಡಲಾಗಿದೆಯೋ ಆ ಯಾವುದೇ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅಂಥ ಲೈಸೆನ್ಸನ್ನು ಅಮಾನತುಗೊಳಿಸುವ ಅಥವಾ ರದ್ದುಗೊಳಿಸುವ ಆದೇಶವನ್ನು ಕ್ರಮಬದ್ಧವಾಗಿ ತಿಳಿಸಿದ ತರುವಾಯ ಆಯುಕ್ತನು, ನೋಟೀಸು ನೀಡದೆ (1) ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿರ್ಮಿಸಿದ ಯಾವುದೇ ಮುಂಚಾಚನ್ನು ಅಥವಾ ನಿರ್ಮಾಣವನ್ನು ತೆಗೆದುಹಾಕಿಸಬಹುದು ಮತ್ತು ಹಾಗೆ ಮಾಡಿದ್ದಕ್ಕೆ ಆದ ಖರ್ಚನ್ನು, ಯಾವ ವ್ಯಕ್ತಿಗೆ ಲೈಸೆನ್ಸನ್ನು ಕೊಡಲಾಗಿತ್ತೋ ಆ ವ್ಯಕ್ತಿಯಿಂದ ವಸೂಲಿ ಮಾಡತಕ್ಕದ್ದು.

(5) ನಗರ ಪಾಲಿಕೆಯು, ನಗರ ಪಾಲಿಕೆಯಲ್ಲಿ ನಿಹಿತವಾಗಿರುವ ರಸ್ತೆಯ ಬದಿಗಳನ್ನು, ಬೀದಿಯ ಅಂಚುಗಳನ್ನು ಅದು ನಿಗದಿಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಅವಧಿಗೆ ಬಾಡಿಗೆಗೆ ಕೊಡಲು ಅಧಿಕಾರ ಹೊಂದಿರತಕ್ಕದ್ದು:

ಪರಂತು, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂಥ ಯಾವುದೇ ರಸ್ತೆ ಬದಿಗಳನ್ನು ಮತ್ತು ಬೀದಿಯ ಅಂಚುಗಳನ್ನು ಮೂರು ವರ್ಷಗಳಿಗೆ ಮೀರಿದ ಯಾವುದೇ ಅವಧಿಗೆ ಬಾಡಿಗೆಗೆ ಕೊಡತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದ ಮೇರೆಗೆ ನಗರ ಪಾಲಿಕೆಯು ಬಾಡಿಗೆಗೆ ಕೊಟ್ಟ ರಸ್ತೆ ಬದಿಯ ಅಥವಾ ಬೀದಿ ಅಂಚಿನ ಯಾವುದೇ ಅಧಿಭೋಗವು ಆರೋಗ್ಯಕ್ಕೆ ಹಾನಿಕಾರಕವಾಗುವ ಅಥವಾ ಸಾರ್ವಜನಿಕರಿಗೆ ಅನಾನುಕೂಲ ಉಂಟುಮಾಡುವ ಅಥವಾ ರಸ್ತೆಯ ಬದಿಯನ್ನು ಅಥವಾ ಬೀದಿಯ ಅಂಚನ್ನು ಹಾಗೆ ಉಪಯೋಗಿಸಲು ವಾಸ್ತವವಾಗಿ ಅನ್ಯಥಾ ಅಡ್ಡಿಉಂಟುಮಾಡುವ ಸಂಭವವಿದೆ ಎಂದು ಸರ್ಕಾರವು ಪರಿಗಣಿಸಿದರೆ, ಸರ್ಕಾರವು ಬಾಡಿಗೆಗೆ ಕೊಟ್ಟಿರುವುದನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ನಗರ ಪಾಲಿಕೆಗೆ ನಿರ್ದೇಶಿಸಬಹುದು ಮತ್ತು ನಗರ ಪಾಲಿಕೆಯು ಆ ತರುವಾಯ ತದನುಸಾರವಾಗಿ ಬಾಡಿಗೆಗೆ ಕೊಟ್ಟಿರುವುದನ್ನು ರದ್ದುಪಡಿಸತಕ್ಕದ್ದು ಅಥವಾ ಮಾರ್ಪಾಟು ಮಾಡತಕ್ಕದ್ದು.

ಅಧ್ಯಾಯ XVII
ಕಟ್ಟಡಗಳ ಮತ್ತು ನಗರಯೋಜನೆಗಳ ವಿನಿಯಮನ

223. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪಬಂಧಗಳಿಗನುಸಾರವಾಗಿ ನಗರಪಾಲಿಕೆಯು ಅಧಿಕಾರಗಳನ್ನು ಚಲಾಯಿಸುವುದು.- ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ನಗರ ಪಾಲಿಕೆ ಅಥವಾ ಯಾರೇ ಅಧಿಕಾರಿ ಅಥವಾ ಈ ಅಧಿನಿಯಮ ಅಡಿಯಲ್ಲಿ ಅಥವಾ ಮೂಲಕ ಅಗತ್ಯಪಡಿಸಲಾದ ಇತರ ಪ್ರಾಧಿಕಾರವು,-

(ಎ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ನೇ ಪ್ರಕರಣದ ವಿವರಣೆಯಲ್ಲಿ ಪರಿಭಾಷಿಸಿರುವಂತೆ ಭೂಬಳಕೆ ಅಥವಾ ಅಭಿವೃದ್ಧಿಗೆ ಸಂಬಂಧಿಸಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾಸ್ಟರ್ ಪ್ಲಾನಿನ ಅಂಥ ಭೂ ಬಳಕೆಗೆ ಸಂಬಂಧಿಸಿದಂತೆ ಅಥವಾ ಯಾವುದೇ ಮಾಸ್ಟರ್ ಪ್ಲಾನ್ ಇಲ್ಲದಿದ್ದಲ್ಲಿ, ಯೋಜನಾ ಪ್ರಾಧಿಕಾರದ ಸಮ್ಮತಿಯನ್ನು ಪಡೆದು ಅಂಥ ಅಧಿಕಾರವನ್ನು

ಚಲಾಯಿಸತಕ್ಕದ್ದು ಅಥವಾ ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಅಂಥ ಕರ್ತವ್ಯವನ್ನು ನೆರವೇರಿಸತಕ್ಕದ್ದು;

(ಬಿ) ಯಾರೇ ವ್ಯಕ್ತಿಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಲಾದ ಯಾವುದೇ ಅನುಮತಿ, ಅನುಮೋದನೆ ಅಥವಾ ಮಂಜೂರಾತಿಯನ್ನು, ಅದು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪಬಂಧಗಳನ್ನು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಸುವುದು ಅವಶ್ಯವಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದರೆ, ಸದರಿ ಅಧಿನಿಯಮದ ಉಪಬಂಧಗಳನ್ನು ಪಾಲಿಸಿರುವುದರ ಸಮರ್ಥನೆಯಾಗಿ ಅಂಥ ವ್ಯಕ್ತಿಯು, ಸಂದರ್ಭಾನುಸಾರ ನಗರಪಾಲಿಕೆಗೆ ಅಥವಾ ಅಧಿಕಾರಿಗೆ ಅಥವಾ ಇತರ ಪ್ರಾಧಿಕಾರಕ್ಕೆ ಮನವರಿಕೆಯಾಗುವಂತೆ ಸಾಕ್ಷ್ಯವನ್ನು ಹಾಜರುಪಡಿಸಿದ ಹೊರತು, ಕೊಡತಕ್ಕದ್ದಲ್ಲ;

224. ಕಟ್ಟಡ ಉಪ-ವಿಧಿಗಳು (ಬೈ-ಲಾಗಳು).- (1) ಗೇಟರ್ ಬೆಂಗಳೂರು ಪ್ರಾಧಿಕಾರದ ಅನುಮೋದನೆಯೊಂದಿಗೆ ನಗರ ಪಾಲಿಕೆಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಿವೇಶನಗಳು ಅಥವಾ ಕಟ್ಟಡಗಳ ಬಳಕೆಯನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸಿದ್ಧಪಡಿಸಲಾದ ಮಾದರಿ ಕಟ್ಟಡ ಉಪವಿಧಿಗಳ ಅನುಸಾರ ಅವಶ್ಯಕವಿದ್ದಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಕಟ್ಟಡ ಉಪವಿಧಿಗಳನ್ನು ಈ ಮುಂದಿನವುಗಳಿಗಾಗಿ ಉಪಬಂಧಿಸಬಹುದು,-

(ಎ) ನಗರ ಪಾಲಿಕೆಯ ಅಧಿಕಾರ ವ್ಯಾಪ್ತಿಯ ಒಳಗೆ ಕಟ್ಟಡ ನಿರ್ಮಾಣ ಮಾಡಲು ಕೋರುವ ಯಾರೇ ವ್ಯಕ್ತಿಯು ನಗರ ಪಾಲಿಕೆಗೆ ಸಲ್ಲಿಸುವುದು ಅಗತ್ಯವಾದ ಮಾಹಿತಿ ಮತ್ತು ನಕ್ಷೆಗಳು.

(ಬಿ) ಕಟ್ಟಡಗಳನ್ನು ನಿರ್ಮಾಣ ಮಾಡಬಹುದಾದ ನಿವೇಶನದ ಮಾದರಿ ಮತ್ತು ಅಂಥ ನಿರ್ಮಾಣಕ್ಕಾಗಿ ಅನುಮತಿಸಲಾದ ತಾಂತ್ರಿಕ ಗುಣಮಟ್ಟಗಳು.

(ಸಿ) ಕೆಲವು ಮಾದರಿಯ ನಿರ್ಮಾಣಗಳನ್ನು ಯಾವ ಸ್ಥಳಗಳ ಸುತ್ತಮುತ್ತ ಮಾಡಬಾರದೆಂದು ನಿಷೇಧಿಸಲಾಗಿದೆಯೋ ಆ ಸ್ಥಳಗಳ ಪಟ್ಟಿ.

(ಡಿ) ಬೀದಿಯ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ನಿರ್ಮಾಣ ಮಾಡಲು ಉದ್ದೇಶಿಸಿದ ಕಟ್ಟಡದ ಎತ್ತರ.

(ಇ) ನಿರ್ಮಿಸಲು ಕೋರಿರುವ ಕಟ್ಟಡದ ಅಡಿಪಾಯದ ಮಟ್ಟ ಮತ್ತು ಅಗಲ ಹಾಗೂ ನಿರ್ಮಾಣದ ಅತಿ ಕಡಿಮೆ ಮಹಡಿ ಮತ್ತು ಸ್ಥಿರತೆಯ ಮಟ್ಟ.

(ಎಫ್) ಕಟ್ಟಡದೊಳಗೆ ಮತ್ತು ಹೊರಗೆ ಸಾಕಷ್ಟು ಮುಕ್ತ ಸ್ಥಳಾವಕಾಶ ಮತ್ತು ಕಟ್ಟಡದೊಳಗೆ ಪರ್ಯಾಪ್ತ ಗಾಳಿ ಬೆಳಕಿನ ವ್ಯವಸ್ಥೆ.

(ಜಿ) ಕಟ್ಟಡದಿಂದ ತ್ಯಾಜ್ಯವನ್ನು ತೆಗೆದು ಹಾಕುವುದಕ್ಕಾಗಿ ದ್ವಿತೀಯ ಸಾಧನಗಳ ಅವಕಾಶ.

(ಎಚ್) ಕಟ್ಟಡದೊಳಗೆ ಹೊರ ಮತ್ತು ವಿಭಾಗ (ಪಾರ್ಟಿ) ಗೋಡೆಗಳು, ಮೇಲ್ಛಾವಣಿಗಳು ಹಾಗೂ ಕಟ್ಟಡದ ಮಹಡಿಗಳ ನಿರ್ಮಾಣ ಸಾಮಗ್ರಿಗಳು ಮತ್ತು ವಿಧಾನಗಳು.

(ಐ) ಕಟ್ಟಡದ ಒಳ ಅಥವಾ ಹೊರ ಭಾಗದಲ್ಲಿ ಆಂತರಿಕ ಒಳ ರಚನೆಗಳು, ಹೊಗೆ ಹೋಗುವ ಸಾಧನಗಳು, ಚಿಮ್ನಿಗಳು, ಮೆಟ್ಟಿಲುಗಳು, ಪಾಯಿಖಾನೆಗಳು, ಚರಂಡಿಗಳು, ರೊಚ್ಚು ಗುಂಡಿಗಳ ನಿರ್ಮಾಣದ ಸ್ಥಳ, ಸಾಮಗ್ರಿಗಳು ಮತ್ತು ವಿಧಾನಗಳು.

(ಜೆ) ಕಟ್ಟಡವನ್ನು ನಿರ್ಮಿಸಲು ಕೋರಿರುವ ನಿವೇಶನದೊಳಗಿನ ಪ್ರಾಂಗಣದ ಸ್ಥಳ.

(ಕೆ) ಇತರೆ ಸಂಬಂಧಪಟ್ಟ ವಿನಿಯಮಗಳ ಅನುಸಾರವಾಗಿ, ಕಟ್ಟಡದೊಳಗೆ ದಹನಾನುಕೂಲಿ ವಸ್ತುಗಳ ಬಳಕೆಯ ಮೇಲಿನ ನಿರ್ಬಂಧಗಳು.

(ಎಲ್) ಕಟ್ಟಡದೊಳಗೆ ಲಿಫ್ಟ್-ಗಳ ವ್ಯವಸ್ಥೆ ಹಾಗೂ ಸಾಮಾನ್ಯ ಸೌಕರ್ಯಗಳು, ರ್ಯಾಂಪ್‌ಗಳು ಮತ್ತು ವಿಶೇಷ ಚೇತನರಿಗಾಗಿ ಸೌಕರ್ಯಗಳು.

(ಎಂ) ಅಗ್ನಿಶಾಮಕ ಯೋಜನೆ ಅನುಸಾರ ಕಟ್ಟಡದೊಳಗೆ ಅಗತ್ಯ ಅಗ್ನಿಶಾಮಕ ಸಾಧನ.

(ಎನ್) ಕಟ್ಟಡದೊಳಗೆ ಅಗತ್ಯವಾದ ಕನಿಷ್ಠ ನೆಡುತೋಪು (ಪ್ಲಾಂಟೇಷನ್).

(ಓ) ಕಟ್ಟಡದೊಳಗೆ ಮಳೆನೀರು ಕೋಯ್ಲು ವ್ಯವಸ್ಥೆಗಳ ಅಳವಡಿಕೆ ಹಾಗೂ ನವೀಕರಿಸಬಹುದಾದ ಇಂಧನದ ಅಳವಡಿಕೆಗಳಿಗೆ ಅವಕಾಶಗಳು.

(ಪಿ) ಕಟ್ಟಡಗಳ ನಿರ್ಮಾಣ ಅವಧಿಯಲ್ಲಿ ಬಳಸಬೇಕಾಗುವ ಸಾಮಗ್ರಿಗಳ ಕನಿಷ್ಠ ಗುಣಮಟ್ಟ.

(ಕ್ಯೂ) ವಿಶೇಷ ಚೇತನರಿಗಾಗಿ ವ್ಯವಸ್ಥೆ, ಇವಿ ಚಾರ್ಜಿಂಗ್, ದೂರವಾಣಿ ಸೇವೆಗಳು ಮತ್ತು ಇತರ ಉಪಯುಕ್ತತೆಗಳು.

(2) ಯಾವುದೇ ಭೂಮಿಯ ಭಾಗವನ್ನು ಕಟ್ಟಡದ ನಿರ್ಮಾಣಕ್ಕಾಗಿ ಅಥವಾ ಮರು ನಿರ್ಮಾಣಕ್ಕಾಗಿ ಕಟ್ಟಡ ನಿವೇಶದಂತೆ ಬಳಸತಕ್ಕದ್ದಲ್ಲ ಮತ್ತು ಯಾವುದೇ ಕಟ್ಟಡವನ್ನು ಕಟ್ಟಡ ನಿವೇಶನಗಳ ಬಳಕೆ ಅಥವಾ ಕಟ್ಟಡಗಳ ನಿರ್ಮಾಣ ಅಥವಾ ಮರುನಿರ್ಮಾಣಗಳಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂದ ಮತ್ತು ಅದರಡಿ ಮಾಡಲಾದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ ಅನುಸಾರವಾಗಿ ಹೊರತು ನಿರ್ಮಾಣ ಅಥವಾ ಮರುನಿರ್ಮಾಣ ಮಾಡತಕ್ಕದ್ದಲ್ಲ.

225. ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಒದಗಿಸುವ ಹೊಣೆಗಾರಿಕೆ.- ಕಟ್ಟಡ ನಿರ್ಮಿಸಲು ಪ್ರಸ್ತಾವಿಸಿದ ಪ್ರತಿಯೊಬ್ಬ ಖಾತೆದಾರನು ನೀರಿನ ಸಂಗ್ರಹಣೆಗಾಗಿ, ಅಂತರ್ಜಲ ಪೂರಣ ಅಥವಾ ಬಳಕೆಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964 ಹಾಗೂ ಅದರಡಿ ಹೊರಡಿಸಲಾದ ವಿನಿಯಮಗಳು ಮತ್ತು ಮಾರ್ಗದರ್ಶನಗಳಲ್ಲಿ ಉಪಬಂಧಿಸಲಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ನಿವೇಶನದಲ್ಲಿ ಮಳೆನೀರು ಕೋಯ್ಲಿನ ರಚನೆಯನ್ನು ಒದಗಿಸತಕ್ಕದ್ದು.

226. ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬಿಟ್ಟುಕೊಡುವಿಕೆ.- ನಗರ ಪಾಲಿಕೆ ಅಥವಾ ಯಾವುದೇ ಇತರ ಪ್ರಾಧಿಕಾರವು ರಸ್ತೆ ಅಗಲೀಕರಣಕ್ಕೆ ಮೊದಲು ಕಟ್ಟಡದ ನಕ್ಷೆಯನ್ನು ಮಂಜೂರು ಮಾಡಲು ಕೋರಿಕೆಯನ್ನು ಸಲ್ಲಿಸಿದ ಸಂದರ್ಭದಲ್ಲಿ ಖಾತೆದಾರ ಅಥವಾ ವ್ಯಕ್ತಿಯು ಜವಾಬ್ದಾರನಾಗುವನು.

(i) ಕಟ್ಟಡ ನಿವೇಶನದ ಖಾತೆದಾರನು ಈ ಅಧಿನಿಯಮದ ಅಡಿಯಲ್ಲಿ ಕಟ್ಟಡದ ಯೋಜನೆಗಳಿಗೆ ಮಂಜೂರಾತಿ ನೀಡುವ ಮೊದಲು ಮಾಸ್ಟರ್ ಪ್ಲಾನಿನಲ್ಲಿ ಅಥವಾ ನಗರ ಪಾಲಿಕೆಯು ಅಧಿಸೂಚಿಸಿದಂತೆ ರಸ್ತೆ ರಚನೆ ಅಥವಾ ಅಗಲೀಕರಣಕ್ಕಾಗಿ ಅಗತ್ಯವಿರುವ ಅಥವಾ ಕಾಯ್ದಿರಿಸಿದ ಪ್ರದೇಶವನ್ನು ಎಲ್ಲಾ ಹೊರೆಗಳಿಂದ ಮುಕ್ತಗೊಳಿಸತಕ್ಕದ್ದು.

(ii) ರಸ್ತೆಯ ನಿರ್ಮಾಣಕ್ಕಾಗಿ ಅಥವಾ ಪ್ರಸ್ತುತ ಇರುವ ರಸ್ತೆಯ ಅಗಲೀಕರಣಕ್ಕಾಗಿ ಅನುಮತಿಸಬಹುದಾದ ಲಭ್ಯ ಎಫ್ಎಆರ್ ಪ್ರದೇಶವನ್ನು ಬಿಟ್ಟುಕೊಟ್ಟ ಮೇಲೆ ಕಟ್ಟಡದ ನಿವೇಶನ ಪ್ರದೇಶಕ್ಕಾಗಿ ಉಳಿದ ನಿವೇಶನಕ್ಕೆ ಬದಲಾಗಿ ಬಳಸಬೇಕಾದ ನೆಲದ ವಿಸ್ತೀರ್ಣದ ಎರಡುಪಟ್ಟನ್ನು ಪಡೆಯಲು ಅರ್ಹರಾಗಿರುತ್ತಾರೆ.

(iii) ಉಪಪ್ರಕರಣ (1) ರ ಅನುಸಾರ ನಗರ ಪಾಲಿಕೆಗೆ ಬಿಟ್ಟುಕೊಟ್ಟಿರುವ ಕಟ್ಟಡದ ನಿವೇಶನದ ಪ್ರದೇಶವು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961(1963ರ ಕರ್ನಾಟಕ ಅಧಿನಿಯಮ 11) ರ ಪ್ರಕರಣ 14ಬಿ ಅಡಿಯಲ್ಲಿ ಅಭಿವೃದ್ಧಿ ಹಕ್ಕುಗಳನ್ನು ಒಳಗೊಂಡಂತೆ ಯಾವುದೇ ರೀತಿಯ ಪರಿಹಾರಕ್ಕೆ ಹಕ್ಕುಳ್ಳವರಾಗಿರುವುದಿಲ್ಲ.

(iv) ಈ ಪ್ರಕರಣದ ಅಡಿಯಲ್ಲಿ ಬೀದಿ ರಚನೆ ಅಥವಾ ಅಗಲೀಕರಣಕ್ಕಾಗಿ ಭೂಮಿಯನ್ನು ಉಚಿತವಾಗಿ ಒಪ್ಪಿಸಿದ ಸಂದರ್ಭದಲ್ಲಿ ಅನುಮತಿಸುವ ನೆಲದ ವಿಸ್ತೀರ್ಣ ಅನುಪಾತವನ್ನು ಸಾಧಿಸಲು ಸಾಧ್ಯವಿಲ್ಲವಾದಲ್ಲಿ, ಆಯುಕ್ತನು ಸರ್ಕಾರವು ಅಧಿಸೂಚಿಸಿದಂತೆ ಗರಿಷ್ಠ ಶೇಕಡಾ ಇಪ್ಪತ್ತೈದರಷ್ಟು ವಿಸ್ತರಿಸಬಹುದಾದ ಸೆಟ್‌ಬ್ಯಾಕ್‌ಗಳು ಮತ್ತು ಕವರೇಜನ್ನು ಸಡಿಲಿಸಲು ಪರಿಗಣಿಸಬಹುದು.

227. ಬೀದಿಗಳ ಮೂಲೆಯಲ್ಲಿ ಕಟ್ಟಡ ಕಟ್ಟುವುದು.- (1) ನಗರ ಪಾಲಿಕೆಯು, ಎರಡು ಬೀದಿಗಳ ಮೂಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಯಾವುದೇ ಕಟ್ಟಡವನ್ನು ತಾನು ಅನ್ಯಥಾ

ನಿರ್ಧರಿಸಬಹುದಾದಂಥ ಎತ್ತರಕ್ಕೆ ಮತ್ತು ಅಂಥ ವಿಸ್ತೀರ್ಣಕ್ಕೆ ನೇರ್ಪಡಿಸಲು ಅಥವಾ ಎದ್ದು ಕಾಣುವಂತೆ ಮಾಡಲು ಅಗತ್ಯಪಡಿಸಬಹುದು ಮತ್ತು ಸಾರ್ವಜನಿಕರ ಅನುಕೂಲತೆ ಅಥವಾ ಸೌಕರ್ಯಕ್ಕಾಗಿ ಅದು ಅವಶ್ಯವೆಂದು ಪರಿಗಣಿಸಬಹುದಾದಂತೆ ಮೂಲೆಯಲ್ಲಿನ ನಿವೇಶನದ ಅಂಥ ಭಾಗವನ್ನು ಬಿಟ್ಟು ಕೊಡುವಂತೆ ಅಗತ್ಯಪಡಿಸಬಹುದು.

(2) ಹಾಗೆ ನಗರ ಪಾಲಿಕೆಗೆ ಬಿಟ್ಟುಕೊಡಲಾದ ಯಾವುದೇ ಭೂಮಿಗಾಗಿ, ಈ ಅಧಿನಿಯಮದ 234ನೇ ಪ್ರಕರಣದ ಅನುಸಾರವಾಗಿ ನಿವೇಶನದ ಖಾತೆದಾರನು ನೆಲ ವಿಸ್ತೀರ್ಣದ ಪ್ರಯೋಜನ ಪಡೆಯಲು ಹಕ್ಕುಳ್ಳವನಾಗಿರುವನು.

228. ಮಂಜೂರಾತಿ ಪಡೆಯದ ಕಟ್ಟಡ ನಿರ್ಮಾಣದ ನಿಷೇಧ.- ಯಾರೇ ವ್ಯಕ್ತಿಯು, ಅಂಥ ನಿರ್ಮಾಣವನ್ನು ಕೈಗೊಳ್ಳಲು ಈ ಅಧಿನಿಯಮದ ಅಥವಾ ಕಟ್ಟಡ ಉಪವಿಧಿಗಳ ಅನುಸಾರವಾಗಿ ಹೊರತು ನಗರ ಪಾಲಿಕೆಯ ಪ್ರದೇಶದಲ್ಲಿ ಯಾವುದೇ ಕಟ್ಟಡ ಅಥವಾ ಶಾಶ್ವತ ಸ್ವರೂಪದ ಯಾವುದೇ ನಿರ್ಮಿತಿಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪ್ರಸ್ತುತ ಇರುವ ಕಟ್ಟಡಕ್ಕೆ ಸೇರ್ಪಡೆ, ಬದಲಾವಣೆ ಮತ್ತು ಮಾರ್ಪಾಡು ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ.

229. ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಅರ್ಜಿ.- (1) ಯಾರೇ ವ್ಯಕ್ತಿಯು, ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸಿದರೆ, ಅವನು ಕಾಮಗಾರಿಯನ್ನು ನಿರ್ವಹಿಸಲು ಅನುಮತಿಗಾಗಿ ಲಿಖಿತ ಅರ್ಜಿಯನ್ನು, ಭೂಮಿಯ ಕಟ್ಟಡ ನಿವೇಶನ ನಕ್ಷೆ, ನೆಲನಕ್ಷೆ, ಕಟ್ಟಡದ ಹೊರನೋಟ ನಕ್ಷೆಗಳು ಮತ್ತು ಖಂಡ ಚಿತ್ರಗಳು, ಕಾಮಗಾರಿಯ ತಪಶೀಲು ಮತ್ತು ಕಟ್ಟಡ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ದಸ್ತಾವೇಜುಗಳೊಂದಿಗೆ ಆಯುಕ್ತರಿಗೆ ಕಳುಹಿಸತಕ್ಕದ್ದು.

ವಿವರಣೆ:- ಈ ಉಪಪ್ರಕರಣದಲ್ಲಿ `ಕಟ್ಟಡ' ಎಂಬುದು ಯಾವುದೇ ಸಾರ್ವಜನಿಕ ಬೀದಿಯ ಎಲ್ಲೆ ಗೆರೆಯಲ್ಲಿರುವ ಅಥವಾ ಅದಕ್ಕೆ ಲಗತ್ತಾಗಿರುವ ಯಾವುದೇ ಎತ್ತರದ ಗೋಡೆ ಅಥವಾ ಬೇಲಿಯನ್ನು ಒಳಗೊಳ್ಳತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ಒದಗಿಸಿದ ಪ್ರತಿಯೊಂದು ದಸ್ತಾವೇಜು, ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅದನ್ನು ಅಂಥ ರೀತಿಯಲ್ಲಿ ಸಿದ್ಧಪಡಿಸತಕ್ಕದ್ದು.

230. ಕಟ್ಟಡ ಯೋಜನೆಯ ಮಂಜೂರಾತಿಗಾಗಿ ಪ್ರಕ್ರಿಯೆ.- (1) ಯಾರೇ ವ್ಯಕ್ತಿ ಕಟ್ಟಡ ನಿರ್ಮಾಣ ಅಥವಾ ಪುನರ್-ನಿರ್ಮಾಣ ಮಾಡಲು ಉದ್ದೇಶಿಸಿದ್ದಲ್ಲಿ, ಅನುಮತಿಗಾಗಿ ಅವನು ಅಂಥ ಕಟ್ಟಡ ನಿರ್ಮಾಣ ಅಥವಾ ಪುನರ್-ನಿರ್ಮಾಣ ಕಾರ್ಯ ಕೈಗೊಳ್ಳಲು ಅರ್ಜಿಯ ಮೂಲಕ ಕಟ್ಟಡ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹದಾದಂಥ ದಸ್ತಾವೇಜುಗಳೊಂದಿಗೆ ಕಟ್ಟಡ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಆಯುಕ್ತರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಆಯುಕ್ತನು, ಹೆಚ್ಚುವರಿ ಮುಖ್ಯ ನಗರ ಯೋಜಕನ ಪರಿಶೀಲನೆ ಮತ್ತು ಸಲಹೆಯ ಮೇರೆಗೆ (1)ನೇ ಉಪ-ಪ್ರಕರಣದಡಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅಧಿನಿಯಮ, ಮಾಸ್ಟರ್ ಪ್ಲಾನ್ ಮತ್ತು ಕಟ್ಟಡದ ಉಪವಿಧಿಗಳಿಗೆ ಅನುಗುಣವಾಗಿದ್ದಲ್ಲಿ, ಕಟ್ಟಡ ನಿರ್ಮಾಣ ಕೈಗೊಳ್ಳಲು ಅನುಮತಿ ನೀಡತಕ್ಕದ್ದು ಅಥವಾ ಅರ್ಜಿಯು ಅಧಿನಿಯಮ, ಮಾಸ್ಟರ್ ಪ್ಲಾನ್ ಮತ್ತು ಕಟ್ಟಡ ಉಪವಿಧಿಗಳಿಗೆ ಅನುಗುಣವಾಗಿಲ್ಲದಿದ್ದಲ್ಲಿ ಅಂಥ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು.

(3) ಆಯುಕ್ತನು, ಕಟ್ಟಡದ ನಕ್ಷೆಗಳ ಅನುಮೋದನೆ ಅಥವಾ ತಿರಸ್ಕರಣೆಗಾಗಿನ ಷರತ್ತುಗಳನ್ನು ಪ್ರಕಟಿಸತಕ್ಕದ್ದು.

(4) ಅರ್ಜಿಯನ್ನು ಪರಿಶೀಲಿಸುವಾಗ ಆಯುಕ್ತನ ಮೂಲಕ ಅಧಿಕೃತಗೊಳಿಸಿದ ಅಧಿಕಾರಿ, ಅರ್ಜಿಯ ಪ್ರಕ್ರಿಯೆಗೆ ಸಂಬಂಧಿಸಿದಂಥ ಅಗತ್ಯ ಮಾಹಿತಿಗಳನ್ನು ನಗರ ಪಾಲಿಕೆಯ ವಿವಿಧ ವಿಭಾಗಗಳ ಅಧಿಕಾರಿಗಳಿಂದ ಅಥವಾ ಬಾಹ್ಯ ಇಲಾಖೆಗಳಿಂದ ಕೋರಬಹುದು.

(5) ಆಯುಕ್ತನು, (1)ನೇಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಅರ್ಜಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನಿಗೆ ಕಳುಹಿಸಬೇಕಾದ ಅಗತ್ಯವಿದ್ದಲ್ಲಿ,

ಅಧಿನಿಯಮದ ಅನುಸಾರವಾಗಿ ಮುಖ್ಯ ನಗರ ಯೋಜನಾಧಿಕಾರಿಯೊಂದಿಗೆ ಸಮಾಲೋಚಿಸಿ ಅಂಥ ಅರ್ಜಿಯ ಬಗ್ಗೆ ನಿರ್ಧರಿಸಬಹುದು.

(6) ಈ ಅಧ್ಯಾಯದಡಿ ಮಂಜೂರಾತಿ ನೀಡಿದ ಕಟ್ಟಡ ನಕ್ಷೆಯು ಐದು ವರ್ಷಗಳವರೆಗೆ ಸಿಂಧುವಾಗಿರತಕ್ಕದ್ದು. ಆನಂತರ ವ್ಯಕ್ತಿಯು ಅನುಮತಿಗಾಗಿ ಹೊಸ ಅರ್ಜಿಯನ್ನು ಸಲ್ಲಿಸತಕ್ಕದ್ದು.

(7) ಮಂಜೂರಾತಿ ನಕ್ಷೆಯ ಅನುಪಸ್ಥಿತಿಯಲ್ಲಿ ಕಟ್ಟಡ ನಿರ್ಮಾಣವನ್ನು ಕೈಗೊಂಡ ಯಾರೇ ವ್ಯಕ್ತಿಯು, ಅಂಥ ಕಟ್ಟಡವು ಈ ಅಧ್ಯಾಯದ, ನಿಯಮಗಳ, ವಿನಿಯಮಗಳ ಅಥವಾ ಕಟ್ಟಡ ಉಪವಿಧಿಗಳ ಉಪಬಂಧಗಳ ಅನುಸಾರವಿದ್ದರೆ, ಅಧಿಸೂಚಿಸಬಹುದಾದಂಥ ಸಂಧಾನ ಶುಲ್ಕವನ್ನು ಪಾವತಿಸತಕ್ಕದ್ದು ಹಾಗೂ ಈ ಅಧ್ಯಾಯದ ಅನುಸಾರ ಮಂಜೂರಾತಿ ನಕ್ಷೆಗಾಗಿ ಅರ್ಜಿ ಸಲ್ಲಿಸತಕ್ಕದ್ದು.

(8) ಮಂಜೂರಾತಿ ನಕ್ಷೆಯ ಅನುಸಾರವಾಗಿ ಕಟ್ಟಡ ನಿರ್ಮಾಣ ಮಾಡದೇ ಇರುವಂಥ ಯಾರೇ ವ್ಯಕ್ತಿಗೆ, ಮಾಸ್ಟರ್ ಪ್ಲಾನ್, ವಲಯ ವಿನಿಯಮ ನಕ್ಷೆ ಮತ್ತು ಕಟ್ಟಡ ಉಪವಿಧಿಗಳನ್ನು ದೃಢಪಡಿಸಿಕೊಂಡು ಕಟ್ಟಡದಲ್ಲಿ ಅಂಥ ಮಾರ್ಪಾಡು ಅಥವಾ ಬದಲಾವಣೆ ಕೈಗೊಳ್ಳುವಂತೆ ಆಯುಕ್ತನು ಅಥವಾ ಆತನಿಂದ ಅಧಿಕೃತನಾದ ಯಾರೇ ಅಧಿಕಾರಿಯು ಅಂಥ ವ್ಯಕ್ತಿಗೆ ನಿರ್ದೇಶಿಸಬಹುದು:

(9) ಆಯುಕ್ತನು ಅಥವಾ ಆತನು ಅಧಿಕೃತಗೊಳಿಸಿದಂಥ ಅಧಿಕಾರಿಗಳು ಈ ಅಧಿನಿಯಮದ ಉಪಬಂಧಗಳನ್ನು ಜಾರಿ ಮಾಡುವ ಉದ್ದೇಶಗಳಿಗಾಗಿ ಅಗತ್ಯವಿರುವಂತೆ ಕಟ್ಟಡಗಳನ್ನು ನಿಯತಕಾಲಿಕವಾಗಿ ಭೌತಿಕ ಪರಿಶೀಲನೆಯನ್ನು ಕೈಗೊಳ್ಳಬಹುದು.

(10) ಈ ಪ್ರಕರಣದಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಯಾವುದಾದರೂ ನಿರ್ಮಾಣದಿಂದ ಮನುಷ್ಯ ಜೀವಕ್ಕೆ ಮತ್ತು ಆಸುಪಾಸಿನ ರಕ್ಷಣೆಗೆ ಅಪಾಯವುಂಟಾಗುತ್ತದೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಅಂಥ ಯಾವುದೇ ನಿರ್ಮಾಣವನ್ನು ನಿಲ್ಲಿಸುವುದಕ್ಕಾಗಿ ಆದೇಶವನ್ನು ಮಾಡುವ ಅಧಿಕಾರವನ್ನು ಅವರು ಹೊಂದಿರತಕ್ಕದ್ದು.

(11) ಈ ಅಧ್ಯಾಯದ ಅಡಿಯಲ್ಲಿ ಮಂಜೂರು ಮಾಡಲಾದ ಯೋಜನೆಯು ಭೌತಿಕ ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿ ಸಂಗ್ರಹಿಸಲಾದ ಮತ್ತು ನಿರ್ವಹಿಸಾದ ಸಾರ್ವಜನಿಕ ದಾಖಲೆಯಾಗಿದೆ. ಇದನ್ನು ನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

231. ಕಾಮಗಾರಿಯನ್ನು ನಿರ್ವಹಿಸಲು ಆಯುಕ್ತನು ಯಾವ ಅವಧಿಯೊಳಗೆ ಅನುಮತಿಯನ್ನು ಕೊಡಬಹುದೋ ಅಥವಾ ಅನುಮತಿಯನ್ನು ನಿರಾಕರಿಸಬಹುದೋ ಆ ಅವಧಿ.- (1) ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅನುಮತಿ ಕೋರಿ ಅಥವಾ ಯಾವುದೇ ಮಾಹಿತಿ ಅಥವಾ ದಸ್ತಾವೇಜುಗಳನ್ನು ಅಥವಾ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ಹೆಚ್ಚಿನ ಮಾಹಿತಿ ಅಥವಾ ದಸ್ತಾವೇಜುಗಳನ್ನು ಕೋರಿ 230ನೇ ಪ್ರಕರಣದ (1) ನೇ ಉಪಪ್ರಕರಣದ ಅಡಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮೂವತ್ತು ದಿನಗಳೊಳಗಾಗಿ ಆಯುಕ್ತನು ಲಿಖಿತ ಆದೇಶದ ಮೂಲಕ ಅಂಥ ಅನುಮತಿಯನ್ನು ನೀಡತಕ್ಕದ್ದು ಅಥವಾ ಈ ಅಧ್ಯಾಯದಲ್ಲಿತಿಳಿಸಿದ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದು.

(2) ಆಯುಕ್ತನು ಸದರಿ ಅವಧಿಯೊಳಗಾಗಿ ಯಾವುದೇ ಆದೇಶವನ್ನು ಹೊರಡಿಸದಿದ್ದರೆ, ಅರ್ಜಿದಾರನು ತನ್ನ ಅರ್ಜಿಯ ಬಗ್ಗೆ ಅಗತ್ಯವಾದ ಆದೇಶವನ್ನು ಹೊರಡಿಸುವಂತೆ ಆಯುಕ್ತರನ್ನು ಕೋರಿ ಅವರ ಹೆಸರಿಗೆ ಪತ್ರವನ್ನು ಬರೆಯಬಹುದು ಮತ್ತು ಆಯುಕ್ತನು ಅಂಥ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಇನ್ನೂ ಹದಿನೈದು ದಿನಗಳ ಅವಧಿಯೊಳಗೆ ಲಿಖಿತ ಆದೇಶದ ಮೂಲಕ ಅಂಥ ಅನುಮತಿಯನ್ನು ನೀಡತಕ್ಕದ್ದು ಅಥವಾ ಈ ಅಧಿನಿಯಮದಲ್ಲಿ ತಿಳಿಸಿದ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಅಂಥ ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಹೇಳಲಾದ ಅವಧಿಯೊಳಗೆ ಆಯುಕ್ತನು ಕಟ್ಟಡ ನಿವೇಶನಕ್ಕೆ ಅನುಮೋದನೆಯನ್ನು, ಅಥವಾ ಸಂದರ್ಭಾನುಸಾರ ಯಾವುದೇ ಕಾಮಗಾರಿ ನಿರ್ವಹಿಸಲು

ಅನುಮತಿಯನ್ನು ನೀಡದೇ ಇದ್ದರೆ ಅಥವಾ ತಿರಸ್ಕರಿಸದೇ ಇದ್ದರೆ, ಅರ್ಜಿದಾರನ ಲಿಖಿತ ಮನವಿಯ ಮೇಲೆ, ಅಂಥ ಲಿಖಿತ ಮನವಿಯನ್ನು ಸ್ವೀಕರಿಸಿದಾಗಿನಿಂದ ಒಂದು ತಿಂಗಳೊಳಗಾಗಿ ಅಂಥ ಅನುಮೋದನೆ ಅಥವಾ ಅನುಮತಿಯನ್ನು ನೀಡುವ ಅಥವಾ ನೀಡದೇ ಇರುವ ಬಗ್ಗೆ ನಿರ್ಧಾರವನ್ನು ಲಿಖಿತ ಆದೇಶದ ಮೂಲಕ ಮಾಡಲು ಮುಖ್ಯ ಆಯುಕ್ತನು ಬದ್ಧನಾಗಿರತಕ್ಕದ್ದು. ಅನ್ಯಥಾ, ಅನುಮತಿ ಅಥವಾ ಅನುಮೋದನೆಯನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಕಾಮಗಾರಿ ನಿರ್ವಹಣೆಯನ್ನು ಕೈಗೊಳ್ಳಬಹುದು, ಆದರೆ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಈ ಅಧಿನಿಯಮದಡಿ ಮಾಡಲಾದ ಯಾವುದೇ ನಿಯಮ ಅಥವಾ ಉಪವಿಧಿಗಳನ್ನು ಉಲ್ಲಂಘಿಸತಕ್ಕದ್ದಲ್ಲ.

232. ಈ ಅಧ್ಯಾಯದಡಿ ಅನುಮತಿಯನ್ನು ನೀಡುವುದಕ್ಕಾಗಿ ವಿಧಿಸುವ ಶುಲ್ಕದ ದರವನ್ನು ನಿಗದಿಪಡಿಸುವ ನಗರ ಪಾಲಿಕೆಯ ಅಧಿಕಾರ.- (1) ನಗರ ಪಾಲಿಕೆಯು, ಈ ಅಧ್ಯಾಯದಡಿ ಅನುಮತಿಯನ್ನು ನೀಡುವುದಕ್ಕಾಗಿ ವಿಧಿಸುವ ಶುಲ್ಕದ ದರವನ್ನು ನಿರ್ಧರಿಸತಕ್ಕದ್ದು ಹಾಗೂ ನಗರ ಪಾಲಿಕೆಯು ಈ ಅಧಿನಿಯಮದಡಿ ಕಟ್ಟಡ ನಕ್ಷೆಗಳು, ಮೇಲುಪಾಯ ಪ್ರಮಾಣ ಪತ್ರ (Plinth Certificate) ವನ್ನು ಮಂಜೂರು ಮಾಡುವುದಕ್ಕಾಗಿ ಮತ್ತು ಅಧಿಭೋಗ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ವಿಧಿಸುವ ಶುಲ್ಕ ಅಥವಾ ಸಂಯುಕ್ತ ಶುಲ್ಕದ ದರವನ್ನು ಅಧಿಸೂಚಿಸಲು ಮುಖ್ಯ ಆಯುಕ್ತನಿಗೆ ಸಲಹೆ ನೀಡತಕ್ಕದ್ದು.

(2) ಪಾಲಿಕೆಯ ನಿರ್ಧಾರ ಮತ್ತು ಶಿಫಾರಸ್ಸಿನ ಆಧಾರದ ಮೇಲೆ, ಮುಖ್ಯ ಆಯುಕ್ತನು ಕರ್ನಾಟಕ ಸ್ವಾಮ್ಯಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಅಧಿಸೂಚಿಸಿದಂತೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಈ ಕೆಳಕಂಡಂತಹ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ಅಧಿಸೂಚಿಸತಕ್ಕದ್ದು, ಎಂದರೆ: -

(ಎ) ವಸತಿ ಕಟ್ಟಡಗಳ ಸಂದರ್ಭದಲ್ಲಿ ಮಾರ್ಗಸೂಚಿ ಮೌಲ್ಯದ ಶೇಕಡಾ 0.20 ರಷ್ಟನ್ನು ಮೀರದಂಥ ದರದಲ್ಲಿ ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡಾ 0.30 ರಷ್ಟನ್ನು ಮೀರದಂಥ ದರದಲ್ಲಿ ' ಪರವಾನಿಗೆ ನೀಡಿಕೆ ಶುಲ್ಕ'ದ ದರ.

(ಬಿ) ನಗರ ಪಾಲಿಕೆಯು ಒದಗಿಸಿ ನಿರ್ವಹಿಸುತ್ತಿರುವ ಸಾರ್ವಜನಿಕ ರಸ್ತೆಗಳು ಮತ್ತು ಇತರ ಮೂಲಸೌಕರ್ಯ ಸೌಲಭ್ಯಗಳ ಬಳಕೆಗಾಗಿನ ಶುಲ್ಕ ಸೇರಿದಂತೆ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಹಾಗೂ ನಿರ್ಮಾಣದ ಅವಧಿಯಲ್ಲಿ ಉತ್ಪತ್ತಿಯಾಗುವ ಅವಶೇಷಗಳಿಗಾಗಿ, ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ 0.10 ಕ್ಕಿಂತ ಹೆಚ್ಚಲ್ಲದ ದರದಲ್ಲಿ ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡಾ 0.25ರಷ್ಟು ದರದಲ್ಲಿ 'ಮೂಲಸೌಕರ್ಯ ಮತ್ತು ಪರಿಸರ ಪ್ರಭಾವ ಶುಲ್ಕ'ದ ದರ. ಆದಾಗ್ಯೂ, ಅಂಥ ಪಾವತಿಯು ಕಟ್ಟಡದ ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆ ಮತ್ತು ಕಾಲುದಾರಿಯನ್ನು ಆಕ್ರಮಿಸುವ ಹಕ್ಕನ್ನು ನೀಡುವುದಿಲ್ಲ.

(ಸಿ) ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ 0.15ರಷ್ಟು ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡಾ 0.20ರಷ್ಟು ಮೀರದ ದರದಲ್ಲಿ 'ಮೇಲು ಪಾಯ ಪ್ರಮಾಣಪತ್ರ ಶುಲ್ಕ' (Plinth Certificate) ದ ದರ.

(ಡಿ) ಕಟ್ಟಡ ಪರವಾನಗಿ ಅಥವಾ ಮೇಲು ಪಾಯ ಪ್ರಮಾಣಪತ್ರ (Plinth Certificate) ಅಥವಾ ಅಧಿಭೋಗ ಪ್ರಮಾಣಪತ್ರದ ನೀಡಿಕೆಗಾಗಿ ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ 0.10 ರಷ್ಟು ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡಾ 0.20 ರಷ್ಟನ್ನು ಮೀರದಂಥ ದರದಲ್ಲಿ'ಪರಿಶೀಲನಾ ಶುಲ್ಕ'ದ ದರ.

(ಇ) ನಿರ್ಮಾಣದ ಪ್ರಾರಂಭದಲ್ಲಿ ಮೇಲುಪಾಯ ಪ್ರಮಾಣಪತ್ರವನ್ನು ಪಡೆಯದಿರುವುದಕ್ಕಾಗಿ ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ 0.15 ರಷ್ಟನ್ನು

ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನ ಮಾರ್ಗಸೂಚಿ ಮೌಲ್ಯದ ಶೇಕಡಾ 0.25 ರಷ್ಟನ್ನು ಮೀರದಿರುವ ದರದಲ್ಲಿ ವಿಧಿಸಲಾಗುವ 'ಸಂಯುಕ್ತ ಶುಲ್ಕ'ದ ದರ.

(ಎಫ್) ಮನ್ನಿಸಬಹುದಾದ ಮಿತಿಗಳವರೆಗೆ ಕಟ್ಟಡ ನಿರ್ಮಾಣದ ವಿನ್ಯಾಸದ ಬದಲಾವಣೆಯ ಭಾಗವನ್ನು ಮನ್ನಿಸಲು ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ 0.15 ರಷ್ಟನ್ನು ಮತ್ತು ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಖಾಲಿ ನಿವೇಶನ ಮಾರ್ಗಸೂಚಿ ಮೌಲ್ಯದ ಶೇಕಡಾ 0.25 ರಷ್ಟನ್ನು ಮೀರದಿರುವ ದರದಲ್ಲಿ ನಿಗದಿಪಡಿಸಿದ 'ಸಂಯುಕ್ತ ಶುಲ್ಕ'ದ ದರ.

(ಜಿ) ಮಂಜೂರಾದ ಯೋಜನೆಗೆ ಅನುಗುಣವಾಗಿ ಕಟ್ಟಡ ನಿರ್ಮಾಣವಾಗಿದೆ ಎಂದು ಖಚಿತಪಡಿಸಿಕೊಳ್ಳಲು ವಲಯ ವಿನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ 'ಭದ್ರತಾ ಠೇವಣಿ' .

(ಎಚ್) ಈ ಅಧಿನಿಯಮ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಿದಂಥ ಇತರ ಶುಲ್ಕಗಳು.

233. ಆಯುಕ್ತನಿಂದ ಕರಗಳು, ನಿರ್ಬಂಧ ಮತ್ತು ಷರತ್ತುಗಳ ವಿಧಿಸುವಿಕೆ.- (1) ಆಯುಕ್ತನು, ನಿರ್ಮಿಸಲು ಕೋರಿದ ಪ್ರದೇಶಕ್ಕನುಸಾರವಾಗಿ,, ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಭೂಮಿಯ ನಿವೇಶನ ನಕ್ಷೆ, ನೆಲ ನಕ್ಷೆ, ಕಟ್ಟಡದ ಹೊರನೋಟ ಭಾಗಗಳು (elevations) ಮತ್ತು ವಿಭಾಗಗಳೊಂದಿಗೆ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಂಥ ಅನುಮತಿಯನ್ನು ಮಂಜೂರು ಮಾಡಬಹುದು ಅಥವಾ ಆತನು ಈ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ಅಂಥ ಪರವಾನಿಗೆಯನ್ನು ಮಂಜೂರು ಮಾಡಲು ನಿರಾಕರಿಸಬಹುದು;

(2) ಆಯುಕ್ತನು, ಕಟ್ಟಡದ ಪರವಾನಿಗೆ ನೀಡಿಕೆಗಾಗಿ ಅಥವಾ ಮೇಲುಪಾಯ ಪ್ರಮಾಣಪತ್ರದ ಮಂಜೂರಾತಿಗಾಗಿ ಅಥವಾ ಅಧಿಭೋಗ ಪ್ರಮಾಣಪತ್ರದ ನೀಡಿಕೆಗಾಗಿ ಮುಖ್ಯ ಆಯುಕ್ತನು ಅಧಿಸೂಚಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸತಕ್ಕದ್ದು, ಹೊರಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ: -

(ಎ) ಕಟ್ಟಡದ ಪ್ರಸ್ತಾವಿತ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ ಪರವಾನಿಗೆ ನೀಡಿಕೆ ಶುಲ್ಕ;

(ಬಿ) ನಗರ ಪಾಲಿಕೆಯು ಒದಗಿಸಿ ನಿರ್ವಹಿಸುತ್ತಿರುವ ಸಾರ್ವಜನಿಕ ರಸ್ತೆಗಳು ಮತ್ತು ಇತರ ಮೂಲಸೌಕರ್ಯ ಸೌಲಭ್ಯಗಳ ಬಳಕೆಗಾಗಿನ ಶುಲ್ಕ ಸೇರಿದಂತೆ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಹಾಗೂ ಕಟ್ಟಡದ ನಿರ್ಮಾಣದ ಅವಧಿಯಲ್ಲಿ ಉತ್ಪತ್ತಿಯಾಗುವ ಅವಶೇಷಗಳಿಗಾಗಿ ಮೂಲಸೌಕರ್ಯ ಮತ್ತು ಪರಿಸರ ಪ್ರಭಾವ ಶುಲ್ಕ. ಆದರೆ, ಇದು ಕಟ್ಟಡದ ಪ್ರಸ್ತಾವಿತ ಒಟ್ಟು ನಿರ್ಮಾಣದ ವಿಸ್ತೀರ್ಣಕ್ಕಾಗಿ ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆ ಮತ್ತು ಕಾಲುದಾರಿಯನ್ನು ಆಕ್ರಮಿಸುವ ಹಕ್ಕನ್ನು ನೀಡುವುದಿಲ್ಲ;

(ಸಿ) ಕಟ್ಟಡದ ಪ್ರಸ್ತಾವಿತ ಒಟ್ಟು ನಿರ್ಮಾಣದ ವಿಸ್ತೀರ್ಣಕ್ಕೆ ಕಟ್ಟಡ ಪರವಾನಗಿ, ಮೇಲು ಪಾಯ ಪ್ರಮಾಣಪತ್ರ (Plinth Certificate) ಮತ್ತು ಅಧಿಭೋಗ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಪರಿಶೀಲನಾ ಶುಲ್ಕ;

(ಡಿ) ಕಟ್ಟಡದ ನಿರ್ಮಿತ ವಿಸ್ತೀರ್ಣಕ್ಕಾಗಿ ಮೇಲುಪಾಯ ಪ್ರಮಾಣಪತ್ರವನ್ನು ಪಡೆಯದಿರುವುದಕ್ಕಾಗಿ ಸಂಯುಕ್ತ ಶುಲ್ಕವನ್ನು ವಿಧಿಸತಕ್ಕದ್ದು: ಪರಂತು, ಕಟ್ಟಡ ನಿರ್ಮಾಣವನ್ನು ಮಂಜೂರಾದ ನಕ್ಷೆಗನುಸಾರ ಕೈಗೊಂಡಿರಬೇಕು;

(ಇ) ಈ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದಂತೆ ಮನ್ನಿಸಬಹುದಾದ ಮಿತಿಗಳವರೆಗೆ ಕಟ್ಟಡ ನಿರ್ಮಾಣದ ವಿನ್ಯಾಸ ಬದಲಾವಣೆಯ ಭಾಗವನ್ನು ಮನ್ನಿಸಲು ಸಂಯುಕ್ತ ಶುಲ್ಕ;

(ಎಫ್) ಕಟ್ಟಡದ ನಿರ್ಮಾಣವು ಮಂಜೂರಾದ ನಕ್ಷೆಗನುಸಾರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕಟ್ಟಡದ ಪ್ರಸ್ತಾವಿತ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ ಭದ್ರತಾ ಠೇವಣಿ. ಅನ್ಯಥಾ, ಭದ್ರತಾ ಠೇವಣಿಯನ್ನು ನಗರ ಪಾಲಿಕೆಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು;

(ಜಿ) ಈ ಅಧಿನಿಯಮ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ;

(ಎಚ್) ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಇತರ ಠೇವಣಿ ಅಥವಾ ಶುಲ್ಕ ಅಥವಾ ಉಪಕರವನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು.

234. ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳನ್ನು ವಿಧಿಸುವುದರಿಂದ ವಿನಾಯಿತಿಗಳು.- (1) ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿರುವುದು ಯಾವುದನ್ನೂ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಭೋಗದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಈ ಅಧ್ಯಾಯದಡಿ ಅಥವಾ ಯಾವುದೇ ಅಂಥ ನಿಯಮ ಅಥವಾ ಉಪವಿಧಿಯಡಿಯಲ್ಲಿ ಯಾವುದೇ ಪರವಾನಿಗೆಯನ್ನು ಪಡೆಯುವುದಕ್ಕಾಗಿ ಅಥವಾ ಯಾವುದೇ ಅನುಮತಿಯನ್ನು ಪಡೆಯುವುದಕ್ಕಾಗಿ ಅಗತ್ಯಪಡಿಸಲಾದುದೆಂದು ಅರ್ಥೈಸತಕ್ಕದ್ದಲ್ಲ:

ಪರಂತು, ಸಂಬಂಧಪಟ್ಟ ಇಲಾಖೆಯು ಈ ಅಧಿನಿಯಮ, ನಿಯಮಗಳು, ವಿನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ನಿರ್ಮಾಣವನ್ನು ಕೈಗೊಳ್ಳುವ ಮಾಹಿತಿಯನ್ನು ನಕ್ಷೆಗಳೊಂದಿಗೆ ನಗರ ಪಾಲಿಕೆಗೆ ಕಳುಹಿಸತಕ್ಕದ್ದು;

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸಹ, ನಗರ ಪಾಲಿಕೆಯಲ್ಲಿ ವಿಹಿತವಾದ ಯಾವುದೇ ರಸ್ತೆ ಅಥವಾ ಭೂಮಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ನಿಗಮಕ್ಕೆ ಬಸ್‌ಗಳ ನಿಲುಗಡೆ ಸ್ಥಳಗಳನ್ನು ತೋರಿಸುವ ಫಲಕಗಳ ಅಳವಡಿಕೆ ಅಥವಾ ನಿರ್ಮಾಣ ಅಥವಾ ಪ್ರಯಾಣಿಕರ ತಂಗುದಾಣಗಳು, ಟಿಕೆಟ್ ಬೂತ್‌ಗಳು ಮತ್ತು ಬಸ್ ನಿಲ್ದಾಣಗಳ ನಿರ್ಮಾಣ ಅಥವಾ ರಚನೆಗೆ ಸಂಬಂಧಿಸಿದಂತೆ ಯಾವುದೇ ಪರವಾನಿಗೆ ಅಥವಾ ಅನುಮತಿಯ ಅಗತ್ಯವಿರತಕ್ಕದ್ದಲ್ಲ:

ಮತ್ತು ಪರಂತು, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಈ ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಯಾಣಿಕರ ತಂಗುದಾಣ, ಟಿಕೆಟ್ ಬೂತ್ ಅಥವಾ ಬಸ್ ನಿಲ್ದಾಣವನ್ನು ರಚಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ;

(3) ಈ ಪ್ರಕರಣದ ಅಡಿಯಲ್ಲಿ ನಿರ್ಮಿಸಲಾದ ಅಥವಾ ರಚಿಸಲಾದ ಪ್ರಯಾಣಿಕರ ತಂಗುದಾಣಗಳು, ಟಿಕೆಟ್ ಬೂತ್‌ಗಳು ಮತ್ತು ಬಸ್ ನಿಲ್ದಾಣಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ಮಹಾನಗರ ಸಾರಿಗೆ ನಿಗಮ ಮತ್ತು ನಗರ ಪಾಲಿಕೆಗಳ ನಡುವೆ ಒಪ್ಪಂದವಾಗಿರಬಹುದಾದಂಥ ಮತ್ತು ಅಂಥ ಯಾವುದೇ ಒಪ್ಪಂದವಾಗಿರದಿದ್ದ ಸಂದರ್ಭದಲ್ಲಿ ಸರ್ಕಾರವು ನಿರ್ಧರಿಸಬಹುದಾದಂಥ ವಾರ್ಷಿಕ ನೆಲ ಬಾಡಿಗೆಯನ್ನು ನಗರ ಪಾಲಿಕೆಗೆ ಪಾವತಿಸಲು ಬೆಂಗಳೂರು ಮಹಾನಗರ ಸಾರಿಗೆ ನಿಗಮವು ಹೊಣೆಗಾರನಾಗಿರತಕ್ಕದ್ದು.

235. ಹಾಕಲಾದ, ವಿಧಿಸಲಾದ ಅಥವಾ ನಿರ್ಧರಣೆ ಮಾಡಲಾದ ಶುಲ್ಕವನ್ನು ವಿನಾಯಿತಿಗೊಳಿಸುವ ಅಥವಾ ಕಡಿಮೆಗೊಳಿಸುವ ಸರ್ಕಾರದ ಅಧಿಕಾರ.- (1) ಸರ್ಕಾರವು ಹಾಗೆ ಮಾಡುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅವಶ್ಯಕವೆಂದು ಅಭಿಪ್ರಾಯಪಟ್ಟಲ್ಲಿ, ಅದು ಅಧಿಸೂಚನೆಯ ಮೇರೆಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಹಾಗೂ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ, ಕೇಂದ್ರ ಸರ್ಕಾರ

ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣ ಹೊಂದಿರುವ ಯಾವುದೇ ಮಂಡಳಿ ಅಥವಾ ನಿಗಮ ಅಥವಾ ಸಂಸ್ಥೆಗೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬಹುದಾದ ಶುಲ್ಕವನ್ನು ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ ವಿನಾಯಿತಿಗೊಳಿಸಬಹುದು ಅಥವಾ ಕಡಿಮೆಗೊಳಿಸಬಹುದು.

(2) ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ತಗೊಳಿಸಬಹುದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿರ್ಬಂಧ ಅಥವಾ ಷರತ್ತನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದಲ್ಲಿ ಅಥವಾ ಪಾಲಿಸದೇ ಇದ್ದಲ್ಲಿ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಒದಗಿಸಬೇಕಾದ ಘೋಷಣೆಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಆಗ ಅಂಥ ವ್ಯಕ್ತಿಯು, ಅಂಥ ಉಲ್ಲಂಘನೆ ಅಥವಾ ಅನನುಪಾಲನೆ ನಡೆದಿರುವ ಅಥವಾ ತಪ್ಪು ಘೋಷಣೆ ಒದಗಿಸಿರುವ ಸಂದರ್ಭದಲ್ಲಿ, ಅಧಿನಿಯಮದ ಮೇರೆಗೆ ಅಥವಾ ಅದರಡಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಬಹುದಾದ ಶುಲ್ಕ ಮತ್ತು ಅಧಿಸೂಚನೆ ಅಡಿಯಲ್ಲಿ ಪರಿಗಣನೆಯ ಮೇಲೆ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಿದ ಶುಲ್ಕಗಳ ನಡುವಿನ ವ್ಯತ್ಯಾಸದ ಮೊತ್ತದ ಎರಡರಷ್ಟು ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡಲು ಬಾಧ್ಯನಾಗಿರತಕ್ಕದ್ದು:

ಪರಂತು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು, ಆ ವ್ಯಕ್ತಿಗೆ, ಆತನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

236. ಕಟ್ಟಡ ನಿರ್ಮಾಣಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ಅಥವಾ ಕಟ್ಟಡ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸಬಹುದಾದ ಕಾರಣಗಳು.- (1) ಯಾವ ಕಾರಣಗಳ ಮೇಲೆ ಮಾತ್ರವೇ ಕಟ್ಟಡ ನಿರ್ಮಾಣಕ್ಕಾಗಿ ಅಥವಾ ಪುನರ್ನಿರ್ಮಾಣಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ಅಥವಾ ಕಟ್ಟಡ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸಬಹುದೋ, ಆ ಕಾರಣಗಳು ಕೆಳಕಂಡಂತಿವೆ, ಎಂದರೆ,-

(ಎ) ಕಾಮಗಾರಿಯಲ್ಲಿ ಅಥವಾ ಕಾಮಗಾರಿಗಾಗಿ ನಿವೇಶನದ ಬಳಕೆಯಲ್ಲಿ ಅಥವಾ ನಿವೇಶನದ ನಕ್ಷೆ, ನೆಲನಕ್ಷೆ, ಕಟ್ಟಡದ ಹೊರನೋಟ ನಕ್ಷೆಗಳು, ಖಂಡಚಿತ್ರಗಳು ಅಥವಾ ತಪಶೀಲು ಪಟ್ಟಿಗಳಲ್ಲಿ ಒಳಗೊಂಡಿರುವ ಯಾವುದೇ ವಿವರಗಳಲ್ಲಿ ಯಾವುದೇ ಕಾನೂನಿನ ಯಾವುದೇ ನಿರ್ದಿಷ್ಟ ಉಪಬಂಧಗಳನ್ನು ಅಥವಾ ಯಾವುದೇ ಕಾನೂನಿನ ಮೇರೆಗೆ ಮಾಡಲಾದ ಯಾವುದೇ ನಿರ್ದಿಷ್ಟ ಆದೇಶ, ನಿಯಮ, ಮಹಾ ಯೋಜನೆ ಅಥವಾ ಉಪವಿಧಿಯನ್ನು ಉಲ್ಲಂಘಿಸಿರುವುದು;

(ಬಿ) ಅಂಥ ಅನುಮತಿಯನ್ನು ಕೋರಿ ಸಲ್ಲಿಸಿದ ಅರ್ಜಿಯು ವಿವರಗಳನ್ನು ಒಳಗೊಂಡಿರದಿರುವುದು ಅಥವಾ ಅಂಥ ಅರ್ಜಿಯನ್ನು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ರೀತಿಯಲ್ಲಿ ತಯಾರಿಸಿಲ್ಲದಿರುವುದು;

(ಸಿ) ಈ ಅಧ್ಯಾಯದಲ್ಲಿ ತಿಳಿಸಿದ ಯಾವುವೇ ದಸ್ತಾವೇಜುಗಳಿಗೆ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದಂತೆ ರುಜು ಮಾಡದಿರುವುದು;

(ಡಿ) ನಿಯಮಗಳು, ವಿನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಆಯುಕ್ತನು ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು/ ಮಾಹಿತಿಗಳನ್ನು ಅಥವಾ ದಸ್ತಾವೇಜು/ ದಸ್ತಾವೇಜುಗಳನ್ನು ಯಥೋಚಿತವಾಗಿ ಒದಗಿಸಿಲ್ಲದಿರುವುದು;

(ಇ) XVIನೇ ಅಧ್ಯಾಯದಲ್ಲಿ ಅಗತ್ಯಪಡಿಸಿದಂತೆ ಬೀದಿಗಳನ್ನು ಅಥವಾ ರಸ್ತೆಗಳನ್ನು ನಿರ್ಮಿಸದಿರುವುದು ಅಥವಾ ರಸ್ತೆಗಳ ಶ್ರೇಣಿ ವ್ಯವಸ್ಥೆಯು ಇಲ್ಲದಿರುವುದು;

(ಎಫ್) ಪ್ರಸ್ತಾವಿತ ಕಟ್ಟಡವನ್ನು ಸರ್ಕಾರದ ಅಥವಾ ನಗರ ಪಾಲಿಕೆಯ ಭೂಮಿಯನ್ನು ಒತ್ತುವರಿ ಮಾಡಿ ನಿರ್ಮಿಸಿರುವುದು;

(ಜಿ) ಅಂಥ ಕಟ್ಟಡದ ನಿವೇಶನವು ಬೀದಿಗೆ ಅಥವಾ ಯೋಜಿತ ಬೀದಿಗೆ ಹೊಂದಿಕೊಂಡಿಲ್ಲದಿರುವುದು ಮತ್ತು ಅಂಥ ನಿವೇಶನಕ್ಕೆ ಸೇರಿರುವ ಮತ್ತು

ಯಾವುದೇ ಭಾಗದಲ್ಲಿ ಆರು ಮೀಟರುಗಳಿಗಿಂತ ಕಡಿಮೆಯಿಲ್ಲದಂತೆ ಅಗಲ ಹೊಂದಿರುವ ಮತ್ತು ಹೆಚ್ಚಿನ ಅಗಲದ ಬೀದಿ ಅಥವಾ ರಸ್ತೆಗೆ ಸೇರತಕ್ಕ ಯಾವುದೇ ದಾರಿ ಅಥವಾ ಮಾರ್ಗದ ಮೂಲಕ ಯಾವುದೇ ಅಂಥ ಬೀದಿಯಿಂದ ಅಂಥ ಕಟ್ಟಡಕ್ಕೆ ಯಾವುದೇ ಪ್ರವೇಶಾವಕಾಶ ಇಲ್ಲದಿರುವುದು..

(2) ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಅನುಮತಿಯನ್ನು ನೀಡಲು ನಿರಾಕರಿಸಿದ ಸಂದರ್ಭದಲ್ಲಿ, ಅಂಥ ನಿರಾಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರ್ದಿಷ್ಟವಾಗಿ ತಿಳಿಸತಕ್ಕದ್ದು.

237. ಮಾರ್ಪಡಿಸಿದ ಪರವಾನಿಗೆಯ ನೀಡಿಕೆ ಮತ್ತು ಪರವಾನಿಗೆ ಅವಧಿಯ ವಿಸ್ತರಣೆ.- (1) ಖಾತೆದಾರ ಅಥವಾ ಜವಾಬ್ದಾರಿಯುತ ವ್ಯಕ್ತಿಯು,-

(ಎ) ಕಟ್ಟಡ ನಿರ್ಮಾಣದ ಮೊದಲು ಅಥವಾ ನಿರ್ಮಾಣದ ಸಮಯದಲ್ಲಿ ಮಂಜೂರಾದ ನಕ್ಷೆಯಲ್ಲಿ ಬದಲಾವಣೆಗಳಿದ್ದಲ್ಲಿ;

(ಬಿ) ಹಾಲಿ ಇರುವ ಕಟ್ಟಡಕ್ಕೆ ಸೇರ್ಪಡೆಗಳು ಅಥವಾ ಬದಲಾವಣೆಗಳನ್ನು ಮಾಡಬೇಕಾದಲ್ಲಿ, ಪ್ರಸ್ತಾವನೆಯು ಕಟ್ಟಡದ ಭಾಗಶಃ ಅಥವಾ ಸಂಪೂರ್ಣ ಬಳಕೆಯಲ್ಲಿ ಅಥವಾ ಅಧಿಭೋಗದಲ್ಲಿ ಬದಲಾವಣೆಯನ್ನು ಒಳಗೊಂಡಿರುವಲ್ಲ, ಮಾರ್ಪಡಿಸಿದ ಕಟ್ಟಡದ ಪರವಾನಿಗೆಯನ್ನು ಮತ್ತು ನಕ್ಷೆಗಳಿಗೆ ಮಂಜೂರಾತಿಯನ್ನು ಪಡೆಯತಕ್ಕದ್ದು;

(ಸಿ) ಕಟ್ಟಡ ನಿರ್ಮಾಣದ ಸಮಯದಲ್ಲಿ ಕಟ್ಟಡದ ನಿವೇಶನದ ಮಾಲೀಕತ್ವದಲ್ಲಿ ಯಾವುದೇ ಬದಲಾವಣೆಯಿದ್ದ ಸಂದರ್ಭದಲ್ಲಿ, ಪಾಲಿಕೆಯು ಕೇವಲ ಪರವಾನಿಗೆ ಶುಲ್ಕವನ್ನು ಮಾತ್ರ ಸಂಗ್ರಹಿಸತಕ್ಕದ್ದು: ಪರಂತು, ಪ್ರಸ್ತಾವಿತ ಕಟ್ಟಡದಲ್ಲಿ ಯಾವುದೇ ಬದಲಾವಣೆ ಇರುವಂತಿಲ್ಲ.

(2) ಕಟ್ಟಡದ ನಿರ್ಮಾಣ ಅಥವಾ ಪುನರ್ನಿರ್ಮಾಣವನ್ನು ಪರವಾನಿಗೆ ಅಥವಾ ಮಾರ್ಪಡಿಸಿದ ಪರವಾನಿಗೆಯನ್ನು ನೀಡಿದ ದಿನಾಂಕದಿಂದ ಐದು ವರ್ಷಗಳೊಳಗೆ ಪೂರ್ಣಗೊಳಿಸದಿದ್ದಲ್ಲಿ, ಪರಿಶೀಲನಾ ಶುಲ್ಕ ಮತ್ತು ಪರವಾನಿಗೆ ಶುಲ್ಕ ಪಾವತಿಸಿದ ಮೇಲೆ ಪರವಾನಿಗೆ ಅವಧಿಯನ್ನು ಇನ್ನೂ ಎರಡು ವರ್ಷಗಳ ಗರಿಷ್ಠ ಅವಧಿಯವರೆಗೆ ವಿಸ್ತರಿಸಬಹುದಾಗಿದೆ.

238. ಕೆಲವು ಸಂದರ್ಭಗಳಲ್ಲಿ ಮನರಂಜನಾ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿಯನ್ನು ನೀಡುವ ಅಧಿಕಾರದ ಮೇಲೆ ನಿರ್ಬಂಧ.- ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ಮನರಂಜನೆಯ ಯಾವುದೇ ಕಟ್ಟಡದ ನಿರ್ಮಾಣ ಅಥವಾ ಅದಕ್ಕೆ ಯಾವುದೇ ಸೇರ್ಪಡೆಯನ್ನು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು, ಅಂಥ ಕಟ್ಟಡದ ನಿವೇಶನ ಅಥವಾ ಪ್ರಸ್ತಾವಿತ ನಿವೇಶನವು , -

(ಎ) ಈ ಕೆಳಕಂಡವುಗಳಿಂದ, ಎಂದರೆ,-

(i) ಕಾಲೇಜು, ಪ್ರೌಢಶಾಲೆ ಅಥವಾ ಬಾಲಕಿಯರ ಶಾಲೆಯಂಥ ಯಾವುದೇ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗೆ ಹೊಂದಿಕೊಂಡಿರುವ ಯಾವುದೇ ವಸತಿ ಸಂಸ್ಥೆಯಿಂದ; ಅಥವಾ

(ii) ದೊಡ್ಡ ಪ್ರಮಾಣದ ಒಳ ರೋಗಿಗಳ ವಿಭಾಗವನ್ನು ಹೊಂದಿರುವ ಸಾರ್ವಜನಿಕ ಆಸ್ಪತ್ರೆಯಿಂದ; ಅಥವಾ

(iii) ನೂರು ಅಥವಾ ಅದಕ್ಕಿಂತ ಹೆಚ್ಚಿನ ನಿವಾಸಿಗಳನ್ನು ಹೊಂದಿರುವ ಅನಾಥಾಶ್ರಮದಿಂದ ಇನ್ನೂರು ಮೀಟರ್ ಪರಿಧಿಯೊಳಗಿದ್ದರೆ; ಅಥವಾ

(ಬಿ) ಪ್ರತ್ಯೇಕವಾಗಿ ವಸತಿ ಉದ್ದೇಶ ಹೊಂದಿರುವ ಅಥವಾ ವಾಣಿಜ್ಯ ಉದ್ದೇಶಗಳಿಗಿಂತ ಭಿನ್ನವಾದ ಸಾಮಾನ್ಯವಾಗಿ ವಸತಿಗಾಗಿ ಕಾಯ್ದಿರಿಸಲಾದ ಅಥವಾ ಬಳಸಲಾದ ಯಾವುದೇ ಜನನಿಬಿಡ ವಸತಿ ಪ್ರದೇಶದಲ್ಲಿದ್ದರೆ; ಅಥವಾ

(ಸಿ) ಯಾವುದೇ ವಸತಿ ಅಥವಾ ಕಟ್ಟಡ ನಿರ್ಮಾಣ ಯೋಜನೆಯ ಮೂಲಕ ವಸತಿ ಉದ್ದೇಶಗಳಿಗಾಗಿ ಅಥವಾ ಯಾವುದೇ ಕಾನೂನಿನ ಮೇರೆಗೆ ಅನ್ಯಥಾ ಉದ್ದೇಶಕ್ಕಾಗಿ ಕಾಯ್ದಿರಿಸಿದ ಯಾವುದೇ ಪ್ರದೇಶದಲ್ಲಿದ್ದರೆ

- ಆಯುಕ್ತನು ಮಂಜೂರು ಮಾಡತಕ್ಕದ್ದಲ್ಲ,

ಪರಂತು, ಕರ್ನಾಟಕ ಚಿತ್ರಮಂದಿರಗಳ (ನಿಯಂತ್ರಣ) ಅಧಿನಿಯಮ, 1964 (1964 ರ ಕರ್ನಾಟಕ ಅಧಿನಿಯಮ 23) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅನುಸಾರ ನಕ್ಷೆಗಳು ಮತ್ತು ಕಟ್ಟಡದ ತಪಶೀಲು ಪಟ್ಟಿಳಿಗೆ ಮಂಜೂರಾತಿಯನ್ನು ಪಡೆಯಲಾಗಿದೆ ಎಂದು ಸರ್ಕಾರಕ್ಕೆ ಮನವರಿಕೆಯಾದ ಹೊರತು ಚಲನಚಿತ್ರ ಪ್ರದರ್ಶನಕ್ಕಾಗಿ ಬಳಸಲು ಉದ್ದೇಶಿಸಿರುವ ಯಾವುದೇ ಕಟ್ಟಡವನ್ನು ನಿರ್ಮಿಸಲು ಯಾವುದೇ ಅನುಮತಿಯನ್ನು ನೀಡತಕ್ಕದ್ದಲ್ಲ.

239. ಮೇಲುಪಾಯ ಪ್ರಮಾಣಪತ್ರ (Plinth Certificate) ವಿಲ್ಲದೆ ಕಟ್ಟಡದ ನಿರ್ಮಾಣವನ್ನು ಮುಂದುವರಿಸತಕ್ಕದ್ದಲ್ಲ.- (1) ಈ ಅಧ್ಯಾಯದ ಅಡಿ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡಿದ ಮತ್ತು ನಕ್ಷೆಗಳಿಗೆ ಮಂಜೂರಾತಿ ನೀಡಿದ ತರುವಾಯ ಹಾಗೂ ಅಂಥ ಕಟ್ಟಡದ **ಮೇಲುಪಾಯ** (Plinth)ದ ಹಂತಕ್ಕೆ ನಿರ್ಮಾಣವನ್ನು ತಲುಪಿದ ನಂತರ, ಮಂಜೂರಾತಿಯ ಮಾನ್ಯತೆಯ ಅವಧಿಯೊಳಗಾಗಿ ಖಾತೆದಾರ ಅಥವಾ ಜವಾಬ್ದಾರಿಯುತ ವ್ಯಕ್ತಿಯು **ಮೇಲುಪಾಯ ಪ್ರಮಾಣಪತ್ರ** (Plinth Certificate) ಪಡೆಯತಕ್ಕದ್ದು. ಮೇಲುಪಾಯ ಪ್ರಮಾಣಪತ್ರವನ್ನು ಪಡೆಯದೆ ನಿರ್ಮಾಣವನ್ನು ಮುಂದುವರಿಸತಕ್ಕದ್ದಲ್ಲ. ಮೇಲು ಪಾಯ ಪ್ರಮಾಣಪತ್ರವನ್ನು ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯ ಮೇಲೆ.–

(ಎ) ಆಯುಕ್ತನು ಅಥವಾ ಆತನಿಂದ ಅಧಿಕೃತಗೊಂಡ ಅಧಿಕಾರಿ, ನಿರ್ಮಾಣ ಹಂತದಲ್ಲಿರುವ ಕಟ್ಟಡದ ಭೌತಿಕ ಪರಿಶೀಲನೆಯನ್ನು ನಡೆಸತಕ್ಕದ್ದು.

(ಬಿ) ಮಂಜೂರಾದ ಕಟ್ಟಡ ನಕ್ಷೆಗಳಿಗೆ ಅನುಸಾರವಾಗಿ ಕಟ್ಟಡದ ನಿರ್ಮಾಣ ಕೈಗೊಂಡಿರುವುದರ ಮೇಲೆ, ಅರ್ಜಿ ಸಲ್ಲಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಮೇಲು ಪಾಯ (Plinth Certificate) ಪ್ರಮಾಣಪತ್ರವನ್ನು ನೀಡತಕ್ಕದ್ದು:

ಪರಂತು, ಕಟ್ಟಡದ ನಿರ್ಮಾಣವು ಮಂಜೂರಾದ ನಕ್ಷೆಗನುಸಾರವಾಗಿರತಕ್ಕದ್ದು.

(ಸಿ) ಆಯುಕ್ತನು ಅಥವಾ ಆತನಿಂದ ಅಧಿಕೃತಗೊಂಡ ಅಧಿಕಾರಿಯು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಮೇಲು ಪಾಯ (Plinth Certificate) **ಪ್ರಮಾಣಪತ್ರವನ್ನು ನೀಡಲು** ವಿಫಲನಾದಲ್ಲಿ, ಮಂಜೂರಾದ ನಕ್ಷೆಗಳಿಗನುಸಾರವಾಗಿ ನಿರ್ಮಾಣವನ್ನು ಮುಂದುವರಿಸಬಹುದು.

(ಡಿ) ಕಟ್ಟಡ ನಿರ್ಮಾಣವವನ್ನು ಮಂಜೂರಾದ ನಕ್ಷೆಯನ್ನು ಬದಲಾಯಿಸಿ ಮಾಡಲಾಗಿದ್ದು, ಅಂಥ ನಿರ್ಮಾಣವು 245ನೇ ಪ್ರಕರಣದ ಅನುಸಾರ ವಿನಿಯಮಗಳು ಮತ್ತು ಕಟ್ಟಡದ ಉಪವಿಧಿಗಳು, ಮಾರ್ಪಡಿಸಿದ ಕಟ್ಟಡ ನಕ್ಷೆಯ ಅನುಮತಿಸಬಹುದಾದ ಪರಿಮಿತಿಗಳಲ್ಲಿದ್ದರೆ, ಮೇಲು ಪಾಯ (Plinth Certificate) **ಪ್ರಮಾಣಪತ್ರವನ್ನು ಈ** ಮಾರ್ಪಡಿಸಿದ ನಕ್ಷೆಯೊಂದಿಗೆ ಮಂಜೂರು ಮಾಡಬಹುದು.

(2) ಸರ್ಕಾರವು, ಮೇಲುಪಾಯ ಪ್ರಮಾಣಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಬಹುದಾದ ಕಟ್ಟಡದ ಪ್ರವರ್ಗವನ್ನು ಅಧಿಸೂಚಿಸಬಹುದು.

240. ಕಾಮಗಾರಿಯ ಮಾರ್ಪಾಟನ್ನು ಅಗತ್ಯಪಡಿಸುವ ಆಯುಕ್ತನ ಅಧಿಕಾರ.– (1) ಆಯುಕ್ತನಿಗೆ ಕಾಮಗಾರಿಯು.-

(ಎ) ಮಂಜೂರಾದ ಕಟ್ಟಡ ನಕ್ಷೆಗಳು ಅಥವಾ ತಪಶೀಲು ಪಟ್ಟಿಗಳಿಗೆ ಅನುಸಾರವಾಗಿರದೆ ಬೇರೆ ರೀತಿಯಲ್ಲಿದೆ ಎಂಬುದಾಗಿ ಕಂಡುಬಂದರೆ; ಅಥವಾ

(ಬಿ) ಈ ಅಧಿನಿಯಮದ ಯಾವುದೇ ಉಪಬಂಧಗಳು ಅಥವಾ ಈ ಅಧ್ಯಾಯದ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ, ಉಪವಿಧಿ, ಆದೇಶ ಅಥವಾ

ಘೋಷಣೆಯನ್ನು ಉಲ್ಲಂಘಿಸಿದ್ದರೆ, ಆತನು ನಿಬಂಧನೆಯಲ್ಲಿ ಹೇಳಿದ ಹದಿನೈದು ದಿನಗಳಿಗೆ ಮೀರದ ನಿಗದಿತ ಅವಧಿಯೊಳಗೆ, ನೋಟೀಸಿನ ಮೂಲಕ,-

(i) ಅಂಥ ಬದಲಾವಣೆಗಳನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ಸೂಚಿಸುವಂತೆ; ಅಥವಾ

(ii) ಕಾಮಗಾರಿಯನ್ನು ಸದರಿ ನಕ್ಷೆಗಳು, ತಪಶೀಲು ಪಟ್ಟಿಗಳು ಅಥವಾ ಉಪಬಂಧಗಳಿಗೆ ಅನುರೂಪವಾಗಿ ನಿರ್ವಹಿಸುವ ಉದ್ದೇಶದಿಂದ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳನ್ನು ಮಾಡುವಂತೆ

- ಕಟ್ಟಡದ ಖಾತಾದಾರನಿಗೆ ನಿರ್ದೇಶಿಸಬಹುದು.

(2) ಖಾತಾದಾರನು ನೋಟೀಸಿನಲ್ಲಿ ನಿಗದಿಪಡಿಸಿದ ಸಮಯದೊಳಗೆ ಕಾರಣ ನೀಡದಿದ್ದರೆ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಬದಲಾವಣೆಗಳನ್ನು ಮಾಡಲು ಖಾತಾದಾರನು ಬದ್ಧನಾಗಿರತಕ್ಕದ್ದು.

(3) ಖಾತಾದಾರನು ಮೇಲೆ ಹೇಳಿದಂತೆ ಕಾರಣ ನೀಡಿದರೆ, ಆಯುಕ್ತನು ಆದೇಶದ ಮೂಲಕ, (1)ನೇ ಉಪಪ್ರಕರಣದಡಿಯಲ್ಲಿ ನೀಡಲಾದ ನೋಟೀಸನ್ನು ರದ್ದುಪಡಿಸತಕ್ಕದ್ದು. ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಡುಗಳಿಗೆ ಒಳಪಟ್ಟು ಅದನ್ನು ದೃಢಪಡಿಸತಕ್ಕದ್ದು.

241. ಅಧಿಭೋಗ ಪ್ರಮಾಣಪತ್ರದ ಮಂಜೂರಾತಿ.- (1) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಕಟ್ಟಡವನ್ನು ನಿರ್ಮಿಸಿದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನಿರ್ಮಾಣವನ್ನು ಪೂರ್ಣಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡುವಂತೆ ಕೋರಿ ಆಯುಕ್ತರಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡುವಂತೆ ಕೋರಿ ಸಲ್ಲಿಸುವ ಅರ್ಜಿಯನ್ನು, ಮಾನ್ಯತೆ ಪಡೆದ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ಅವರು ಕಟ್ಟಡವನ್ನು ಮಂಜೂರಾದ ನಕ್ಷೆಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ ಎಂಬುದನ್ನು ಕಟ್ಟಡದ ನಿರ್ಮಿತ ಮಹಡಿವಾರು ನಕ್ಷೆಗಳು ಮತ್ತು ಕಾಮಗಾರಿ ಪೂರ್ಣಗೊಂಡ ಕುರಿತ ವರದಿಯೊಂದಿಗೆ ಯುಕ್ತವಾಗಿ ಪ್ರಮಾಣೀಕರಿಸತಕ್ಕದ್ದು;

(3) ಅಧಿಭೋಗ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಅಪರ ಮುಖ್ಯ ನಗರ ಯೋಜಕರು ಸ್ವತಃ ಅಥವಾ ಅಗತ್ಯಬಿದ್ದರೆ, ತಮ್ಮ ಅಧೀನ ಅಧಿಕಾರಿಗಳ ಮೂಲಕ ಅಂಥ ಕಟ್ಟಡದ ಭೌತಿಕ ತಪಾಸಣೆಯನ್ನು ಕೈಗೊಳ್ಳತಕ್ಕದ್ದು. ಅಪರ ಮುಖ್ಯ ನಗರ ಯೋಜಕರ ಪರಿಶೀಲನೆ ಮತ್ತು ಸಲಹೆಯ ಮೇರೆಗೆ, ಆಯುಕ್ತನು ಅಧಿಭೋಗ ಪ್ರಮಾಣಪತ್ರದ ಅರ್ಜಿಯನ್ನು ಮಂಜೂರು ಮಾಡಬಹುದು ಅಥವಾ ತಿರಸ್ಕರಿಸಬಹುದು.

(4) ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ನೀಡಿದ ಕಾಮಗಾರಿ ಪೂರ್ಣಗೊಂಡ ಕುರಿತ ವರದಿಯು ಮಂಜೂರಾದ ನಕ್ಷೆಗಳು ಮತ್ತು ಕಟ್ಟಡದ ಉಪ-ವಿಧಿಗಳಿಗೆ ಅನುಗುಣವಾಗಿಲ್ಲದಿದ್ದರೆ, ಆಯುಕ್ತನು ಸಂಬಂಧಪಟ್ಟ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ರವರ ಅಹವಾಲನ್ನು ಆಲಿಸಿದ ತರುವಾಯ, ಅಂಥ ದಂಡವನ್ನು ವಿಧಿಸಬಹುದು ಅಥವಾ ಪರವಾನಿಗೆಯನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು. ಮಂಜೂರಾದ ನಕ್ಷೆಗನುಸಾರವಾಗಿ ಅಥವಾ ಉಪವಿಧಿಗಳಲ್ಲಿ ಮನ್ನಿಸಬಹುದಾದ ಪರಿಮಿತಿಗಳೊಳಗೆ ಕಟ್ಟಡವನ್ನು ನಿರ್ಮಿಸಲಾಗಿದ್ದಲ್ಲಿ, ಆಯುಕ್ತನು ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡಬಹುದು:

ಪರಂತು, ಮನ್ನಿಸಬಹುದಾದ ಪರಿಮಿತಿಗಳು ಅನುಮತಿಸಬಹುದಾದ ಪರಿಮಿತಿಗಳ ಶೇಕಡಾ 10 ಕ್ಕಿಂತ ಹೆಚ್ಚಿರಬಾರದು ಹಾಗೂ ಈ ಅಧ್ಯಾಯದಲ್ಲಿ ಅಧಿಸೂಚಿಸಲಾದಂತೆ ಸಂಯುಕ್ತ ಶುಲ್ಕವನ್ನು ಪಾಲಿಕೆಗೆ ಪಾವತಿಸತಕ್ಕದ್ದು.

(5) ಯಾರೇ ವ್ಯಕ್ತಿಯು,-

(ಎ) ಈ ಪರವಾಗಿ ಆಯುಕ್ತನಿಂದ ಅನುಮತಿಯನ್ನು ಪಡೆಯುವವರೆಗೆ ಅಥವಾ; ಅಥವಾ

(ಬಿ) ಆಯುಕ್ತನು ಕಾಮಗಾರಿ ಪೂರ್ಣಗೊಂಡ ನೋಟೀಸನ್ನು ಪಡೆದ ತರುವಾಯ ಮೂವತ್ತು ದಿನಗಳವರೆಗೆ ಸದರಿ ಅನುಮತಿಗೆ ತನ್ನ ನಿರಾಕರಣೆಯನ್ನು ತಿಳಿಸಲು ವಿಫಲನಾದರೆ;

- ಅಂಥ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗವನ್ನು ಅಧಿಭೋಗಿಸತಕ್ಕದ್ದಲ್ಲ ಅಥವಾ ಅಧಿಭೋಗಿಸಲು ಆತನಿಗೆ ಅನುಮತಿಸತಕ್ಕದ್ದಲ್ಲ ಅಥವಾ ಆತನು ಯಾವುದೇ ಕಾಮಗಾರಿಯಿಂದ ಬಾಧಿತವಾದ ಕಟ್ಟಡವನ್ನು ಅಥವಾ ಅದರ ಭಾಗವನ್ನು ಬಳಸತಕ್ಕದ್ದಲ್ಲ ಅಥವಾ ಆತನಿಗೆ ಬಳಸಲು ಅನುಮತಿ ನೀಡತಕ್ಕದ್ದಲ್ಲ.

(6) ಈ ಅಧ್ಯಾಯದ ಅಡಿಯಲ್ಲಿ ಉಲ್ಲಂಘನೆಯಾಗಿದೆ ಎಂದು ಆಯುಕ್ತರ ಗಮನಕ್ಕೆ ತಂದರೆ ಆಯುಕ್ತನು ಯಾವುದೇ ಸಮಯದಲ್ಲಿ ನೀಡಲಾದ ಅಧಿಭೋಗ ಪ್ರಮಾಣಪತ್ರವನ್ನು ಹಿಂಪಡೆಯಬಹುದು, ಅಮಾನತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು.

(7) ಸರ್ಕಾರವು, ಅಧಿಭೋಗ ಪ್ರಮಾಣಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಬಹುದಾದ ಕಟ್ಟಡದ ಪ್ರವರ್ಗವನ್ನು ಅಧಿಸೂಚಿಸಬಹುದು.

242. ಸೇರ್ಪಡೆಗಳಿಗೆ ಮತ್ತು ಬದಲಾವಣೆಗಳಿಗೆ ಉಪಬಂಧಗಳ ಅನ್ವಯ.- (1) ಕಟ್ಟಡಗಳ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಪಟ್ಟ ಈ ಅಧ್ಯಾಯದ ಉಪಬಂಧಗಳು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳು ಅಥವಾ ಉಪವಿಧಿಗಳು, ಅವುಗಳಿಗೆ ಮಾಡಿದ ಯಾವುದೇ ಬದಲಾವಣೆಗೆ ಅಥವಾ ಅವುಗಳಿಗೆ ಮಾಡಿದ ಸೇರ್ಪಡೆಗೂ ಸಹ ಅನ್ವಯವಾಗತಕ್ಕದ್ದು:

ಪರಂತು, ಕಟ್ಟಡದ ಅಥವಾ ಕಟ್ಟಡದಲ್ಲಿನ ಯಾವುದೇ ಕೊಠಡಿಯ ವಿನ್ಯಾಸ ಅಥವಾ ವಿಸ್ತೀರ್ಣಕ್ಕೆ ಧಕ್ಕೆಯಾಗದಿರುವಂಥ ಯಾವುದೇ ಅಗತ್ಯ ದುರಸ್ತಿ ಕಾಮಗಾರಿಗಳನ್ನು ಈ ಪ್ರಕರಣದ ಉದ್ದೇಶಕ್ಕಾಗಿ ಬದಲಾವಣೆ ಅಥವಾ ಸೇರ್ಪಡೆ ಎಂದು ಭಾವಿಸತಕ್ಕದ್ದಲ್ಲ.

(2) ಯಾವುದೇ ಸೇರ್ಪಡೆ ಅಥವಾ ಬದಲಾವಣೆಯು ಕಟ್ಟಡದ ಅಥವಾ ಅದರಲ್ಲಿನ ಯಾವುದೇ ಕೊಠಡಿಯ ವಿನ್ಯಾಸ ಅಥವಾ ವಿಸ್ತೀರ್ಣಕ್ಕೆ ಧಕ್ಕೆಯಾಗದಿರುವ ಅಗತ್ಯ ದುರಸ್ತಿಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ಮುಖ್ಯ ಆಯುಕ್ತನಿಗೆ ಆತನ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು, ಈ ವಿಷಯದಲ್ಲಿ ಆತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

243. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ಮುಂದುವರಿಸಿದ ಅಥವಾ ಪೂರ್ಣಗೊಳಿಸಿದ ಕಟ್ಟಡಗಳ ಕೆಡಹುವಿಕೆ ಅಥವಾ ಮಾರ್ಪಡಿಸುವಿಕೆ.-

(1) **ನಿರಂತರ ಉಲ್ಲಂಘನೆಯೆಂದು ಭಾವಿಸಲಾದ ಅನಧಿಕೃತ ನಿರ್ಮಾಣ.-** ಅನಧಿಕೃತವಾಗಿರುವ ಅಥವಾ ಅನ್ಯಥಾ ಮಂಜೂರಾದ ನಕ್ಷೆಗಳಿಗನುಸಾರವಾಗಿರದ ನಿರ್ಮಾಣ ಅಥವಾ ಪುನರ್ ನಿರ್ಮಾಣ ಅಥವಾ ಭಾಗಗಳನ್ನು ಸಕ್ರಮಗೊಳಿಸಿದ ಅಥವಾ ಕೆಡವಿದ ಹೊರತು ಅವುಗಳನ್ನು ಈ ಅಧಿನಿಯಮದ ಉಪಬಂಧಗಳ ಅಥವಾ ಸಂದರ್ಭಾನುಸಾರ ವಿನಿಯಮಗಳ ಅಥವಾ ಉಪವಿಧಿಗಳ ನಿರಂತರವಾದ ಉಲ್ಲಂಘನೆಯೆಂದು ಭಾವಿಸತಕ್ಕದ್ದು ಮತ್ತು ಈ ಪ್ರಕರಣದಡಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಕಾನೂನುಬಾಹಿರ ನಿರ್ಮಾಣಗಳ ಪರಿಶೀಲನೆ.- ಆಯುಕ್ತನು ಮಂಜೂರಾದ ನಕ್ಷೆಯ ಅನುಸಾರವಾಗಿ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸುವುದಕ್ಕಾಗಿ ಸ್ಥಳ ತಪಾಸಣೆಯನ್ನು ನಡೆಸಲು ತನ್ನ ಅಧೀನ ಅಧಿಕಾರಿಗೆ ಅಧಿಕಾರ ನೀಡಬಹುದು. ಅಂಥ ಪರಿಶೀಲನೆಯ ತರುವಾಯ, ನಿರ್ಮಾಣ ಅಥವಾ ಪುನರ್ನಿರ್ಮಾಣವು ಮಂಜೂರಾತಿ ನಕ್ಷೆಗೆ ಅನುಸಾರವಾಗಿ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡುಬಂದಲ್ಲಿ, ಖಾತೆದಾರನಿಗೆ ಅಥವಾ ಪರವಾನಿಗೆದಾರನಿಗೆ ಅಥವಾ ಹೊಣೆಗಾರನಾದ ವ್ಯಕ್ತಿಗೆ ಆತನ ಉಪಸ್ಥಿತಿಯಲ್ಲಿ ಜಂಟಿ ಪರಿಶೀಲನೆಗೆ ಹಾಜರಾಗಲು ಮತ್ತು ಪೂರಕ ದಾಖಲೆಗಳನ್ನು ಸಲ್ಲಿಸಲು, ಈ ಬಗ್ಗೆ ಕನಿಷ್ಠ ಹತ್ತು ದಿನಗಳ ಸಮಯವನ್ನು ನೀಡಿ ನೋಟಿಸು ನೀಡತಕ್ಕದ್ದು.

(3) ಕಾನೂನುಬಾಹಿರ ನಿರ್ಮಾಣಗಳನ್ನು ಕೆಡವಲು ಆದೇಶಗಳು ಮತ್ತು ನೋಟೀಸುಗಳ ನೀಡಿಕೆ.- ಆಯುಕ್ತನಿಗೆ,-

(ಎ) ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣವನ್ನು,-

(i) ಆತನ ಅನುಮತಿ ಪಡೆಯದೇ ಪ್ರಾರಂಭಿಸಲಾಗಿದೆ ಅಥವಾ ಆಯುಕ್ತನು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಮುಖ್ಯ ಆಯುಕ್ತನಿಗೆ ಅಪೀಲು ಅಥವಾ ಉಲ್ಲೇಖವನ್ನು ಮಾಡಲಾಗಿದೆ; ಅಥವಾ

(ii) ಅಂಥ ಅನುಮತಿ ಅಥವಾ ಆದೇಶವನ್ನು ಆಧರಿಸಿದ ನಕ್ಷೆಗಳು ಅಥವಾ ವಿವರಗಳಿಗೆ ಅನುಸಾರವಾಗಿರುವುದಕ್ಕಿಂತ ಅನ್ಯಥಾ ಕೈಗೊಳ್ಳಲಾಗುತ್ತಿದೆ ಅಥವಾ ಪೂರ್ಣಗೊಳಿಸಲಾಗಿದೆ; ಅಥವಾ

(iii) ಈ ಅಧಿನಿಯಮ ಅಥವಾ ಈ ಅಧಿನಿಯಮದಡಿ ಮಾಡಿದ ಯಾವುದೇ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧಗಳನ್ನು ಅಥವಾ ಈ ಅಧಿನಿಯಮದಡಿ ಅಥವಾ ಅಂಥ ನಿಯಮಗಳು ಅಥವಾ ಉಪವಿಧಿಗಳಡಿಯಲ್ಲಿ ಕಾನೂನುಬದ್ಧವಾಗಿ ನೀಡಿದ ಅಥವಾ ಮಾಡಿದ ಯಾವುದೇ ನಿರ್ದೇಶನ ಅಥವಾ ಮನವಿಯನ್ನು ಉಲ್ಲಂಘಿಸಿ ಕೈಗೊಳ್ಳಲ್ಲಾಗುತ್ತಿದೆ ಅಥವಾ ಪೂರ್ಣಗೊಳಿಸಲಾಗಿದೆ ಎಂಬುದು; ಅಥವಾ

(ಬಿ) ಈ ಅಧ್ಯಾಯದಡಿ ನೀಡಲಾದ ಯಾವುದೇ ನೋಟೀಸಿನ ಮೂಲಕ ಅಗತ್ಯಪಡಿಸಲಾದ ಯಾವುದೇ ಮಾಪಾರ್ಡನ್ನು ಕ್ರಮಬದ್ಧವಾಗಿ ಮಾಡಲಾಗಿಲ್ಲವೆಂದು; ಅಥವಾ

(ಸಿ) ಯಾವುದೇ ಕಟ್ಟಡದ ಯಾವುದೇ ಮಾಪಾರ್ಟನ್ನು ಅಥವಾ ಅದಕ್ಕೆ ಸೇರ್ಪಡೆಯನ್ನು ಅಥವಾ ಯಾವುದೇ ಕಟ್ಟಡಕ್ಕೆ ಅಥವಾ ಅದರ ಮೇಲೆ ಯಾವುದೇ ಉದ್ದೇಶಕ್ಕಾಗಿ ಮಾಡಿದ ಅಥವಾ ನಡೆದ, ಯಾವುದೇ ಇತರ ಕಾಮಗಾರಿಯನ್ನು 250ನೇ ಪ್ರಕರಣವನ್ನು ಉಲ್ಲಂಘಿಸಿ ಪ್ರಾರಂಭಿಸಲಾಗಿದೆ ಅಥವಾ ನಡೆಸಲಾಗುತ್ತಿದೆ ಅಥವಾ ಪೂರ್ಣಗೊಳಿಸಲಾಗಿದೆ ಎಂಬುದು ಮನವರಿಕೆಯಾದರೆ,

- ಆಯುಕ್ತನು, ನಿರ್ವಹಿಸಲಾದ ಕಾಮಗಾರಿಯನ್ನು ಅಥವಾ ತನ್ನ ಅಭಿಪ್ರಾಯದಲ್ಲಿ ಕಾನೂನುಬಾಹಿರವಾಗಿ ನಿರ್ವಹಿಸಲಾಗಿದೆಯೆಂದು ಭಾವಿಸಲಾದ ಅದರ ಭಾಗವನ್ನು ಕೆಡಹುವಂತೆ ಅಥವಾ ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಅಧಿನಿಯಮ, ನಿಯಮಗಳು, ಉಪವಿಧಿಗಳು, ನಿರ್ದೇಶನಗಳು ಅಥವಾ ಕೋರಿಕೆಗಳಿಗೆ ಅಥವಾ ಅಂಥ ಅನುಮತಿ ಅಥವಾ ಆದೇಶಗಳಿಗೆ ಆಧಾರವಾಗಿರುವ ನಕ್ಷೆಗಳು ಅಥವಾ ವಿವರಗಳಿಗೆ ಅನುರೂಪವಾಗಿ ಕಾಮಗಾರಿಯನ್ನು ತರುವುದು ಅವಶ್ಯವೆಂದು ಭಾವಿಸಬಹುದಾದಂಥ ಮಾಪಾರ್ಟುಗಳನ್ನು ಮಾಡುವಂತೆ ಕಟ್ಟಡದ ಖಾತಾದಾರನಿಗೆ ಅಗತ್ಯಪಡಿಸಿ ತಾತ್ಕಾಲಿಕ ಆದೇಶವನ್ನು ಮಾಡಬಹುದು ಮತ್ತು ಸದರಿ ಆದೇಶವನ್ನು ಪಾಲಿಸುವವರೆಗೆ, ಖಾತಾದಾರ ಅಥವಾ ಬಿಲ್ಡರನು ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಬಾರದೆಂದು ಸಹ ನಿರ್ದೇಶನ ನೀಡಬಹುದು.

(ಡಿ) ಆಯುಕ್ತನು, ಕಟ್ಟಡದ ಖಾತೆದಾರ ಅಥವಾ ಬಿಲ್ಡರನಿಗೆ ಈ ಅಧಿನಿಯಮದ ಉಪಬಂಧಗಳ ಅನುಸಾರ ನೀಡಲಾದ ನೋಟೀಸಿನೊಂದಿಗೆ, ಅಂಥ ನೋಟೀಸಿನಲ್ಲಿ ಹೇಳಲಾದ ಹದಿನೈದು ದಿನಗಳಿಗಿಂತ ಕಡಿಮೆಯಿರದ ಯುಕ್ತ ಅವಧಿಯೊಳಗೆ ಹಾಗೆ ನಿರ್ವಹಿಸಲಾದ ಕಾಮಗಾರಿಯನ್ನು ಕೆಡಹಲು ಮತ್ತು ಮೇಲೆ ಹೇಳಿದಕ್ಕೆ ಅನುಸಾರವಾಗಿ ನಿರ್ಮಾಣವನ್ನು ಮಾಡಲು ಅಗತ್ಯವೆಂದು ಭಾವಿಸಬಹುದಾದಂಥ ಮಾಪಾರ್ಡುಗಳನ್ನು ನಿರ್ದೇಶಿಸಲು ಕಾರಣವನ್ನು ತೋರಿಸುವಂತೆ ಆತನಿಗೆ ಅಗತ್ಯಪಡಿಸಿ ಹಾಗೂ ಆದೇಶವನ್ನು ಏಕೆ ಸ್ಥಿರೀಕರಿಸಬಾರದೆಂದು ನಿರ್ದೇಶಿಸಿ (3)ನೇ ಉಪಪ್ರಕರಣದಡಿ ಮಾಡಲಾದ ತಾತ್ಕಾಲಿಕ ಆದೇಶದ ಪ್ರತಿಯನ್ನು ಜಾರಿ ಮಾಡತ್ಕಕದ್ದು:

ಪರಂತು, ಸ್ಥಿರೀಕರಣ ಆದೇಶವನ್ನು ಹೊರಡಿಸುವ ಮೊದಲು ಆಯುಕ್ತನು ಖಾತೆದಾರ/ ಜವಾಬ್ದಾರಿಯುತ ವ್ಯಕ್ತಿಯಿಂದ ಬಂದ ನಿವೇದನೆಗಳನ್ನು ನಿರ್ದರಿಸಲು ಖುದ್ದು ವಿಚಾರಣೆಯನ್ನು ನಡೆಸತಕ್ಕದ್ದು. ಖುದ್ದು ವಿಚಾರಣೆಗೆ ಸೂಚನೆಯನ್ನು ನೀಡಿದ ಮೇಲೆ ಖಾತೆದಾರ ಅಥವಾ ಬಿಲ್ಡರ್ ಹಾಜರಾಗಲು ವಿಫಲನಾದಲ್ಲಿ, ಆಯುಕ್ತನು ಗುಣಾವಗುಣಗಳ ಆಧಾರದ ಮೇಲೆ ವಿಷಯವನ್ನು ನಿರ್ಧರಿಸಬಹುದು.

(ಇ) ಖಾತೆದಾರ ಅಥವಾ ಬಿಲ್ಡರನು ಆಯುಕ್ತನಿಗೆ ಮನವರಿಕೆಯಾಗುವಂತೆ ಕಾರಣವನ್ನು ತಿಳಿಸಲು ವಿಫಲನಾದಲ್ಲಿ, ಆಯುಕ್ತನು ತಾನು ಸೂಕ್ತವೆಂದು ಭಾವಿಸಬಹುದಾದ

ಯಾವುದೇ ಮಾರ್ಪಾಡುಗಳೊಂದಿಗೆ ಆದೇಶವನ್ನು ಸ್ಥಿರೀಕರಿಸಬಹುದು ಹಾಗೂ ಖಾತೆದಾರನು ಅಂಥ ಆದೇಶಕ್ಕೆ ಬದ್ಧನಾಗಿರತಕ್ಕದ್ದು.

(ಎಫ್) ಆದೇಶದಲ್ಲಿ ನಿರ್ದೇಶಿಸಿದಂತೆ ಕಟ್ಟಡ ಅಥವಾ ಅದರ ಭಾಗವನ್ನು ಕೆಡುಹಲು ಖಾತೆದಾರನು ವಿಫಲನಾದಾಗ, ಅಥವಾ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ಸಂಯುಕ್ತ ಶುಲ್ಕವನ್ನು ಕಟ್ಟಲು ವಿಫಲನಾದರೆ, ಅಥವಾ ನಿರ್ದಿಷ್ಟಪಡಿಸಲಾದ ಸಮಯದೊಳಗಾಗಿ ಆದೇಶದಲ್ಲಿ ಗೊತ್ತುಪಡಿಸಲಾದ ಯಾವುದೇ ಷರತ್ತನ್ನು ಪಾಲಿಸಲು ವಿಫಲನಾದರೆ, ಆಯುಕ್ತನು ಅಂಥ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ದೂರನ್ನು ಸಲ್ಲಿಸಬಹುದು ಹಾಗೂ ಕಟ್ಟಡ ಅಥವಾ ರಚನೆ ಅಥವಾ ಅದರ ಭಾಗವನ್ನು ತಾನೇ ಕೆಡಹಿಸುವಂತೆ ಮಾಡತಕ್ಕದ್ದು ಮತ್ತು ಅದರ ವೆಚ್ಚವನ್ನು ಈ ಅಧಿನಿಯಮದಡಿ ಬಾಕಿಯಿರುವ ಆದಾಯ ತೆರಿಗೆಯ ಬಾಕಿಗಳೆಂಬಂತೆ ಖಾತೆದಾರನಿಂದ ವಸೂಲಿಮಾಡತಕ್ಕದ್ದು.

(4) ಕಾನೂನುಬಾಹಿರ ಕಟ್ಟಡವನ್ನು ಸೀಲು ಮಾಡುವುದು.-

(ಎ) ಆಯುಕ್ತನು, ಯಾವುದೇ ಸಮಯದಲ್ಲಿ, ಯಾವುದೇ ಕಟ್ಟಡವನ್ನು ಕೆಡಹುವ ಅಥವಾ ಯಾವುದೇ ಕಟ್ಟಡದ ರಚನೆಯನ್ನು ಅಥವಾ ಯಾವುದೇ ಕಾಮಗಾರಿಯ ನಿರ್ವಹಣೆಯನ್ನು ಸ್ಥಗಿತಗೊಳಿಸುವ ಆದೇಶವನ್ನು ಮಾಡುವುದಕ್ಕೂ ಮುಂಚೆ ಅಥವಾ ಮಾಡಿದ ನಂತರ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಅಥವಾ ಅಂಥ ರಚನೆ ಅಥವಾ ನಿರ್ಮಾಣದ ಬಳಕೆಯಿಂದ ಆತನನ್ನು ತಡೆಯುವುದಕ್ಕಾಗಿ ಅಂಥ ರಚನೆ ಅಥವಾ ಕಾಮಗಾರಿಯನ್ನು ಅಥವಾ ಅಂಥ ರಚನೆ ಮತ್ತು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿರುವ ಅಥವಾ ಪೂರ್ಣಗೊಳಿಸಿರುವ ಕಟ್ಟಡವನ್ನು ಸೀಲು ಮಾಡುವಂತೆ ನಿರ್ದೇಶಿಸಿ ಆದೇಶ ಮಾಡುವ ಕಾನೂನುಬದ್ಧ ಅಧಿಕಾರವನ್ನು ಹೊಂದಿರತಕ್ಕದ್ದು

(ಬಿ) ಯಾವುದೇ ರಚನೆ ಅಥವಾ ಕಾಮಗಾರಿ ನಡೆಯುತ್ತಿರುವ ಯಾವುದೇ ರಚನೆ ಅಥವಾ ಕಾಮಗಾರಿ ಅಥವಾ ಯಾವುದೇ ಕಟ್ಟಡವನ್ನು ಸೀಲು ಮಾಡಿದರೆ ಆಯುಕ್ತನು, ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಅಂಥ ರಚನೆ ಅಥವಾ ಕಾಮಗಾರಿಯನ್ನು ಕೆಡಹುವ ಉದ್ದೇಶಕ್ಕಾಗಿ ಅಂಥ ಸೀಲನ್ನು ತೆಗೆಯುವ ಆದೇಶ ಮಾಡಬಹುದು.

(ಸಿ) ಯಾರೇ ವ್ಯಕ್ತಿಯು,-

(i) ಆಯುಕ್ತನು ಮಾಡಿದ ಆದೇಶ; ಅಥವಾ

(ii) ಈ ಅಧಿನಿಯಮದಡಿ ಮಾಡಿದ ಅಪೀಲಿನಲ್ಲಿ ಅಪೀಲು ಪ್ರಾಧಿಕಾರವು ಮಾಡಿದ ಆದೇಶದ,

- ಹೊರತು ಅಂಥ ಸೀಲನ್ನು ತೆಗೆಯತಕ್ಕದ್ದಲ್ಲ.

244. ಕೆಡಹುವ ಆದೇಶವನ್ನು ತಪ್ಪಿದಲ್ಲಿ ಅದನ್ನು ಜಾರಿಗೊಳಿಸಲು ಅಧಿಕಾರ.- (1) ಈ ಅಧ್ಯಾಯದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸು, ಕಡ್ಡಾಯ ಸೂಚನೆ ಅಥವಾ ಆದೇಶದ ಮೂಲಕ ಯಾರೇ ವ್ಯಕ್ತಿಯನ್ನು ಯಾವುದೇ ಕೆಲಸವನ್ನು ನಿರ್ವಹಿಸುವಂತೆ ಅಥವಾ ಯಾವುದೇ ಕ್ರಮಗಳನ್ನು ಕೈಗೊಳ್ಳುವಂತೆ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ಅಗತ್ಯಪಡಿಸಿದಾಗಲೆಲ್ಲಾ, ಯಾವ ಕಾಲದೊಳಗಾಗಿ ಆ ಕೆಲಸವನ್ನು ನಿರ್ವಹಿಸಬೇಕೋ, ಆ ಕ್ರಮಗಳನ್ನು ಕೈಗೊಳ್ಳಬೇಕೋ ಅಥವಾ ಆ ಕಾರ್ಯವನ್ನು ಮಾಡಬೇಕೋ, ಆ ಯುಕ್ತ ಕಾಲಾವಧಿಯನ್ನು ಅಂಥ ನೋಟೀಸಿನಲ್ಲಿ, ಕಡ್ಡಾಯ ಸೂಚನೆಯಲ್ಲಿ ಅಥವಾ ಆದೇಶದಲ್ಲಿ ತಿಳಿಸತಕ್ಕದ್ದು.

(2) ಅಂಥ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ಹಾಗೆ ನಿರ್ದಿಷ್ಟಪಡಿಸಿದ ಕಾಲಾವಧಿದೊಳಗೆ ಪಾಲಿಸದಿದ್ದರೆ, ಆಗ ಹಾಗೆ ತಪ್ಪಿದ್ದಕ್ಕಾಗಿ ಜುಲ್ಮಾನೆ ವಿಧಿಸುವುದಕ್ಕೆ ಉಪಬಂಧ ಕಲ್ಪಿಸಿರಲಿ ಅಥವಾ ಕಲ್ಪಿಸದಿರಲಿ ಮತ್ತು ಹಾಗೆ ತಪ್ಪಿದ್ದಕ್ಕಾಗಿ ಹಾಗೆ ತಪ್ಪಿದ ವ್ಯಕ್ತಿಯು ಶಿಕ್ಷೆಗೆ ಗುರಿಯಾಗಲಿ ಅಥವಾ ಗುರಿಯಾಗದಿರಲಿ ಅಥವಾ ಹಾಗೆ ತಪ್ಪಿದ್ದಕ್ಕಾಗಿ ಅವನನ್ನು ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಯಾವುದೇ ಶಿಕ್ಷೆಗೆ ಗುರಿಪಡಿಸಿರಲಿ, ಆಯುಕ್ತನು ಅಥವಾ ಆತನಿಂದ ಅಧಿಕೃತಗೊಂಡ ಅಧಿಕಾರಿಯು, ಅಂಥ ಕೆಲಸವನ್ನು ಆತನಿಂದ ಮಾಡಿಸತಕ್ಕದ್ದು ಅಥವಾ ಮೇಲೆ ಹೇಳಿದಂತೆ ಆ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ವಿಧ್ಯುಕ್ತವಾಗಿ ಜಾರಿಗೊಳಿಸುವುದಕ್ಕಾಗಿ ಅವಶ್ಯವೆಂದು ತಾನು

ಅಭಿಪ್ರಾಯಪಡುವಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು ಅಥವಾ ಯಾವುದೇ ಕಾರ್ಯವನ್ನು ಮಾಡಬಹುದು.

(3) ಅಂಥ ನೋಟೀಸನ್ನು ಪಾಲಿಸಲು ತಪ್ಪಿದುದಕ್ಕಾಗಿ, ಈ ಅಧಿನಿಯಮ ಅಥವಾ ಉಪವಿಧಿಗಳಲ್ಲಿ ಯಾವುದೇ ದಂಡನೆಯನ್ನು ವಿಶೇಷವಾಗಿ ಉಪಬಂಧಿಸಿರದಿದ್ದರೆ, ಸದರಿ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಅಂಥ ಅಪರಾಧಕ್ಕಾಗಿ ನಿವೇಶನ ಮತ್ತು ಕಟ್ಟಡದ ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡಾ ಇಪ್ಪತ್ತರಷ್ಟನ್ನು ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

245. ಅನುಮತಿ, ಇತ್ಯಾದಿಯನ್ನು ಅಮಾನತ್ತಿನಲ್ಲಿಡುವ ಅಥವಾ ರದ್ದುಗೊಳಿಸುವ ಆಯುಕ್ತನ ಅಧಿಕಾರ.-

(1) ಆಯುಕ್ತನು,-

(ಎ) ಯಾವ ನಿರ್ಬಂಧಗಳು ಅಥವಾ ಷರತ್ತುಗಳಿಗೆ ಒಳಪಟ್ಟು ಅಂಥ ಪರವಾನಿಗೆ, ಅನುಮತಿ ಅಥವಾ ಮಂಜೂರಾತಿಯನ್ನು ನೀಡಲಾಗಿರುತ್ತದೋ ಆ ನಿರ್ಬಂಧಗಳು ಅಥವಾ ಷರತ್ತುಗಳನ್ನು ಪರವಾನಿಗೆ ಪಡೆದಾತನು ಪಾಲಿಸದಂತೆ ತಪ್ಪಿಸಿಕೊಂಡಿದ್ದರೆ ಅಥವಾ ಉಲ್ಲಂಘಿಸಿದ್ದರೆ; ಅಥವಾ

(ಬಿ) ಅಂಥ ಪರವಾನಿಗೆ, ಅನುಮತಿ ಅಥವಾ ಮಂಜೂರಾತಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ಯಾವುದೇ ನಿಯಮ, ಉಪವಿಧಿ ಅಥವಾ ವಿನಿಯಮಗಳ ಯಾವುದೇ ಉಪಬಂಧಗಳ ಉಲ್ಲಂಘನೆಗಾಗಿ ಪರವಾನಿಗೆ ಪಡೆದಾತನನ್ನು ಅಪರಾಧಿ ಎಂದು ನಿರ್ಣಯಿಸಲಾಗಿದ್ದರೆ; ಅಥವಾ

(ಸಿ) ಪರವಾನಿಗೆ ಪಡೆದಾತನು ತಪ್ಪು ಮಾಹಿತಿ ಅಥವಾ ವಂಚನೆಯಿಂದ ಪರವಾನಿಗೆ, ಅನುಮತಿ ಅಥವಾ ಮಂಜೂರಾತಿಯನ್ನು ಪಡೆದಿದ್ದರೆ:

- ತಾನು ನೀಡಿದ ಯಾವುದೇ ಪರವಾನಿಗೆ, ಅನುಮತಿ ಅಥವಾ ಮಂಜೂರಾತಿಯನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಆಯುಕ್ತನು ಪರವಾನಿಗೆ ಪಡೆದಾತನಿಗೆ ಪ್ರಸ್ತಾವಿತ ಆದೇಶದ ವಿರುದ್ಧ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಒದಗಿಸಿ ಕಾರಣಕೇಳಿ ನೋಟೀಸನ್ನು ನೀಡತಕ್ಕದ್ದು.

(2) ಆಯುಕ್ತನು ಮೇಲಿನ ಉಲ್ಲಂಘನೆಯ ಮುಂದುವರಿಕೆಯನ್ನು ಅಂಥ ನಿರ್ಮಾಣದ ಅಭಿವೃದ್ಧಿಯನ್ನು ತಡೆಯಲು ಈ ಅಧಿನಿಯಮದಡಿಯಲ್ಲಿ ಕ್ರಮವನ್ನು ಬಾಕಿಯಿರಿಸಿ ಪರವಾನಿಗೆಯನ್ನು ಹಿಂಪಡೆಯುವ, ಅಮಾನತುಗೊಳಿಸುವ ಅಧಿಕಾರವನ್ನು ಸಹ ಹೊಂದಿರತಕ್ಕದ್ದು.

(3) ಆಯುಕ್ತನು, ಇದರ ಜೊತೆಗೆ, ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ಮತ್ತು ಅದರಡಿ ರಚಿಸಿದ ನಿಯಮಗಳ ಅನುಸಾರ ಸರ್ಕಾರವು ನಿರ್ಧರಿಸಿ ಅಧಿಸೂಚಿಸಲಾದಂತೆ ಅನಧಿಕೃತವಾಗಿ ಅಭಿವೃದ್ಧಿಪಡಿಸಿದಂಥ ಭಾಗಕ್ಕೆ ದಂಡವನ್ನು ಸಹ ವಿಧಿಸಬಹುದು.

246. ಕಟ್ಟಡ ನಿರ್ಮಾಣ ಅಥವಾ ಅಧಿಭೋಗವು ನೀಡಲಾದ ಅನುಮತಿಗಳಿಗೆ ಅನುಸಾರವಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಖಾತೆದಾರ ಅಥವಾ ಜವಾಬ್ದಾರಿಯುತ ವ್ಯಕ್ತಿ ಮತ್ತು ಸೌಲಭ್ಯ ಸೇವೆಗಳನ್ನು ಒದಗಿಸುವವರಿಂದ ಅನುಪಾಲನೆ.–

(1) ಕಟ್ಟಡ ನಿರ್ಮಾಣದ ಸಮಯದಲ್ಲಿ ಅಥವಾ ತರುವಾಯ ಆಯುಕ್ತ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಗಳು ಪರವಾನಿಗೆ ಮಂಜೂರು ಮಾಡಿರಲಿ ಅಥವಾ ನಕ್ಷೆಗಳನ್ನು ಮತ್ತು ತಪಶೀಲು ಪಟ್ಟಿಗಳನ್ನು ಅನುಮೋದಿಸಿರಲಿ ಅಥವಾ ಅನುಮತಿಗಳನ್ನು ನೀಡಿರಲಿ, ಕಟ್ಟಡದ ಖಾತೆದಾರ ಅಥವಾ ಖಾತೆದಾರನ ಪರವಾಗಿ ಪ್ರವರ್ತಕನು ಪರವಾನಿಗೆ ಅಥವಾ ಮಂಜೂರಾದ ನಕ್ಷೆಗಳಿಗೆ ಅನುಸಾರವಾಗಿ ನಿರ್ಮಾಣವನ್ನು ಕೈಗೊಳ್ಳುವಾಗ ಸಂಪೂರ್ಣ ಜವಾಬ್ದಾರಿ ಮತ್ತು ಸುರಕ್ಷತೆಯಿಂದ ಯಾವುದೇ ರೀತಿಯಲ್ಲಿ ವಿಮುಖನಾಗತಕ್ಕದ್ದಲ್ಲ.

(2) ಈ ಅಧ್ಯಾಯದಲ್ಲಿ ಉಪಬಂಧಿಸಲಾದ ಮನ್ನಿಸಬಹುದಾದ ಮಿತಿಗಳನ್ನು ಮೀರಿ ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ಕಟ್ಟಡವನ್ನು ನಿರ್ಮಿಸಿದ್ದರೆ, ಕಟ್ಟಡದ ಉಲ್ಲಂಘಿಸಿದ ಭಾಗವನ್ನು ಮಾಲೀಕರು ಅಥವಾ ಪ್ರವರ್ತಕರು ತಮ್ಮ ಸ್ವಂತ ವೆಚ್ಚ ಮತ್ತು ಹೊಣೆಗಾರಿಕೆಯಲ್ಲಿ ಕೆಡುವತಕ್ಕದ್ದು.

(3) ಮಂಜೂರಾದ ನಕ್ಷೆಗಳ ಪ್ರಕಾರ ನಿರ್ಮಾಣವನ್ನು ಕಾರ್ಯಗತಗೊಳಿಸುವ ವಿಷಯದಲ್ಲಿ ಖಾತೆದಾರ ಅಥವಾ ಪ್ರವರ್ತಕರ ವೈಫಲ್ಯವು ಆತನನ್ನು ನಿಯಮಿಸಬಹುದಾದ ಶಿಕ್ಷೆಗೆ ಹೊಣೆಗಾರರನ್ನಾಗಿಸುತ್ತದೆ.

(4) ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ಕೈಗೊಳ್ಳಲಾದ ನಿರ್ಮಾಣಗಳಿಗೆ ಹಣಕಾಸು ಸಂಸ್ಥೆಗಳು ಸಾಲ ಸೌಲಭ್ಯಗಳನ್ನು ನೀಡತಕ್ಕದ್ದಲ್ಲ.

(5) ಪಾಲಿಕೆಯು ಭಾಗಶಃ ಅಥವಾ ಅಂತಿಮವಾಗಿ ಅಧಿಭೋಗ ಪ್ರಮಾಣಪತ್ರವನ್ನು ನೀಡದೇ ಇದ್ದ ಸಂದರ್ಭದಲ್ಲಿ, ಕಟ್ಟಡವನ್ನು ಅಧಿಭೋಗಕ್ಕೆ ತೆಗೆದುಕೊಂಡಾಗ, ಅಧಿಭೋಗ ಪ್ರಮಾಣಪತ್ರ ಪಡೆಯದೇ ಇರುವ ಸಂಬಂಧದಲ್ಲಿ, ಕಟ್ಟಡಕ್ಕೆ ಅನುಕ್ರಮವಾಗಿ ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ ಸರಬರಾಜಿಗಾಗಿ ಶಾಶ್ವತ ಸಂಪರ್ಕವನ್ನು ಕಲ್ಪಿಸುವುದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಹಾಗೆಯೇ ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಸಕ್ಷಮ ಅಧಿಕಾರವಾಗಿರುವುದಿಲ್ಲ.

247. ಅನಧಿಕೃತವಾಗಿ ಕಟ್ಟಡಗಳ ನಕ್ಷೆಗಳಲ್ಲಿ ಮಾಡಿಕೊಳ್ಳುವ ಬದಲಾವಣೆಗಳು ಅಥವ ಅನಧಿಕೃತ ನಿರ್ಮಾಣಗಳನ್ನು ತಡೆಯಲು ವಿಫಲನಾಗಿರುವುದಕ್ಕಾಗಿ ಆಯುಕ್ತನಿಂದ ನಿಯೋಜನೆಗೊಂಡ ಅಧಿಕಾರ ವ್ಯಾಪ್ತಿಯ ಅಧಿಕಾರಿಗೆ ದಂಡನೆ.- ಆಯುಕ್ತನಿಂದ ನಿಯೋಜನೆಗೊಂಡ ಅಧಿಕಾರ ವ್ಯಾಪ್ತಿಯ ಅಧಿಕಾರಿಗಳನ್ನು, ಅವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಡೆದಂಥ ಕಟ್ಟಡಗಳ ನಕ್ಷೆಗಳಲ್ಲಿನ ಬದಲಾವಣೆಗಳನ್ನು ಅಥವಾ ನಿರ್ಮಾಣಗಳನ್ನು ತಡೆಯಲು ವಿಫಲರಾಗಿರುವರೆಂದು ರುಜುವಾತಾದಲ್ಲಿ ನಿಯಮಿಸಬಹುದಾದಂಥ ಶಿಕ್ಷೆಗೆ ಹೊಣೆಗಾರರನ್ನಾಗಿಸತಕ್ಕದ್ದು.

248. ನಿರ್ದಿಷ್ಟ ಬೀದಿಗಳಲ್ಲಿ ಅಥವಾ ಸ್ಥಳಗಳಲ್ಲಿ ಕೆಲವು ವರ್ಗಗಳ ಕಟ್ಟಡಗಳ ಭಾವೀ ನಿರ್ಮಾಣವನ್ನು ನಿಯಂತ್ರಿಸುವ ಸರ್ಕಾರದ ಅಧಿಕಾರ.- (1) ಸರ್ಕಾರವು,-

(ಎ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೀದಿಗಳಲ್ಲಿ ಅಥವಾ ಬೀದಿಗಳ ಭಾಗಗಳಲ್ಲಿ; ಅಥವಾ

(ಬಿ) ನಿರಂತರವಾಗಿ ಕಟ್ಟಡಗಳನ್ನು ಕಟ್ಟಲು ಅನುಮತಿಸಲಾಗುವುದೆಂದು; ಅಥವಾ

(ಸಿ) ಅನಂತರ ನಿರ್ಮಿಸಿದ ಅಥವಾ ಪುನಃ ನಿರ್ಮಿಸಿದ ಎಲ್ಲಾ ಕಟ್ಟಡಗಳ ಮುಂಭಾಗದ ಹೊರನೋಟವು ಮತ್ತು ನಿರ್ಮಾಣವು ಅದಕ್ಕೆ ಸಂಬಂಧಿಸಿದ ವಾಸ್ತುಶಿಲ್ಪದ ವೈಶಿಷ್ಟ್ಯತೆಗಳಿಗೆ ಸಂಬಂಧಿಸಿದಂತೆ ಸ್ಥಾಯಿ ಸಮಿತಿಯು ಆ ಸ್ಥಳಕ್ಕೆ ಸೂಕ್ತವೆಂದು ಪರಿಗಣಿಸಬಹುದಾದಂತೆ ಇರತಕ್ಕದ್ದೆಂದು; ಅಥವಾ

(ಡಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಸ್ಥಳಗಳಲ್ಲಿ ಒಂದಕ್ಕೊಂದು ಅಂಟಿಕೊಂಡಿರದಂಥ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಅನುಮತಿಸಲಾಗುವುದೆಂದು; ಅಥವಾ

(ಇ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳ ಯಾವುವೇ ಬೀದಿಗಳಲ್ಲಿ, ಬೀದಿಗಳ ಭಾಗಗಳಲ್ಲಿ, ನಿರ್ದಿಷ್ಟಪಡಿಸಿದ ವಾಸ್ತುಶಿಲ್ಪ ಲಕ್ಷಣದ ಅಂಗಡಿಗಳು, ಉಗ್ರಾಣಗಳು, ಕಾರ್ಖಾನೆಗಳು, ಕುಟೀರಗಳು ಅಥವಾ ಕಟ್ಟಡಗಳ ಅಥವಾ ವಿಶಿಷ್ಟ ಬಳಕೆಗಾಗಿ ವಿನ್ಯಾಸಗೊಳಿಸಿದ ಕಟ್ಟಡಗಳ ನಿರ್ಮಾಣಕ್ಕೆ, ಸ್ಥಾಯಿ ಸಮಿತಿಯ ವಿಶೇಷ ಅನುಮತಿಯಿಲ್ಲದೆ ಅವಕಾಶ ನೀಡಲಾಗುವುದಿಲ್ಲವೆಂದು

- ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ನೀಡಬಹುದು.

(2) ಅಂಥ ನೋಟೀಸು ಪ್ರಕಟವಾದಂದಿನಿಂದ ಮೂರು ತಿಂಗಳುಗಳ ಅವಧಿಯ ತರುವಾಯ ಅಂಥ ಯಾವುದೇ ಘೋಷಣೆಯ ಬಗ್ಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಸರ್ಕಾರವು, ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅನಂತರ ಘೋಷಣೆಯನ್ನು ಸ್ಥಿರೀಕರಿಸಬಹುದು ಮತ್ತು ಹಾಗೆ ಮಾಡುವುದಕ್ಕೆ ಮೊದಲು ಅದನ್ನು ಮಾರ್ಪಾಡು ಮಾಡಬಹುದು. ಆದರೆ ಅದರ ಪರಿಣಾಮವನ್ನು ವಿಸ್ತರಿಸುವ ಹಾಗೆ ಮಾಡುವಂತಿಲ್ಲ.

(4) ಸರ್ಕಾರವು, ಹಾಗೆ ಸ್ಥಿರೀಕರಿಸಿದ ಯಾವುದೇ ಘೋಷಣೆಯನ್ನು ಪ್ರಕಟಿಸತಕ್ಕದ್ದು ಮತ್ತು ಅದು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು ಅಂಥ ಘೋಷಣೆಯು ಪ್ರಕಟವಾದ ದಿನಾಂಕದ ತರುವಾಯ ಅಂಥ ಯಾವುದೇ ಘೋಷಣೆಯನ್ನು ಉಲ್ಲಂಘಿಸಿ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ.

249. ಕೆಲವು ಕಾನೂನುಬಾಹಿರ ಕಟ್ಟಡಗಳ ಸಕ್ರಮೀಕರಣ.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾಯ ಮತ್ತು ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿದ್ದಲ್ಲಿ, ಆಯುಕ್ತನು ಕೆಳಕಂಡ ನಿರ್ಬಂಧಗಳಿಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಈ ಅಧಿನಿಯಮದ ಅಧಿಸೂಚನೆಯ ದಿನಾಂಕಕ್ಕೆ ಕನಿಷ್ಠ ಒಂದು ವರ್ಷ ಮೊದಲು ನಿರ್ಮಿಸಿದ ಕಟ್ಟಡವನ್ನು ಸಕ್ರಮಗೊಳಿಸಬಹುದು, ಎಂದರೆ:-

(ಎ) ಕಟ್ಟಡವನ್ನು ಪಕ್ಕದ ಸ್ವತ್ತಿಗೆ ಹೊಂದಿಕೊಂಡಿರುವಂತೆ ನಿರ್ಮಿಸಿರುವಲ್ಲಿ ಅಥವಾ ಕಲ್ಪಿಸಿರುವ ಖಾಲಿ ಜಾಗವು (setback) ಉಪವಿಧಿಗಳಲ್ಲಿ ನಿಯಮಿಸಲಾದ ಮಿತಿಗಳಿಗಿಂತ ಕಡಿಮೆ ಇದ್ದಲ್ಲಿ, ವಸತಿಯೇತರ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ ಇಪ್ಪತ್ತೈದರವರೆಗಿನ ಮತ್ತು ವಸತಿ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ ಐವತ್ತರವರೆಗಿನ ಉಲ್ಲಂಘನೆಯನ್ನು ಸಕ್ರಮಗೊಳಿಸಬಹುದು:

ಪರಂತು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11) ಮತ್ತು ಅದರಡಿ ರಚಿಸಿದ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಪ್ರೀಮಿಯಂ ಫ್ಲೋರ್ ಏರಿಯಾ ಅನುಪಾತ ಅಥವಾ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು ಬಳಕೆಗೆ ಸಂಬಂಧಿಸಿದ ಉಪಬಂಧಳಿಗನುಸಾರವಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 18ಬಿ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರೀಮಿಯಂ ಫ್ಲೋರ್ ಏರಿಯಾ ಅನುಪಾತ ಅಥವಾ 14ಬಿ ಅಡಿಯಲ್ಲಿ ನೀಡಲಾದ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು ಈ ಅಧ್ಯಾಯದ ಉಪಬಂಧಗಳ ಉಲ್ಲಂಘಿಸಿ ನಿರ್ಮಿಸಲಾದ ವಿಸ್ತೀರ್ಣಗಳವರೆಗೆ ಅಂಥ ನಿರ್ಮಿಸಲಾದ ಕಟ್ಟಡಗಳಿಗೆ ಬಳಸಿಕೊಳ್ಳಬಹುದು.

(ಬಿ) ಉಪವಿಧಿಯನ್ನು ಉಲ್ಲಂಘಿಸಿ ತಳ ಮಹಡಿಯಲ್ಲಿ ಮಾಡಿದ ಯಾವ ಅಭಿವೃದ್ಧಿಯನ್ನೂ ಅಥವಾ ಬಳಕೆಯನ್ನೂ ಸಕ್ರಮಗೊಳಿಸತಕ್ಕದ್ದಲ್ಲ.

(ಸಿ) ಕಟ್ಟಡದ ನಿರ್ಮಾಣವನ್ನು ಯಾವುದೇ ನಿರ್ದಿಷ್ಟ ರಸ್ತೆಯ ಮೇಲಿರುವ ನಿರ್ದಿಷ್ಟಪಡಿಸಿದ ಕಟ್ಟಡ ರೇಖೆಯನ್ನು ಉಲ್ಲಂಘಿಸಿ ಮಾಡಿದ್ದರೆ, ಅಂಥ ಕಟ್ಟಡದ ಮಾಲೀಕರು, ಕಟ್ಟಡ ರೇಖೆಯ ಹಾಗೂ ರಸ್ತೆಯ ಅಥವಾ ಪಾದಚಾರಿ ರಸ್ತೆಯ ಅಥವಾ ಅಂಚಿನ ನಡುವಿನ ಸ್ಥಳವನ್ನು, ಪ್ರಶ್ನಿತ ರಸ್ತೆಯನ್ನು ಅಗಲ ಮಾಡುವ ಉದ್ದೇಶಕ್ಕಾಗಿ ಅಗತ್ಯಬಿದ್ದಾಗ, ಯಾವುದೇ ಸಮಯದಲ್ಲಿ ಉಚಿತವಾಗಿ ಬಿಟ್ಟುಕೊಡುವುದಾಗಿ ಮುಚ್ಚಳಿಕೆಯನ್ನು ಬರೆದುಕೊಟ್ಟ ಹೊರತು ಆ ಕಟ್ಟಡದ ನಿರ್ಮಾಣವನ್ನು ಸಕ್ರಮಗೊಳಿಸತಕ್ಕದ್ದಲ್ಲ.

(ಡಿ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 76ಎಫ್ಎಫ್ ಪ್ರಕರಣದ (2) ರಿಂದ (14)ರ ವರೆಗಿನ ಉಪಪ್ರಕರಣದ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ, ಈ ಪ್ರಕರಣದ ಮೇರೆಗೆ ಕಟ್ಟಡವನ್ನು ಸಕ್ರಮಗೊಳಿಸುವುದಕ್ಕೆ ಅನ್ವಯವಾಗತಕ್ಕದ್ದು ಮತ್ತು ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ಆಯುಕ್ತನಿಗೆ ಸಲ್ಲಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಯಾವುದೇ ಕಟ್ಟಡ ನಿರ್ಮಾಣದ ಸಕ್ರಮೀಕರಣವು ನಿಗದಿಪಡಿಸಿದ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು, ಅಂಥ ನಿಗದಿಪಡಿಸಿದ ಮೊಬಲಗು ಕಟ್ಟಡ ನಿರ್ಮಾಣ ಉಪವಿಧಿಗಳ ಬೇರೆ ಬೇರೆ ಬಗೆಯ ಉಲ್ಲಂಘನೆಗಳಿಗೆ ಬೇರೆ ಬೇರೆಯಾಗಿರಬಹುದು:

ಪರಂತು, ಹಾಗೆ ನಿಗದಿಪಡಿಸಿದ ಮೊಬಲಗು,-

(ಎ) ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದಂತೆ ಕಟ್ಟಡದ ಸುತ್ತ ಬಿಡಬೇಕಾದ ಖಾಲಿ ಜಾಗದ (setback) ಮಾನದಂಡಗಳು ಮತ್ತು ಅನುಮತಿಸಬಹುದಾದ ಫ್ಲೋರ್ ಏರಿಯಾ ಅನುಪಾತದ ಅಂಥ ಉಲ್ಲಂಘನೆಯು ಶೇಕಡಾ ಇಪ್ಪತ್ತೈದನ್ನು ಮೀರದಿದ್ದರೆ, ಮೇಲೆ ಹೇಳಿದ ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗದ ಮಾರುಕಟ್ಟೆ ಮೌಲ್ಯದ ಶೇಕಡಾ ಆರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(ಬಿ) ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದಂತೆ ಕಟ್ಟಡದ ಸುತ್ತ ಬಿಡಬೇಕಾದ ಖಾಲಿ ಜಾಗದ (setback) ಮಾನದಂಡಗಳು ಮತ್ತು ಅನುಮತಿಸಬಹುದಾದ ಫ್ಲೋರ್ ಏರಿಯಾ ಅನುಪಾತದ ಅಂಥ ಉಲ್ಲಂಘನೆಯು ಶೇಕಡಾ ಇಪ್ಪತ್ತೈದನ್ನು ಮೀರಿದ್ದು, ಆದರೆ ಶೇಕಡಾ ಐವತ್ತನ್ನು ಮೀರದಿದ್ದರೆ, ಮೇಲೆ ಹೇಳಿದ ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ, ನಿರ್ಮಿಸಿದ ಕಟ್ಟಡದ ಭಾಗದ ಮಾರುಕಟ್ಟೆ ಮೌಲ್ಯದ ಶೇಕಡಾ ಎಂಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ.:

ಮತ್ತೂ ಪರಂತು, ಮೇಲೆ ಹೇಳಿದ ಉಪಬಂಧಗಳನ್ನು ಉಲ್ಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗವನ್ನು ವಸತಿಯೇತರ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಅಥವಾ ಅದಕ್ಕೆಂದು ಉದ್ದೇಶಿಸಿದ್ದರೆ ಮತ್ತು ಅಂಥ ಭಾಗವನ್ನು ಸಕ್ರಮಗೊಳಿಸಲು ಸಂದಾಯವಾಗತಕ್ಕ ಮೊಬಲಗು,-

(ಎ) ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದಂತೆ ಕಟ್ಟಡದ ಸುತ್ತ ಬಿಡಬೇಕಾದ ಖಾಲಿ ಜಾಗದ (setback) ಮಾನದಂಡಗಳು ಮತ್ತು ಅನುಮತಿಸಬಹುದಾದ ಫ್ಲೋರ್ ಏರಿಯಾ ಅನುಪಾತದ ಅಂಥ ಉಲ್ಲಂಘನೆಯು ಶೇಕಡಾ ಹನ್ನೆರಡುವರೆಯನ್ನು ಮೀರದಿದ್ದರೆ, ಮೇಲೆ ಹೇಳಿದ ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ, ನಿರ್ಮಿಸಿದ ಕಟ್ಟಡದ ಭಾಗದ ಮಾರುಕಟ್ಟೆ ಮೌಲ್ಯದ ಶೇಕಡಾ ಇಪ್ಪತ್ತರಷ್ಟು ಆಗಿರತಕ್ಕದ್ದು:

(ಬಿ) ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದಂತೆ ಕಟ್ಟಡದ ಸುತ್ತ ಬಿಡಬೇಕಾದ ಖಾಲಿ ಜಾಗದ (setback) ಮಾನದಂಡಗಳು ಮತ್ತು ಅನುಮತಿಸಬಹುದಾದ ಫ್ಲೋರ್ ಏರಿಯಾ ಅನುಪಾತದ ಅಂಥ ಉಲ್ಲಂಘನೆಯು ಶೇಕಡಾ ಹನ್ನೆರಡುವರೆಯನ್ನು ಮೀರಿದ್ದು, ಆದರೆ ಶೇಕಡಾ ಇಪ್ಪತ್ತೈದರಷ್ಟು ಮೀರದಿದ್ದರೆ, ಮೇಲೆ ಹೇಳಿದ ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ, ನಿರ್ಮಿಸಿದ ಕಟ್ಟಡದ ಭಾಗದ ಮಾರುಕಟ್ಟೆ ಮೌಲ್ಯದ ಶೇಕಡಾ ಮೂವತ್ತೈದರಷ್ಟು ಆಗಿರತಕ್ಕದ್ದು:

(3) ಯಾರೇ ವ್ಯಕ್ತಿಯು ಅದೇ ಉಲ್ಲಂಘನೆಗಳಿಗಾಗಿ ಈ ಅಧಿನಿಯಮದ ಮೇರೆಗೆ, ಸಕ್ರಮೀಕರಣ ಶುಲ್ಕವನ್ನು ಸಂದಾಯ ಮಾಡಿದ್ದರೆ, ಅವನು ಯಾವುದೇ ಇತರೆ ಕಾನೂನಿನ ಮೇರೆಗೆ ಸಕ್ರಮೀಕರಣಕ್ಕಾಗಿ ದಂಡವನ್ನು ಅಥವಾ ಶುಲ್ಕವನ್ನು ಸಂದಾಯ ಮಾಡುವುದಕ್ಕೆ ಗುರಿಯಾಗತಕ್ಕದ್ದಲ್ಲ.

(4) ಉಪ-ಪ್ರಕರಣ (1) ರ ಮೇರೆಗೆ ಮಾಡಿದ ಎಲ್ಲಾ ಸಂದಾಯಗಳನ್ನು ನಗರ ಪಾಲಿಕೆಯಲ್ಲಿ ಇಟ್ಟಿರುವ ನಗರ ಪ್ರದೇಶ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಪ್ರತ್ಯೇಕ ನಿಧಿಗೆ ಜಮೆ ಮಾಡತಕ್ಕದ್ದು ಹಾಗೂ ಮೂಲ ಸೌಕರ್ಯ ಅಭಿವೃದ್ಧಿ, ನಾಗರಿಕ ಸೌಲಭ್ಯಗಳು, ವಿದ್ಯುತ್ ದೀಪಗಳು, ಉದ್ಯಾನವನಗಳು, ಕುಡಿಯುವ ನೀರಿನ ಸೌಲಭ್ಯ, ಚರಂಡಿ ವ್ಯವಸ್ಥೆ ಮತ್ತು ಇತರೆ ಯಾವುದೇ ಮೂಲ ಸೌಕರ್ಯಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಬಳಸಿಕೊಳ್ಳತಕ್ಕದ್ದು.

250. ಆಯುಕ್ತನ ನಿರ್ಣಯಗಳ ವಿರುದ್ಧ ಅಪೀಲು.- (1) ಆಯುಕ್ತನ ನಿರ್ಣಯದಿಂದ ಬಾಧಿತನಾದ ವ್ಯಕ್ತಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನಿಗೆ ಅಪೀಲನ್ನು ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸಬಹುದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನು (1)ನೇ ಉಪಪ್ರಕರಣದ ಅಡಿಯಲ್ಲಿ ತನಗೆ ನಿರ್ಣಯಕ್ಕಾಗಿ ಸಲ್ಲಿಸಿದ ದಿನಾಂಕದಿಂದ ವಿಷಯಗಳನ್ನು ತೊಂಬತ್ತು ದಿನಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಈ ವಿಷಯದಲ್ಲಿ ಮುಖ್ಯ ಆಯುಕ್ತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

ಅಧ್ಯಾಯ XVIII
ಸಾರ್ವಜನಿಕ ಆರೋಗ್ಯ

251. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ನಗರ ಪಾಲಿಕೆಯ ಕರ್ತವ್ಯಗಳು.- ಸೂಕ್ತ ನೈರ್ಮಲ್ಯವನ್ನು ಖಚಿತಪಡಿಸಲು ಅಪಾಯಕಾರಿ ರೋಗಗಳ ಹರಡುವಿಕೆಯನ್ನು ತಡೆಗಟ್ಟಲು ಹಾಗೂ ಸಾರ್ವಜನಿಕ ಆರೋಗ್ಯದ ಅಗತ್ಯ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರಲು ಅವಶ್ಯಕವಾಗಿರುವಂಥ ಕ್ರಮಗಳನ್ನು ಕೈಗೊಳ್ಳಲು ಆವರಣಗಳ ಪರಿಶೀಲನೆ, ಮೇಲ್ವಿಚಾರಣೆ, ವಿನಿಯಮ ಮತ್ತು ನಿಯಂತ್ರಣ ಸೇರಿದಂತೆ ಸಾರ್ವಜನಿಕ ಆರೋಗ್ಯ ವಿಷಯದ ಬಗ್ಗೆ ಸಮರ್ಪಕ ಕ್ರಮಗಳನ್ನು ಕೈಗೊಳ್ಳುವುದು ನಗರ ಪಾಲಿಕೆ ಅಥವಾ ಆ ಬಗ್ಗೆ ನಗರ ಪಾಲಿಕೆಯಿಂದ ಅಧಿಕೃತಗೊಂಡ ಇತರ ಯಾವುದೇ ಏಜೆನ್ಸಿಯ ಕರ್ತವ್ಯವಾಗಿರತಕ್ಕದ್ದು.

252. ಕಟ್ಟಡಗಳ ಅಥವಾ ನಿವೇಶನಗಳ ಪರಿಶೀಲನೆ ಅಥವಾ ನೈರ್ಮಲ್ಯದ ಬಗ್ಗೆ ಆದೇಶಿಸುವ ಅಥವಾ ಪರಿಶೀಲನೆ ಅಥವಾ ನೈರ್ಮಲ್ಯವನ್ನು ಕೈಗೊಳ್ಳುವ ನಗರ ಪಾಲಿಕೆಯ ಅಧಿಕಾರ.- (1) **ಈ ಪರವಾಗಿ** ಮಾಡಬಹುದಾದಂಥ ವಿನಿಯಮಗಳಿಗೆ ಒಳಪಟ್ಟು, ಆಯುಕ್ತನು ಸ್ವತಃ ತಾನೇ ಅಥವಾ ಆ ಬಗ್ಗೆ ಆತನಿಂದ ಅಧಿಕೃತಗೊಂಡ ಇತರ ಯಾವುದೇ ಏಜೆನ್ಸಿ ಅಥವಾ ಯಾರೇ ಅಧಿಕಾರಿಯ ಮೂಲಕ,-

(ಎ) ಯಾವುದೇ ಕಟ್ಟಡ ಅಥವಾ ಇತರ ಆವರಣಗಳ ನೈರ್ಮಲ್ಯ ಪರಿಸ್ಥಿತಿಯನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ಅವುಗಳನ್ನು ಪರಿಶೀಲನೆಗೊಳಪಡಿಸುವಂತೆ ಮಾಡಬಹುದು.

(ಬಿ) ನೈರ್ಮಲ್ಯದ ಕಾರಣಗಳಿಗಾಗಿ ಯಾವುದೇ ಜಮೀನು ಅಥವಾ ಕಟ್ಟಡ ಅಥವಾ ಅದರ ಯಾವುದೇ ಭಾಗವನ್ನು ಸ್ವಚ್ಛಗೊಳಿಸುವುದು ಅಗತ್ಯವೆಂದು ಪಾಲಿಕೆಗೆ ಕಂಡುಬಂದರೆ, ಅದನ್ನು ಹಾಗೆ ಸ್ವಚ್ಛಗೊಳಿಸುವಂತೆ ಅಂಥ ಜಮೀನು ಅಥವಾ ಕಟ್ಟಡ ಅಥವಾ ಅದರ ಯಾವುದೇ ಭಾಗದ ಖಾತಾದಾರ ಅಥವಾ ಅಧಿಭೋಗದಾರರನ್ನು ಅಗತ್ಯಪಡಿಸಬಹುದು.

(ಸಿ) ಅಂಥ ನೈರ್ಮಲ್ಯರಹಿತ ಆವರಣಗಳ ನಿವಾಸಿಗಳಿಗೆ ಅಥವಾ ಅದರ ನೆರೆಹೊರೆಯ ನಿವಾಸಿಗಳಿಗೆ ರೋಗದ ಅಪಾಯವನ್ನುಂಟುಮಾಡುವ ಸಂಭವವಿರುವಂಥ ಅಥವಾ ಯಾವುದೇ ಕಾರಣಕ್ಕಾಗಿ ಜನಸಮುದಾಯದ ಆರೋಗ್ಯ ಅಥವಾ ಸುರಕ್ಷತೆಗೆ ವಿಪತ್ತು ತರುವ ಸಾಧ್ಯತೆಗಳಿರುವಂಥ ಯಾವುದೇ ನೈರ್ಮಲ್ಯ ರಹಿತ ಆವರಣಗಳ ಸುಧಾರಣೆಗಾಗಿ ಅವರು ಅಗತ್ಯವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

(ಡಿ) ಖಾತಾದಾರ ಅಥವಾ ಅಧಿಭೋಗದಾರರಿಗೆ ನೋಟೀಸು ನೀಡುವ ಮೂಲಕ, ಅವರಿಗೆ ಮನುಷ್ಯನ ವಾಸಕ್ಕೆ ಸೂಕ್ತವಲ್ಲವೆಂದು ಕಂಡುಬರುವಂಥ ಯಾವುದೇ ಕಟ್ಟಡ ಅಥವಾ ಆ ಕಟ್ಟಡದಲ್ಲಿರುವ ಯಾವುದೇ ಕೊಠಡಿಯನ್ನು ವಾಸದ ಮನೆಯಾಗಿ ಬಳಸುವುದನ್ನು ನಿಷೇಧಿಸಬಹುದು.

(ಇ) ಆರೋಗ್ಯಕ್ಕೆ ಹಾನಿಕಾರಕವೆಂದು ಅಥವಾ ನೆರೆಹೊರೆಯವರಿಗೆ ದುರ್ವಾಸನೆಯನ್ನುಂಟು ಮಾಡಬಹುದೆಂದು ಅವರಿಗೆ ಕಂಡುಬರುವಂಥ ಅಥವಾ ಕಂಡುಬರುವ ಸಾಧ್ಯತೆ ಇರುವಂಥ ಯಾವುದೇ ಬಾವಿ, ಕೊಳ, ಹಳ್ಳ, ಕುಂಟೆ, ಹೊಂಡ, ಗುಂಡಿ ಅಥವಾ ನೀರು ಬಸಿದು ಹೋಗದ ಮೈದಾನ, ತೊಟ್ಟಿ ಅಥವಾ ಯಾವುದೇ ನಿರುಪಯುಕ್ತ ಅಥವಾ ನಿಂತ ನೀರಿನ ಕಟ್ಟೆಯನ್ನು ಮುಚ್ಚಲು ನಿರ್ದೇಶಿಸಬಹುದು.

(ಎಫ್) ಯಾವುದೇ ಖಾಸಗಿ ನೀರಿನ ಮಾರ್ಗ, ಚಿಲುಮೆ, ಕೆರೆ, ಬಾವಿ ಅಥವಾ ಕುಡಿಯಲು, ಸ್ನಾನ ಮಾಡಲು ಅಥವಾ ಬಟ್ಟೆ ಒಗೆಯಲು ಬಳಸುವಂಥ ನೀರಿನ ಇತರೆ ಸ್ಥಳದ ಮೇಲೆ ನಿಯಂತ್ರಣ ಹೊಂದಿರುವ ಖಾತಾದಾರ ಅಥವಾ ವ್ಯಕ್ತಿಗೆ ನೋಟೀಸು ನೀಡುವ ಮೂಲಕ ಅವುಗಳನ್ನು ಉತ್ತಮ ಸ್ಥಿತಿಯಲ್ಲಿಡಲು, ಮಾಲಿನ್ಯದಿಂದ ರಕ್ಷಿಸುವಂಥ ರೀತಿಯಲ್ಲಿ ಅವುಗಳನ್ನು ಸ್ವಚ್ಛಗೊಳಿಸುವಂತೆ ಅಗತ್ಯಪಡಿಸಬಹುದು.

(ಜಿ) ನಿರ್ಲಕ್ಷಿಸಿರುವಂಥ ಕಟ್ಟಡ ಅಥವಾ ಭೂಮಿ ಎಂದು ಅವರಿಗೆ ಕಂಡುಬಂದಂಥ ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವ ಅಥವಾ ನೆರೆಹೊರೆಯವರ ಆರೋಗ್ಯಕ್ಕೆ ಹಾನಿಯುಂಟುಮಾಡುವ ಅಥವಾ ಅವರಿಗೆ ದುರ್ವಾಸನೆಯನ್ನುಂಟುಮಾಡುವುದಾಗಿ ಕಂಡುಬಂದ ಅಥವಾ ಹಾನಿಯುಂಟುಮಾಡುವ ಸಾಧ್ಯತೆಯಿರುವ ಯಾವುದೇ ಕಟ್ಟಡ ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು ಖಾತಾದಾರ ಅಥವಾ ಅಧಿಭೋಗದಾರರಿಗೆ ನೋಟೀಸು ನೀಡುವ ಮೂಲಕ ನಿರ್ದೇಶನ ನೀಡಬಹುದು.

(2) ಆಯುಕ್ತ ಅಥವಾ ಆ ಬಗ್ಗೆ ಅಧಿಕೃತಗೊಂಡ ಅಧಿಕಾರಿಯು, ಯಾವುದೇ ಭೂಮಿ ಅಥವಾ ಕಟ್ಟಡದಲ್ಲಿ ಆರೋಗ್ಯ ಅಥವಾ ಸುರಕ್ಷತೆಗೆ ಸಂಬಂಧಿಸಿದಂತೆ ಅಪಾಯವಿದೆ ಎಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತದಲ್ಲಿ ನೋಟೀಸು ನೀಡುವ ಮೂಲಕ ಯಾವ ವ್ಯಕ್ತಿಯ ಕೃತ್ಯ, ತಪ್ಪು ಅಥವಾ ಮೌನಸಮ್ಮತಿಯಿಂದಾಗಿ ಸದರಿ ಅಪಾಯ ಉದ್ಭವಿಸಿರುವುದೋ ಅಥವಾ ಮುಂದುವರಿದಿದೆಯೋ ಅಂಥ ವ್ಯಕ್ತಿ ಅಥವಾ ಅಂಥ ಜಮೀನು ಅಥವಾ ಕಟ್ಟಡದ ಎಲ್ಲಾ ಖಾತಾದಾರರು, ಬಾಡಿಗೆದಾರರು ಅಥವಾ ಅಧಿಭೋಗದಾರರು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವಂತೆ ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಅಂಥ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅದನ್ನು ತೆಗೆದುಹಾಕಲು ಅಥವಾ ಕಡಿಮೆ ಮಾಡಲು ಅಗತ್ಯಪಡಿಸಬಹುದು.

(3) ತುರ್ತುಕ್ರಮ ಅಗತ್ಯವಿದ್ದರೆ, ಆಯುಕ್ತನು ಸ್ವತಃ ತಾನೇ ಅಂಥ ನೋಟೀಸು ನೀಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ, ಆರೋಗ್ಯ ಅಥವಾ ಸುರಕ್ಷತೆಗೆ ಉಂಟಾಗುವ ಅಪಾಯವನ್ನು ತಡೆಯಲು ತಾನು ಸೂಕ್ತವೆಂದು ಭಾವಿಸಬಹುದಾಂಥ ಕ್ರಮಗಳನ್ನು ಖಾತರಿಪಡಿಸಬಹುದು ಅಥವಾ ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡಲು ತಗುಲಬಹುದಾದ ವೆಚ್ಚವನ್ನು ಉಪ-ವಿಧಿಯಲ್ಲಿ ನಿಗದಿಪಡಿಸಲಾದ ರೀತಿಯಲ್ಲಿ ಕಟ್ಟಡ ಅಥವಾ ಜಮೀನಿನ ಖಾತಾದಾರರು ಅಥವಾ ಅಧಿಭೋಗದಾರರಿಂದ ವಸೂಲು ಮಾಡಿಕೊಳ್ಳತಕ್ಕದ್ದು.

253. ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗಗಳನ್ನು ಅಧಿಸೂಚಿಸುವ ಅಧಿಕಾರ.- (1) ನಗರ ಪಾಲಿಕೆ ಪ್ರದೇಶದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ವಾಸಸ್ಥಳದಲ್ಲಿ ಯಾವುದೇ ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗ ಇರುವುದು ನಗರ ಪಾಲಿಕೆಯ ಗಮನಕ್ಕೆ ಬಂದಲ್ಲಿ, ಆಯುಕ್ತನು ಅಂಥ ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗವನ್ನು ತಡೆಯಲು ಅವಶ್ಯಕವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು.

(2) ಆಯುಕ್ತನು ಅಥವಾ ಈ ಬಗ್ಗೆ ಅಧಿಕೃತಗೊಂಡ ಯಾರೇ ಅಧಿಕಾರಿಯು, ಯಾವುದೇ ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗವು ವರದಿಯಾಗಿದೆ ಮತ್ತು ಅಸ್ತಿತ್ವದಲ್ಲಿ ಇದೆ ಎಂದು ಶಂಕಿಸಲಾಗಿರುವ ಯಾವುದೇ ಸ್ಥಳವನ್ನು ಪರಿಶೀಲಿಸುವುದು ತನಗೆ ಸಮಂಜಸವೆಂದು ಕಂಡುಬಂದರೆ ಅಂಥ ಸ್ಥಳದ ಆವರೆಗೆ ಅಂಥ ರೋಗ ಹರಡುವುದನ್ನು ತಡೆಯುವುದಕ್ಕಾಗಿ ತನಗೆ ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(3) ನಗರ ಪಾಲಿಕೆ ಪ್ರದೇಶದೊಳಗೆ ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗ ಅಸ್ತಿತ್ವದಲ್ಲಿರುವ ಸಂದರ್ಭದಲ್ಲಿ, ಆಯುಕ್ತನು ನೋಟೀಸಿನ ಮೂಲಕ, ಸಾರ್ವಜನಿಕ ಮನೋರಂಜನೆಯ ಉದ್ದೇಶಕ್ಕಾಗಿ ಬಳಸಲಾಗುವ ಯಾವುದೇ ಕಟ್ಟಡ ಅಥವಾ ನಿವೇಶನದ ಖಾತಾದಾರ ಅಥವಾ ಅಧಿಭೋಗದಾರರನ್ನು ಅಗತ್ಯವೆಂದು ಭಾವಿಸಬಹುದಾದಂತಹ ಅವಧಿಗೆ ಮುಚ್ಚುವಂತೆ ಅಗತ್ಯಪಡಿಸಬಹುದು.

254. ಕಟ್ಟಡಗಳ ಮತ್ತು ವಸ್ತುಗಳ ಸೋಂಕು ನಿವಾರಣೆ.- (1) ಆಯುಕ್ತನು, ಸೋಂಕು ಉಳಿದಿರುವ ಸಂಭವವಿರುವ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಅದರಲ್ಲಿನ ಯಾವುದೇ ವಸ್ತುವನ್ನು ಸ್ವಚ್ಛಗೊಳಿಸುವುದರಿಂದ ಅಥವಾ ಸೋಂಕು ನಿವಾರಣೆ ಮಾಡುವುದರಿಂದ ಯಾವುದೇ ಅಪಾಯಕಾರಿ ರೋಗ ಹರಡುವುದನ್ನು ತಡೆಗಟ್ಟಲು ಅಥವಾ ತಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರೆ, ಅವನು ನೋಟೀಸಿನ ಮೂಲಕ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮತ್ತು ಕಾಲದೊಳಗೆ ಅದನ್ನು ಸ್ವಚ್ಛಗೊಳಿಸಲು ಅಥವಾ ಸೋಂಕು ನಿವಾರಿಸಲು ಅದರ ಖಾತಾದಾರ ಅಥವಾ ಅಧಿಭೋಗದಾರನನ್ನು ಅಗತ್ಯಪಡಿಸಬಹುದು.

(2) ಮೇಲೆ ಹೇಳಿದಂತೆ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಖಾತೆದಾರನು ಅಥವಾ ಅಧಿಭೋಗದಾರನು ಆ ನೋಟೀಸಿನ ನಿಬಂಧನೆಗಳನ್ನು ಪಾಲಿಸತಕ್ಕದ್ದು.

(3) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಿದೆಯೆಂದು ಅಥವಾ ಆ ಖಾತಾದಾರ ಅಥವಾ ಅಧಿಭೋಗದಾರನು ಬಡತನದ ಕಾರಣದಿಂದ ಅಥವಾ ಅನ್ಯಥಾ ತಮ್ಮ ಕಡ್ಡಾಯ ಸೂಚನೆಯನ್ನು ಪರಿಣಾಮಕಾರಿಯಾಗಿ ಪಾಲಿಸಲು ಅಸಮರ್ಥನಾಗಿದ್ದಾನೆಂದು ಆಯುಕ್ತನು ಪರಿಗಣಿಸಿದರೆ, ಆಯುಕ್ತನು ನೋಟೀಸನ್ನು ಕೊಡದೆ ತಾನಾಗಿಯೇ ಅಂಥ ಕಟ್ಟಡಗಳನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸುವಂತೆ ಅಥವಾ ಅದರ ಸೋಂಕನ್ನು ನಿವಾರಿಸುವಂತೆ ಮಾಡಬಹುದು ಮತ್ತು ಈ ಉದ್ದೇಶಕ್ಕಾಗಿ ಅಂಥ ವಸ್ತುವನ್ನು ಆ ಕಟ್ಟಡದಿಂದ ಅಥವಾ ಆವರಣದಿಂದ ತೆಗೆದುಹಾಕಿಸಬಹುದು ಮತ್ತು ಆಯುಕ್ತನು ಅಥವಾ ಆರೋಗ್ಯಾಧಿಕಾರಿಯು ಭರಿಸಿದ ವೆಚ್ಚಗಳು ಸದರಿ ಖಾತಾದಾರನಿಂದ ಅಥವಾ ಅಧಿಭೋಗದಾರನಿಂದ ವಸೂಲಿ ಮಾಡತಕ್ಕದ್ದಂಥಾದವುಗಳಾಗಿರತಕ್ಕದ್ದು.

ಪರಂತು, ಅಂಥ ಖಾತಾದಾರ ಅಥವಾ ಅಧಿಭೋಗದಾರನ ಬಡತನದ ಕಾರಣದಿಂದಾಗಿ ಅದು ಉಂಟಾಗಿದ್ದಲ್ಲಿ, ಅಂಥ ಕ್ರಮದ ಅಗತ್ಯವಿರತಕ್ಕದ್ದಲ್ಲ.

255. ಸೋಂಕು ನಿವಾರಣೆಗಾಗಿ ಸ್ಥಳಗಳ ವ್ಯವಸ್ಥೆ ಮತ್ತು ಸೋಂಕು ತಗುಲಿದ ವಸ್ತುಗಳನ್ನು ನಾಶಪಡಿಸುವ ಅಧಿಕಾರ.- (1) ಆಯುಕ್ತನು,-

(ಎ) ಯಾವುದೇ ಅಪಾಯಕಾರಿ ರೋಗದಿಂದ ಸೋಂಕಿಗೆ ಎಡೆ ಮಾಡಿಕೊಡುವಂಥ ವಾಹನಗಳು, ಬಟ್ಟೆಬರೆ, ಹಾಸಿಗೆ ಮತ್ತು ಇತರ ವಸ್ತುಗಳ ಸೋಂಕು ನಿವಾರಣೆಗಾಗಿ ಅವಶ್ಯವಾದ ಎಲ್ಲ ಸಹಾಯಕರು ಮತ್ತು ಉಪಕರಣಗಳೊಂದಿಗೆ ಸರಿಯಾದ ಸ್ಥಳಗಳನ್ನು ಒದಗಿಸಬಹುದು; ಮತ್ತು

(ಬಿ) ಸೋಂಕು ನಿವಾರಣೆಗಾಗಿ ತರಲಾದ ವಾಹನಗಳು, ಬಟ್ಟೆಬರೆ, ಹಾಸಿಗೆ ಅಥವಾ ಇತರ ವಸ್ತುಗಳ ಸೋಂಕು ನಿವಾರಣೆಯನ್ನು ಶುಲ್ಕವಿಲ್ಲದೆ ಅಥವಾ ಸ್ಥಾಯಿ ಸಮಿತಿಯು ಅನುಮೋದಿಸಬಹುದಾದಂಥ ಶುಲ್ಕಗಳನ್ನು ವಿಧಿಸುವುದಕ್ಕೆ ಒಳಪಟ್ಟು ಮಾಡಿಸಬಹುದು.

(2) ಯಾವುದೇ ಅಪಾಯಕಾರಿ ರೋಗಗಳಿಂದ ಸೋಂಕಿಗೆ ಎಡೆ ಮಾಡಿಕೊಡುವಂಥ ವಾಹನ, ಬಟ್ಟೆಬರೆ, ಹಾಸಿಗೆ ಮತ್ತು ಇತರ ವಸ್ತುಗಳನ್ನು ಯಾವ ಸ್ಥಳಗಳಲ್ಲಿ ತೊಳೆಯತಕ್ಕದ್ದು ಮತ್ತು ಸೋಂಕು ನಿವಾರಿಸತಕ್ಕದ್ದು ಎಂಬ ಬಗ್ಗೆ ಆಯುಕ್ತನು ಅಧಿಸೂಚಿಸತಕ್ಕದ್ದು ಮತ್ತು ಹಾಗೆ ಅಧಿಸೂಚಿಸದೆ ಇರುವ ಯಾವುದೇ ಸ್ಥಳದಲ್ಲಿ ಯಾರೇ ವ್ಯಕ್ತಿಯು ಅಂಥ ಯಾವುದೇ ವಸ್ತುವನ್ನು ತೊಳೆಯತಕ್ಕದ್ದಲ್ಲ ಅಥವಾ ಅದರ ಸೋಂಕನ್ನು ನಿವಾರಿಸತಕ್ಕದ್ದಲ್ಲ.

(3) ಯಾವುದೇ ಅಪಾಯಕಾರಿ ರೋಗದಿಂದ ಸೋಂಕು ಉಳಿದಿರುವ ಸಂಭವವಿರುವ ಯಾವುದೇ ಬಟ್ಟೆಬರೆ, ಹಾಸಿಗೆ ಅಥವಾ ಇತರ ವಸ್ತುವಿನ ಸೋಂಕನ್ನು ನಿವಾರಿಸಲು ಅಥವಾ ಅದನ್ನು ನಾಶಪಡಿಸಲು ಆಯುಕ್ತನು ನಿರ್ದೇಶಿಸಬಹುದು.

256. ಸಾರ್ವಜನಿಕ ಉದ್ದೇಶಗಳಿಗಾಗಿನ ಅಥವಾ ಮನೋರಂಜನಾ ಸ್ಥಳಗಳನ್ನು ಮುಚ್ಚುವಂತೆ ಆದೇಶ ನೀಡುವ ಅಧಿಕಾರ.- ನಗರದೊಳಗೆ ಯಾವುದೇ ಅಪಾಯಕಾರಿ ರೋಗವು ಹರಡಿರುವ ಸಂದರ್ಭದಲ್ಲಿ, ಆಯುಕ್ತನು ಸ್ಥಾಯಿ ಸಮಿತಿಯ ಮಂಜೂರಾತಿ ಪಡೆದು ನೋಟೀಸಿನ ಮೂಲಕ, ಸಾರ್ವಜನಿಕ ಮನೋರಂಜನಾ ಉದ್ದೇಶಗಳಿಗಾಗಿ ಬಳಸುತ್ತಿರುವ ಯಾವುದೇ ಕಟ್ಟಡ, ಬೂತು ಅಥವಾ ಟೆಂಟಿನ ಖಾತಾದಾರನನ್ನು ಅಥವಾ ಅಧಿಭೋಗದಾರನನ್ನು, ಸ್ಥಾಯಿ ಸಮಿತಿಯು ನಿಗದಿಪಡಿಸಬಹುದಾದಂಥ ಅವಧಿಗೆ ಅದನ್ನು ಮುಚ್ಚುವಂತೆ ಅಗತ್ಯಪಡಿಸಬಹುದು.

257. ಸೋಂಕು ತಗುಲಿದ ವಸ್ತುಗಳ ವರ್ಗಾವಣೆ**ಯ ವಿರುದ್ಧ ನಿಷೇಧ.-** ಯಾರೇ ವ್ಯಕ್ತಿಯು ಯಾವುದೇ ಅಪಾಯಕಾರಿ ರೋಗದಿಂದ ಸೋಂಕಿಗೆ ಎಡೆಮಾಡಿಕೊಡುವ ಸಂಭವವಿದೆ ಎಂದು ಅವರು ತಿಳಿದಿರುವ ಅಥವಾ ತಿಳಿಯಲು ಕಾರಣವಿರುವಂಥ ಯಾವುದೇ ವಸ್ತುವನ್ನು, ಅದನ್ನು ಮುಂಚಿತವಾಗಿ ಸೋಂಕು ನಿವಾರಿಸದೆ ಕೊಡತಕ್ಕದ್ದಲ್ಲ, ಎರವಲು ಕೊಡತಕ್ಕದ್ದಲ್ಲ, ಗುತ್ತಿಗೆಗೆ ಕೊಡತಕ್ಕದ್ದಲ್ಲ, ಬಾಡಿಗೆಗೆ ಕೊಡತಕ್ಕದ್ದಲ್ಲ, ಮಾರತಕ್ಕದ್ದಲ್ಲ, ರವಾನಿಸತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದೇ ವಸ್ತುವನ್ನು ಸೋಂಕು ನಿವಾರಿಸುವ ಉದ್ದೇಶಕ್ಕಾಗಿ ಸರಿಯಾದ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ರವಾನಿಸುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

258. ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದಕ್ಕೆ ನಿಷೇಧ.- ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗದಿಂದ ತಾನು ನರಳುತ್ತಿದ್ದೇನೆಂದು ಯಾರೇ ವ್ಯಕ್ತಿಗೆ ತಿಳಿದರೆ, ಅಥವಾ ಸರ್ಕಾರದ ಅಥವಾ ನಗರ ಪಾಲಿಕೆಯ ಸೇವೆಯಲ್ಲಿರುವ ಆರೋಗ್ಯಾಧಿಕಾರಿ ಅಥವಾ ನೋಂದಾಯಿತ ವೈದ್ಯವೃತ್ತಿಗರು ಹಾಗೆಂದು ಪ್ರಮಾಣೀಕರಿಸಿದರೆ, ಅವನು ಅಂಥ ಸಾಂಕ್ರಾಮಿಕ ರೋಗವನ್ನು ಹರಡುವ ಯಾವುದೇ ಅಪಾಯವಿಲ್ಲದೆ ಯಾವುದೇ ವೃತ್ತಿಯಲ್ಲಿ ತೊಡಗಬಹುದುದಾಗಿದ್ದ ಹೊರತು ಅಥವಾ ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸಬಹುದಾಗಿದ್ದ ಹೊರತು, ಅವನು ಹಾಗೆ ವೃತ್ತಿಯಲ್ಲಿ ತೊಡಗತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

259. ರೋಗಪೀಡಿತ ವ್ಯಕ್ತಿಯು ಸಾರ್ವಜನಿಕ ವಾಹನವನ್ನು ಪ್ರವೇಶಿಸುವುದಕರ ವಿರುದ್ಧ ನಿಷೇಧ.- (1) ಯಾವುದೇ ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯು ತಾನು ಹಾಗೆ ರೋಗದಿಂದ ನರಳುತ್ತಿರುವುದಾಗಿ ಸಾರ್ವಜನಿಕ ವಾಹನದ ಮಾಲೀಕನಿಗೆ ಅಥವಾ ಚಾಲಕನಿಗೆ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಗೆ ಮುಂಚಿತವಾಗಿ ತಿಳಿಸದೆಯೇ ಅಂಥ ವಾಹನವನ್ನು ಪ್ರವೇಶಿಸತಕ್ಕದ್ದಲ್ಲ.

(2) ಸಾರ್ವಜನಿಕ ವಾಹನದ ಯಾರೇ ಮಾಲೀಕ ಅಥವಾ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು ಮೇಲೆ ಹೇಳಿದಂತೆ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು ಸದರಿ ವ್ಯಕ್ತಿಯು, ಅಂಥ ವಾಹನದ ಸೋಂಕನ್ನು ನಿವಾರಿಸಲು ವಹಿಸಬಹುದಾದ ಯಾವುದೇ ನಷ್ಟವನ್ನು ಮತ್ತು ಖರ್ಚುಗಳನ್ನು ತುಂಬಿಕೊಡಲು ಸಾಕಾಗುವಷ್ಟು ಮೊತ್ತವನ್ನು ಸಂದಾಯ ಮಾಡಿದ ಅಥವಾ ಕೊಟ್ಟ ಹೊರತು ಮತ್ತು ಹಾಗೆ ಸಂದಾಯ ಮಾಡುವವರೆಗೆ ಅಥವಾ ಕೊಡುವವರೆಗೆ ಅವನನ್ನು ಕರೆದೊಯ್ಯಲು ಬದ್ಧನಾಗಿರತಕ್ಕದ್ದಲ್ಲ.

(3) ಉಪ-ಪ್ರಕರಣ (1)ನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯನ್ನು, ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಅಪರಾಧಕ್ಕೆ ವಿಧಿಸುವ ದಂಡನೆಯ ಜೊತೆಗೆ, ವಾಹನದ ಸೋಂಕನ್ನು ನಿವಾರಿಸುವ ಉದ್ದೇಶಕ್ಕಾಗಿ ಮಾಲೀಕನು ಅಥವಾ ಚಾಲಕನು ವಹಿಸುವಂಥ ನಷ್ಟವನ್ನು ಮತ್ತು ಖರ್ಚನ್ನು ತುಂಬಿಕೊಡಲು ನ್ಯಾಯಾಲಯವು ಸಾಕಷ್ಟೆಂದು ಭಾವಿಸುವಂಥ ಮೊಬಲಗನ್ನು ವಿಧಿಸಬಹುದು. ಹಾಗೆ ವಿಧಿಸಿದ ಮೊಬಲಗನ್ನು ನ್ಯಾಯಾಲಯವು ವಾಹನದ ಮಾಲೀಕನಿಗೆ ಅಥವಾ ಚಾಲಕನಿಗೆ ಕೊಡಿಸತಕ್ಕದ್ದು:

ಪರಂತು, ಅಪೀಲಿಗೆ ಒಳಪಡುವಂಥ ಪ್ರಕರಣದಲ್ಲಿ, ಅಪೀಲು ಸಲ್ಲಿಸುವುದಕ್ಕೆ ಅನುಮತಿಸಿದ ಅವಧಿಯು ಗತಿಸುವುದಕ್ಕೆ ಮುಂಚೆ ಅಥವಾ ಅಪೀಲನ್ನು ಸಲ್ಲಿಸಿದ್ದರೆ, ಅಪೀಲಿನ ತೀರ್ಮಾನಕ್ಕೆ ಮುಂಚೆ ಅಂಥ ಮೊಬಲಗನ್ನು ಮಾಲೀಕನಿಗೆ ಅಥವಾ ಚಾಲಕನಿಗೆ ಸಂದಾಯಮಾಡತಕ್ಕದ್ದಲ್ಲ.

(4) ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ತರುವಾಯದ ಯಾವುದೇ ಸಿವಿಲ್ ದಾವೆಯಲ್ಲಿ ನಷ್ಟಪರಿಹಾರದ ಐತೀರ್ಪು ನೀಡುವ ಕಾಲದಲ್ಲಿ, ಈ ಪ್ರಕರಣದ ಮೇರೆಗೆ ವಾದಿಯು ಸ್ವೀಕರಿಸಿರುವ ಯಾವುದೇ ಮೊತ್ತವನ್ನು ನ್ಯಾಯಾಲಯವು ಗಣನೆಗೆ ತೆಗೆದುಕೊಳ್ಳತಕ್ಕದ್ದು.

260. ರೋಗಿಗಳನ್ನು ಸಾಗಿಸಿದ ತರುವಾಯ ಸಾರ್ವಜನಿಕ ವಾಹನದ ಸೋಂಕು ನಿವಾರಣೆ.- (1) ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು ಸಾಗಿಸಿದ ಯಾವುದೇ ಸಾರ್ವಜನಿಕ ವಾಹನದ ಮಾಲೀಕನು, ಚಾಲಕನು ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು, ಆ ವಾಹನದ ಸೋಂಕನ್ನು ತಕ್ಷಣವೇ ನಿವಾರಿಸತಕ್ಕದ್ದು ಅಥವಾ ಅದರ ಸೋಂಕನ್ನು ನಿವಾರಿಸುವಂತೆ ಮಾಡತಕ್ಕದ್ದು.

(2) ಅಂಥ ಯಾವುದೇ ವಾಹನವನ್ನು, ಆರೋಗ್ಯಾಧಿಕಾರಿಯು ಅಥವಾ ಈ ಬಗ್ಗೆ ಅವರಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಸೋಂಕಿನ ಅಪಾಯವನ್ನು ಉಂಟುಮಾಡದೆ ವಾಹನವನ್ನು ಬಳಸಬಹುದೆಂದು ತಿಳಿಸುವ ಪ್ರಮಾಣಪತ್ರವನ್ನು ಕೊಡುವವರೆಗೆ, ಅದನ್ನು ಬಳಸತಕ್ಕದ್ದಲ್ಲ.

261. ಸೋಂಕು ತಗುಲಿದ ಕಟ್ಟಡವನ್ನು ಬಾಡಿಗೆಗೆ ಕೊಡುವುದು.- (1) ಯಾರೇ ವ್ಯಕ್ತಿಯು, ಯಾವ ಕಟ್ಟಡದಲ್ಲಿ ಅಥವಾ ಆ ಕಟ್ಟಡದ ಯಾವುದೇ ಭಾಗದಲ್ಲಿ ಅಪಾಯಕಾರಿ ಮತ್ತು ಸಾಂಕ್ರಾಮಿಕ ರೋಗದಿಂದ ವ್ಯಕ್ತಿಯು ನರಳುತ್ತಿದ್ದಾನೆಂದು ಅವನು ತಿಳಿದಿರುವನೋ ಅಥವಾ ತಿಳಿಯಲು ಕಾರಣವಿದೆಯೋ ಆ ಕಟ್ಟಡವನ್ನು ಅಥವಾ ಕಟ್ಟಡದ ಯಾವುದೇ ಭಾಗವನ್ನು, ಅಂಥ ಕಟ್ಟಡವನ್ನು ಪುನಃ ವಾಸಕ್ಕೆ ಬಳಸಬಹುದೆಂದು ಆರೋಗ್ಯಾಧಿಕಾರಿಯು ಪ್ರಮಾಣಪತ್ರವನ್ನು ಕೊಡುವವರೆಗೆ ಬಾಡಿಗೆಗೆ ಅಥವಾ ಒಳಬಾಡಿಗೆಗೆ ಕೊಡತಕ್ಕದಲ್ಲ ಅಥವಾ ಆ ಉದ್ದೇಶಕ್ಕಾಗಿ ಅದರೊಳಗೆ ಪ್ರವೇಶಿಸಲು ಯಾರೇ ವ್ಯಕ್ತಿಗೆ ಅವಕಾಶ ನೀಡತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಉದ್ದೇಶಕ್ಕಾಗಿ ಹೋಟೆಲ್ ಅಥವಾ ವಸತಿಗೃಹವನ್ನು ಇಟ್ಟಿರುವವನು, ಅದರಲ್ಲಿ ಯಾವ ವ್ಯಕ್ತಿಗೆ ಸ್ಥಳಾವಕಾಶ ಕೊಟ್ಟಿರುವನೋ ಆ ಯಾರೇ ವ್ಯಕ್ತಿಗೆ ಅದನ್ನು ಅಥವಾ ಅದರ ಭಾಗವನ್ನು ಬಾಡಿಗೆಗೆ ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

262. ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದಿಂದ ನರಳುತ್ತಿರುವ ಅಪ್ರಾಪ್ತ ವಯಸ್ಕನು ಶಾಲೆಗೆ ಹಾಜರಾಗುವಂತಿಲ್ಲ.- ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದಿಂದ ನರಳುವ ಅಥವಾ ನರಳುತ್ತಿರುವ ಅಥವಾ ಅದರಿಂದ ಸೋಂಕಿಗೆ ಗುರಿಯಾಗಿರುವ ಅಪ್ರಾಪ್ತ ವಯಸ್ಕನ ತಂದೆ-ತಾಯಿಯಾಗಿರುವ ಅಥವಾ ಅವನ ಪಾಲನೆಯ ಜವಾಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಪ್ರಾಪ್ತ ವಯಸ್ಕನನ್ನು ಶಾಲೆಗೆ ಅಥವಾ ಕಾಲೇಜಿಗೆ ಕಳುಹಿಸಕೂಡದೆಂದು ಆರೋಗ್ಯಾಧಿಕಾರಿಯಿಂದ ನೋಟೀಸು ಬಂದ ತರುವಾಯ, ಅಂಥ ಅಪ್ರಾಪ್ತ ವಯಸ್ಕನು ಅಂಥ ರೋಗವನ್ನು ಇತರರಿಗೆ ಹರಡುವ ಅನಿರೀಕ್ಷಿತ ಅಪಾಯವಿಲ್ಲವೆಂದು, ಅವನು ಶಾಲೆಗೆ ಅಥವಾ ಕಾಲೇಜಿಗೆ ಹಾಜರಾಗಬಹುದೆಂದು ಆರೋಗ್ಯಾಧಿಕಾರಿಯು ಅಭಿಪ್ರಾಯಪಟ್ಟು ನೀಡಿದ ಪ್ರಮಾಣಪತ್ರವನ್ನು ಅವನಿಂದ ಪಡೆಯದೇ (ಅದನ್ನು ಅರ್ಜಿಯನ್ನು ಹಾಕಿಕೊಂಡ ಮೇಲೆ ಉಚಿತವಾಗಿ ಕೊಡತಕ್ಕದ್ದು) ಅಂಥ ಅಪ್ರಾಪ್ತ ವಯಸ್ಕನಿಗೆ ಶಾಲೆ ಅಥವಾ ಕಾಲೇಜಿಗೆ ಹಾಜರಾಗಲು ಅನುಮತಿಸತಕ್ಕದ್ದಲ್ಲ.

263. ಗ್ರಂಥಾಲಯ ಪುಸ್ತಕಗಳಿಗೆ ಸಂಬಂಧಿಸಿದಂತೆ ಉಪಬಂಧ.- (1) ಸೋಂಕು ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ಅಥವಾ ಗ್ರಂಥಾಲಯದಲ್ಲಿ ತನ್ನ ಉಪಯೋಗಕ್ಕಾಗಿ ಯಾವುದೇ ಪುಸ್ತಕವನ್ನು ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಉಪಯೋಗಿಸತಕ್ಕದ್ದಲ್ಲ ಅಥವಾ ತನ್ನ ಉಪಯೋಗಕ್ಕಾಗಿ ಯಾವುದೇ ಪುಸ್ತಕವನ್ನು ತರಿಸಿಕೊಳ್ಳತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ತೆಗೆದುಕೊಂಡಿರುವ ಮತ್ತು ತನ್ನ ಸುಪರ್ದಿಯಲ್ಲಿರುವ ಯಾವುದೇ ಪುಸ್ತಕವನ್ನು, ಸೋಂಕು

ರೋಗದಿಂದ ನರಳುತ್ತಿದ್ದಾನೆಂದು ತನಗೆ ತಿಳಿದಿರುವಂತಹ ಯಾರೇ ವ್ಯಕ್ತಿಯು ಉಪಯೋಗಿಸುವುದಕ್ಕೆ ಅನುಮತಿಸತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು, ಯಾವುದೇ ಸೋಂಕು ರೋಗದಿಂದ, ಸೋಂಕಿಗೆ ಒಳಗಾಗಿದೆ ಎಂದು ಅವನು ತಿಳಿದಿರುವ ಯಾವುದೇ ಪುಸ್ತಕವನ್ನು ಯಾವುದೇ ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯಕ್ಕೆ ವಾಪಸು ಮಾಡತಕ್ಕದ್ದಲ್ಲ ಅಥವಾ ತನ್ನ ಸುಪರ್ದಿಯಲ್ಲಿರುವ ಅಂಥ ಪುಸ್ತಕವನ್ನು ಹಾಗೆ ವಾಪಸ್ಸು ಮಾಡಲು ಅನುಮತಿಸತಕ್ಕದ್ದಲ್ಲ, ಆದರೆ ಪುಸ್ತಕವು ಹಾಗೆ ಸೋಂಕಿಗೆ ಒಳಗಾಗಿದೆ ಎಂದು ಅವನು ಆಯುಕ್ತರ ಗಮನಕ್ಕೆ ತರತಕ್ಕದ್ದು ಮತ್ತು ಆಯುಕ್ತನು ಪುಸ್ತಕದ ಸೋಂಕನ್ನು ನಿವಾರಿಸುವಂತೆ ಮತ್ತು ಪುಸ್ತಕವನ್ನು ಗ್ರಂಥಾಲಯಕ್ಕೆ ವಾಪಸ್ಸು ಮಾಡುವಂತೆ ಅಥವಾ ನಾಶಪಡಿಸುವಂತೆ ಮಾಡತಕ್ಕದ್ದು.

(4) ಆಯುಕ್ತನು, ನಾಶಪಡಿಸಿದ ಯಾವುದೇ ಪುಸ್ತಕದ ಮೌಲ್ಯವನ್ನು ಸಂಬಂಧಿಸಿದ ಗ್ರಂಥಾಲಯದ ಮಾಲೀಕರಿಗೆ ಸಂದಾಯ ಮಾಡತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಗಳಿಗಾಗಿ ಆಯುಕ್ತನು ಯಾವ ರೋಗಗಳನ್ನು ಸೋಂಕುಕಾರಕ ರೋಗಗಳಾಗಿ ಭಾವಿಸಬೇಕು ಎಂಬುದನ್ನು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು.

264. ಸೋಂಕು ಹರಡುವ ಸಂಭವವಿರುವ ನೀರಿನ ಬಳಕೆಯನ್ನು ನಿಷೇಧಿಸುವ ಅಧಿಕಾರ.- ನಗರದ ಎಲ್ಲೆಗಳ ಒಳಗೆ ಇರುವ ಯಾವುದೇ ಬಾವಿಯ, ಕೆರೆಯ ಅಥವಾ ಇತರೆ ಸ್ಥಳದಲ್ಲಿನ ನೀರನ್ನು ಕುಡಿಯುವುದಕ್ಕಾಗಿ ಬಳಸಿದರೆ ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದ ಹರಡುವಿಕೆಯ ಅಪಾಯವಿದೆಯೆಂದು ಮತ್ತು ಅಪಾಯವನ್ನುಂಟು ಮಾಡುವ ಸಂಭವವಿದೆಯೆಂದು ಆರೋಗ್ಯಾಧಿಕಾರಿಯು ಪ್ರಮಾಣೀಕರಿಸಿದರೆ, ಆಯುಕ್ತನು ಸಾರ್ವಜನಿಕ ನೋಟೀಸಿನ ಮೂಲಕ, ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಕುಡಿಯುವುದಕ್ಕಾಗಿ ಮತ್ತು ಗೃಹಬಳಕೆಯ ಉದ್ದೇಶಗಳಿಗಾಗಿ ಅಂಥ ನೀರನ್ನು ತೆಗೆದುಕೊಂಡು ಹೋಗುವುದನ್ನು ಅಥವಾ ಬಳಸುವುದನ್ನು ನಿಷೇಧಿಸಬಹುದು.

265. ಕಡ್ಡಾಯವಾಗಿ ಲಸಿಕೆ ಹಾಕುವುದು.- ನಗರ ಪಾಲಿಕೆಯು, ನಿಯಮಿಸಬಹುದಾದಂಥ ರೀತಿಯಲ್ಲಿ ನಗರದಾದ್ಯಂತ ಲಸಿಕೆ ಹಾಕಿಸಿಕೊಳ್ಳುವುದನ್ನು ಕಡ್ಡಾಯ ಮಾಡತಕ್ಕದ್ದು ಮತ್ತು ನಿಯಮಿಸಬಹುದಾದಂಥ ವ್ಯಕ್ತಿಗೆ ಸಂಬಂಧಿಸಿದಂತೆ, ನಿಯಮಿಸಬಹುದಾದಷ್ಟರಮಟ್ಟಿಗೆ, ಮತ್ತು ಅಂಥ ರೀತಿಯಲ್ಲಿ ನಗರದಾದ್ಯಂತ ಅಥವಾ ಅದರ ಯಾವುದೇ ಭಾಗದಲ್ಲಿ ಲಸಿಕೆ ಹಾಕಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಬಹುದು.

266. ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದ ಬಗ್ಗೆ ಮಾಹಿತಿಯನ್ನು ನೀಡುವ ಹೊಣೆಗಾರಿಕೆ.- (1) ನಗರದೊಳಗಿನ ಯಾವುದೇ ವಾಸಸ್ಥಳದ ನಿವಾಸಿಯು ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗದಿಂದ ನರಳುತ್ತಿರುವಲ್ಲಿ, ನಿವಾಸಿಯು ಯಾವ ಕುಟುಂಬಕ್ಕೆ ಸೇರಿದ್ದಾನೋ ಆ ಕುಟುಂಬದ ಯಜಮಾನರು ಮತ್ತು ಅವನು ತಪ್ಪಿದಲ್ಲಿ, ಅಂಥ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು, ಸಾಧ್ಯವಾದಷ್ಟುಮಟ್ಟಿಗೆ ತುಂಬಾ ವಿಳಂಬ ಮಾಡದೇ ಆಯುಕ್ತನಿಗೆ ಅಥವಾ ಆರೋಗ್ಯಾಧಿಕಾರಿಗೆ ಅಥವಾ ಆ ವಿಭಾಗದ ನೈರ್ಮಲ್ಯ ನಿರೀಕ್ಷಕರಿಗೆ ತಿಳಿಸತಕ್ಕದ್ದು.

(2) ಆಯುಕ್ತನು ಸಮಗ್ರ ಸಾಕ್ಷ್ಯ ಆಧಾರಿತ ನೀತಿ ನಿರ್ಣಯಗಳಿಗಾಗಿ ಮತ್ತು ಸಾರ್ವಜನಿಕ ಆರೋಗ್ಯ ಸುಧಾರಣೆಯ ಮಾನದಂಡಗಳಿಗಾಗಿ ಪಾಲಿಕೆಯ ಅಧಿಕಾರವ್ಯಾಪ್ತಿಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಆರೋಗ್ಯ ಪಾಲನಾ ಸೌಲಭ್ಯಗಳನ್ನು ಅಂಥ ಸೌಲಭ್ಯಗಳೊಂದಿಗೆ ಈಗಾಗಲೇ ಲಭ್ಯವಿರುವಂಥ ಎಲ್ಲಾ ಅಗತ್ಯ ಮಾಹಿತಿಯನ್ನು ಒದಗಿಸುವಂತೆ ಕೋರಬಹುದು ಅಥವಾ ಕಾಲಕಾಲಕ್ಕೆ ನಿಯಮಿಸಲಾದ ನಮೂನೆಗಳಲ್ಲಿ ಮಾಹಿತಿಯನ್ನು ನಿರ್ವಹಿಸಿ ಸಲ್ಲಿಸುವಂತೆ ಅವರನ್ನು ಕೋರಬಹುದು.

267. ನಗರ ಪ್ರವೇಶಕ್ಕೆ ನಿಷೇಧ.- ಅಪಾಯಕಾರಿ ಅಥವಾ ಸಾಂಕ್ರಾಮಿಕ ರೋಗವುಳ್ಳ ಯಾರೇ ವ್ಯಕ್ತಿಯು, ಆಯುಕ್ತನು ಅಧಿಸೂಚಿಸಿದ ದಿನಾಂಕದಿಂದ ಅಂಥ ವ್ಯಕ್ತಿಯು ಸಂಪರ್ಕಕ್ಕೆ ಅಥವಾ ಸನಿಹಕ್ಕೆ ಬರುವುದರಿಂದ ಅಪಾಯಕಾರಿ ರೋಗವು ಬರುವ ಸಂಭವವಿಲ್ಲವೆಂದು ತಿಳಿಸಿ ಆಯುಕ್ತನು ಅಧಿಕೃತಗೊಳಿಸಬಹುದಾದಂಥ ದರ್ಜೆಯ ವೈದ್ಯರಿಂದ ಪ್ರಮಾಣ ಪತ್ರವನ್ನು ಪಡೆಯದೆ ನಗರವನ್ನು ಪ್ರವೇಶಿಸತಕ್ಕದ್ದಲ್ಲ.

268. ಅಪಾಯಕಾರಿ ಕಲ್ಲು ಗಣಿ ಕೆಲಸವನ್ನು ನಿಲ್ಲಿಸುವ ಅಧಿಕಾರ.- ಆಯುಕ್ತನು, ಯಾವುದೇ ಕಲ್ಲುಗಣಿಯ ಕೆಲಸವು ಅಥವಾ ಯಾವುದೇ ಸ್ಥಳದಿಂದ ಕಲ್ಲು, ಮಣ್ಣು ಅಥವಾ

ಇತರ ಸಾಮಗ್ರಿಗಳನ್ನು ಸ್ಥಳಾಂತರಿಸುವುದು ಆ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಆ ಸ್ಥಳದ ಅಕ್ಕಪಕ್ಕದ ಸ್ಥಳಕ್ಕೆ ಕಾನೂನು ಸಮ್ಮತ ಪ್ರವೇಶಾವಕಾಶವನ್ನು ಹೊಂದಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾಗಿದೆ ಎಂದು ಅಥವಾ ಉಪದ್ರವವನ್ನು ಉಂಟುಮಾಡುತ್ತದೆ ಎಂದು ಅಥವಾ ಉಂಟುಮಾಡುವ ಸಂಭವ ಇದೆ ಎಂದು ಅಭಿಪ್ರಾಯಪಟ್ಟರೆ, ಆಯುಕ್ತನು ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಆ ಸದರಿ ಕಲ್ಲುಗಣಿಯ ಕೆಲಸದ ಮೇಲೆ ಅಥವಾ ಸ್ಥಳದ ಮೇಲೆ ನಿಯಂತ್ರಣವನ್ನು ಹೊಂದಿರುವ ಖಾತಾದಾರನನ್ನು ಅಥವಾ ವ್ಯಕ್ತಿಯನ್ನು ಆ ಕೆಲಸವನ್ನು ಮುಂದುವರೆಸದಂತೆ ಅಥವಾ ಅಂಥ ಸ್ಥಳದಿಂದ ಕಲ್ಲು, ಮಣ್ಣು ಅಥವಾ ಇತರ ಸಾಮಗ್ರಿಯನ್ನು ಸ್ಥಳಾಂತರಿಸುವುದನ್ನು ಮುಂದುವರೆಸದಂತೆ ಅಥವಾ ಅಂಥ ಕೆಲಸದಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಅಪಾಯವನ್ನು ತಪ್ಪಿಸುವ ಅಥವಾ ಉಪದ್ರವವನ್ನು ಉಪಶಮನಗೊಳಿಸುವುದಕ್ಕಾಗಿ ಅಂಥ ಕಲ್ಲುಗಣಿಗೆ ಅಥವಾ ಸ್ಥಳದ ಬಗ್ಗೆ ಅವಶ್ಯವೆಂದು ತಾನು ಭಾವಿಸುವಂಥ ಆದೇಶವನ್ನು ಪಡೆದುಕೊಳ್ಳಬೇಕೆಂದು ಅಗತ್ಯಪಡಿಸಬಹುದು.

269. ನಗರದೊಳಗೆ ಉಪದ್ರವಕಾರಿಯಾಗಿರುವಂಥ ಹೊಂಡಗಳು, ಇತ್ಯಾದಿಗಳನ್ನು ಮುಚ್ಚುವಂತೆ ಆದೇಶಿಸುವ ಅಧಿಕಾರ ಮತ್ತು ಕೃಷಿಯ ನಿಯಂತ್ರಣ.- (1) ಆಯುಕ್ತನ ಅಭಿಪ್ರಾಯದಲ್ಲಿ -

(ಎ) ಯಾವುದೇ ಹೊಂಡ, ಗುಂಡಿ, ಕೆರೆ, ಬಾವಿ, ಕೊಳ, ಕೆಸರು ಭೂಮಿ, ಜೌಗುನೆಲ, ಕಲ್ಲುಗುಣಿ, ಚರಂಡಿ, ರೊಚ್ಚುಗುಂಡಿ, ಗುಂಡಿ, ಜಲಮಾರ್ಗ ಅಥವಾ ಯಾವುದೇ ರೀತಿಯ ನೀರು ಸಂಗ್ರಹ; ಅಥವಾ

(ಬಿ) ಯಾವ ಭೂಮಿಯ ಮೇಲೆ ಯಾವುದೇ ಕಾಲದಲ್ಲಿ ನೀರು ಶೇಖರಣೆಯಾಗುವುದೋ ಆ ಯಾವುದೇ ಭೂಮಿಯು ಸೊಳ್ಳೆಗಳ ಉತ್ಪತ್ತಿಯ ಸ್ಥಳ ಅಥವಾ ಇತರ ಯಾವುದೇ ರೀತಿಯಲ್ಲಿ ಉಪದ್ರವಕಾರಿಯಾಗಿದೆ ಎಂದು ಅಥವಾ ಆಗುವ ಸಂಭವವಿದೆ ಎಂದು ಅಭಿಪ್ರಾಯಪಟ್ಟರೆ, ಆಯುಕ್ತನು ನೋಟೀಸಿನ ಮೂಲಕ ಖಾತಾದಾರನನ್ನು ಅಥವಾ ಅದರ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯನ್ನು ಆಯುಕ್ತನು ನಿರ್ದೆಶಿಸುವಂಥ ರೀತಿಯಲ್ಲಿ ಮತ್ತು ಅಂಥ ಸಾಮಗ್ರಿಗಳೊಂದಿಗೆ ಅದನ್ನು ಮುಚ್ಚಲು, ಸುತ್ತುಗಟ್ಟು ನಿರ್ಮಿಸಲು, ಕಳೆ ತೆಗೆಯಲು, ಕಳೆ ತೆಗೆದು ಶೇಖರಣೆ ಮಾಡಲು, ಮರಿಹುಳು ನಾಶಕ ಮೀನನ್ನು ಸಂಗ್ರಹಿಸಲು, ಸೀಮೆ ಎಣ್ಣೆಯಿಂದ ಸಂಸ್ಕರಿಸಲು ಅಥವಾ ಅದನ್ನು ಬರಿದು ಮಾಡಲು ಮತ್ತು ಉಪದ್ರವವನ್ನು ನಿವಾರಿಸುವುದಕ್ಕಾಗಿ ಅಥವಾ ಉಪಶಮನಗೊಳಿಸುವುದಕ್ಕಾಗಿ ಅದರ ಬಗ್ಗೆ ಆಯುಕ್ತನು ನಿರ್ದೇಶಿಸುವಂಥ ಆದೇಶವನ್ನು ಪಡೆದುಕೊಳ್ಳುವಂತೆ ಅಗತ್ಯ ಪಡಿಸಬಹುದು.

(2) ಬಾವಿಯನ್ನು ಮುಚ್ಚಲು, ಮೇಲೆ ಸುತ್ತುಗಟ್ಟು ನಿರ್ಮಿಸಲು ಅಥವಾ ಬಾವಿಯನ್ನು ಬರಿದು ಮಾಡಲು (1)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಕಡ್ಡಾಯವಾಗಿ ಕೋರಲಾಗಿದೆಯೋ ಆ ವ್ಯಕ್ತಿಯು ಅದನ್ನು ಪಾಲಿಸಲು ನಿಗದಿಪಡಿಸಿದ ಸಮಯದೊಳಗಾಗಿ ಹಾಗೆ ಕಡ್ಡಾಯವಾಗಿ ಕೋರಿರುವುದಕ್ಕೆ ಲಿಖಿತದಲ್ಲಿ ಆಕ್ಷೇಪಣೆಗಳನ್ನು ಆಯುಕ್ತನಿಗೆ ಸಲ್ಲಿಸಿದರೆ, ಆಯುಕ್ತನು ಸ್ಥಾಯಿ ಸಮಿತಿಗೆ ಅಂಥ ಆಕ್ಷೇಪಣೆಗಳನ್ನು ವರದಿ ಮಾಡತಕ್ಕದ್ದು ಹಾಗೂ ಪ್ರಕರಣದ ಬಗ್ಗೆ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಕಡ್ಡಾಯ ಕೋರಿಕೆಯನ್ನು ಪಾಲನೆ ಮಾಡಲು ತಪ್ಪಿದ್ದಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನು ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆದ ಹೊರತು ಅವರು ಹೂಡತಕ್ಕದ್ದಲ್ಲ. ಆದರೆ ಆಯುಕ್ತನು, ಆದಾಗ್ಯೂ ಅಂಥ ಕಡ್ಡಾಯ ಕೋರಿಕೆಯಲ್ಲಿ ಅಪೇಕ್ಷಿಸಿದಂಥ ಕಾಮಗಾರಿಯನ್ನು ನಿರ್ವಹಿಸುವುದು ತುರ್ತು ಮಹತ್ವದ್ದೆಂದು ಅವರು ಭಾವಿಸಿದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುಂದುವರಿಯಬಹುದು ಹಾಗೂ ಆ ಸದರಿ ಬಾವಿಯನ್ನು ಶಾಶ್ವತವಾಗಿ ಮುಚ್ಚಬೇಕೇ, ಮೇಲೆ ಸುತ್ತುಗಟ್ಟು ನಿರ್ಮಿಸಬೇಕೇ ಅಥವಾ ಬೇರೆ ಏನನ್ನಾದರೂ ಮಾಡಬೇಕೇ ಎಂಬ ಪ್ರಶ್ನೆಯನ್ನು ಸ್ಥಾಯಿ ಸಮಿತಿಯು ಇತ್ಯರ್ಥ ಮಾಡುವವರೆಗೆ ಅಂಥ ಬಾವಿಯನ್ನು ಸೊಳ್ಳೆಗಳು ಒಳಹೋಗುವುದನ್ನು ತಪ್ಪಿಸುವ ಹಾಗೆ ಸುಭದ್ರವಾಗಿ ಮೇಲೆ ಸುತ್ತುಗಟ್ಟು ನಿರ್ಮಿಸುವಂತೆ ಮಾಡಬಹುದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ ಆಯುಕ್ತನು ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಮೇಲೆ ಹೇಳಿದಂತೆ ಈಗಾಗಲೇ ಮಾಡಿದ ಯಾವುದೇ ಕಾಮಗಾರಿಯ ವೆಚ್ಚಗಳನ್ನು, ಆ ಖಾತಾದಾರನು ಸಂದಾಯ ಮಾಡಬೇಕೇ

ಅಥವಾ ನಗರ ಪಾಲಿಕೆಯ ನಿಧಿಯಿಂದ ಆಯುಕ್ತನು ಸಂದಾಯ ಮಾಡಬೇಕೇ ಅಥವಾ ಭಾಗಮಾಡಿಕೊಳ್ಳಬೇಕೇ ಮತ್ತು ವೆಚ್ಚವನ್ನು ಹಾಗೆ ಭಾಗ ಮಾಡಿಕೊಳ್ಳಬೇಕಾದ ಪಕ್ಷದಲ್ಲಿ, ಯಾವ ಪ್ರಮಾಣಗಳಲ್ಲಿ ಸಂದಾಯ ಮಾಡಬೇಕು ಎಂಬುದನ್ನು ನಿರ್ಧರಿಸತಕ್ಕದ್ದು.

(3) ನಗರದ ಎಲ್ಲೆಗಳ ಒಳಗೆ ಇರುವ ಯಾವುದೇ ಸ್ಥಳದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೆಳೆಯ ಸಾಗುವಳಿಯು ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಗೊಬ್ಬರದ ಬಳಕೆಯು ಅಥವಾ ಭೂಮಿಯ ನೀರಾವರಿಯು ಸಾರ್ವಜನಿಕ ಆರೋಗ್ಯಕ್ಕೆ ಹಾನಿಕಾರಕವಾಗಿದೆಯೆಂಬ ಆರೋಗ್ಯಾಧಿಕಾರಿಯ ವರದಿಯ ಮೇಲೆ, ನಗರ ಪಾಲಿಕೆಯು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಸಾರ್ವಜನಿಕ ನೋಟೀಸಿನ ಮೂಲಕ ಹಾನಿಕಾರಕವಾಗಿರುವುದಾಗಿ ಹಾಗೆ ವರದಿ ಮಾಡಲಾದ ಸಾಗುವಳಿಯನ್ನು, ಗೊಬ್ಬರದ ಬಳಕೆಯನ್ನು ಅಥವಾ ನೀರಾವರಿಯನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು:

ಪರಂತು, ಅಂಥ ಸಾಗುವಳಿಯನ್ನು ಅಥವಾ ನೀರಾವರಿಯನ್ನು ಅಂಥ ಸಾರ್ವಜನಿಕ ನೋಟೀಸಿನ ದಿನಾಂಕಕ್ಕೆ ಹಿಂದಿನ ಐದು ವರ್ಷಗಳ ಅವಧಿಯಲ್ಲಿ, ವಾಡಿಕೆಯಂತೆ ಬೇಸಾಯದ ನಿರ್ವಹಣೆಯನುಸಾರ ಸತತವಾಗಿ ನಡೆಸಿಕೊಂಡು ಬರುತ್ತಿರುವ ಪದ್ಧತಿಯಾಗಿದ್ದರೆ, ಅಂಥ ನಿಷೇಧದಿಂದ ಅವರಿಗೆ ಉಂಟಾದ ಯಾವುದೇ ಹಾನಿಗಾಗಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳಿಗೆ ನಗರ ಪಾಲಿಕೆಯ ನಿಧಿಯಿಂದ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

ಅಧ್ಯಾಯ XIX
ವಿಪತ್ತು ನಿರ್ವಹಣೆ

270. ವಿಪತ್ತು ನಿರ್ವಹಣೆ.- (1) ಯಾವುದೇ ನೈಸರ್ಗಿಕ ವಿಕೋಪವನ್ನು ತಡೆಗಟ್ಟುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಹಾಗೆ ಮಾಡಲು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ನಗರ ಪಾಲಿಕೆಯು ನೆರವು ನೀಡತಕ್ಕದ್ದು.

(2) ರಾಜ್ಯ ವಿಧಾನ ಮಂಡಲ ಅಥವಾ ಸಂಸತ್ತಿನ ಯಾವುದೇ ಕಾನೂನಿಗೆ ಒಳಪಟ್ಟು, ನಗರ ಪಾಲಿಕೆಯು ನೈಸರ್ಗಿಕ ಅಥವಾ ತಾಂತ್ರಿಕ ವಿಪತ್ತಿನ ಯಾವುದೇ ರೀತಿಯ ಅಪಾಯವನ್ನು ಉಪಶಮನಗೊಳಿಸಲು ಈ ಅಧಿನಿಯಮದ ಅಡಿಯಲ್ಲಿ ತನ್ನ ನಿಯಂತ್ರಣಾತ್ಮಕ ಮತ್ತು ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸುವಾಗ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ನಗರ ಪಾಲಿಕೆಯು, ಪ್ರತಿ ವರ್ಷ ರಾಜ್ಯಸರ್ಕಾರವು ನಿಯಮಿಸಬಹುದಾದಂತೆ ವಿಪತ್ತು ನಿರ್ವಹಣಾ ಯೋಜನೆ ಅಥವಾ ಅಗ್ನಿ ಅವಘಡ ಪ್ರತಿಸ್ಪಂದನೆ ಮತ್ತು ಪರಿಹಾರ ಯೋಜನೆಯನ್ನು ಪೂರ್ವ ಪ್ರಕಟಣೆಯ ತರುವಾಯ ಸಿದ್ಧಪಡಿಸತಕ್ಕದ್ದು ಮತ್ತು ಯೋಜನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

ಅಧ್ಯಾಯ XX
ತ್ಯಾಜ್ಯ ನಿರ್ವಹಣೆ

271. ಘನ ತ್ಯಾಜ್ಯವನ್ನು ನಿರ್ವಹಿಸುವಲ್ಲಿ ನಗರ ಪಾಲಿಕೆ ಮತ್ತು ಆಯುಕ್ತನ ಕರ್ತವ್ಯ.- (1) ಆಯುಕ್ತನು, ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಅನುಸಾರವಾಗಿ ಪೌರ ಘನತ್ಯಾಜ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಯಲ್ಲಿ ಇಲಾಖೆ ಅಥವಾ ಅಂಥ ಏಜೆನ್ಸಿಯೊಂದಿಗೆ ಸಮನ್ವಯ ಸಾಧಿಸತಕ್ಕದ್ದು.

(2) ಆಯುಕ್ತನು ನಿರ್ಮಾಣ ಮತ್ತು ಕೆಡವುವ ತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಅನುಸಾರವಾಗಿ ನಿರ್ಮಾಣ ಮತ್ತು ಕೆಡವುವ ತ್ಯಾಜ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಯಲ್ಲಿ ಇಲಾಖೆ ಅಥವಾ ಅಂಥ ಏಜೆನ್ಸಿಯೊಂದಿಗೆ ಸಮನ್ವಯ ಸಾಧಿಸತಕ್ಕದ್ದು.

(3) ಆಯುಕ್ತನು ಸ್ವಚ್ಛಪರಿಸರವನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಹಾಗೂ ಸಮುದಾಯದ ಮಟ್ಟದಲ್ಲಿ ಗೃಹ ಜೈವಿಕಗೊಬ್ಬರ ತಯಾರಿ ಮತ್ತು

ಇತರ ಅಂಥ ಕಾರ್ಯವಿಧಾನಗಳನ್ನು ಉತ್ತೇಜಿಸುವಲ್ಲಿ ಸಮುದಾಯಗಳನ್ನು ತೊಡಗಿಸಿಕೊಳ್ಳತಕ್ಕದ್ದು.

(4) ಆಯುಕ್ತನು ಸೂಕ್ತ ತ್ಯಾಜ್ಯ ನಿರ್ವಹಣೆಯನ್ನು ಖಾತ್ರಿಗೊಳಿಸುವುದರ ಅವಶ್ಯಕತೆಯ ಬಗೆಗಿನ ಮಾಹಿತಿಯ ಮುಖಾಂತರ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸತಕ್ಕದ್ದು.

272. ಘನ ತ್ಯಾಜ್ಯಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಬಿಲ್ಲಿಂಗ್ ಮತ್ತು ಶುಲ್ಕಗಳ ಸಂಗ್ರಹಣೆಯನ್ನು ವಹಿಸುವುದು.- (1) ಈ ಅಧಿನಿಯಮದಲ್ಲಿ ಎಲ್ಲೆಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಮೂಲಸೌಕರ್ಯ ಅಭಿವೃದ್ಧಿಗೆ ಪೌರ ಘನ ತ್ಯಾಜ್ಯ ಹಾಗೂ ನಿರ್ಮಾಣ ಮತ್ತು ಕೆಡವುವ ತ್ಯಾಜ್ಯಗಳು ಯಾವುದಾದರೂ ಇದ್ದಲ್ಲಿ, ಅವುಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ಉದ್ದೇಶಗಳಿಗಾಗಿ, ಹಾಗೂ ಅಂಥ ಘನ ತ್ಯಾಜ್ಯಗಳ ಮತ್ತು ನಿರ್ಮಾಣ ಹಾಗೂ ಕೆಡವುವ ತ್ಯಾಜ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ ಮಾಡುವುದಕ್ಕಾಗಿ ನಗರ ಪಾಲಿಕೆಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತಹ ದರದಲ್ಲಿ ಬಳಕೆದಾರ ಶುಲ್ಕವನ್ನು ವಿಧಿಸಬಹುದು. ಅಂಥ ಬಳಕೆದಾರ ಶುಲ್ಕವು, ಮೂಲಸೌಕರ್ಯ ಅಭಿವೃದ್ಧಿಗೆ ಪೌರ ಘನ ತ್ಯಾಜ್ಯ ಮತ್ತು ನಿರ್ಮಾಣ ಮತ್ತು ಕೆಡವುವ ತ್ಯಾಜ್ಯಗಳು ಯಾವುದಾದರೂ ಇದ್ದಲ್ಲಿ, ಅವುಗಳ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ಅವುಗಳ ವಿಲೇವಾರಿಗಾಗಿ ಅವುಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆಯ ಖರ್ಚುಗಳನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಒಳಗೊಳ್ಳತಕ್ಕದ್ದು.

(2) ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ಹಾಗೂ ನಿರ್ಮಾಣ ಮತ್ತು ಕೆಡವುವ ತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳ ಉಲ್ಲಂಘನೆಗಾಗಿ ದಂಡವನ್ನು ವಿಧಿಸಲು ನಗರ ಪಾಲಿಕೆಯೂ ಸಹ ಅಧಿಕಾರವನ್ನು ಹೊಂದಿರುತ್ತದೆ

273. ಘನ ತ್ಯಾಜ್ಯದ ವಿಲೇವಾರಿಗಾಗಿ ಮತ್ತು ಅಂತಿಮ ವಿಲೇವಾರಿಗಾಗಿ ಸ್ಥಳಗಳನ್ನು ಗುರುತಿಸುವಿಕೆ.- ಆಯುಕ್ತನು ಸ್ವತಃ ತಾನೇ ಆಗಲೀ ಅಥವಾ ಇತರೆ ಯಾವುದೇ ಏಜೆನ್ಸಿಯ ಮೂಲಕವಾಗಲಿ, ನಗರ ಪಾಲಿಕೆಯ ಪ್ರದೇಶದ ಒಳಗೆ ಅಥವಾ ಹೊರಗಿನ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಹಾಗೂ ಸೂಕ್ತವೆಂದು ಪರಿಗಣಿಸಿದ ಅಂಥ ರೀತಿಯಲ್ಲಿ ಘನತ್ಯಾಜ್ಯಗಳನ್ನು ವಿಲೇವಾರಿಯಾಗುವಂತೆ ಮಾಡಬಹುದು.

ಪರಂತು, ರಾಜ್ಯ ಸರ್ಕಾರವು ಅನುಮತಿಸುವುದು ಸೂಕ್ತವಲ್ಲವೆಂದು ಭಾವಿಸಬಹುದಾದಂಥ ಯಾವುದೇ ರೀತಿಯಲ್ಲಿ ಘನತ್ಯಾಜ್ಯಗಳನ್ನು ಅಂತಿಮವಾಗಿ ವಿಲೇವಾರಿ ಮಾಡತಕ್ಕದ್ದಲ್ಲ.

274. ಘನ ತ್ಯಾಜ್ಯಗಳನ್ನು ಅವುಗಳ ಉತ್ಪತ್ತಿಯ ಮೂಲದಲ್ಲೆ ಸಂಗ್ರಹಿಸಿಡುವ ಸಂಬಂಧ ಆವರಣಗಳ ಖಾತಾದಾರರು ಮತ್ತು ಅಧಿಭೋಗದಾರರ ಕರ್ತವ್ಯ.- ಈ ಕೆಳಕಂಡವುಗಳು ನಗರ ಪಾಲಿಕೆ ಪ್ರದೇಶದಲ್ಲಿರುವ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳ ಖಾತಾದಾರರ ಹಾಗೂ ಅಧಿಭೋಗದಾರರ ಕರ್ತವ್ಯಗಳಾಗಿರತಕ್ಕದ್ದು,-

(1) ಆವರಣಗಳನ್ನು ನಿಯತವಾಗಿ ಗುಡಿಸಿ ಸ್ವಚ್ಛವಾಗಿಟ್ಟುಕೊಳ್ಳುವುದು;

(2) ಈ ಕೆಳಕಂಡವುಗಳ ಸಂಗ್ರಹಣೆಗಾಗಿ ಪ್ರತ್ಯೇಕವಾದ ಕಸದ ಬುಟ್ಟಿಗಳನ್ನು ಅಥವಾ ಕಸ ವಿಲೇವಾರಿ ಚೀಲಗಳನ್ನು ಒದಗಿಸುವುದು,-

(ಎ) ಸಾವಯವ ಮತ್ತು ಜೈವಿಕ ವಿಘಟನೀಯ (ಕೊಳೆಯಬಹುದಾದ) ತ್ಯಾಜ್ಯಗಳು,

(ಬಿ) ಮರುಬಳಕೆ ಮಾಡಬಹುದಾದ ಅಥವಾ ಜೈವಿಕ ವಿಘಟನೀಯವಲ್ಲದ (ಕೊಳೆಯದ) ತ್ಯಾಜ್ಯಗಳು,

(ಸಿ) ಮನೆಯಲ್ಲಿ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯಗಳು - ಈ ವಿವಿಧ ಬಗೆಯ ತ್ಯಾಜ್ಯಗಳು ಪರಸ್ಪರ ಒಂದಕ್ಕೊಂದು ಬೆರೆಯದಂತೆ ಖಾತ್ರಿ ಪಡಿಸಿಕೊಳ್ಳುವ ರೀತಿಯಲ್ಲಿ ಸಂಗ್ರಹಿಸುವುದು;

(ಡಿ) ಅಂತಹ ಕಸದ ಬುಟ್ಟಿಗಳನ್ನು ಸುಸ್ಥಿತಿಯಲ್ಲಿ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳುವುದು; ಮತ್ತು

(ಇ) ಕಸ, ಯಾವುದೇ ಹಾನಿಕಾರಕ ಅಥವಾ ಅಸಹ್ಯಕರ ವಸ್ತು, ಪಾಯಿಖಾನೆ, ಹೊಲಸು, ವ್ಯಾಪಾರಿ ತ್ಯಾಜ್ಯ ವಸ್ತುಗಳು, ಸಗಣಿ, ಮೂಳೆಗಳು, ಚಿತಾಭಸ್ಮ, ಸತ್ತಪ್ರಾಣಿಗಳ ಕಳೇಬರಗಳು, ಬಯೋಮೆಡಿಕಲ್ ತ್ಯಾಜ್ಯಗಳು ಹಾಗೂ ಇತರೆ ಕಲುಷಿತ ಮತ್ತು ಹೇಸಿಗೆ ಹುಟ್ಟಿಸುವ ವಸ್ತುಗಳೂ ಸೇರಿದಂತೆ ಅಂತಹ ಎಲ್ಲಾ

ತ್ಯಾಜ್ಯಗಳನ್ನು ಆಯಾಯ ಆವರಣ ಮತ್ತು ಕಟ್ಟಡಗಳಿಂದ ಸಂಗ್ರಹಿಸಿ ಆಯುಕ್ತನು ನೋಟೀಸಿನ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಮುದಾಯ ಕಸದ ತೊಟ್ಟಿ ಅಥವಾ ಕಸದ ಬುಟ್ಟಿಗಳಲ್ಲಿ ಹಾಕುವಂತೆ ಮಾಡುವುದು.

275. ವಿವಿಧ ಬಗೆಯ ತ್ಯಾಜ್ಯವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ನಗರ ಪಾಲಿಕೆಯ ಕರ್ತವ್ಯ. (1) ಬಯೋಮೆಡಿಕಲ್ ತ್ಯಾಜ್ಯ.- ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಲಾದ ನಿಯಮಗಳ ಉಪಬಂಧಗಳನ್ನು ಯಾವುದೇ ಏಜೆನ್ಸಿಯ ಮೂಲಕವಾಗಲೀ ಅಥವಾ ಸ್ವತಃ ತಾನಾಗಲೀ ಜಾರಿಗೊಳಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(2) ಇ-ತ್ಯಾಜ್ಯ.- ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಲಾದ ನಿಯಮಗಳ ಉಪಬಂಧಗಳನ್ನು ಯಾವುದೇ ಏಜೆನ್ಸಿಯ ಮೂಲಕವಾಗಲೀ ಅಥವಾ ಸ್ವತಃ ತಾನಾಗಲೀ ಜಾರಿಗೊಳಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(3) ಪ್ಲಾಸ್ಟಿಕ್ ತ್ಯಾಜ್ಯ.- ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಲಾದ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸುವುದು ನಗರ ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

276. ವಾಣಿಜ್ಯ ತ್ಯಾಜ್ಯ ಉತ್ಪಾದಕರ ಹೊಣೆಗಾರಿಕೆಗಳು.- (1) ಬೀದಿ ಬದಿಯ ವ್ಯಾಪಾರಿಗಳಂತಹ ತ್ಯಾಜ್ಯ ಉತ್ಪಾದಕರು ತಮ್ಮ ವ್ಯಾಪಾರ ಚಟುವಟಿಕೆಯ ಅವಧಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯಗಳನ್ನು ಅಂದರೆ ಆಹಾರ ತ್ಯಾಜ್ಯ, ಬಳಸಿ ಬಿಸಾಡಬಹುದಾದ ಪ್ಲೇಟ್‌ಗಳು, ಲೋಟಗಳು, ಕ್ಯಾನುಗಳು, ರ್ಯಾಪರ್ಸ್‌ಗಳು, ತೆಂಗಿನಚಿಪ್ಪುಗಳು, ಉಳಿದಿರುವ ಆಹಾರ ಪದಾರ್ಥಗಳು, ತರಕಾರಿಗಳು, ಹಣ್ಣುಗಳು ಮತ್ತು ಅಂತಹದೇ ರೀತಿಯ ವಸ್ತುಗಳನ್ನು ಬೇರೆಬೇರೆಯಾಗಿ ವಿಂಗಡಿಸತಕ್ಕದ್ದು.

(2) ಯಾವುದೇ ವಾಣಿಜ್ಯ ಚಟುವಟಿಕೆಯ ಪರಿಣಾಮವಾಗಿ, ಕೋಳಿ, ಮೀನು ಹಾಗೂ ಕಸಾಯಿ ತ್ಯಾಜ್ಯದ ಉತ್ಪಾದನೆಗೆ ಕಾರಣವಾಗುವ ಯಾವುವೇ ಆವರಣಗಳ ಪ್ರತಿಯೊಬ್ಬ ಅಧಿಭೋಗದಾರನು ಅಂತಹ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಮುಚ್ಚಿದ ಮತ್ತು ಶುಚಿಯಾದ ಸ್ಥಿತಿಯಲ್ಲಿ ಸಂಗ್ರಹಣೆ ಮಾಡತಕ್ಕದ್ದು ಮತ್ತು ಅಂಥ ತ್ಯಾಜ್ಯವನ್ನು ಬೇರೆ ಯಾವುದೇ ಬಗೆಯ ಘನ ತ್ಯಾಜ್ಯದೊಂದಿಗೆ ಬೆರೆಸತಕ್ಕದ್ದಲ್ಲ.

277. ವಾರ್ಡ್ ಸಮಿತಿಯ ಪ್ರಕಾರ್ಯಗಳು.- (1) ವಾರ್ಡ್ ಸಮಿತಿಯು, ಸಮುದಾಯ ಕಸದ ತೊಟ್ಟಿಗಳ ಮೂಲಕ ಕಸ ಸಂಗ್ರಹಣೆ, ಮನೆ-ಮನೆ ಕಸಸಂಗ್ರಹಣೆ, ಮತ್ತು ನಿಯತ ಪೂರ್ವ-ನಿಯೋಜಿತ ಸಮಯ ಮತ್ತು ವೇಳಾಪಟ್ಟಿಗಳಿಗನುಸಾರ ಕಸದ ಸಂಗ್ರಹಣೆಯಂತಹ ಯಾವುದೇ ವಿಧಾನಗಳ ಮೂಲಕ ಪೌರ ಘನತ್ಯಾಜ್ಯಗಳ ಸಂಗ್ರಹಣೆಗೆ ವ್ಯವಸ್ಥೆ ಮಾಡತಕ್ಕದ್ದು;

(2) ವಾರ್ಡ್ ಸಮಿತಿಯು, ಹೋಟೇಲುಗಳು, ರೆಸ್ಟೋರೆಂಟ್‌ಗಳು, ಕಚೇರಿ ಸಂಕೀರ್ಣಗಳು ಮತ್ತು ವಾಣಿಜ್ಯ ಪ್ರದೇಶಗಳನ್ನು ಒಳಗೊಂಡಂತೆ ಕೊಳಗೇರಿಗಳು ಹಾಗೂ ಅಕ್ರಮ ವಸತಿ ಪ್ರದೇಶಗಳು ಅಥವಾ ಇತರ ವಸತಿ ಸ್ಥಳಗಳಿಂದ ತ್ಯಾಜ್ಯಗಳ ಸಂಗ್ರಹಣೆಗೆ ಯೋಜನೆ ರೂಪಿಸತಕ್ಕದ್ದು;

(3) ವಾರ್ಡ್ ಸಮಿತಿಯು, ಕಸದ ದೈನಂದಿನ ವಿಲೇವಾರಿಗಾಗಿ (1) ಮತ್ತು (2)ನೇ ಖಂಡದ ಮೇರೆಗೆ ಹಾಗೆ ಸಂಗ್ರಹಿಸಲಾದ ಎಲ್ಲಾ ಘನತ್ಯಾಜ್ಯಗಳನ್ನು ನಿಯತ ಕಾಲಾಂತರಗಳಲ್ಲಿ ತೆಗೆದುಹಾಕಲು ಕ್ರಮ ವಹಿಸತಕ್ಕದ್ದು;

(4) ವಾರ್ಡ್ ಸಮಿತಿಯು ಜೈವಿಕ ವಿಘಟನೀಯ (ಕೊಳೆಯಬಹುದಾದ) ತ್ಯಾಜ್ಯಗಳನ್ನು ಕಸಾಯಿಖಾನೆಗಳು, ಮಾಂಸ ಮತ್ತು ಮೀನು ಮಾರುಕಟ್ಟೆಗಳು ಹಾಗೂ ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳಿಂದ ಪರಿಸರಾತ್ಮಕವಾಗಿ ಅಂಗೀಕಾರಾರ್ಹವಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.

(5) ವಾರ್ಡ್ ಸಮಿತಿಯು, ಆಯಾಯ ವಾರ್ಡ್‌ನ ವ್ಯಾಪ್ತಿಯೊಳಗೆ ಬರುವ ಉದ್ಯಾನವನಗಳು, ಮಾರುಕಟ್ಟೆಗಳು, ರಸ್ತೆಗಳು, ಬೀದಿಗಳು, ಉದ್ಯಾನಗಳು ಮತ್ತು ಅಂತಹುದೇ ಪ್ರದೇಶಗಳಂಥ ಸಾರ್ವಜನಿಕ ಸ್ಥಳಗಳಿಂದ ಘನತ್ಯಾಜ್ಯವನ್ನು ಸಂಗ್ರಹಿಸಲಾಗಿದೆಯೇ ಎಂಬುದನ್ನು ಕೂಡ ಖಾತ್ರಿಪಡಿಸಿಕೊಳ್ಳತಕ್ಕದ್ದು.

278. ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಗಳ ಕರ್ತವ್ಯಗಳು.- (1) ಈ ಅಧಿನಿಯಮದ ಮೇರೆಗೆ ಸ್ಥಾಪಿತಗೊಂಡ ವಾರ್ಡ್ ಸಮಿತಿಗಳು, ವಾರ್ಡಿನಲ್ಲಿ ಸಮರ್ಪಕ

ಘನತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯೀಕರಣ ಕಾರ್ಯಕ್ಕಾಗಿ ನಗರ ಪಾಲಿಕೆಯೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.

(2) ವಾರ್ಡ್ ಸಮಿತಿಗಳು ವಾರ್ಡಿನ ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು ಮತ್ತು ಅವು ನಗರ ಪಾಲಿಕೆಯ ವಾರ್ಡ್ ಮಟ್ಟದ ಕಿರು ಯೋಜನೆ ಹಾಗೂ ಇತರ ನೀತಿಗಳೊಂದಿಗೆ ಅದನ್ನು ಸಂಯೋಜಿಸುವಾಗ ವಾರ್ಡ್‌ನ ಅವಶ್ಯಕತೆ, ಆಯವ್ಯಯದ ಹಂಚಿಕೆಗಳು, ಮೂಲಸೌಕರ್ಯ ಅಗತ್ಯತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) ವಾರ್ಡ್ ಸಮಿತಿಯು, ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಬಗೆ ಮತ್ತು ಪ್ರಮಾಣ, ಚಾಲ್ತಿಯಲ್ಲಿರುವ ಸಂಸ್ಕರಣಾ ಸಾಮರ್ಥ್ಯ, ಹೆಚ್ಚುವರಿ ಸಂಸ್ಕರಣೆ ಮತ್ತು ಸೌಲಭ್ಯ ಯೋಜನೆಗಳ ಕುರಿತು ನಿರ್ಧರಿಸತಕ್ಕದ್ದು.

(4) ವಾರ್ಡ್ ಕ್ರಿಯಾ ಯೋಜನೆಯಲ್ಲಿ ಗುರುತಿಸಲಾದ ಅಗತ್ಯತೆಗಳು ಮತ್ತು ಗುರಿಗಳನ್ನು ವಾರ್ಡ್ ಸಮಿತಿಯು ನಿಯತವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು.

(5) ವಾರ್ಡ್ ಕ್ರಿಯಾ ಯೋಜನೆಗನುಸಾರವಾಗಿ, ವಾರ್ಡ್ ಸಮಿತಿಗಳು ಉತ್ಪಾದನೆಗೊಂಡ ತ್ಯಾಜ್ಯದ ಬಗೆ ಮತ್ತು ಪ್ರಮಾಣ, ತ್ಯಾಜ್ಯ ಸಂಗ್ರಹಣಾ ಮತ್ತು ತ್ಯಾಜ್ಯ ಸಂಸ್ಕರಣಾ ವಿಧಾನ ಹಾಗೂ ತಮ್ಮ ತಮ್ಮ ವಾರ್ಡ್‌ಗಳಲ್ಲಿ ಸಮರ್ಪಕ ತ್ಯಾಜ್ಯ ನಿರ್ವಹಣೆಗೆ ನೆರವಾಗಬಹುದಾದಂಥ ಇತರೆ ಸೌಲಭ್ಯಗಳ ಕುರಿತು ನಿರ್ಧರಿಸತಕ್ಕದ್ದು.

(6) ವಾರ್ಡ್ ಯೋಜನೆಯು, ವಿವಿಧ ಪ್ರವರ್ಗದ ತ್ಯಾಜ್ಯ, ಸಂಗ್ರಹಣಾ ಜಾಗಗಳು, ತ್ಯಾಜ್ಯ ಸಂಗ್ರಹಣೆಯ ವಾಹನಗಳು ಮತ್ತು ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016ನ್ನು ಅನುಷ್ಠಾನಗೊಳಿಸುವುದಕ್ಕಾಗಿ ಅಗತ್ಯಪಡಿಸಲಾದಂಥ ಇತರ ಮಾಹಿತಿಯನ್ನು ಸಹ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(7) ಅಂತಹ ಯೋಜನೆಯನ್ನು ಆಯುಕ್ತನ ಆಶ್ರಯದಲ್ಲಿ ನಿಯತವಾಗಿ ಮೇಲ್ವಿಚಾರಣೆ ಮತ್ತು ಪುನರಾವಲೋಕನ ಮಾಡತಕ್ಕದ್ದು ಹಾಗೂ ಆತನು ಸದರಿ ಪುನರಾವಲೋಕನವನ್ನು ಕೈಗೊಳ್ಳುವುದಕ್ಕೆ ತನ್ನ ಪರವಾಗಿ ಅಂಥ ಇತರ ಅಧಿಕಾರಿಗಳನ್ನು ನೇಮಿಸಬಹುದು.

(8) ಆಯುಕ್ತ ಅಥವಾ ಆತನ ಪರವಾಗಿ ನೇಮಕಗೊಂಡ ಅಧಿಕಾರಿಯು ತಪಾಸಣೆ ನಡೆಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಈ ಕುರಿತು ಒಂದು ವರದಿಯನ್ನು ಸಿದ್ಧಪಡಿಸತಕ್ಕದ್ದು, ಈ ವರದಿಯನ್ನು ನಗರಪಾಲಿಕೆಯು ಪುನರಾವಲೋಕನ ಮಾಡತಕ್ಕದ್ದು. ತಪಾಸಣೆಯ ಉದ್ದೇಶಕ್ಕಾಗಿ, ಅಧಿಕಾರಿಯು ವಾರ್ಡ್‌ನ ಕ್ರಿಯಾ ಯೋಜನೆಯನ್ನು ಪಾಲಿಸುವ ಉದ್ದೇಶಗಳಿಗಾಗಿ ಯಾವುದೇ ಸ್ಥಳಕ್ಕೆ, ಎಲ್ಲಾ ಯುಕ್ತ ಸಮಯಗಳಲ್ಲಿ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು.

(9) ವಾರ್ಡ್ ಸಮಿತಿಯು, ನಗರ ಪಾಲಿಕೆಯು ಕೈಗೊಂಡ ಕ್ರಮಗಳ ಮೇಲೆ ಚರ್ಚಿಸತಕ್ಕದ್ದು ಮತ್ತು ಅಂಥ ವರದಿಯಲ್ಲಿ ಮಾಡಲಾದ ಶಿಫಾರಸುಗಳನ್ನು ಪಾಲಿಸಲು ಬೇಕಾಗಿರುವಂಥ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(10) ವಾರ್ಡ್ ಸಮಿತಿಯು, ಸ್ವಚ್ಛತೆಯ ನಿರ್ವಹಣೆ, ಘನ ತ್ಯಾಜ್ಯದ ಸಂಗ್ರಹಣೆ ಕುರಿತು ಸಮೀಕ್ಷೆ ನಡೆಸಿ, ಆ ಬಗ್ಗೆ ನಿಯತ ವರದಿಗಳನ್ನು ನೀಡಲು ಮತ್ತು ತಮ್ಮ ವಾರ್ಡಿನಲ್ಲಿನ ಸ್ವಚ್ಛತಾ ಅಭಿಯಾನ ಅಥವಾ ಜಾಗೃತಿ ಆಂದೋಲನ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರತಿಯೊಂದು ವಾರ್ಡಿನಲ್ಲಿ ಸಂಬಂಧಪಟ್ಟ ನಾಗರೀಕರನ್ನು ಒಳಗೊಂಡಿರುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(11) ತ್ಯಾಜ್ಯ ನಿರ್ವಹಣಾ ಸಮಿತಿಯು ಸಿದ್ಧಪಡಿಸಿದ ವರದಿಗಳಲ್ಲಿ ಎತ್ತಿ ತೋರಿಸಲಾದ ಸಮಸ್ಯೆಗಳ ನಿವಾರಣೆಯ ಅನುಷ್ಠಾನವನ್ನು ಖಾತರಿಪಡಿಸುವ ಸಲುವಾಗಿ ಸದರಿ ಸಮಿತಿಯು ವಾರ್ಡ್ ಸಮಿತಿಯೊಂದಿಗೆ ನಿಯತಕಾಲಿಕ ಸಭೆಗಳನ್ನುನಡೆಸತಕ್ಕದ್ದು.

279. ವಾರ್ಡ್‌ಮಟ್ಟದ ಕಿರುಯೋಜನೆ (Micro plan).- (1) ನಗರ ಪಾಲಿಕೆಯು ವಾರ್ಡ್‌ನಲ್ಲಿನ ಪ್ರತಿಯೊಂದು ಬ್ಲಾಕ್‌ನಲ್ಲಿ ಘನತ್ಯಾಜ್ಯದ ನಿರ್ವಹಣೆಯ ಯೋಜನೆಯನ್ನು ಸೃಜಿಸತಕ್ಕದ್ದು ಮತ್ತು ವಾರ್ಡ್ ಸಮಿತಿಯ ಜೊತೆಯಾಗಿ ಈ ಯೋಜನೆಯ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳತಕ್ಕದ್ದು. ನಗರ ಪಾಲಿಕೆಯು ಸೂಕ್ತ ಎಂದು ಪರಿಗಣಿಸಬಹುದಾದಂತೆ ಘನತ್ಯಾಜ್ಯ ನಿರ್ವಹಣೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾಗಿರುವ ವಿವಿಧ ಪ್ರವರ್ಗದ ಘನತ್ಯಾಜ್ಯದ ಸಂಗ್ರಹಣಾ ಸಮಯ, ಸಂಗ್ರಹಣಾ ವಾಹನಗಳು ಮತ್ತು ಸ್ಥಳಗಳ ವಿವರಗಳು,

ಬ್ಲಾಕ್‌ವಾರು ವಾರ್ಡ್ ನಕ್ಷೆ, ಬೀದಿ ಗುಡಿಸುವಿಕೆಗೆ ರಸ್ತೆಗಳು/ಬೀದಿಗಳ ಮಾಹಿತಿ, ಸಿಬ್ಬಂದಿಯ ಸಂಖ್ಯೆ ಮತ್ತಿತರ ಮಾಹಿತಿಯನ್ನು ವಾರ್ಡ್ ಮಟ್ಟದ ಕಿರು ಯೋಜನೆಯು ಒಳಗೊಂಡಿರತಕ್ಕದ್ದು.

(2) ಘನತ್ಯಾಜ್ಯ ನಿರ್ವಹಣಾ ನಿಯಮಗಳು ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳ ಅನುಪಾಲನೆಯ ಬಗ್ಗೆ ಮೇಲ್ವಿಚಾರಣೆ ಮಾಡಲು ವಾರ್ಡ್ ಸಮಿತಿಯು ವಾರ್ಡ್‌ನ ವಿವಿಧ ಭಾಗಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ತನ್ನ ಪ್ರಾದೇಶಿಕ ಪರಿಮಿತಿಯೊಳಗಿನ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಯ ನಿಯತ ಪರಿಶೀಲನೆಗಳನ್ನು ನಡೆಸತಕ್ಕದ್ದು.

(3) ಆಯುಕ್ತನು, ವಾರ್ಡ್‌ಮಟ್ಟದ ಕಿರುಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮತ್ತು ಪುನರಾವಲೋಕನ ಮಾಡಿ, ನಗರ ಪಾಲಿಕೆಯ ಆಯುಕ್ತನಿಗೆ ಮುಂದಿನ ಕ್ರಮಕ್ಕಾಗಿ ವಾರ್ಡ್ ಕ್ರಿಯಾ ವರದಿಯನ್ನು ಮಾಸಿಕ ಆಧಾರದ ಮೇಲೆ ತಯಾರಿಸತಕ್ಕಂಥ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಬಹುದು.

(4) ಅಂಥ ಅಧಿಕಾರಿಯು,-

(ಎ) ನಗರ ಪಾಲಿಕೆಯು ತನಗೆ ವಹಿಸಿದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ; ಅಥವಾ

(ಬಿ) ಈ ಅಧಿನಿಯಮದ ಉಪಬಂಧಗಳ ಅನುಪಾಲನೆಯನ್ನು ನಿರ್ಧರಿಸುವ ಸಲುವಾಗಿ,

- ಎಲ್ಲಾ ಯುಕ್ತ ಸಮಯದಲ್ಲಿ ತಾನು ಅಗತ್ಯವೆಂದು ಪರಿಗಣಿಸಬಹುದಾದ ನೆರವಿನೊಂದಿಗೆ ಯಾವುದೇ ಸ್ಥಳವನ್ನು ಪ್ರವೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(5) ಆಯುಕ್ತನು ಮಾಧ್ಯಮ, ಸಂಕೇತಗಳು, ಜಾಹೀರಾತುಗಳು, ಕರಪತ್ರಗಳು, ಬಾನುಲಿ ಮತ್ತು ದೂರದರ್ಶನ ವಾಹಿನಿಗಳಲ್ಲಿ, ಸುದ್ದಿ ಪತ್ರಿಕೆಗಳಲ್ಲಿ, ಪ್ರಕಟಣೆಗಳನ್ನು ನೀಡುವುದರ ಮೂಲಕ ಮತ್ತು ಇತರೆ ಯಾವುದೇ ಸೂಕ್ತ ಸಾಧನಗಳ ಮೂಲಕ ಕಸದ ವಿಂಗಡಣೆ, ಮರುಬಳಕೆ, ಕಸ ಹರಡುವಿಕೆ, ಕಸದ ಕಿರಿಕಿರಿ, ಶಿಕ್ಷೆ ಮತ್ತು ದಂಡಗಳಿಗೆ ಸಂಬಂಧಿಸಿದಂತೆ ನಾಗರಿಕರ ಮತ್ತು ನಗರ ಪಾಲಿಕೆಯ ಕರ್ತವ್ಯಗಳ ಕುರಿತು ಎಲ್ಲಾ ನಾಗರಿಕರನ್ನು ಜಾಗೃತಗೊಳಿಸಲು ಕಸ ವಿಂಗಡಣೆಯ ರೀತಿಗಳನ್ನು ಪ್ರಕಟಿಸತಕ್ಕದ್ದು.

280. ತರಬೇತಿ ಮತ್ತು ಸಾರ್ವಜನಿಕ ಜಾಗೃತಿ.- ಆಯುಕ್ತನು, ತನ್ನ ಸಿಬ್ಬಂದಿ, ಅನೌಪಚಾರಿಕ ಘನತ್ಯಾಜ್ಯ ಆರಿಸುವವರು ಅಥವಾ ಸಂಗ್ರಹಕಾರರಿಗೆ ಘನತ್ಯಾಜ್ಯ ನಿರ್ವಹಣೆಯ ನಿಯಮಗಳು ಮತ್ತು ಈ ಅಧಿನಿಯಮದಡಿ ಹೇಳಿರುವ ರೀತಿಯಲ್ಲಿ ವಿಂಗಡಿಸಿದ ವಿಧಾನದಲ್ಲಿ ಘನತ್ಯಾಜ್ಯವನ್ನು ಸಂಗ್ರಹಣೆ ಮತ್ತು ಸಾಗಣೆ ಮಾಡುವ ಮತ್ತು ಅದನ್ನು ಸಂಸ್ಕರಣೆ ಮಾಡುವ ಕುರಿತು ಅರಿವು ಮೂಡಿಸಲು ತರಬೇತಿಯನ್ನು ಕೈಗೊಳ್ಳತಕ್ಕದ್ದು.

281. ನಗರ ಪಾಲಿಕೆಯಿಂದ ತ್ಯಾಜ್ಯವನ್ನು ಕಡಿಮೆಗೊಳಿಸುವಿಕೆ.- ಆಯುಕ್ತನು, ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವ ಮತ್ತು ಪ್ರೋತ್ಸಾಹಕಗಳನ್ನು ಕಲ್ಪಿಸುವುದರ ಮೂಲಕ ಅನಗತ್ಯ ಪ್ಯಾಕೇಜು ಪರಿಕರ, ಬಳಸಿ ಬಿಸಾಡಬಹುದಾದ ಉತ್ಪನ್ನಗಳನ್ನು ಒಳಗೊಂಡಿರುವ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಗೆ ತಡೆಯೊಡ್ಡುವ ಮೂಲಕ ಘನತ್ಯಾಜ್ಯದ ಉತ್ಪತ್ತಿಯನ್ನು ಕನಿಷ್ಠ ಪ್ರಮಾಣಕ್ಕೆ ತರಲು ಮತ್ತು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು.

282. ತ್ಯಾಜ್ಯ ನಿರ್ವಹಣೆಯ ಉಲ್ಲಂಘನೆಗಾಗಿ ದಂಡನೆಗಳು.- (1) ತ್ಯಾಜ್ಯ ನಿರ್ವಹಣೆ ನಿಯಮಗಳ ಅಥವಾ ಉಪವಿಧಿಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಅಥವಾ ಅವುಗಳನ್ನು ಪಾಲಿಸಲು ವಿಫಲನಾದ ಯಾರೇ ವ್ಯಕ್ತಿಯು ಅನ್ವಯವಾಗಬಹುದಾದಂಥ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ನಿರ್ಧರಿಸಲಾದಂತೆ ಎರಡು ಲಕ್ಷ ರೂಪಾಯಿಗಳಿಗೆ ಮೀರದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) ಆಯುಕ್ತನು, ಅಧಿನಿಯಮದ ಅನುಸಾರವಾಗಿ ಅಥವಾ ಈ ಉದ್ದೇಶಕ್ಕಾಗಿ ಮಾಡಲಾದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲರಾಗುವ ನೌಕರರ ಮೇಲೆ ದಂಡನೆಗಳನ್ನು ವಿಧಿಸುವುದು, ಶಿಸ್ತು ಕ್ರಮ ಜಾರಿಗೊಳಿಸುವುದೂ ಒಳಗೊಂಡಂತೆ ಸೂಕ್ತ ಕ್ರಮವನ್ನು ಸಹ ಕೈಗೊಳ್ಳತಕ್ಕದ್ದು.

283. ಸಾರ್ವಜನಿಕ ಸಮಾರಂಭಗಳ ಸಂದರ್ಭದಲ್ಲಿ ಉತ್ಪತ್ತಿಯಾದ ತ್ಯಾಜ್ಯ.- (1) ಯಾವುದೇ ಪರವಾನಿಗೆ ಪಡೆದ ಸ್ಥಳದಲ್ಲಿ ನೂರಕ್ಕಿಂತ ಹೆಚ್ಚು ಜನ ಸೇರುವ ಯಾವುದೇ

ಕಾರ್ಯಕ್ರಮ ಅಥವಾ ಸಮಾರಂಭವನ್ನು ಆಯೋಜಿಸುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಘನತ್ಯಾಜ್ಯ ವಿಂಗಡಣೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಸಮಾರಂಭವನ್ನು ಆಯೋಜಿಸಿದ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಲಾದ ಕಾನೂನಿನ ಅನುಸಾರವಾಗಿ, ಸಮಾರಂಭದ ಮುಕ್ತಾಯದ ನಂತರ, ಘನತ್ಯಾಜ್ಯವನ್ನು ವಿಂಗಡಿಸಿ, ಸಂಗ್ರಹಿಸಿ, ಸಂಸ್ಕರಿಸಿದ ಪ್ರದೇಶದ ಸ್ವಚ್ಛತೆಯನ್ನೂ ಸಹ ಖಚಿತಪಡಿಸಿಕೊಳ್ಳತಕ್ಕದ್ದು.

(3) ಸಾರ್ವಜನಿಕ ಸಮಾರಂಭಗಳ ಸಂದರ್ಭದಲ್ಲಿ ಉತ್ಪತ್ತಿಯಾದ ತ್ಯಾಜ್ಯದ ನಿರ್ವಹಣಾ ಕಾರ್ಯ ವಿಧಾನವನ್ನು ಅಧಿನಿಯಮದಡಿಯಲ್ಲಿನ ಉಪವಿಧಿಗಳ ಮೇರೆಗೆ ನಿಯಮಿಸತಕ್ಕದ್ದು.

ಅಧ್ಯಾಯ-XXI
ಉಪದ್ರವ

284. ಉಪದ್ರವ ನಿಷೇಧ.- (1) ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಉಪದ್ರವವನ್ನು ಮಾಡತಕ್ಕದ್ದಲ್ಲ, ಅಥವಾ

(ಎ) ಯಾವುದೇ ಕಟ್ಟಡ, ಸ್ಮಾರಕ, ಕಂಬ, ಗೋಡೆ, ಬೇಲಿ, ಮರದ ಮೇಲೆ ಅಥವಾ ಇತರ ಯಾವುದೇ ಸಾರ್ವಜನಿಕ ಜಾಗದಲ್ಲಿ, ಯಾವುದೇ ಕರಪತ್ರ, ನೋಟೀಸು, ಅಥವಾ ಇತರೆ ದಸ್ತಾವೇಜುಗಳನ್ನು ಅನಧಿಕೃತವಾಗಿ ಅಂಟಿಸತಕ್ಕದ್ದಲ್ಲ. ಅಥವಾ

(ಬಿ) ಕಟ್ಟಡ, ಸ್ಮಾರಕ, ಕಂಬ, ಗೋಡೆ, ಬೇಲಿ, ಮರ ಅಥವಾ ಯಾವುದೇ ಸಾರ್ವಜನಿಕ ಸ್ಥಳವನ್ನು, ಅನಧಿಕೃತವಾಗಿ ವಿರೂಪಗೊಳಿಸತಕ್ಕದ್ದಲ್ಲ ಅಥವಾ ಅವುಗಳ ಮೇಲೆ ಬರೆಯತಕ್ಕದ್ದಲ್ಲ ಅಥವಾ ಬೇರೆ ಏನಾದರೂ ಗುರುತು ಮಾಡತಕ್ಕದ್ದಲ್ಲ.

(ಸಿ) ಆಯುಕ್ತನು ಈ ಬಗ್ಗೆ ನೋಟೀಸಿನ ಮೂಲಕ ಮಾಡಿದ ಯಾವುದೇ ನಿಷೇಧವನ್ನು ಉಲ್ಲಂಘಿಸಿ, ಯಾವುದೇ ಮಾರ್ಗದ ಉದ್ದಕ್ಕೂ ಕಸ, ಹೊಲಸು ಅಥವಾ ಇತರ ಮಾಲಿನ್ಯಕಾರಕ ಮತ್ತು ಅಸಹ್ಯಕರ ಪದಾರ್ಥಗಳನ್ನು ಸಾಗಿಸತಕ್ಕದ್ದಲ್ಲ, ಅಥವಾ

(ಡಿ) ಯಾವುದೇ ಶವವನ್ನು ಆ ಉದ್ದೇಶಕ್ಕಾಗಿ ಪರವಾನಿಗೆ ಇಲ್ಲದೇ ಇರುವಂತಹ ಸ್ಥಳಗಳಲ್ಲಿ ಹೂಳತಕ್ಕದ್ದಲ್ಲ ಅಥವಾ ಸುಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ, ಅಥವಾ

(ಇ) ನೆರೆಹೊರೆಯಲ್ಲಿ ಹಾದುಹೋಗುವ, ವಾಸಮಾಡುತ್ತಿರುವ ಅಥವಾ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಅಪಾಯವುಂಟಾಗುವಂತೆ ಅಥವಾ ಅಪಾಯವುಂಟಾಗುವ ಸಂಭವವಿರುವಂತೆ ಕಲ್ಲು ಗಣಿಗಾರಿಕೆ ನಡೆಸತಕ್ಕದ್ದಲ್ಲ, ಸ್ಫೋಟಿಸತಕ್ಕದ್ದಲ್ಲ, ಮರವನ್ನು ಕತ್ತರಿಸತಕ್ಕದ್ದಲ್ಲ ಅಥವಾ ಕಟ್ಟಡ ಕಾರ್ಯಾಚರಣೆಗಳನ್ನು ನಡೆಸತಕ್ಕದ್ದಲ್ಲ;

(ಎಫ್) ಶಬ್ದಮಾಲಿನ್ಯ ನಿಯಂತ್ರಣ ಆದೇಶವೇನಾದರೂ ಇದ್ದರೆ, ಅದನ್ನು ಉಲ್ಲಂಘಿಸಿ, ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ತರತಕ್ಕದ್ದಲ್ಲ; ಅಥವಾ

(ಜಿ) ವಾಯುಮಾಲಿನ್ಯ ನಿಯಂತ್ರಣ ಆದೇಶವೇನಾದರೂ ಇದ್ದರೆ, ಅದನ್ನು ಉಲ್ಲಂಘಿಸಿ, ವಾಯು ಮಾಲಿನ್ಯವನ್ನುಂಟು ಮಾಡತಕ್ಕದ್ದಲ್ಲ; ಅಥವಾ

(ಎಚ್) ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ವಾಹನ ಅಥವಾ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯುಂಟುಮಾಡತಕ್ಕದ್ದಲ್ಲ.

(2) ಆಯುಕ್ತನು ಅಥವಾ ಈ ಬಗ್ಗೆ ಅಧಿಕೃತಗೊಂಡ ಅಧಿಕಾರಿಯು, ಯಾವುದೇ ಭೂಮಿ ಅಥವಾ ಕಟ್ಟಡದಲ್ಲಿ (1)ನೇ ಉಪಪ್ರಕರಣದಲ್ಲಿ ತಿಳಿಸಲಾದಂಥ ಉಪದ್ರವ ಇದೆ ಎಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತ ನೋಟೀಸಿನ ಮೂಲಕ, ಯಾರ ಕೃತ್ಯ, ತಪ್ಪು ಅಥವಾ ಮೌನ ಸಮ್ಮತಿಯಿಂದ ಉಪದ್ರವ ಸಂಭವಿಸಿತೋ ಅಥವಾ ಮುಂದುವರಿಯುತ್ತಿದೆಯೋ ಆ ವ್ಯಕ್ತಿಗೆ ಅಥವಾ ಅಂಥ ಭೂಮಿ ಅಥವಾ ಕಟ್ಟಡದ ಎಲ್ಲಾ ಖಾತಾದಾರರಿಗೆ, ಬಾಡಿಗೆದಾರರಿಗೆ ಅಥವಾ ಅನುಭೋಗದಾರರಿಗೆ ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವಿಕೆ ಪ್ರತಿಬಂಧಕ) ಅಧಿನಿಯಮ, 1981 (1982ರ ಕರ್ನಾಟಕ ಅಧಿನಿಯಮ 35)ರ ಉಪಬಂಧಗಳಿಗನುಸಾರ, ಅನ್ವಯವಾಗುವೆಡೆಗಳಲ್ಲಿ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ, ಅಂಥ ರೀತಿಯಲ್ಲಿ

ಮತ್ತು ಅಂಥ ಅವಧಿಯೊಳಗೆ ಮಾಡಿರುವ ಉಪದ್ರವವನ್ನು ತೆಗೆದುಹಾಕುವಂತೆ ಅಥವಾ ಹೋಗಲಾಡಿಸುವಂತೆ ಅಗತ್ಯಪಡಿಸತಕ್ಕದ್ದು.

(3) ಆಯುಕ್ತನು ಅಥವಾ ಈ ಬಗ್ಗೆ ಅಧಿಕೃತಗೊಂಡ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಜಮೀನು ಅಥವಾ ಕಟ್ಟಡದ ಮೇಲೆ (1)ನೇ ಉಪ-ಪ್ರಕರಣದ ಅನುಸಾರ ಮುಂದುವರಿಸಿರುವ ಯಾವುದೇ ಉಪದ್ರವವನ್ನು ಕೂಡಲೇ ತೆಗೆದುಹಾಕಬೇಕೆಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವಿಕೆ ಪ್ರತಿಬಂಧಕ) ಅಧಿನಿಯಮ, 1981ರ (1982ರ ಕರ್ನಾಟಕ ಅಧಿನಿಯಮ 35) ಉಪಬಂಧಕ್ಕೆ ಅನುಸಾರವಾಗಿ, ಅನ್ವಯವಾಗುವ ಕಡೆಗಳಲ್ಲಿ ಕೂಡಲೇ ಅಂಥ ಉಪದ್ರವವನ್ನು ತೆಗೆದುಹಾಕುವಂತೆ ಮಾಡಬಹುದು.

(4) ಈ ಪ್ರಕರಣದ ಅಡಿಯಲ್ಲಿನ ಯಾವುದೇ ಆದೇಶವನ್ನು ಪಾಲಿಸಲು ವಿಫಲನಾಗುವಂಥ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವಿಕೆಯ ಪ್ರತಿಬಂಧಕ) ಅಧಿನಿಯಮ, 1981ರ (1982ರ ಕರ್ನಾಟಕ ಅಧಿನಿಯಮ 35) ಉಪಬಂಧವು ನಿಯಮಿಸಿರುವಂತೆ ಅಥವಾ ಅವುಗಳಿಗನುಸಾರವಾಗಿ ಅನ್ವಯವಾಗುವ ಕಡೆಗಳಲ್ಲಿ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು.

285. ಮಾಲಿನ್ಯ ನಿಯಂತ್ರಣ ಮತ್ತು ಮಾಲಿನ್ಯಕಾರಕನು ದಂಡ ಪಾವತಿಸುವುದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ವಾಯು, ಜಲ ಅಥವಾ ಶಬ್ದ ಮಾಲಿನ್ಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ಹಾಗೂ ಆ ಬಗ್ಗೆ ರಾಜ್ಯ ಸರ್ಕಾರವು ಹೊರಡಿಸಿರುವ ಯಾವುದೇ ಅಧಿಸೂಚನೆಗನುಸಾರವಾಗಿ ಪಾಲಿಕೆಯು ಅಂಥ ಕಾನೂನನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಬಹುದು.

(2) ನಗರ ಪಾಲಿಕೆಯು, ವಿನಿಯಮದ ಮೂಲಕ ಈ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಯಾವುದೇ ರೀತಿಯ ಮಾಲಿನ್ಯವನ್ನುಂಟುಮಾಡುವುದಕ್ಕಾಗಿ ನೇರವಾಗಿ ಜವಾಬ್ದಾರರಾದಂಥ ವ್ಯಕ್ತಿಗಳಿಂದ ಶುಲ್ಕಗಳನ್ನು ವಸೂಲಿ ಮಾಡುವುದಕ್ಕಾಗಿ ಮತ್ತು ಅವರ ಮೇಲೆ ದಂಡ ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು.

286. ಅಪಾಯಕಾರಿ ರಚನೆಗಳ ವಿಷಯದಲ್ಲಿ ಮುನ್ನೆಚ್ಚರಿಕೆಗಳು.- (1) ಯಾವುದೇ ರಚನೆಯು ಹಾಳಾಗುವ ಸ್ಥಿತಿಯಲ್ಲಿದೆ ಎಂದು ಅಥವಾ ಹತ್ತಿರ ಹಾದುಹೋಗುವವರಿಗೆ ಅಥವಾ ನೆರೆಹೊರೆಯ ರಚನೆಗಳ ಅಧಿಭೋಗದಾರರಿಗೆ ಅಪಾಯಕಾರಿಯಾಗಿದೆಯೆಂದು ಆಯುಕ್ತನು ಭಾವಿಸಿದರೆ, ಆಯುಕ್ತನು ನೋಟೀಸಿನ ಮೂಲಕ ಖಾತೆದಾರನನ್ನು ಅಥವಾ ಅಧಿಭೋಗದಾರನನ್ನು ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟುವ ಹಾಗೆ ಅಂಥ ರಚನೆಗೆ ಬೇಲಿ ಹಾಕಲು, ಅದನ್ನು ಕೆಡವಿ ಹಾಕಲು, ಭದ್ರ ಪಡಿಸಲು ಅಥವಾ ದುರಸ್ತಿ ಮಾಡಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ, ಆಯುಕ್ತನು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ತಾನಾಗಿಯೇ ಅಂಥ ರಚನೆಗೆ ಬೇಲಿ ಹಾಕಿಸಬಹುದು, ಅದನ್ನು ಕೆಡವಿ ಹಾಕಿಸಬಹುದು, ಭದ್ರಪಡಿಸಬಹುದು ಅಥವಾ ದುರಸ್ತಿ ಮಾಡಿಸಬಹುದು ಅಥವಾ ಅಪಾಯವನ್ನು ತಡೆಗಟ್ಟುವುದಕ್ಕೆ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕಿಸಬಹುದು ಅಥವಾ ತಾನು ಸೂಕ್ತವೆಂದು ಯೋಚಿಸುವಂಥ ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಖಾತಾದಾರರಿಂದ ಅಥವಾ ಅಧಿಭೋಗದಾರನಿಂದ ಭೂ ಕಂದಾಯ ಬಾಕಿಗಳಂತೆ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

(3) ಸದರಿ ರಚನೆಯು, ಅದರಲ್ಲಿ ವಾಸಿಸುವವರಿಗೆ ಸನ್ನಿಹಿತ ಅಪಾಯ ಉಂಟುಮಾಡುವಂಥದ್ದೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಆಯುಕ್ತನು ಅದರಲ್ಲಿ ವಾಸಿಸುವವರು ಕೂಡಲೇ ಅದನ್ನು ಖಾಲಿ ಮಾಡಲು ಆದೇಶಿಸತಕ್ಕದ್ದು ಮತ್ತು ಆದೇಶ ಪಾಲನೆ ಮಾಡದಿರುವ ಯಾರೇ ವ್ಯಕ್ತಿಗಳನ್ನು ಯಾರೇ ಪೊಲೀಸು ಅಧಿಕಾರಿಯು ಹೊರಹಾಕಬಹುದು.

287. ಅಪಾಯಕಾರಿ ಮರಗಳ ವಿಷಯದಲ್ಲಿ ಮುನ್ನೆಚ್ಚರಿಕೆಗಳು.- (1) ಆಯುಕ್ತನು, ಯಾವುದೇ ಮರವು ಅಥವಾ ಮರದ ಯಾವುದೇ ಕೊಂಬೆಯು ಅಥವಾ ಯಾವುದೇ ಮರದ

ಹಣ್ಣು ಬೀಳುವ ಸಂಭವವಿದೆ ಎಂದು ಮತ್ತು ಅದರಿಂದಾಗಿ ಯಾರೇ ವ್ಯಕ್ತಿಗೆ ಅಥವಾ ಯಾವುದೇ ರಚನೆಗೆ ಅಪಾಯವುಂಟು ಮಾಡುವ ಸಂಭವವಿದೆಯೆಂದು ಭಾವಿಸಿದರೆ, ಆಯುಕ್ತನು ನೋಟೀಸಿನ ಮೂಲಕ ಸದರಿ ಮರದ ಖಾತಾದಾರನನ್ನು ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟುವ ಹಾಗೆ ಅದನ್ನು ಭದ್ರಪಡಿಸಲು, ಸಮರಲು, ಕತ್ತರಿಸಿ ಹಾಕಲು ಅಥವಾ ಹಣ್ಣನ್ನು ಕೀಳಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮಕ್ಕೆಗೊಳ್ಳುವುದು ಅವಶ್ಯವಾದರೆ ಆಯುಕ್ತನು ಅಂಥ ನೋಟೀಸನ್ನು ಕೊಡುವ ಮುಂಚೆ ಅಥವಾ ಅಂಥ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ತಾನಾಗಿಯೇ ಸದರಿ ಮರವನ್ನು ಭದ್ರಪಡಿಸಬಹುದು, ಸಮರಿಹಾಕಿಸಬಹುದು ಅಥವಾ ಕತ್ತರಿಸಿಹಾಕಿಸಬಹುದು ಅಥವಾ ಅದರ ಹಣ್ಣನ್ನು ಕೀಳಿಸಬಹುದು ಅಥವಾ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕಿಸಬಹುದು ಅಥವಾ ಅಪಾಯವನ್ನು ತಪ್ಪಿಸಲು ತಾನು ಸೂಕ್ತವೆಂದು ಭಾವಿಸಸಬಹುದಾದಂಥ ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಮರದ ಖಾತಾದಾರನಿಂದ ಭೂ ಕಂದಾಯ ಬಾಕಿಗಳಂತೆ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

288. ಅಪಾಯಕಾರಿ ಕೆರೆಗಳು, ಬಾವಿಗಳು, ಗುಂಡಿಗಳು ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆಗಳು.- (1) ಆಯುಕ್ತನು, ಯಾವುದೇ ಕೆರೆ, ಕೊಳ, ಬಾವಿ, ಗುಂಡಿ, ತೊರೆ, ಒಡ್ಡು, ದಂಡೆ ಅಥವಾ ಇತರ ಸ್ಥಳವು ಸಾಕಷ್ಟು ದುರಸ್ತಿ, ಸಂರಕ್ಷಣೆ ಅಥವಾ ಸುತ್ತುಗಟ್ಟು ಇಲ್ಲದಿರುವುದಕ್ಕಾಗಿ ಹಾದುಹೋಗುವವರಿಗೆ ಅಥವಾ ನೆರೆಹೊರೆಯಲ್ಲಿ ವಾಸಿಸುತ್ತಿರುವ ಜನರಿಗೆ ಅಪಾಯಕಾರಿಯಾಗಿರುವುದಾಗಿ ಭಾವಿಸಿದರೆ, ಮುಖ್ಯ ಆಯುಕ್ತನು, ಅದರಿಂದ ಯಾವುದೇ ಅಪಾಯವನ್ನು ತಡೆಗಟ್ಟುವ ಹಾಗೆ ಅದನ್ನು ಮುಚ್ಚಿಸಲು, ತೆಗೆದುಹಾಕಿಸಲು, ದುರಸ್ತಿ ಮಾಡಿಸಲು, ಸಂರಕ್ಷಿಸಲು ಅಥವಾ ಸುತ್ತುಗಟ್ಟು ನಿರ್ಮಿಸಲು ಖಾತಾದಾರನನ್ನು ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ ಆಯುಕ್ತನು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅಪಾಯವನ್ನು ತಡೆಗಟ್ಟುವುದಕ್ಕೆ ತಾನು ಸೂಕ್ತವೆಂದು ಭಾವಿಸುವಂಥ ತಾತ್ಕಾಲಿಕ ಕ್ರಮಗಳನ್ನು ತಾನಾಗಿಯೇ ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಭೂ ಕಂದಾಯ ಬಾಕಿಗಳಂತೆ ಖಾತೆದಾರನಿಂದ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

289. ಬೆಂಕಿಯ ವಿರುದ್ಧ ಮುನ್ನೆಚ್ಚರಿಕೆ.- (1) ಆಯುಕ್ತನು, ಭಾಗಶಃ ಅಥವಾ ಸಂಪೂರ್ಣವಾಗಿ ಯಾವುದೇ ಹೊರ ಛಾವಣಿಯಿಂದ ಮಾಡಲ್ಪಟ್ಟ ಅಥವಾ ಹೊಂದಿರುವ ಯಾವುದೇ ರಚನೆಯ ಅಥವಾ ಬೂತಿನ ಅಥವಾ ಟೆಂಟಿನ, ವರಾಂಡದ, ಪೆಂಡಾಲಿನ, ಬೇಲಿಯ, ಅಥವಾ ಭಾಗಶಃ ಅಥವಾ ಸಂಪೂರ್ಣವಾಗಿ ಬಟ್ಟೆಯಿಂದ ಅಥವಾ ಹುಲ್ಲಿನಿಂದ, ಎಲೆಗಳಿಂದ ಅಥವಾ ಚಾಪೆಗಳಿಂದ ಅಥವಾ ಇತರ ದಹನಾನುಕೂಲಿ ಸಾಮಗ್ರಿಗಳಿಂದ ಮಾಡಲ್ಪಟ್ಟ ಗೋಡೆಯ ಖಾತಾದಾರನನ್ನು, ಅಂಥ ರಚನೆಯನ್ನು, ಬೂತನ್ನು, ಟೆಂಟನ್ನು, ಚಾವಣಿಯನ್ನು, ವರಾಂಡವನ್ನು, ಪೆಂಡಾಲನ್ನು, ಬೇಲಿಯನ್ನು ಅಥವಾ ಗೋಡೆಯನ್ನು ತೆಗೆದುಹಾಕುವಂತೆ ಅಥವಾ ಬದಲಾಯಿಸುವಂತೆ ಅಗತ್ಯಪಡಿಸಬಹುದು ಅಥವಾ ಬೆಂಕಿಯಿಂದ ಅಪಾಯವನ್ನು ತಪ್ಪಿಸಲು ಆಯುಕ್ತನು ಅವಶ್ಯವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಅವುಗಳನ್ನು ಉಳಿಸಿಕೊಳ್ಳಲು ಅವನಿಗೆ ಅನುಮತಿಯನ್ನು ಕೊಡಬಹುದು.

(2) ಆಯುಕ್ತನು, ಮರಮುಟ್ಟು, ಸೌದೆ ಅಥವಾ ಇತರ ದಹನ ವಸ್ತುಗಳನ್ನು ಖಾಸಗಿ ಬಳಕೆಗಾಗಿ ದಾಸ್ತಾನು ಮಾಡಲು ಯಾವುದೇ ಸ್ಥಳವನ್ನು ಬಳಸುತ್ತಿರುವ ಯಾರೇ ವ್ಯಕ್ತಿಯನ್ನು ಬೆಂಕಿಯಿಂದ ಅಪಾಯವಾಗದಂತೆ ರಕ್ಷಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವಂತೆ ನೋಟೀಸು ಮೂಲಕ ಅಗತ್ಯಪಡಿಸಬಹುದು.

(3) ಬೆಂಕಿ ಅವಘಡದ ಸಂದರ್ಭದಲ್ಲಿ ಯಾವುದೇ ರಚನೆಯಿಂದ ಸುರಕ್ಷಿತವಾಗಿ ಹೊರ ಹೋಗಲು ಕಲ್ಪಿಸಿರುವ ಸಾಧನಗಳು ಸಾಕಷ್ಟಿಲ್ಲವೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಅವನು ಸ್ಥಾಯೀ ಸಮಿತಿಯ ಮಂಜೂರಾತಿಯೊಂದಿಗೆ ನೋಟೀಸಿನ ಮೂಲಕ ರಚನೆಯ ಖಾತಾದಾರನನ್ನು ಅಥವಾ ಅಧಿಭೋಗದಾರನನ್ನು ಅವನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಯಾವುದೇ ಮೆಟ್ಟಿಲ ಸಾಲುಗಳನ್ನು ಬದಲಾಯಿಸುವಂತೆ ಅಥವಾ ಪುನರ್

ನಿರ್ಮಿಸುವಂತೆ ಅಥವಾ ಅಂಥ ಹೆಚ್ಚಿನ ಅಥವಾ ತುರ್ತು ಮೆಟ್ಟಿಲ ಸಾಲುಗಳನ್ನು ಕಲ್ಪಿಸುವಂತೆ ಅಗತ್ಯಪಡಿಸಬಹುದು; ಮತ್ತು ಸಾರ್ವಜನಿಕ ಮನೋರಂಜನೆಯ ಉದ್ದೇಶಗಳಿಗಾಗಿ ಯಾವುದೇ ರಚನೆಯನ್ನು, ಬೂತನ್ನು ಅಥವಾ ಟೆಂಟನ್ನು ಬಳಸುವಾಗ ಮೇಲೆ ಹೇಳಿದಂತೆ ಮಂಜೂರಾತಿಗೆ ಒಳಪಟ್ಟು ಅವರು, ಪ್ರೇಕ್ಷಕರು ಸುರಕ್ಷಿತವಾಗಿ ಹೊರಗೆ ಹೋಗುವುದಕ್ಕೆ ಸಾಕಷ್ಟು ಸಾಧನಗಳನ್ನು ಇಟ್ಟಿರುವ ಮತ್ತು ನಿರ್ವಹಿಸಿರುವ, ಸ್ಪಷ್ಟವಾಗಿ ತೋರಿಸಿರುವ ಸಾಕಷ್ಟು ಸಂಖ್ಯೆಯ ಮಾರ್ಗಗಳನ್ನು ಒದಗಿಸತಕ್ಕದ್ದೆಂದು, ಹೊರಗೆ ಹೋಗುವ ಮಾರ್ಗಗಳಿಗೆ ಮುಕ್ತ ಪ್ರವೇಶಕ್ಕೆ ಅಡಚಣೆ ಉಂಟಾಗದ ಹಾಗೆ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮತ್ತು ಹೊರ ಹೋಗುವ ದಾರಿಗಳಿಗೆ ಸಂಪರ್ಕವಿರುವ ನಡುದಾರಿಗಳನ್ನು, ದಾರಿಗಳನ್ನು ಮತ್ತು ಮೆಟ್ಟಿಲ ಸಾಲುಗಳನ್ನು ಸಾರ್ವಜನಿಕರು ಇರುವಾಗ ಅಡಚಣೆಗಳಿಂದ ಮುಕ್ತವಾಗಿ ಇಟ್ಟಿರತಕ್ಕದ್ದೆಂದು ಅಗತ್ಯಪಡಿಸಬಹುದು.

290. ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದುಹಾಕುವುದು.- ಆಯುಕ್ತನು**,** ನೋಟೀಸಿನ ಮೂಲಕ (ಹೊಲಸು ಅಥವಾ ಅನಾರೋಗ್ಯಕರ ಸ್ಥಿತಿಯಲ್ಲಿರುವುದೆಂದು ಅಥವಾ ಆರೋಗ್ಯಕ್ಕೆ ಹಾನಿಕರವಾದ ಅಥವಾ ನೆರೆಹೊರೆಗೆ ಅಸಹ್ಯಕರವಾದ ಯಾವುದೇ ದಟ್ಟ ಅಥವಾ ಹಾನಿಕರ ಸಸ್ಯಗಳು, ಮರಗಳು ಅಥವಾ ಗಿಡಗಂಟೆಗಳು ಮಿತಿಮೀರಿ ಬೆಳೆದಿರುವುದಾಗಿ ಅವರಿಗೆ ಕಂಡುಬರುವ) ಯಾವುದೇ ಕಟ್ಟಡದ ಅಥವಾ ಭೂಮಿಯ ಖಾತೆದಾರ ಅಥವಾ ಅಧಿಭೋಗದಾರನನ್ನು ಆ ಕಟ್ಟಡವನ್ನು ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು, ತೆರವುಗೊಳಿಸಲು ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿಡಲು ಅಥವಾ ಅಂಥ ಸಸ್ಯಗಳು, ಮರಗಳು ಅಥವಾ ಗಿಡ ಗಂಟೆಗಳನ್ನು ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಅವಧಿಯೊಳಗಾಗಿ ಮತ್ತು ಅಂಥ ರೀತಿಯಲ್ಲಿ ಕತ್ತರಿಸಿ ತೆಗೆದುಹಾಕಲು ಅಗತ್ಯಪಡಿಸಬಹುದು.

291. ಧೂಳು, ಹೊಗೆ, ಇತ್ಯಾದಿಗಳಿಂದ ಆಗುವ ಉಪದ್ರವವನ್ನು ನಿವಾರಿಸುವುದು.- ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಕಲ್ಲಿದ್ದಲು, ಇದ್ದಲು, ಬೂದಿ, ಕಿಟ್ಟ, ಗೋಣಿಚೀಲಗಳು, ಉಣ್ಣೆ, ಹತ್ತಿ ಅಥವಾ ಯಾವುದೇ ಸಾಮಗ್ರಿಯನ್ನು ದಾಸ್ತಾನು ಮಾಡುವುದು, ರಾಶಿ ಹಾಕುವುದು ಅಥವಾ ಸಂಗ್ರಹಿಸುವುದರಿಂದಾಗಿ ಅಥವಾ ಅಂಥ ಕಲ್ಲಿದ್ದಲು, ಇದ್ದಲು, ಬೂದಿ, ಕಿಟ್ಟ ಅಥವಾ ಸಾಮಗ್ರಿಯನ್ನು ಸ್ಥಳಾಂತರಿಸುವುದು, ಒಡೆಯುವುದು, ಕತ್ತರಿಸುವುದು, ಅಥವಾ ಸುಡುವುದರಿಂದಾಗಿ ಅಥವಾ ಅದನ್ನು ಯಾವುದೇ ಸಂಸ್ಕರಣೆಗೆ ಒಳಪಡಿಸುವುದರಿಂದಾಗಿ, ಧೂಳು, ತೇಲುವ ಕಣಗಳು, ಹೊಗೆ, ದುರ್ವಾಸನೆ ಅಥವಾ ಶಬ್ದ ಹೊರಹೊಮ್ಮುವುದರಿಂದ ಅಥವಾ ಅನ್ಯಥಾ ಅಂಥ ಕಟ್ಟಡದ ಅಥವಾ ಭೂಮಿಯ ನೆರೆಹೊರೆಯಲ್ಲಿನ ನಿವಾಸಿಗಳಿಗೆ ಉಪದ್ರವವಾಗುತ್ತದೆ ಅಥವಾ ಉಪದ್ರವವಾಗುವ ಸಂಭವವಿದೆಯೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಅವನು, ಅಂಥ ಕಟ್ಟಡ ಅಥವಾ ಭೂಮಿಯ ಖಾತೆದಾರನನ್ನು ಅಥವಾ ಅಧಿಭೋಗದಾರನನ್ನು ಅಂಥ ಉಪದ್ರವವನ್ನು ನಿವಾರಿಸುವುದಕ್ಕಾಗಿ ನೋಟೀಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ರಮ ಕೈಗೊಳ್ಳಲು ಅಗತ್ಯಪಡಿಸಬಹುದು.

292. ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಸಮರುವುದು.- ಆಯುಕ್ತನು, ಸಾರ್ವಜನಿಕ ಬೀದಿಗೆ ಸಮೀಪವಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಖಾತಾದಾರನನ್ನು ಅಥವಾ ಅಧಿಭೋಗದಾರರನ್ನು-

(ಎ) ಆಯುಕ್ತನಿಗೆ ಸಮಾಧಾನವಾಗುವಂತೆ ಅದಕ್ಕೆ ಬೇಲಿ ಹಾಕಲು; ಅಥವಾ

(ಬಿ) ಸದರಿ ಬೀದಿಯ ಅಂಚಿನಲ್ಲಿರುವ ಯಾವುದೇ ಹಸಿರು ಬೇಲಿಗಳು, ಪಕ್ಕದಲ್ಲಿರುವ ರಸ್ತೆಯ ಮಟ್ಟದಿಂದ ಆಯುಕ್ತನು ನಿರ್ಧರಿಸಬಹುದಾದಂಥ ಎತ್ತರವನ್ನು ಮೀರದ ಹಾಗೆ ಅವುಗಳನ್ನು ಕತ್ತರಿಸಿ ಸಮಮಾಡಲು ಅಥವಾ ಸಮರಲು; ಅಥವಾ \

(ಸಿ) ಸದರಿ ಬೀದಿಯ ಮೇಲೆ ಚಾಚಿಕೊಂಡಿರುವ ಮತ್ತು ಅದಕ್ಕೆ ಅಥವಾ ಅದರಲ್ಲಿ ಸಂಚರಿಸುವ ವಾಹನಗಳು ಕಾಣದ ಹಾಗೆ ಅಡ್ಡಿಯುಂಟು ಮಾಡುವ ಅಥವಾ ಅದಕ್ಕೆ ಹಾನಿಯುಂಟು ಮಾಡುವ ಯಾವುದೇ ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಕತ್ತರಿಸಲು ಮತ್ತು ಕತ್ತರಿಸಿ ಸಮಮಾಡಲು; ಅಥವಾ

(ಡಿ) ಗೋಡೆಯ ಅಥವಾ ಬೇಲಿಯ ಎತ್ತರ ಮತ್ತು ಅದು ಇರುವ ಸ್ಥಳದ ಕಾರಣದಿಂದಾಗಿ ಅಪಾಯವನ್ನುಂಟುಮಾಡುವ ಹಾಗೆ, ಸಂಚರಿಸುವ ವಾಹನಗಳು ಕಾಣದಂತೆ ಅಡ್ಡಿಯುಂಟುಮಾಡುವ ಸುತ್ತುಗಟ್ಟಿರುವ ಗೋಡೆಯ ಅಥವಾ ಬೇಲಿಯ ಎತ್ತರವನ್ನು ತಗ್ಗಿಸಲು

- ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

293. ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಕಟ್ಟಡ.- (1) ವಾಸಸ್ಥಳಕ್ಕೆ ಉದ್ದೇಶಿಸಲಾದ ಅಥವಾ ವಾಸಸ್ಥಳವಾಗಿ ಬಳಸುತ್ತಿರುವ ಯಾವುದೇ ಕಟ್ಟಡವು ಅಥವಾ ಅದರ ಭಾಗವು ಮನುಷ್ಯರ ವಾಸಕ್ಕೆ ಯೋಗ್ಯವಾಗಿಲ್ಲವೆಂದು ಆಯುಕ್ತನಿಗೆ ಕಂಡುಬಂದರೆ, ಅವನು ಅಂಥ ಉದ್ದೇಶಕ್ಕಾಗಿ ಅಂಥ ಕಟ್ಟಡವನ್ನು ಮುಂದೆ ಬಳಸುವುದನ್ನು ನಿಷೇಧಿಸಲು ಸ್ಥಾಯೀ ಸಮಿತಿಗೆ ಮನವಿ ಮಾಡಿಕೊಳ್ಳಬಹುದು ಮತ್ತು ಸ್ಥಾಯೀ ಸಮಿತಿಯು, ಅದರ ಖಾತೆದಾರನಿಗೆ ಮತ್ತು ಅಧಿಭೋಗದಾರರಿಗೆ ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಮೇಲೆ ಹೇಳಿದಂತೆ ನಿಷೇಧಾಜ್ಞೆಯನ್ನು ಮಾಡಬಹುದು.

(2) ಯಾವುದೇ ಅಂಥ ನಿಷೇಧಾಜ್ಞೆಯನ್ನು ಮಾಡಿರುವಾಗ, ಆಯುಕ್ತನು ಕಟ್ಟಡದ ಖಾತಾದಾರನಿಗೆ ಮತ್ತು ಅಧಿಭೋಗದಾರನಿಗೆ ಅದರ ತಾತ್ಪರ್ಯವನ್ನು ತಿಳಿಸತಕ್ಕದ್ದು ಮತ್ತು ನೋಟೀಸನ್ನು ಜಾರಿ ಮಾಡಿದ ನಂತರ, ಮೂವತ್ತು ದಿನಗಳಿಗಿಂತ ಕಡಿಮೆಯಿರದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಆಯುಕ್ತನು ಮನುಷ್ಯರ ವಾಸಕ್ಕೆ ಅದನ್ನು ಯೋಗ್ಯವಲ್ಲದನ್ನಾಗಿಸುವ ಸ್ಥಿತಿಗಳನ್ನು ತನಗೆ ಮನವರಿಕೆಯಾಗುವಂತೆ ನಿವಾರಿಸಲಾಗಿದೆಯೆಂದು ಲಿಖಿತದಲ್ಲಿ ಪ್ರಮಾಣೀಕರಿಸುವವರೆಗೆ ಅಥವಾ ಸ್ಥಾಯೀ ಸಮಿತಿಯು ನಿಷೇಧವನ್ನು ಹಿಂತೆಗೆದುಕೊಳ್ಳುವವರೆಗೆ ಯಾರೇ ಖಾತೆದಾರನು ಅಥವಾ ಅಧಿಭೋಗದಾರನು ಆ ಕಟ್ಟಡವನ್ನು ಮನುಷ್ಯರ ವಾಸಕ್ಕೆ ಬಳಸತಕ್ಕದ್ದಲ್ಲ ಅಥವಾ ಬಳಸಲು ಅವಕಾಶ ನೀಡತಕ್ಕದ್ದಲ್ಲ.

(3) ಅಂಥ ನಿಷೇಧಾಜ್ಞೆಯು ಮೂರು ತಿಂಗಳವರೆಗೆ ಪ್ರವರ್ತನೆಯಲ್ಲಿರುವಾಗ, ಆಯುಕ್ತನು, ಸ್ಥಾಯೀ ಸಮಿತಿಗೆ ಆ ಪ್ರಕರಣವನ್ನು ವರದಿ ಮಾಡತಕ್ಕದ್ದು, ಸ್ಥಾಯೀ ಸಮಿತಿಯು ಆ ನಂತರ ಕಟ್ಟಡವನ್ನು ಕೆಡವಿಹಾಕಬಾರದೇ ಹೇಗೆ ಎಂಬ ಬಗ್ಗೆ ಪರ್ಯಾಲೋಚಿಸತಕ್ಕದ್ದು. ಸ್ಥಾಯೀ ಸಮಿತಿಯು, ಆ ಪ್ರಶ್ನೆಯನ್ನು ಯಾವ ಕಾಲದಲ್ಲಿ ಮತ್ತು ಸ್ಥಳದಲ್ಲಿ ಪರ್ಯಾಲೋಚಿಸಲಾಗುತ್ತದೋ ಆ ಕಾಲದ ಮತ್ತು ಸ್ಥಳದ ಬಗ್ಗೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಖಾತೆದಾರನಿಗೆ ನೀಡತಕ್ಕದ್ದು. ಆ ಪ್ರಶ್ನೆಯನ್ನು ಪರ್ಯಾಲೋಚನೆಗೆ ತೆಗೆದುಕೊಂಡಾಗ ಅಹವಾಲನ್ನು ಹೇಳಿಕೊಳ್ಳಲು ಖಾತೆದಾರನು ಹಕ್ಕುಳ್ಳವನಾಗಿರತಕ್ಕದ್ದು.

(4) ಅಂಥ ಪರ್ಯಾಲೋಚನೆಯ ತರುವಾಯ ಸ್ಥಾಯೀ ಸಮಿತಿಯು, ಆ ಕಟ್ಟಡವನ್ನು ಮನುಷ್ಯರ ವಾಸಕ್ಕೆ ಯೋಗ್ಯವಾದುದನ್ನಾಗಿ ಮಾಡಿಲ್ಲವೆಂದು ಮತ್ತು ಅದನ್ನು ಹಾಗೆ ಯೋಗ್ಯವಾದುದನ್ನಾಗಿ ಮಾಡಲು ಯುಕ್ತ ಶ್ರದ್ಧೆಯಿಂದ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲವೆಂದು ಮತ್ತು ಅದರ ಮುಂದುವರಿಕೆಯು ಸಾರ್ವಜನಿಕ ಆರೋಗ್ಯಕ್ಕೆ ಅಥವಾ ನೆರೆಹೊರೆಯ ನಿವಾಸಿಗಳಿಗೆ ಉಪದ್ರವಕಾರಿ ಅಥವಾ ಅಪಾಯಕಾರಿ ಅಥವಾ ಹಾನಿಕರವೆಂದು ಅಭಿಪ್ರಾಯಪಟ್ಟರೆ, ಕಾರಣಗಳ ಸಹಿತ ಆ ಬಗ್ಗೆ ಒಂದು ತೀರ್ಮಾನವನ್ನು ದಾಖಲ್ಮಾಡತಕ್ಕದ್ದು ಮತ್ತು ಆಯುಕ್ತನು ಸದರಿ ತೀರ್ಮಾನದ ಅನುಸಾರವಾಗಿ ಆ ಕಟ್ಟಡವನ್ನು ಕೆಡವಿಹಾಕಲು ಖಾತೆದಾರನನ್ನು ನೋಟೀಸಿನ ಮೂಲಕ ಅಗತ್ಯಪಡಿಸತಕ್ಕದ್ದು.

294. ಖಾತಾದಾರನು ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವುದಾಗಿ ಮುಚ್ಚಳಿಕೆ ಬರೆದುಕೊಡುವುದು.- ಮನುಷ್ಯರ ವಾಸಕ್ಕೆ ಕಟ್ಟಡವನ್ನು ಯೋಗ್ಯವಾದುದನ್ನಾಗಿಸಲು ಅವಶ್ಯವಾದ ಕೆಲಸಗಳನ್ನು ತತ್‌ಕ್ಷಣವೇ ನಿರ್ವಹಿಸುವುದಾಗಿ ಖಾತಾದಾರನು ಮುಚ್ಚಳಿಕೆ ಬರೆದುಕೊಟ್ಟರೆ, ಮತ್ತು ಅದನ್ನು ಹಾಗೆ ಯೋಗ್ಯವಾದುದನ್ನಾಗಿಸಬಹುದೆಂದು ಆಯುಕ್ತನು ಪರ್ಯಾಲೋಚಿಸಿದರೆ, ಆಯುಕ್ತನು, ಅವಶ್ಯವಾದ ಕೆಲಸಗಳನ್ನು ನಿರ್ವಹಿಸಲು ಖಾತೆದಾರನಿಗೆ ಅವಕಾಶವನ್ನು ಕೊಡುವ ಉದ್ದೇಶಕ್ಕಾಗಿ ತಾನು ಸಾಕಷ್ಟು ಎಂದು ಭಾವಿಸುವಂಥ ಆರು

ತಿಂಗಳುಗಳಿಗೆ ಮೀರದಂಥ ಕಾಲದವರೆಗೆ ಸ್ಥಾಯೀ ಸಮಿತಿಯ ತೀರ್ಮಾನವನ್ನು ಜಾರಿಗೊಳಿಸುವುದನ್ನು ಮುಂದೂಡಬಹುದು.

295. ನಷ್ಟಪರಿಹಾರದ ಕ್ಲೇಮಿಗೆ ಪ್ರತಿಬಂಧ.- ಈ ಅಧ್ಯಾಯದ ಮೇರೆಗಿನ ತನ್ನ ಅಧಿಕಾರಗಳ ಅನುಸಾರವಾಗಿ ನಗರಪಾಲಿಕೆ ಪ್ರಾಧಿಕಾರವು ಕೈಗೊಂಡ ಯಾವುದೇ ಕ್ರಮದ ಕಾರಣದಿಂದಾಗಿ ಅನುಭವಿಸಿದ ಯಾವುದೇ ಹಾನಿಗಳಿಗಾಗಿನ ನಷ್ಟ ಪರಿಹಾರಕ್ಕೆ ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಅಧ್ಯಾಯ-XXII
ನಗರ ಪರಂಪರೆ

296. ನಗರ ಪರಂಪರೆಯ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆ.- (1) ನಗರ ಪಾಲಿಕೆಯು.-

(ಎ) ಪಾರಂಪರಿಕ ಕಟ್ಟಡಗಳು ಅಥವಾ ತಾಣಗಳು ಮತ್ತು ಐತಿಹಾಸಿಕ, ವಾಸ್ತುಶಿಲ್ಪ, ಸಾಂಸ್ಕೃತಿಕ, ಪ್ರಾಕೃತಿಕ ಅಥವಾ ಜೀವ ಪರಿಸರೀಯ ಮಹತ್ವವುಳ್ಳ ಪಾರಂಪರಿಕ ಪ್ರದೇಶಗಳ ಅಥವಾ ನಿಸರ್ಗ ರಮಣೀಯ ಸೌಂದರ್ಯವುಳ್ಳ ತಾಣಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶದೊಳಗಿನ ಯಾವುದೇ ಹೊಸ ಅಭಿವೃದ್ಧಿಯಿಂದಾಗಿ ಅವುಗಳ ಮೇಲೆ ವ್ಯತಿರಿಕ್ತವಾಗಿ ಪರಿಣಾಮ ಬೀರದಿರುವಂತೆ ಕಾಪಾಡುವ ಮತ್ತು ಸಂರಕ್ಷಿಸುವ;

(ಬಿ) ನಗರದ ಭೂದೃಶ್ಯ ಸೇರಿದಂತೆ ನಗರ ಯೋಜನೆ ಮತ್ತು ಕಟ್ಟಡ ನಿರ್ಮಾಣ ವೈಶಿಷ್ಟ್ಯತೆಯ ಮೂಲ ಅಂಶಗಳನ್ನು ವೃದ್ಧಿಸುವ;

(ಸಿ) ಪಾರಂಪರಿಕ ಪ್ರದೇಶಗಳಲ್ಲಿ, ಪಾರಂಪರಿಕ ಕಟ್ಟಡಗಳೆಂದು ಗೊತ್ತುಪಡಿಸಿ ಸಂರಕ್ಷಿಸಬೇಕಾದ ಹಾಲಿಯಿರುವ ಕಟ್ಟಡಗಳ ನೆಲಸಮಗೊಳಿಸುವಿಕೆ, ರಕ್ಷಣೆ, ಸಂರಕ್ಷಣೆ ಅಥವಾ ಮರು ನಿರ್ಮಾಣಕ್ಕೆ ಮತ್ತು ಅವುಗಳ ಮಾರ್ಪಾಡುಗೊಳಿಸುವಿಕೆ ಅಥವಾ ವಿಸ್ತರಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸುವ

- ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

(2) ನಗರ ಪಾಲಿಕೆಯು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು, ನಿಯಮಗಳು, ವಿನಿಯಮಗಳು, ಉಪ-ವಿಧಿಗಳು ಅಥವಾ ಮಾರ್ಗಸೂಚಿಗಳಿಗೆ ಅನುಸಾರವಾಗಿ ಈ ಅಧ್ಯಾಯದ ಅನುಷ್ಠಾನಕ್ಕಾಗಿ ವಿನಿಯಮಗಳನ್ನು ಅಥವಾ ಉಪವಿಧಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಹೊರಡಿಸತಕ್ಕದ್ದು.

297. ಪಾರಂಪರಿಕ ಕಟ್ಟಡಗಳು, ಪಾರಂಪರಿಕ ಆವರಣಗಳು ಮತ್ತು ಪಟ್ಟಿ ಮಾಡಲಾದ ನೈಸರ್ಗಿಕ ವೈಶಿಷ್ಟ್ಯತೆಯುಳ್ಳ ಪ್ರದೇಶಗಳನ್ನೊಳಗೊಂಡ ಪಾರಂಪರಿಕ ತಾಣಗಳ ಪಟ್ಟಿ ತಯಾರಿಸುವುದು.- (1) ಆಯುಕ್ತನು, ಪರಂಪರೆ ಸಂರಕ್ಷಣಾ ಸಮಿತಿಯ ಸಲಹೆಯ ಮೇರೆಗೆ ಪಾರಂಪರಿಕ ಕಟ್ಟಡಗಳು, ಪಾರಂಪರಿಕ ಆವರಣಗಳು ಮತ್ತು ಪಟ್ಟಿ ಮಾಡಲಾದ ನೈಸರ್ಗಿಕ ವೈಶಿಷ್ಟ್ಯತೆಯುಳ್ಳ ಪ್ರದೇಶಗಳನ್ನೊಳಗೊಂಡ ಒಂದು ಪಾರಂಪರಿಕ ತಾಣಗಳ ಪಟ್ಟಿಯನ್ನು ಸಿದ್ಧಪಡಿಸಿ ಅದನ್ನು ಅನುಬಂಧಿಸತಕ್ಕದ್ದು.

(2) ಅಂತಿಮಗೊಳಿಸುವುದಕ್ಕೆ ಮುಂಚೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸತಕ್ಕದ್ದು ಮತ್ತು ಅವುಗಳನ್ನು ಪರಿಗಣಿಸತಕ್ಕದ್ದು.

(3) ಸರ್ಕಾರದ ಶಿಫಾರಸ್ಸುಗಳ ಮೇರೆಗೆ ಆಯುಕ್ತನು ಕಾಲಕಾಲಕ್ಕೆ ಪಟ್ಟಿಗೆ ಅನುಬಂಧವನ್ನು ಸೇರಿಸಬಹುದು. ಒಂದು ಕಟ್ಟಡ ಅಥವಾ ಕಟ್ಟಡಗಳ ಗುಂಪು ಅಥವಾ ನೈಸರ್ಗಿಕ ವೈಶಿಷ್ಟ್ಯತೆಗಳುಳ್ಳ ಪ್ರದೇಶಗಳನ್ನು ಪಟ್ಟಿ ಮಾಡಿದಾಗ ಅನ್ಯಥಾ ಸೂಚಿಸಿದ ಹೊರತು, ಕಾಂಪೌಂಡ್/ಆವರಣ ಗೋಡೆ ನಿವೇಶನ ಸರಹದ್ದಿನೊಳಗಿನ ಎಲ್ಲಾ ಪೂರಕ ಕಟ್ಟಡ ಸಂರಚನೆಗಳು ಮತ್ತು ಪ್ರಾಕ್ತನ ಕಲಾಕೃತಿಗಳ ಜೊತೆಗೆ ಅದರ ಸಂಪೂರ್ಣ ಕಾಂಪೌಂಡ್ ಅಥವಾ

ಆವರಣ ಗೋಡೆ ನಿವೇಶನದ ಸರಹದ್ದೂ ಒಳಗೊಂಡಂತೆ ಇಡೀ ಸ್ವತ್ತು ಆ ಪಟ್ಟಿಯ ಭಾಗವಾಗಿರುತ್ತದೆಂದು ಅರ್ಥೈಸಿಕೊಳ್ಳತಕ್ಕದ್ದು.

298. ಪಾರಂಪರಿಕ ಕಟ್ಟಡಗಳಿಗೆ ಪ್ರೋತ್ಸಾಹಕಗಳು.- ನಗರ ಪಾಲಿಕೆಯು, ಪಾರಂಪರಿಕ ಸಂರಕ್ಷಣಾ ಪಟ್ಟಿಯಲ್ಲಿ ಸೇರಿರುವ ಪಾರಂಪರಿಕ ಕಟ್ಟಡಗಳ ಮಾಲೀಕರು ಅಥವಾ ಅಧಿಭೋಗದಾರರಿಗೆ ಪ್ರೋತ್ಸಾಹಕಗಳನ್ನು ಒದಗಿಸಬಹುದು ಮತ್ತು ಸದರಿ ಪ್ರೋತ್ಸಾಹಕಗಳಲ್ಲಿ ಪಾರಂಪರಿಕ ಕಟ್ಟಡಗಳನ್ನು ಅವುಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆಯೋ ಅದೇ ಸ್ಥಿತಿಯಲ್ಲಿ ಸಂರಕ್ಷಿಸಿಕೊಂಡು ಬರುವುದಕ್ಕೆ ನೆರವಾಗಲು ಮತ್ತು ಅಗತ್ಯವೆಂದು ಭಾವಿಸುವ ದುರಸ್ತಿ ಕಾರ್ಯಗಳೊಂದಿಗೆ ಅವುಗಳ 'ಪಾರಂಪರಿಕ' ಸ್ಥಿತಿಯನ್ನು ಕಾಪಾಡಿಕೊಂಡು ಬರಲು ತಾತ್ಕಾಲಿಕ ಹಣಕಾಸು ನೆರವು, ಆಸ್ತಿ ತೆರಿಗೆಯಿಂದ ವಿನಾಯಿತಿ ಮತ್ತು ಅಗತ್ಯವೆಂದು ಭಾವಿಸಬಹುದಾದಂಥ ಇತರ ಪ್ರೋತ್ಸಾಹಕಗಳನ್ನು ಒದಗಿಸುವುದೂ ಸೇರಿರಬಹುದು:

ಪರಂತು, ಪಾರಂಪರಿಕ ಕಟ್ಟಡವನ್ನು ಸೂಕ್ತವಾಗಿ ನಿರ್ವಹಿಸದಿದ್ದಲ್ಲಿ ಅಥವಾ ಅಂಥ ಕಟ್ಟಡದ 'ಪಾರಂಪರಿಕ' ಮೌಲ್ಯವನ್ನು ಯಾವುದೇ ರೀತಿಯಲ್ಲಿ ಹಾಳುಗೆಡವಿದ್ದಲ್ಲಿ, ಪ್ರೋತ್ಸಾಹಕಗಳನ್ನು ರದ್ದುಗೊಳಿಸಬಹುದು ಮತ್ತು ನಿಯಮಿಸಲಾದಂತೆ ದಂಡಗಳನ್ನು ವಿಧಿಸಬಹುದು.

299. ಪಾರಂಪರಿಕ ಸಂರಕ್ಷಣಾ ಸಮಿತಿಯ ನೇಮಕಾತಿ.- (1) ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳೊಂದಿಗೆ ಮಾನ್ಯ ಮಾಡಲಾದ ಪಾರಂಪರಿಕ ಸಂರಕ್ಷಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಆಯುಕ್ತನು ಪಾರಂಪರಿಕ ಸಂರಕ್ಷಣಾ ಸಮಿತಿಯ ಸಲಹೆಯ ಮೇರೆಗೆ ನಗರದಲ್ಲಿನ ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಯುಕ್ತ ವಿನಿಯಮಗಳನ್ನು ರಚಿಸತಕ್ಕದ್ದು.

(3) ಪಾರಂಪರಿಕ ಸಂರಕ್ಷಣಾ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:

(i)	ಮುಖ್ಯ ಆಯುಕ್ತರು	ಅಧ್ಯಕ್ಷರು
(ii)	ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ	ಸದಸ್ಯ ಕಾರ್ಯದರ್ಶಿ
(iii)	ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ನಗರ ಪಾಲಿಕೆಗಳ ಆಯುಕ್ತರು	ಸದಸ್ಯರು
(iv)	ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ನಗರ ಪಾಲಿಕೆಗಳ ಅಪರ ಮುಖ್ಯ ನಗರ ಯೋಜಕರು	ಸದಸ್ಯರು
(v)	ಲೋಕೋಪಯೋಗಿ ಇಲಾಖೆಯ ಒಬ್ಬ ವಾಸ್ತುಶಿಲ್ಪಿ	ಸದಸ್ಯರು
(vi)	ವಿಷಯಕ್ಷೇತ್ರದಲ್ಲಿ ಹತ್ತು ವರ್ಷಗಳ ಅನುಭವವುಳ್ಳ ಮತ್ತು ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಸದಸ್ಯತ್ವವನ್ನು ಹೊಂದಿರುವ ಒಬ್ಬ ಸ್ಟ್ರಕ್ಚರಲ್ ಇಂಜಿನಿಯರ್	ಸದಸ್ಯರು
(vii)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಹತ್ತು ವರ್ಷಗಳ ಅನುಭವವುಳ್ಳ ಒಬ್ಬ ವಾಸ್ತುಶಿಲ್ಪಿ	ಸದಸ್ಯರು
(viii)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಒಬ್ಬ ನಗರ ವಿನ್ಯಾಸಕ	ಸದಸ್ಯರು
(ix)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ, ಐದು ವರ್ಷಗಳ ಅನುಭವವುಳ್ಳ ಒಬ್ಬ ಸಂರಕ್ಷಣಾ ವಾಸ್ತುಶಿಲ್ಪಿ	ಸದಸ್ಯರು
(x)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ, ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನ ಮತ್ತು ಹತ್ತು ವರ್ಷಗಳ ಅನುಭವವುಳ್ಳ ಪರಿಸರವಾದಿ	ಸದಸ್ಯರು
(xi)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ, ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನ ಮತ್ತು ಹತ್ತು ವರ್ಷಗಳ ಅನುಭವವುಳ್ಳ ಇತಿಹಾಸಕಾರ	ಸದಸ್ಯರು
(xii)	ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನ ಮತ್ತು 10 ವರ್ಷಗಳ ಅನುಭವವುಳ್ಳ	ಸದಸ್ಯರು

	ಪ್ರಾಕೃತಿಕ ಇತಿಹಾಸಕಾರ	
(xiii)	ಕೇಂದ್ರ ಪುರಾತತ್ವ ಇಲಾಖೆಯ ಒಬ್ಬ ಪ್ರತಿನಿಧಿ	ಸದಸ್ಯರು
(xiv)	ರಾಜ್ಯ ಪುರಾತತ್ವ ಇಲಾಖೆಯ ಒಬ್ಬ ಪ್ರತಿನಿಧಿ	ಸದಸ್ಯರು

(4) ಸಮಿತಿಯು ಮೂರು ಜನರ ವರೆಗೆ ತತ್ಸಂಬಂಧಿತ ಅನುಭವವನ್ನು ಹೊಂದಿರುವ ಹೆಚ್ಚುವರಿ ಸದಸ್ಯರುಗಳನ್ನು ಸಹ-ಸದಸ್ಯರನ್ನಾಗಿ ನೇಮಿಸಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು.

(5) ಸಮಿತಿಯ ಕಾರ್ಯನಿರ್ವಹಣೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(6), ಯಾರೇ ಸರ್ಕಾರಿ ಪ್ರತಿನಿಧಿಯನ್ನು ಹೊರತುಪಡಿಸಿ ಉಳಿದಂತೆ, ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು.

300. ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳಿಗೆ ಶ್ರೇಣಿ ನೀಡುವುದು.- (1) ಪಟ್ಟಿ ಮಾಡಲಾದ ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ಸ್ಥಳಾವರಣಗಳನ್ನು ಅನುಸೂಚಿ-II ರಲ್ಲಿ ನಿರೂಪಿಸಲಾಗಿರುವಂತೆ ಪ್ರವರ್ಗಗಳಾಗಿ ಶ್ರೇಣೀಕರಿಸತಕ್ಕದ್ದು.

(2) ಪಾರಂಪರಿಕ ಕಟ್ಟಡ ಅಥವಾ ತಾಣ ಅಥವಾ ಸ್ಥಳಾವರಣದ ಮೂಲ ಸ್ವರೂಪವನ್ನು ಪರಿವರ್ತಿಸಬಹುದಾದ ಮುಖಭಾಗ, ಒಳಾಂಗಣ ಅಥವಾ ಹೊರಾಂಗಣ ಭಾಗದಲ್ಲಿನ ಯಾವುದೇ ಮಾರ್ಪಾಡು, ದುರಸ್ತಿ ಅಥವಾ ಬದಲಾವಣೆಯನ್ನು ಅನುಸೂಚಿ-II ರಲ್ಲಿ ಅನುಮತಿಸಲಾಗಿರುವ ಮಟ್ಟಿಗೆ ಮತ್ತು ಇದನ್ನು ಕಾರ್ಯಗತಗೊಳಿಸುವುದಕ್ಕಾಗಿ ಹೊರಡಿಸುವ ಯಾವುದೇ ಆದೇಶಗಳು, ನಿಯಮಗಳು, ವಿನಿಯಮಗಳು, ಉಪವಿಧಿಗಳು ಅಥವಾ ಮಾರ್ಗಸೂಚಿಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

301. ಪಾರಂಪರಿಕ ಸಂರಕ್ಷಣಾ ಸಮಿತಿಯ ಪ್ರಕಾರ್ಯಗಳು.- ಪಾರಂಪರಿಕ ಸಂರಕ್ಷಣಾ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು,-

(ಎ) ಅಧಿಸೂಚಿಸಬೇಕಾಗಿರುವ ಪಾರಂಪರಿಕ ಕಟ್ಟಡಗಳು ಮತ್ತು ಸ್ಥಳಾವರಣಗಳನ್ನು ಗುರುತಿಸುವ ಮತ್ತು ಪಟ್ಟಿ ಮಾಡುವ ಕಾರ್ಯಗಳನ್ನು ಕೈಗೊಳ್ಳುವುದು ಹಾಗೂ ಅವುಗಳನ್ನು ಪಟ್ಟಿಗೆ ಸೇರ್ಪಡೆ ಮಾಡುವಂತೆ ನಗರ ಪಾಲಿಕೆಗಳಿಗೆ ಶಿಫಾರಸ್ಸು ಮಾಡುವುದು;

(ಬಿ) ಪಾರಂಪರಿಕ ಕಟ್ಟಡಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಅನುಮತಿಯನ್ನು ನೀಡಬೇಕೆ ಎಂಬುದನ್ನು ನಗರ ಪಾಲಿಕೆಗಳಿಗೆ ಶಿಫಾರಸ್ಸು ಮಾಡುವುದು;

(ಸಿ) ಪಟ್ಟಿಯಲ್ಲಿನ ಯಾವುದೇ ಕಟ್ಟಡದ ಸಂರಕ್ಷಣೆ ಅಥವಾ ನಿರ್ವಹಣೆಗಾಗಿ ಮಾಲೀಕರಿಗೆ ಪಾವತಿಸಬೇಕಾದ ದುರಸ್ತಿ ವೆಚ್ಚವನ್ನು ಮೌಲ್ಯಮಾಪನ ಮಾಡುವುದು;

(ಡಿ) ಅಧಿಸೂಚಿತ ಕಟ್ಟಡಗಳಿಗಾಗಿನ ವಿಶಿಷ್ಟ ವಿನ್ಯಾಸಗಳು ಮತ್ತು ಮಾರ್ಗಸೂಚಿಗಳನ್ನು ಅನುಮೋದಿಸುವುದು ಹಾಗೂ ಕಟ್ಟಡಗಳ ಎತ್ತರ ಮತ್ತು ಅತ್ಯಾವಶ್ಯಕ ಮುಂಭಾಗ ಮೂಲ ಸ್ವರೂಪಗಳನ್ನು ನಿಯಂತ್ರಿಸುವುದು ಮತ್ತು ಸೂಕ್ತ ವಿನ್ಯಾಸಗಳನ್ನು ಸಲಹೆ ಮಾಡುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಕಟ್ಟಡದ ಹಿಂದಿನ ರೂಪವು ಅಚ್ಚಳಿಯದ ಹಾಗೇ ಇರುವಂತೆ ಹಳೆಯ ಪರಿಕರಗಳ ಬದಲಿಗೆ ಹೊಸ ಪರಿಕರಗಳನ್ನು ಅಳವಡಿಸಲು ಅಂಗೀಕರಿಸುವುದು;

(ಇ) ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ಸ್ಥಳಾವರಣಗಳಿಗೆ ಸಂಬಂಧಿಸಿದಂತೆ ವಿಶೇಷ ವಿನಿಯಮಗಳನ್ನು ರಚಿಸುವುದು ಮತ್ತು ಅವುಗಳನ್ನು ನಗರ ಪಾಲಿಕೆಗಳಿಗೆ ಸಲ್ಲಿಸುವುದು;

(ಎಫ್) ನಗರದಲ್ಲಿನ ನಗರ-ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳ ಭೌತಿಕ ಸಂರಕ್ಷಣೆ ಮತ್ತು ಜೀರ್ಣೋದ್ಧಾರಕ್ಕಾಗಿ ಅಗತ್ಯವಾಗಬಹುದಾದಂಥ ಕ್ರಮಗಳನ್ನುಕೈಗೊಳ್ಳುವುದು;

(ಜಿ) ಪರಂಪರೆ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ನಗರದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು, ಪಾರಂಪರಿಕ ಸಂಪನ್ಮೂಲಗಳ ಗುರುತಿಸುವಿಕೆ ಮತ್ತು

ಪಟ್ಟಿಮಾಡುವಿಕೆಯಂತಹ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಕೈಗೊಳ್ಳುವುದು, ಪರಂಪರೆಗೆಂದೇ ಮೀಸಲಾದ ಪರಂಪರೆ-ಜಾಥಾಗಳನ್ನು ನಡೆಸುವುದು, ಉಪನ್ಯಾಸಗಳು, ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳನ್ನು ಆಯೋಜಿಸುವುದು.

302. ಅಬಾಧಿತ ಮಾಲಿಕತ್ವ.- (1) ಪಾರಂಪರಿಕ ಕಟ್ಟಡ ಎಂಬುದಾಗಿ ಪಟ್ಟಿ ಮಾಡಲಾಗಿರುವ ಕಟ್ಟಡವು ಅದರ ಶ್ರೇಣಿಯ ಆಧಾರದ ಮೇಲೆ ನಿಯಮಿಸಲಾದ ಷರತ್ತುಗಳಿಗೆ ಅನುಗುಣವಾಗಿ ಕಟ್ಟಡದ ಬಳಕೆಯು ಸುಸಂಗತವಾಗಿರಬೇಕೆಂದು ಅಗತ್ಯಪಡಿಸುತ್ತದೆ ಮತ್ತು ಅಂಥ ಕಟ್ಟಡದ ಮಾರಾಟ ಅಥವಾ ಖರೀದಿಯ ಮೇಲೆ ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ ಹಾಗೂ ಅದಕ್ಕಾಗಿ ನಗರ ಪಾಲಿಕೆಗಳ ಅಥವಾ ಪಾರಂಪರಿಕಸಂರಕ್ಷಣಾ ಸಮಿತಿಯ ಅನುಮತಿಯ ಅಗತ್ಯವಿರುವುದಿಲ್ಲ.

(2) ಪಟ್ಟಿಯಲ್ಲಿರುವ ಯಾವುದೇ ಪಾರಂಪರಿಕ ಕಟ್ಟಡದ ಮಾರಾಟದ ಮೇಲಿನ ನಿರಾಕರಣೆಯ 77 ಪ್ರಥಮ ಹಕ್ಕನ್ನು ನಗರ ಪಾಲಿಕೆಗಳು ಹೊಂದಿರತಕ್ಕದ್ದು.

ಅಧ್ಯಾಯ – XXIII
ಪರವಾನಿಗೆಗಳು ಮತ್ತು ಶುಲ್ಕಗಳು

303. ಪರವಾನಿಗೆ ಮಂಜೂರಾತಿ ಅಂಶಗಳು.- (1) ಆಯುಕ್ತನು ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಪರವಾನಗಿ ಮಂಜೂರು ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಗಟು ಅಥವಾ ಚಿಲ್ಲರೆ ಮಾರುಕಟ್ಟೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಬಿ) ವ್ಯಾಪಾರ ಸಂಸ್ಥೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಸಿ) ಕಸಾಯಿ ಖಾನೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಡಿ) ರೆಸ್ಟೋರೆಂಟ್‌ಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಇ) ಕೈಗಾರಿಕೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಎಫ್) ವಾಣಿಜ್ಯ ಉದ್ದಿಮೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಜಿ) ಕಾರ್ಪೊರೇಟ್ ಕಚೇರಿಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಎಚ್) ಸೇವಾ ವಸತಿ ಗೃಹಗಳು (service apartments), ಪಾವತಿಸುವ ಅತಿಥಿ ಗೃಹಗಳ (paying guest) ಸ್ಥಾಪನೆ;
(ಐ) **ಪಾಲುದಾರಿಕೆ-ಕಚೇರಿ ಮತ್ತು ವಾಸ್ತವ್ಯ ಸ್ಥಳಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;**
(ಜೆ) ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಕೆ) ವಿಶ್ರಾಂತಿ ಧಾಮಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಎಲ್) ಚಿತ್ರ ಮಂದಿರಗಳು, ಜಾತ್ರೆಗಳು, ಸರ್ಕಸ್ಸುಗಳು ಮತ್ತು ಸಾರ್ವಜನಿಕ ಮನರಂಜನಾ ಸ್ಥಳಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಎಂ) ಹಾಲು ಮಾರಾಟದ ಸ್ಥಾಪನೆ ಮತ್ತು ಕಾರ್ಯಾಚರಣೆ;
(ಎನ್) ಪ್ರಾಣಿಗಳು ಮತ್ತು ಪಕ್ಷಿಗಳ ಸಾಕಣೆ;
(ಓ) ಕುದುರೆ ಲಾಯಗಳು , ದನದ ಕೊಟ್ಟಿಗೆಗಳು ಮತ್ತು ಗೋಶಾಲೆಗಳ ಸ್ಥಾಪನೆ;
(ಪಿ) ಮೃತರನ್ನು ಹೂಳುವುದಕ್ಕಾಗಿ ಸ್ಥಳಗಳನ್ನು ಒದಗಿಸುವುದು;
(ಕ್ಯೂ) ಆಹಾರದ ಗಾಡಿಗಳು ಅಥವಾ ಯಾವುದೇ ಗಾಡಿ ನಿಲುಗಡೆ ಸ್ಥಳಗಳ ಸ್ಥಾಪನೆ; ಮತ್ತು
(ಆರ್) ಸಾರ್ವಜನಿಕ ಸ್ಥಳಗಳಲ್ಲಿ ಜಾಹಿರಾತು ಫಲಕಗಳ ಅಳವಡಿಕೆ

(2) ಉಪ-ಪ್ರಕರಣ (1) ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪರವಾನಿಗೆ ಪಡೆಯುವ ವಿಧಾನವನ್ನು ನಿಯಮಗಳು ಅಥವಾ ಉಪವಿಧಿಗಳ ಅಡಿಯಲ್ಲಿ ಉಪಬಂಧಿಸತಕ್ಕದ್ದು.

304. ಪರವಾನಿಗೆ ಪಡೆಯುವುದರಿಂದ ಸರ್ಕಾರಕ್ಕೆ ವಿನಾಯಿತಿ.- ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು, ಅಂಥ ಸರ್ಕಾರದ ಅಧಿಭೋಗದಲ್ಲಿರುವ ಅಥವಾ ಹತೋಟಿಯಲ್ಲಿರುವ ಯಾವುದೇ ಸ್ಥಳ ಅಥವಾ ಅಂಥ ಸರ್ಕಾರಕ್ಕೆ ಸೇರಿದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ನಗರ ಪಾಲಿಕೆಯ ಪರವಾನಿಗೆ ಪಡೆಯುವುದು ಅಗತ್ಯವಾಗಿರತಕ್ಕದ್ದಲ್ಲ.

305. ಪರವಾನಿಗೆಗಳು ಮತ್ತು ಲಿಖಿತ ಅನುಮತಿಗಳನ್ನು ಯಾವ ಷರತ್ತುಗಳ ಮೇಲೆ ನೀಡಲಾಗಿದೆಯೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು.- (1) ಯಾವುದೇ ಉದ್ದೇಶಕ್ಕಾಗಿ ಪರವಾನಿಗೆ ಅಥವಾ ಲಿಖಿತ ಅನುಮತಿಯನ್ನು ನೀಡಬಹುದೆಂಬುದಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಿದಾಗಲೆಲ್ಲಾ, ಅಂಥ ಪರವಾನಿಗೆ ಅಥವಾ ಲಿಖಿತ ಅನುಮತಿಯಲ್ಲಿ ಅದನ್ನು ಯಾವ ಅವಧಿಗಾಗಿ ಮತ್ತು ಯಾವ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲಾಗಿದೆಯೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಪರವಾನಿಗೆ ಮತ್ತು ಲಿಖಿತ ಅನುಮತಿಯನ್ನು ಆಯುಕ್ತನ ಸಹಿಯ ಮೇರೆಗೆ ಅಥವಾ ಆ ನಿರ್ದಿಷ್ಟ ವಲಯದ ನಗರ ಪಾಲಿಕೆಗಾಗಿ ಮಂಜೂರು ಮಾಡುವ ಅಧಿಕಾರ ಹೊಂದಿರುವ ಅಧಿಕಾರಿಯ ಸಹಿಯ ಮೇರೆಗೆ ನೀಡತಕ್ಕದ್ದು.

(2) ಪರವಾನಿಗೆ ಮತ್ತು ಅನುಮತಿಗಾಗಿ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ನಗರ ಪಾಲಿಕೆಯ ಆಯುಕ್ತನಿಗೆ ಸಲ್ಲಿಸತಕ್ಕದ್ದು ಮತ್ತು ಹಾಗೆ ಮಂಜೂರು ಮಾಡಲಾದ ಅಂಥ ಪರವಾನಿಗೆ ಅಥವಾ ಲಿಖಿತ ಅನುಮತಿಯು, ನಿಯಮಿಸಬಹುದಾಂಥ ರೀತಿಯಲ್ಲಿ ನಗರ ಪಾಲಿಕೆಯು ನಿಗದಿಪಡಿಸಬಹುದಾಂಥ ಶುಲ್ಕಗಳನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು. ವಿವಿಧ ಪರವಾನಿಗೆಗಳು ಅಥವಾ ಅನುಮತಿಗೆ ವಿವಿಧ ದರಗಳನ್ನು ನಗರ ಪಾಲಿಕೆಯು ನಿಗದಿಪಡಿಸಬಹುದು.

(3) ಈ ಅಧಿನಿಯಮದ ಮೇರೆಗೆ ಪರವಾನಿಗೆ ಅಥವಾ ಲಿಖಿತ ಅನುಮತಿಯನ್ನು ಪಡೆದುಕೊಂಡಿರುವ ಯಾರೇ ವ್ಯಕ್ತಿಯು, ಆಸ್ತಿ ತೆರಿಗೆ ಅಥವಾ ಯಾವುದೇ ಇತರ ಬಾಕಿಗಳನ್ನು ಪಾವತಿಸದೇ ಉಳಿಸಿಕೊಂಡಿದ್ದಲ್ಲಿ ಅಥವಾ ಯಾವುವೇ ನಿಯಮಿಸಲಾದ ನಿರ್ಬಂಧಗಳು ಅಥವಾ ಷರತ್ತುಗಳನ್ನು ಪಾಲಿಸಲು ತಪ್ಪಿದ್ದಲ್ಲಿ ಅಥವಾ ಉಲ್ಲಂಘಿಸಿದ್ದಲ್ಲಿ ಅಥವಾ ಸದರಿ ವ್ಯಕ್ತಿಯು ಅಂಥ ಪರವಾನಿಗೆ ಅಥವಾ ಲಿಖಿತ ಅನುಮತಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅವುಗಳ ಅಡಿ ಮಾಡಿದ ಯಾವುದೇ ಉಪವಿಧಿಗಳನ್ನು ಉಲ್ಲಂಘಿಸಿದ್ದಕ್ಕಾಗಿ ದೋಷಿಯೆಂದು ನಿರ್ಣೀತನಾಗಿದ್ದಲ್ಲಿ, ನಗರ ಪಾಲಿಕೆಯ ಆಯುಕ್ತನು ಅಂಥ ಪರವಾನಿಗೆ ಅಥವಾ ಲಿಖಿತ ಅನುಮತಿಯನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದುಪಡಿಸಬಹುದು.

(4) ಪರವಾನಿಗೆಯ ನಿಬಂಧನೆಗಳನ್ನು ಉಲ್ಲಂಘಿಸಿ ಯಾವುದೇ ಆವರಣಗಳನ್ನು ಉಪಯೋಗಿಸಿದರೆ ಅಥವಾ ನಗರ ಪಾಲಿಕೆಯ ಆಯುಕ್ತನು ಪರವಾನಿಗೆಯನ್ನು ಅಮಾನತ್ತಿನಲ್ಲಿಟ್ಟ ಅಥವಾ ರದ್ದುಪಡಿಸಿದ ನಂತರವೂ ಉಪಯೋಗಿಸುತ್ತಿದ್ದರೆ, ಆಯುಕ್ತನು, ಆವರಣವನ್ನು ಹಾಗೆ ಉಪಯೋಗಿಸುತ್ತಿರುವ ವ್ಯಕ್ತಿಯು ಹಾಗೆ ಅದನ್ನು ಮುಂದುವರಿಸತಕ್ಕದ್ದಲ್ಲವೆಂದು ಯಾವುದೇ ಸಮಯದಲ್ಲಿ ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸಬಹುದಾಗಿದೆ.

306. ಪರವಾನಿಗೆಗಳನ್ನು ಉಲ್ಲಂಘಿಸಿ ಬಳಸಿದ ಸ್ಥಳಗಳ ಬಳಕೆಯನ್ನು ನಿಲ್ಲಿಸುವ ಆಯುಕ್ತನ ಅಧಿಕಾರ.- ಸಾರ್ವಜನಿಕರು ವಿರಾಮಕ್ಕಾಗಿ ಅಥವಾ ಯಾವುದೇ ಆಹಾರ ಅಥವಾ ಪಾನೀಯದ ಬಳಕೆಗಾಗಿ ಆಹಾರವನ್ನು ಮಾರಾಟ ಮಾಡಲಾಗುತ್ತಿದೆಯೋ ಅಥವಾ ಮಾರಾಟಕ್ಕಾಗಿ ತಯಾರಿಸಲಾಗುತ್ತಿದೆಯೋ ಅಂತಹ ಸ್ಥಳಗಳಾದ ಯಾವುದೇ ಭೋಜನ ಗೃಹ, ವಸತಿ ಗೃಹ, ಹೋಟೇಲ್, ಉಪಹಾರ ಗೃಹ, ಟೀ ಅಂಗಡಿ, ಕಾಫಿ ಅಂಗಡಿ, ಕೆಫೆ, ರೆಸ್ಟೋರೆಂಟ್, ವಿಶ್ರಾಂತಿ ಕೊಠಡಿ ಅಥವಾ ಇತರ ಸ್ಥಳ ಅಥವಾ ಯಾವುದೇ ರಂಗಮಂದಿರ, ಸರ್ಕಸ್, ಚಿತ್ರಮಂದಿರ ಅಥವಾ ನೃತ್ಯ ಮಾಡುವ ಸ್ಥಳ, ಮನೋರಂಜನೆ ಅಥವಾ ವಿಹಾರದಂತಹ ಸಾರ್ವಜನಿಕರು ಸೇರುವ ಇತರ ಸ್ಥಳಗಳಿಗೆ ಸಂಬಂಧಿಸಿದಂತೆ ಪರವಾನಿಗೆ ಇಲ್ಲದೆ ತೆರೆದಿದೆ

ಎಂದು ಅಥವಾ ಅನ್ಯಥಾ ನೀಡಿದ ಪರವಾನಿಗೆಯ ನಿಬಂಧನೆಗಳನ್ನು ಪಾಲನೆ ಮಾಡುತ್ತಿಲ್ಲವೆಂದು ಆಯುಕ್ತನು ಅಭಿಪ್ರಾಯ ಪಟ್ಟರೆ, ಆತನು, ಅವಶ್ಯಕವೆಂದು ಪರಿಗಣಿಸಬಹುದಾದಂತೆ ಆವರಣಗಳನ್ನು ಅಥವಾ ಸ್ವತ್ತನ್ನು ಸೀಲು ಮಾಡುವುದನ್ನು ಒಳಗೊಂಡಂತೆ ಅಂಥ ಸಾಧನಗಳ ಮೂಲಕ ನಿರ್ದಿಷ್ಟಪಡಿಸಿದ ಅವಧಿಗೆ ಅಂಥ ಯಾವುದೇ ಉದ್ದೇಶಕ್ಕಾಗಿ ಅಂಥ ಯಾವುದೇ ಸ್ಥಳಗಳ ಬಳಕೆಯನ್ನು ನಿಲ್ಲಿಸಬಹುದು.

307. ಮಾರಾಟ ನಡೆಯುತ್ತಿರುವ ಸ್ಥಳಗಳ ತಪಾಸಣೆ.- ಆಯುಕ್ತನು, ಮಾರಾಟಕ್ಕೆ ತೆರೆದಿಟ್ಟ ಅಥವಾ ಸಿದ್ಧಪಡಿಸಿದ ಅಥವಾ ಇಟ್ಟಿರುವ, ಅಥವಾ ಮಾರಾಟ ಮಾಡುವ ಉದ್ದೇಶಕ್ಕಾಗಿ ಅಥವಾ ಮಾರಾಟದ ತಯಾರಿಗಾಗಿ ಯಾವುದೇ ಸ್ಥಳಕ್ಕೆ ತಂದಿರುವ ಪ್ರಾಣಿಗಳು, ಮೃತ ಪ್ರಾಣಿಗಳ ಭಾಗಗಳು, ಮಾಂಸ, ಕೋಳಿ ಸಾಕಾಣಿಕೆ, ಬಾಡು, ಮೀನು, ಹಣ್ಣುಗಳು, ತರಕಾರಿಗಳು, ಜೋಳ, ಬ್ರೆಡ್, ಹಿಟ್ಟು, ಹಾಲು, ತುಪ್ಪ, ಬೆಣ್ಣೆ, ಎಣ್ಣೆ ಮತ್ತು ಯಾವುದೇ ಇತರ ವಸ್ತುಗಳನ್ನು ನಿರಂತರವಾಗಿ ಮತ್ತು ಜಾಗರೂಕತೆಯಿಂದ ತಪಾಸಣೆ ಮಾಡಲು ಉಪಬಂಧವನ್ನು ಕಲ್ಪಿಸತಕ್ಕದ್ದು.

308. ತಪಾಸಣೆಯ ಉದ್ದೇಶಗಳಿಗಾಗಿ ಆಯುಕ್ತನ ಅಧಿಕಾರ.- (1) ಆಯುಕ್ತ ಅಥವಾ ಆ ಉದ್ದೇಶಕ್ಕಾಗಿ, ಲಿಖಿತದಲ್ಲಿ ಆಯುಕ್ತನಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಯು, ಯಾವುದೇ ಕಸಾಯಿಖಾನೆ ಅಥವಾ ಆಹಾರದ ಉದ್ದೇಶಕ್ಕಾಗಿ ಪ್ರಾಣಿಗಳು, ಕೋಳಿ ಅಥವಾ ಮೀನನ್ನು ಮಾರಾಟಕ್ಕಾಗಿ ತೆರೆದಿಟ್ಟಿರುವ ಯಾವುದೇ ಸ್ಥಳವನ್ನು ಅಥವಾ ಕಸಾಯಿ ನಡೆಯುತ್ತಿರುವಾಗ, ಮಾರಾಟಕ್ಕೆ ತೆರೆದಿಟ್ಟಿರುವಾಗ ಅಥವಾ ತಯಾರಿಕೆ ನಡೆಯುತ್ತಿರುವಾಗ ಹಗಲು ಅಥವಾ ರಾತ್ರಿಯ ಯಾವುದೇ ಸಮಯದಲ್ಲಿ ತಯಾರಿಕೆಯಲ್ಲಿರುವ ಅಥವಾ ಮಾರಾಟಕ್ಕಾಗಿ ತೆರೆದಿಟ್ಟಿರುವ ಆಹಾರದ ವಸ್ತುಗಳಿರುವ ಜಾಗವನ್ನು ನೋಟೀಸು ನೀಡದೆ ಪ್ರವೇಶಿಸಬಹುದು ಮತ್ತು ಆ ಸ್ಥಳವನ್ನು ಮತ್ತು ತಯಾರಿಕೆಗೆ, ಸಿದ್ಧಪಡಿಸುವಿಕೆಗೆ ಬಳಸುವ ಅಥವಾ ಅಂಥ ಯಾವುದೇ ವಸ್ತುಗಳನ್ನು ಒಳಗೊಂಡಿರುವ ಪಾತ್ರೆಗಳು ಅಥವಾ ಅಡುಗೆ ಪಾತ್ರೆಗಳನ್ನು ತಪಾಸಣೆ ಮಾಡಬಹುದು.

(2) ಆಯುಕ್ತ ಅಥವಾ ಅವನಿಂದ ಹಾಗೆ ಅಧಿಕೃತಗೊಂಡ ಯಾರೇ ವ್ಯಕ್ತಿಯು, ಯಾವುದೇ ಸ್ಥಳದಲ್ಲಿ ಪರವಾನಿಗೆ ಇಲ್ಲದೆ ಅಥವಾ ಪರವಾನಿಗೆಗೆ ಅನುಸಾರವಾಗಿರದೆ ಅನ್ಯಥಾ ಮನುಷ್ಯನ ಆಹಾರದ ಉದ್ದೇಶಕ್ಕಾಗಿ ಯಾವುದೇ ಪ್ರಾಣಿಯನ್ನು ವಧೆ ಮಾಡಲಾಗುತ್ತಿದೆ ಅಥವಾ ಯಾವುದೇ ಪ್ರಾಣಿಯ ಶವದ ಚರ್ಮವನ್ನು ಸುಲಿಯಲಾಗುತ್ತಿದೆ ಅಥವಾ ಅದನ್ನು ಕತ್ತರಿಸಲಾಗುತ್ತಿದೆ ಅಥವಾ ಮಾರಾಟಕ್ಕಾಗಿ ಯಾವುದೇ ಆಹಾರವನ್ನು ತಯಾರಿಸಲಾಗುತ್ತಿದೆ, ದಾಸ್ತಾನು ಮಾಡಲಾಗುತ್ತಿದೆ, ಸಿದ್ಧಪಡಿಸಲಾಗುತ್ತಿದೆ, ಪ್ಯಾಕು ಮಾಡಲಾಗುತ್ತಿದೆ, ಸ್ವಚ್ಛಪಡಿಸಲಾಗುತ್ತಿದೆ, ಮಾರಾಟಕ್ಕೆ ಇಡಲಾಗಿದೆ ಅಥವಾ ತೆರೆದಿಡಲಾಗಿದೆ ಅಥವಾ ಮಾರಾಟ ಮಾಡಲಾಗಿದೆ ಎಂದು ನಂಬಲು ಕಾರಣವಿದ್ದರೆ, ಅವನು ಈ ಅಧಿನಿಯಮದ ಉಪವಿಧಿಗಳ ಅಥವಾ ವಿನಿಯಮಗಳ ಯಾವುದೇ ಉಪಬಂಧವನ್ನು ಅಥವಾ ಪರವಾನಿಗೆಯ ಯಾವುದೇ ಷರತ್ತನ್ನು ಉಲ್ಲಂಘಿಸಲಾಗುತ್ತಿದೆಯೇ, ಇಲ್ಲವೇ ಎಂಬುದರ ಬಗ್ಗೆ ತಾನು ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ಸಮಯದಲ್ಲಿ ನೋಟೀಸು ಕೊಡದೆಯೇ ಅಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು.

(3) ಈ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವುದರಿಂದಾಗಿ ಅಥವಾ ಈ ಪ್ರಕರಣದ ಮೇರೆಗೆ ಯಾವುದೇ ಸ್ಥಳದೊಳಕ್ಕೆ ಪ್ರವೇಶ ಮಾಡುವುದಕ್ಕಾಗಿ ಯಾವುದೇ ಅವಶ್ಯವಾದ ಬಲವನ್ನು ಪ್ರಯೋಗಿಸುವುದರಿಂದ ಉಂಟಾದ ಯಾವುದೇ ಹಾನಿಗಾಗಿ ಅಥವಾ ಅನಾನುಕೂಲಕ್ಕಾಗಿ ಆಯುಕ್ತನ ಅಥವಾ ಅವನ ಅಧಿಕಾರದ ಮೇರೆಗೆ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿಯ ಅಥವಾ ನಗರ ಪಾಲಿಕೆಯ ವಿರುದ್ಧ ಯಾವುದೇ ಕ್ಲೇಮನ್ನು ಮಾಡಲು ಅವಕಾಶವಿರತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಚಲಾಯಿಸಿದ ಅಧಿಕಾರಗಳಿಗೆ ಸಂಬಂಧಿಸಿದಂತೆ ಯಾವ ಕಾನೂನು ವ್ಯವಹರಣೆಗಳಲ್ಲಿ ಮಾರಾಟಕ್ಕಾಗಿ ಯಾವುದೇ ಪ್ರಾಣಿಗಳು, ಕೋಳಿಗಳು, ಮೀನು ಅಥವಾ ಆಹಾರದ ಪದಾರ್ಥಗಳನ್ನು ಮಾರಾಟಕ್ಕಾಗಿ ಇಟ್ಟಿರಲಿಲ್ಲ ಅಥವಾ ತೆರೆದಿಟ್ಟಿರಲಿಲ್ಲ, ಅವುಗಳನ್ನು ಹೊತ್ತು ಮಾರುತ್ತಿರಲಿಲ್ಲ, ತಯಾರಿಸುತ್ತಿರಲಿಲ್ಲ, ಸಿದ್ಧಪಡಿಸುತ್ತಿರಲಿಲ್ಲ, ದಾಸ್ತಾನು

ಮಾಡಿರಲಿಲ್ಲ, ಪ್ಯಾಕು ಮಾಡಿರಲಿಲ್ಲ ಅಥವಾ ಸ್ವಚ್ಛಗೊಳಿಸುತ್ತಿರಲಿಲ್ಲ ಅಥವಾ ಅವುಗಳನ್ನು ಮನುಷ್ಯರ ಆಹಾರಕ್ಕಾಗಿ ಉದ್ದೇಶಿಸಿರಲಿಲ್ಲ ಎಂದು ಆರೋಪಿಸಲಾಗಿದೆಯೋ, ಆ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಅದನ್ನು ರುಜುವಾತುಪಡಿಸುವ ಹೊಣೆಯು ಹಾಗೆ ಆರೋಪಿಸುತ್ತಿರುವ ಪಕ್ಷಕಾರನ ಮೇಲೆ ಇರತಕ್ಕದ್ದು.

309. ಮುಖ್ಯ ಆಯುಕ್ತರಿಗೆ ಮೇಲ್ಮನವಿ.- (1) ಈ ಅಧ್ಯಾಯದ ಮೇರೆಗೆ ಆಯುಕ್ತನು ನೀಡಿದ ಯಾವುದೇ ನೋಟಿಸಿನಿಂದ, ತೆಗೆದುಕೊಂಡ ಕ್ರಮದಿಂದ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದಿಂದ ಬಾಧಿತನಾದ ಯಾರೇ ವ್ಯಕ್ತಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತನಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

(2) ಮುಖ್ಯ ಆಯುಕ್ತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

310. ಮೇಲ್ಮನವಿಗಳಿಗೆ ಕಾಲ ಪರಿಮಿತಿಯ ಅವಧಿ.- ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಿನ ಪರಿಮಿತಿಯ ಅವಧಿಯು ಅಂಥ ಮೇಲ್ಮನವಿಯನ್ನು ಯಾವ ಆದೇಶದ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ ಅಥವಾ ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳು ಆಗಿರತಕ್ಕದ್ದು.

311. ಹಾಜರಾಗಲು ಮತ್ತು ಸಾಕ್ಷ್ಯ ನೀಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಸಮನುಗಳು.- ಆಯುಕ್ತನು ಈ ಅಧಿನಿಯಮದ ಉಪಬಂಧಗಳ ಮೇರೆಗೆ, ತೆರಿಗೆ ವಿಧಿಸುವುದಕ್ಕೆ ಅಥವಾ ಪರಿಶೀಲನೆಗೆ ಅಥವಾ ನೋಂದಣಿಗೆ ಅಥವಾ ಯಾವುದೇ ಪರವಾನಿಗೆಯನ್ನು ಅಥವಾ ಅನುಮತಿಯನ್ನು ಕೊಡುವುದಕ್ಕೆ ಸಂಬಂಧಪಟ್ಟ ಯಾವುದೇ ಪ್ರಶ್ನೆಯ ಬಗ್ಗೆ ಸಂದರ್ಭಾನುಸಾರ ತನ್ನ ಮುಂದೆ ಹಾಜರಾಗಲು ಮತ್ತು ಸಾಕ್ಷ್ಯ ನೀಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಯಾರೇ ವ್ಯಕ್ತಿಯನ್ನು ಸಮನು ಮಾಡಬಹುದು.

312. ಪರವಾನಿಗೆ, ಇತ್ಯಾದಿಗಳನ್ನು ಪಡೆಯುವಲ್ಲಿನ ವೈಫಲ್ಯದ ಅಥವಾ ಅವುಗಳ ಉಲ್ಲಂಘನೆಯ ಪರಿಣಾಮಗಳು.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಯಾವುದೇ ಕಾರ್ಯವನ್ನು ಮಾಡಲು ನಗರ ಪಾಲಿಕೆಯ, ಸ್ಥಾಯೀ ಸಮಿತಿಯ ಅಥವಾ ಆಯುಕ್ತನ ಪರವಾನಿಗೆ ಅಥವಾ ಅನುಮತಿಯನ್ನು ಪಡೆಯುವುದು ಅಥವಾ ನಗರ ಪಾಲಿಕೆಯ ಕಚೇರಿಯಲ್ಲಿ ನೋಂದಾಯಿಸುವುದು ಅವಶ್ಯವಿದ್ದರೆ ಮತ್ತು ಅಂಥ ಕಾರ್ಯವನ್ನು ಅಂಥ ಪರವಾನಿಗೆ ಅಥವಾ ಅನುಮತಿ ಅಥವಾ ನೋಂದಣಿ ಇಲ್ಲದೆಯೇ ಮಾಡಿದ್ದರೆ, ಆಗ,-

(ಎ) ಆಯುಕ್ತನು ನೋಟೀಸು ಮೂಲಕ ಅಂಥ ಕಾರ್ಯವನ್ನು ಮಾಡಿದ ವ್ಯಕ್ತಿಯನ್ನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದ ಕಾಲದೊಳಗೆ ಆ ಕಾರ್ಯದಿಂದ ಪರಿಣಾಮಕ್ಕೊಳಗಾದ ಯಾವುದೇ ಚರ ಅಥವಾ ಸ್ಥಿರ, ಸಾರ್ವಜನಿಕ ಅಥವಾ ಖಾಸಗಿ ಸ್ವತ್ತನ್ನು ಸಂಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಬದಲಾಯಿಸುವಂತೆ, ತೆಗೆದುಹಾಕುವಂತೆ ಅಥವಾ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಅದನ್ನು ಅದರ ಮೂಲ ಸ್ಥಿತಿಗೆ ತರುವಂತೆ ಅಗತ್ಯಪಡಿಸಬಹುದು;

(ಬಿ) ಆಯುಕ್ತನು ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತಗೊಂಡ ಯಾರೇ ಅಧಿಕಾರಿಯು, ಯಾವ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಂಥ ಕಾರ್ಯವನ್ನು ಮಾಡಲಾಗಿದೆಯೋ ಆ ಕಟ್ಟಡದೊಳಗೆ ಅಥವಾ ಭೂಮಿಯೊಳಗೆ ಅಥವಾ ಅದರ ಮೇಲೆ ಸಹ ಪ್ರವೇಶಿಸಬಹುದು ಮತ್ತು ಅಂಥ ಕಾರ್ಯ ಮುಂದುವರಿಯುವುದನ್ನು ತಡೆಗಟ್ಟಲು ಅವಶ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು; ಹಾಗೂ

(ಸಿ) ಅಂಥ ಕಾರ್ಯವನ್ನು ಹಾಗೆ ಮಾಡಿದ್ದಕ್ಕೆ ಈ ಅಧಿನಿಯಮದಲ್ಲಿ ವಿಶೇಷವಾಗಿ ಯಾವುದೇ ದಂಡವನ್ನು ಉಪಬಂಧಿಸಿರದಿದ್ದರೆ ಹಾಗೆ ಆ ಕಾರ್ಯವನ್ನು ಮಾಡುವ ವ್ಯಕ್ತಿಯು ಒಬ್ಬ ಮ್ಯಾಜಿಸ್ಟ್ರೇಟರನಿಂದ ಅಪರಾಧ ನಿರ್ಣಯವಾದ ಬಳಿಕ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಕೊಟ್ಟಿರುವ ಅಧಿಕಾರವನ್ನು ಚಲಾಯಿಸುವುದರಿಂದಾಗಿ ಅಥವಾ ಈ ಪ್ರಕರಣದ ಉಪಬಂಧಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ಅವಶ್ಯವಿರುವ ಬಲಪ್ರಯೋಗ ಮಾಡಿದ್ದರಿಂದಾಗಿ ಉಂಟಾದ ಯಾವುದೇ ಹಾನಿಗೆ ಅಥವಾ ಅನಾನುಕೂಲತೆಗೆ ಆಯುಕ್ತ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಕ್ಲೇಮು ಮಾಡಲು ಅವಕಾಶವಿರತಕ್ಕದ್ದಲ್ಲ.

313. ಹೊಣೆಗಾರರಾದ ವ್ಯಕ್ತಿಗಳಿಂದ ವೆಚ್ಚಗಳ ವಸೂಲಿ ಮತ್ತು ಅಧಿಭೋಗದಾರನ ಪರಿಮಿತಿ ಅಥವಾ ಹೊಣೆಗಾರಿಕೆ.- (1) ಆಯುಕ್ತನು, ಕಟ್ಟಡಗಳ ಅಥವಾ ಭೂಮಿಗಳ ಮೇಲಿನ ತೆರಿಗೆಯಂತೆಯೇ ಯಾವ ವ್ಯಕ್ತಿಯ ಹೆಸರಿಗೆ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ನೀಡಲಾಗಿತ್ತೋ ಆ ವ್ಯಕ್ತಿಯಿಂದ ಅಥವಾ ಆ ವ್ಯಕ್ತಿಗಳ ಪೈಕಿ ಯಾರೇ ಒಬ್ಬನಿಂದ ಭರಿಸಲ್ಪಡಬಹುದಾದ ಯಾವುವೇ ಯುಕ್ತ ವೆಚ್ಚಗಳನ್ನು ವಸೂಲಿ ಮಾಡಬಹುದು ಮತ್ತು 308ನೇ ಪ್ರಕರಣದ ಮೇರೆಗೆ ಕೆಲಸವನ್ನು ಮಾಡುವಾಗ ಅಥವಾ ಕ್ರಮಗಳನ್ನು ಕೈಗೊಳ್ಳುವಾಗ ಸಂಬಂಧಪಟ್ಟ ಸ್ವತ್ತಿನ ಮೇಲೆ ಸಿಕ್ಕಿದ ಯಾವುದೇ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದು ಅಥವಾ ಅವುಗಳನ್ನು ಮಾರಬಹುದು ಮತ್ತು ಮಾರಾಟದಿಂದ ಬಂದ ಉತ್ಪತ್ತಿಯನ್ನು ಭರಿಸಬೇಕಾದ ವೆಚ್ಚಗಳ ಸಂದಾಯಕ್ಕಾಗಿ ಅಥವಾ ಸಂದಾಯ ನಿಮಿತ್ತ ವಿನಿಯೋಗಿಸಿಕೊಳ್ಳಬಹುದು.

(2) ಯಾವ ವ್ಯಕ್ತಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು, ಯಾವ ಸ್ವತ್ತಿನ ಸಂಬಂಧದಲ್ಲಿ ಅದನ್ನು ನೀಡಲಾಗಿದೆಯೋ ಆ ಸ್ವತ್ತಿನ ಖಾತೆದಾರನಾಗಿದ್ದರೆ, ಆಯುಕ್ತನು (ಅಂಥ ಖಾತೆದಾರನ ವಿರುದ್ಧ ಯಾವುದೇ ಕ್ರಮವನ್ನು ಅಥವಾ ಇತರ ವ್ಯವಹರಣೆಯನ್ನು ಪ್ರಾರಂಭಿಸಿರಲಿ ಅಥವಾ ಕೈಗೊಂಡಿರಲಿ ಅಥವಾ ಇಲ್ಲದಿರಲಿ) ಖಾತೆದಾರನ ಅಧೀನದಲ್ಲಿರುವ ಅಂಥ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಿಸುತ್ತಿರುವ ವ್ಯಕ್ತಿ ಯಾರಾದರೂ ಇದ್ದರೆ ಆ ಯಾರೇ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಮೇರೆಗೆ ಮಾಲೀಕನಿಂದ ವಸೂಲಿ ಮಾಡಬೇಕಾದ ಮೊಬಲಗಿನವರೆಗೆ ಅಥವಾ ಆಯುಕ್ತನು ಯುಕ್ತವೆಂದು ಭಾವಿಸಬಹುದಾದಂಥ ಕಡಿಮೆ ಮೊಬಲಗಿನವರೆಗೆ, ಅಂಥ ಸ್ವತ್ತಿನ ಸಂಬಂಧದಲ್ಲಿ ಅವನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ಅದು ಬಾಕಿಯಾದಂತೆಲ್ಲ, ಖಾತೆದಾರನಿಗೆ ಸಂದಾಯ ಮಾಡುವ ಬದಲು ನಗರ ಪಾಲಿಕೆಗೆ ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು ಮತ್ತು ಹಾಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಮಾಲೀಕನು ಸಂದಾಯ ಮಾಡಬಹುದಾದ ಮೊಬಲಗಿನಿಂದ ಮುರಿದುಕೊಳ್ಳತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಬೇಕೇ ಎಂಬುದನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಆಯುಕ್ತನು ಅಂಥ ಸ್ವತ್ತಿನ ಬಾಬ್ತು ಬಾಡಿಗೆಯಾಗಿ ಸ್ವತ್ತಿನ ಯಾರೇ ಅಧಿಭೋಗದಾರನು ಸಂದಾಯ ಮಾಡಬೇಕಾದ ಮೊತ್ತಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮತ್ತು ಅದನ್ನು ಯಾರಿಗೆ ಸಂದಾಯ ಮಾಡಬೇಕೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅವನನ್ನು ಅಗತ್ಯಪಡಿಸಬಹುದು ಮತ್ತು ಅಂಥ ಅಧಿಭೋಗದಾರನು ಅಂಥ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

(4) ಈ ಪ್ರಕರಣದ ಉಪಬಂಧವು, ಮೇಲೆ ಹೇಳಿದಂಥ ಯಾವುದೇ ಕೆಲಸದ ವೆಚ್ಚಗಳ ಸಂದಾಯದ ಸಂಬಂಧದಲ್ಲಿ ಯಾರೇ ಖಾತೆದಾರ ಮತ್ತು ಅಧಿಭೋಗದಾರನ ನಡುವೆ ಆಗಿರುವ ಯಾವುದೇ ಕರಾರಿಗೆ ಬಾಧಕವಾಗತಕ್ಕದ್ದಲ್ಲ.

ಅಧ್ಯಾಯ-XXIV
ನಿಯಮಗಳು, ವಿನಿಯಮಗಳು ಮತ್ತು ಉಪವಿಧಿಗಳು

314. ನಿಯಮಗಳನ್ನು ಮತ್ತು ಆದೇಶಗಳನ್ನು ರಚಿಸುವ ರಾಜ್ಯ ಸರ್ಕಾರದ ಅಧಿಕಾರ.- (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಅಥವಾ ನಗರ ಪಾಲಿಕೆ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪ್ರಕಾರ್ಯಗಳನ್ನು ಅಥವಾ ಹೊಣೆಗಾರಿಕೆಗಳನ್ನು ವಹಿಸುವಂತಹ ಅಥವಾ ಯಾವುದೇ ಇತರ ಅಧಿನಿಯಮವನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯವಾಗಿ ನಿಯಮಗಳನ್ನು ಅಥವಾ

ಆದೇಶಗಳನ್ನು ರಚಿಸುವುದು ಮತ್ತು ಅದು ನಮೂನೆಯನ್ನು ಉಪಬಂಧಿಸಬೇಕೆಂದು ಪರಿಗಣಿಸುವ ಯಾವುದೇ ವ್ಯವಹರಣೆಗಾಗಿ ನಮೂನೆಗಳನ್ನು ನಿಯಮಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಪೂರ್ವ ಪ್ರಕಟಣೆಯನ್ನು ಮಾಡಿ, ರಾಜ್ಯ ಸರ್ಕಾರವು –

(ಎ) ವಾರ್ಡ್‌ಗಳ ನಿರ್ಧರಣೆಯ ವಿಧಾನವನ್ನು ಮತ್ತು ಅವುಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ನಿಯಮಿಸುವುದಕ್ಕಾಗಿ.

(ಬಿ) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಮೀಸಲಾಗಿರುವ ಸ್ಥಾನಗಳ ಹಂಚಿಕೆಯ ವಿಧಾನವನ್ನು ಮತ್ತು ಮೀಸಲಾತಿಯನ್ನು ಆವರ್ತಗೊಳಿಸುವುದನ್ನು ನಿಯಮಿಸುವುದಕ್ಕಾಗಿ;

(ಸಿ) ಮತದಾರರ ಪಟ್ಟಿಯ ತಯಾರಿಕೆ, ಪರಿಷ್ಕರಣೆ, ಮಾರ್ಪಾಡು, ಇಂದೀಕರಣ ಮತ್ತು ಪ್ರಕಟಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು;

(ಡಿ) ಒಂದಕ್ಕಿಂತ ಹೆಚ್ಚು ಸ್ಥಾನಗಳ ಚುನಾವಣೆಯಿಂದ ಉಮೇದುವಾರಿಕೆಯನ್ನು ಹಿಂಪಡೆದುಕೊಳ್ಳಲು ನೀಡಲಾದ ನೋಟೀಸ್‌ನಲ್ಲಿ ಒಳಗೊಂಡಿರತಕ್ಕ ವಿವರಗಳನ್ನು ನಿಯಮಿಸುವುದಕ್ಕಾಗಿ;

(ಇ) ಚುನಾವಣೆಯಲ್ಲಿ ಮತಗಳನ್ನು ನೀಡತಕ್ಕ ವಿಧಾನ ಮತ್ತು ಮತಯಂತ್ರಗಳ ಮೂಲಕ ಮತಗಳನ್ನು ನೀಡತಕ್ಕ ಮತ್ತು ದಾಖಲಿಸತಕ್ಕ ವಿಧಾನವನ್ನು ನಿಯಮಿಸುವುದಕ್ಕಾಗಿ;

(ಎಫ್) ಚುನಾವಣಾ ಅರ್ಜಿಯ ಸಲ್ಲಿಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಚುನಾವಣಾ ಅರ್ಜಿಯ ವಿಲೇವಾರಿಯಲ್ಲಿ ಜಿಲ್ಲಾ ನ್ಯಾಯಾಧೀಶರು ಚಲಾಯಿಸಬೇಕಾದ ಅಧಿಕಾರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು;

(ಜಿ) ನಗರ ಪಾಲಿಕೆಯ ವಶದಲ್ಲಿದೆ ಎಂದು ಪರಿಗಣಿಸಲಾದ ಭೂಮಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ನಗರ ಪಾಲಿಕೆಗೆ ಮಂಜೂರು ಮಾಡಲು ಅಥವಾ ಸಕ್ರಮಗೊಳಿಸಲು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮತ್ತು ಅದರ ಪಾವತಿಗೆ ಒಳಪಟ್ಟ ಶುಲ್ಕಗಳು ಅಥವಾ ಕಂತನ್ನು ನಿಯಮಿಸುವುದಕ್ಕಾಗಿ.

(ಹೆಚ್) ಸ್ಥಿರ ಸ್ವತ್ತು ಮತ್ತು ಭೂಮಿಯ ಮಾರಾಟ ಅಥವಾ ವಿಲೇವಾರಿಯನ್ನು ವಿನಿಯಮಿಸುವುದಕ್ಕಾಗಿ;

(ಐ) ಪುರಸಭೆಯ ವ್ಯಾಪ್ತಿಯಲ್ಲಿ ಇರುವ ನಗರ ಭೂಮಿಯ ದಾಖಲೆಗಳನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವ ವಿಧಾನವನ್ನು ನಿಯಮಿಸುವುದಕ್ಕಾಗಿ;

(ಜೆ) ಸುಸ್ಥಿದಾರನ ಸ್ವತ್ತನ್ನು ಜಪ್ತಿ ಮಾಡಿ ಮಾರಾಟ ಮಾಡುವುದಕ್ಕಾಗಿ ವಾರೆಂಟ್‌ನ ನಮೂನೆಯನ್ನು ನಿಯಮಿಸುವುದು ಮತ್ತು ಜಪ್ತಿ ಮಾಡಲಾದ ಸ್ವತ್ತನ್ನು ಮಾರಾಟ ಮಾಡಬಹುದಾದ ವಿಧಾನವನ್ನು ನಿಯಮಿಸುವುದಕ್ಕಾಗಿ;

(ಕೆ) ನಗರ ಪಾಲಿಕೆಗೆ ಸಾಲವನ್ನು ಮಂಜೂರು ಮಾಡುವ ಮತ್ತು ನಗರ ಪಾಲಿಕೆಯು ಎತ್ತುವ ಸಾಲಕ್ಕಾಗಿ ಖಾತರಿಯನ್ನು ನೀಡುವ ಉದ್ದೇಶಕ್ಕಾಗಿ ನಗರ ಪಾಲಿಕೆಯ ಮರುಪಾವತಿ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳತಕ್ಕ ವಿಧಾನವನ್ನು ನಿಯಮಿಸುವುದಕ್ಕಾಗಿ;

(ಎಲ್) ಭೂಮಿಯ ಬಳಕೆಯ ಬದಲಾವಣೆಗೆ ಪರಿವರ್ತನೆ ಶುಲ್ಕಗಳ ದರಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಭೂಮಿಯ ಬಳಕೆಯ ಬದಲಾವಣೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕ ಮತ್ತು ಆಲಿಸತಕ್ಕ ವಿಧಾನವನ್ನು ನಿಯಮಿಸುವುದಕ್ಕಾಗಿ

- ನಿಯಮಗಳನ್ನು ರಚಿಸತಕ್ಕದ್ದು.

(3) ಈ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆಯು ಯಾವುದೇ ಉಪವಿಧಿಗಳನ್ನು ಮಾಡಲು ವಿಫಲವಾದಲ್ಲಿ ಅಥವಾ ಅದು ಮಾಡಿದ ಉಪವಿಧಿಗಳು ಅದರ ಅಭಿಪ್ರಾಯದಲ್ಲಿ ಸಮಂಜಸವಾಗಿಲ್ಲದಿದ್ದಲ್ಲಿ, ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಷ್ಟರ ಮಟ್ಟಿಗೆ ಅಂಥ ವಿಷಯಗಳಿಗೆ ಉಪಬಂಧ ಕಲ್ಪಿಸಿ

ನಿಯಮಗಳನ್ನು ರಚಿಸಬಹುದು. ಈ ಉಪಪ್ರಕರಣದಡಿ ರಚಿಸಲಾದ ನಿಯಮಗಳನ್ನು ನಗರ ಪಾಲಿಕೆಯು ಮಾಡಿದ ಯಾವುದೇ ಉಪವಿಧಿಗೆ ಸೇರಿಸಬಹುದು ಅಥವಾ ಮಾರ್ಪಡಿಸಬಹುದು ಅಥವಾ ರದ್ದುಪಡಿಸಬಹುದು.

ಪರಂತು, ಈ ಉಪ-ಪ್ರಕರಣದಡಿಯಲ್ಲಿ ಯಾವುದೇ ನಿಯಮವನ್ನು ಮಾಡುವುದಕ್ಕೂ ಮುಂಚೆ, ಸರ್ಕಾರವು ಅದನ್ನು ಮಾಡುವ ಬಗ್ಗೆ ಕಾರಣವನ್ನು ತೋರಿಸುವ ಒಂದು ಅವಕಾಶವನ್ನು ಪಾಲಿಕೆಗೆ ನೀಡತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಮಾಡಿದ ಎಲ್ಲಾ ನಿಯಮಗಳು ಮತ್ತು ಆದೇಶಗಳು, ಸರ್ಕಾರಿ ರಾಜಪತ್ರದಲ್ಲಿ ಅವುಗಳು ಪ್ರಕಟಗೊಂಡ ದಿನಾಂಕದಂದು ಅಥವಾ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(5) ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಿದ ಎಲ್ಲಾ ನಿಯಮಗಳನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಹದಿನಾಲ್ಕು ದಿನಗಳಿಗೆ ಕಡಿಮೆಯಲ್ಲದ ಅವಧಿಗಾಗಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ರಾಜ್ಯ ವಿಧಾನಮಂಡಲದ ಸದನವು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಸದನವು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಡಾದ ರೂಪದಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಡು ಅಥವಾ ರದ್ದಿಯಾತಿಯು, ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

315. ವಿನಿಯಮಗಳನ್ನು ರಚಿಸುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ.- ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗಳು, ಅವುಗಳ ಸಂಬಂಧಪಟ್ಟ ಭಾಗಗಳಲ್ಲಿ, ಈ ಅಧಿನಿಯಮದ ಅಥವಾ ಯಾವುದೇ ಇತರ ಅಧಿನಿಯಮದಡಿಯಲ್ಲಿ ಅದಕ್ಕೆ ವಹಿಸಲಾದ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಈ ಅಧಿನಿಯಮದ ಅಥವಾ ರಾಜ್ಯ ಸರ್ಕಾರವು ರಚಿಸಲಾದ ನಿಯಮಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು,-

(ಎ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ನಗರ ಪಾಲಿಕೆಯ ಸಭೆಯ ಕಾರ್ಯಕಲಾಪಗಳನ್ನು ನಡೆಸುವ ಕಾರ್ಯವಿಧಾನವನ್ನು ನಿಯಮಿಸುವುದು;

(ಬಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ನಗರ ಪಾಲಿಕೆಯ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸದಸ್ಯರು ಪ್ರಶ್ನೆಯನ್ನು ಕೇಳುವ ಹಾಗೂ ನಿರ್ಣಯಗಳನ್ನು ಮಂಡಿಸುವ ವಿಧಾನವನ್ನು ನಿಯಮಿಸುವುದು;

(ಸಿ) ಮಹಾಪೌರರ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಮಂಡನೆ ಮಾಡುವ ಮತ್ತು ಪರ್ಯಾಲೋಚಿಸುವ ವಿಧಾನವನ್ನು ನಿಯಮಿಸುವುದು;

(ಡಿ) ರಚಿಸಲಾದ ಸಮಿತಿಗಳ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಹಾಗೂ ಸಭೆಗಳನ್ನು ನಡೆಸುವ ಕಾರ್ಯವಿಧಾನವನ್ನು ನಿಯಮಿಸುವುದು;

(ಇ) ಲೆಕ್ಕಪತ್ರಗಳನ್ನು ಇರಿಸಬೇಕಾದ ವಿಧಾನ ಮತ್ತು ನಮೂನೆಯನ್ನು ನಿಯಮಿಸುವುದಕ್ಕಾಗಿ ಲೆಕ್ಕಶೀರ್ಷಿಕೆಯನ್ನು ನಿಯಮಿಸುವುದು;

(ಎಫ್) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ನಗರ ಪಾಲಿಕೆಯ ನಿಧಿಗಳಿಂದ ಪಾವತಿಗಳನ್ನು ಮಾಡಬೇಕಾದ ವಿಧಾನವನ್ನು ನಿಯಮಿಸುವುದು;

(ಜಿ) ಆಯವ್ಯಯ ಅಂದಾಜನ್ನು ತಯಾರಿಸುವುದು, ಸಲ್ಲಿಸುವುದು, ಅಂಗೀಕರಿಸುವುದು, ಲೆಕ್ಕಪತ್ರಗಳು ಮತ್ತು ಜಮಾ ಖರ್ಚು ಪಟ್ಟಿ ಇತ್ಯಾದಿಗಳ ತಯಾರಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ

ಹಣವನ್ನು ಒಂದು ಲೆಕ್ಕ ಶೀರ್ಷಿಕೆಯಿಂದ ಇನ್ನೊಂದು ಲೆಕ್ಕ ಶೀರ್ಷಿಕೆಗೆ ವರ್ಗಾಯಿಸುವುದು.

(ಹೆಚ್) ತೆರಿಗೆಗಳನ್ನು ವಸೂಲಿ ಮಾಡಲು ಮತ್ತು ವಿಧಿಸಲು ದಿನಾಂಕ, ದರ ಮತ್ತು ವಿಧಾನವನ್ನು ನಿಯಮಿಸುವುದು;

(ಐ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ನಗರ ಪಾಲಿಕೆಯ ದಿನನಿತ್ಯದ ಲೆಕ್ಕಪತ್ರಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ವಿಧಾನವನ್ನು ನಿಯಮಿಸುವುದು.

(ಜೆ) ತೆರಿಗೆ ಅಂದಾಜುಗಾರನ ಕೋರಿಕೆಯ ಮೇಲೆ ಖಾತಾದಾರರು ಮತ್ತು ಅಧಿಭೋಗದಾರರು ಯಾವ ನಮೂನೆಯಲ್ಲಿ ವಿವರಪಟ್ಟಿಯನ್ನು ಒದಗಿಸಬೇಕೋ ಆ ವಿವರ ಪಟ್ಟಿಕೆಗಳ ನಮೂನೆಯನ್ನು ನಿಯಮಿಸುವುದು.

(ಕೆ) ಈ ಅಧಿನಿಯಮದ ಉದ್ದೇಶಕ್ಕಾಗಿ ಖಾಸಗಿ ವಲಯದ ಸಹಭಾಗಿತ್ವ ಒಪ್ಪಂದಗಳು, ಸೇವಾ ಪೂರೈಕೆದಾರರ ಒಪ್ಪಂದಗಳ ಮಾದರಿಗಳನ್ನು ನಿಯಮಿಸುವುದು;

(ಎಲ್) ಮಾಸ್ಟರ್ ಪ್ಲಾನ್ (ಮಹಾ ಯೋಜನೆ) ಮತ್ತು ಕಾರ್ಯತಂತ್ರ ಪ್ರಾದೇಶಿಕ ಯೋಜನೆಯಲ್ಲಿ ಅಳವಡಿಸಬೇಕಾದ ಅಧ್ಯಾಯಗಳು, ಮಹತ್ವ ಮತ್ತು ಯೋಜನೆಗಳನ್ನು ನಿಯಮಿಸುವುದು;

(ಎಂ) ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಕಟ್ಟಡಗಳು ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಸಂಸ್ಥೆಯ, ಕಂಪನಿಯ ಶಾಸನಬದ್ಧ ನಿಕಾಯಗಳಲ್ಲಿ ಮಳೆ ನೀರು ಕೊಯ್ಲು ಸಂರಚನೆಯನ್ನು ಉಪಬಂಧಿಸತಕ್ಕ ವಿಧಾನ ಮತ್ತು ಸಮಯವನ್ನು ನಿಯಮಿಸುವುದು.

316. ಮಾದರಿ ಉಪವಿಧಿಗಳನ್ನು ರಚಿಸುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ಹಾಗೂ ನಗರ ಪಾಲಿಕೆಗಳ ಮೂಲಕ ಅಂಥ ಉಪವಿಧಿಗಳ ಅಳವಡಿಕೆ.- (1) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಒಂದು ತಿಂಗಳಿಗೆ ಕಡಿಮೆಯಿಲ್ಲದೆ ಅವಧಿಗೆ ಕರಡಿನ ಪೂರ್ವ ಪ್ರಕಟಣೆಯ ತರುವಾಯ ಎಲ್ಲಾ ನಗರ ಪಾಲಿಕೆಗಳಿಗಾಗಿ ಸಾಮಾನ್ಯ ಮಾದರಿ ಉಪವಿಧಿಗಳನ್ನು ರಚಿಸಬಹುದು.

(2) ನಗರ ಪಾಲಿಕೆಯು ನಿರ್ಣಯದ ಮೂಲಕ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಾದರಿ ಉಪವಿಧಿಯನ್ನು ಅಳವಡಿಸಿಕೊಳ್ಳಬಹುದು ಹಾಗೂ ಅಂಥ ಉಪವಿಧಿಗಳು ಪರಿಷತ್ತು ನಿಯಮಿಸಲಾದ ವಿಧಾನದಲ್ಲಿ ಪ್ರಕಟಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ನಗರ ಪಾಲಿಕೆ ಪ್ರದೇಶದಲ್ಲಿ ಜಾರಿಗೆ ಬರತಕ್ಕದ್ದು.

(3) ನಗರ ಪಾಲಿಕೆಯು ಯಾವುದೇ ಮಾರ್ಪಾಡುಗಳಿಗೆ ಒಳಪಟ್ಟು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾದರಿ ಉಪವಿಧಿಗಳನ್ನು ಅಳವಡಿಸಿಕೊಳ್ಳಲು ಪ್ರಸ್ತಾವಿಸಿದಲ್ಲಿ, ಅಂಥ ಉಪವಿಧಿಗಳನ್ನು ಪರಿಷತ್ತಿನ ಮೂಲಕ ಮಾಡಲು ಪ್ರಸ್ತಾವಿಸಲಾದ ಉಪವಿಧಿಗಳೆಂಬಂತೆ ಈ ಅಧಿನಿಯಮದಡಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು. ಅದರ ಮೇಲೆ ಮಾದರಿ ಉಪವಿಧಿಗಳು ಅಂಥ ಮಾರ್ಪಾಡುಗಳಿಗೆ ಒಳಪಟ್ಟು ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸಿರದಿದ್ದಲ್ಲಿ, ಅಂಥ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) (ಎ) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಯಾವುದೇ ನಗರ ಪಾಲಿಕೆಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಉಪವಿಧಿಗಳನ್ನು, ಪೌರ ಪರಿಷತ್ತಿನ ನಿರ್ದೇಶನ ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿಗಿಂತ ಕಡಿಮೆಯಿರದ ಅವಧಿಯೊಳಗಾಗಿ ಅಳವಡಿಸಿಕೊಳ್ಳಲು ಆದೇಶದ ಮೂಲಕ ನಿರ್ದೇಶಿಸಬಹುದು.

(ಬಿ) ನಗರ ಪಾಲಿಕೆಯು ಮಾರ್ಪಾಡುಗಳ ಸಹಿತ ಅಥವಾ ರಹಿತವಾಗಿ ಮಾದರಿ ಉಪವಿಧಿಗಳ ಅಳವಡಿಕೆಗಾಗಿ ಯಾವುದೇ ಕ್ರಮ ತೆಗೆದುಕೊಳ್ಳುವಲ್ಲಿ ವಿಫಲವಾದಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಸದರಿ ನಗರ ಪಾಲಿಕೆಯ ಪ್ರದೇಶದಲ್ಲಿ ಸದರಿ ಮಾದರಿ ಉಪವಿಧಿಗಳು ಜಾರಿಗೆ

ಬರತಕ್ಕದ್ದು ಎಂದು ಅಧಿಸೂಚನೆ ಮೂಲಕ ಘೋಷಿಸಬಹುದು ಹಾಗೂ ತದನುಸಾರ ಅಂಥ ಉಪವಿಧಿಗಳು ಜಾರಿಗೆ ಬರತಕ್ಕದ್ದು.

(5) 318ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು.

317. ಉಪವಿಧಿಗಳನ್ನು ರಚಿಸಲು ನಗರ ಪಾಲಿಕೆಯ ಹೆಚ್ಚಿನ ಅಧಿಕಾರ.- ಪ್ರತಿಯೊಂದು ನಗರ ಪಾಲಿಕೆಯು, ಸರ್ಕಾರದ ಅನುಮೋದನೆಯೊಂದಿಗೆ, ಈ ಕೆಳಕಂಡವುಗಳ ಕುರಿತು ಅಧಿನಿಯಮಕ್ಕೆ ಅಥವಾ ರಾಜ್ಯ ಸರ್ಕಾರದಿಂದ ರಚಿಸಲಾದ ನಿಯಮಗಳಿಗೆ ಅಸಂಗತವಲ್ಲದ ರೀತಿಯಲ್ಲಿ ಉಪವಿಧಿಗಳನ್ನು ರಚಿಸತಕ್ಕದ್ದು.

(ಎ) ಈ ಅಧಿನಿಯಮದ ಮೇರೆಗೆ ತೆರಿಗೆಗಳನ್ನು ವಿಧಿಸುವುದು, ವಸೂಲಿ ಮಾಡುವುದು, ತೆರಿಗೆ ನಿರ್ಧರಣೆ ಮತ್ತು ಸಂಗ್ರಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು;

(ಬಿ) ಈ ಅಧಿನಿಯಮದ ಮೇರೆಗೆ ಶುಲ್ಕಗಳು ಮತ್ತು ದಂಡಗಳನ್ನು ವಿಧಿಸುವುದು, ವಸೂಲಿ ಮಾಡುವುದು ಮತ್ತು ಸಂಗ್ರಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು;

(ಸಿ) ಘನ ಮತ್ತು ಜೈವಿಕ-ವೈದ್ಯಕೀಯ ತ್ಯಾಜ್ಯದ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿಯಮಿಸುವುದಕ್ಕಾಗಿ ಎಲ್ಲಾ ರೀತಿಯ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸುವುದಕ್ಕಾಗಿ;

(ಡಿ) ನಗರ ಪಾಲಿಕೆಯಿಂದ ನೇಮಿಸಿಕೊಳ್ಳಬೇಕಾದ ಅಧಿಕಾರಿಗಳು ಮತ್ತು ನೌಕರರ ಸಿಬ್ಬಂದಿಯನ್ನು ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರ ಸಂಬಂಧಿತ ಪದನಾಮಗಳು, ಕರ್ತವ್ಯಗಳು, ವೇತನಗಳು, ಶುಲ್ಕಗಳು ಅಥವಾ ಇತರ ಭತ್ಯೆಗಳನ್ನು ನಿರ್ಧರಿಸುವ ಕುರಿತು;

(ಇ) ಸಾಮಾನ್ಯವಾಗಿ ಪೌರಾಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅದರ ಅಧಿಕಾರಿ ಮತ್ತು ನೌಕರರ ಮಾರ್ಗದರ್ಶನಕ್ಕಾಗಿ;

(ಎಫ್) ಭದ್ರತೆಯ ಅಗತ್ಯವನ್ನು ಯಥೋಚಿತವೆಂದು ಪರಿಭಾವಿಸಬಹುದಾದ ಯಾರೇ ಅಧಿಕಾರಿ ಅಥವಾ ನೌಕರನು ಒದಗಿಸಬೇಕಾದ ಭದ್ರತೆಯ ಪ್ರಮಾಣ ಮತ್ತು ಸ್ವರೂಪವನ್ನು ನಿಗದಿಪಡಿಸುವುದಕ್ಕಾಗಿ;

(ಜಿ) ಯಾರೇ ಅಧಿಕಾರಿ ಅಥವಾ ನೌಕರನನ್ನು ನೇಮಿಸುವ, ವರ್ಗಾವಣೆ ಮಾಡುವ, ದಂಡಿಸುವ ಅಥವಾ ವಜಾಗೊಳಿಸುವ ವಿಧಾನ ಮತ್ತು ಷರತ್ತುಗಳನ್ನು ನಿರ್ಧರಿಸುವುದು ಮತ್ತು ಯಾರೇ ಅಧಿಕಾರಿ ಅಥವಾ ನೌಕರನನ್ನು ನೇಮಿಸುವ, ವರ್ಗಾವಣೆ ಮಾಡುವ, ದಂಡ ವಿಧಿಸುವ, ಅಮಾನತ್ತಿನ ಅವಧಿಯನ್ನು ಕಡಿಮೆಗೊಳಿಸುವ ಅಥವಾ ವಜಾಗೊಳಿಸುವ ಅಧಿಕಾರಗಳನ್ನು ನಿಯಮಗಳಲ್ಲಿ ಗೊತ್ತುಪಡಿಸಿದ ಅಧಿಕಾರಿಗಳಿಗೆ ನಿಯೋಜಿಸುವುದು;

(ಹೆಚ್) ಅಧಿಕಾರಿಗಳಿಗೆ ಅಥವಾ ನೌಕರರುಗಳಿಗೆ ರಜೆ ನೀಡುವುದನ್ನು ನಿಯಂತ್ರಿಸುವುದು ಮತ್ತು ರಜೆಯಲ್ಲಿರುವಾಗ ಅವರ ಕಾರ್ಯನಿರ್ವಹಿಸಲು ನೇಮಕಗೊಂಡ ಯಾರೇ ವ್ಯಕ್ತಿಗೆ ಪಾವತಿಸಬೇಕಾದ ಸಂಭಾವನೆ ಯಾವುದಾದರೂ ಇದ್ದಲ್ಲಿ, ಅದನ್ನು ನಿಗದಿಪಡಿಸುವುದು; ಮತ್ತು

(ಐ) ನಗರ ಪಾಲಿಕೆಯಿಂದ ಅಥವಾ ನಗರ ಪಾಲಿಕೆಯ ಅನುಮೋದನೆಯೊಂದಿಗೆ, ಸದರಿ ಅಧಿಕಾರಿಗಳು ಮತ್ತು ನೌಕರರಿಂದ ಸ್ಥಾಪಿಸಬಹುದಾದ ಯಾವುದೇ ಪಿಂಚಣಿ ಅಥವಾ ಭವಿಷ್ಯನಿಧಿಗೆ, ಅಂಥ ನಿಯಮಗಳಲ್ಲಿ ಗೊತ್ತುಪಡಿಸಬಹುದಾದ ಅಂಥ ದರಗಳು ಮತ್ತು ಅಂಥ ಷರತ್ತಿಗೆ ಒಳಪಟ್ಟು ವಂತಿಗೆಗಳನ್ನು ಪಾವತಿಸಲು ಅಧಿಕಾರ ನೀಡುವುದು.

318. ವಿನಿಯಮಗಳನ್ನು ರಚಿಸುವ ನಗರ ಪಾಲಿಕೆಯ ಅಧಿಕಾರ.- (1) ಪ್ರತಿಯೊಂದು ನಗರ ಪಾಲಿಕೆಯು ಕಾಲಕಾಲಕ್ಕೆ, ಸರ್ಕಾರದ ಅನುಮೋದನೆಯೊಂದಿಗೆ ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸುವುದು.

(i) ನಗರ ಪಾಲಿಕೆಯ ನಿಧಿಯಿಂದ ಪಾವತಿಗಳನ್ನು ವಿನಿಯಮಿಸುವುದಕ್ಕಾಗಿ;

(ii) ಈ ಅಧಿನಿಯಮದ ಮೇರೆಗೆ ಬಳಕೆದಾರರ ಶುಲ್ಕಗಳನ್ನು, ವಿಧಿಸುವುದು, ವಸೂಲಿ ಮಾಡುವುದು, ಮೌಲ್ಯಮಾಪನ ಮತ್ತು ಸಂಗ್ರಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿಯಮಿಸುವುದಕ್ಕಾಗಿ;

(iii) ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಗತ ಉಪಯುಕ್ತತೆಗಳ ವಿವರಣೆ ಮತ್ತು ಅಗ್ನಿಶಾಮಕ ನೀರಿನ ಕೊಳವೆ ಮಾರ್ಗಗಳು ಮತ್ತು ಒಳಚರಂಡಿ ಮ್ಯಾನ್ ಹೋಲ್ ಗಳ ನಕ್ಷೆಗಳನ್ನು ಇಟ್ಟುಕೊಳ್ಳುವ ವಿಧಾನ ಮತ್ತು ರೀತಿಯನ್ನು ನಿಯಮಿಸುವುದಕ್ಕಾಗಿ;

(iv) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬೂತ್ ಅಥವಾ ಇತರ ಯಾವುದೇ ರಚನೆಯನ್ನು ತಾತ್ಕಾಲಿಕವಾಗಿ ನಿರ್ಮಿಸಲು ಅನುಮತಿಯನ್ನು ವಿನಿಯಮಿಸುವುದಕ್ಕಾಗಿ;

(v) ರಸ್ತೆ, ಚರಂಡಿ, ಅಥವಾ ಆವರಣದ ನಿರ್ಮಾಣ ಅಥವಾ ದುರಸ್ತಿಯ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳಿಗೆ ಒಳಪಟ್ಟ ಷರತ್ತು ಮತ್ತು ನಿಬಂಧನೆಗಳನ್ನು ನಿಯಮಿಸುವುದಕ್ಕಾಗಿ;

(vi) ಎಲ್ಲಾ ರೀತಿಯ ಕಟ್ಟಡಗಳ ನಿರ್ಮಾಣವನ್ನು ವಿನಿಯಮಿಸುವುದಕ್ಕಾಗಿ;

(vii) ಪ್ಲಂಬರ್‌ರಾಗಿ ಕಾರ್ಯನಿರ್ವಹಿಸಲು ಪರವಾನಿಗೆ ಬಯಸುವ ವ್ಯಕ್ತಿಯ ತಾಂತ್ರಿಕ ಅರ್ಹತೆಗಳು ಮತ್ತು ಅನುಭವವನ್ನು ನಿರ್ಧರಿಸುವುದಕ್ಕಾಗಿ;

(viii) ಈ ಅಧಿನಿಯಮದ ಮೇರೆಗೆ ಕಟ್ಟಡದ ಪ್ರಕ್ಷೇಪಗಳನ್ನು ವಿನಿಯಮಿಸುವುದಕ್ಕಾಗಿ;

(ix) ಮಾರುಕಟ್ಟೆಗಳು, ಸಿದ್ಧವಸ್ತುಗಳ ಮಾರಾಟಕ್ಕೆ ಬಳಸುವ ಸಾರ್ವಜನಿಕ ಸ್ಥಳಗಳು ಮತ್ತು ಕಸಾಯಿಖಾನೆಗಳು, ಮಾರಾಟ ಅಥವಾ ಬಾಡಿಗೆಗೆ ಅಥವಾ ಮಾರಾಟಕ್ಕಿರುವ ಪ್ರಾಣಿಗಳು ಅಥವಾ ಮಾರಾಟ ಮಾಡಿದ ಉತ್ಪನ್ನಗಳಿಗಾಗಿ ಮತ್ತು ಅದರಲ್ಲಿ ವ್ಯವಹಾರದ ಸರಿಯಾದ ಮತ್ತು ಸ್ವಚ್ಛ ನಿರ್ವಹಣೆಗಾಗಿ ಬಳಸುವ ಎಲ್ಲಾ ಸ್ಥಳಗಳ ನಿಯಂತ್ರಣ ಮತ್ತು ಪರಿಶೀಲನೆಗಾಗಿ; ಮುನ್ಸಿಪಾಲಿಟಿಯ ಮಾರುಕಟ್ಟೆಗಳಲ್ಲಿ ಹಣ್ಣುಗಳು ಮತ್ತು ತರಕಾರಿಗಳ ಮಾರಾಟವನ್ನು ಅಥವಾ ನಗರ ಪಾಲಿಕೆಗೆ ಸೇರಿದ ಯಾವುದೇ ಸ್ಥಳದ ಬಳಕೆಗೆ ವಿಧಿಸಬೇಕಾದ ಇತರ ಶುಲ್ಕಗಳನ್ನು ವಿನಿಯಮಿಸುವುದಕ್ಕಾಗಿ;

(x) ಯಾವ ಷರತ್ತುಗಳ ಮೇಲೆ ಅಥವಾ ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ಯಾವ ಪ್ರದೇಶಗಳು ಮತ್ತು ಸ್ಥಳಗಳ ಸಂಬಂಧದಲ್ಲಿ ನಗರ ಪಾಲಿಕೆಗೆ ಸೇರದ ಯಾವುದೇ ಸ್ಥಳದ ಬಳಕೆಗಾಗಿ ಪರವಾನಿಗೆಗಳನ್ನು ನೀಡಬಹುದೋ, ನಿರಾಕರಿಸಬಹುದೋ, ಅಮಾನತ್ತಿನಲ್ಲಿಡಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳು, ಸಂದರ್ಭ ಸನ್ನಿವೇಶಗಳು ಮತ್ತು ಪ್ರದೇಶ ಅಥವಾ ಸ್ಥಳಗಳನ್ನು ನಿಯಮಿಸುವುದು:

(ಎ) ಕಸಾಯಿ ಖಾನೆ;

(ಬಿ) ಮಾನವನ ಆಹಾರಕ್ಕಾಗಿ ಉದ್ದೇಶಿಸಲಾದ ಪ್ರಾಣಿಗಳ ಅಥವಾ ಮಾಂಸದ ಅಥವಾ ಮೀನುಗಳ ಮಾರಾಟಕ್ಕಾಗಿ ಮಾರುಕಟ್ಟೆ ಅಥವಾ ಅಂಗಡಿ ಅಥವಾ ಹಣ್ಣುಗಳು ಅಥವಾ ತರಕಾರಿಗಳ ಮಾರಾಟದ ಮಾರುಕಟ್ಟೆ.

(ಸಿ) ಡೈರಿ, ಹೋಟೆಲ್, ರೆಸ್ಟೋರೆಂಟ್, ಭೋಜನಗೃಹ, ಕಾಫಿ-ಹೌಸ್, ಸಿಹಿ ಅಂಗಡಿ, ಬೇಕರಿ, ಶಿಬಿರ-ಪ್ರದೇಶ, ಸಾರಾಯಿ, ದೋಬಿ-ಘಾಟ್, ಹಿಟ್ಟಿನ ಗಿರಣಿ, ಸಾ ಮಿಲ್, ಐಸ್-ಕ್ಯಾಂಡಿ ಫ್ಯಾಕ್ಟರಿ, ಆಹಾರ ಧಾನ್ಯ, ಗೋದಾಮು, ನಗರ ಪಾಲಿಕೆಯ ಗೃಹ, ಸಾರ್ವಜನಿಕ ಅಥವಾ ಮಾನ್ಯತೆ ಪಡೆದ ನಿಯಂತ್ರಣದಲ್ಲಿರುವ ವಿದ್ಯಾರ್ಥಿ ನಿಲಯಗಳನ್ನು ಹೊರತುಪಡಿಸಿ ಇತರೆ ವಸತಿ-ಗೃಹ ಅಥವಾ ಐಸ್ ಅಥವಾ ಸೋಡಾ ಮೊದಲಾದ ಅನಿಲ ಮಿಶ್ರಿತ ಪಾನೀಯ ತಯಾರಿಕೆಗಾಗಿ;

(ಡಿ) ತೈಲ ಉತ್ಪಾದನೆ ಅಥವಾ ತಯಾರಿಕೆಗಾಗಿ ಇರುವ ಸ್ಥಳ;

(ಇ) ಧಾನ್ಯ ಅಥವಾ ಕಡಲೆಕಾಳನ್ನು ದೊಡ್ಡ ಪ್ರಮಾಣದಲ್ಲಿ ಒಣಗಿಸಲು: ಅಥವಾ

(ಎಫ್) ಅವರು ಪರವಾನಿಗೆಯನ್ನು ನೀಡುವುದಕ್ಕಾಗಿ ನಿಯಮಿಸಬಹುದಾದ ಯಾವುದೇ ಇತರ ಉದ್ದೇಶಕ್ಕಾಗಿ ಮತ್ತು ಮೇಲೆ ಹೇಳಿದಂತೆ ಬಳಸಿದ ಯಾವುದೇ ಸ್ಥಳದಲ್ಲಿ ಅಲ್ಲಿ ಶುಚಿತ್ವವನ್ನು ಕಾಪಾಡಿಕೊಂಡು ಬರಲು ಅದರಿಂದ ಉಂಟಾಗುವ ಯಾವುದೇ ಹಾನಿಕಾರಕ, ಆಕ್ರಮಣಕಾರಿ ಅಥವಾ ಅಪಾಯಕಾರಿ ಪರಿಣಾಮವನ್ನು ಕಡಿಮೆ ಮಾಡುವ ಹಾಗೆ ವ್ಯವಹಾರ ನಡೆಸುವಿಕೆಯ ತಪಾಸಣೆ ಮತ್ತು ನಿಯಂತ್ರಣಕ್ಕಾಗಿ ಅವಕಾಶ ಕಲ್ಪಿಸುವುದು; ಅಥವಾ;

(xi) ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನು ತಡೆಗಟ್ಟಲು ಅಗತ್ಯವಿರಬಹುದಾದಂಥ ಉದ್ದೇಶಕ್ಕಾಗಿ ಕುದುರೆಗಳು, ಒಂಟೆಗಳು, ಕತ್ತೆಗಳು, ಕುರಿಗಳು ಅಥವಾ ಮೇಕೆಗಳನ್ನು, ಅವುಗಳ ಸಂಖ್ಯೆ ಮತ್ತು ಬಳಸುವ ಸ್ಥಳಗಳಿಗೆ ಸಂಬಂಧಿಸಿದಂತೆ ಅಂಥ ಉಪವಿಧಿಗಳಲ್ಲಿ ನಿಯಮಿಸಲಾದಂಥ ನಿಯಮಗಳಿಗೆ ಅನುಸಾರವಾಗಿದ್ದ ಹೊರತು ಬೇರೆ ರೀತಿಯಲ್ಲಿ ಅವುಗಳನ್ನು ಸಾಕುವುದು ಅಥವಾ ಮೇಯಿಸುವುದನ್ನು ನಿಷೇಧಿಸುವುದು.

(xii) ಹಾಲು ಜಾನುವಾರುಗಳ ತಪಾಸಣೆಗಾಗಿ ಮತ್ತು ಡೈರಿ ಕೆಲಸಗಾರರು ಅಥವಾ ಹಾಲು ಮಾರಾಟಗಾರರ ವ್ಯಾಪಾರವನ್ನು ಅನುಸರಿಸುವ ಉದ್ಯೋಗವನ್ನು ಮಾಡುವ ವ್ಯಕ್ತಿಗಳಿಗಾಗಿ, ಡೈರಿಗಳು ಮತ್ತು ದನದ ಕೊಟ್ಟಿಗೆಗಳ ನಿರ್ಮಾಣದ ವಿಸ್ತೀರ್ಣಗಳು, ವಾತಾಯನ ವ್ಯವಸ್ಥೆ, ಬೆಳಕು, ಶುಚಿತ್ವ, ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜನ್ನು ನಿಯಮಿಸುವುದು ಮತ್ತು ವಿನಿಯಮಿಸುವುದು;

(xiii) ಹಾಲು ಮಾರಾಟಗಾರರು ಅಥವಾ ಬೆಣ್ಣೆ-ವ್ಯಾಪಾರಿಗಳು, ಹಾಲು ಅಥವಾ ಬುಲ್ಲರ್ ಗಾಗಿ ಬಳಸುವ ಹಾಲು ಮತ್ತು ಪಾತ್ರೆಗಳ, ಹಾಲಿನ ಅಂಗಡಿಗಳ ಸ್ವಚ್ಛತೆ ಕಾಪಾಡುವುದು.

(xiv) ಜನನ, ಮರಣ ಮತ್ತು ವಿವಾಹಗಳ ನೋಂದಣಿಗಾಗಿ ಮತ್ತು ನಗರ ಪಾಲಿಕೆಯೊಳಗೆ ಜನಗಣತಿಯನ್ನು ಕೈಗೊಳ್ಳುವುದು ಮತ್ತು ಅಂಥ ನೋಂದಣಿ ಅಥವಾ ಜನಗಣತಿಯನ್ನು ಪರಿಣಾಮಕಾರಿಯಾಗಿ ಮಾಡಲು ಅಗತ್ಯವಾದ ಮಾಹಿತಿಯ ಪೂರೈಕೆಯನ್ನು ಜಾರಿಗೊಳಿಸುವುದು;

(xv) ಸತ್ತ ಪ್ರಾಣಿಗಳ ಮತ್ತು ಸತ್ತ ಪ್ರಾಣಿಗಳ ಕಳೇಬರಗಳ ವಿಲೇವಾರಿ ಮತ್ತು ಎಲ್ಲಾ ಸ್ಥಳಗಳ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮತ್ತು ಸುರಕ್ಷಿತ ನೈರ್ಮಲ್ಯ ಸ್ಥಿತಿಯಲ್ಲಿ ವಿನಿಯಮಿಸುವುದು, ಸತ್ತವರ ವಿಲೇವಾರಿಗಾಗಿ ಅಂಥ ಸ್ಥಳಗಳ ಬಳಕೆಗೆ ಹಕ್ಕುಳ್ಳ ಸಮುದಾಯ ಅಥವಾ ಸಮುದಾಯದ ಭಾಗದ ಧಾರ್ಮಿಕ ಬಳಕೆಗಳಿಗೆ ಯುಕ್ತ ಗೌರವ ನೀಡುವುದು.

(xvi) ಅಪಾಯಕಾರಿ ಕಾಯಿಲೆಯ ಯಾವುದೇ ಪ್ರಕರಣಗಳ ಮಾಹಿತಿಯ ಪೂರೈಕೆಯನ್ನು ಜಾರಿಗೊಳಿಸುವುದು ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಕೈಗೊಳ್ಳುವುದು.

(xvii) ನಗರ ಪಾಲಿಕೆಯ ನಿವಾಸಿಗಳು ಅದರಲ್ಲಿ ವಿಧಿಸಲಾದ ಯಾವುದೇ ತೆರಿಗೆಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಅಂಥ ಮಾಹಿತಿಯ ಪೂರೈಕೆಯನ್ನು ಜಾರಿಗೊಳಿಸುವುದು;

(xviii) ನೈರ್ಮಲ್ಯ ಮತ್ತು ಸಂರಕ್ಷಣೆಯನ್ನು ವಿನಿಯಮಿಸಲು ಪುರಸಭೆಯ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ನಾನ ಮತ್ತು ಬಟ್ಟೆ ತೊಳೆಯುವ ಸ್ಥಳಗಳ ಬಳಕೆಯನ್ನು ವಿನಿಯಮಿಸುವುದು;

(xix) ಮನೆರಹಿತರಿಗೆ ಉದ್ದೇಶಿಸಿರುವ ಮನೆಗಳ ನಿರ್ಮಾಣ, ಬಳಕೆ ಮತ್ತು ವಿಲೇವಾರಿಗಾಗಿ ಷರತ್ತುಗಳನ್ನು ವಿನಿಯಮಿಸುವುದು;

(xx) ಸಾರ್ವಜನಿಕ ರಸ್ತೆಗಳಲ್ಲಿ ತಾತ್ಕಾಲಿಕ ಉದ್ಯೋಗ ಅಥವಾ ಪ್ರಕ್ಷೇಪಣೆಗಳ ಸೃಜನೆಗೆ ಅನುಮತಿ ನೀಡಬಹುದಾದ ಷರತ್ತುಗಳನ್ನು ವಿನಿಯಮಿಸುವುದು;

(xxi) ಸ್ಥಿರತೆಯನ್ನು ಕಾಪಾಡಿಕೊಂಡು ಬರುವ ಮತ್ತು ಆಯಾಸಗಳನ್ನು(tires) ತಡೆಗಟ್ಟುವ ಉದ್ದೇಶಗಳಿಗಾಗಿ ಹಾಗೂ ಆರೋಗ್ಯದ ಉದ್ದೇಶಗಳಿಗಾಗಿ ಹೊಸ

ಕಟ್ಟಡಗಳ ಮೇಲು ಪಾಯಗಳು, ಗೋಡೆಗಳು, ಬುನಾದಿಗಳು, ಮಹಡಿಗಳು, ಛಾವಣಿಗಳು ಮತ್ತು ಚಿಮಣಿಗಳ ರಚನೆ ಮತ್ತು ವಿಸ್ತೀರ್ಣಗಳನ್ನು ವಿನಿಯಮಿಸುವುದು;

(xxii) ಧಾನ್ಯದ ಮಳಿಗೆಗಳು ಅಥವಾ ಧಾನ್ಯದ ಅಂಗಡಿಗಳಿಗಾಗಿ ಕಟ್ಟಡಗಳ ನಿರ್ಮಾಣ ಅಥವಾ ಬಳಕೆಯನ್ನು, ಕಟ್ಟಡಗಳ ನಿರ್ಮಾಣಕ್ಕಾಗಿ ನಿವೇಶನಗಳ ಬಳಕೆಯನ್ನು ಮತ್ತು ವಸತಿ ಉದ್ದೇಶಗಳಿಗಾಗಿ ಉದ್ದೇಶಿಸಲಾದ ಪ್ರದೇಶಗಳಲ್ಲಿ, ಅಂಗಡಿಗಳು, ಮಾರುಕಟ್ಟೆ ಸ್ಥಳಗಳು, ತಯಾರಿಕೆಗಾಗಿ, ಸಾರ್ವಜನಿಕ ರೆಸಾರ್ಟ್ ಸ್ಥಳಗಳಿಗೆ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಕಟ್ಟಡಗಳ ನಿರ್ಮಾಣ ಅಥವಾ ಬಳಕೆಯನ್ನು ವಿನಿಯಮಿಸುವುದು;

(xxiii) ಬೀದಿಗಳ ವಿನ್ಯಾಸ ಮತ್ತು ಸ್ಥಳಕ್ಕಾಗಿ ಸಮರ್ಪಕ ಉಪಬಂಧ ಕಲ್ಪಿಸದಿರುವ ಕಟ್ಟಡ ನಿರ್ಮಾಣವನ್ನು ತಡೆಗಟ್ಟುವುದು;

(xxiv) ಗಾಳಿಯ ಮುಕ್ತ ಪರಿಚಲನೆಯನ್ನು ಖಾತರಿಪಡಿಸಿಕೊಳ್ಳಲು ಆಂತರಿಕ ಅಥವಾ ಬಾಹ್ಯ ಮತ್ತು ಬಾಗಿಲುಗಳು ಮತ್ತು ಕಿಟಕಿಗಳು ಮತ್ತು ಇತರ ವಿಧಾನಗಳಿಂದ ಸಾಕಷ್ಟು ತೆರೆದ ಸ್ಥಳವನ್ನು ಒದಗಿಸುವ ಮತ್ತು ನಿರ್ವಹಿಸುವ ಮೂಲಕ ಕಟ್ಟಡಗಳಲ್ಲಿ ಸಾಕಷ್ಟು ಗಾಳಿ ಬೆಳಕಿನ ಸಂಚಾರವನ್ನು ಖಚಿತಪಡಿಸಿಕೊಳ್ಳುವುದು;

(xxv) ಈ ಅಧಿನಿಯಮದಲ್ಲಿ ವಿಶೇಷವಾಗಿ ಉಪಬಂಧಿಸದಿರುವ ಯಾವುದೇ ಇತರ ನಿರ್ದಿಷ್ಟವಾದ ರೀತಿಯಲ್ಲಿ ಚರಂಡಿಗಳು, ಒಳಚರಂಡಿಗಳು, ಗಾಳಿ ಬೆಳಕಿನ ಕಿರಣಗಳು, ಸಗಣಿ ಮತ್ತು ಗೊಬ್ಬರಕ್ಕಾಗಿ ತೊಟ್ಟಿಗಳು, ಸೆಸ್ ಪೂಲ್‌ಗಳು, ನೀರಿನ ಕೋಣೆಗಳು, ಪಾಯಿಖಾನೆಗಳು, ಶೌಚಾಲಯಗಳು, ಮೂತ್ರಾಲಯಗಳು, ಚರಂಡಿ ಅಥವಾ ಯಾವುದೇ ರೀತಿಯ ಒಳಚರಂಡಿಗಳ ಕಾಮಗಾರಿಯ ನಿರ್ಮಾಣ, ನಿರ್ವಹಣೆ ಮತ್ತು ನಿಯಂತ್ರಣವನ್ನು ಅವುಗಳು ನಗರ ಪಾಲಿಕೆಯ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ ವಿನಿಯಮಿಸುವುದು.

(xxvi) ಈ ಅಧಿನಿಯಮದ ಯಾವುದೇ ಉಪಬಂಧಗಳ ನೆರವೇರಿಕೆಯ ಉದ್ದೇಶಕ್ಕಾಗಿ ಸ್ಥಳೀಯ ಅವಶ್ಯಕತೆಯನ್ನು ನೋಡಿಕೊಂಡು ಎಲ್ಲಾ ರೀತಿಯ ನಿರ್ಮಾಣಗಳಿಗೆ ಷರತ್ತುಗಳು, ನಿರ್ಬಂಧಗಳು, ನಿಬಂಧನೆಗಳು ಮತ್ತು ನಿರ್ದಿಷ್ಟ ವಿವರಣೆಗಳನ್ನು, ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿರ್ದೇಶನಗಳು ಮತ್ತು ನಿರ್ದಿಷ್ಟಪಡಿಸಿದ ನಿರ್ಬಂಧಗಳು ಯಾವುದಾದರೂ ಇದ್ದಲ್ಲಿ ಅವುಗಳಿಗೆ ಅನುರೂಪವಾಗಿ ನಿರ್ದಿಷ್ಟಪಡಿಸಕ್ಕದ್ದು.

(xxvii) ರಸ್ತೆಗೆ ಅಥವಾ ಅದರ ಯಾವುದೇ ನಿರ್ಮಾಣಕ್ಕೆ ಅಪಾಯವುಂಟುಮಾಡುವ ಅಥವಾ ಯಾವುದೇ ಬೀದಿಯುದ್ದಕ್ಕೂ ಅಥವಾ ಬೀದಿಯ ಮೇಲೆ ಇತರ ವಾಹನಗಳಿಗೆ ಅಥವಾ ಪಾದಚಾರಿಗಳಿಗೆ ತೊಂದರೆ ಅಥವಾ ಅಡಚಣೆ ಉಂಟುಮಾಡುವ ಸಂಭವವಿದೆಯೆಂದು ಭಾವಿಸಬಹುದಾದಂಥ ರೂಪ, ನಿರ್ಮಾಣ, ತೂಕ ಅಥವಾ ಗಾತ್ರ ಅಥವಾ ಅಂಥ ಯಂತ್ರ ಅಥವಾ ಇತರ ಭಾರವಾದ ವಸ್ತುಗಳನ್ನು ತುಂಬಿಕೊಂಡಿರುವ ಯಾವುದೇ ವಾಹನಗಳ ಸಂಚಾರವನ್ನು, ಸಾಮಾನ್ಯವಾಗಿ ಅಂಥ ಉಪವಿಧಿಗಳಲ್ಲಾಗಲಿ ಅಥವಾ ಅಂಥ ಉಪವಿಧಿಗಳಲ್ಲಿ ನಿಯಮಿಸಬಹುದಾದ ಅನ್ವಯತೆಯ ಸಮಯ ಮತ್ತು ಅದರ ಶುಲ್ಕಗಳ ಪಾವತಿ ಬಗ್ಗೆ ಅಂಥ ನಿಬಂಧನೆಗಳಡಿ ಪ್ರತಿ ಪ್ರಕರಣಗಳಲ್ಲಿ ಮಂಜೂರು ಮಾಡುವ ಯಾವುದೇ ಪರವಾನಿಗೆಗಳಲ್ಲಾಗಲಿ ರಸ್ತೆ ಮಾರ್ಗದ ಸುರಕ್ಷತೆಗಾಗಿ ಉಪಕರಣಗಳನ್ನು ಎಳೆದೊಯ್ಯುವ, ಸಾಗಿಸುವ, ಬಳಕೆಯ ಸಮಯ, ವಿಧಾನದ ಬಗ್ಗೆ, ದೀಪಗಳು ಅಥವಾ ಸಹಾಯಕರ ಸಂಖ್ಯೆಯ ಬಗ್ಗೆ ನಿಯಮಿಸಬಹುದಾದಂಥ ಷರತ್ತುಗಳಡಿ ಮತ್ತು ನಿಯಮಿಸಬಹುದಾದಂಥ ಇತರ ಸಾಮಾನ್ಯ ಮುನ್ನೆಚ್ಚರಿಕೆಗಳ ಹೊರತು ನಿಷೇಧಿಸುವುದು.

(xxviii) ನಗರ ಪಾಲಿಕೆಯಲ್ಲಿ ನಿಹಿತವಾಗಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಸಾರ್ವಜನಿಕ ಉದ್ಯಾನವನಗಳು, ತೋಟಗಳು ಮತ್ತು ತೆರೆದ ಸ್ಥಳಗಳನ್ನು ಅಪಾಯ ಅಥವಾ ದುರ್ಬಳಕೆಯಿಂದ ರಕ್ಷಿಸುವುದು, ಅವುಗಳ ನಿರ್ವಹಣೆ ಮತ್ತು

ಸಾರ್ವಜನಿಕರಿಂದ ಅವರು ಬಳಸಬಹುದಾದ ವಿಧಾನವನ್ನು ವಿನಿಯಮಿಸುವುದು, ಮತ್ತು ಅದರಲ್ಲಿನ ವ್ಯಕ್ತಿಗಳ ಸರಿಯಾದ ನಡವಳಿಕೆಯನ್ನು ಗೊತ್ತುಪಡಿಸುವುದು;

(xxix) ಬೀದಿಗಳಲ್ಲಿ ಸಂಚಾರದ ಯಾವುದೇ ವಿವರಣೆಯನ್ನು ವಿನಿಯಮಿಸುವುದು ಅಥವಾ ನಿಷೇಧಿಸುವುದು ಮತ್ತು ಇದರಿಂದ ಉಂಟಾಗುವ ಶಬ್ದವನ್ನು ಕಡಿತಗೊಳಿಸುವುದು.

(xxx) ಸಾರ್ವಜನಿಕ ರೆಸಾರ್ಟ್, ವಿನೋದ ಅಥವಾ ಮನರಂಜನಾ ಕ್ಲಬ್‌ಗಳು, ಜಿಮ್ ಖಾನಾಗಳು, ಸ್ಪಾಗಳು, ಮಸಾಜ್ ಪಾರ್ಲರ್‌ಗಳ ಸ್ಥಳಗಳ ಪರವಾನಿಗೆ ನೀಡಿಕೆ, ತಪಾಸಣೆ ಮತ್ತು ಸಮರ್ಪಕವಾಗಿ ವಿನಿಮಯಿಸುವುದಕ್ಕಾಗಿ;

(xxxi) ಫಲಕಗಳು ಮತ್ತು ಜಾಹೀರಾತುಗಳನ್ನು ನೆಲೆಗೊಳಿಸುವುದು ಹಾಗೂ ತೋರುಗಂಬಗಳ ಸ್ಥಾನ, ಗಾತ್ರ, ಆಕಾರ ಮತ್ತು ಶೈಲಿಯನ್ನು ವಿನಿಯಮಿಸುವುದು;

(xxxii) ಸಾಮಾನ್ಯವಾಗಿ ಪೌರಾಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ವಿನಿಯಮಕ್ಕಾಗಿ ಹಾಗೂ ಅಂಥ ಯಾವುದೇ ಉಪವಿಧಿಗಳ ಉಲ್ಲಂಘನೆಗಾಗಿ ಪ್ರತಿ ನಗರ ಪಾಲಿಕೆಯು ದಂಡವನ್ನು ನಿಗದಿಪಡಿಸಬಹುದು;

(xxxiii) ಬೀದಿ ವ್ಯಾಪಾರಿಗಳ ವಲಯಗಳು, ಬೀದಿ ಮಾರಾಟ, ಆಹಾರ ಮಳಿಗೆಗಳು.

(2) ಪ್ರತಿಯೊಂದು ನಗರ ಪಾಲಿಕೆಯು ಈ ಪ್ರಕರಣದಡಿಯ ಯಾವುದೇ ಉಪವಿಧಿಗಳನ್ನು ರಚಿಸುವ ಮೊದಲು, ಅದರಿಂದ ಬಾಧಿತರಾಗುವ ಸಂಭವವಿರುವಂಥ ವ್ಯಕ್ತಿ ಮಾಹಿತಿಗಾಗಿ ಪರ್ಯಾಪ್ತವಾಗಿದೆಯೆಂದು ಅಭಿಪ್ರಾಯಪಟ್ಟ ರೀತಿಯಲ್ಲಿ ಯಾವ ದಿನಾಂಕದಂದು ಅಥವಾ ದಿನಾಂಕದ ನಂತರ ಕರಡನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುತ್ತದೆಯೋ ಆ ದಿನಾಂಕವನ್ನು ನಿರ್ದಿಷ್ಟಪಡಿಸುವ ನೋಟೀಸಿನೊಂದಿಗೆ ಪ್ರಸ್ತಾಪಿತ ಉಪವಿಧಿಯ ಕರಡನ್ನು ಪ್ರಕಟಿಸತಕ್ಕದ್ದು. ಮತ್ತು ಉಪವಿಧಿಗಳನ್ನು ರಚಿಸುವುದಕ್ಕೂ ಮೊದಲು ಹಾಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಯಾರೇ ವ್ಯಕ್ತಿಯಿಂದ ಕರಡಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯು ಲಿಖಿತದಲ್ಲಿ ಮಾಡಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

ಅಧ್ಯಾಯ - XXV
ದಂಡಗಳು

319. ಅಧಿನಿಯಮದ ಉಲ್ಲಂಘನೆಗಾಗಿ ದಂಡ.- ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

320. ನಿಯಮಗಳ ಉಲ್ಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

321. ವಿನಿಯಮಗಳ ಉಲ್ಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

322. ಉಪವಿಧಿಗಳ ಉಲ್ಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ಉಪವಿಧಿಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

323. ಪಾಲಿಕೆಯ ಸ್ವತ್ತಿನ ಅನಧಿಕೃತ ಬಳಕೆಗೆ ದಂಡನೆ.- ಯಾವೊಬ್ಬನು, ಪಾಲಿಕೆಯ ಯಾವುದೇ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರುಪಯೋಗಪಡಿಸಿಕೊಂಡರೆ ಅಥವಾ ತನ್ನ ಸ್ವಂತ ಬಳಕೆಗೆ ಪರಿವರ್ತಿಸಿಕೊಂಡರೆ ಅಥವಾ ಅಂಥ ಸ್ವತ್ತನ್ನು ಅನುಚಿತ ಅಥವಾ ಅನಧಿಕೃತ ಬಳಕೆಗೆ ತೊಡಗಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

324. ಸಾರ್ವಜನಿಕ ಬೀದಿಯಲ್ಲಿ ಅಪಾಯಕರವಾದ ಸ್ಥಿತಿಯಲ್ಲಿ ವಾಹನವನ್ನು ಮತ್ತು ಪ್ರಾಣಿಯನ್ನು ಬಿಟ್ಟಿರುವುದಕ್ಕಾಗಿ ದಂಡನೆ.- (1) ವಾಹನದ ಅಥವಾ ಪ್ರಾಣಿಯ ಜವಾಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕ ಬೀದಿಯ ಇತರೆ ಬಳಕೆದಾರರಿಗೆ ಅಪಾಯ, ಅಡ್ಡಿ ಅಥವಾ ಅನುಚಿತ ಅನಾನುಕೂಲ ಅಥವಾ ಉಪದ್ರವವನ್ನು ಉಂಟುಮಾಡುವ ಅಥವಾ ಉಂಟುಮಾಡುವ ಸಂಭವವಿರುವಂಥ ಸ್ಥಿತಿಯಲ್ಲಿ ಅಥವಾ ಅಂಥ ಪರಿಸ್ಥಿತಿಯಲ್ಲಿ ಅಥವಾ ಸಂದರ್ಭಗಳಲ್ಲಿ ವಾಹನವು ಅಥವಾ ಪ್ರಾಣಿಯು ನಿಲ್ಲಲು ಕಾರಣನಾಗತಕ್ಕದ್ದಲ್ಲ ಅಥವಾ ಅದಕ್ಕೆ ಅವಕಾಶ ಕೊಡತಕ್ಕದ್ದಲ್ಲ ಮತ್ತು ವಾಹನದ ಅಥವಾ ಪ್ರಾಣಿಯ ಜವಾಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು ಯಾವುದೇ ವಾಹನವು ಅಥವಾ ಪ್ರಾಣಿಯು ಸರಿಯಾದ ನಿಯಂತ್ರಣದಲ್ಲಿದ್ದ ಹೊರತು ಅದನ್ನು ಸಾರ್ವಜನಿಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ನಿಲ್ಲಲು ಅವಕಾಶ ಕೊಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣವನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

325. ಅಪರಾಧದ ರಾಜಿ.- ಈ ಅಧಿನಿಯಮದ 143, 286, 290ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿರುವ ಅಥವಾ ಎಸಗಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟ ಯಾರೇ ವ್ಯಕ್ತಿಯಿಂದ, ಮುಖ್ಯ ಆಯುಕ್ತರು ಅಧಿಕೃತಗೊಳಿಸಿದ ಗ್ರೂಪ್-ಬಿ ದರ್ಜೆಗೆ ಕಡಿಮೆಯಲ್ಲದ ಯಾರೇ ಅಧಿಕಾರಿಯು, ಅಪರಾಧವನ್ನು ಎಸಗಿರುವಂಥ ಅಥವಾ ಅಪರಾಧ ಎಸಗಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟಿರುವ ಅಪರಾಧಕ್ಕೆ ರಾಜಿ ರೂಪದಲ್ಲಿ ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂಥ ಮೊಬಲಗು ಅಥವಾ ನಿಯಮಿಸಬಹುದಾದಂಥ ಯಾವುದೇ ಹಣದ ಮೊಬಲಗನ್ನು ಸ್ವೀಕರಿಸಬಹುದು ಮತ್ತು ಅಧಿಕೃತಗೊಳಿಸಿದ ಅಧಿಕಾರಿಗೆ ಅಂಥ ಮೊಬಲಗನ್ನು ಸಂದಾಯ ಮಾಡಿದ ನಂತರ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ ಆತನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅದೇ ಕೃತ್ಯದ ಸಂಬಂಧದಲ್ಲಿ ಅಂಥ ವ್ಯಕ್ತಿಯ ವಿರುದ್ಧ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

326. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡುವ ಅಧಿಕಾರ ಮತ್ತು ಉಪವಿಧಿಗಳ ಉಲ್ಲಂಘನೆಗಾಗಿ ದಂಡನೆಗಳು.- (1) ಕಟ್ಟಡಗಳು ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಶೌಚಗೃಹ, ಭೂ-ಶೌಚಗೃಹಗಳು, ಕಕ್ಕಸುಗಳು, ಬೂದಿಗುಂಡಿಗಳು, ಘನತ್ಯಾಜ್ಯ ನಿರ್ವಹಣೆ ಮತ್ತು ರೊಚ್ಚು ಗುಂಡಿಗಳ ಚರಂಡಿ ವ್ಯವಸ್ಥೆ ಮತ್ತು ಅವುಗಳಿಗೆ ನೀರು ಸರಬರಾಜು ಮಾಡುವುದರ ಬಗ್ಗೆ ಮತ್ತು ನೀರು ಹರಿಸಿ ತೊಳೆಯುವುದಕ್ಕಾಗಿ ಶೌಚಗೃಹಗಳಿಗೆ ಸಾಕಷ್ಟು ನೀರು ಸರಬರಾಜು ಇಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ಉಪವಿಧಿಗಳನ್ನು ರಚಿಸುವುದಕ್ಕೆ ಮುಂಚೆ ನಿರ್ಮಿಸಿದ ಕಟ್ಟಡಗಳಿಗೆ, ಪರಿಣಾಮಕಾರಿ ಆಗುವಂತೆ ಉಪವಿಧಿಗಳನ್ನು ರಚಿಸಬಹುದು.

(2) 318ನೇ ಪ್ರಕರಣ ಮತ್ತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಉಪವಿಧಿಯನ್ನು ರಚಿಸುವಾಗ, ಪಾಲಿಕೆಯು, ಅದರ ಉಲ್ಲಂಘನೆಗಾಗಿ ಈ ಮುಂದಿನ ದಂಡನೆಗಳನ್ನು ವಿಧಿಸತಕ್ಕದ್ದು.-

(ಎ) ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಪಡಿಸತಕ್ಕದ್ದು; ಅಥವಾ

(ಬಿ) ಅಂಥ ಉಲ್ಲಂಘನೆಯನ್ನು ಮುಂದುವರಿಸದಿರಲು ಮುಖ್ಯ ಆಯುಕ್ತರಿಂದ ನೋಟೀಸನ್ನು ಸ್ವೀಕರಿಸಿದ ತರುವಾಯ ಉಲ್ಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಪಡಿಸತಕ್ಕದ್ದು.

ಅಧ್ಯಾಯ-XXVI
ಸಂಕೀರ್ಣ

327. ಸರ್ಕಾರಕ್ಕೆ, ಅಧಿಕಾರಿಗಳಿಗೆ, ನಗರ ಪಾಲಿಕೆ ಪ್ರಾಧಿಕಾರಗಳಿಗೆ ಮತ್ತು ನೌಕರರಿಗೆ ರಕ್ಷಣೆ.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಥವಾ ಯಾವುದೇ ನಗರ ಪಾಲಿಕೆಯ ಪ್ರಾಧಿಕಾರದ ಅಥವಾ ಅಧಿಕಾರಿಯ ಅಥವಾ ನೌಕರನ ವಿರುದ್ಧ ಅಥವಾ ಸರ್ಕಾರದ ಅಥವಾ ಯಾವುದೇ ನಗರ ಪಾಲಿಕೆಯ ಪ್ರಾಧಿಕಾರಿಯ ಅಥವಾ ಅಧಿಕಾರಿಯ ಅಥವಾ ನೌಕರನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ,, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

328. ಮೇಯರ್, ಉಪ-ಮೇಯರ್, ಮುಂತಾದವರ ಅಭಿಯೋಜನೆಗೆ ಮಂಜೂರಾತಿ.- ಮೇಯರ್ ಅಥವಾ ಉಪಮೇಯರ್ ಅಥವಾ ಯಾರೇ ಕೌನ್ಸಿಲರು ಅಥವಾ ಆಯುಕ್ತರು ಅಥವಾ ನಿಯೋಜನೆಯ ಮೇಲೆ ನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರದ ಯಾರೇ ಅಧಿಕಾರಿಯು ತನ್ನ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ ಅವನು ಯಾವುದೇ ಅಪರಾಧವನ್ನು ಮಾಡಿರುವುದಾಗಿ ಆರೋಪಿತನಾಗಿದ್ದರೆ ಮ್ಯಾಜಿಸ್ಟ್ರೇಟರು ಸರ್ಕಾರದ ಪೂರ್ವ ಮಂಜೂರಾತಿಯ ಹೊರತು, ಅಂಥ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

329. ಕರ ನಿರ್ಧರಣೆ, ಇತ್ಯಾದಿಯನ್ನು ಆಕ್ಷೇಪಿಸತಕ್ಕದ್ದಲ್ಲ.- (1) ಈ ಅಧಿನಿಯಮದ ಪ್ರಾಧಿಕಾರದ ಮೇರೆಗೆ ಮಾಡಲಾದ ಯಾವುದೇ ಕರ ನಿರ್ಧರಣೆಯನ್ನು ಅಥವಾ ತಗಾದೆಯನ್ನು ಮತ್ತು ವಿಧಿಸಲಾದ ಯಾವುದೇ ಶುಲ್ಕವನ್ನು,-

(ಎ) ಯಾರೇ ವ್ಯಕ್ತಿಯ ಹೆಸರು, ನಿವಾಸ, ವ್ಯವಹಾರ ಅಥವಾ ಉದ್ಯೋಗದ ಸ್ಥಳಕ್ಕೆ ಸಂಬಂಧಿಸಿದಂತೆ; ಅಥವಾ

(ಬಿ) ಯಾವುದೇ ಸ್ವತ್ತಿನ ಅಥವಾ ವಸ್ತುವಿನ ವಿವರಣೆಯಲ್ಲಿ; ಅಥವಾ

(ಸಿ) ನಿರ್ಧರಿಸಲಾದ, ತಗಾದೆ ಮಾಡಲಾದ ಅಥವಾ ವಿಧಿಸಲಾದ ಮೊಬಲಗಿಗೆ ಸಂಬಂಧಿಸಿದಂತೆ,

- ಯಾವುದೇ ಲಿಪಿಕ ಪ್ರಮಾದದ ಕಾರಣದಿಂದಾಗಿ ಅಥವಾ ಯಾವುದೇ ತಪ್ಪಿನ ಕಾರಣದಿಂದಾಗಿ ಆಕ್ಷೇಪಿಸತಕ್ಕದ್ದಲ್ಲ ಅಥವಾ ಅದರ ಮೇಲೆ ಪರಿಣಾಮ ಉಂಟಾಗತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಉಪಬಂಧಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿರಬೇಕು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ಅದರ ರೂಪದಲ್ಲಿಯ ದೋಷ ಮಾತ್ರದಿಂದಲೇ ಯಾವುದೇ ನ್ಯಾಯಾಲಯವು ರದ್ದುಗೊಳಿಸತಕ್ಕದ್ದಲ್ಲ ಅಥವಾ ತಳ್ಳಿಹಾಕತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾಧಿಕಾರದ ಮೇರೆಗೆ ಸಂಗ್ರಹಿಸಲಾದ ಹಣದ ಯಾವುದೇ ಮೊತ್ತವನ್ನು ವಸೂಲು ಮಾಡಲು ಅಥವಾ ಸದರಿ ಪ್ರಾಧಿಕಾರದ ಮೇರೆಗೆ ಮಾಡಲಾದ ಯಾವುದೇ ಕರನಿರ್ಧರಣೆಯ ಅಥವಾ ಹಣ ಸಂಗ್ರಹಣೆಯ ಕಾರಣದಿಂದಾಗಿ ಉಂಟಾದ ಹಾನಿಯನ್ನು ವಸೂಲು ಮಾಡಲು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಉಪಬಂಧಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿರಬೇಕು.

(3) ಈ ಅಧಿನಿಯಮದ ಮೇರೆಗಿನ ಯಾವುದೇ ಜಪ್ತಿ ಅಥವಾ ಮಾರಾಟವನ್ನು, ಈ ಅಧಿನಿಯಮದ ಉಪಬಂಧಗಳನ್ನು, ನಿಯಮಗಳನ್ನು ಮತ್ತು ಉಪವಿಧಿಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿದ್ದರೆ, ಬಿಲ್ಲಿನಲ್ಲಿ, ನೋಟೀಸಿನಲ್ಲಿ, ಅನುಸೂಚಿಯಲ್ಲಿ, ನಮೂನೆಯಲ್ಲಿ, ಸಮನುಗಳಲ್ಲಿ, ತಗಾದೆ ನೋಟೀಸಿನಲ್ಲಿ, ಜಪ್ತಿ ವಾರಂಟಿನಲ್ಲಿ, ವಿವರಣ ಪಟ್ಟಿಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ವ್ಯವಹರಣೆಯಲ್ಲಿ ಯಾವುದೇ ರೀತಿಯ ಪ್ರಮಾದ, ದೋಷ ಅಥವಾ ನ್ಯೂನತೆ ಇರುವ ಕಾರಣದಿಂದಾಗಿ ಕಾನೂನುಬಾಹಿರವೆಂದು ಭಾವಿಸತಕ್ಕದ್ದಲ್ಲ ಅಥವಾ ಅವುಗಳನ್ನು ತಯಾರಿಸುವ ಯಾರೇ ವ್ಯಕ್ತಿಯನ್ನು ಉಲ್ಲಂಘನೆಕಾರನೆಂದು ಭಾವಿಸತಕ್ಕದ್ದಲ್ಲ:

ಪರಂತು, ಯಾವುದೇ ಅಕ್ರಮತೆಯಿಂದ ಬಾಧಿತನಾದ ಪ್ರತಿಯೊಬ್ಬ ವ್ಯಕ್ತಿಯು ಅವನು ಅನುಭವಿಸಿದ ಯಾವುದೇ ವಿಶೇಷ ಹಾನಿಗಾಗಿ ಪರಿಹಾರವನ್ನು ವಸೂಲ ಮಾಡಬಹುದು.

330. ಪೊಲೀಸು ಅಧಿಕಾರಿಗಳ ಕರ್ತವ್ಯಗಳು.- ಪ್ರತಿಯೊಬ್ಬ ಪೊಲೀಸು ಅಧಿಕಾರಿಯ ಕರ್ತವ್ಯವು,-

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ಅಥವಾ ವಿನಿಯಮಗಳ ಮೇರೆಗಿನ ಯಾವುದೇ ಅಪರಾಧವನ್ನು ಮಾಡುವುದಕ್ಕೆ ಸಂಚು ಮಾಡಿರುವುದರ ಬಗ್ಗೆ ಅಥವಾ ಆ ಅಪರಾಧವನ್ನು ಮಾಡಿರುವುದರ ಬಗ್ಗೆ ತಾನು ಸ್ವೀಕರಿಸುವಂಥ ಯಾವುದೇ ಮಾಹಿತಿಯನ್ನು ವಿಳಂಬ ಮಾಡದೆ ನಗರ ಪಾಲಿಕೆಯ ಯುಕ್ತ ಅಧಿಕಾರಿಗೆ ತಿಳಿಸುವುದು;

(ಬಿ) ಈ ಅಧಿನಿಯಮದ ಅಥವಾ ಅಂಥ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಮುಖ್ಯ ಆಯುಕ್ತರಲ್ಲಿ ಅಥವಾ ಅಂಥ ನಗರ ಪಾಲಿಕೆಯ ಅಧಿಕಾರಿ ಅಥವಾ ನೌಕರ ಅಥವಾ ವ್ಯಕ್ತಿಯಲ್ಲಿ ನಿಹಿತವಾದ ಯಾವುದೇ ಅಧಿಕಾರವನ್ನು ಕಾನೂನುಸಮ್ಮತವಾಗಿ ಚಲಾಯಿಸುವುದಕ್ಕಾಗಿ, ತಮ್ಮ ನೆರವನ್ನು ಯುಕ್ತವಾಗಿ ಕೋರುವ ಮುಖ್ಯ ಆಯುಕ್ತ ಅಥವಾ ಆಯುಕ್ತ ಅಥವಾ ಮುಖ್ಯ ಆಯುಕ್ತರು ಯಾರಿಗೆ ಅಧಿಕಾರಗಳನ್ನು ಕಾನೂನುಬದ್ಧವಾಗಿ ಪ್ರತ್ಯಾಯೋಜಿಸಿರುವರೋ ಆ ಯಾರೇ ನಗರ ಪಾಲಿಕೆಯ ಅಧಿಕಾರಿಗೆ ಅಥವಾ ನೌಕರನಿಗೆ ಅಥವಾ ಯಾರೇ ವ್ಯಕ್ತಿಗೆ ನೆರವಾಗತಕ್ಕದ್ದು ಮತ್ತು ಅಂಥ ಎಲ್ಲ ಉದ್ದೇಶಗಳಿಗಾಗಿ, ತಮ್ಮ ಸಾಮಾನ್ಯ ಪೊಲೀಸು ಕರ್ತವ್ಯಗಳನ್ನು ಚಲಾಯಿಸುವಾಗ ಅವರು ಯಾವ ಅಧಿಕಾರಗಳನ್ನು ಹೊಂದಿರುತ್ತಾರೋ ಅದೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

331. ವ್ಯಕ್ತಿಗಳನ್ನು ದಸ್ತಗಿರಿ ಮಾಡುವ ಪೊಲೀಸು ಅಧಿಕಾರಿಯ ಅಧಿಕಾರ.- (1) ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಯಾವುದೇ ಉಪಬಂಧದ ವಿರುದ್ಧ ಯಾರೇ ವ್ಯಕ್ತಿಯು ಅಪರಾಧ ಮಾಡುವುದನ್ನು ಯಾರೇ ಪೊಲೀಸು ಅಧಿಕಾರಿಯು ನೋಡಿದರೆ ತಮಗೆ ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸ ಗೊತ್ತಿರದಿದ್ದರೆ ಮತ್ತು ಆ ಬಗ್ಗೆ ಕೇಳಿದ ಮೇಲೆ ಸದರಿ ವ್ಯಕ್ತಿಯು ತನ್ನ ಹೆಸರನ್ನು ಮತ್ತು ವಿಳಾಸವನ್ನು ಕೊಡಲು ನಿರಾಕರಿಸಿದ್ದರೆ ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವಂಥ ಹೆಸರು ಮತ್ತು ವಿಳಾಸವನ್ನು ಅವನು ಕೊಟ್ಟರೆ ಅವರು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ದಸ್ತಗಿರಿ ಮಾಡಿದ ಯಾರೇ ವ್ಯಕ್ತಿಯನ್ನು,-

(ಎ) ಅವನ ನಿಜವಾದ ಹೆಸರು ಮತ್ತು ವಿಳಾಸವನ್ನು ವಿಚಾರಿಸಿ ಖಚಿತಪಡಿಸಿಕೊಂಡ ತರುವಾಯ; ಅಥವಾ

(ಬಿ) ದಸ್ತಗಿರಿ ಮಾಡಿದ ವೇಳೆಯಿಂದ ಇಪ್ಪತ್ತಾಲ್ಕು ಗಂಟೆಗೆ ಮೀರದಂತೆ, ಮ್ಯಾಜಿಸ್ಟ್ರೇಟರ ಮುಂದೆ ಅವನನ್ನು ಹಾಜರುಪಡಿಸಲು ಅವಶ್ಯವಾದುದಕ್ಕಿಂತ ಯಾವುದೇ ಹೆಚ್ಚಿನ ಕಾಲ ಮ್ಯಾಜಿಸ್ಟ್ರೇಟರ ಆದೇಶವಿಲ್ಲದೆಯೇ

- ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟುಕೊಳ್ಳತಕ್ಕದ್ದಲ್ಲ.

332. ಬೆಂಗಳೂರು ಮಹಾನಗರ ಕಾರ್ಯಪಡೆ ಅಥವಾ ನಗರ ಪಾಲಿಕೆಯ ನೌಕರರಿಂದ ಪೊಲೀಸು ಅಧಿಕಾರಿಯ ಅಧಿಕಾರಗಳ ಚಲಾಯಿಸುವುದು.- (1) ಸರ್ಕಾರವು, ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗಾಗಿ ಅಥವಾ ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗೆ ಪ್ರಾಸಂಗಿಕವಾಗಿ ಉದ್ಭವಿಸುವ ಅಪರಾಧಗಳಿಗಾಗಿ ಒಂದು ಸ್ವತಂತ್ರ ಪೊಲೀಸ್ ಠಾಣೆಯಾಗಿ ಕಾರ್ಯನಿರ್ವಹಿಸುವಂತೆ ಬೆಂಗಳೂರು ಮಹಾನಗರ ಕಾರ್ಯಪಡೆಗೆ ಅಧಿಕಾರ ನೀಡಬಹುದು.

ಪರಂತು, ಈ ಅಧಿನಿಯಮದ ಮೇರೆಗೆ ವಿಶೇಷವಾಗಿ ಅಧಿಕಾರವನ್ನು ಪಡೆದಿರುವಂತ ಯಾರೇ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ಯಾರೇ ಸರ್ಕಾರಿ ನೌಕರನು ಮಾಡಿದ್ದಾನೆಂದು ಆರೋಪಿಸಲಾದ ಯಾವುದೇ ಅಪರಾಧವನ್ನು, ಅಪರಾಧವನ್ನು ಮಾಡಿದ್ದಾನೆಂದು ಆರೋಪಿಸಲಾದಂತ ಸಮಯದಲ್ಲಿ ಸದರಿ ಆರೋಪಿತ ಅಪರಾಧವು ಅಂಥ ಸರ್ಕಾರಿ ನೌಕರನು ತನ್ನ ಅಧಿಕೃತ ಪ್ರಕಾರ್ಯಗಳ ಅಥವಾ ಕರ್ತವ್ಯಗಳ ನಿರ್ವಹಣೆಯಲ್ಲಿ ಮಾಡಲಾದ ಯಾವುದೇ ಶಿಫಾರಸ್ಸಿಗೆ ಅಥವಾ ಕೈಗೊಂಡ ಯಾವುದೇ ತೀರ್ಮಾನಕ್ಕೆ ಸಂಬಂಧಿಸಿದ್ದುದ್ದಾಗಿದ್ದಲ್ಲಿ, ಆತನನ್ನು ಆತನ ಪದದಿಂದ ತೆಗೆದುಹಾಕಲು ಸಕ್ಷಮವಾದ ಪ್ರಾಧಿಕಾರಿಯ ಪೂರ್ವ ಅನುಮತಿಯಿಲ್ಲದೇ ಯಾವುದೇ ವಿಚಾರಣೆಗೆ ಅಥವಾ ಅಧಿವಿಚಾರಣೆಗೆ ಅಥವಾ ತನಿಖೆಗೆ ಒಳಪಡಿಸತಕ್ಕದ್ದಲ್ಲ.

(2) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಪೊಲೀಸ್ ಅಧಿಕಾರಿಯ ಕರ್ತವ್ಯಗಳನ್ನು ಚಲಾಯಿಸಲು ಯಾರೇ ಪಾಲಿಕೆಯ ಅಧಿಕಾರಿಗೆ ಅಥವಾ ನೌಕರನಿಗೆ ಅಥವಾ ಪಾಲಿಕೆಯ ಯಾವುದೇ ವರ್ಗದ ಅಧಿಕಾರಿಗಳಿಗೆ ಅಥವಾ ನೌಕರರಿಗೆ ಅಧಿಕಾರ ನೀಡಬಹುದು.

333. ನಗರ ಪಾಲಿಕೆ, ಸ್ಥಾಯೀ ಸಮಿತಿ, ಮೇಯರ್, ಮೊದಲಾದವರ ವ್ಯವಹರಣೆಗಳಿಗೆ ಅಡ್ಡಿ ಮಾಡುವುದಕ್ಕೆ ನಿಷೇಧ.- ನಗರ ಪಾಲಿಕೆಯ ಅಥವಾ ಯಾವುದೇ ಸ್ಥಾಯೀ ಸಮಿತಿಯ ಅಥವಾ ಮೇಯರ್ ಅಥವಾ ಉಪಮೇಯರ್ ಮತ್ತು ಕೌನ್ಸಿಲರ್‌ನ ಅಥವಾ ಆಯುಕ್ತನ ಅಥವಾ ನಗರ ಪಾಲಿಕೆಯಿಂದ ನಿಯೋಜಿತನಾದ ಯಾರೇ ವ್ಯಕ್ತಿಯ ಯಾವುದೇ ವ್ಯವಹರಣೆಗಳಿಗೆ ಅಥವಾ ನಗರ ಪಾಲಿಕೆಯ ಪರವಾಗಿ ಆಯುಕ್ತನು ಯಾವ ವ್ಯಕ್ತಿಯ ಜೊತೆಗೆ ಕರಾರನ್ನು ಮಾಡಿಕೊಂಡಿರುವರೋ ಆ ಯಾರೇ ವ್ಯಕ್ತಿಯು ತಮ್ಮ ಕರ್ತವ್ಯವನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಬಲದಿಂದಾಗಿ ಅಥವಾ ಅದರ ಪರಿಣಾಮವಾಗಿ ಯಾವ ಕಾರ್ಯವನ್ನು ಮಾಡಲು ಅವರಿಗೆ ಅಧಿಕಾರ ನೀಡಲಾಗಿದೆಯೋ ಅಥವಾ ಅವರನ್ನು ಅಗತ್ಯಪಡಿಸಲಾಗಿದೆಯೋ ಆ ಕಾರ್ಯವನ್ನು ನೆರವೇರಿಸುವಾಗ ಅವರ ಯಾವುದೇ ವ್ಯವಹರಣೆಗಳಿಗೆ ಯಾರೇ ವ್ಯಕ್ತಿಯು ಅಡ್ಡಿ ಉಂಟುಮಾಡತಕ್ಕದ್ದಲ್ಲ.

334. ಗುರುತನ್ನು ತೆಗೆದುಹಾಕುವುದಕ್ಕೆ ನಿಷೇಧ.- ಯಾರೇ ವ್ಯಕ್ತಿಯು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶದಿಂದ ಅಧಿಕೃತಗೊಳಿಸಿದ ಯಾವುದೇ ಕೆಲಸದ ನಿರ್ವಹಣೆಗೆ ಪ್ರಾಸಂಗಿಕವಾದ ಯಾವುದೇ ಮಟ್ಟವನ್ನು ಅಥವಾ ದಿಕ್ಕನ್ನು ಸೂಚಿಸುವ ಉದ್ದೇಶಕ್ಕಾಗಿ ನಿಲ್ಲಿಸಿರುವ ಯಾವುದೇ ಗುರುತನ್ನು ತೆಗೆದುಹಾಕತಕ್ಕದ್ದಲ್ಲ.

335. ನಿಧಿಯ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ನಗರಪಾಲಿಕೆಯ ಆಯುಕ್ತ, ಮತ್ತು ಪಾಲಿಕೆಯ ಸದಸ್ಯನ ಹೊಣೆಗಾರಿಕೆ, ಇತ್ಯಾದಿ.- (1) ನಗರಪಾಲಿಕೆಯ ಆಯುಕ್ತ ಮತ್ತು ಪ್ರತಿಯೊಬ್ಬ ನಗರಪಾಲಿಕೆಯ ಸದಸ್ಯನು, ನಗರ ಪಾಲಿಕೆಯ ಒಡೆತನದಲ್ಲಿರುವ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಹಣದ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ, ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವರ ಬುದ್ಧಿಪೂರ್ವಕ ನಿರ್ಲಕ್ಷ್ಯ ಅಥವಾ ದುರ್ವರ್ತನೆಯ ನೇರ ಪರಿಣಾಮವಾಗಿದ್ದರೆ ಹೊಣೆಗಾರರಾಗಿರತಕ್ಕದ್ದು ಮತ್ತು ಸರ್ಕಾರದ ಪೂರ್ವ ಮಂಜೂರಾತಿ ಪಡೆದು ನಗರ ಪಾಲಿಕೆಯು ಅವರ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆಯನ್ನು ಹೂಡತಕ್ಕದ್ದು.

(2) ಅಂಥ ಪ್ರತಿಯೊಂದು ದಾವೆಯನ್ನು ವ್ಯಾಜ್ಯಕಾರಣವು ಉದ್ಭವಿಸಿದ ದಿನಾಂಕದ ತರುವಾಯ ಮೂರು ವರ್ಷಗಳ ಒಳಗಾಗಿ ಪ್ರಾರಂಭಿಸತಕ್ಕದ್ದು.

336. ನೋಟೀಸನ್ನು ತೆಗೆದುಹಾಕುವುದಕ್ಕೆ ಅಥವಾ ಅಳಿಸಿ ಹಾಕುವುದಕ್ಕೆ ನಿಷೇಧ.- ಯಾರೇ ವ್ಯಕ್ತಿಯು ನಗರ ಪಾಲಿಕೆಯ ಸ್ಥಾಯೀ ಸಮಿತಿಯ ಅಥವಾ ಆಯುಕ್ತರ ಆದೇಶಗಳ ಮೂಲಕ ಅಥವಾ ಮೇರೆಗೆ ಪ್ರದರ್ಶಿಸಿದ ಯಾವುದೇ ನೋಟೀಸನ್ನು ಆ ಬಗ್ಗೆ ಅಧಿಕಾರವಿಲ್ಲದೆ ತೆಗೆದುಹಾಕತಕ್ಕದ್ದಲ್ಲ, ನಾಶಪಡಿಸತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಅನ್ಯಥಾ ಅಳಿಸಿ ಹಾಕತಕ್ಕದ್ದಲ್ಲ.

337. ಸಾರ್ವಜನಿಕ ಸ್ಥಳದ ಅಥವಾ ಸಾಮಗ್ರಿಗಳ ಸಂಬಂಧದಲ್ಲಿ ಅನಧಿಕೃತ ವ್ಯವಹಾರಗಳಿಗೆ ನಿಷೇಧ.- ಯಾರೇ ವ್ಯಕ್ತಿಯು, ಆ ಬಗ್ಗೆ ಅಧಿಕಾರವಿಲ್ಲದೆ ನಗರ ಪಾಲಿಕೆಯಲ್ಲಿ ನಿಹಿತವಾದ ಭೂಮಿಯಿಂದ ಅಥವಾ ಜಲಮಾರ್ಗಗಳಿಂದ (ಖಾಸಗಿ ಸ್ವತ್ತಾಗಿರದ) ಅಥವಾ ಅವುಗಳಲ್ಲಿ ಅಥವಾ ಅವುಗಳ ಮೇಲೆ ಇರುವ ಮಣ್ಣನ್ನು, ಮರಳನ್ನು, ಅಥವಾ ಇತರ ಸಾಮಗ್ರಿಯನ್ನು ತೆಗೆಯತಕ್ಕದ್ದಲ್ಲ ಅಥವಾ ಯಾವುದೇ ವಸ್ತುಗಳನ್ನು ಶೇಖರಿಸತಕ್ಕದ್ದಲ್ಲ ಅಥವಾ ಯಾವುದೇ ಒತ್ತುವರಿಯನ್ನು ಮಾಡತಕ್ಕದ್ದಲ್ಲ ಅಥವಾ ಅವುಗಳಿಗೆ ಯಾವುದೇ ರೀತಿಯಲ್ಲಿ ಅಡಚಣೆ ಉಂಟುಮಾಡತಕ್ಕದ್ದಲ್ಲ.

338. ನೋಟೀಸುಗಳ ಮತ್ತು ಅನುಮತಿಗಳ ನಮೂನೆ.- ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಂದರ್ಭಾನುಸಾರ ಕೊಟ್ಟ, ಹೊರಡಿಸಿದ ಅಥವಾ ಮಂಜೂರು ಮಾಡಿದ ಎಲ್ಲಾ ನೋಟೀಸುಗಳು ಮತ್ತು ಅನುಮತಿಗಳು ಲಿಖಿತ ಅಥವಾ ಇಲೆಕ್ಟ್ರಾನಿಕ್ ಅರ್ಜಿ/ಆನ್‌ಲೈನ್ ನಲ್ಲಿರತಕ್ಕದ್ದು.

339. ಪ್ರಾಧಿಕಾರ, ನಗರ ಪಾಲಿಕೆ ಪ್ರಾಧಿಕಾರಿಗಳ ಅಥವಾ ಅಧಿಕಾರಿಗಳ ಸಮ್ಮತಿಯ ರುಜುವಾತು.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಯಾವುದೇ ಕಾರ್ಯವನ್ನು ಮಾಡುವುದು ಅಥವಾ ಮಾಡುವುದನ್ನು ಬಿಟ್ಟುಬಿಡುವುದು ಅಥವಾ ಯಾವುದೇ ಕಾರ್ಯದ ಸಿಂಧುತ್ವವು,-

(ಎ) ನಗರ ಪಾಲಿಕೆಯ ಸ್ಥಾಯೀ ಸಮಿತಿಯ ಅಥವಾ ಪ್ರಾಧಿಕಾರದ ಮುಖ್ಯ ಆಯುಕ್ತರು ಅಥವಾ ನಗರ ಪಾಲಿಕೆಯ ಆಯುಕ್ತರು; ಅಥವಾ

(ಬಿ) ನಗರ ಪಾಲಿಕೆಯ ಯಾರೇ ಅಧಿಕಾರಿಯ

- ಅನುಮೋದನೆ, ಮಂಜೂರಾತಿ, ಸಮ್ಮತಿ, ಸಹಮತಿ, ಘೋಷಣೆ, ಅಭಿಪ್ರಾಯವನ್ನು ಅಥವಾ ಅವರಿಗೆ ಮನವರಿಕೆಯಾಗುವುದನ್ನು ಅವಲಂಬಿಸಿರುವಾಗ ಅಂಥ ಅನುಮೋದನೆ, ಮಂಜೂರಾತಿ, ಸಮ್ಮತಿ, ಸಹಮತಿ, ಘೋಷಣೆ, ಅಭಿಪ್ರಾಯವನ್ನು ಅಥವಾ ಅವರಿಗೆ ಮನವರಿಕೆಯಾಗಿರುವುದನ್ನು ತಿಳಿಸುವುದೆಂದು ಅಥವಾ ನಿರೂಪಿಸುವುದೆಂದು, ತಾತ್ಪರ್ಯವಾಗುವ (ಎ)ನ ಸಂದರ್ಭದಲ್ಲಿ ಮುಖ್ಯ ಆಯುಕ್ತರು ಅಥವಾ ಆಯುಕ್ತರು ರುಜುಮಾಡಿದ ಮತ್ತು (ಬಿ)ನ ಸಂದರ್ಭದಲ್ಲಿ ಸದರಿ ನಗರ ಪಾಲಿಕೆಯ ಅಧಿಕಾರಿಯು ರುಜುಮಾಡಿದ ಲಿಖಿತ ದಸ್ತಾವೇಜು, ಅದರ ಸಾಕಷ್ಟು ಪುರಾವೆ ಆಗಿರತಕ್ಕದ್ದು.

340. ದಸ್ತಾವೇಜುಗಳ ಮೇಲೆ ರುಜು.- (1) ಯಾವ ಲೈಸೆನ್ಸು, ಅನುಮತಿ, ನೋಟೀಸು, ಬಿಲ್ಲು, ಅನುಸೂಚಿ, ಸಮನುಗಳು, ವಾರಂಟು ಅಥವಾ ಇತರ ದಸ್ತಾವೇಜು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಅಥವಾ ನಗರ ಪಾಲಿಕೆಯ ಆಯುಕ್ತ ಅಥವಾ ಯಾವುದೇ ಪ್ರಾಧಿಕಾರ ಅಥವಾ ಮಹಾನಗರ ಪಾಲಿಕೆಯ ಯಾರೇ ಅಧಿಕಾರಿಯ ರುಜುವನ್ನು ಹೊಂದಿರಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಲೈಸೆನ್ಸು, ಅನುಮತಿ, ನೋಟೀಸು, ಬಿಲ್ಲು, ಅನುಸೂಚಿ, ಸಮನುಗಳು, ವಾರಂಟು ಅಥವಾ ಇತರ ದಸ್ತಾವೇಜಿನ ಮೇಲೆ ಸಂದರ್ಭಾನುಸಾರ ಮುಖ್ಯ ಆಯುಕ್ತರು ಅಥವಾ ಅಂಥ ನಗರಪಾಲಿಕೆಯ ಆಯುಕ್ತರು ಅಥವಾ ನಗರ ಪಾಲಿಕೆಯ ಅಧಿಕಾರಿ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ನಗರಪಾಲಿಕೆಯು ನಿಯಮಿಸಬಹುದಾದಂತೆ ಸಿಸ್ಟಂ ಡಿಜಿಟಲ್ ಸಹಿಯ ಮೂಲಕ ಅಧಿಕೃತಗೊಳಿಸಿದ ಅಥವಾ ಸಂದರ್ಭಾನುಸಾರ ಹಸ್ತಾಕ್ಷರ ಮುದ್ರೆಯನ್ನು ಒತ್ತಿದ್ದರೆ ಅದಕ್ಕೆ ಸರಿಯಾಗಿ ರುಜುಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಇರುವುದು ಯಾವುದೂ ನಗರ ಪಾಲಿಕೆಯ ನಿಧಿಯ ಬಗ್ಗೆ ಬರೆದ ಚೆಕ್ಕಿಗೆ ಅಥವಾ ಯಾವುದೇ ಕರಾರು ಪತ್ರಕ್ಕೆ ಅನ್ವಯವಾಗತಕ್ಕದ್ದಲ್ಲ.

341. ಅಧಿಸೂಚನೆಯ ಪ್ರಕಟಣೆ.- ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ, ಇಂಗ್ಲೀಷಿನಲ್ಲಿ ಮತ್ತು ಕನ್ನಡದಲ್ಲಿ ಪ್ರಕಟಿಸತಕ್ಕದ್ದು.

342. ಆದೇಶದ, ನೋಟೀಸಿನ ಅಥವಾ ಇತರ ದಸ್ತಾವೇಜುಗಳ ಪ್ರಕಟಣೆ.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಪ್ರಕಟಿಸಬೇಕೆಂದು ನಿರ್ದೇಶಿಸಿರುವ ಪ್ರತಿಯೊಂದು ಆದೇಶವನ್ನು, ನೋಟೀಸನ್ನು ಅಥವಾ ಇತರ ದಸ್ತಾವೇಜುಗಳನ್ನು ಸಂದರ್ಭಾನುಸಾರ ಈ ಅಧಿನಿಯಮದ ಮೂಲಕ ಅಥವಾ ನಗರ ಪಾಲಿಕೆಯು ಅಥವಾ ಸ್ಥಾಯೀ ಸಮಿತಿಯು ಬೇರೆ ವಿಧಾನವನ್ನು ನಿಯಮಿಸಿದ ಹೊರತು, ಕನ್ನಡಕ್ಕೆ ಭಾಷಾಂತರಿಸತಕ್ಕದ್ದು ಮತ್ತು ನಗರ ಪಾಲಿಕೆಯ ಕಛೇರಿಯಲ್ಲಿ ಇಡತಕ್ಕದ್ದು ಮತ್ತು ಅದರ ಪ್ರತಿಗಳನ್ನು ಇಂಗ್ಲಿಷ್‌ನಲ್ಲಿ ಮತ್ತು ಕನ್ನಡದಲ್ಲಿ ಅಂಥ ಕಛೇರಿಯಲ್ಲಿ ಮತ್ತು ಸಂದರ್ಭಾನುಸಾರ ನಗರ ಪಾಲಿಕೆಯು ಅಥವಾ ಸ್ಥಾಯೀ ಸಮಿತಿಯು ನಿರ್ದೇಶಿಸಬಹುದಾದಂಥ ಇತರ ಸ್ಥಳಗಳಲ್ಲಿ ಎದ್ದು ಕಾಣುವ ಹಾಗೆ ಅಂಟಿಸತಕ್ಕದ್ದು; ಮತ್ತು ಅಂಥ ಪ್ರತಿಗಳನ್ನು ಹಾಗೆ ಅಂಟಿಸಲಾಗಿದೆ ಮತ್ತು ಮೂಲ ಪ್ರತಿಗಳು ನಗರ ಪಾಲಿಕೆಯ ಕಛೇರಿಯಲ್ಲಿ ಪರಿಶೀಲನೆಗಾಗಿ ಇವೆ ಎಂದು ಸಂಬಂಧಿಸಿದ ಪ್ರದೇಶದಲ್ಲಿ ಡಂಗುರವನ್ನು ಹೊಡೆಸುವ ಮೂಲಕ ಅಥವಾ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಸಾರ್ವಜನಿಕ ಉದ್ಘೋಷಣೆಯನ್ನು ಮಾಡತಕ್ಕದ್ದು. **ಈ ಪ್ರಕ್ರಿಯೆಯು ಒಮ್ಮೆ ಅಳವಡಿಸಿಕೊಂಡರೆ, ಸಾರ್ವಜನಿಕ ಅಧಿಸೂಚನೆಯು ಪರಿಣಾಮಕಾರಿಯಾಗಿರುವುದಾಗಿ ಭಾವಿಸತಕ್ಕದ್ದು.**

343. ವೃತ್ತಪತ್ರಿಕೆಗಳಲ್ಲಿ ಪ್ರಕಟಣೆ.- ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೂಲಕ ನೋಟೀಸನ್ನು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಕೊಡತಕ್ಕದ್ದು ಅಥವಾ ಅಧಿಸೂಚನೆಯನ್ನು ಅಥವಾ ಯಾವುದೇ ಮಾಹಿತಿಯನ್ನು ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು ಎಂದು ಉಪಬಂಧಿಸಿದಾಗಲೆಲ್ಲಾ ಅಂಥ ನೋಟೀಸನ್ನು, ಅಧಿಸೂಚನೆಯನ್ನು ಅಥವಾ ಮಾಹಿತಿಯನ್ನು ನಗರದಲ್ಲಿ ಪ್ರಕಟವಾಗುವ ಕನಿಷ್ಠ ಪಕ್ಷ ಒಂದು ಇಂಗ್ಲೀಷ್ ಮತ್ತು ಒಂದು ಕನ್ನಡ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

344. ನಿಷೇಧದ ಅಥವಾ ಸ್ಥಳಗಳನ್ನು ಪ್ರತ್ಯೇಕವಾಗಿ ಇಡುವ ಬಗ್ಗೆ ನೋಟೀಸು.- ಈ ಅಧಿನಿಯಮದ ಮೂಲಕ ಅಧಿಕೃತವಾದ ಯಾವುದೇ ಉದ್ದೇಶಕ್ಕಾಗಿ ನಗರ ಪಾಲಿಕೆಯು, ಸ್ಥಾಯೀ ಸಮಿತಿಯು ಅಥವಾ ಮುಖ್ಯ ಆಯುಕ್ತರು ಯಾವುದೇ ಸ್ಥಳವನ್ನು ಪ್ರತ್ಯೇಕವಾಗಿ ಇರಿಸಿದಾಗಲೆಲ್ಲಾ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ಕಾರ್ಯ ಮಾಡುವುದನ್ನು ನಿಷೇಧಿಸಿದಾಗಲೆಲ್ಲಾ ಆಯುಕ್ತರು ತತ್‌ಕ್ಷಣವೇ ನೋಟೀಸನ್ನು ಇಂಗ್ಲಿಷ್‌ನಲ್ಲಿ ಮತ್ತು ಕನ್ನಡದಲ್ಲಿ ಅಂಥ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಹಾಕಿಸತಕ್ಕದ್ದು. ಅಂಥ ಸ್ಥಳವನ್ನು ಯಾವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇರಿಸಲಾಗಿದೆಯೋ ಆ ಉದ್ದೇಶವನ್ನು ಅಥವಾ ಯಾವ ಕಾರ್ಯವನ್ನು ಅಂಥ ಸ್ಥಳದಲ್ಲಿ ನಿಷೇಧಿಸಲಾಗಿದೆಯೋ ಆ ಕಾರ್ಯವನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

345. ದಸ್ತಾವೇಜುಗಳು ಅಥವಾ ನೋಟೀಸುಗಳ ಜಾರಿಯ ವಿಧಾನ.- (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಮೂಲಕ ಯಾವುದೇ ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಯಾರೇ ವ್ಯಕ್ತಿಗೆ ಜಾರಿಮಾಡಲು ಅಥವಾ ಕಳುಹಿಸಲು ಅಗತ್ಯಪಡಿಸಿದಾಗ,-

(ಎ) ಅಂಥ ವ್ಯಕ್ತಿಗೆ ಸದರಿ ದಸ್ತಾವೇಜನ್ನು ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಬಿ) ಇ -ಮೇಲ್ ಮೂಲಕ ಅಥವಾ ವಿದ್ಯುನ್ಮಾನ ಸಾಧನಗಳ ಮುಖಾಂತರ; ಅಥವಾ

(ಸಿ) ಅಂಥ ವ್ಯಕ್ತಿಯು ಸಿಗದಿದ್ದರೆ, ಅಂಥ ದಸ್ತಾವೇಜನ್ನು ಕೊನೆಯದಾಗಿ ತಿಳಿದುಬಂದ ಅವನ ವಾಸಸ್ಥಳದಲ್ಲಿ ಅಥವಾ ಅವನು ವ್ಯವಹಾರ ನಡೆಸುತ್ತಿದ್ದ ಸ್ಥಳದಲ್ಲಿ ಇಟ್ಟುಬಿಡುವ ಮೂಲಕ ಅಥವಾ ಅದನ್ನು ಅವನ ಏಜೆಂಟ್, ಗುಮಾಸ್ತ, ಅಥವಾ

ಸೇವಕ ಅಥವಾ ಅವನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಡಿ) ಅಂಥ ವ್ಯಕ್ತಿಯು ಆ ನಗರದಲ್ಲಿ ವಾಸವಾಗಿಲ್ಲದಿದ್ದರೆ ಮತ್ತು ಬೇರೆ ಕಡೆಯಲ್ಲಿನ ಅವನ ವಿಳಾಸವು ಆಯುಕ್ತರಿಗೆ ತಿಳಿದಿದ್ದರೆ ಅದನ್ನು ಅವನಿಗೆ ನೋಂದಾಯಿತ ಅಂಚೆಯ ಮುಖಾಂತರ ಕಳುಹಿಸುವ ಮೂಲಕ; ಅಥವಾ

(ಇ) ಮೇಲೆ ಹೇಳಿದ ಯಾವುದೇ ವಿಧಾನಗಳಿಂದ ಜಾರಿ ಮಾಡಲಾಗದಿದ್ದಾಗ ಅದನ್ನು ಅಂಥ ವಾಸದ ಅಥವಾ ವ್ಯವಹಾರದ ಸ್ಥಳದ ಯಾವುದೇ ಎದ್ದುಕಾಣುವ ಭಾಗದಲ್ಲಿ ಅಂಟಿಸುವ ಮೂಲಕ

- ಅದನ್ನು ಜಾರಿ ಮಾಡಬಹುದು ಅಥವಾ ಕಳುಹಿಸಿಕೊಡಬಹುದು.

(2) ಆ ವ್ಯಕ್ತಿಯು, ಯಾವುದೇ ಕಟ್ಟಡದ ಅಥವಾ ಭೂಮಿಯ ಖಾತಾದಾರನಾಗಿರುವಾಗ ಅಥವಾ ಅಧಿಭೋಗದಾರನಾಗಿರುವಾಗ, ದಸ್ತಾವೇಜಿನಲ್ಲಿ ಖಾತಾದಾರನನ್ನು ಅಥವಾ ಅಧಿಭೋಗದಾರನನ್ನು ಹೆಸರಿಸುವುದು ಅವಶ್ಯವಾಗಿರತಕ್ಕದ್ದಲ್ಲ ಮತ್ತು ಜಂಟಿ ಖಾತಾದಾರರ ಮತ್ತು ಅಧಿಭೋಗದಾರರ ಸಂದರ್ಭದಲ್ಲಿ, ಅಂಥ ಖಾತಾದಾರರ ಅಥವಾ ಅಧಿಭೋಗದಾರರ ಪೈಕಿ ಒಬ್ಬನಿಗೆ ಅದನ್ನು ಜಾರಿ ಮಾಡಿದರೆ ಅಥವಾ ಕಳುಹಿಸಿದರೆ ಸಾಕಾಗಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಜಾರಿ ಮಾಡಿದ ಅಥವಾ ಕಳುಹಿಸಿದ ಯಾವುದೇ ಬಿಲ್ಲು, ನೋಟೀಸು, ನಮೂನೆ ಅಥವಾ ಇತರ ದಸ್ತಾವೇಜಿನಲ್ಲಿ ಯಾವುದೇ ತೆರಿಗೆಯನ್ನು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಅಥವಾ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅಥವಾ ಯಾವುದನ್ನಾದರೂ ಒದಗಿಸಲು ಅವಧಿಯನ್ನು ನಿಗದಿಪಡಿಸಿದಾಗಲೆಲ್ಲಾ, ಅಂಥ ಅವಧಿಯನ್ನು ಈ ಅಧಿನಿಯಮದಲ್ಲಿ ಅದಕ್ಕೆ ತದ್ವಿರುದ್ಧವಾದ ಸ್ಪಷ್ಟ ಉಪಬಂಧ ಇಲ್ಲದಿರುವಲ್ಲಿ ಅಂಥ ಜಾರಿಯ ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

346. ವಿಧಿಸಬಹುದಾದ ಮೊತ್ತವನ್ನು ಅಧಿಭೋಗದಾರನು ಖಾತೆದಾರರಿಂದ ವಸೂಲು ಮಾಡುವುದು.- ಯಾವುದೇ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಈ ಅಧಿನಿಯಮದ ಮೇರೆಗೆ ಯಾವ ಹಣ ಸಂದಾಯ ಮಾಡಲು ಆ ಕಟ್ಟಡದ ಅಥವಾ ಭೂಮಿಯ ಖಾತೆದಾರನು ಹೊಣೆಗಾರನಾಗಿರುವನೋ ಆದರೆ ಅಧಿಭೋಗದಾರನು ಹೊಣೆಗಾರನಾಗಿಲ್ಲವೋ ಆ ಯಾವುದೇ ಹಣ ಸಂದಾಯವನ್ನು ಅಧಿಭೋಗದಾರನು ಆ ಖಾತೆದಾರನ ಪರವಾಗಿ ಮಾಡಿದರೆ, ಅಂಥ ಅಧಿಭೋಗದಾರನು ಅದನ್ನು ಖಾತೆದಾರನಿಂದ ವಸೂಲ್ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಆಗ ಅಥವಾ ಆ ತರುವಾಯ ಅಧಿಭೋಗದಾರನು ಖಾತೆದಾರನಿಗೆ ಕೊಡಬೇಕಾದ ಬಾಡಿಗೆಯಿಂದ ಅದನ್ನು ಮುರಿದುಕೊಳ್ಳಬಹುದು.

347. ಅಧಿಭೋಗದಾರನಿಂದ ಖಾತೆದಾರನಿಗೆ ಅಡ್ಡಿ.- (1) ಯಾವುದೇ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಆ ಕಟ್ಟಡಕ್ಕೆ ಅಥವಾ ಭೂಮಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಕಾರ್ಯಗತಗೊಳಿಸಲು ಖಾತಾದಾರನನ್ನು ಅಡ್ಡಿಪಡಿಸಿದರೆ, ಆಯುಕ್ತರು ಆದೇಶದ ಮೂಲಕ ಸದರಿ ಅಧಿಭೋಗದಾರನನ್ನು ಅಂಥ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಎಂಟು ದಿನಗಳ ಒಳಗಾಗಿ ಅವಶ್ಯವಾಗಬಹುದಾದಂಥ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಖಾತೆದಾರನಿಗೆ ಅವಕಾಶ ಮಾಡಿಕೊಡುವಂತೆ ಅಗತ್ಯಪಡಿಸಬಹುದು.

(2) ಅಂಥ ಖಾತೆದಾರನನ್ನು, ಮೇಲೆ ಹೇಳಿದಂತೆ, ಯಾವ ಅವಧಿಗೆ ಅವನನ್ನು ಅಡ್ಡಿಪಡಿಸಲಾಯಿತೋ ಆ ಅವಧಿಗೆ ಅಂಥ ಕೆಲಸಗಳನ್ನು ನಿರ್ವಹಿಸಲು ತಪ್ಪಿದ ಕಾರಣದಿಂದಾಗಿ ಅವನು ಅನ್ಯಥಾ ಗುರಿಯಾಗಬಹುದಾಗಿದ್ದಂಥ ಯಾವುದೇ ಜುಲ್ಮಾನೆಯಿಂದ ಅಥವಾ ದಂಡನೆಯಿಂದ ವಿನಾಯಿತಿಗೊಳಿಸತಕ್ಕದ್ದು.

348. ಖಾತೆದಾರನು ತಪ್ಪಿದಲ್ಲಿ ಅಧಿಭೋಗದಾರನಿಂದ ಕೆಲಸದ ನಿರ್ವಹಣೆ.- ಯಾವುದೇ ಕಟ್ಟಡದ ಅಥವಾ ಭೂಮಿಯ ಖಾತೆದಾರನು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಉಪಬಂಧಗಳ ಮೇರೆಗೆ ಯಾವ ಕೆಲಸವನ್ನು ನಿರ್ವಹಿಸಲು ಅವನನ್ನು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಕೆಲಸವನ್ನು ನಿರ್ವಹಿಸಲು ತಪ್ಪಿದರೆ, ಅಂಥ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಆಯುಕ್ತರ ಅನುಮೋದನೆಯೊಂದಿಗೆ ಸದರಿ

ಕೆಲಸವನ್ನು ನಿರ್ವಹಿಸಬಹುದು ಮತ್ತು ಅದನ್ನು ನಿರ್ವಹಿಸುವಾಗ ವಹಿಸಿದ ಯುಕ್ತ ವೆಚ್ಚಗಳನ್ನು ಖಾತೆದಾರನಿಂದ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅದರ ಮೊಬಲಗನ್ನು ಅದರ ಖಾತೆದಾರನಿಗೆ ತಾನು ಆಗ ಅಥವಾ ಆ ತರುವಾಯ ಕೊಡಬೇಕಾಗಿರುವ ಬಾಡಿಗೆಯಿಂದ ಮುರಿದುಕೊಳ್ಳಬಹುದು.

349. ಆದೇಶವನ್ನು ಪಾಲಿಸಲು ಕಾಲಾವಕಾಶ ಮತ್ತು ತಪ್ಪಿದರೆ ಅದನ್ನು ಜಾರಿಗೊಳಿಸಲು ಅಧಿಕಾರ.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸಿನ, ನೀಡಿದ ಕಡ್ಡಾಯ ಸೂಚನೆಯ ಅಥವಾ ಆದೇಶದ ಮೂಲಕ ಯಾರೇ ವ್ಯಕ್ತಿಯನ್ನು ಯಾವುದೇ ಕೆಲಸವನ್ನು ನಿವರ್ಹಿಸುವಂತೆ ಅಥವಾ ಯಾವುದೇ ಕ್ರಮಗಳನ್ನು ಕೈಗೊಳ್ಳುವಂತೆ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ಅಗತ್ಯಪಡಿಸಿದಾಗಲೆಲ್ಲಾ, ಯಾವ ಕಾಲದೊಳಗಾಗಿ ಆ ಕೆಲಸವನ್ನು ನಿರ್ವಹಿಸಬೇಕೋ, ಆ ಕ್ರಮಗಳನ್ನು ಕೈಗೊಳ್ಳಬೇಕೋ ಅಥವಾ ಆ ಕಾರ್ಯವನ್ನು ಮಾಡಬೇಕೋ, ಆ ಯುಕ್ತ ಕಾಲಾವಧಿಯನ್ನು ಅಂಥ ನೋಟೀಸಿನಲ್ಲಿ ಕಡ್ಡಾಯ ಸೂಚನೆಯಲ್ಲಿ ಅಥವಾ ಆದೇಶದಲ್ಲಿ ತಿಳಿಸತಕ್ಕದ್ದು.

(2) ಅಂಥ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ಹಾಗೆ ತಿಳಿಸಿರುವಂಥ ಕಾಲದೊಳಗೆ ಪಾಲಿಸದಿದ್ದರೆ ಆಗ ಹಾಗೆ ತಪ್ಪಿದ್ದಕ್ಕಾಗಿ ಜುಲ್ಮಾನೆ ವಿಧಿಸುವುದಕ್ಕೆ ಅವಕಾಶ ಕಲ್ಪಿಸಿರಲಿ ಅಥವಾ ಅವಕಾಶ ಕಲ್ಪಿಸದಿರಲಿ ಮತ್ತು ಹಾಗೆ ತಪ್ಪಿದ್ದಕ್ಕಾಗಿ ಹಾಗೆ ತಪ್ಪಿದ ವ್ಯಕ್ತಿಯು ಶಿಕ್ಷೆಗೆ ಗುರಿಯಾಗಲಿ ಅಥವಾ ಗುರಿಯಾಗದಿರಲಿ ಅಥವಾ ಹಾಗೆ ತಪ್ಪಿದ್ದಕ್ಕಾಗಿ ಅವನನ್ನು ಅಭಿಯೋಜನೆಗೆ ಗುರಿಪಡಿಸಿರಲಿ ಅಥವಾ ಅವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸಿರಲಿ, ಪ್ರಾಧಿಕಾರದ ಸಂದರ್ಭದಲ್ಲಿ ಮುಖ್ಯ ಆಯುಕ್ತರು ಮತ್ತು ನಗರ ಪಾಲಿಕೆ ಸಂದರ್ಭದಲ್ಲಿ ಆಯುಕ್ತರು, ಅಂಥ ಕೆಲಸವನ್ನು ಅವನಿಂದ ಮಾಡಿಸತಕ್ಕದ್ದು ಅಥವಾ ಮೇಲೆ ಹೇಳಿದಂತೆ ಆ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ವಿದ್ಯುಕ್ತವಾಗಿ ಜಾರಿಗೊಳಿಸುವುದಕ್ಕಾಗಿ ಅವಶ್ಯವೆಂದು ತಾವು ಅಭಿಪ್ರಾಯಪಡುವಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು ಅಥವಾ ಯಾವುದೇ ಕಾರ್ಯವನ್ನು ಮಾಡಬಹುದು.

(3) ಅಂಥ ನೋಟೀಸನ್ನು ಪಾಲಿಸಲು ತಪ್ಪಿದುದಕ್ಕಾಗಿ, ಈ ಅಧಿನಿಯಮದಲ್ಲಿ ವಿಶೇಷವಾಗಿ ಯಾವುದೇ ದಂಡನೆಯನ್ನು ಉಪಬಂಧಿಸಿರದಿದ್ದರೆ ಸದರಿ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಅಂಥ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅಥವಾ ನಗರ ಪಾಲಿಕೆಗೆ ಪಾವತಿ ಬಾಕಿಯಿರುವ ಯಾವುದೇ ಮೊಬಲಗಿಗೆ ಸಂಬಂಧಿಸಿದಂತೆ ಯಾವುದೇ ಬಡ್ಡಿಯನ್ನು ನಿರ್ದಿಷ್ಟಪಡಿಸದಿದ್ದಲ್ಲಿ ಅದನ್ನು ವಾರ್ಷಿಕ ಶೇ. 9ರ ಬಡ್ಡಿದರದಲ್ಲಿ ಪಾವತಿಸಲು ಹೊಣೆಗಾರರಾಗಿರತಕ್ಕದ್ದು.

350. ವೆಚ್ಚಗಳ ಸಂದಾಯವನ್ನು ಕಂತುಗಳಲ್ಲಿ ಸ್ವೀಕರಿಸುವುದಕ್ಕೆ ಒಪ್ಪಲು ಆಯುಕ್ತರ ಅಧಿಕಾರ.- ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಮೇಲೆ ಹೇಳಿದಂಥ ಯಾವುದೇ ವೆಚ್ಚಗಳನ್ನು ವಸೂಲಿ ಮಾಡುವುದಕ್ಕೆ ಬದಲಾಗಿ, ಆಯುಕ್ತನು, ತಾನು ಸೂಕ್ತವೆಂದು ಭಾವಿಸಿದರೆ ಮತ್ತು ಸ್ಥಾಯೀ ಸಮಿತಿಯ ಅನುಮೋದನೆ ಪಡೆದು ಆ ಮೊಬಲಗನ್ನು ಐದು ವರ್ಷಗಳಿಗೆ ಮೀರದ ಅವಧಿಯೊಳಗೆ, ಪ್ರತಿ ವರ್ಷಕ್ಕೆ ಶೇಕಡ ಒಂಬತ್ತರ ದರದಲ್ಲಿ ಅದರ ಮೇಲಿನ ಬಡ್ಡಿಯೊಂದಿಗೆ ಬಾಕಿಯಿರುವ ಪೂರ್ಣ ಮೊಬಲಗು ಸಂದಾಯವಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಹಾಗೆ ಅಂಥ ಮೊಬಲಗನ್ನು ಕಂತುಗಳಲ್ಲಿ ಮತ್ತು ಅಂಥ ಕಾಲಾಂತರಗಳಲ್ಲಿ ಅದನ್ನು ಸಂದಾಯ ಮಾಡುವ ಬಗ್ಗೆ ಅದರ ಸಂದಾಯಕ್ಕೆ ಹೊಣೆಗಾರನಾದ ವ್ಯಕ್ತಿಯಿಂದ ಒಂದು ಒಪ್ಪಂದ ಪತ್ರವನ್ನು ಪಡೆದುಕೊಳ್ಳಬಹುದು.

351. ಕೆಲವು ಕಾಮಗಾರಿಗಳ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಲು ಅಧಿಕಾರ.- ಈ ಅಧಿನಿಯಮದ ಉಪಬಂಧಗಳಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾವುದೇ ಕಾಮಗಾರಿಯ ಸಂಬಂಧದಲ್ಲಿ ಭರಿಸಲಾಗಿರುವ ಅಥವಾ ಭರಿಸುವ ವೆಚ್ಚಗಳನ್ನು ವಸೂಲು ಮಾಡಬೇಕಾದರೆ ಅಥವಾ ಅಂಥ ವೆಚ್ಚಗಳಿಗೆ ಈ ಪ್ರಕರಣವನ್ನು ಅನ್ವಯ ಮಾಡಿದ್ದರೆ ಆಯುಕ್ತನು, ತಾನು ಸೂಕ್ತವೆಂದು ಭಾವಿಸಿದರೆ, ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಅಂಥ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಬಹುದು.

352. ಮೇಲ್ಪಾಟು ವೆಚ್ಚಗಳನ್ನು ಯಾರು ಸಂದಾಯ ಮಾಡಬೇಕು.- (1) ಯಾವ ಆವರಣಗಳ ಸಂಬಂಧದಲ್ಲಿ ಅಥವಾ ಯಾವ ಆವರಣಗಳ ಅಥವಾ ಸ್ವತ್ತುಗಳ ಪ್ರಯೋಜನಕ್ಕಾಗಿ ಮೇಲ್ಪಾಟು ವೆಚ್ಚಗಳನ್ನು ಮಾಡಲಾಗಿದೆಯೋ ಆ ಆವರಣಗಳ ಮೇಲೆ ಆ ವೆಚ್ಚಗಳು ಋಣ ಭಾರವಾಗಿರತಕ್ಕದ್ದು ಮತ್ತು ಆಯುಕ್ತನು ಪ್ರತಿಯೊಂದು ಸಂದರ್ಭದಲ್ಲಿ ನಿರ್ಧರಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯೊಳಗೆ ಅಂಥ ವೆಚ್ಚಗಳನ್ನು ಅವುಗಳ ಮೇಲಿನ ಬಡ್ಡಿಯೊಂದಿಗೆ ತೀರಿಸಲು ಸಾಕಾಗುವಂಥ ಮೊಬಲಗುಗಳ ಕಂತುಗಳಲ್ಲಿ ಮತ್ತು ಕಾಲಾಂತರಗಳಲ್ಲಿ, ಅವು ವಸೂಲಿ ಮಾಡುವಂಥವು ಆಗಿರತಕ್ಕದ್ದು.

(2) ಸದರಿ ಕಂತುಗಳು, ಯಾವ ಆವರಣಗಳ ಮೇಲೆ ವೆಚ್ಚಗಳ ಋಣಭಾರ ಹೊರಿಸಲಾಗಿದೆಯೋ ಆ ಯಾವುವೇ ಆವರಣಗಳ ಖಾತೆದಾರನು ಅಥವಾ ಅಧಿಭೋಗದಾರನು ಸಂದಾಯ ಮಾಡುವಂಥವುಗಳು ಆಗಿರತಕ್ಕದ್ದು:

ಪರಂತು, ಯಾವುದೇ ಅಂಥ ಕಂತನ್ನು ಅಧಿಭೋಗದಾರನು ಸಂದಾಯ ಮಾಡಿದಾಗ ಅವನು ಖಾತೆದಾರನಿಗೆ ಸಂದಾಯ ಮಾಡಬೇಕಾದ ಬಾಡಿಗೆಯಿಂದ ಆ ಕಂತಿನ ಮೊಬಲಗನ್ನು ಮುರಿದುಕೊಳ್ಳಲು ಅಥವಾ ಖಾತೆದಾರನಿಂದ ಅದನ್ನು ವಸೂಲಿ ಮಾಡಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

353. ಮೇಲ್ಪಾಟು ವೆಚ್ಚಗಳಿಗೆ ಸಂಬಂಧಿಸಿದ ಋಣಭಾರದ ವಿಮೋಚನೆ.- ಯಾವುದೇ ಮೇಲ್ಪಾಟು ವೆಚ್ಚಗಳ ಸಂದಾಯದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಯಾವುದೇ ಕಾಲದಲ್ಲಿ ಯಾವ ಆವರಣಗಳ ಮೇಲೆ ವೆಚ್ಚಗಳ ಋಣಭಾರ ಹೊರಿಸಲಾಗಿದೆಯೋ, ಆ ಆವರಣದ ಖಾತೆದಾರನು ಅಥವಾ ಅಧಿಭೋಗದಾರನು, ಸದರಿ ವೆಚ್ಚಗಳಲ್ಲಿ ಇನ್ನೂ ಸಂದಾಯ ಮಾಡಬೇಕಾಗಿರುವಂಥ ಭಾಗವನ್ನು ಆಯುಕ್ತರಿಗೆ ಸಂದಾಯ ಮಾಡುವ ಮೂಲಕ ಅಂಥ ಋಣಭಾರದಿಂದ ವಿಮೋಚನೆ ಹೊಂದಬಹುದು.

354. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮತ್ತು ನಗರ ಪಾಲಿಕೆಯ ಅಧಿಕಾರಿಗಳು, ಏಜಂಟರುಗಳು ಮತ್ತು ಉಪ-ಏಜಂಟರುಗಳಿಗೆ "ಲೋಕನೌಕರ" ಪದದ ಅನ್ವಯಿಸುವಿಕೆ.- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಥವಾ ನಗರ ಪಾಲಿಕೆಯ ಸೇವೆಯಲ್ಲಿರುವ ಅಥವಾ ವೇತನ ಪಡೆಯುತ್ತಿರುವ ಪ್ರತಿಯೊಬ್ಬ ನಗರ ಪಾಲಿಕೆ ಸದಸ್ಯನನ್ನು, ಅಧಿಕಾರಿಯನ್ನು ಅಥವಾ ನೌಕರನನ್ನು ಅಥವಾ ವ್ಯಕ್ತಿಯನ್ನು, ನಗರ ಪಾಲಿಕೆಯ ಯಾವುದೇ ತೆರಿಗೆಯನ್ನು, ಫೀಜನ್ನು, ಅಥವಾ ನಗರ ಪಾಲಿಕೆಗೆ ಬಾಕಿ ಇರುವ ಇತರ ಮೊತ್ತವನ್ನು ಸಂಗ್ರಹಿಸುವುದಕ್ಕಾಗಿ ಇರುವ ಪ್ರತಿಯೊಬ್ಬ ಕಂಟ್ರಾಕ್ಟರನನ್ನು ಅಥವಾ ಏಜೆಂಟನನ್ನು ಮತ್ತು ಅಂಥ ತೆರಿಗೆಯನ್ನು, ಫೀಜನ್ನು ಅಥವಾ ಮೊತ್ತವನ್ನು ಸಂಗ್ರಹಿಸುವುದಕ್ಕಾಗಿ ಅಂಥ ಯಾರೇ ಕಂಟ್ರಾಕ್ಟರ್‌ನಿಂದ ಅಥವಾ ಏಜೆಂಟನಿಂದ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತೀಯ ನ್ಯಾಯ ಸಂಹಿತೆಯ 2ನೇ ಪ್ರಕರಣದ 28ನೇ ಉಪಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರ ಎಂದು ಭಾವಿಸತಕ್ಕದ್ದು.

355. ಕಂಪೆನಿಗಳಿಂದ ಅಪರಾಧಗಳು.- (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧ ನಡೆದ ಕಾಲದಲ್ಲಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪೆನಿಯನ್ನು ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿರುವುದು ಯಾವುದು ಅಪರಾಧವು ತನಗೆ ತಿಳಿಯದೆಯೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಯುಕ್ತವಾದ ಎಲ್ಲ ಜಾಗರೂಕತೆಯನ್ನು ತಾನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪೆನಿಯ ಯಾರೇ ನಿರ್ದೇಶಕರ, ವ್ಯವಸ್ಥಾಪಕರ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವರ ಯಾವುದೇ

ನಿರ್ಲಕ್ಷ್ಯತೆಯಿಂದಾಗಿ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನೂ ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) `ಕಂಪನಿ' ಎಂದರೆ, ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮ್, ಸೊಸೈಟಿ ಮತ್ತು ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ;

(ಬಿ) ಫರ್ಮಿಗೆ ಸಂಬಂಧಿಸಿದಂತೆ `ನಿರ್ದೇಶಕ' ಎಂದರೆ, ಆ ಫರ್ಮ್‌ನ ಪಾಲುದಾರ.

(3) ಈ ಅಧಿನಿಯಮದ ಮೂಲಕ ನಿಷೇಧಿಸಲಾದ ಯಾವುದೇ ಕಾರ್ಯವನ್ನು ಮಾಡುವ ಅಥವಾ ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದಂತೆ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ವಿಫಲನಾಗುವ ಯಾರೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅದಕ್ಕಾಗಿ ನಿರ್ದಿಷ್ಟ ದಂಡನೆಯನ್ನು ಉಪಬಂಧಿಸಲಾಗದ ಹೊರತು 320ನೇ ಪ್ರಕರಣದ ಮೇರೆಗೆ ದಂಡಿತನಾಗತಕ್ಕದ್ದು.

356. ಧ್ವಜದ ಅಧಿಕೃತ ಪ್ರದರ್ಶನ.- (1) ಯಾರೇ ವ್ಯಕ್ತಿಯು ರಾಷ್ಟ್ರಧ್ವಜವನ್ನು ಅಥವಾ ಸರ್ಕಾರವು ಅನುಮೋದಿಸಿದ ಧ್ವಜವನ್ನು ಹೊರತುಪಡಿಸಿ ಯಾವುದೇ ಇತರ ಧ್ವಜವನ್ನು ನಗರ ಪಾಲಿಕೆಯ ಕಚೇರಿಯ ಮೇಲೆ ಹಾರಿಸತಕ್ಕದ್ದಲ್ಲ.

(2) ಉಪಪ್ರಕರಣ (1)ನ್ನು ಉಲ್ಲಂಘಿಸುವ ಯಾವೊಬ್ಬನು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರೆದ ಪ್ರತಿಯೊಂದು ದಿನಕ್ಕೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

357. ಸವಾಲು ಕೂಗುವುದಕ್ಕೆ ನಿಷೇಧ.- (1) ಈ ಅಧಿನಿಯಮದ ಮೇರೆಗೆ ನಗರ ಪಾಲಿಕೆಯಿಂದ ಅಥವಾ ಅದರ ಪರವಾಗಿ ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಬೇಕಾಗಿರುವ ನಗರ ಪಾಲಿಕೆಯ ಯಾರೇ ನೌಕರನು ಅಥವಾ ಅಧಿಕಾರಿಯು ಅಂಥ ಮಾರಾಟದಲ್ಲಿ ಮಾರಾಟ ಮಾಡುವ ಯಾವುದೇ ಸ್ವತ್ತಿಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸವಾಲು ಕೂಗತಕ್ಕದ್ದಲ್ಲ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಹೊಂದತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಸೇವೆಯಿಂದ ವಜಾಗೊಳಿಸುವುದಕ್ಕೂ ಸಹ ಗುರಿಯಾಗತಕ್ಕದ್ದು.

358. ನಗರ ಪಾಲಿಕೆಯ ಪ್ರದೇಶದೊಳಗೆ ಪಂಚಾಯಿತಿ ಪ್ರದೇಶವನ್ನು ವಿಲೀನಗೊಳಿಸುವುದರ ಪರಿಣಾಮ.- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಒಂದು ಪಂಚಾಯತ್ ಪ್ರದೇಶದಲ್ಲಿನ ಒಂದು ಅಥವಾ ಹೆಚ್ಚು ಕಂದಾಯ ಗ್ರಾಮಗಳನ್ನು ಒಳಗೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಈ ಅಧಿನಿಯಮದ ಮೇರೆಗಿನ ಅಧಿಸೂಚನೆಯ ಕಾರಣದಿಂದ ನಗರ ಪಾಲಿಕೆ ಪ್ರದೇಶದಲ್ಲಿ ಸೇರಿಸಿದ್ದರೆ ಆಗ ಈ ಅಧಿನಿಯಮ ಅಥವಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅಂಥ ಪ್ರದೇಶವನ್ನು ನಗರ ಪಾಲಿಕೆ ಪ್ರದೇಶದಲ್ಲಿ ಸೇರಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ,-

(ಎ) ಅಂಥ ಸ್ಥಳೀಯ ಪ್ರದೇಶದ ಗ್ರಾಮ ಪಂಚಾಯತಿಯು (ಇದರಲ್ಲಿ ಇನ್ನು ಮುಂದೆ ಪಂಚಾಯಿತಿ ಎಂದು ಉಲ್ಲೇಖಿಸಲಾಗಿದೆ) ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಪ್ರದೇಶವು ಯಾವ ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗೆ ಇದೆಯೋ ಆ ತಾಲ್ಲೂಕು ಪಂಚಾಯಿತಿಯು ಮತ್ತು ಆ ಜಿಲ್ಲಾ ಪಂಚಾಯತಿಯು

ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು;

(ಬಿ) ಗ್ರಾಮ ಪಂಚಾಯತಿಯ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಫೀಜುಗಳ ಬಾಕಿಗಳೂ ಸೇರಿದಂತೆ) ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದಂತೆ ಎಲ್ಲ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ನಗರ ಪಾಲಿಕೆ ಪ್ರದೇಶದ ನಗರ ಪಾಲಿಕೆಯಲ್ಲಿ (ಇದರಲ್ಲಿ ಇನ್ನು ಮುಂದೆ ನಗರ ಪಾಲಿಕೆ ಎಂದು ಉಲ್ಲೇಖಿಸಲಾಗಿದೆ) ನಿಹಿತವಾಗತಕ್ಕದ್ದು;

(ಸಿ) ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕದ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯ ಮೂಲಕ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಡಿ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳು, ನಿರ್ಧರಣೆಗಳು, ನಿರ್ಧರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಇ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯು ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಕರಾರುಗಳನ್ನು ಈ ಅಧಿನಿಯಮದ ಮೂಲಕ ನಗರ ಪಾಲಿಕೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ನಗರ ಪಾಲಿಕೆಯು ವಹಿಸಿದೆ ಎಂದು ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು;

(ಎಫ್) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಮೇರೆಗೆ ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಕ್ಕೆ ಅನುಸಾರವಾಗಿ ಬೇರೆ ಏರ್ಪಾಟನ್ನು ಮಾಡುವವರೆಗೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ ಅವರು ಯಾವ ಸಂಬಳಕ್ಕೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿದ್ದರೋ ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ನಗರ ಪಾಲಿಕೆಯ ಅಧೀನದಲ್ಲಿನ ಸೇವೆಯ ಅಗತ್ಯತೆಗಳಿಗೆ ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ನಗರ ಪಾಲಿಕೆಯು ಅಭಿಪ್ರಾಯಪಡುವುದೋ ಅಂಥ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ, ಅವನ ನಿಯೋಜನೆಯ ನಿಬಂಧನೆಗಳು ಕೊಡಲು ಅಗತ್ಯಪಡಿಸಿದಂಥ ನೋಟೀಸನ್ನು ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು, ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಮುಂದುವರಿಸದಿರುವುದು ನಗರ ಪಾಲಿಕೆಗೆ ಸಕ್ಷಮವಾದುದಾಗಿರತಕ್ಕದ್ದು ಮತ್ತು ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು ಅವನು ಯಾವ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗದಿದ್ದರೆ ಹೇಗೋ ಹಾಗೆ ಸೇವೆಯಿಂದ ಅಸಿಂಧುಗೊಳಿಸಿದಾಗ ತೆಗೆದುಕೊಳ್ಳಲು ಅಥವಾ ಪಡೆಯಲು ಅವನು ಹಕ್ಕುಳ್ಳವನಾಗಬಹುದಾಗಿದ್ದ ರಜೆ, ಪಿಂಚಣಿ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಜಿ) ಸದರಿ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ವ್ಯವಹರಣೆಗಳು ನಗರ ಪಾಲಿಕೆಗೆ ವರ್ಗಾವಣೆಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಮಹಾನಗರ ಪಾಲಿಕೆಯಲ್ಲಿ ಮುಂದುವರಿಸತಕ್ಕದ್ದು;

(ಹೆಚ್) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು ಕಾರ್ಯಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ, ಸದರಿ ಸ್ಥಳೀಯ ಪ್ರದೇಶವು ದೊಡ್ಡ ನಗರ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು; ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ, ಪಂಚಾಯಿತಿಯು ಅಥವಾ ಅದರ ಪರವಾಗಿ ಹೂಡಿದ್ದ ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಪಂಚಾಯಿತಿಯು ಅಥವಾ ಪಂಚಾಯತಿಯ ಯಾರೇ ಅಧಿಕಾರಿಯು ಹೂಡಿದ ಅಥವಾ ಪಂಚಾಯತಿಯ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ ಹೂಡಿದ್ದ ಎಲ್ಲ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಸದರಿ ಸ್ಥಳೀಯ ಪ್ರದೇಶವು ನಗರ ಪಾಲಿಕೆ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ನಗರ ಪಾಲಿಕೆಯು ಮುಂದುವರೆಸತಕ್ಕದ್ದು ಅಥವಾ ಅದರ ವಿರುದ್ಧ ಮುಂದುವರಿಸತಕ್ಕದ್ದು;

(ಐ) ನಗರ ಪಾಲಿಕೆಯಲ್ಲಿ ನಿಹಿತವಾಗಿರುವ, ದರಗಳ, ತೆರಿಗೆಗಳ ಮತ್ತು ಫೀಜುಗಳ ಎಲ್ಲ ಬಾಕಿಗಳು ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಬಹುದಾದ ತೆರಿಗೆಯ ರೀತಿಯಲ್ಲಿಯೇ ವಸೂಲಿ ಮಾಡುವಂಥವುಗಳು ಆಗಿರತಕ್ಕದ್ದು.

(ಜೆ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನಗರ ಪಾಲಿಕೆಯು ಪುನಾರಚನೆಯಾಗುವವರೆಗೆ ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ ನಗರ ಪಾಲಿಕೆ ಪ್ರದೇಶದಲ್ಲಿ ಸೇರಿಸಿದ ಸ್ಥಳೀಯ ಪ್ರದೇಶದ ಸಾಮಾನ್ಯ ನಿವಾಸಿಗಳಾಗಿರುವ, ಸರ್ಕಾರದಿಂದ ನಾಮನಿರ್ದೇಶಿತರಾಗಿರುವ ಅಷ್ಟು ಸಂಖ್ಯೆಯ ವ್ಯಕ್ತಿಗಳು ನಗರ ಪಾಲಿಕೆಯ ಹೆಚ್ಚುವರಿ ಕೌನ್ಸಿಲರುಗಳಾಗಿರತಕ್ಕದ್ದು.

359. ತೊಂದರೆಗಳ ನಿವಾರಣೆ.- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಸಂದರ್ಭವು ಅಗತ್ಯಪಡಿಸಬಹುದಾದಂತೆ, ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಕಂಡುಬರುವ ಯಾವುದೇ ಕಾರ್ಯವನ್ನು ಮಾಡಬಹುದು.

360. ತಾತ್ಕಾಲಿಕ ಉಪಬಂಧಗಳು.- (1) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ, 14), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ, 53) ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಮಾಡಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಾತಿ ಅಥವಾ ಈ ಅಧಿನಿಯಮವನ್ನು ಅಧಿನಿಯಮಿಸುವುದಕ್ಕೆ

ಸಂಬಂಧಿಸಿದ ಯಾವುದೇ ವಿಷಯಗಳನ್ನು ಉಪಬಂಧಿಸಿದ ಅಥವಾ ಸಂಬಂಧಿಸಿದ ವಿಷಯಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳು ಅಧಿಸೂಚನೆ, ಆದೇಶ ಅಥವಾ ನೇಮಕಾತಿಯ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸಿದ ಹೊರತು ಅಥವಾ ರದ್ದುಪಡಿಸುವವರೆಗೆ ಜಾರಿಯಲ್ಲಿ ಮುಂದುವರೆಯತಕ್ಕದ್ದು ಹಾಗೂ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅವುಗಳನ್ನು ಮಾಡಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಕ ಮಾಡಿದ್ದರೆ ಹೇಗೋ ಹಾಗೆ ಪರಿಣಾಮಕಾರಿ ಆಗಿರತಕ್ಕದ್ದು.

361. ನಿರಸನ ಮತ್ತು ಉಳಿಸುವಿಕೆ.- (1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53) ಉಪಬಂಧಗಳನ್ನು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು,-

(ಎ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಕೈಗೊಂಡ ಯಾವುದೇ ಕಾರ್ಯಕ್ಕೆ; ಅಥವಾ

(ಬಿ) ಸದರಿ ಅಧಿನಿಯಮದ ಪೂರ್ವ ಕಾರ್ಯಾಚರಣೆ ಅಥವಾ ಅದರಡಿಯಲ್ಲಿ ಯುಕ್ತವಾಗಿ ಮಾಡಿದ ಅಥವಾ ಬಾಧಿತವಾದ ಯಾವುದೇ ವಿಷಯಕ್ಕೆ; ಅಥವಾ

(ಸಿ) ಸದರಿ ಅಧಿನಿಯಮದ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕಿಗೆ, ವಿಶೇಷಾಧಿಕಾರಕ್ಕೆ, ಬಾಧ್ಯತೆಗೆ ಅಥವಾ ಹೊಣೆಗಾರಿಕೆಗೆ; ಅಥವಾ

(ಡಿ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ದಂಡ ಅಥವಾ ದಂಡನೆಗೆ,- ಬಾಧಕವನ್ನು ಉಂಟುಮಾಡತಕ್ಕದಲ್ಲ

ಮತ್ತು ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

ಮತ್ತು ಅಲ್ಲದೆ, ಸದರಿ ಅಧಿನಿಯಮಿತ ಅಡಿಯಲ್ಲಿ (ಮಾಡಿದ ಯಾವುದೇ ನೇಮಕಾತಿ ಅಥವಾ ಪ್ರತಿನಿಯೋಜನೆ ವಿಧಿಸಿದ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರ ಅಥವಾ ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಪತ್ರ ಅಥವಾ ನಿರ್ದೇಶನ ಅಥವಾ ರಚಿಸಿದ ನಿಯಮ, ವಿನಿಯಮ, ನಮೂನೆ, ಉಪವಿಧಿ, ಅಥವಾ ಸ್ಕೀಮ್ ಅಥವಾ ಪಡೆದುಕೊಂಡ ಪ್ರಮಾಣ ಪತ್ರ ಅಥವಾ ಮಂಜೂರು ಮಾಡಿದ ಅನುಮತಿ ಅಥವಾ ಲೈಸೆನ್ಸು ಅಥವಾ ಜಾರಿಗೊಳಿಸಿದ ನೋಂದಣಿಯೂ ಸೇರಿದಂತೆ) ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವು ಹಿಂದಿನ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಿದ್ದೆಂದು ಅಥವಾ ತೆಗೆದುಕೊಂಡಿದ್ದೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯವು ಅಥವಾ ತೆಗೆದುಕೊಂಡ ಯಾವುದೇ ಕ್ರಮವು ರದ್ದಾದ ಹೊರತು ಮತ್ತು ರದ್ದಾಗುವವರೆಗೆ ತದನುಸಾರವಾಗಿ ಜಾರಿಯಲ್ಲಿ ಮುಂದುವರೆಯತಕ್ಕದ್ದು :

ಅಲ್ಲದೆ ಪರಂತು, ಹಿಂದಿನ ಪರಂತುಕಗಳಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಅನುಮತಿಸಲಾದ ಗರಿಷ್ಠ ದರಕ್ಕಿಂತ ಹೆಚ್ಚಿನ ದರದಲ್ಲಿ ಸದರಿ ಅಧಿನಿಯಮಗಳ ಅಡಿಯಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕವನ್ನು ಹೊರತುಪಡಿಸಿ ಯಾವುದೇ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರವನ್ನು ವಿಧಿಸಲಾಗಿದ್ದಲ್ಲಿ, ಅಂಥ ತೆರಿಗೆ, ಸುಂಕ, ಶುಲ್ಕ, ಅಥವಾ ಉಪಕರವನ್ನು ಈ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಆ ಮೂಲಕ ರದ್ದಾಗುವವರೆಗೆ ಅಥವಾ ರದ್ದಾಗುವ

ಹೊರತು ಅಂಥ ಹೆಚ್ಚಿನ ದರದಲ್ಲಿ ವಿಧಿಸುವುದು ಮತ್ತು ಸಂಗ್ರಹಿಸುವುದು ಮುಂದುವರೆಯಬಹುದು.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಸದರಿ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಯಾವುದೇ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರವು ಏನೇ ಒಳಗೊಂಡಿದ್ದರೂ ಅಂಥ ವಿಧಿಸುವಿಕೆ ಮತ್ತು ವಸೂಲಿಯೂ ನಿರಸಗೊಳ್ಳುವುದಕ್ಕೆ ಸಂಬಂಧಿಸಿದಂತೆ ಅಂಥ ಅಧಿನಿಯಮಿತಿಗಳು, ನಿಯಮಗಳು, ಉಪವಿಧಿಗಳು, ಆದೇಶಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಅಧಿಸೂಚನೆಗಳ ಉಪಬಂಧಗಳಲ್ಲಿ ಹೇಗೋ ಹಾಗೆ ವಿಧಿಸುವುದು ಮತ್ತು ವಸೂಲು ಮಾಡುವುದು ಮುಂದುವರೆಯತಕ್ಕದ್ದು.

ಅನುಸೂಚಿ-I
(ಪ್ರಕರಣ-111 ಅನ್ನು ನೋಡಿ)

(1) ಪ್ರಮುಖ ಕರ್ತವ್ಯಗಳು:

(i) ಪಟ್ಟಣ ಯೋಜನೆ ಸೇರಿದಂತೆ ನಗರ ಯೋಜನೆ;

(ii) ಒತ್ತುವರಿ ಮತ್ತು ಕಟ್ಟಡ ನಿರ್ಮಾಣ ಮಾಡುವುದರಿಂದ ಸಾರ್ವಜನಿಕ ಭೂಮಿಯ ಸಂರಕ್ಷಣೆಯೂ ಸೇರಿದಂತೆ ಭೂ-ಬಳಕೆ ವಿನಿಯಮನ;

(iii) ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆ;

(iv) ಫ್ಲೈಓವರ್(ಮೇಲ್ಸೇತುವೆ), ಕೆಳರಸ್ತೆ, ಸುರಂಗಮಾರ್ಗ, ಸಂಚಾರಿ ದ್ವೀಪಗಳು, ಪಾದಾಚಾರಿ ಮಾರ್ಗ, ರಸ್ತೆದಾಟುವಿಕೆ ಸೌಲಭ್ಯ, ಸ್ಕೈವಾಕ್ ಮತ್ತು ಸೇತುವೆಗಳು ಸೇರಿದಂತೆ ರಸ್ತೆಗಳು;

(v) ಗೃಹಬಳಕೆಗೆ, ಕೈಗಾರಿಕೆಗೆ ಮತ್ತು ವಾಣಿಜ್ಯೋದ್ಯಮ ಉದ್ದೇಶಗಳಿಗಾಗಿ ನೀರು ಸರಬರಾಜು;

(vi) ಮಳೆ ನೀರಿನ ಚರಂಡಿಗಳು, ನಿರ್ಮಲೀಕರಣ ಮತ್ತು ಘನ ಹಾಗೂ ದ್ರವ ತ್ಯಾಜ್ಯ ನಿರ್ವಹಣೆಯೂ ಸೇರಿದಂತೆ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ;

(vii) ಅಗ್ನಿಶಾಮಕ ಸೇವೆಗಳು;

(viii) ನಗರ ಅರಣ್ಯೀಕರಣ, ಪರಿಸರ ಸಂರಕ್ಷಣೆ, ಜೀವಿ ಪರಿಸರ ಅಂಶಗಳನ್ನು ಉತ್ತೇಜನ ಮತ್ತು ಪರಿಸರಿಕ ನೈರ್ಮಲ್ಯ ನಿರ್ವಹಣೆ;

(ix) ದೈಹಿಕ ಮತ್ತು ಮಾನಸಿಕ ಅಂಗವಿಕಲತೆಯುಳ್ಳ ವ್ಯಕ್ತಿಗಳ ಹಿತಾಸಕ್ತಿಗಳ ಸಂರಕ್ಷಣೆ;

(x) ಮೂಲಭೂತ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ ಕೊಳಚೆ ಪ್ರದೇಶದ ಸುಧಾರಣೆ ಮಾಡುವುದು ಮತ್ತು ಅದನ್ನು ಮೇಲ್ದರ್ಜೆಗೇರಿಸುವುದು;

(xi) ನಗರ ಬಡತನ ಕಡಿಮೆ ಮಾಡುವುದು;

(xii) ಉದ್ಯಾನವನಗಳು, ತೋಟಗಳು, ಆಟದ ಮೈದಾನಗಳು, ಸಾರ್ವಜನಿಕ ಮಾರುಕಟ್ಟೆಗಳು, ಸ್ನಾನದ ಮತ್ತು ಬಟ್ಟೆ ತೊಳೆಯುವ ಘಟ್ಟಗಳು, ಪ್ರಯಾಣಿಕರುಗಳಿಗಾಗಿ ಕಾಯುವ ಶೆಡ್‌ಗಳಂಥ ನಗರ ಮೂಲಭೂತ ಸೌಲಭ್ಯಗಳು ಮತ್ತು ಸೌಕರ್ಯಗಳ ನಿರ್ಮಾಣ ಮತ್ತು ನಿರ್ವಹಣೆ;

(xiii) ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕಲಾತ್ಮಕ ಅಂಶಗಳಿಗೆ ಉತ್ತೇಜನೆ;

(xiv) ಸ್ಮಶಾನ ಮತ್ತು ಸುಡುವ ಭೂಮಿಗಳು, ಚಿತಾಗಾರಗಳು, ಚಿತಾಗಾರ ಭೂಮಿಗಳು ಮತ್ತು ವಿದ್ಯುತ್ ಚಿತಾಗಾರಗಳ ಸ್ಥಾಪನೆ ಮತ್ತು ನಿರ್ವಹಣೆ;

(xv) ಜಾನುವಾರು ಕೊಟ್ಟಿಗೆಗಳ ನಿರ್ಮಾಣ, ಅವುಗಳ ಆರೈಕೆ ಮತ್ತು ಪಶುವೈದ್ಯಕೀಯ ಸೇವೆಗಳನ್ನೊಳಗೊಂಡಂತೆ ಪ್ರಾಣಿಗಳ ಹಿಂಸೆಯ ನಿಯಂತ್ರಣ;

(xvi) ಜನನ, ಮರಣ ಮತ್ತು ವಿವಾಹಗಳ ನೋಂದಣಿಯೂ ಒಳಗೊಂಡಂತೆ ಅವುಗಳ ಮುಖ್ಯವಾದ ಅಂಕಿ ಅಂಶಗಳನ್ನು ಸಂಗ್ರಹಣೆ ಮತ್ತು ಇಂದೀಕರಣ;

(xvii) ಬೀದಿ ದೀಪ, ವಾಹನ ನಿಲುಗಡೆಯ ಸ್ಥಳಗಳು, ಬಸ್ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯ ಸೌಲಭ್ಯಗಳಂತಹ ಸಾರ್ವಜನಿಕ ಅನುಕೂಲತೆಗಳೂ ಸೇರಿದಂತೆ ಸಾರ್ವಜನಿಕ ಸೌಕರ್ಯಗಳ ವ್ಯವಸ್ಥೆ ಮತ್ತು ನಿರ್ವಹಣೆ;

(xviii) ಕಸಾಯಿ ಖಾನೆಗಳನ್ನು ಮತ್ತು ಚರ್ಮ ಹದಾಗಾರಗಳನ್ನು ಮತ್ತು ಮಾಂಸ, ಮೀನು ಹಾಗೂ ಇತರೆ ಹಾಳಾಗಬಹುದಾದ ಆಹಾರ ಪದಾರ್ಥಗಳ ಮಾರಾಟದ ನಿಯಂತ್ರಣ.

(2) ಸಾಮಾನ್ಯ ಪ್ರಕಾರ್ಯಗಳು.-

(i) ಎಲ್ಲಾ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸ್ವಯಂಸೇವಕ ಕಾರ್ಯಕರ್ತರನ್ನು ಸಂಘಟಿಸುವುದು ಮತ್ತು ಅವರುಗಳ ಸಾಮುದಾಯಿಕ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದು;

(ii) ಮಿತವ್ಯಯಕ್ಕಾಗಿ ಅಭಿಯಾನವನ್ನು ಸಂಘಟಿಸುವುದು;

(iii) ವರದಕ್ಷಿಣೆ, ಕೌಟುಂಬಿಕ ಹಿಂಸೆ, ಮಕ್ಕಳ ದುರುಪಯೋಗ, ಜಾತೀವಾದ, ಹಾಮೋಫೋಬಿಯಾ ಮತ್ತು ಅನ್ಯದ್ವೇಷಪೂರ್ಣ ಭೀತಿಯಂತಹ ಸಾಮಾಜಿಕ ಕೆಟ್ಟ ಪದ್ಧತಿಗಳ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು;

(iv) ದುರ್ಬಲ ವರ್ಗಗಳ ಜನರ ನಡುವೆ ಕಾನೂನು ಅರಿವಿನ ಅಭಿಯಾನಗಳನ್ನು ನಡೆಸುವುದು, ಆರ್ಥಿಕ ಅಪರಾಧಗಳ ವಿರುದ್ಧ, ಪೌರ ಕರ್ತವ್ಯಗಳನ್ನು ಪಾಲಿಸುವುದಕ್ಕೆ ಅಭಿಯಾನ ನಡೆಸುವುದು ಮತ್ತು ಕೋಮುಸೌಹಾರ್ದವನ್ನು ಉತ್ತೇಜಿಸುವುದು;

(v) ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ, ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ಆಸ್ಪತ್ರೆಗಳು, ಔಷಧಾಲಯಗಳು, ಅನಾಥಾಲಯಗಳು, ರಕ್ಷಣಾ ಗೃಹಗಳು, ಪ್ರಸೂತಿ ಗೃಹಗಳು ಮತ್ತು ಶಿಶು ಕಲ್ಯಾಣ ಕೇಂದ್ರಗಳು ಮುಂತಾದಂಥ ಪರಿಹಾರ ಕೇಂದ್ರಗಳ ನಿರ್ವಹಣೆ ಮಾಡುವುದು;

(vi) ನಗದು ಅಥವಾ ವಸ್ತುವಿನ ರೂಪದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಸಂಗ್ರಹಣೆ ಮಾಡುವುದು;

(vii) ಬಡವರನ್ನು ಪ್ರಮುಖವಾಗಿಟ್ಟುಕೊಂಡು ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳನ್ನು, ನೆರೆಹೊರೆಯ ಗುಂಪುಗಳು ಮತ್ತು ಸಮುದಾಯಗಳನ್ನು ಮತ್ತು ಸ್ವ-ಸಹಾಯ ಗುಂಪುಗಳನ್ನು ಸಂಘಟಿಸುವುದು ಮತ್ತು ಅವುಗಳನ್ನು ಉತ್ತೇಜಿಸುವುದು;

(viii) ಸಾರ್ವಜನಿಕ ಹಿತಾಸಕ್ತಿಯುಳ್ಳ ಮಾಹಿತಿಯನ್ನು ಪ್ರಕಟಗೊಳಿಸುವುದು ಮತ್ತು ಪ್ರಸಾರ ಮಾಡುವುದು;

(ix) ಸಾರ್ವಜನಿಕ ಸ್ವತ್ತುಗಳ ನಿರ್ವಹಣೆ ಮಾಡುವುದು;

(x) ಅಪಾಯಕಾರಿಯಾದ ಮತ್ತು ಅಸಹ್ಯಕರವಾದ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಲೈಸನ್ಸು ನೀಡುವುದು;

(xi) ಸಾಕು ಪ್ರಾಣಿಗಳನ್ನು ಸಾಕುವುದಕ್ಕೆ ಲೈಸನ್ಸನ್ನು ನೀಡುವುದು;

(xii) ಜಲಮೂಲಗಳನ್ನೊಳಗೊಂಡಂತೆ ಉದ್ಯಾನವನಗಳು ಮತ್ತು ಹಸಿರು ಸ್ಥಳಗಳು ಸಂರಕ್ಷಣೆ ಮತ್ತು ಪರಿರಕ್ಷಣೆ ಮಾಡುವುದು;

(xiii) ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಸ್ಥಳಗಳ ಮತ್ತು ಕಟ್ಟಡಗಳ ಸಂರಕ್ಷಣೆ ಮತ್ತು ಪರಿರಕ್ಷಣೆ ಮಾಡುವುದು;

(xiv) ಇಂಧನ ಸಾಮರ್ಥ್ಯವನ್ನುಉತ್ತೇಜಿಸುವುದು ಮತ್ತು ಹವಾಮಾನ ಬದಲಾವಣೆಯ ಬಗ್ಗೆ ಜಾಗೃತಿ ಮೂಡಿಸುವುದು;

(xv) ನಗರ ಪಾಲಿಕೆಯ ಕೆಲಸದಲ್ಲಿ ಮಾಹಿತಿ ತಂತ್ರಜ್ಞಾನ ಪರಿಚಯ ಮತ್ತು ಇ-ಆಡಳಿತವನ್ನು ಉತ್ತೇಜಿಸುವುದು;

3. ವಲಯವಾರು ಪ್ರಕಾರ್ಯಗಳು.-

(i) ಪಟ್ಟಣ ಯೋಜನೆ ಸೇರಿದಂತೆ ನಗರ ಯೋಜನೆ ಸಿದ್ಧಪಡಿಸುವುದು:

(ಎ) ಮಾನವ ವಾಸಸ್ಥಾನಕ್ಕಾಗಿ ಹೊಸ ಪ್ರದೇಶಗಳ ಯೋಜಿತ ಅಭಿವೃದ್ಧಿ, ನಿರ್ಧರಿಸಿರುವ ಮಿತಿಗಳಲ್ಲಿ ಗಡಿಗುರುತುಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು ಅಥವಾ ಅಂಥ ಮಿತಿಗಳಲ್ಲಿ ಯಾವುದೇ ಮಾರ್ಪಾಟು ಮಾಡುವುದು;

(ಬಿ) ಕಾರಂಜಿಗಳನ್ನು ಸ್ಥಾಪಿಸುವ, ಮನರಂಜನಾ ಪ್ರದೇಶಗಳಿಗೆ ಅವಕಾಶ ಕಲ್ಪಿಸುವ, ನದಿ ದಂಡೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಭೂದೃಶ್ಯವನ್ನು ಅಂದಚೆಂದಗೊಳಿಸುವ ಮೂಲಕ ಮಹಾನಗರ ಪಾಲಿಕೆ ಪ್ರದೇಶವನ್ನು ಸೌಂದರ್ಯೀಕರಣಗೊಳಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳುವುದು;

(ಸಿ) ಜಿಲ್ಲೆ ಅಥವಾ ವಲಯ ಅಭಿವೃದ್ಧಿ ನಕ್ಷೆಯೊಂದಿಗೆ ಮಹಾನಗರ ಪಾಲಿಕೆ ಪ್ರದೇಶದ ಅಭಿವೃದ್ಧಿ ನಕ್ಷೆಗಳು ಮತ್ತು ಯೋಜನೆಗಳನ್ನು ಸಂಯೋಜನೆಗೊಳಿಸುವುದು;

(ಡಿ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಯುಕ್ತ ನಕ್ಷೆಗಳನ್ನು, ಭೂಮಿಗಳ ದತ್ತಾಂಶವನ್ನು ಮತ್ತು ದಾಖಲೆಗಳನ್ನು ಮತ್ತು ಕಾಲಕಾಲಕ್ಕೆ ಅಂಥ ಜಮೀನುಗಳ ಉಪಯುಕ್ತತೆಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ರಕ್ಷಿಸಿ ಇಟ್ಟುಕೊಳ್ಳುವುದು;

(ii) ಪರಿಸರ ಮತ್ತು ಸಾಮಾಜಿಕ ಅರಣ್ಯ:

(ಎ) ಪರಿಸರ ಜಾಗೃತಿಗಾಗಿ ಅಭಿಯಾನಗಳನ್ನು ನಡೆಸುವುದು;

(ಬಿ) ಪರಿಸರ ಜಾಗೃತಿಯನ್ನು ಹೆಚ್ಚಿಸುವುದು, ಸಸಿಗಳನ್ನು ನೆಟ್ಟು ಮರಗಳನ್ನು ಬೆಳೆಸುವುದು ಮುಂತಾದ ಸ್ಥಳೀಯ ಪರಿಸರಾತ್ಮಕ ಕ್ರಮವನ್ನು ಉತ್ತೇಜಿಸುವುದು;

(ಸಿ) ಬಂಜರು ಭೂಮಿಗಳನ್ನು ಕೃಷಿ ಯೋಗ್ಯಗೊಳಿಸುವುದು, ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿಗೊಳಿಸುವುದು ಮತ್ತು ಬಯಲು ಸ್ಥಳಗಳನ್ನು ನಿರ್ವಹಣೆ ಮಾಡುವುದು;

(ಡಿ) ಸಸ್ಯತೋಟ(ನರ್ಸರಿ)ಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ ಮಾಡುವುದು, ಹಸಿರು ಗಿಡಮರಗಳನ್ನು ಬೆಳೆಸುವುದನ್ನು ಉತ್ತೇಜಿಸುವುದು;

(iii) ಸಣ್ಣ ಕೈಗಾರಿಕೆಗಳು:

(ಎ) ಕರಕುಶಲ ವಸ್ತುಗಳ ಪ್ರಚಾರ ಮಾಡುವುದು;

(ಬಿ) ಕೈಗಾರಿಕಾ ವಲಯದಲ್ಲಿ ಸ್ವಯಂ ಉದ್ಯೋಗ ಯೋಜನೆಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು;

(ಸಿ) ವಾಣಿಜ್ಯೋದ್ಯಮಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

(iv) ವಸತಿ:

(ಎ) ವಸತಿ ರಹಿತರನ್ನು ಗುರುತಿಸುವುದು, ವಸತಿ ನಿವೇಶನಗಳು ಮತ್ತು ವಸತಿಗಳನ್ನು ಒದಗಿಸುವುದು, ಆಶ್ರಯ, ಪುನರುಜ್ಜೀವನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;

(ಬಿ) ವಸತಿಗಾಗಿ ಅಗತ್ಯ ನಿಧಿಯನ್ನು ಸಂಗ್ರಹಿಸುವುದು;

(v) ಶಿಕ್ಷಣ ಮತ್ತು ಸಂಸ್ಕೃತಿ:

(ಎ) ಪೂರ್ವ-ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ತಾಂತ್ರಿಕ ಶಾಲೆಗಳು, ವೃತ್ತಿಪರ ತರಬೇತಿ ಕೇಂದ್ರಗಳನ್ನು ನಡೆಸುವುದು ಮತ್ತು ಸಾಕ್ಷರತಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು;

(ಬಿ) ಕುಟುಂಬ ಯೋಜನೆ, ಪರಿಸರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣವೂ ಸೇರಿದಂತೆ ನಾಗರಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಸಾಮಾಜಿಕ ಶಿಕ್ಷಣವನ್ನು ಉತ್ತೇಜಿಸುವುದು;

(ಸಿ) ಸಂಗೀತ, ದೈಹಿಕ ಶಿಕ್ಷಣ, ಕ್ರೀಡೆಗಳು ಮತ್ತು ರಂಗಮಂದಿರಗಳು ಮತ್ತು ಅವುಗಳ ಮೂಲಸೌಕರ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಉತ್ತೇಜಿಸುವುದು;

(ಡಿ) ನಗರ ಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು;

(ಇ) ಕಲಾಕೃತಿಗಳ ಪ್ರದರ್ಶನ ಮಂದಿರ ಮತ್ತು ಸಸ್ಯಶಾಸ್ತ್ರೀಯ ಅಥವಾ ಪ್ರಾಣಿ ವಿಜ್ಞಾನಕ್ಕೆ ಸಂಬಂಧಿಸಿದ ಸಂಗ್ರಹಗಳನ್ನು ಸಂಘಟಿಸುವುದು, ಸ್ಥಾಪಿಸುವುದು ಮತ್ತು ನಿರ್ವಹಣೆ ಮಾಡುವುದು;

(ಎಫ್) ನಗರ ಪಾಲಿಕೆ ಕಚೇರಿ ಮತ್ತು ಐತಿಹಾಸಿಕ, ಕಲಾತ್ಮಕ ಮತ್ತು ಇತರ ಮಹತ್ವವುಳ್ಳ ಎಲ್ಲ ಸಾರ್ವಜನಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ನಿರ್ವಹಿಸುವುದು;

(ಜಿ) ಗಣ್ಯ ವ್ಯಕ್ತಿಗಳಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ದೈವಾಧೀನರಾದ ಪ್ರಸಿದ್ಧ ವ್ಯಕ್ತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವುದು;

(ಹೆಚ್) ಜಾತ್ರೆಗಳು, ಹಬ್ಬಗಳು, ಉತ್ಸವಗಳು, ಕೈಗಾರಿಕಾ ಮತ್ತು ಆರೋಗ್ಯ ಪ್ರದರ್ಶನಗಳನ್ನು ಹಮ್ಮಿಕೊಳ್ಳುವುದು ಮತ್ತು ನಿಯಂತ್ರಿಸುವುದು;

(vi) ಲೋಕೋಪಯೋಗಿ ಕಾರ್ಯಗಳು:

ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳನ್ನು ಹೊರತುಪಡಿಸಿ ಮಹಾನಗರ ಪಾಲಿಕೆ ವ್ಯಾಪ್ತಿಯೊಳಗಿನ ರಸ್ತೆಗಳನ್ನು, ಮತ್ತು ಸರ್ಕಾರದಿಂದ ವರ್ಗಾವಣೆಗೊಂಡಂಥವುಗಳೂ ಸೇರಿದಂತೆ ಸಂಸ್ಥೆಗಳ ಕಟ್ಟಡಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು;

(vii) ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ:

(ಎ) ಎಲ್ಲಾ ವೈದ್ಯಕೀಯ ಪದ್ಧತಿಗಳ ಅಡಿಯಲ್ಲಿನ ಔಷಧಾಲಯಗಳು, ಪ್ರಾಥಮಿಕ ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳು, ಮಕ್ಕಳ ಕಲ್ಯಾಣ ಕೇಂದ್ರಗಳು ಮತ್ತು ತಾಯಿ ಆರೈಕೆ ಗೃಹಗಳನ್ನು ನಿರ್ವಹಿಸುವುದು.

(ಬಿ) ರೋಗ ತಡೆಗಟ್ಟುವಲ್ಲಿ (ನಿವಾರಿಸುವಲ್ಲಿ) ಪರಿಹಾರ ಮತ್ತು ಇತರ ರೋಗ ಪ್ರತಿಬಂಧಕ ಕ್ರಮಗಳನ್ನು ಆಯೋಜಿಸುವುದು.

(ಸಿ) ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

(ಡಿ) ಸಾಂಕ್ರಾಮಿಕ ರೋಗಗಳನ್ನು ನಿರ್ಮೂಲನೆಗಾಗಿ ಸಾಮೂಹಿಕ ಚುಚ್ಚುಮದ್ದು ಹಾಕುವ (ಇನಾಕ್ಯುಲೇಷನ್) ಅಭಿಯಾನಗಳನ್ನು ಆಯೋಜಿಸುವುದು.

(ಇ) ಅನಾರೋಗ್ಯಕರ ಸ್ಥಿತಿಯಲ್ಲಿರುವ ಸ್ಥಳಗಳನ್ನು ಸುಧಾರಣೆ ಮಾಡುವುದು, ಹಾನಿಕಾರಕ ಸಸ್ಯ ವರ್ಗವನ್ನು ತೆಗೆದುಹಾಕುವುದು ಮತ್ತು ಎಲ್ಲಾ ಉಪದ್ರವಗಳನ್ನು ಕಡಿಮೆ ಮಾಡುವುದು.

(ಎಫ್) ಎಲ್ಲಾ ಸಾರ್ವಜನಿಕ ಕೆರೆಗಳನ್ನು ನಿರ್ವಹಿಸುವುದು ಮತ್ತು ಎಲ್ಲಾ ಕೆರೆಗಳು, ಬಾವಿಗಳು ಮತ್ತು ನೀರು ಸರಬರಾಜಿನ ಇತರ ಮೂಲಗಳಲ್ಲಿ

ಹೂಳೆತ್ತುವುದು, ದುರಸ್ತಿ ಮಾಡುವುದು ಮತ್ತು ಸುಸ್ಥಿತಿಯಲ್ಲಿಡುವುದನ್ನು ವಿನಿಯಮಿಸುವುದು ಮತ್ತು ಗೃಹಯೇತರ ಬಳಕೆಗಾಗಿ ಶೋಧಿಸದ ನೀರನ್ನು ಸರಬರಾಜು ಮಾಡುವುದು.

(ಜಿ) ಸಾರ್ವಜನಿಕ ಚುಚ್ಚುಮದ್ದು (ವ್ಯಾಕ್ಸಿನೇಷನ್), ರೋಗನಿರೋಧಕ ಚುಚ್ಚುಮದ್ದು ಹಾಕುವುದು, ಅಂಟುರೋಗಕ್ಕೆ ಕಾರಣವಾದ ಸೂಕ್ಷ್ಮಜೀವಿಗಳು (ಕೊರೋನಾ) ಒಬ್ಬರಿಂದೊಬ್ಬರಿಗೆ ಹರಡುವ ಕೀಟಾಣುಗಳನ್ನು ನಿಯಂತ್ರಿಸುವುದು.

(ಹೆಚ್) ಆಂಬ್ಯುಲೆನ್ಸ್ ಸೇವೆಯನ್ನು ನಿರ್ವಹಿಸುವುದು.

(ಐ) ಸಂವಾದ ಗೋಷ್ಠಿಗಳನ್ನು, ವಿಚಾರ ಗೋಷ್ಠಿಗಳನ್ನು ಮತ್ತು ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಸಾರ್ವಜನಿಕ ಆರೋಗ್ಯ ಮತ್ತು ಸಾರ್ವತ್ರಿಕ ಕಲ್ಯಾಣದ ಬಗ್ಗೆ ನಾಗರಿಕರಲ್ಲಿ ಜಾಗೃತಿಯನ್ನು ಮೂಡಿಸುವುದು.

(ಜೆ) ಆಹಾರ ಕಲಬೆರಕೆಯನ್ನು ತಡೆಗಟ್ಟುವುದು ಮತ್ತು ಹೋಟೆಲ್‌ಗಳನ್ನು ನಿಯಂತ್ರಿಸುವುದು.

(ಕೆ) ರೋಗಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸುವ ಸಲುವಾಗಿ ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯತಂತ್ರಗಳು ಮತ್ತು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

(viii) ಸಮಾಜ ಕಲ್ಯಾಣ:

(ಎ) ಅಂಗನವಾಡಿಗಳನ್ನು ಮತ್ತು ಅಂಗವಿಕಲರು ಮತ್ತು ನಗರದ ಇತರ ಬಡವರ ಕಲ್ಯಾಣಕ್ಕಾಗಿ ಸಂಸ್ಥೆಗಳನ್ನು ನಡೆಸುವುದು;

(ಬಿ) ಅಂಗವಿಕಲರಿಗೆ, ವಿಧವೆಯರಿಗೆ, ನಗರದ ಬಡ ಜನತೆಗೆ ಪಿಂಚಣಿಯನ್ನು ಮಂಜೂರು ಮಾಡುವುದು ಮತ್ತು ನೀಡುವುದು, ಬಡವರಿಗಾಗಿ ನಿರುದ್ಯೋಗ ಭತ್ಯೆಯನ್ನು ನೀಡುವುದು ಮತ್ತು ಗುಂಪು ವಿಮೆ ಯೋಜನೆಯನ್ನು ಜಾರಿಗೊಳಿಸುವುದು;

(ಸಿ) ಜಾಡಮಾಲಿಗಳು ಮತ್ತು ಅವರ ಕುಟುಂಬಗಳ ವಿಮೋಚನೆಗಾಗಿ ಮತ್ತು ಅವರ ಪುನರ್ವಸತಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;

(ಡಿ) ಸಾರ್ವಜನಿಕ ಕಲ್ಯಾಣಕ್ಕಾಗಿನ ಅತ್ಯಗತ್ಯವಾದ ಮಾಹಿತಿಯನ್ನು ಪ್ರಸಾರ ಮಾಡುವುದಕ್ಕೆ ಅಭಿಯಾನಗಳನ್ನು ನಡೆಸುವುದು;

(ಇ) ಬೀದಿಗಳು, ಸೇತುವೆಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ರಕ್ಷಣೆ ಮಾಡುವುದು ಅಥವಾ ಅವುಗಳಲ್ಲಿನ ಅಥವಾ ಅವುಗಳ ಮೇಲಿರುವ ಅಪಾಯಕಾರಿ ಕಟ್ಟಡಗಳು ಮತ್ತು ಸ್ಥಳಗಳು, ಅಡೆತಡೆಗಳು ಹಾಗೂ ಮುಂಚಾಚುವಿಕೆಗಳನ್ನು ತೆರವುಗೊಳಿಸುವುದು;

(ix) ಬಡತನ ನಿರ್ಮೂಲನೆ:

(ಎ) ಬಡವರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಸ್ವ-ಉದ್ಯೋಗ ಮತ್ತು ಗುಂಪು ಉದ್ಯೋಗ ಯೋಜನೆಗಳನ್ನು ಜಾರಿಗೊಳಿಸುವುದು;

(ಬಿ) ಬಡವರು ನಿರಂತರವಾಗಿ ಪ್ರಯೋಜನ ಪಡೆಯುವುದಕ್ಕಾಗಿ ಸಮುದಾಯ ಸ್ವತ್ತುಗಳನ್ನು ಸೃಜಿಸುವುದು.

(x) ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟುಗಳಿಗೆ ಸೇರಿರುವ ವ್ಯಕ್ತಿಗಳ ಅಭಿವೃದ್ಧಿ:

(ಎ) ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟಿನ ವರ್ಗಗಳಿಗೆ ವಿಶೇಷ ಘಟಕ ಯೋಜನೆ (SCP) ಮತ್ತು ಬುಡಕಟ್ಟು ಉಪಯೋಜನೆಯ (TSP) ಅಡಿಯಲ್ಲಿ ಫಲಾನುಭವಿ ಕೇಂದ್ರಿತ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಅವರುಗಳ ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಮತ್ತು ಆರ್ಥಿಕ ನೆರವನ್ನು ಒದಗಿಸುವುದು;

(ಬಿ) ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳಿಗಾಗಿ ಶಿಶು ವಿಹಾರಗಳನ್ನು, ವೃತ್ತಿ ತರಬೇತಿ ಕೇಂದ್ರಗಳನ್ನು ನಡೆಸುವುದು.

(xi) ಸಾರ್ವಜನಿಕ ವಿತರಣಾ ವ್ಯವಸ್ಥೆ:

(ಎ) ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿರುದ್ಧದ ದೂರುಗಳನ್ನು ಪರಿಶೀಲಿಸುವುದು ಮತ್ತು ಅವುಗಳಿಗೆ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದು;

(ಬಿ) ತೂಕ ಮತ್ತು ಅಳತೆಗಳಿಗೆ ಸಂಬಂಧಿಸಿದ ಅಪರಾಧಗಳ ವಿರುದ್ಧ ಅಭಿಯಾನಗಳನ್ನು ನಡೆಸುವುದು;

(ಸಿ) ಅಂಗಡಿಗಳು ಮತ್ತು ಇತರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆ ನಡೆಸುವುದು ಮತ್ತು ಆ ಬಗ್ಗೆ ಮಾರ್ಗದರ್ಶನವನ್ನು ನೀಡುವುದು.

(xii) ವಿಪತ್ತು ಪರಿಹಾರ:

ನೈಸರ್ಗಿಕ ವಿಪತ್ತಿನ ಸಂದರ್ಭದಲ್ಲಿ ವಿಪತ್ತು ಪರಿಹಾರ ಕೇಂದ್ರಗಳ ನಿರ್ವಹಣೆ ಮಾಡುವುದು ಮತ್ತು ಆಸ್ಪತ್ರೆಗಳು, ಔಷಧಾಲಯಗಳು, ಅನಾಥಾಲಯಗಳು, ರಕ್ಷಣಾ ಗೃಹಗಳು ಮತ್ತು ಪ್ರಸೂತಿ ಗೃಹಗಳು, ಮಕ್ಕಳ ಕಲ್ಯಾಣ ಕೇಂದ್ರಗಳು, ಚಿತಾಗಾರಗಳು, ರುದ್ರಭೂಮಿಯಂತಹ ವಿಪತ್ತು ಪರಿಹಾರ ಚಟುವಟಿಕೆಗಳನ್ನು ಸಂಘಟಿಸುವುದು.

ಅನುಸೂಚಿ-II
(ಪ್ರಕರಣ 300 ಅನ್ನು ನೋಡಿ)

	ದರ್ಜೆ -I	**ದರ್ಜೆ –II**	**ದರ್ಜೆ -III**	**ಪಾರಂಪರಿಕ ಆವರಣಗಳು**
ಪರಿಭಾಷೆ	ಪಾರಂಪರಿಕ ದರ್ಜೆ-Iರಲ್ಲಿ ರಾಷ್ಟ್ರೀಯ ಅಥವಾ ಐತಿಹಾಸಿಕ ಮಹತ್ವವುಳ್ಳ ಕಟ್ಟಡಗಳು ಮತ್ತು ಆವರಣಗಳು ಸೇರುತ್ತವೆ. ಇವುಗಳು ವಾಸ್ತುಶಿಲ್ಪ ಶೈಲಿ, ವಿನ್ಯಾಸ, ತಂತ್ರಜ್ಞಾನ ಮತ್ತು ಗುಣಮಟ್ಟದ ವಸ್ತುವಿನ ಬಳಕೆಯನ್ನು ಮತ್ತು ಅಥವಾ ಕಲಾತ್ಮಕವಾದ ಶೈಲಿಯನ್ನು ಹೊಂದಿದ್ದು, ಅತ್ಯುತ್ಕೃಷ್ಟತೆಯನ್ನು ಒಳಗೊಂಡಿರುತ್ತವೆ. ಇವುಗಳು ಒಂದು ಐತಿಹಾಸಿಕ ಸಂಗತಿ/ ಘಟನೆಯನ್ನು, ವ್ಯಕ್ತಿತ್ವವನ್ನು, ಚಳುವಳಿಯನ್ನು ಕುರಿತಾದುದನ್ನು ಅಥವಾ ಸಂಸ್ಥೆಯ ಜೊತೆ ಇರುವುದನ್ನು ತಿಳಿಸುವಂಥವುಗಳಾಗಿರಬಹುದು. ಇವು ಒಂದು ಪ್ರದೇಶ/ವಲಯದ	ಪಾರಂಪರಿಕ ದರ್ಜೆ-II ರಲ್ಲಿ ಪಾರಂಪರಿಕ ದರ್ಜೆ-I ಕ್ಕಿಂತ ಕಡಿಮೆ ಪ್ರಮಾಣದ ಪ್ರವಾಸಿ ತಾಣಗಳಿದ್ದಾಗ್ಯೂ ಕೂಡ, ವಿಶೇಷವಾದ ವಾಸ್ತುಶೈಲಿಯನ್ನು ಮತ್ತು ಕಲಾತ್ಮಕತೆಯ ಅಂಶವನ್ನು ಅಥವಾ ಸಾಂಸ್ಕೃತಿಕ ಅಥವಾ ಐತಿಹಾಸಿಕ ಮಹತ್ವವನ್ನು ಹೊಂದಿದ್ದು, ಪ್ರಾದೇಶಿಕ ಅಥವಾ ಸ್ಥಳೀಯ ಪ್ರಾಮುಖ್ಯತೆಯನ್ನು ಬಿಂಬಿಸುವಂಥ ಕಟ್ಟಡಗಳು ಮತ್ತು ಪ್ರದೇಶಗಳು ಸೇರುತ್ತವೆ. ಇವು ವಲಯ ಪ್ರದೇಶದ ಸಂಕೇತ ಮತ್ತು ಗುರುತನ್ನು ತಿಳಿಸುವ ಸ್ಥಳೀಯ ಹೆಗ್ಗುರುತುಗಳಾಗಿರುತ್ತವೆ. ಇವು ಜಾನಪದೀಯ ವಿಶಿಷ್ಟ ಕರಕುಶಲತೆ,	ಪಾರಂಪರಿಕ ದರ್ಜೆ-IIIರಲ್ಲಿ ಪಾರಂಪರಿಕ ದರ್ಜೆ-IIರಲ್ಲಿನ ಪ್ರವಾಸಿ ತಾಣಗಳಷ್ಟು ಮಹತ್ವವುಳ್ಳವುಗಳಾಗಿರದಿದ್ದರೂ ಕೂಡ ವಾಸ್ತುಶಿಲ್ಪ ಕಲೆ ಅಥವಾ ಸಾಮಾಜಿಕ ಆಸಕ್ತಿಯು ಎದ್ದು ಕಾಣುವಂತಿರುವ ನಗರದ ಚಿತ್ರಣ, ಮಹತ್ವವನ್ನು ತಿಳಿಸುವಂಥ ಕಟ್ಟಡಗಳು ಮತ್ತು ಪ್ರದೇಶಗಳು ಸೇರುತ್ತವೆ. ಇವುಗಳು ಇರುವ ಸ್ಥಳೀಯ ಪ್ರದೇಶದ ಚಾರಿತ್ರ್ಯವನ್ನು ನಿರ್ಧರಿಸುವುದಕ್ಕೆ ಕೊಡುಗೆ ನೀಡುತ್ತವೆ ಹಾಗೂ ಒಂದು ನಿರ್ದಿಷ್ಟ ಸಮುದಾಯದ ಅಥವಾ ಪ್ರದೇಶದ ಜೀವನ ವಿಧಾನವನ್ನು ಪ್ರತಿನಿಧಿಸುವಂಥವುಗಳಾಗಿರಬಹುದು ಮತ್ತು ಇವುಗಳು ಹೊರನೋಟಕ್ಕೆ ಕಾಣುವಂಥ ರಚನೆ ಮತ್ತು ವಿಶೇಷ ಗುಣದಿಂದ ವಿಶಿಷ್ಟತೆಯನ್ನು ಸಹ ಹೊಂದಿದವುಗಳಾಗಿರುತ್ತವೆ ಹಾಗೂ ಇವುಗಳ ಎತ್ತರ, ಅಗಲ ಮತ್ತು	ಪಾರಂಪರಿಕ ಆವರಣಗಳು: ಒಂದು ಪಾರಂಪರಿಕ ಸ್ಮಾರಕವು, ಪಾರಂಪರಿಕ ಮೌಲ್ಯವುಳ್ಳ ಒಂದು ಪ್ರದೇಶವಾಗಿರುತ್ತದೆ. ಇದರಲ್ಲಿ ಮಾನ್ಯತೆ ಪಡೆದ ಮತ್ತು ಸಂರಕ್ಷಿಸಲ್ಪಟ್ಟ ಸಾಂಸ್ಕೃತಿಕ ಅಥವಾ ಪಾರಂಪರಿಕ ಮಹತ್ವವನ್ನು ಹೊಂದಿದಂಥ ಬೀದಿಗಳಲ್ಲಿ ಸಾಕಷ್ಟು ಸಂಖ್ಯೆಯ ಕಟ್ಟಡಗಳನ್ನು ಮತ್ತು ಸ್ಥಳಗಳನ್ನು ಒಳಗೊಂಡಿರಬಹುದು ಅಥವಾ ಇದು ಸಮೂಹವಾದ, ಪ್ರಮಾಣವುಳ್ಳ ಕಟ್ಟಡ ಸಾಮಗ್ರಿಯ, ಸಂಕೇತ ಶಾಸ್ತ್ರದ, ಛಾವಣಿ ವಿವರ ಚಿತ್ರಣದ ಮತ್ತು ಆಕಾರಗಳುಳ್ಳ ರೀತಿಯ ಸ್ಥಳದ ವಿಶೇಷ ಪ್ರಜ್ಞೆಯನ್ನು ಸೃಜಿಸುವ ಅಥವಾ ವಾಸ್ತುಶಿಲ್ಪ ಶೈಲಿ ಮತ್ತು ಅಂಥ

	ಹೆಗ್ಗುರುತುಗಳಾಗಿರುತ್ತವೆ. ಎಲ್ಲಾ ಪ್ರಾಕೃತಿಕ ತಾಣಗಳು ದರ್ಜೆ-Iರ ವ್ಯಾಪ್ತಿಯೊಳಗೆ ಬರತಕ್ಕದ್ದು.	ಕುಸುರಿಕಲೆಯನ್ನು ಹೊಂದಿದವುಗಳಾಗಿರಬಹುದು ಮತ್ತು ಇವು ಸ್ಥಳೀಯ ಪ್ರಾಮುಖ್ಯತೆಯ ಅಥವಾ ಅಲಂಕಾರಿಕತೆಯ ಮಾದರಿ ಮತ್ತು ಒಂದು ನಿರ್ದಿಷ್ಟ ಹವಾಗುಣಕ್ಕೆ ಹೊಂದಿಕೊಳ್ಳುವ ಗುಣದ ವಿನ್ಯಾಸವನ್ನು ಹೊಂದಿದವುಗಳಾಗಿರಬಹುದು.	ಪ್ರಮಾಣದಲ್ಲಿ ಏಕತೆಯನ್ನು ಬಿಂಬಿಸುವಂಥವುಗಳಾಗಿರುತ್ತವೆ.	ಅಂಶಗಳನ್ನು ಒಳಗೊಂಡ ವಿವಿಧ ರೀತಿಯ ಅಂಶಗಳ ನಡುವಿನ ಸಂಬಂಧವನ್ನು ತಿಳಿಸುವ ಒಂದು ಪ್ರದೇಶವಾಗಿರಬಹುದು. ಆವರಣಗಳು ವಿಭಿನ್ನ ಮಹತ್ವವುಳ್ಳವುಗಳಾಗಿರುತ್ತವೆ ಮತ್ತು ಅನನ್ಯವಾದ ಮಹತ್ವವುಳ್ಳ ಅಂಶಗಳನ್ನು ತಿಳಿಸುವಂಥ ಭವ್ಯವಾದ ಮನೆಗಳು, ಮರಗಳು, ವಾಣಿಜ್ಯ ಸ್ವತ್ತುಗಳು ಮತ್ತು ಸಾರ್ವಜನಿಕ ಸ್ಥಳಗಳ ಅಂಶಗಳು ಇರುವ ವಿಭಿನ್ನ ಮಾದರಿಯವುಗಳಾಗಿರುತ್ತವೆ. ಅನನ್ಯ ಮಹತ್ವವನ್ನು ಸೃಜಿಸಲು ಸಹಕರಿಸುವುದು
ಧ್ಯೇಯೋದ್ದೇಶ	ಜಾಗರೂಕತೆಯಿಂದ ಸಂರಕ್ಷಣೆ ಮಾಡುವುದು	ಸೂಕ್ಷ್ಮವಾದ ರೀತಿಯಲ್ಲಿ ಪಾಲನೆ ಮಾಡುವುದು	ಸೂಕ್ಷ್ಮವಾದ ರೀತಿಯಲ್ಲಿ ಪಾಲನೆ ಮಾಡುವುದು (ದರ್ಜೆ- II ಕ್ಕಿಂತ ಕಡಿಮೆ ಪ್ರಮಾಣವುಳ್ಳದ್ದು ಮತ್ತು ಅನನ್ಯ ಲಕ್ಷಣಗಳು ಇರುವ ವಿಶೇಷ ಸಂರಕ್ಷಣೆ ಇದ್ದಾಗ್ಯೂ ಕೂಡ)	ಆವರಣಗಳನ್ನು ಯುಕ್ತ ರೀತಿಯಲ್ಲಿ ದುರಸ್ತಿಗೊಳಿಸುವುದು ಮತ್ತು ನಿರ್ವಹಣೆ ಮಾಡುವುದು ಮತ್ತು ಬಹಳ ಸೂಕ್ಷ್ಮವಾದ ರೀತಿಯಲ್ಲಿ ಅಭಿವೃದ್ಧಿಪಡಿಸುವುದು, ಎಂದರೆ: ಸಾಮೂಹಿಕವಾಗಿ,

				ಪ್ರಮಾಣಾನುಸಾರ ಮತ್ತು ಜೋಡಣೆಗೊಳಿಸುವುದು ಹಾಗೂ ಇವುಗಳ ಪಾರಂಪರಿಕ ಮತ್ತು ಸಾಂಸ್ಕೃತಿಕ ಮಹತ್ವ ಸಂರಕ್ಷಣೆ ಮಾಡುವುದು ಸಹ ಅಗತ್ಯವಾಗಿರುತ್ತದೆ.
ಬದಲಾವಣೆಯ ವ್ಯಾಪ್ತಿ	ಕಟ್ಟಡಗಳು ಅಥವಾ ಆವರಣಗಳು ಅಥವಾ ಅವುಗಳ ಯಾವುದೇ ಭಾಗ ಅಥವಾ ಅದರ ಗುಣಲಕ್ಷಣಗಳನ್ನು ಬಲಪಡಿಸುವ ಅಥವಾ ಅವುಗಳ ಬಾಳಿಕೆಯನ್ನು ವಿಸ್ತರಿಸುವ ಹಿತದೃಷ್ಟಿಯಿಂದ ಅವಶ್ಯಕವಾಗಿರುವುದನ್ನು ಹೊರತುಪಡಿಸಿ, ಪಾರಂಪರಿಕ ಕಟ್ಟಡದ ಹೊರ ಅಥವಾ ಒಳಾಂಗಣದ ಮೇಲಾಗಲಿ ಅಥವಾ ನೈಸರ್ಗಿಕ ಗುಣಲಕ್ಷಣಗಳ ಮೇಲಾಗಲಿ ಯಾವುದೇ ಹಸ್ತಕ್ಷೇಪಗಳಿಗೆ ಅನುಮತಿ ನೀಡತಕ್ಕದ್ದಲ್ಲ. ಈ ಉದ್ದೇಶಕ್ಕಾಗಿ, ಸಂಪೂರ್ಣವಾಗಿ ಅತ್ಯಾವಶ್ಯಕವಾದ ಮತ್ತು ಕನಿಷ್ಠ	ದರ್ಜೆ - II (ಎ) ಆಂತರಿಕ ಬದಲಾವಣೆಗಳು ಮತ್ತು ಹೊಂದಾಣಿಕೆಯ ಮರು-ಬಳಕೆಯನ್ನು ಕಟ್ಟುನಿಟ್ಟಾದ ಪರಿಶೀಲನೆಗೆ ಒಳಪಡಿಸಲು ಅನುಮತಿ ನೀಡಬಹುದು. ಪಾರಂಪರಿಕ ದರ್ಜೆ-IIರಲ್ಲಿ ಸೇರಿಸಲಾಗಿರುವ ಎಲ್ಲ ವಿಶೇಷ ಅಂಶಗಳ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಕಾಳಜಿ ವಹಿಸಬೇಕು. ದರ್ಜೆ - II (ಬಿ) ಮೇಲಿನವುಗಳ ಜೊತೆಗೆ, ಅದೇ ಪ್ಲಾಟ್ ಅಥವಾ ಕಾಂಪೌಂಡ್‌ನ ಮೇಲಿನ ವಿಸ್ತರಣೆ ಅಥವಾ ಹೆಚ್ಚುವರಿ ಕಟ್ಟಡವನ್ನು ಕೆಲವು ಸನ್ನಿವೇಶಗಳಲ್ಲಿ, ವಿಸ್ತರಣೆ/ ಹೆಚ್ಚುವರಿ	ಆಂತರಿಕ ಬದಲಾವಣೆಗಳು ಮತ್ತು ಹೊಂದಾಣಿಕೆಯ ಮರು ಬಳಕೆಗೆ ಒಟ್ಟಾರೆ ಅನುಮತಿ ನೀಡಬಹುದು. ಅದೇ ಪ್ಲಾಟ್ ಅಥವಾ ಕಾಂಪೌಂಡ್‌ನ ಮೇಲಿನ ವಿಸ್ತರಣೆಗಳು ಮತ್ತು ಹೆಚ್ಚುವರಿ ಕಟ್ಟಡಗಳ ಬದಲಾವಣೆಗಳು ಸೇರಿರಬಹುದು. ಆದಾಗ್ಯೂ, ಯಾವುದೇ ಬದಲಾವಣೆಗಳು, ಇವುಗಳಿಗೆ ಹೊಂದಿಕೆಯಾಗುವಂತೆ ಇರಬೇಕು ಮತ್ತು ಇವುಗಳ ಅಸ್ತಿತ್ವದಲ್ಲಿರುವ ಪಾರಂಪರಿಕ ಕಟ್ಟಡ/ ಆವರಣ ಪ್ರದೇಶದಿಂದ ಅದರಲ್ಲೂ ವಿಶೇಷವಾಗಿ ಎತ್ತರ ಮತ್ತು ಹೊರನೋಟದ ರೂಪಗಳಲ್ಲಿ ಇವುಗಳನ್ನು ತೆಗೆದುಹಾಕಿರದಂತೆ ಇರಬೇಕು ಮತ್ತು	ಸೂಕ್ಷ್ಮ ಸೇರ್ಪಡೆಗಳು, ಮಾರ್ಪಾಟುಗಳು, ವಿಸ್ತರಣೆಗಳು ಅಥವಾ ಆಂತರಿಕ ನವೀಕರಣಗಳನ್ನು ಅನುಮತಿಸಬಹುದಾಗಿರತಕ್ಕದ್ದು. ಆದರೆ ಇವುಗಳು ಕಟ್ಟಡ/ ಆವರಣದ ಗುಣಲಕ್ಷಣವನ್ನು ಮಾರ್ಪಾಡು ಮಾಡುವಂತಿಲ್ಲ. ಹೊಸ ಹಸ್ತಕ್ಷೇಪಗಳು ಸಮಕಾಲೀನದ್ದಾಗಿರಬಹುದು ಆದರೆ ವ್ಯತ್ಯಾಸ ಅಥವಾ/ ಮೂಲ ಗುಣಲಕ್ಷಣ /ಸ್ವರೂಪದಿಂದ ಪ್ರೇರಿತವಾಗಿರಬಹುದು ಮತ್ತು ಇದು ಔಚಿತ್ಯವಲ್ಲದ್ದನ್ನು ಅನುಕರಣೆ ಮಾಡಬಾರದು. ಪುನರ್ನಿರ್ಮಾಣಕ್ಕೆ ಅನುಮತಿ ನೀಡಬಹುದಾಗಿದೆ. ಆದರೆ ಸ್ಪಷ್ಟರಲ್

	ಬದಲಾವಣೆಗಳನ್ನು ಮಾಡಲು ಅನುಮತಿ ನೀಡತಕ್ಕದ್ದು ಮತ್ತು ಈ ಬದಲಾವಣೆಗಳು ಮೂಲಕ್ಕೆ ಅನುಗುಣವಾಗಿರಬೇಕು.	ಕಟ್ಟಡವು ಅಸ್ತಿತ್ವದಲ್ಲಿರುವ ಪಾರಂಪರಿಕ ಕಟ್ಟಡಗಳ ಅಥವಾ ಆವರಣ ಪ್ರದೇಶಗಳಿಗೆ ಅದರಲ್ಲೂ ವಿಶೇಷವಾಗಿ ಎತ್ತರ ಮತ್ತು ಹೊರನೋಟದ ರೂಪಗಳಿಗೆ (ಮತ್ತು ಇವನ್ನು ತೆಗೆದು ಹಾಕಿರುವುದಿಲ್ಲ) ಹೊಂದಿಕೆಯಾಗಿದೆ ಎಂದು ಉಪಬಂಧಿಸಿರುವುದನ್ನು ಮತ್ತು ಹೆಚ್ಚುವರಿ ಕಟ್ಟಡ ಗಾತ್ರ ಮತ್ತು ಪ್ರಮಾಣದ ರೂಪಗಳಲ್ಲಿ ಮೂಲ ಕಟ್ಟಡಕ್ಕಿಂತ ದೊಡ್ಡದಾಗಿರುವುದಿಲ್ಲ ಎಂದು ಉಪಬಂಧಿಸಿರುವುದನ್ನು ಅನುಮತಿಸಬಹುದು.	ವಿಸ್ತರಣೆ/ಹೆಚ್ಚುವರಿ ಕಟ್ಟಡವನ್ನು ಗಾತ್ರ ಮತ್ತು ಪ್ರಮಾಣದಲ್ಲಿ ಮೂಲ ಕಟ್ಟಡಕ್ಕಿಂತ ದೊಡ್ಡದಾಗಿರಬಾರದು.	ಇಂಜನಿಯರ್ ರಿಂದ ಒಟ್ಟಾರೆಯಾಗಿ ರಚನಾತ್ಮಕವಾಗಿ ಅಸುರಕ್ಷಿತವಾಗಿದೆ ಎಂದು ಪ್ರಮಾಣೀಕರಿಸಿದ ಮತ್ತು ಪಾರಂಪರಿಕ ಸಂರಕ್ಷಣಾ ಸಮಿತಿಯಿಂದ ವಿದ್ಯುಕ್ತವಾಗಿ ದೃಢೀಕರಿಸಿದ ಕಟ್ಟಡಗಳಿಗೆ ಮಾತ್ರ ಪುನರ್ ನಿರ್ಮಾಣ ಮಾಡಲು ಅನುಮತಿ ನೀಡಬಹುದಾಗಿದೆ. ಪುನರ್ ನಿರ್ಮಾಣವು ಪ್ರಚಲಿತ ಉಪವಿಧಿಗಳನ್ನು ಅನುಸರಿಸಿರಬಾರದು ಆದರೆ ಕಟ್ಟಡ/ ಆವರಣದ ಗುಣಲಕ್ಷಣವು ಕಡಿಮೆಯಾಗಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವಂಥ ರೀತಿಯಲ್ಲಿ ಇರತಕ್ಕದ್ದಾದರೂ, ಅಭಿವೃದ್ಧಿ ಮತ್ತು ಉತ್ತಮ ನಗರ ವಿನ್ಯಾಸಕ್ಕಾಗಿ ಅನುಮತಿ ನೀಡಬೇಕು. ಉಪವಿಧಿಗಳ ವಿಸ್ತರಣೆಯ ರೂಪದಲ್ಲಿ ಪಟ್ಟಿ ಮಾಡಿದ ಪ್ರತಿಯೊಂದು ಪಾರಂಪರಿಕ

				ಆವರಣಗಳಿಗಾಗಿ ಪ್ರತ್ಯೇಕ ನಗರ ವಿನ್ಯಾಸ ಮಾರ್ಗಸೂಚಿಗಳನ್ನು ಸಿದ್ಧಪಡಿಸತಕ್ಕದ್ದು. ಪಾರಂಪರಿಕ ಆವರಣದೊಳಗಿನ ಎಲ್ಲ ನಿರ್ಮಾಣಗಳನ್ನು ಸದರಿ ಮಾರ್ಗಸೂಚಿಗಳಿಂದ ನಿರ್ವಹಿಸಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 100 ಬಿಬಿಎಸ್ 2025 ಭಾ-2

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ, 2ನೇ ಮಹಡಿ,
ಬೆಂಗಳೂರು, ದಿನಾಂಕ:14.05.2025

<u>ಅಧಿಸೂಚನೆ</u>

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 36) ರ 1ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು / ಅಧಿನಿಯಮದ ಎಲ್ಲಾ ಪ್ರಕರಣಗಳು ಹಾಗೂ ಉಪಬಂಧಗಳು "ದಿನಾಂಕ:15-05-2025" ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಂದಕುಮಾರ್. ಬಿ)
ಸರ್ಕಾರ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಬಿ.ಬಿ.ಎಂ.ಪಿ-2 & ಸಮಸ್ವಯ)